START

START

START

START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1992

ARS 38 APP 90-91

"ಜಯಂತಿ" ಮಾಸ ಪತ್ರಿಕೆ

ಫೆಬ್ರುವರಿ 1940 ಪುಟ

591 ರಿಂದ ಮುಂದುವರಿಸಿದೆ.

ARS 38 APP 90-91

"ಜಯಂತಿ" ಮಾಸ ಪತ್ರಿಕೆ

ಫೆಬ್ರುವರಿ 1940 ಪುಟ

591 ರಿಂದ ಮುಂದುವರಿಸಲಾಗಿದೆ

ಹಿರಿಯಾಳು:— (ಹಿರಿತನದಿಂದ) ಏಳೋ ನಿನ ಮಳ್ಳಾ! ಛಾಪಾಗ ಜಾತಿ ಏತ್ಯೇ—?

ಇಬ್ಬರೂ:— (ಆಶ್ಚರ್ಯರಾಗಿ) ಅಂದ್ರು?

ಹಿರಿಯಾಳು:— ಅಂದ್ರೇನು ಜಾಲೀಹಂದರ! ಛಾ ಕುಡೀಬೇಕೂ ಅಂತ ಯಾ ಜಾತ್ಯಾಗ ಹೇಳೇತಿ— (ತಟ್ಟನೆ ಸುಧಾರಿಸಿಕೊಂಡು) ಅಂದ್ರು— ಜಾತೀ ವಿಚಾರಿ ನಿಂತೇತಿ ಛಾ ಅಂದೆ!

ಗೆರೆಯಾಳು:— (ಒಮ್ಮೆಲೆ) ಹಂ- ಸಿಕ್ತು ನೋಡು.. ಆದ್ಯೇ ನಾ ಅಂದ್ನೆಪಾ, ಈ ಹಲಗೀ ನೋಡಿ ಯಿಚಾರ ಹೊಕ್ಕೇತಿ ನಂ ತಲ್ಯಾಗs ಅಂತ.. ಏ, ಸಿರಿಯಾಳಾ, ಸಿರಿಯಾಳಪಾ—

ಹಿರಿಯಾಳು:— ಇದಕ್ಯಾಕ ಯಿಚಾರ?

ಹುರಿಯಾಳು:— ಯಾ ಯಿಚಾರ ತಂದ್ಯೋ?

['ಬಂದ್ನಿರಿ, ತಂದ್ನಿರಿ' ಎಂದು ಧ್ವನಿಸುತ್ತ ಸಿರಿಯಾಳು ಬರುವನು]

ಗೆರೆಯಾಳು:— (ಹಲಗೆಯನ್ನು ತೋರಿಸುತ್ತ) ಇದನ್ನ ಬರೆದೋರು ಯಾರು?

ಸಿರಿಯಾಳು:— (ಸಂದರ್ಭ ತಿಳಿಯದೆ) ಬರದೋರು ಯಾರ್ರೆ! ನೀವೂ ಬರ್ತೀರಿ ಧಿನಾ—

ಗೆರೆಯಾಳು:— (ತಿದ್ದುವವನಂತೆ) ಬ ರೋ ದ ಲ್ಲೋ, ಒರ್ಯೋದು, ಲೆಕ್ಕಣೀ ಕೆಲ್ಸ..ಹಂ.. 'ಇಲ್ಲಿ ಎಲ್ಲಾತರದ ಜಾತಿ ಮಾರಲೀಕ ಸಿಗ್ತಾಳೆ' ಅಂತ ಬರೆದೋರು ಯಾರೂ-ಅಂದೆ!

ಹುರಿಯಾಳು:—(ಸಂಶಯದಿಂದ) ಅಂದ್ರೇನು-ಅವನ್ನೆಲ್ಲಾ ಕೊಂಡ್ಕೊಳ್ಳಾಕ ಹಚ್ಚೋ ಇಚಾರೇನು ನನ್ನ ?

ಸಿರಿಯಾಳು:— ಅದನ್ನ ತೆಪ್ಪಿ ಬರ್ತಾನ್ರಿ, ಗೆರೆಯಾಳಪ್ಪನವರ.. 'ಎಲ್ಲಾತರದ ಛಾಟೇ' ಅಂತ್ಲೇಳಿದಿನ್ರಿ ನಾ- (ಎಲ್ಲರೂ ತನ್ನನ್ನು ಆಶ್ಚರ್ಯದಿಂದ ನೋಡಲು) ಛಾರೀ-ಅಂದ್ರು ಇಂಗ್ರೇಜಿದಾಗ 'ಟೀ' ಅಂತಾರ್ರಿ, ಅದ್ಕ ಛಾಟೇ ಅಂತ್ಲೇಳಿದ್ರು, ತೆಪ್ಪಿ 'ಜಾತಿ' ಅಂತ-ಅಂದ್ರು, ಆರೇ ಮನಸ್ಯಾರಿ ಅಂವ-

ಗೆರೆಯಾಳು:— 'ತೆಪ್ಪು' ಅಂತ ಯಾರಂತಾರ? ಆರೇ ಮನಸ್ಯಾ ಅಂದ್ರು ಮತ್ತೀಟ ಹಗರಾತು ನನ್ನ ಕೆಲ್ಸ..ಅವ್ನೇ ಛಾ ತಂದ್ಕೊಡ್ಲಿ—

ಸಿರಿಯಾಳು:— (ತಿರಸ್ಕಾರದಿಂದ) ಛಾ ಅಂತ ಬರೀಲಾಕ ಬರದ್ದು ಛಾ ಏನ್ಮಾಡೀತರಿ?

ಗೆರೆಯಾಳು:— ಛಾ ಅಂತ ಬರೀಲಾಕ ಬರ್ದವರೇ ಛಾ ಕುಡೀತಾರೊ ಇಲ್ಲೊ?

ಹಿರಿಯಾಳು:— ಅದ್ಕೇ ಹೇಳ್ಲಿಲ್ಲಽ ನಾ ಛಾಕ್ಕ ಜಾತಿ ಇಲ್ಲೆ ಅಂತ—

ಗೆರೆಯಾಳು:— ಹಂಗೇ ಆರೇ ಮನಸ್ಯಾಗೂ ಜಾತಿ ಇಲ್ಲ. (ಎಲ್ಲರೂ ತನ್ನನ್ನು ಆಶ್ಚರ್ಯದಿಂದ ನೋಡಲು) ಅಂವ ಯಾರೂ ಅಂತ ಗೊತ್ತಿದ್ರ ಅವನ ಜಾತಿ.. ವಾಜವಿವಾ ಮಾತು .. ಅಂವ ಯಾರು ಇವ್ರಿಗೆ ಗೊತ್ತಿಲ್ಲ, ಇವ್ರು ಯಾರು ಅಂವಗ ಗೊತ್ತಿಲ್ಲ.. ಏನ್ರೆಪಾ-ಜಾತಿ ಹೋಗೋದು ಗೊತ್ತಿದ್ದ ಜನಾ ಸುತ್ಮುತ್ತಿದ್ದಾಗ ..(ಒಮ್ಮೆಲೆ ಹುರುಪಿನಿಂದ) ಪರಸಂಗ ಬಿಟ್ತು ಅಂತ ತಿಳೀರಿಣ್ಣ.. (ಸಿ. ನಿಗೆ) ಒಳಗ ಕುಂತು ನೀ ಛಾ ಮಾಡು, ಹೊರಗ ಬಂದು ಅಂವ ಛಾ ನೀಡ್ಲಿ..ಪರಸಂಗ ಬಿಟ್ತೂ ಅಂದೆ—

ಹುರಿಯಾಳು:— (ಸಂಶಯದಿಂದ) ನಂ ಜನಾ ಒಂದ ಕೇಳ ಬೇಕಲ್ಲ—

ಗೆರೆಯಾಳು:—ಅವರ್ದ ಮಾತಾಡ್ಸೇ ಒಂದೀಸಿ, ನನಗೊತ್ತಿತ್ತಲ್ಲೇನ್ ಇದರ ಖಬಿ? ಸಿರಿಯಾಳಪಾ—

ಸಿರಿಯಾಳು:— (ಉತ್ಸಾಹದಿಂದ) ಒಲೀ ಹೊತ್ತಿಸ್ಲೇನ್ರಿ? (ಹೊರಡುವನು)

ಗೆರೆಯಾಳು:— ಒಲೀ ಏನ್ ಸಾಕಾಗ್ತೈತ್ಯೊ? ನಿಂದುಕಾನಕೇ ಹಚ್ಚು ಕೆಂಡಾ— (ಸಿ. ನು ಹೆದರಿ ತಡೆಯುವನು.)

ಹುರಿಯಾಳು:— (ಹುರುಪಿನಿಂದ) ನಿನ್ನ ನತೀಬ ಗಟ್ಟಿ, ಸಿರಿಯಾಳಪಾ..(ಸಿ. ನು ಒಳಗೆ ಓಡುವನು.) ಹೊಂಡದ ನೀರು ಸಾಲಲಾಕಿಲ್ಲ, ಊರ ಬಾಂವಿಗೂ ಕಳ್ಸು ಕೊಡಾ..ತಿಳೀತಕ?.. ಊರ್ಮಂದಿಗೆಲ್ಲ ಛಾ—ಒಬ್ಬರಕಿಂತ ಒಬ್ಬರ್ದು ಪೇಸಲ ಆಗ್ಬೇಕು—

ಗೆರೆಯಾಳು:— (ಲಕ್ಷ್ಯಗೊಟ್ಟು ಹಲಗೆಯನ್ನು ಐದಾರೆರಡು ಸಲ ಗಟ್ಟಿಯಾಗಿ ಓದುವನು) 'ಇಲ್ಲಿ..ಸಿಗ್ತಾಳೆ'

ಹುರಿಯಾಳು:— (ಸಂಶಯದಿಂದ) ಆರೇ ಮಾತಿನಾಗ ಜಾತಿ ಹೆಂಗಸ್ಯೈತೇನು?

ಹಿರಿಯಾಳು:— ಹೆಂಗಸನ್ನ ಬಿಟ್ರ ಮತ್ತ ಯಾವ್ದೈತಿ ಮನೆಮುರುಕ ಜಾತಿ? (ಹೊರಡುವನು.)

ಇಬ್ಬರೂ:— ಛಾ ಕುಡಿದ್ಹೋಗು, ಹಿರಿಯಾಳಪಾ—

ಹಿರಿಯಾಳು:— (ತಿರುಗಿ ನಿಂತು) ಇದು ಛಾದ ಜಾತಿ ಅಲ್ಲ, 'ಛೀ'ದ ಜಾತಿ ಕಾಣ್ತೈತಿ! (ಹೋಗುವನು.)

(ಇಬ್ಬರೂ ಚಕಿತರಂತೆ ಒಬ್ಬರನ್ನೊಬ್ಬರು ನೋಡುವರು.)

(ತೆರೆ)

ಕುಮಾರವ್ಯಾಸಕವಿಯ ಸ್ಮಾರಕೋತ್ಸವ

'ಸಾಹಿತ್ಯಸಂಜಯ'

★

ಕಳೆದ ಜನವರಿ ತಿಂಗಳ ಮೊದಲನೆಯ ದಿನ, ಕುಮಾರವ್ಯಾಸನ ಕೋಳಿವಾಡವು ಕನ್ನಡಿಗರ ಉತ್ಸಾಹದ ಬೀಡಾಗಿದ್ದಿತು. 'ಹಲಗೆ–ಬಳಪವ ಹಿಡಿಯದೊಂದು ಅಗ್ಗಳಿಕೆಯ' ಹಳ್ಳಿಗ ಕುಮಾರವ್ಯಾಸ ಅಂದೊಮ್ಮೆ ಭಾರತ ಬರೆದು ಕನ್ನಡಿಗರನ್ನೆಲ್ಲ ಕುಣಿಸಿದ. ಇಂದು ಅದೇ ಹಳ್ಳಿಯ ಹುಡುಗರು, ಕುಮಾರವ್ಯಾಸನ ಪಾತ್ರಗಳಾಗಿ ಆಟವಾಡಿ, ಪಂಡಿತ-ಪಾಮರರ ಮನಸ್ಸು-ಹೃದಯಗಳನ್ನು ಕುಣಿದಾಡಿಸಿದರು.

★

ಇಪ್ಪತ್ತೈದನೆಯ ಕನ್ನಡ ಸಾಹಿತ್ಯಸಮ್ಮೇಳನವು ಅದೇ ಮುಗಿದಿತ್ತು. ಕಾರ್ಯಕರ್ತರು ಇನ್ನು 'ಯಸ್ಯಸ್ಮೃತ್ಯಾ' ಮಾಡುವುದರಲ್ಲಿದ್ದರು. ಮೂರು ದಿವಸದ ಸಮ್ಮೇಳನಕ್ಕಾಗಿ ಮೂರು ತಿಂಗಳು ದುಡಿದು, ತಂದ ಸಾಮಾನುಗಳನ್ನು ತಂದಿದ್ದವರಿಗೆ ತಿರುಗಿಕೊಟ್ಟು, ವಿಶ್ರಾಂತಿಪಡೆಯಬೇಕೆಂದು ಹವಣಿಸುತ್ತಿದ್ದರು. ೧೯೪೦ನೆಯ ವರುಷವು ಸವಿನೆನಪಾಯಿತು; ಹೊಸ ವರುಷದ ಹೊಸ ದಿನದ ಹೊಸ ಮುಂಜಾವಿನ ಏಳುಗಂಟೆಗೆ—ಏಳಲಾರದವರನ್ನೂ ಎಬ್ಬಿಸುತ್ತಲಿದ್ದರು ಶ್ರೀ. ರಾಯದುರ್ಗ ಕೃಷ್ಣರಾಯರು. ಅಂತೂ ಎಂಟುವರೆಯೊಳಗೆ ಜನರನ್ನು ಕಲೆಹಾಕುವುದಾಯಿತು. ಮೂರು ಮೋಟರ್ ಕಾರುಗಳು ಧಾರವಾಡದಲ್ಲಿ ಸಿದ್ಧವಾದುವು; ಅವುಗಳಲ್ಲಿ ತುಂಬಿ ಹೊರಜೆಲ್ಲುವಷ್ಟು ಜನರಾದರು. ಈ ಸ್ಥಿತಿಯನ್ನು ನೋಡಿ 'ನಮ್ಮನ್ನು ಬಿಟ್ಟಿದ್ದರೆ ಬರುತ್ತಿತ್ತು; ನಾವು ಒಲ್ಲೆನೆಂದೂ ಹೇಳಿದ್ದೆವ್ರ' ಎಂದೆಂದರೂ ಅವರು ಕಂಡುದು ಗಾಡಿಯಲ್ಲಿಯೆ. 'ಮೂವತ್ತು ಮೈಲಿನ ಪ್ರವಾಸ ಮೋಟರ್‌ಕಾರಿನಲ್ಲಿ' ಎಂಬುದನ್ನು ಕೇಳಿಯಂತೂ ಜನ ಮುದುಡಿಕೊಂಡಿತು; ಇದೆ ಸಂಧಿಯೆಂದು ಮತ್ತೊಬ್ಬರು ಮೋಟರಿನಲ್ಲಿ ನುಗ್ಗಿದರು.

ಧಾರವಾಡ ಬಿಟ್ಟಾಗ ಸುಮಾರು ಒಂಬತ್ತುವರೆಯಾಗಿರಬಹುದು. "ಏಳಲು ತಡವಾಯಿತು. ನಮ್ಮ ಮುಂಜಾವಿನ 'ಟೀ'ಸಹ ಆಗಲಿಲ್ಲ" ಎಂದು ಹಿರಿಯರ ಕಣ್ಣುತಪ್ಪಿಸಿ ಜಾರಿದರು ಕೆಲ ಕಿರಿಯರು. ಅವರು ಎಲ್ಲಿಗೆ ಹೋದರೋ ಎಂದು ಹುಡುಕುವ ನೆಪದಿಂದ ಸಂಧಿಸಿದರು ಕೆಲ ಕಿರಿಹಿರಿಯರು. ಅಂತೂ ಹಿರಿಯರ ಕಣ್ಣುತಪ್ಪಿಸಿದರೂ ಮಾತುತಪ್ಪಿಸಿಕೊಳ್ಳಲಾಗಲಿಲ್ಲ. ಪಾಗೂ ಹೀಗೂ ಮಾಡಿ, ಅಲ್ಪಸ್ವಲ್ಪಕಾಫಿ-ತಿಂಡಿ ಹಾಕಿಕೊಂಡು, ಮೋಟರಿನಲ್ಲಿ ನುಗ್ಗಿದರು. ಮೊದಲನೆಯ ಮೋಟರಿನಲ್ಲಿ ಗುಡುಗಿನ ಡನಿಯ ಸ್ವಾಮಿಗಳಾದ ಮುದುವೀಡು ಕೃಷ್ಣರಾಯರು; ಅವರ ಸಾನ್ನಿಧ್ಯದಲ್ಲಿಯೆ ಕುಮಾರವ್ಯಾಸ ಭಾರತವನ್ನೆತ್ತಿಹಿಡಿದ ಶ್ರೀ. ಭಾರತ ಏಂದೂರಾಯರು, ಹಿರಿಯತನದಲ್ಲಿ ಕಾಲಿಡುತ್ತಿದ್ದ ಶ್ರೀ. ಬಸವಪ್ರಭಾಳ ಅವರು, ಮಾತಿನಿಂದ ಮೈಮರೆಯಿಸುವ ಶ್ರೀ. ಬೇಂದ್ರೆ ಅವರು, ಮೈಸೂರಿನ ಅತಿಥಿಗಳಾದ ಶ್ರೀ. ಡಿ. ಸಿ. ಸುಬ್ಬರಾಯಪ್ಪನವರು, ಶ್ರೀ. ಬಿ. ವೆಂಕೋಬರಾಯರು.

ಎರಡನೆಯ ಮೋಟರಿನಲ್ಲಿ ಕಲೆಗಾರ ಪ್ರೇತದಾರ ಶ್ರೀನಿವಾಸರಾಯರು, ಕಾರ್ಯದರ್ಶಿ ಡಾ. ಕಮಲಾಪೂರರು, ವಿಕೀಕರಣ ಧ್ವನಿವಾಹಕ ಶ್ರೀ. ಬುರ್ಲಿ ಬಿಂದುಮಾಧವರು, ತರುಣ ವಕೀಲ ಬಿ. ಎಸ್. ಪಾಟೀಲರು.

ಮೂರನೆಯ ಮೋಟರಿನ ವೈಶಿಷ್ಟ್ಯ ಬೇರೆ. ಅದರಲ್ಲಿಯವರು ಹುಚ್ಚು ಹರಟೆಯ ಹುಡುಗಾಟದವರು. ವಯಸ್ಸಿನಿಂದ ಕೆಲವರು ಹಿರಿಯರಿದ್ದರೂ, ಅವರೂ ಹುಡುಗತನದ ಮೋಹಕ್ಕೆ ಒಳಗಾದವರೆ. ಶಿವರಹಸ್ಯದ ಶಂ. ಬಾ. ಜೋಶಿಯವರು, ಜಯಂತಿಯ ಬೆಟಗೇರಿ ಕೃಷ್ಣಶರ್ಮರು, ಜಯಕರ್ನಾಟಕದ ಬೆಳಗಾಂವಿ ರಾಸುಜಂದ್ರ ರಾಯರು, ಮೋಹನ ಮುದ್ರಣಾಲಯದ ರಾಯದುರ್ಗರು, ಹುಡುಗ ನೆಗಳೂರರು. ಹತ್ತುವರೆಯಾದಾಗ ಹುಬ್ಬಳ್ಳಿಯಲ್ಲಿದ್ದೆವು. 'ಇಲ್ಲಾಸ್ಯಕ ನಿಂತಿರೋ?' ಎಂದೊಬ್ಬರು ಕೂಗಿದರು. 'ಶ್ರೀ. ಮೊಹರೆ ಹಣಮಂತರಾಯರು ಬರುವವರು ಇನ್ನಾರೆ' ಎಂದುತ್ತರ ಬಂತು. 'ಅದಕ್ಕೆ ಗಾಡಿಗಳು ತಾವಾಗಿಯೆ ನಿಂತುವೇನೊ' ಎಂದು ಉಸುರಿದನು ಮತ್ತೊಬ್ಬರು. ಮೊದಲನೆಯ ಮೋಟಾರಿನಲ್ಲಿಯವರು ವಯೋವಾನಸದಿಂದ ಜರ್ಜರಿತರಾದವರು ಇದ್ದುದರಿಂದಲೂ, ಮೋಟರು ಮೊಸರು ಇದ್ದುದರಿಂದಲೂ ಅವರ ವೇಗವು ಹೆಚ್ಚಿತ್ತು; ಎರಡನೆಯ ಮೋಟರು ಜರ್—ಜುರ್ ಎಂದು ಸಾಗಿತ್ತು; ಮೂರನೆಯದು ಹರಟೆಯ ಭಾರದ ಮೂಲಕ ಸಾಗಲಾರದೆ ಹಿಂದೆ ಉಳಿದಿತ್ತು.

ಹುನ್ನೊಂದು ಹೊಡೆಯುವುದಕ್ಕೆ ಬಂದಿತ್ತು. ಮೋಟರುಗಳು ಒಂದೊಂದಾಗಿ ಕೋಳಿವಾಡದ ಊರ ಮುಂದೆ ನಿಂತುವು ಬಂದು. ಕೂಡಲೆ ಕೇಳಿಸಿತು ಕಹಳೆ. ಪಟಪಟನೆ ಕಳಚಿನಿದ್ದರು ಜನ ಮೋಟರಿನಿಂದ. ಹರಟೆಯಿಂದ ಹೊಟ್ಟೆ ಹುಣ್ಣಾಗಿತ್ತು; ಮೋಟರಿನ

ವೇಗದಿಂದ ಮೈ ಮಣ್ಣಾಗಿತ್ತು. ಈ ಮನುಷ್ಯಾಕೃತಿಗಳು ಮೋಟರಿನಿಂದ ಹೊಕಬಿದ್ದಕೂಡಲೆ ಊರಿನವರು ಅವರನ್ನು ಸ್ವಾಗತಿಸಿ, ಅವರಿಗಾಗಿ ಏರ್ಪಡಿಸಿದ ಬಿಡಾರಕ್ಕೆ ಕರೆದೊಯ್ದರು. ಅದೊಂದು 'ಹೆಣ್ಣುಹುಡಗರ' ಶಾಲೆ. ಕೋಳಿವಾಡಕ್ಕೆ ಬಂದವರು ಬುದ್ಧಿಕಲಿತು ಹೋಗಲಿ ಎಂದು, ನಮ್ಮನ್ನು ಅಲ್ಲಿ ಇಳಿಸಿದಂತೆ ಎನಿಸಿತು. ಉದ್ಧತಸಾಹಿತಿಯೆಂದು ಮೂಗು ಮೇಲಕ್ಕೆ ಮಾಡಿಕೊಂಡು ನಡೆದರೆ, ಬಡಿಯುತ್ತಿತ್ತು ಆ ಶಾಲೆಯ ಚಿಪ್ಪರ. 'ಹುಡುಗಾಟದವರು ನಮಗೇನು' ಎಂದು ಮೈಮರೆತವರಿಗಂತೂ ತಾಳತಪ್ಪಿ ಎಟುಬಿದ್ದಿರಬೇಕು. ಬಂದ ಕೊಂಚ ಕಾಲದಲ್ಲಿಯೆ ಕೋಳಿವಾಡವು ಕಹಳೆಯನ್ನೂದಿತು; 'ಕುಮಾರವ್ಯಾಸನ ವ್ಯಾಸಪೀಠಕ್ಕೆ ಬಂದಿದ್ದೀರಿ— ತಲೆವಾಗಿ!' ಎಂದು.

ದೊಡ್ಡೂರಿನಿಂದ ಬಂದ ಜನಕ್ಕೆ ಬಂದೊಂದು ಕಪ್ಪು ಕಾಫಿಯನ್ನೂ ಸ್ವಲ್ಪ ತಿನಿಸನ್ನೂ ಒದಗಿಸಿಕೊಟ್ಟ ಮೇಲೆ 'ಊರಲ್ಲಿಯ ಮೆರವಣಿಗೆಗೆ ಸಿದ್ಧರಾಗಿರಿ' ಎಂದು ಮತ್ತೊಂದು ಕಹಳೆ ಕೂಗಿತು. 'ತಲೆಬಾಗಿಸಾಗಿರಿ' 'ತಲೆಬಾಗಿ ಸಾಗಿರಿ' ಎಂದು ಸ್ವಯಂಸೇವಕರ ಕೂಗನ್ನು ಕೇಳುತ್ತ, ಕೇಳದಾಗ ಬಡಿಸಿಕೊಳ್ಳುತ್ತ ಜನ ಹೊರಬಿತ್ತು. ಶಾಲೆಯಿಂದ; ಮೆರವಣಿಗೆಯನ್ನು ಕೂಡಿಕೊಂಡಿತು.

ಮೆರವಣಿಗೆಯು ಇಕ್ಕಟ್ಟಾದ ಸಾಮುದ್ರಧ್ವನಿಯ ಮಾರ್ಗವಾಗಿ ಸಾಗಿತ್ತು. ಮುಂದೆ ಕಹಳೆ-ಕರಡಿಮಜಲು. ಹಿಂದೆ ಜನ— ಆನೆ—ಸವಾರಿಯ ಮೇಲೆ ಕುಮಾರವ್ಯಾಸನ ಚಿತ್ರ—ಹೊತ್ತಗೆಗಳು ಆನೆಯ ಹಿಂದೆ ಪರಂಪರೆಯನ್ನು ಸೂಚಿಸುವಂತೆ ಕುಮಾರವ್ಯಾಸನ ಭಕ್ತರು.

ಮೆರವಣಿಗೆಯ ಮಾರ್ಗವು ಅರ್ಧಮೈಲಿಗಿಂತ ಕಡಮೆಯಿದ್ದರೂ ಆರು ಮೈಲಿನ ಮೇಳೆ ತಗಲಿತು. ಜನಸಂದಣಿಯನ್ನು ನೋಡಿ 'ಈ ಊರಿನ ವಸತಿ ಎಷ್ಟು?' ಎಂದು ಪ್ರತಿಯೊಬ್ಬರೂ ಕೇಳುವವರೆ—'ಎರಡು ಸಾವಿರ' ಎಂದು ಉತ್ತರ. 'ಆಂ, ಇಲ್ಲಿ ೨೦೦೦ ಕ್ಕಿಂತ ಹೆಚ್ಚು ಜನರು ಕಾಣುತ್ತಾರೆ!' 'ಸುತ್ತಲಿನ ಊರು— ಹಳ್ಳಿಗಳಿಂದಲೂ ಬಂದಿದ್ದಾರೆ!' ಸುತ್ತುಮುತ್ತಲಿನವರಿಗೊಂದು ಹಬ್ಬವಾಗಿತ್ತು.

ಇಷ್ಟರಲ್ಲಿಯೆ ಮೆರವಣಿಗೆಯು ಅಲ್ಲಿಯ ವೀರನಾರಾಯಣನ ಗುಡಿಯ ಹತ್ತಿರ ಬಂತು. ಅದು ಕುಮಾರವ್ಯಾಸನ ಕುಲದೇವತೆಯೆಂತೆ. ಮೂರ್ತಿ ಕರಿಯ ಕಲ್ಲಿನದು; ಶಿಲ್ಪವು ಲಕ್ಷಣವಾಗಿದೆ, ಸುಂದರವಾಗಿದೆ. ಅಲ್ಲೊಂದು ಶಿಲಾಶಾಸನವೂ ಇದೆ.

ಮೆರವಣಿಗೆಯು ಮುಂದೆ ಸಾಗಿ ಪಾಪಗಜ್ಜೆಗೆ ಒಂದಾಗ, ಒಂದು ಗಂಟೆಯಾಯಿತು. ನಡು-ನಡುನೆ ಸುಮಂಗಲೆಯರ ಆರತಿ ಬೇರೆ.

ದೊಡ್ಡೂರಿನ ದೊಡ್ಡ ರಾಮಾರಂಗಳಿಗೆ ಕಣ್ಣು ಕತ್ತಲೆ ಕವಿಯುವುದರಲ್ಲಿತ್ತು. ಹಸಿವೆಯ ಪಂಚ್ಚಿಗೆ ಕುತಾಪ್ರಿಗೆ ಕುತ್ತುಬರುವ ಹೊತ್ತನ್ನು ಸುತ್ತಲಿಂದಲೂ ನೋಡುತ್ತಿದ್ದರು. 'ಈಗ ಎಲೆ ಹಾಕುವುದು' ಎಂದು ಹೇಳಿದ ಒಂದು ಗಂಟೆಗೆ ಎಲೆ ಹಾಕಿದರು. ಆದರೆ ಅದು ಅವರ ದೋಷವಲ್ಲ. ದೊಡ್ಡೂರಿನವರಿಗೆ ಹಮ್ಮು ಹಳ್ಳಿಗ ಬಾಂಧವರ ನಡೆ-ನುಡಿಗಳನ್ನು ಒಂದು ದಿನದ ಮಟ್ಟಿಗಾದರೂ ಹೊಂದುಗೂಡಿಸಿಕೊಳ್ಳಲು ಆಗದಿದ್ದದ್ದು ತಪ್ಪು. 'ಅವರದು ತಪ್ಪೊ ಇವರದು ತಪ್ಪೊ' ಎಂದು ವಿಚಾರಿಸುವ ಅವಕಾಶ—ತಾಳ್ಮೆ ಯಾರಲ್ಲಿ ಇತ್ತು. 'ಎಲೆ ಮುಂಡಿಸಿದೆ' ಎಂದು ಹೇಳುವವನು ಹೇಳಿದ ಮೇಲೆ ನೋಡುತ್ತೀನೆ; ಬೀಡಾರದಲ್ಲಿ ಯಾರೂ ಇಲ್ಲ. ನಡೆದ ಸಂಗತಿಯನ್ನು ಯಜಮಾನರಿಗೆ ತಿಳಿಸಬೇಕೆಂದು ಹೋಗಿ ನೋಡುತ್ತಾನೆ. 'ಇಲ್ಲ' ಎನ್ನುವರೆಲ್ಲರೂ ಅಲ್ಲಿಯೆ ಇದ್ದಾರೆ. ತನಗೇ ಭ್ರಮೆಯಾಗಿರಬೇಕೆಂದು ತನ್ನ ಕೆಲಸಕ್ಕೆ ಹೋದ.

ಯಜಮಾನರು ಆಸನಗಳನ್ನು ನಿರ್ದೇಶಿಸಬೇಕೆಂಬ ನಿರ್ಬಂಧವೆ ಇದ್ದಿಲ್ಲ. ಎಲ್ಲರೂ 'ಇಡಿ ಹಬ್ಬ ತಮ್ಮದು, ತಾವು ಯಜಮಾನರು!' ಎಂಬ ಭಾವನೆಯಲ್ಲಿಯೆ ಮುಳುಗಿ ಹೋಗಿದ್ದರು. ತಮ-ತಮಗೆ ಬೇಕಾದ ಸ್ಥಳವನ್ನು ಹುಡುಕಿಕೊಂಡು ಕುಳಿತರು. ಅಡುಗೆಯು ಸಾದಾ ಇದ್ದುದೊಂದು ವೈಶಿಷ್ಟ್ಯ. ಸಾದಾ ಅಡುಗೆಯಲ್ಲಿಯೆ ಸೊಗಸು ಇದೆಯೆಂದು ಎಷ್ಟೋ ಜನರು ಮನಗಂಡಿರಬೇಕು. ಕುಟ್ಟಿದ ಗೋದಿಯ ಪಾಯಸ, ಅನ್ನ, ಸಾರು – ಹುಳಿ, ಚಟ್ನಿ, ಕುಂಬಳಕಾಯಿ ಪಲ್ಲೆ ಇವೆಲ್ಲ ಹರವಾದ ಬಾಳೆಯೆಲೆ-ದೊನ್ನೆಗಳನ್ನು ಆಕ್ರಮಿಸಿದ್ದುವು. ಗೋದಿಯ ರೊಟ್ಟಿ—ದಶಮಿಗಳು ಮಧ್ಯೆ ಬಂದುವು; ಅವುಗಳ ಬಂಧುಗಳಾದ ತುಪ್ಪ—ಬೆಣ್ಣೆಗಳೂ ಬಂದುವು ಬೆನ್ನ ಹಿಂದೆ.

ನೀಡುವ ರೀತಿಯು ತಾಯಿಯ ಅಂತಃಕರಣವನ್ನು ನೆನಪಿಗೆ ತಂದುಕೊಡುತ್ತಿತ್ತು. ಹಳ್ಳಿಗಳಲ್ಲಿ ಅಂತಃಕರಣವಿದೆಯೆಂದೇ ಅವು ದೇಶದ ಒಳಭಾಗಕ್ಕೆ—ಅಂತರಂಗಕ್ಕೆ ಇವೆಯೆಂದು ಕಾಣುತ್ತದೆ. ಬುದ್ಧಿಯೆ ಬಲವೆಂದುಕೊಂಡ ದೊಡ್ಡೂರುಗಳು ಬಯಲಿಗೆ ಬಂದಿವೆ. ಬಯಲಿಗೆ ಬಂದುದರಿಂದ ಅಲ್ಲಿಯ ಅಂತಃಕರಣವು ಒಣಗಿದೆ. ಎಲ್ಲವೂ ಒಣ ಒಣವೆ; ಹಳ್ಳಿಯಲ್ಲಿ ಮಾತ್ರ ಎಲ್ಲ ಹಸಿ! ಹಳ್ಳಿಗರ ಮಾತು-ರೀತಿಗಳಲ್ಲಿ ನಾಗರಿಕತೆಯ ನಯವಿಲ್ಲದಿದ್ದರೂ, ಅವರಲ್ಲಿ ಮಮತೆ ಇದೆ; ಮಾಧುರ್ಯವಿದೆ. ಪಟ್ಟಣಿಗರ ಎದೆಯು ಒಣಗಿರುವುದರಿಂದ ಹೆಚ್ಚು ಹಿಡಿಯಲು ಆಸ್ಪದವೆ ಇಲ್ಲ. ಎದೆಯಂತೆಯೆ ಅವರ ಹೊಟ್ಟೆ. ಹಳ್ಳಿಯ ಮಾತು ಬೇರೆ, ಅವರದು ವಿಶಾಲ ಹೃದಯ; ಅದರಂತೆಯೆ ವಿಶಾಲವಾದ ಹೊಟ್ಟೆ. ಅಂದು ಹಾಕಿದ ಹರವಾದೆಲೆಯನ್ನು ನೋಡಿಯೆ ಹೆದರಿರಬೇಕು ನಮ್ಮಲ್ಲಿಯ ಈ ಲಜ್ಜನ ದೊಡ್ಡೂರಿನವರು.

ಸ್ನೇಹ (ತುಪ್ಪ-ಬೆಣ್ಣೆ)ಮಯ ಊಟವಾದುದರಿಂದ ಮಬ್ಬು ಬಂತು. ಊರಿಗೆ ಬೇಗನೆ ಮರಳಬೇಕೆನ್ನುವವರು 'ಮುಂದಿನ ಕಾರ್ಯಕ್ರಮಗಳು ಮಂದವಾಗಿಯೆ ಸಾಗಲಿ' ಎಂದು ತಮ್ಮ ಮುಸುಕಿನಿಂದಲೆ ಸೂಚಿಸಿದರು.

* * * *

ಸಾಲ್ಯೂಟರೆಯಾಗಿತ್ತು; ಸಭಾಮಂದಿರವು ಕಿಕ್ಕಿರಿದಿತ್ತು. ಹಳ್ಳಿಗರ ಉತ್ಸಾಹವು ಉಕ್ಕೇರುತ್ತಿತ್ತು. ಕ್ಷಣಕ್ಷಣಕ್ಕೆ ಜನತೆಯ ಸಂಖ್ಯೆ ಮೇರೆ ಮೀರುತ್ತಿತ್ತು.

—'ಇನ್ನೊಂದು ಗುಡಾರ ಒಗೆಯೊ' ಎಂದು ಕೂಗುವುದು ಕೇಳಬರುತ್ತಿತ್ತು. ಕವ್ಮಾರ ಕಾಳಪ್ಪನೂ ಅಲ್ಲಿ ಇದ್ದ; ಬಡಿಗರ ಭೀಮಪ್ಪನೂ ಬಂದಿದ್ದ. ಗೊರಿಕೆ ಹೊಡೆಯುವ ಗುಂಡಭಟ್ಟರಂತೂ ಮೊದಲೇ ಸ್ಥಾನಾಪನ್ನರಾಗಿದ್ದರು. ಚಿಕ್ಕವರು ದೊಡ್ಡವರು ಹೆಂಗುಸರು ಗಂಡಸರು ಜಾತಿ-ಧರ್ಮಗಳ ಭೇದವಿಲ್ಲದೆ ಪಂಥ-ಪಂಗಡಗಳ ವಿಚಾರವಿಲ್ಲದೆ, ಒಂದೇ ಒಂದು ಭಾವನೆಯಿಂದ ಬಂದಿದ್ದರು.

ಶ್ರೀ. ಬಸವನಹಾಳ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಹುಡುಗರು ಸ್ವಾಗತಗೀತೆಯನ್ನು ಹಾಡಿದರು. ಸ್ವಾಗತಾಧ್ಯಕ್ಷರಾದ ಶ್ರೀ. ಮೈಲಾರಗೌಡರು ಸ್ವಾಗತ ಭಾಷಣ ಮಾಡಿದರು. ಅನಂತರ ಕಾರ್ಯದರ್ಶಿಗಳಿಂದ ವರದಿಯ ವಾಚನವಾಗಿ, ಕುಮಾರವ್ಯಾಸನ ಪುಸ್ತಕಭಾಂಡಾರದ ಉದ್ಘಾಟನವು ಶ್ರೀ. ಮುದುವೀಡು ಅವರಿಂದ ಜರಿಯಿತು. ಗಮಕವಿದ್ವಾನ್ ಶ್ರೀ. ಬಿಂದೂರಾಯರು, ಭಾರತದ ಕೆಲವು ಭಾಗವನ್ನು ಅರ್ಥಸಹಿತವಾಗಿ ಹಾಡಿತೋರಿಸಿದರು. ಬಿಂದೂರಾಯರ ಸಾನ್ನಿಧ್ಯದಲ್ಲಿ ಅಧ್ಯಯನ ಮಾಡಿದ,ಕೋಳಿವಾಡದ ನಿವಾಸಿಯಾದ ಶ್ರೀ. ಪುರೋಹಿತ ನಾರಾಯಣರು, ಭಾರತದ ಕೆಲವು ಭಾಗವನ್ನು ಗಮಕರೀತಿಯಲ್ಲಿ ಹೇಳಿದರು.

ಆಮೇಲೆ ಕುಮಾರವ್ಯಾಸನ ಗುಣವರ್ಣನೆ, ಅವನ ಕಾಲ, ಕಾವ್ಯ, ಶೈಲಿ, ರೀತಿ, ರಸ, ಭಾವ, ಅವನ ಮೇಲ್ಮೆ ಮುಂತಾದ ವಿಷಯಗಳ ಮೇಲೆ ಶ್ರೀಯುತರುಗಳಾದ ಹುಯಿಲಗೋಳ ನಾರಾಯಣರಾಯರು, ಗಳಗನಾಥರು, ಪದಕಿಯವರು, ಪೊಹರೆ ಹಣಮಂತರಾಯರು, ಸೊಗವೀರ ಶಮುರ್ಕರು, ಬಿ. ಎಸ್. ಪಾಟೀಲರು, ಬುರ್ಲಿಅವರು, ನೆಗಳೂರ ರಂಗನಾಥರು, ಗಾಂಪಕ್ಕರ ಅವರು, ಬೆಟಗೇರಿ ಕೃಷ್ಣಶರ್ಮರು, ಜೋಶಿ ಶಂಕರರಾಯರು, ಬೆಳಗಾಂವಿ ರಾಮಚಂದ್ರರಾಯರು, ಬೇಂದ್ರೆ ದತ್ತರಾಯರು ಮಾತನಾಡಿದರು.

ಒಂದು ಮಾತನ್ನು ಮಾತ್ರ ಒತ್ತಿ ಒತ್ತಿ ಹೇಳಬೇಕೆಂದು ಎನಿಸುವುದು. ಆಂದು ಅಲ್ಲಿ, ಆ ಹಳ್ಳಿಗರೇ ಆಡಿತೋರಿಸಿದ 'ದ್ರೌಪದೀ ವಸ್ತ್ರಾಪಹರಣ'ವು, ಹಳ್ಳಿಗಳು ಹಿಂದೆ ಬಿದ್ದುವೆಂದು ಹಳಿಯುತ್ತ ಬಂದಿದ್ದ ದೊಡ್ಡೂರವರನ್ನು ದಂಗುಬಡಿಸುವಂತೆ ಇತ್ತು. ಕುಮಾರವ್ಯಾಸನ ಭಾರತದಲ್ಲಿಯ ಭಾಗವನ್ನು, ರಾಗ-ತಾಳ-ಲಯಬದ್ಧವಾಗಿ, ಕಾವ್ಯನಾಟಕವೊಂದರಂತೆ ಮಾಡಿತೋರಿಸಿದರು. ಭಾವನೆಗೆ ಹೆಚ್ಚು ಪ್ರಾಶಸ್ತ್ಯವಿದ್ದುದರಿಂದ, ಅಲ್ಲಿ ರಂಗಭೂವಿನ್ಯಾಸ ಮಿಕ್ಕ ಆಡಂಬರಕ್ಕೆ ಮನಸ್ಸು ಹರಿಯುವಂತಿರಲಿಲ್ಲ. ದ್ರೌಪದಿ ಪಾತ್ರವನ್ನು ವಹಿಸಿದ ದೇವಣ್ಣನು ತನ್ನ ಪಾತ್ರಾಭಿನಯದಿಂದ ಸಭಿಕರನ್ನು ಮೆಚ್ಚಿಸಿದನು. ಸೀರೆ ಸೆಳೆಯುವ ಕಾಲದ ಪದ್ಯಗಳನ್ನು ಹೇಳುವಾಗ ಕಣ್ಣೀರ್ಗರೆಸಿಕೊಂಡವರೆಷ್ಟೋ ಜನ. ಆ ಹುಡುಗನಿಗೆ ವಿದ್ಯಾವರ್ಧಕ ಸಂಘದ ಪರವಾಗಿಯೂ, ಬಿ. ಎಂ. ಶ್ರೀಕಂಠಯ್ಯನವರ ಪರವಾಗಿಯೂ ಪಾರಿತೋಷಕಗಳು ಕೊಡಲ್ಪಟ್ಟುವು.

ಅಧ್ಯಕ್ಷರು ತಮ್ಮ ಮುಕ್ತಾಯದ ಭಾಷಣದಲ್ಲಿ ಸ್ಮಾರಕಸಂಸ್ಥೆಯವರನ್ನು ಅಭಿನಂದಿಸಿ, ಕೋಳಿವಾಡ ಗ್ರಾಮವು ತನ್ನ ಸಾಹಿತ್ಯದ ಸೇವೆಯನ್ನು ಇನ್ನೊಮ್ಮೆ ಅಂಥಹ ಕುಮಾರವ್ಯಾಸನನ್ನು ಹುಟ್ಟಿಸಿ ಸಲ್ಲಿಸಲೆಂದು ಹಾರೈಸಿದರು.

'ಸ್ಮಾರಕೋತ್ಸವವು ಮುಗಿಯಲಿಲ್ಲ, ಪ್ರಾರಂಭವಾಯಿತು!' ಎನ್ನುತ್ತ ಬಂದಿದ್ದ ಜನರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. 'ಇದೊಂದು ಮರಿಸಾಹಿತ್ಯಸಮ್ಮೇಲನವು' ಎಂದುಸುರಿದವರು ಹಲವರು. 'ಇಂತಹವು ಆಗಾಗ ಆಗಬೇಕು; ಹಳ್ಳಿಗಳಲ್ಲಿ ಆಗಬೇಕು' ಎಂದು ಸೂಚಿಸಿದರು ಕೆಲರು. 'ಹಳ್ಳಿಗಳು ಮುಂದೆ ಬರುವವು' ಎಂದು ಜೋಡಿಸಿದರು ಇನ್ನು ಕೆಲವರು. ಊಟದ ನೆನಪು ಒಂದು "ಹಳ್ಳಿಗಳು ಒಳಗೆಯೆ ಇರುವುದು ಯೋಗ್ಯ; ಹೊರಕ್ಕೆ ಬಂದರೆ ಅಂತಃಕರಣವು ಒಣಗುವುದು. ಒಣಗಿದರೆ ಏನು ಸೊಗಸು?" ಎಂದೂ ಒಬ್ಬರೆಂದರು.



ತ್ಯಾಗ

★

ಶ್ರೀ. ಎಸ್. ಎನ್. ಹೊಳ್ಳ

ಭೋಗವೆಂದಿಡ ಕರೆವ ಜನರು ಸಿಗಬಹುದು,
ಭೋಗದಾಶೆಯು ಇಣಿಕಿ ಕಂಡುದಿರಬಹುದು,
ರಾಗದುನ್ಮತ್ತಶಿಖರಕೇರಿ ನಿನ್ನನು ಹರಸಿ,
ಯೋಗಿಯೆಂದದಿ ದುಡಿದ ಸರ್ವಶಕ್ತಿಯ ಬೆರಸಿ,
ನಿನಗಿತ್ತೆ ಓ ಹೆಣ್ಣೆ ನನ್ನ ಮನವ!
ನಿನಗಿತ್ತೆ ನಾನೆನ್ನ ಬರಿಯ ತನುವ!

ಭೋಗದಾಸೆಯು ಬಂದರೇನಾಯ್ತು? ಅದು ತಪ್ಪೆ?
ನೀಗಿಸಿಲ್ಲವು ನಿನ್ನ ಕೌಮಾರ್ಯವನು ಆಪ್ಪೆ,
ನಿನ್ನ ಗಲ್ಲವ ತಟ್ಟೆ, ಮೈಯನೆಲ್ಲವ ಮುಟ್ಟಿ;
ಕಾಲೆಂದು ಕೈಯೆಂದು ನೋಡದೆಯು ಮುತ್ತಿಟ್ಟಿ,
ನಿನ್ನೆದೆಗು ನನ್ನೆದೆಗು ನಂಟುಗೈದೆ,
ಜವನಿಂದು ಹರಿಸದಿಹ ಗಂಟುಹೊಯ್ದೆ!



'ನನ್ನ ದೇವರು ಮತ್ತು ಇತರ ಕತೆಗಳು'

ಶ್ರೀ. ಕೆ. ಎ. ಪುಟ್ಟಪ್ಪನವರ ಕಥಾಸಂಗ್ರಹ.

ಶ್ರೀಮಾನ್ ಕೆ. ಎ. ಪುಟ್ಟಪ್ಪನವರ 'ಮಲೆನಾಡಿನ ಚಿತ್ರಗಳ'ನ್ನೂ 'ಸಂನ್ಯಾಸಿ ಮತ್ತು ಇತರ ಕತೆಗಳ'ನ್ನೂ ಓದಿದವರು 'ನನ್ನ ದೇವರು ಮತ್ತು ಇತರ ಕತೆಗಳು' ಎಂಬ ಕಥಾಸಂಗ್ರಹವನ್ನೋದಿದರೆ, ಒಂದರಲ್ಲಿ ಕೇವಲ ಚಿತ್ರಕಾರರೂ ಒಂದರಲ್ಲಿ ಕೇವಲ ಕವಿಗಳೂ ಆಗಿದ್ದ ಶ್ರೀ. ಪುಟ್ಟಪ್ಪನವರು, ಇಲ್ಲಿ ಕವಿಗಳೂ ಚಿತ್ರಕಾರರೂ ಆಗಿ ಆಯಾ ಕೈಜಳಕಗಳನ್ನು, ಜನಜೀವನದ ವಿಸ್ತಾರವನ್ನು ಆಳವಾಗಿನೋಡಿ ಮಾರ್ಮಿಕವಾಗಿ ಬಣ್ಣಿಸುವಲ್ಲಿ—ಬಹು ಮುಟ್ಟಿಗೆ ಬಳಸಿ ಕೊಂಡಿರುವರೆಂಬದನ್ನು ಸಹಜವಾಗಿ ಕಾಣಬಹುದು.

ಪುಟ್ಟಪ್ಪನವರು ಕತೆಗಳನ್ನೆ ಬರೆಯಲಿ, ಕಾದಂಬರಿಯನ್ನೆ ಬರೆಯಲಿ; ಕೊನೆಗೂ ಅಪರು ಕವಿಗಳೆ! ಅವರ ಕಾವ್ಯದ ಅನಂತವಾಹಿನಿ ಪದ್ಯರಚನೆಗೆ ಕಟ್ಟುಬೀಳದೆ, ಸ್ವತಂತ್ರವಾಗಿ ಮನಬಂದಂತೆ ಹರಿದು ಕತೆ-ಕಾದಂಬರಿಗಳ ರೂಪ ತಾಳುತ್ತದೆ ಒಮ್ಮೊಮ್ಮೆ. ಅದರ ಪರಿಣಾಮವಾಗಿ ಇಲ್ಲಿ 'ಸಾಲದ ಮಗು' ವಿನ ಮಳೆಗಾಲ ವರ್ಣನೆಯಾಗಿ 'ಔದಾರ್ಯ'ದಲ್ಲಿ ಹುಣ್ಣಿಮೆಯರಾತ್ರಿಯಾಗಿ ಹರಿದಿದೆ ಅವರ ಕಾವ್ಯಲಹರಿ. ಶ್ರೀಮಾನ್ ಪುಟ್ಟಪ್ಪನವರ ಶೈಲಿಗೆ ಮುಗ್ಧರಾಗದವರು ತೀರ ಕಡಮೆ. ಅಂತೆಯೆ ಸಣ್ಣಕತೆಯಲ್ಲಿ ಆಡಗಿದ ಒಂದೆರಡು ಲೋಪ-ದೋಷಗಳು ಕೂಡ ಎದ್ದು ಕಾಣುವುದಿಲ್ಲ, ಆದರ ಬೆಳಕಿನಲ್ಲಿ.

ಶ್ರೀಮಾನ್ ಪುಟ್ಟಪ್ಪನವರು ಕವಿಗಳಾದುದರಿಂದ, ಕವಿಯ ಕಣ್ಣಿಗೆ ಸರಿಯೆನಿಸುವಂತಹ ಸನ್ನಿವೇಶಗಳನ್ನೆ ಜೀವನವಿಸ್ತಾರದಿಂದ ಆಯ್ದುಕೊಳ್ಳುತ್ತಾರೆ. ಅಂತೆಯೆ ಜನಜೀವನದ ವಾಸ್ತವ ಚಿತ್ರವನ್ನು ಅವರು ಬಣ್ಣಿಸಿದರೂ, ಅದು ಜನಜೀವನವನ್ನು ಬಿಟ್ಟು ಆಕಾಶದ ಕಾವ್ಯಲೋಕಕ್ಕೆ ಕೈ ಚಾಚುವಂತೆ ಕಾಣುತ್ತದೆ. ಉತ್ತಮ ಹಾಗು ಕಾವ್ಯಪೂರ್ಣ ಕಲಾಕೃತಿಯಾಗಬೇಕಾದರೆ ವಾಸ್ತವಜೀವನಕ್ಕಿಂತ ಅದು ಸ್ವಲ್ಪ ದೂರವಾಗಿಯೆ ಇರುವುದು ಒಳಿತಲ್ಲವೆ?

'ವಾಸ್ತವ ಜೀವನವನ್ನೂ ರಸವತ್ತಾಗಿ ಚಿತ್ರಿಸಲು ಬರಬಹುದು' ಎಂದು ಸಾರುವಂತೆ 'ವಿಶಾನಾಕ್ಷಿಯ ಮನೇ ಮೇಷ್ಟ್ರು' ತನ್ನ ಸ್ವಾಭಾವಿಕತೆಯಿಂದ ನಮ್ಮ ಮನಸ್ಸಿಗೆ ಹೆಚ್ಚಾಗಿ ಹಿಡಿಯುತ್ತದೆ. 'ಸಾಲದ ಮಗು'ವಿನ ಕೊನೆ ವಾಚಕರ ಹೃದಯವೀಣೆಯನ್ನು ಮಿಡಿಯುವುದಕ್ಕಾಗಿಯೆ ದುರಂತದಲ್ಲಿ ಮುಗಿಸಲಾಗಿದ್ದರೂ, ದೈವವುಳ್ಳವರು ಗುಲಾಮರನ್ನು ನಡೆಯಿಸಿಕೊಳ್ಳುವ ಜೀವನದ ರೀತಿಯನ್ನು ಅದರಲ್ಲಿ ವಾಸ್ತವಿಕವಾಗಿಯೆ ಬಣ್ಣಿಸಲಾಗಿದೆ.

'ಔದಾರ್ಯ'ವು ಒಂದು ಅತ್ಯುತ್ತಮ ವಾದ ಸಣ್ಣಕತೆ. ಡೇವಿಡ್ ಮಾಸ್ತರರ ಆತ್ಮವೃತ್ತಾಂತದ ಆಭಾಸ ಸನ್ನಿವೇಶವನ್ನು ನಿರೂಪಿಸುವಲ್ಲಿ, ಸುತ್ತಲಿನ ವಾತಾವರಣವು ಬಹು ಗಂಭೀರವಾಗಿ ಬಣ್ಣಿಸಲ್ಪಟ್ಟಿದೆ. ಅದಕ್ಕೆ ತಕ್ಕಂತೆ ಶೈಲಿಯೂ ಗಂಭೀರವಾಗಿ, ವಾಚಕರ ಭಯಭೀತಚಿತ್ತವನ್ನು ಸೂರೆಗೊಂಡು, ಕುತೂಹಲದಿಂದ ಕೊನೆಯಕಡೆಗೆ ಸೆಳೆಯುತ್ತದೆ. ವಾಸ್ತವತೆಯಿಂದ ಆರಂಭವಾಗಿ ಆದರ್ಶತೆಯಲ್ಲಿ ಮುಗಿಯುವ 'ನನ್ನ ದೇವರು' ಎಂಬ ಕತೆಯಲ್ಲಿಯ ಭಾವದೇವರ ಪಜ್ರಶಾಂತಿ ಸ್ವಭಾವವು, ನಮ್ಮ ಚಿತ್ತದಲ್ಲಿ ಚಿರಕಾಲ ನೆಲಸುತ್ತದೆ; ಎಂದಿಗೂ ಮರೆಯಾಗುವುದಿಲ್ಲ. 'ಧನ್ವಂತರಿಯ ಚಿಕಿತ್ಸೆ' ಯು ಒಂದು ವಿಡಂಬನಾತ್ಮಕ ಕಥೆಯು. ವಾಸ್ತವಿಕ ವಿಡಂಬನೆಯಲ್ಲಿ ಕವಿಯ ಲೇಖನಿ ಕೈಯಾಡಿದರೆ ಅದಕ್ಕೆ ಎಂತಹ ಒಪ್ಪ ಬರಬಹುದೆಂಬುದನ್ನು ಇಲ್ಲಿ ಕಂಡುಕೊಳ್ಳಬಹುದು. ಇಲ್ಲಿ ಕಂಡುಬರುವ ಅಪೂರ್ವ-ಕಲ್ಪನೆ, ಕೊನೆಯ ಹಿಡಿತಗಳು ಕತೆಯ ಮೂಲಗುಣಗಳು. 'ಆದರ್ಶಸಾಧನೆ'ಯು ವಾಸ್ತವಲೋಕವನ್ನು ವಿಹಾರಿಸಿಂತು ದರಿಂದ ತಾತ್ತ್ವಿಕತೆಯಿಂದ ಅಲ್ಲಿ ಪ್ರಧಾನವಾಗಿದೆ. ಅದಕ್ಕಾಗಿಯೆ ಕತೆಯನ್ನು ಕಲ್ಪಿಸಿಕೊಂಡಂತಾಗಿದ್ದರೂ, ಕೊನೆಯು ಮಾತ್ರ ಇತರ ಕತೆಗಳಲ್ಲಿಯಂತೆ ನಮ್ಮ ಅಂತಃಕರಣವನ್ನು ಮುಟ್ಟುತ್ತದೆ.

ಎಲ್ಲ ಕಥೆಗಳಲ್ಲಿಯೂ ನಮ್ಮ ಮನಸ್ಸನ್ನು ಸಮಗ್ರವಾಗಿ ಆಕರ್ಷಿಸುವುದು ಶ್ರೀ. ಕೆ. ಎ. ಪುಟ್ಟಪ್ಪನವರ ಬಿಗುಹಿನ ಶೈಲಿ.

—ಎಸ್ಕೆ.

ದ್ವಿತೀಯ ಮಹಾಯುದ್ಧ

ಶ್ರೀಮಾನ್ 'ಹರಿದಾಸ' ಅವರಿಂದ ರಚಿತವಾದುದನ್ನು, ಮಂಗಳೂರಿನ ಶ್ರೀವೇಣಿ ಪ್ರಕಟನಾಲಯದವರು ಪ್ರಕಟಿಸಿದ್ದಾರೆ.

ಸದ್ಯ ನಡೆದ ಯುದ್ಧದ ಕತೆಯನ್ನು ಹೇಳುವುದಕ್ಕೆ ಹೊರಟ ಹೊಸಮಾದರಿಯ ಗ್ರಂಥವಿದು. ಪಾಶ್ಚಾತ್ಯರಾಷ್ಟ್ರಗಳ ಬೇರೆ ಬೇರೆ ಭಾಷೆಗಳಲ್ಲಿ, ವರ್ತಮಾನ ಜಳವಳಿಯನ್ನು ಕುರಿತ ಹಲವು ಪುಸ್ತಕಗಳು ದಿನದಿನ ಹೊರಡುತ್ತಿರುತ್ತವೆ. ಈ ಗ್ರಂಥವು ಕನ್ನಡದಲ್ಲಿಯ ಅಂತಹ ಪ್ರಯತ್ನದ ಪ್ರಥಮಫಲವೊಂದು. ನಡೆದಿರುವ ಯುದ್ಧದ ಮೂಲದಿಂದ ಮೊದಲುಮಾಡಿ, ಫ್ರಾನ್ಸಿನ ಪತನದ ವರೆಗಿನ ಯುದ್ಧವಾರ್ತೆಯನ್ನೆಲ್ಲ ಇದೊಂದೇ ಪುಸ್ತಕದಿಂದ ಕೂಲಂಕಷವಾಗಿ ತಿಳಿದುಕೊಳ್ಳಬಹುದಾಗಿದೆ. ಯುದ್ಧದ ವಾರ್ತೆಯೆಂದರೆ ರಮ್ಯವಾದ ಸಂಗತಿ, ಕುತೂಹಲವನ್ನು ಹುಟ್ಟಿಸುವಂತಹ ವಿಷಯ. ವರ್ತಮಾನ ಪತ್ರವನ್ನು ನಿತ್ಯನಿತ್ಯವೂ ಓದದಿರುವವರಿಗೆ ಸದ್ಯದ ಯುದ್ಧದ ಇತ್ಥಂಭೂತ ಸಂಗತಿ ಗೊತ್ತಾಗುವುದು ಅಸಾಧ್ಯವಿಷಯವೆ; ಆದರೆ ಈಗ ಯುದ್ಧದ ಸಂಪೂರ್ಣವಾದ ವರದಿಯನ್ನು ಅರಿತುಕೊಳಬೇಕೆಂದು ಅಪೇಕ್ಷಿಪಡುವವರು ಅನೇಕರು. ಅಂತಹ ಜನರ ಅಪೇಕ್ಷೆಯನ್ನು ಈ ಪುಸ್ತಕ ಎಷ್ಟೋ ಮಟ್ಟಿಗೆ ಪೂರಯಿಸಬಹುದಾಗಿದೆ.

ಸಂ. ಕ.

ಸಾದರ ಸ್ವೀಕಾರ

೬೮. ಸೆರೆಯ ನುರೆಯಲ್ಲಿ:— (ಸತ್ಯಕಥೆ). ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಅವರು ಬರೆದುದು. ಶ್ರೀ. ಬೋಧರಾವ್ ರಾಮಚಂದ್ರ ದಿವಾಕರ ಆಧಾತ್ಮಕಾರ್ಯಾಲಯ, ಹುಬ್ಬಳ್ಳಿ ಅವರು ಪ್ರಕಾಶಕರು. ಕ್ರೌ. ಅ. ೧೨+೨೦೪ ಪುಟಗಳು. ಬೆಲೆ ೧-೦-೦.

೬೯. ಮಧುರವಾಣೀ:— (ಮಾಸಪತ್ರಿಕೆಯ ಸಂಸ್ಕೃತ ಸಾಹಿತ್ಯಸಮ್ಮೇಳನದ ವಿಶೇಷಸಂಚಿಕೆ). ಇದರ ಸಂಪಾದಕರು 'ಸಂಸ್ಕೃತ ಸಾಹಿತ್ಯರತ್ನ' ಶ್ರೀ. ಗಲಗಲಿ ರಾಮಾಚಾರ್ಯರು; ಉಪಸಂಪಾದಕರು 'ಸಂಸ್ಕೃತ ಸಾಹಿತ್ಯಭೂಷಣ' ಶ್ರೀ.ಬುಲ್ಲಿ ಶ್ರೀನಿವಾಸಾಚಾರ್ಯರು. ಪ್ರಕಾಶನ ಸ್ಥಳ ಬೆಳಗಾಂವಿ. ಡೆ. ಆ. ೧೬೪ ಪುಟಗಳು.

ಮೊನ್ನೆ ಮೊನ್ನೆಯೆ ಬೆಳಗಾಂವಿಯಲ್ಲಿ ಸೇರಿದ ಪ್ರಥಮ ಸಂಸ್ಕೃತ ಸಾಹಿತ್ಯ ಸಮ್ಮೇಳನದ ವಿಶದವರದಿಗಳಿಂದಲೂ, ಅಧ್ಯಕ್ಷ-ಸ್ವಾಗತಾಧ್ಯಕ್ಷರ ಭಾಷಣಗಳಿಂದಲೂ ಬೇರೆ ವಿದ್ವಾಂಸರ ಸಂಸ್ಕೃತ ಲೇಖನಗಳಿಂದಲೂ ಕೂಡಿಕೊಂಡು, ಈ ಸಂಚಿಕೆ ಅಂದವಾಗಿ ಹೊರಟಿದೆ. ಸಂಪಾದಕರ ಪರಿಶ್ರಮ ಪ್ರಶಂಸಾರ್ಹವಾದುದು.

೭೦. ಪ್ರಭಾತ:— (ವಾರಪತ್ರಿಕೆಯ ವಾಣಿಜ್ಯಸಂಚಿಕೆ). ಸಂಪಾದಕರು ಶ್ರೀಮಾನ್ ಕುಡ್ಪಿ ವಾಸುದೇವ ಶೆಣೈ, ಮಂಗಳೂರು. ಪ್ರಕಾಶಕರು ಶ್ರೀಮಾನ್ ಎಂ. ಬಾಬೂರಾಯ ಪ್ರಭು ಬಿ. ಎ. ಮಂಗಳೂರು ಪ್ರೆಸ್, ರಥಬೀದಿ-ಮಂಗಳೂರು. ಕ್ರೌನ್ ಫೋಲಿಯೋ ೧೬೪ ಪುಟಗಳು; ಬೆಲೆ ೦-೮-೦.

ವಾಣಿಜ್ಯಕ್ಕೆ ಸಂಬಂಧಿಸಿದ ಹಲವು ಉಪಯುಕ್ತವಾದ ಸಚಿತ್ರ ಲೇಖನಗಳೂ ಬೇರೆ ಲಲಿತ ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ. ವಾಣಿಜ್ಯಕ್ಕೆ ಸಂಬಂಧಿಸಿದ ಲೇಖನಗಳೆಲ್ಲವೂ ಆಯಾ ವಿಷಯದಲ್ಲಿ ತಜ್ಞರಾದವರಿಂದಲೆ ಬರೆದುವಾಗಿವೆ. ಎಲ್ಲರೂ ಸಂಗ್ರಹದಲ್ಲಿರಿಸಬೇಕಾದ ಸಂಚಿಕೆಯಿದು.

ದಕ್ಕನ್ ಪ್ರಭಾತ:— (ವಾರಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಸಿ. ರಾ ಚೋಟಯ್ಯ, ರಾಯಚೂರು (ನೈಝಾಮ್ ಸ್ಟೇಟ್). ಫ್ಲೂಲ್ಸ್‌ಕ್ಯಾಪ್ ಅರ್ಧಪಾಳೆಯಳತೆಯ ಹತ್ತು ಪುಟಗಳು. ವಾರ್ಷಿಕ ವರ್ಗಣಿ ಬ್ರಿಟಿಷ್ ನಾಣ್ಯ ೩-೦-೦; ನೈಝಾಮ್ ನಾಣ್ಯ ೩-೮-೦. ಬಿಡಿಸಂಚಿಕೆಗೆ ೦-೧-೦.

ಅಂತೂ ಕೊನೆಗೊಮ್ಮೆ ರಾಯಚೂರಿನಲ್ಲಿ ಕನ್ನಡ ಪತ್ರಿಕೆ ಹೊರಟಿತು. ಆದರೆ ನಮಗೀಗ ಕನ್ನಡ ಪತ್ರಿಕೆ ಹೊರಡುವುದಷ್ಟೆ ಮುಖ್ಯವಲ್ಲ; ಕನ್ನಡಿಗರಲ್ಲಿ ಮನುಷ್ಯತ್ವವನ್ನೂ ಕರ್ನಾಟಕತ್ವವನ್ನೂ ಹುಟ್ಟಿಸಬೇಕಾದುದು ಬಹು ಮುಖ್ಯವಾಗಿದೆ. ಬರಿಯೆ ಹುಟ್ಲರ್, ಮುಸೊಲಿನಿ, ಸ್ಟಾಲಿನರ ಕತೆಗಳನ್ನು ಹೇಳುವ ಪತ್ರಿಕೆಗಳು ಕನ್ನಡದಲ್ಲಿ ಬೇಕಾದಷ್ಟಿವೆ. ರಾಯಚೂರಿನ 'ದಕ್ಷಿಣ ಪ್ರಭಾತ'ವೂ ಅದನ್ನೇ ಹೇಳಲು ಹೊರಟರೆ, ಅದೊಂದು ವಿಶೇಷ ಕಾರ್ಯವನ್ನು ಸಾಧಿಸಿದಂತೆನಿಸದು. 'ದಕ್ಷಿಣ ಪ್ರಭಾತ'ವು ನೈಝಾಮ್ ಕನ್ನಡಿಗರ ಕತ್ತಲ ಬಾಳಿಗೆ ನಿಜವಾದ ಪ್ರಭಾತವನ್ನೊದಗಿಸಬೇಕು. ಆದರ ವಾಣಿ ಅಲ್ಲಿಯ ಜನತೆಯ ಹೃದಯಾಂತರ್ವಾಣಿಯಾಗಿರಬೇಕು. ಆದರ ದೃಷ್ಟಿ ಜಾತಿ-ಮತ-ಹುಚ್ಚುರಾಜನಿಷ್ಠತನ ಮೊದಲಾದ ಸಂಕುಚಿತ ವರ್ತುಲಗಳನ್ನು ವಿಸ್ತರಿಸುವುದಾಗಿರಬೇಕು. ಆದರ ಟೀಕೆ ಸತ್ಯದ ಸಂಶೋಧನೆಗಾಗಿಯೊ ಸಂಸ್ಥಾಪನೆಗಾಗಿಯೊ ಇರಬೇಕಲ್ಲದೆ, ಯಾವುದೊಂದು ವ್ಯಕ್ತಿಯ ಇಲ್ಲವೆ ಪಕ್ಷದ ಮತವನ್ನು ಪುರಸ್ಕರಿಸುವುದು ಇರಲಾಗದು. 'ದಕ್ಷಿಣ ಪ್ರಭಾತ'ಈ ಗುರಿಯಿಂದ ಮುಂದುವರಿದರೆ ನೈಝಾಮ್ ಕನ್ನಡಿಗರ ಸೇವೆಯನ್ನದು ಚೆನ್ನಾಗಿ ಮಾಡೀತು.

೭೨. ಜೀನು:— (ರವೀಂದ್ರರ ಐದು ಕಥೆಗಳು). ಅನುವಾದಕರು ಶ್ರೀಯುತ 'ರಮಾನಂದ' ಅವರು. ಧಾರವಾಡದ ರಂಗ-ಮಂಗ ರಂಜನೋದ್ಯಾನದ ೫ನೆಯ ಗೊಂಚಲು. ಪೂ. ಕ್ಯಾ. ಅ. ೬೬ ಪುಟಗಳು. ಬೆಲೆ ೦-೪-೦.

೭೩. ಮೊಗವೀರ (ತ್ರೈಮಾಸ ಪತ್ರಿಕೆ). ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಲಿಯ ಮುಖಪತ್ರಿಕೆ. ಪ್ರಕಾಶಕರು ಶ್ರೀ. ಎಚ್. ಕೆ. ಕುಂದರನ್, ಮೊಗವೀರ ವ್ಯವಸ್ಥಾಪಕ ಮಂಡಲಿ, ೩೮ ನಾನಾಭಾಯಿಲೇನ್, ಕೋಟೆ, ಮುಂಬಯಿ. ಕ್ರೌ. ೪೮ ಪುಟಗಳು. ವಾರ್ಷಿಕ ಚಂದಾ ೧-೦-೦.

ನಮ್ಮ ಕಡೆಗೆ ಬಂದುದಿದು ಇದೇ ಜನವರಿಯ ಸಂಚಿಕೆ; ಎಂದರೆ ಎರಡನೆಯ ವರ್ಷದ ಮೂರನೆಯ ಸಂಚಿಕೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೆ ವಿಶೇಷವಾಗಿ ವಾಸಿಸುತ್ತಿರುವ 'ಮೊಗವೀರ' ಜಾತಿಯ ಜನರು, ತಮ್ಮ ಜನರಲ್ಲಿ ಜ್ಞಾನಪ್ರಸಾರವಾಗುವುದಕ್ಕೂ ತಮ್ಮ ಸಂಘದ ಚಟುವಟಿಕೆಗಳನ್ನು ಎಲ್ಲರಿಗೂ ತಿಳುಹಲಿಕ್ಕೂ ಈ ಪತ್ರಿಕೆ ಹೊರಡಿಸಿದ್ದಾರೆ. ಈ ಪತ್ರಿಕೆಯು ಮುಂಬಯಿ ನಿವಾಸಿಗಳಾದ ಮೊಗವೀರರೆಲ್ಲರಿಗೆ ಕನ್ನಡದ ಸಂಬಂಧವು ಎಂದೂ ತಪ್ಪದಂತೆ ಮಾಡಲು ಸೊಂಟಬಿಗಿದು ನಿಂತಿದೆ. ಮೊಗವೀರ ಸಮಾಜದ ಸೋದರ-ಸೋದರಿಯರಿಂದಲೆ ಬರೆಯಲಾದ ವಿವಿಧ ವಿಚಾರದ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಯಶಸ್ವಿಯಾಗಿ ಬಹುಕಾಲ ಬಾಳಲಿ!



ಲಕ್ಷ್ಯ ಇರತಕವ !

" ಏನ್ರೀ, ನಿಮ್ಮ ಹೆಂಡತಿ ನಿಮ್ಮ ಆರಿನೀ ಆಂಚಡೀ ಬನ್ನೆ ಸಾಕಷ್ಟು ಲಕ್ಷ್ಯ ಕೊಡತಿರ ಬೇಕು—ಅಲ್ಲ?"

" ಆರಿನೀ ಆಂಚಡೀ ಮ್ಯಾಲೆ ಅಷ್ಟಕ ಯಾಕಂತೀ! ಇಡೀ ನನ್ನ ಇರುವಿಕೇ ಮ್ಯಾಲಕ ಯಾವಾಗಲೂ ಆಕೀ ಲಕ್ಷ್ಯ ಇರತಕವ!"

* * *

ಬಗೀ ಹರಿಯುವ ಚಿಂತಿ

" ನಮ್ಮ ಹುಡುಗನ ವಿಷಯಂದರ ಒಂದು ದೊಡ್ಡ ಸಮಸ್ಯನೇ ಆಗಿ ಕೂತತಕದ ನೋಡ್ರೆಪಾ! ನಮ್ಮ ಮನಿಯಾಕೀ ಮನಸು, ಮಗಾ ಡಾಕ್ಟರಾಗಬೇಕೂಂತ. ನಾ ಅಂತೀನಿ, ಸುಮ್ಮನೇ ನಮ್ಮ ವಕೀಲೀ ಉದ್ಯೋಗದೊಳಗs ತೊಡಕಿಸಿಕೊಂಡು ಬಿಡೂಣಾ ಅಂತ. ನಾಳೆ ಆ ರಾಜಮಾನ್ಯ ರಾ ಜೇ ಶ್ರೀ ಅನ್ನ ಬಹುದು: ತಾನೊಬ್ಬ ನೈವಮಾನಿಕ ಆಗುವವಾ ಅಂತ. ನನಗಂತೂನಿ ಒಗಟನs ಒಡೀದ್ಹಾಂಗ ಆಗೇದ ನೋಡ್ರೆಪಾ!"

" ಸರಿ, ಸರಿ! ನಿಮ್ಮ ಹುಡುಗನ ವಯಸ್ಸು ಎಷ್ಟು ಹೇಳ್ರಿ ಈಗ!"

" ಏಳ್ಲೀ ವಯಸರೀ; ಬರೂ ಎಪ್ರೆಲ್ ತಿಂಗಳೊಳಗ ಇನ್ನೂ ಹುಟ್ಟಾಂವ ಇದ್ದಾನ! ಹೆಂಡತಿ ಬಸಿರಿದ್ದಾಳಲ್ರೆಪಾ! ಆಕಿ ಗಂಡೇ ಹಡಿಯತಾಳಂತ ಜೋಯಿಸರು ಭವಿಷ್ಯಾ ಹೇಳ್ಯಾರ! ಅದಕs ನನಗೊಂದು ದೊಡ್ಡ ಚಿಂತಿ ಬಿದ್ದsದರೀ!

* * *

ಹಾಂಗಿದ್ದರ ಚಿಂತಿಬ್ಯಾಡ!

ಆಕೆ:— ನಮ್ಮ ಗುಂಡ್ಯಾನ ಮದಿವಿ ಈ ಜನ್ಮದಾಗೇನೂ ಆಗತಕದಂತ ಅನಸವೊಲ್ಲದು ನನಗ. ತೀರಾ ನೂರ್ಖತನದ ಹಾದೀನs ಹಿಡೀಲಿಕ್ಕೆ ಹತ್ತ್ಯಾನ.... ಸುಡ್ಲಿ ಬಯ್ದು!

ಅತ:— ಹಾಂಗಿದ್ದರ ಏನೂ ಚಿಂತೀ ಮಾಡಬ್ಯಾಡ; ನಿನ್ನಿಷ್ಟದ ಪಾತ್ರಿಯಿಂದ ಆಗತಕವ!

ಆಕೆ:— ಅಪ ಹ್ಯಾಂಗದೂ?

ಅತ:— ಅಧ್ಯಾಂಗಂದರ? ನುದಿವೀ ಮಾಡಿಕೊಳ್ಳೂದಂದರ ನೂರ್ಖತನದ ಹಾದೀ ಹಿಡಿದವರದೇ ಕೆಲಸ ಅಪ!

* * *

ಜಗಳಾಟಾ ತಪ್ಪಿಸಬೇಕಾಗೇದ!

" ಏನ್ರೀ ರಾಯರs! ಹೀಂಗ್ಯಾಕ ಓಡಿ ಹೋಗಲಿಕ್ಕೆ ಹತ್ತೀರಿ? ಏನಾಗೇದ ಯಾರಿಗೆ?

" ಇನ್ನೇನೂ ಇಲ್ಲರಿ! ಬೇಗನೇ ಓಡಿ ಹೋಗಿ, ಗಂಡಾ ಹೆಂಡತೀ ನಡುವಿನ ಜಗಳಾಟಾ ಒಂದು ತಪ್ಪಿಸಬೇಕಾಗೇದ!"

" ಯಾರ್ರೀ ಅವರು....ಗಂಡಾ-ಹೆಂಡತಿ ಅಂದರ?"

" ನಾನು ಮತ್ತು ನನ್ನ ಹೆಂಡತಿ; ಇನ್ಯಾರು ಇರಬೇಕು?"

* * *

ಸ್ವಂತದ ಅನುಭವ

ಡಾಕ್ಟರ್:— ಇದು ನಾನೇ ನನ್ನ ಶೋಧಕ ಬುದ್ಧಿಯಿಂದ ಕಂಡು ಹಿಡಿದ ಪೇಟೆಂಟ್ ಔಷಧ. ಇದಕ್ಕ ಹೆಸರು 'ಸ್ವರ್ಗ ಸುಖದಾಯಿನಿ' ಅಂತ ಇಟ್ಟೀನಿ. ಇದರ ಬೊಂದು ಬಾಟ್ಲೀ ತೊಗೊಂಡು ಹೋಗ್ರಿ; ನಿಮ್ಮ ಇರೂ ಬ್ಯಾನಿಗಳೆಲ್ಲಾ ಏಕದಂ ಓಡಿ ಹೋದೂ ಅಂತs ತಿಳಿದುಬಿಡ್ರಿ!

ರೋಗಿ:— ಯಾತರ ಮ್ಯಾಲಿಂದs ಹೇಳ ತೀರೀ ಡಾಕ್ಟರ್ ಇಸ್ಕೊಂದು ಗಟ್ಟಿಯಾಗಿ?

ಡಾಕ್ಟರ್:— ನನ್ನ ಸ್ವಂತ ಅನುಭವದ ಮ್ಯಾಲಿಂದನs ಹೇಳತೀನಿ. ಒಮ್ಮೆ ಒಂದು ಬಾಟ್ಲೀ ತೊಗೊಂಡು ಹೋದವರು ಮತ್ತೊಂದು ಸಲ ನನ್ನದವಾಖಾನೆಗೆ ಮಾರೀ ಸುದ್ದಾ ತೋರಿಸಿಲ್ಲ! ಇದಕೇನಂತೀರಿ ನೀವು?

* * *

ಕಲ್ಪನಾ ಇರಬೇಕಾಗಿತ್ತು!

ಪಾನಾವಳಿಯ ಮಾಲಕನಾದ ವೆಂಕಟರಮಣಾಚಾರಿ ಅಡಿಗೆಯ ಶೇನಪ್ಪನನ್ನು ಕುರಿತು ಹೇಳಿದ:

" ಶೇನಪ್ಪಾ, ಇನ್ನು ನಿನ್ನ ನೌಕರೀ ಸಾಕು ನಮಗ! ನಿನ್ನ ಪೂರ್ತೀ ಪಗಾರಾ ತೊಗೋ! ಹಾದೀ ಹಿಡದು ಬಿಡು!"

" ಅದ್ಯಾಕರೀ ಹೀಂಗ ಅಂತೀರಿ? ನನ್ನಿಂದ ಆಗಿರೂ ತಪ್ಪಾದರೂ ಏನು? ಊಟಕ್ಕ ಬರುವವರನ್ನ ಕೇಳ್ರಿ ಬೇಕಾದರ; ಅಡಿಗಿ ಕೆಟ್ಟಾ ಅಂತ ಒಬ್ಬನೇ ಒಬ್ಬ ಹೇಳಲಿ; ನನಗ ಬರಬೇಕಾದ ಸಂಬಳಾ ಎಲ್ಲಾ ಬಿಟ್ಟು ಹೋಗತೀನಿ!"

" ಅದಕs ಆಪಾ ನಾ ಹೇಳಿದ್ದು ನಿನಗ! ಇಲ್ಲಿ ಬೀಗರಿಗೆ ಕೊಡೂ ಔತಣದೂಟದ ಅಡಗೀ ಮಾಡಲಿಕ್ಕೆ ಇಲ್ಲ; ಪಾನಾವಳೀ ಒಳಗ ಅಡಿಗೀ ಮಾಡಲಿಕ್ಕೆ ಇದ್ದೀದೀ ಅಂಬೂದರ ಕಲ್ಪನಾ ಇರಬೇಕಾಗಿತ್ತು ನಿನಗ! ತಿಳೀತೇನು?

ನ. ನ.

* * *

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೬ ಆಣೆಗಳು.

ನಾಲ್ಕೂ ನಿಟ್ಟಿನ ನೋಟ

ಅಮೇರಿಕೆಯ ನಿರ್ಧಾರ

ಕಳೆದ ತಿಂಗಳು ಕಾಂಗ್ರೆಸಿಗೆ ಕಳುಹಿಸಿದ ಸಂದೇಶದಲ್ಲಿ, ಅಧ್ಯಕ್ಷ ರೂಜವೆಲ್ಟರು ಅಮೇರಿಕೆಯ ಯುದ್ಧಘೋರಣವನ್ನು ಸ್ಪಷ್ಟವಾದ ಮಾತುಗಳಲ್ಲಿ ಡಂಗುರಿಸಿದ್ದಾರೆ. ಇನ್ನು ಮುಂದೆ 'ಅಮೇರಿಕೆಯು ತಟಸ್ಥ' ಎಂದು ತಿಳಿಯಲು ಕೇವಲ ಕಾಯಿದೆ ಪಂಡಿತರಿಗಷ್ಟೆ ಶಕ್ಯ ವಿದೆ ಎನಬಹುದು. "ನಾಯ್ಸೀವಾದಕ್ಕೆ ಜಯವಾದರೆ ಜಗತ್ತಿಗೆ ಕಷ್ಟ ತಪ್ಪಿದ್ದಲ್ಲ .. ಮಾನವನು ತನ್ನ ಪ್ರಗತಿಯ ಇತಿಹಾಸದಲ್ಲಿ ಮಾಡಿದ ಸತ್ಕಾರ್ಯ-ಸಾಹಸಗಳು ಎಂದಿಗೂ ನಿರರ್ಥಕವಾಗುವುವು..ಇಂಗ್ಲಂಡಿನ ಶಕ್ತಿಯ ಮೇಲೆ ಜಗತ್ತಿನ ಸ್ವಾತಂತ್ರ್ಯ ಅವಲಂಬಿಸಿದೆ..ನಾವು ಸ್ವಾತಂತ್ರ್ಯವನ್ನು ಉಳಿಸುವುದಾದರೆ ಇಂಗ್ಲಂಡನ್ನೂ ಉಳಿಸಲೇ ಬೇಕು..ಅದಕಾಗಿ ನಿರಾತಂಕವಾಗಿ, ಮುಕ್ತಹಸ್ತರಾಗಿ ಇಂಗ್ಲಂಡಿಗೆ ಸಹಾಯವನ್ನೊದಗಿಸುವುದು ನಮ್ಮ ಕರ್ತವ್ಯ..ಸರ್ವಾಧಿಕಾರಿತ್ವ ಉಳಿವವರೆಗೆ ಜಗತ್ತಿನಲ್ಲಿ ಶಾಂತಿ-ನ್ಯಾಯ-ಧರ್ಮಗಳು ಶಕ್ಯವಿಲ್ಲ .. ಅದಕಾಗಿ ಹಿಟ್ಲರ್-ಮುಸೋಲಿನಿಯವರ ರಾಜಕೀಯ ತತ್ತ್ವಗಳನ್ನು ಹೊಡೆದೋಡಿಸಿ, ನಾಮಶೇಷ ಮಾಡುವವರೆಗೆ ಹೋರಾಡಲು ನಮ್ಮ ನಿರ್ಧಾರ ಬೇಕು; ಅದಕಾಗಿ ಸಿದ್ಧತೆಗಳನ್ನೂ ನಾವು ತಡೆ ಇಲ್ಲದೆ ಒದಗಿಸಿ ಕೊಳ್ಳಲು ತೊಡಗಬೇಕು." ಈ ಆಶಯದ ಸಂದೇಶವನ್ನಲ್ಲದೆ, ಬೇರೆ ಭಾಷಣಗಳಲ್ಲಿ, ಅಧ್ಯಕ್ಷ ಪದವಿಯ ಅಧಿಕಾರಾರೂಢರಾಗುವ ಅಭಿಷೇಕೋತ್ಸವದ ಸಮಯದಲ್ಲಿ, ರೂಜವೆಲ್ಟರು ತಮ್ಮ ಘೋರಣವನ್ನು ನಿಃಸಂದಿಗ್ಧವಾದ ಶೈಲಿಯಲ್ಲಿ ಸಾರಿದ್ದಾರೆ.

ಘೋರಣವ ವೈಶಿಷ್ಟ್ಯ

ಅಧ್ಯಕ್ಷರ ಈ ಎಲ್ಲ ಭಾಷಣಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದವರು, ಈ ಘೋರಣದಲ್ಲಿ ತೀರ ಮಹತ್ವವಾದ ವೈಶಿಷ್ಟ್ಯಗಳನ್ನು ಕಾಣದಿರಲಾರರು. ಆ ವೈಶಿಷ್ಟ್ಯಗಳನ್ನು ಮೂರು ವಿಧವಾಗಿ ಕಾಣಬಹುದು. (೧) ಒಂದು, ಇಂಗ್ಲಂಡವು ಈಗ ನಡೆಯಿಸಿದ ಹೋರಾಟವು ಜಗತ್ತಿನ ಸ್ವಾತಂತ್ರ್ಯವನ್ನು ಉಳಿಸುವುದಕ್ಕೆ ಎಂದು ರೂಜವೆಲ್ಟರು ಅಧಿಕೃತವಾಗಿ ಒಪ್ಪಿಕೊಂಡಿದ್ದಾರೆ. ಈ ಮಾತಿನ ಮಹತ್ವ ನಮ್ಮ ದೇಶಕ್ಕೆ ನಿಕಟವಾಗಿದೆ. 'ಇಂಗ್ಲಂಡವು ತನ್ನ ಯುದ್ಧಘೋರಣವನ್ನು ಸಾರಲಿಲ್ಲ' ಎಂಬುದೂ ಕಾಂಗ್ರೆಸಿನ ಅಸಹಕಾರ ಘೋರಣಿಗೆ ಕಾರಣವಾಗಿದೆ. ಹೀಗಿರುವಾಗ, ರೂಜವೆಲ್ಟರ ಅಭಿಪ್ರಾಯದಲ್ಲಿ ತಥ್ಯತೆ ಇದೆಯೆ ಇಲ್ಲವೆ—ಎಂಬುದನ್ನು ನಾವು ತಿಳಿಯಲು ಯತ್ನಿಸೋಣ. ರೂಜವೆಲ್ಟರು ಕೇವಲ ತಮ್ಮ ಅಭಿಪ್ರಾಯವನ್ನು ಸಾರಿದ್ದಾರೆಯೆ, ಇಲ್ಲವೆ ಇಂಗ್ಲಂಡಿನ ಮಂತ್ರಿಮಂಡಳವು ಅಧಿಕೃತವಾಗಿ ಅವರಿಗೆ ತನ್ನ ಘೋರಣವನ್ನು ಒಪ್ಪಿಕೊಂಡಿದೆಯೆ? ಇದು ಕೇವಲ ರೂಜವೆಲ್ಟರ ವೈಯಕ್ತಿಕ ಅಭಿಪ್ರಾಯವಾಗಿದ್ದರೆ ನಮಗೆ ಆದರ ಮಹತ್ವವೆ ಇಲ್ಲ. ಆದರೆ ಇದು ವೈಯಕ್ತಿಕ ಅಭಿಪ್ರಾಯವಾಗಲಾರದು ಎಂಬುದಕ್ಕೆ ಕಾರಣಗಳಿವೆ. ಇಂಗ್ಲಂಡಿಗೆ ಎಲ್ಲರೀತಿಯಿಂದ ಸಹಾಯ-ಸೌಕರ್ಯಗಳನ್ನು ಒದಗಿಸಿಕೊಡಲು ರೂಜವೆಲ್ಟರು ನಿರ್ಧರಿಸಿದ್ದಾರೆ. ಕೇವಲ ತಮ್ಮ ಅಭಿಪ್ರಾಯದಿಂದಲೂ ಇಷ್ಟೊಂದು ಧನ-ಶಸ್ತ್ರಸಂಗ್ರಹಗಳನ್ನು ಕಳುಹಿಸಿಕೊಡುವ ಹೊಣೆಯನ್ನು ಅವರು ಹೊತ್ತಿರಲಾರರು. ಕಳೆದ ಯುದ್ಧದಲ್ಲಿ ಅಮೇರಿಕೆಯಿಂದ ತಂದ ಸಾಲವನ್ನು ಇಂಗ್ಲಂಡವು ಕೊಡಲೊಪ್ಪಲಿಲ್ಲ; ಹೀಗಿದ್ದರೂ ಈಗ ಮತ್ತೊಮ್ಮೆ ಅಂತಹ ಹೊಣೆಯನ್ನೇ ಹೊರಲು ಅಧ್ಯಕ್ಷರು ಸಿದ್ಧರಿರಬೇಕಾದರೆ, ಅವರಿಗೆ ಅಧಿಕೃತವಾದ ಆಶ್ವಾಸನೆ ಸಿಕ್ಕಿರಲೇ ಬೇಕು.

ಒಂದು ಸಂದೇಹ

'ಅಮೇರಿಕೆಗೆ ಕೊಟ್ಟ ಆಶ್ವಾಸನವನ್ನು ಜಗತ್ತಿಗೆಯೆ ಪ್ರಕಟವಾಗಿ ಇಂಗ್ಲಂಡವು ಸಾರಬಾರದೇಕೆ?- ಈ ಸ್ವಾತಂತ್ರ್ಯ ತತ್ತ್ವವು 'ಬಿಳಿಬಣ್ಣ'ದವರಿಗೆ ಮಾತ್ರವಾಗಿದೆಯೆ, ಭಾರತಕ್ಕಾದರೂ ಅನ್ವಯಿಸುವುದೆ?—ಹೀಗಿದ್ದರೆ ರೂಜವೆಲ್ಟರ ಭಾಷಣದ ತರುವಾಯದಲ್ಲಿ ಕೂಡ ಯುದ್ಧಘೋರಣವನ್ನು ಸಾರಲು ಚರ್ಚಿಲ್‌ರು ಪಾರ್ಲಮೆಂಟಿನಲ್ಲಿ ನಿರಾಕರಿಸಿದರೇಕೆ?' ಇಂತಹ ಸಂದೇಹಗಳು ತಲೆದೋರುವುದು ಸಮಂಜಸವೆ ಆಗಿದೆ. ಇಂಗ್ಲಂಡಿನ ಯುದ್ಧಘೋರಣವೇನು—ಎಂಬ ಪ್ರಶ್ನೆಗೆ ಉತ್ತರಕೊಡಲು ಚರ್ಚಿಲ್‌ರು ಅನೇಕಸಲ ನಿರಾಕರಿಸಿದ್ದಾರೆ, ನಿಜ. ಆದರೆ ಅಷ್ಟುಮಾತ್ರಕ್ಕೆ ಅವರ ಉದ್ದಿಶ್ಯಕ್ಕಾಗಿ ಸಂಶಯಗೊಳ್ಳುವುದು ಸಮಂಜಸವೆನಿಸಬಹುದೆ? 'ಘೋರಣವನ್ನು ಸಾರದಿರೆ ಸಹಾಯಕಾರಕವಾಗುವುದು' ಎಂದು ಪಾರ್ಲಮೆಂಟಿನ ಸದಸ್ಯರೊಬ್ಬರು ಕೇಳಿದಾಗ— 'ನಾಯ್ಸಿಗಳ ವಿರುದ್ಧ ಯುದ್ಧ ಹೂಡಿದ್ದಕ್ಕೆ ಅದು ಸ್ಪಷ್ಟವೆ ಆಗಿದೆ' ಎಂದರು ಚರ್ಚಿಲ್‌ರು! ಇಷ್ಟೊಂದು ಪಟದಿಂದ ಚಾಯ್ನಾತಿನಲ್ಲಿ ಕೂಡ ಘೋರಣವನ್ನು ಸಾರಲು ನಿರಾಕರಿಸುವುದರ ಗೂಢವೇನಿದೆ? 'ಅಷ್ಟೊಂದು ಗೂಢವಿಲ್ಲ, ವ್ಯಾವಹಾರಿಕ ತೊಡಕು ಒಂದಿದೆ, ಅದಕಾಗಿ ಚರ್ಚಿಲ್‌ರು ಹಟ ಹಿಡಿದಿದ್ದಾರೆ. ಎಂದು ನಮ್ಮ ಅಭಿಪ್ರಾಯ' ಆ ವ್ಯಾವಹಾರಿಕ ತೊಡಕು ಎಂದರೆ ಹೀಗೆ? (೧) ದಿನಾಲು ಸಾವಿರಾರು ಬಾಂಬುಗಳಿಂದ ಸಂಕಟಗಳಿಗೂ ಸಾವಿಗೂ ಇಂಗ್ಲಂಡಿನ ಜನವು ತುತ್ತಾಗುತ್ತಿದ್ದಾರೆ; ಆ ಅನುಭವದಿಂದ ಉದ್ದೀಪಿತರಾಗಿಯೆ ಅವರು ಯುದ್ಧಸಹಾಯಕ್ಕಾಗಿ ಎಲ್ಲ ರೀತಿಯ ಸ್ವಾರ್ಥತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಇಂತಹ ಜನತೆಗೆ 'ಈ ನಮ್ಮ ಯುದ್ಧವು ಜಗತ್ತಿನ ಸ್ವಾತಂತ್ರ್ಯವನ್ನು ಉಳಿಸುವುದಕ್ಕೆ' ಎಂಬ ತತ್ತ್ವವನ್ನು ಹೇಳಿದರೆ? ಬಾಂಬುಗಳು ಬೀಳುವುದು ತಮ್ಮ

ತಲೆಯ ಮೇಲೆ! ಯುದ್ಧಸಹಾಯಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸುವವರು ತಾವು! ಈ ಯಾತನೆಗೆ ಮಿತಿಯಾವುದು ಎಂದರೆ- ಜಗತ್ತಿನಲ್ಲಿ ಸ್ವಾತಂತ್ರ್ಯವು ಭದ್ರವಾಗಿ ಸಿಂಹಾಸನಾರೂಢವಾಗುವ ವರೆಗೆ! ಸಾವಿನೆದುರು ಅಸಹಾಯವಾಗಿ ನಿಂತ ಸಾಮಾನ್ಯ ಮನುಷ್ಯನಿಗೆ ಈ ಮಾತು **ಖಂಡಿತವಾಗಿಯೂ ಉತ್ಸಾಹವನ್ನುಂಟು ಮಾಡದು.** ತಮ್ಮ ದೇಶದಲ್ಲಿ ಏನೇ ಅನರ್ಥವಾದರೂ ಜನತೆಯ ಉತ್ಸಾಹಭಂಗವಾಗಬಾರದು ಎಂದು ಚರ್ಚಿಲ್‌ರ ದೃಢ ನಿಶ್ಚಯ. (೨) ಇದಲ್ಲದೆ, ಹೊರಗಿನ ವ್ಯವಹಾರ ತೊಂದರೆಯನ್ನು ತಪ್ಪಿಸಲೂ ಚರ್ಚಿಲ್‌ರು ಹೀಗೆ ಹಟ ಹಿಡಿದಿದ್ದಾರೆನಿಬಹುದು. 'ಜಗತ್ತಿನ ಎಲ್ಲ ರಾಷ್ಟ್ರಗಳ ಸ್ವಾತಂತ್ರ್ಯವೆ ನಮ್ಮ ಗುರಿ' ಎಂದು ಅಧಿಕೃತವಾಗಿ ಸಾರಿದರೆ, ಮರುಗಳಿಗೆಗೆ ನಾರ್ವೆಯಿಂದ ಗ್ರೀಸದವರೆಗೆ ಎಲ್ಲ ಯುರೋಪೀಯ ರಾಷ್ಟ್ರಗಳು ಇಂಗ್ಲಂಡಿನಿಂದ ಯುದ್ಧ-ಸಹಾಯವನ್ನು ನಿರೀಕ್ಷಿಸುವುವು, ಅದನ್ನು ಒದಗಿಸುವುದೂ ಇಂಗ್ಲಂಡಿನ ಕರ್ತವ್ಯವೆನಿಸುವುದು; ಆದರೆ ಸದ್ಯದ ಸ್ಥಿತಿಯಲ್ಲಿ ಹಾಗೆ ಸಹಾಯವನ್ನು ಒದಗಿಸುವುದು ಶಕ್ಯವಿಲ್ಲ, ಆಸುಕೂಲವೂ ಎನಿಸುವಂತಿಲ್ಲ. ಕೃತಿಯಲ್ಲಿ ತಾರದ್ದನ್ನು ಮಾತಿನಲ್ಲಿ ಹೇಳಿದರೆ ಶತ್ರುವು ಅದರ ಲಾಭವನ್ನು ಪಡೆಯಬಹುದು. ಹೀಗಾಗಿ 'ಅಧಿಕೃತವಾದ ಯುದ್ಧಘೋಷಣೆಗೆ ಇದು ಸಮಯವೆ ಅಲ್ಲ' ಎಂದು ಚರ್ಚಿಲ್‌ರು ಅಭಿಪ್ರಾಯಪಟ್ಟಿರಬಹುದು.

ಒಂದು ಭೀತಿ

ಮೇಲಿನ ಮಾತನ್ನು ಒಪ್ಪಿಕೊಂಡರೂ, ಬೇರೊಂದು ಕಾರಣಕ್ಕಾಗಿ ಮಿಕ್ಕವರ ಮನಸಿನಲ್ಲಿ ಸಯುಕ್ತಿಕವಾದ ಒಂದು ಭೀತಿ ಹುಟ್ಟಬಹುದಾಗಿದೆ. ಯುದ್ಧದ ನಿರ್ಣಯವು ಅಶಕ್ಯವೆಂದಾಗಲಿ, ಬೇರೆ ಇನ್ನೊಂದು ಕಾರಣಕ್ಕಾಗಲಿ ಇಂಗ್ಲಂಡವು ಒಂದು ವೇಳೆ ಜರ್ಮನಿಯೊಡನೆ ಒಪ್ಪಂದಮಾಡಿಕೊಂಡರೆ ಹೇಗೆ? ಮಾಡಿಕೊಳ್ಳಲು ಅಡ್ಡಿ ಯಾವುದಿದೆ? 'ಇನ್ನೊಬ್ಬರ ಸ್ವಾತಂತ್ರ್ಯವೂ ತಮ್ಮ ಗುರಿ' ಎಂದು ಇಂಗ್ಲಂಡವು ಅಧಿಕೃತವಾಗಿ ಸಾರಿಲ್ಲ, ಇನ್ನೊಬ್ಬರ ಸುಖ-ದುಃಖಕ್ಕಾಗಿ ಇಂಗ್ಲಂಡವು ವಜ್ರಬದ್ಧವಾಗಿಲ್ಲ. ಆದಕಾರಣವೆ ಚರ್ಚಿಲ್‌ರು ಹೀಗೆ ಯುಕ್ತಿಯನ್ನು ಹೂಡಿದ್ದಾರೆ. ಇಂಗ್ಲಂಡಿನವರಿಗೇ ಯುದ್ಧ ಬೇಡವಾದರೆ ಬೇರೆ ಯಾರು ಅವರನ್ನು ಒತ್ತಾಯದಿಂದ ಹೋರಾಡಿಸಬಲ್ಲರು—ಎಂಬ ಭೀತಿ ಸಮಂಜಸವಾದುದು. ಆದರೆ ಇಂಗ್ಲಂಡಿನ ಘೋರಣ, ರಾಷ್ಟ್ರೀಯ ಅವಶ್ಯಕತೆ, ಮಂತ್ರಿಮಂಡಳದ ನಿರ್ಧಾರ— ಇವುಗಳನ್ನು ತಿಳಿದುಕೊಂಡವರಿಗೆ ಇಂತಹ ಭೀತಿಯೆ ಬಾಧಿಸುವಂತಿಲ್ಲ. ಒಂದು ವೇಳೆ— ಎಲ್ಲರಿಗೂ ಇಂತಹ ಭೀತಿ ಒದಗುವುದೆಂಬ ಅಸಂಭವನೀಯ ಪರಿಸ್ಥಿತಿಯನ್ನು ಕಲ್ಪಿಸಿದರೆ, ರೂಜವೆಲ್ಟರ ಮಾತಿನ ಎರಡನೆಯ ವೈಶಿಷ್ಟ್ಯವು ಆ ಭೀತಿಯನ್ನು ಹೊಡೆದೋಡಿಸುವುದು. ರೂಜವೆಲ್ಟರು ಸ್ಪಷ್ಟವಾಗಿ ಹೇಳಿದ್ದಾರೆ: '**ನಾಳಿನವಾದವು ನಾಮಶೇಷವಾಗುವುದೆ ನಮ್ಮ ಗುರಿ.... ಇಂದಿನ ದುರ್ಧರ ಪ್ರಸಂಗದಲ್ಲಿ ಅನ್ಯಾಯವಾಗಿ, ಅನಿವಾರ್ಯವಾಗಿ, ಹೆದರಿಕೆ-ಬೆದರಿಕೆಗಳನ್ನು ತೋರಿಸಿ, ಯಾರಾದರೂ ಒಬ್ಬನಿಂದ ವನ್ನು ತಾತ್ಕಾಲಿಕ ಹತವೀರ್ಯನಾದ ರಾಷ್ಟ್ರದ ಮೇಲೆ ಹೇರಿದರೆ, ಅದನ್ನು ಅಮೇರಿಕೆಯು ಎಂದಿಗೂ ಒಪ್ಪುವುದಿಲ್ಲ.** ಯುದ್ಧದ ನಿಜವಾದ ಉದ್ದೇಶ, ಎಂದರೆ 'ಸರ್ವಾಧಿಕಾರಿತ್ವದ ನಿರ್ಮೂಲನವಾಗುವವರೆಗೆ ಯಾವ ಒಪ್ಪಂದವನ್ನೂ ಅಮೇರಿಕೆಯು ಒಪ್ಪುವುದಿಲ್ಲ!' ಇದರರ್ಥವೇನು? ಒಂದುವೇಳೆ ಇಂಗ್ಲಂಡವು ಒಪ್ಪಂದವನ್ನು ಹೂಡಿದರೂ ಯುದ್ಧವನ್ನು ಕೊನೆಯವರೆಗೆ ಸಾಗಿಸಲು ಅಮೇರಿಕೆಯ ನಿರ್ಧಾರವಿದೆ! ಇದು ತಟಸ್ಥತೆಯ ಲಕ್ಷಣವೆ? ಇಷ್ಟೊಂದು ಧೈರ್ಯದಿಂದ ರೂಜವೆಲ್ಟರು ಘೋಷಿಸುವುದಾದರೆ, ಅವರಿಗಾದರೂ ವಿಶ್ವಾಸವಾಗುವಂತಹ ಮಾತನ್ನೆ ಇಂಗ್ಲಂಡ್ ಸರಕಾರವು ಒಪ್ಪಿರಲು ಸಾಕು.

ಅಮೇರಿಕೆಯ ಸಂಪೂರ್ಣಸಹಾಯ

ಸದ್ಯ ಯುದ್ಧದಲ್ಲಿ ತೊಡಗಿದ ಮಿತ್ರರಾಷ್ಟ್ರಗಳಿಗೆ ಅಮೇರಿಕೆಯು ಯಾವ ರೀತಿಯಲ್ಲಿ ನೆರವನ್ನು ಕೊಡಬಹುದೆಂಬ ವಿಷಯವನ್ನೂ ಅಧ್ಯಕ್ಷ ರೂಜ್‌ವೆಲ್ಟರು ಉಗ್ಗಡಿಸಿದ್ದಾರೆ. ಈ ಉಗ್ಗಡಣೆಯಲ್ಲಿಯೂ ಅವರ ಮುನ್ನೋಟತನವು ವ್ಯಕ್ತವಾಗುತ್ತಲಿದೆ. ಯುದ್ಧದಲ್ಲಿ ಬಿದ್ದ ಹೊರಗಿನ ರಾಷ್ಟ್ರಗಳು ಈಗ ಎಂತಹ ಆರ್ಥಿಕಸಂಕಟದಲ್ಲಿವೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಇಂದೆಯೆ ಯುದ್ಧ ಮುಗಿದರೂ ಆರ್ಥಿಕದೃಷ್ಟಿಯಿಂದ ಚೇತರಿಸಿ ನಿಲ್ಲಲಿಕ್ಕೆ ಯುದ್ಧ್ಯಮಾನ ರಾಷ್ಟ್ರಗಳು ಅದೆಷ್ಟೋ ದಶಮಾನಗಳನ್ನು ಕಳೆಯಬೇಕಾಗುವುದು. ಈಗ ಸಾಲವಾಗಿ ಕೊಟ್ಟ ಹಣವನ್ನಾಗಲಿ, ಯುದ್ಧಸಲಕರಣೆಯ ಬೆಲೆಯನ್ನಾಗಲಿ ನಗದು-ಹಣದ ಮೂಲಕವಾಗಿಯೆ ಪಡೆಯಬಹುದೆಂಬ ಸಂಬುಗೆ ಅಮೇರಿಕೆಗೆ ಇಂದು ಇಲ್ಲವಾದರೂ-ತನ್ನ ಭವಿಷ್ಯತ್ ಸಂರಕ್ಷಣೆಗಾಗಿಯೂ ಇರಬಹುದು—ಈಗ ಅದು ಮಿತ್ರರಾಷ್ಟ್ರದವರಿಗೆ ಸಾಲಕೊಡಲು ಸಿದ್ಧವಾಗಿದೆ. ಈ ವಿಷಯ ಮಾತನಾಡುವಾಗ ಮಂತ್ರಿ ರೂಜ್‌ವೆಲ್ಟರು 'ಕೇವಲ ಹಣವಿಲ್ಲದುದಕ್ಕಾಗಿ ಹೊರಗಿನ ರಾಷ್ಟ್ರಗಳು ಶತ್ರುಗಳಿಗೆ ಶರಣಾಗತರಾಗದಂತೆ ನಾವು ನೋಡಿಕೊಳ್ಳಬೇಕು. ನಗದು ಹಣವನ್ನು ಕೂಡುವ ಕರಾರನ್ನು ಹಾಕದೆ, ಇನ್ನೇನಾದರೂ ವಸ್ತುಗಳನ್ನು ಪೂರಯಿಸಿ ಮುಟ್ಟಿಸಬಹುದಾದ ಕರಾರಿನಿಂದ ಕೂಡ ಅವರಿಗೆ ನಾವು ಸಾಲಕೊಡಬೇಕು; ಯುದ್ಧೋಪಕರಣ ಪೂರಯಿಸಬೇಕು' ಎಂದಿರುವರು. ಇಷ್ಟೊಂದು ಒಳಹೊಕ್ಕು ಕಾರ್ಯಮಾಡಲು ಸಿದ್ಧವಾದ ಅಮೇರಿಕೆ, ಇನ್ನೂ ತಟಸ್ಥರಾಷ್ಟ್ರವಾಗಿಯೆ ಇದೆ ಎಂದರೆ ಯಾರು ಒಪ್ಪಿಕೊಳ್ಳಬೇಕು? ಒಟ್ಟಿನಲ್ಲಿ ನೋಡಿದರೆ ಮಹಾಯುದ್ಧ ದಿನದಿನಕ್ಕೆ ಜಗತ್ತಿನ ಮೂಲೆ ಮೂಲೆಗಳಲ್ಲಿಯೂ ಕಾಲುಚಾಚುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಈ ಮಹಾಪ್ರಳಯದಿಂದ ಉಳಿಸುವ ಮತ್ಸ್ಯಾವತಾರದ ಹೊಣೆಗಾರಿಕೆ ಯಾವ ಮಹಾಪುರುಷನ ತಲೆಯಮೇಲಿದೆಯೋ ಏನೋ! ರೂಜ್‌ವೆಲ್ಟರಂತೂ ಸಮರಕ್ಕೆ ಸಡ್ಡುಹೊಡೆದಂತಾಗಿದೆ.

ಕನ್ನಡ ಸಾಹಿತ್ಯಪ್ರಚಾರದ ಸತ್ಕಾರ್ಯದೊಂದಿಗೆ ಕೈತುಂಬ

★ ಹಣ ದೊರೆಯುವ ಸಂದರ್ಭ! ★

ಜಯಂತಿಗೆ ಏಜಂಟರು ಬೇಕಾಗಿದ್ದಾರೆ!

★

ಮೈಸೂರು, ಬೆಂಗಳೂರು, ಡಾವಣಗೆರೆ, ಮುಡಿಕೇರಿ, ಬೆಳಗಾಂವಿ, ರಾಣೆಬೆನ್ನೂರು,
ತುಮಕೂರು, ಕೋಲಾರ, ಹರಿಹರ, ಕಡೂರು, ಅರಸಿಕೆರೆ, ಭದ್ರಾವತಿ,
ಮಂಡ್ಯ, ತೀರ್ಥಹಳ್ಳಿ, ಇಳಕಲ್, ಜಮಖಂಡಿ, ಗುಲಬುರ್ಗಾ,
ಚಿತ್ರದುರ್ಗ, ಹೈದ್ರಾಬಾದ, ಉಡಿಪಿ, ಗೋಕರ್ಣ, ಬಿಜಾಪೂರ,
ಬಾಗೇವಾಡಿ, ಸವಣೂರು, ಹಾನಗಲ್

ಮೊದಲಾದ ಊರುಗಳಲ್ಲಿ

ಜಯಂತಿಯ ಬಿಡಿಸಂಚಿಕೆಗಳನ್ನು
ಮಾರಾಟಮಾಡಲಿಕ್ಕೂ ವರ್ಗಣೀದಾರರನ್ನು ಕೂಡಿಸ
ಲಿಕ್ಕೂ, ವಿಶ್ವಾಸಾರ್ಹರೂ ಉತ್ಸಾಹಿಗಳೂ ಆದ ಏಜಂಟರನ್ನು
ನಿಯುಮಿಸಬೇಕಾಗಿದೆ. ಏಜಂಟರಾಗಲು ಇಷ್ಟಪಡುವವರು ಪತ್ರವ್ಯವಹಾರ
ವನ್ನು ಮಾಡಿ ಕೂಡಲೆ ಏಜನ್ಸಿಯ ನಿಯಮು ಮೊದಲಾದುವುಗಳನ್ನು ಅರಿತುಕೊಳ್ಳ
ಬೇಕು. ಈ ಮೊದಲು ಏಜನ್ಸಿಯಿಲ್ಲದ ಪಟ್ಟಣ-ನಗರಗಳಲ್ಲಿ ಜಯಂತಿಯ ಏಜನ್ಸಿ
ಯನ್ನು ಪ್ರಾರಂಭಿಸಬೇಕೆನ್ನುವವರೂ ಪತ್ರ ಬರೆದು ಎಲ್ಲ ಮಾಹಿತಿ ತರಿಸಿಕೊಳ್ಳಬೇಕು.

★

ವ್ಯವಸ್ಥಾಪಕ 'ಜಯಂತಿ' ಧಾರವಾಡ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊಡಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಧೂತಪಾಪೇಶ್ವರ ★

★ ಅರವಿಂದಾಸವ

ಬೋಧಚಿಹ್ನ

ಚಿಕ್ಕಮಕ್ಕಳ ವಿಕಾರಗಳ ಮೇಲೆ ರತ್ನದಂತಹ ಔಷಧ!

ಕಿಡಿಗೇಡಿ ಮಕ್ಕಳಿಂದ ತಾಯಿತಂದೆಗಳ ಆನಂದ ಹೆಚ್ಚುವುದು.
ಮನೆಯಲ್ಲಿ ಸುಖ-ಶೃಂಗಾರ ನೆಲೆಗೊಳ್ಳುವುದು.
ಮಕ್ಕಳ ತುಂಟತನ ಅವರ ಆರೋಗ್ಯದ ಸ್ಪಷ್ಟಚಿಹ್ನ;
ಆದುದರಿಂದ
ನಿಮ್ಮ ಮಕ್ಕಳ ಆರೋಗ್ಯ ಚೆನ್ನಾಗಿರಬೇಕಾದಲ್ಲಿ
ಅರವಿಂದಾಸವವನ್ನು ಕೊಡಿರಿ!



ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್
ಪನವೇಲ—ಕುಲಾಬಾ.

ಎಲ್ಲಾ ಏಜಂಟರಲ್ಲಿಯೂ ಸ್ಟಾಕಿಸ್ಟರಲ್ಲಿಯೂ ದೊರೆಯುವುದು.

Printed by V. Y. Jather B. Sc. Karnatak Printing Works, Dwr. Edited and published by M. G. Patil at Jayanti Office Dharwar

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯಚ್ಚು ಸೇ. ೩—೦—೦ ..... ವ್ಹಿ. ಪಿ. ಯಿಂದ ೩–೫–೦ ..... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಮಾರ್ಚ್ ೧೯೪೧	೧೧ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಜಯ ಫಾಲ್ಗುಣ ! (ಕವನ)	' ಆನಂದಕಂದ '	೫೯೯
ಸಂಪಾದಕೀಯ	ಸಂಪಾದಕರು	೬೦೦
ಮುಂಗಸ ಮಲ್ಲಿನಾಥನ	ಶ್ರೀ. ' ಮಲ್ಲಿನಾಥ '	೬೦೧
ಅಮೇರಿಕೆಯ ಆಡಳಿತ (ರಾಜಕೀಯ ವಿಚಾರ)	' ಚಾರು'ಮುನಿಯ ತಂತ್ರಿ '	೬೦೩
ಪ್ರಪಂಚ ಪ್ರವಾಹ (ಒಂದು ದೃಶ್ಯ)	ಶ್ರೀ. ' ಶ್ರೀರಂಗ '	೬೦೭
ವಿಚಾರಗಳ ವಿಚಿತ್ರಶಕ್ತಿ (ಪ್ರಬಂಧ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೬೧೩
ಗೋವಿಂದನ ಸಾಹಸ (ಸಣ್ಣ ಕಥೆ)	ಶ್ರೀ. ಎಚ್. ಬಿ. ದೊಣ್ಣೂರ, ಎಲ್. ಸಿ. ಪಿ. ಎಸ್.	೬೧೫
ದಿವ್ಯದರ್ಶನ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ. ಮೈಸೂರು	೬೧೯
ಇಳಿ ಸಂಜೆಯಲ್ಲಿ (ಕವನ)	ಶ್ರೀ. ಬಿ. ವಿ. ಸುಬ್ಬರಾವ್, ಬೆಂಗಳೂರು	೬೧೯
'ಜೋಗ' ಜಲಪಾತ (ಕವನ)..	ಶ್ರೀ. ದೇಸಾಯಿ ದತ್ತಮೂರ್ತಿ	೬೧೯
ದಕ್ಷಿಣದ ಸಂಸ್ಥಾನಗಳು (**ಪರಿಚಯಾತ್ಮಕ**)	ಶ್ರೀ. ಸಿದ್ದಪ್ಪನ ಹಳ್ಳಿ ಕೃಷ್ಣಶರ್ಮ, ಮುಂಬಯಿ	೬೨೦
ನಾನೇ ಸತ್ತಾಗ (ಒಂದು ಹುಚ್ಚಾಟ)	ಬಳ್ಳಾರಿಯ 'ಜೋಜಿ'	೬೨೩
ಹಿಮಾಲಯದಲ್ಲಿ ಜೇನುಸಾಕುವಿಕೆ (ಪರಿಚಯಾತ್ಮಕ) ..	ಶ್ರೀ. ಭಾರತಸಂಚಾರಿ ಕೃ. ನಾ. ಗೋಸಾವಿ	೬೨೬
ಹುಸಿನಂಬಿಕೆ (ರವೀಂದ್ರರ ಸಣ್ಣಕತೆ)	ಶ್ರೀ. ಕೋ. ರಾ. ಕೃಷ್ಣಮೂರ್ತಿ ಬಿ. ಎ.	೬೨೯
ಪುರೋಗತಿಯು ಪ್ರಗತಿಯೆ ? (ಹರಟೆಯೊಂದು)	ಪ್ರೊ. ಎನ್. ಎಂ. ಕುಲಕರ್ಣಿ ಎಂ. ಎ.	೬೩೪
ಸ್ನೇಹಸಮ್ಮೇಲನವೋ ದ್ವೇಷಸಂವರ್ಧನವೋ ?	' ವಿಹಂಗಮ '	೬೩೮
ಆಂ ಆಂ ಇಲ್ಲಿಗೆ..? (ಸತ್ಸಾನುಭವ)	ಶ್ರೀ. ಶ್ರೀ. ಶ. ಮೈಸೂರು	೬೪೨
ಪುಸ್ತಕ ವಿಮರ್ಶೆ	ಬೇರೆ ಬೇರೆ ವಿಮರ್ಶಕರಿಂದ	೬೪೩
ಸಾದರಸ್ವೀಕಾರ	.. ..	೬೪೬
ಜೀವನವು ಯಾರಿಗೆ ಸುಖಕರವು ? (ವಿಮಾ ವಿಷಯಕ) ..	ಶ್ರೀ. ಎಂ. ಪಿ. ಭಾಗವತ, ಮುಂಬಯಿ	೬೪೮
ನಾಲ್ಕೂ ನಿಟ್ಟಿನ ನೋಟ	' ನಿರೀಕ್ಷಕರು '	೬೫೧



೩ನೆಯ ವರ್ಷ | ಮಾರ್ಚ್ ೧೯೪೧ | ೧೧ನೆಯ ಸಂಚಿಕೆ

ಜಯ ಫಾಲ್ಗುಣ!

ಶ್ರೀ. 'ಆನಂದಕಂದ'

(ಮಾಲಕಂಸ ರಾಗ)

ಜಯ ಜಯ ಜಯ ಫಾಲ್ಗುಣ!
ಜಯೋತ್ಸಾಹ ಕಾರಣ!
ನವಯುಗದಾಗಮನವರಿತು
ನಿಲಿಸುವೆ ನೀ ತೋರಣ!
ಜಯ ಜಯ ಜಯ ಫಾಲ್ಗುಣ! ೧

ತಿಳಿಯ ನೀಲಿಯಾಗಸದಲಿ
ಬೆಳಗುವನದೊ ಭಾಸ್ಕರ!
ಚಳಿ-ಬಿಸಿಲೊಳು ಕೆಳೆ ಬೆಳೆಯಲು
ಇಳೆ ಸೊಗಸಿಂಗಾಕರ!
ಜಯ ಜಯ ಜಯ ಫಾಲ್ಗುಣ! ೨

ಮದ್ದನೇನು ಕೊಟ್ಟೆನೀನು
ತುಂಬುದಿಂಗಳಣ್ಣಗೆ?
ಎಲ್ಲ ಕಾಲದಂತೆ ಇಲ್ಲ,
ಏನು ಹಿಗ್ಗು ಅವನಿಗೆ!
ಜಯ ಜಯ ಜಯ ಫಾಲ್ಗುಣ! ೩

ಬೆಳುದಿಂಗಳ ಸುಧೆಯಂಗಳ
ತುಂಬಿ ತುಳುಕಿ ಹರಿವುದು;
'ಸಾಕು ಬದುಕು' ಎಂಬ ಕಸುಕು-
ಮನ ಜೀವನ ಕರೆವುದು!
ಜಯ ಜಯ ಜಯ ಫಾಲ್ಗುಣ! ೪

ನಿನ್ನ ಇರುಳು ಜನವ ಮರುಳು-
ಮಾಡುತಿರುವುದೇಕೆ?
ಹೆಣ್ಣು-ಗಂಡುಗಳನು ಕಂಡು
ಹೇಳುವೆ ನೀ 'ಜೋಕೆ'!
ಜಯ ಜಯ ಜಯ ಫಾಲ್ಗುಣ! ೫

ಎಳೆಯ ಮಾವುಮಿಡಿಯ ಕನಸ
ಕಳೆಯುವವನು ನೀನೆ!
ಹುಳಿಯ ಸಲಿಸಿ, ಹಣ್ಣಿಗೆ ಹದ-
ಗೊಳಿಸುವವನು ನೀನೆ!
ಜಯ ಜಯ ಜಯ ಫಾಲ್ಗುಣ! ೬

ತಳಿತ ಬನದ ಚೆಲುವ ತಳೆದ
ಸುಗ್ಗಿಗೇಕೊ ಹೆಮ್ಮೆ!
ತಳಿರಿಡಿಯಲು ಬರುಬನಗಳು
ಬೇಕು ನಿನ್ನ ಗೆಯ್ಮೆ!
ಜಯ ಜಯ ಜಯ ಫಾಲ್ಗುಣ! ೭

ಹೊಸ ಹರಯಕೆ ಕುಸುರುಗೊಡುವ
ನನೆಯುಬಿಲ್ಲನಣ್ಣ!
ಹೊಸವರುಷಕೆ ಬಸಿರನಿತ್ತು
ನೀ ಮುಚ್ಚುವೆ ಕಣ್ಣ!
ಜಯ ಜಯ ಜಯ ಫಾಲ್ಗುಣ! ೮

ಅಂಚೆಯ ಖಾತೆಯಲ್ಲಿ ಕನ್ನಡಕ್ಕೆ ಅವಮಾನ

ಸರಕಾರದ ಅಂಚೆಯ ಖಾತೆಯಿಂದರೆ ಜನತೆಯ ನಿತ್ಯವ್ಯವಹಾರಕ್ಕೆ ತೀರ ಹತ್ತಿರವಾಗಿ ಸಂಬಂಧಿಸಿದುದು. ಆದುದರಿಂದಲೆ ಆ ಖಾತೆಯ ವ್ಯವಹಾರವು ಬೇರೆ ಬೇರೆ ಕಡೆಯ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕೆಂದು ಸರಕಾರವು ಎಂದೋ ಒಪ್ಪಿಕೊಂಡಿದೆ. ಅದಕ್ಕೆ ಅನುಸಾರವಾಗಿ ಕನ್ನಡವೊಂದನ್ನುಬಿಟ್ಟು,ಮಿಕ್ಕ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ಆ ವ್ಯವಹಾರ ವ್ಯವಸ್ಥಿತವಾಗಿ ನಡೆದಿದೆ ಕೂಡ. ಕನ್ನಡ ವೆಂಬ ಭಾಷೆಯೊಂದಿದೆಯೆಂಬುದು ಮೊನ್ನೆ ಮೊನ್ನೆಯ ನರೆಗೂ ಅಂಚೆಯಖಾತೆಗೆ ಗೊತ್ತಿರಲಿಲ್ಲ. ತಾನಾರೆಂಬುದನ್ನು ಅರಿಯದ ಕನ್ನಡಿಗರು—ಬಹುಕಾಲದ ನರೆಗೆ— 'ಅಂಚೆಯ ಖಾತೆಯೊಂದಿಗೆ ಮರಾಟಿಯಲ್ಲಿಯೊ, ತೆಲುಗು–ತಮಿಳುಗಳಲ್ಲಿಯೊ, ಕಲಿತ ಕೆಲವರು ಇಂಗ್ಲಿಷಿನಲ್ಲಿಯೊ ವ್ಯವಹಾರವನ್ನು ನಡೆಯಿಸಿಕೊಂಡು ಬಂದಿದ್ದರು. ಕನ್ನಡ ವೆಂದೊಂದು ಪ್ರಮುಖ ಭಾಷೆಯಿದೆಯೆಂಬುದನ್ನೂ, ಅದನ್ನು ಬಳಸುವ ಜನರು ಸುಮಾರು ಒಂದೂವರೆ ಕೋಟಿಯಷ್ಟಿರುವರೆಂಬುದನ್ನೂ ಅಂಚೆಯ ಇಲಾಖೆಯ ಕಿವಿಗೆ ಮುಟ್ಟಿಸುವ ಕೆಲಸವನ್ನು ಪ್ರಾದೇಶಿಕ ಸರಕಾರಗಳೂ ಮಾಡಿರಲಿಲ್ಲ; ಕನ್ನಡಜನತೆಯೂ ಮಾಡಿರಲಿಲ್ಲ. ಇತ್ತೀಚೆಗೆ ಬಾಗಿಲಕೋಟೆಯಲ್ಲಿ ಹೊರಟು, ಕನ್ನಡಿಗರನ್ನು ಎಚ್ಚರಿಸುವ ಕಾರ್ಯ ಮಾಡುತ್ತಿದ್ದ 'ಕನ್ನಡಿಗ' ವಾರಪತ್ರಿಕೆಯ ಪ್ರಚಾರದಿಂದಲೂ, 'ಕರ್ನಾಟಕ ವರ್ತಕಸಂಘ (ಚೇಂಬರ್ ಆಫ್ ಕಾಮರ್ಸ್)'ದ ಪ್ರಯತ್ನದಿಂದಲೂ, ಅಲ್ಲಿ ಇಲ್ಲಿ ಸಭೆ–ಸಮ್ಮೇಳನಗಳಲ್ಲಿ ಪಾಸಾದ ಕೆಲವೊಂದು ಗೊತ್ತುವಳಿಗಳ ಕಾರಣದಿಂದಲೂ ಕನ್ನಡಭಾಷೆಯ ಅಸ್ತಿತ್ವ ಅಂಚೆಯ ಇಲಾಖೆಗೆ ಗೊತ್ತಾಯಿತು. ಆಗಾಗ 'ತಕರಾರು'ಗಳು ಬರತೊಡಗಿದುವೆಂದು, ಕನ್ನಡ ಲಿಪಿಯಲ್ಲಿ— 'ಇದು ಕನ್ನಡವೆ?' ಎಂದು ಕೇಳಬಹುದಾದ ಭಾಷೆಯಲ್ಲಿ— ಕೆಲವೊಂದು ನಿತ್ಯೋಪಯುಕ್ತ ಫಾರ್ಮುಗಳನ್ನು ಮುದ್ರಿಸಿ ಇರಿಸಿಕೊಂಡಿತು. ಆ ಫಾರ್ಮುಗಳ ವಿಕಾರಾಕೃತಿಗಳನ್ನೂ ಅಶುದ್ಧ–ಭಾಷೆಯನ್ನೂ ನೋಡಿ, ಕನ್ನಡಿಗರಿಗೆ ಆ ಫಾರ್ಮುಗಳನ್ನುಬಳಸುವುದೇ ಬೇಡವೆನಿಸಿರಬಹುದು. ಮುದ್ರಿಸಿದ ಫಾರ್ಮುಗಳೆಲ್ಲ ಹಾಗೆಯೆ ಉಳಿಯಲು 'ಕನ್ನಡ ಫಾರ್ಮುಗಳಿಗೆ ಬೇಡಿಕೆಯೆ ಇಲ್ಲ' ಎಂದು ಸರಕಾರ ಹೇಳತೊಡಗಿತು. ವಸ್ತುಸ್ಥಿತಿಯನ್ನು ವಿವರಿಸಿದ ತಕರಾರುಗಳು ಮತ್ತೆ ಹೋಗತೊಡಗಲು, ಕನ್ನಡ ಸಾಹಿತ್ಯ ಪರಿಷತ್ತಿನವರಿಂದ ಭಾಷೆಯನ್ನು ತಿದ್ದಿಸಿಕೊಂಡ ಒಳ್ಳೆಯ ಫಾರ್ಮುಗಳೂ ಅಚ್ಚಾಗಿ ಸಿದ್ಧವಾದುವು. ಆದರೆ ತಮಾಷೆಯ ಸಂಗತಿಯೊಂದು: ಕನ್ನಡ ಫಾರ್ಮುಗಳೊಂದಿಗೆ ಮಿಕ್ಕ ಭಾಷೆಯ ಫಾರ್ಮುಗಳು ಸಹಕಾರವನ್ನೆ ಮಾಡಲೊಲ್ಲವು; ಏಕೆಂದರೆ ಕನ್ನಡ ಫಾರ್ಮುಗಳ ರೂಪ, ವೇಷ, ಆಕಾರಗಳೆ ಬೇರೆಯವಾಗಿ ಕುಳಿತಿವೆ. ಮಿಕ್ಕ ಭಾಷೆಯ ಫಾರ್ಮುಗಳೊಂದಿಗೆ ಫಾಯಿಲನ್ನು ಮಾಡಬೇಕಾದಾಗ, ಕನ್ನಡ ಫಾರ್ಮುಗಳು ಹಿರಿಯವಾಗಿಯೊ ಕಿರಿಯವಾಗಿಯೊ ಕಂಡು, ಫಾಯಿಲಿನ ಕ್ರಮವನ್ನೆ ಕೆಡಿಸಿಬಿಡುತ್ತಲಿವೆಯೆಂದು, ಅಂಚೆಯ ಖಾತೆಯಲ್ಲಿ ಕೆಲಸಮಾಡುವ ಅನೇಕ ಜನರ 'ತಕರಾರು' ಇದೆ. ಈ 'ತಕರಾರು' ಸರಿಯಾದುದೇ ಇದ್ದರೆ, ಎಲ್ಲ ಫಾರ್ಮುಗಳೊಂದಿಗೆ ಹೊಂದಿಕೆಯಾಗುವಂತೆಯೆ ಕನ್ನಡ ಫಾರ್ಮುಗಳನ್ನೂ ಮುದ್ರಿಸಿ ಪ್ರಕಟಿಸುವುದು ಅತ್ಯಗತ್ಯದ ವಿಷಯವಲ್ಲವೆ? ಅಂಚೆಯ ಖಾತೆಯ ಮೇಲಧಿಕಾರಿಗಳು ಖಂಡಿತ ಇದರ ಬಗೆಗೆ ವಿಚಾರ ಮಾಡಲೆ ಬೇಕು.

ನಿತ್ಯೋಪಯುಕ್ತವಾದ ಕೆಲವೊಂದು ಫಾರ್ಮುಗಳಷ್ಟು ಮಾತ್ರ ಕನ್ನಡವಾಗಿವೆಯಿಷ್ಟೆ! ಅಂಚೆಯ ಆಫೀಸುಗಳಲ್ಲಿಯ ಗುರುತಿನ ಹಲಗೆ (ಸೈನ್‌ಬೋರ್ಡ್) ಗಳು—ಅಚ್ಚಕನ್ನಡ ನಾಡಾಗಿದ್ದರೂ ಉತ್ತರ ಕರ್ನಾಟಕದಲ್ಲಿಯ ಯಾವ ಅಂಚೆಯ ಕಚೇರಿಯಲ್ಲಿಯೂ— ಇದುವರೆಗೆ ಬಂದಿಲ್ಲ. ಈಗ ಇದ್ದುವುಗಳೆಲ್ಲ ಇಂಗ್ಲೀಷ್–ಮರಾಟಗಳಲ್ಲಿವೆ. ಅವೆಲ್ಲ ಹೋಗಿ ಕನ್ನಡ ಹಲಗೆಗಳನ್ನೇ ಇರಿಸುವುದು ಅತ್ಯಾವಶ್ಯಕ ಸಂಗತಿಯಾಗಿದ್ದರೂ, ಜನತೆಯ ದೂರು ಇಲ್ಲವೆಂಬ ನೆಪವನ್ನೊಡ್ಡಿ ಸರಕಾರವು ಅತ್ತಕಡೆಗೆ ಲಕ್ಷ್ಯವನ್ನೆ ಕೊಡಲೊಲ್ಲದಾಗಿದೆ. ಆದುದರಿಂದ, ಅಲ್ಲಲ್ಲಿಯ ಜನರು ತಮ್ಮ 'ತಕರಾರು' ಗಳನ್ನು ಮೇಲಿನವರಿಗೆ ತಿಳಿಸಿ, ಚಳವಳಿ ನಡಿಸಿ, ಎಲ್ಲ ಕಡೆಗೂ ಕನ್ನಡ 'ಗುರುತಿನ ಹಲಗೆ' ಗಳು ಬರುವಂತೆ ಮಾಡಬೇಕು. ಸರಕಾರವೂ ತನ್ನ ಇದುವರೆಗಿನ ದುರ್ಲಕ್ಷ್ಯಭಾವವನ್ನು ಹೊಡೆದುಹಾಕಿ, ಕನ್ನಡಿಗರ ಕಡೆಗೆ ಸಹಾನುಭೂತಿಯಿಂದ ನೋಡಬೇಕು.

ಇನ್ನೊಂದು ವಿಷಯ: ಅಂಚೆಯ ಕಚೇರಿಗಳಲ್ಲಿ ಕೆಲಸ ಮಾಡುವವರಲ್ಲಿ ಬಹುಸಂಖ್ಯಾಕರು ಕನ್ನಡಿಗರಲ್ಲದವರಾಗಿರುವರು. ಉತ್ತರ–ಕರ್ನಾಟಕದಲ್ಲೆಲ್ಲ ಮರಾಟಿಗರು ಹೆಚ್ಚಾಗಿರುವರು. ದಕ್ಷಿಣ–ಕರ್ನಾಟಕದಲ್ಲೆಲ್ಲ ತೆಲುಗರು ತಮಿಳರು ಹೆಚ್ಚಾಗಿರುವರು. ಈ ಕೆಲಸಗಾರರು ಪ್ರಾದೇಶಿಕ ಭಾಷೆಯಾದ ಕನ್ನಡಕ್ಕೆ ಸಲ್ಲಬೇಕಾದ ಸ್ಥಾನವನ್ನೆ ಇಲ್ಲದಂತಾಗಿ ಮಾಡಿಬಿಡುವರು. ಯಾರಾದರೂ ಅಂಚೆಯ ಕಚೇರಿಗೆ ಹೋಗಿ, ಯಾವುದಾದರೊಂದು ವ್ಯವಹಾರದ ಫಾರ್ಮನ್ನು ಕೇಳಿದಾಗ, ಅಲ್ಲಿಯ ಕೆಲಸಗಾರರು, ಕನ್ನಡಫಾರ್ಮನ್ನು ಕೊಡದೆ ಸಹಜವಾಗಿ ಇಂಗ್ಲಿಷ್ ಫಾರ್ಮನ್ನಾಗಲಿ, ಮರಾಟ ಫಾರ್ಮನ್ನಾಗಲಿ ಚಾಚಿಬಿಡುವರು. 'ಯಾವುದಾದರೇನು, ವ್ಯವಹಾರ ಸಾಗಿರಾದಯಿತು' ಎಂಬ ಉದಾಸೀನಭಾವದಿಂದ ಕನ್ನಡಿಗರು, ಯಾವ ಬಗೆಯ ತಕರಾರನ್ನೂ ಮಾಡದೆ, ಕೊಟ್ಟುದನ್ನು ತೆಗೆದುಕೊಂಡು ಬಿಡುವರು. ಈ ವಿಷಯ ಸಣ್ಣದಾಗಿ ತೋರಿದರೂ, ಕರ್ನಾಟಕದ ಸದ್ಯದ ಪರಿಸ್ಥಿತಿಯ ದೃಷ್ಟಿಯಿಂದ ಈ ಕೆರುಗಿಡಿಯೆ ಉರಿಯಾಗಿ ನಿಲ್ಲಬಹುದಾಗಿದೆ. ಎಲ್ಲರೂ ಕನ್ನಡವಲ್ಲದ ಫಾರ್ಮುಗಳಿಂದ ಕೆಲಸ ಸಾಗಿಸತೊಡಗಿದರೆ, ಸರಕಾರದವರು ಮುದ್ರಿಸಿದ ಫಾರ್ಮುಗಳೆಲ್ಲ ಹಾಗೆಯೆ ಉಳಿದು ಹೋಗಬಹುದು. 'ಕನ್ನಡ ಫಾರ್ಮುಗಳಿಗೆ ಬೇಡಿಕೆಯೆ ಇಲ್ಲ!' ಎಂಬ ಸರಕಾರದ ನೆಪದ ಮಾತು ಸತ್ಯವಾಗಿ ಪರಿಣಮಿಸಿ, ಕನ್ನಡ ಫಾರ್ಮುಗಳ ಪ್ರಕಟನೆಯನ್ನೆ ಅದು ನಿಲ್ಲಿಸಿಬಿಡಬಹುದು. ಆದುದರಿಂದಲೆ ಪ್ರತಿಯೊಬ್ಬ ಕನ್ನಡಿಗನೂ ಈ ಒಂದು ಮಾತನ್ನು ಯಾವಾಗಲೂ

(ಒಂಟನೆಯ ಪುಟಕ್ಕೆ ಮುಂಬರಿದಿದೆ)

ಸಮ್ಮೇಳನದ ಸಂದೇಶ!

'ಧಾರವಾಡದಲ್ಲಿ ಕೂಡಿದ ೩೫ನೆಯ ಕನ್ನಡ ಸಾಹಿತ್ಯಸಮ್ಮೇಲನಕ್ಕೆ ಬೆಳಗಾಂವಿಯಿಂದ ಸುಮಾರು ೧೦೦ ಜನರೂ, ಜಿಲ್ಲೆಯ ಉಳಿದ ಕಡೆಗಳಿಂದ ಸುಮಾರು ೧೦೦ ಪ್ರೇಕ್ಷಕರೂ, ಪ್ರತಿನಿಧಿಗಳೂ ಹೀಗೆ ಒಟ್ಟಿಗೆ ೨೦೦ ಜನರು ಹೋಗಿದ್ದರು. ಅವರಲ್ಲಿ ಕೆಲವರಿಗೆ ಹುಗುಳು, ನೆಗಡಿ, ಅಜೀರ್ಣ ಮೊದಲಾದುವುಗಳಿಂದ ಅಜಾರಿ ಇರುವುದಾಗಿ ತಿಳಿದುಬರುತ್ತದೆ.' ಹೀಗೆಂದು ಬೆಳಗಾಂವಿಯ ಒಂದು ವಾರಪತ್ರಿಕೆ ಬರೆದುದನ್ನು ನೋಡಿ, ಕಂಡದ್ದನ್ನು ಕಂಡಂತೆ ಆಡುವ ಮುಂಗರಾಯನು ಕೂಡ ಆಶ್ಚರ್ಯದಿಂದ ಹಲ್ಲು ಕಿರಿಯಬೇಕಾಗಿದೆ. ಯಾಕೆಂದರೆ, ಉಳಿದ ವಾಚಕರಂತೆ ಮುಂಗರಾಯನಿಗಾದರೂ ಸಾಹಿತ್ಯಸಮ್ಮೇಳನದಲ್ಲಿ ಇಂತಹ ಸಂಗತಿಗಳೇ ಜರುಗುವುವೆಂಬ ಕಲ್ಪನೆ ಇರಲಿಲ್ಲ. ಬಹಳ ಮಾತನಾಡಿದರೆ ಹುಗುಳು, ಹಳಗನ್ನಡ ಕವಿತೆಗಳಂ ರಚಿಪಂದು ನೆಗಡಿ, ಭಾಷಣಗಳನ್ನು ಕೇಳಿ ಅಜೀರ್ಣ– ಹೀಗಾಗಿರಬಹುದೆ? ಇಲ್ಲವೆ ನಿಜವಾಗಿಯೆ ವಿದ್ಯಾಮಂದಿರವ ದಿವ್ಯ ಚಾಪೆಗಳ ಭವ್ಯ ತೂತುಗಳಿಂದ ಚಳಿಗಾಳಿ ಸೂಸಿ ಹೀಗಾಗಿರಬಹುದೆ? ಇಲ್ಲವೆ–ಬ್ರಾಹ್ಮಣರಿಗೆ ಒಂದು ಭೋಜನಾಲಯ, ಬಾಹ್ಮಣೇತರರಿಗೆ ಒಂದು ಭೋಜನಾಲಯ, ಚಾತಿ ಬಿಟ್ಟವರಿಗೆ ಎರಡೂ ಭೋಜನಾಲಯ– ಎಂಬುದಕ್ಕಾಗಿ ಹೀಗಾಗಿರಬಹುದೆ? ಇಲ್ಲವೆ– ಆಟ್! ಶ್ಶೀ! ದಬಗೇಕೆ ಒಡ ಚಿಬ್ತೆ?

* * * *

ಮುಂಗರಾಯನ ಮಹಾಸಮಸ್ಯೆ

ವಾಚಕರೆ, ಚಕಿತರಾಗಬೇಡಿರಿ–ಅಥವಾ ಕಂಬನ್ನಾದರೂ ಕೈಯಿಂದ ಹಿಡಿದು ಈ ಮಾತನ್ನು ಕೇಳಿರಿ. ಯಾಕೆಂದರೆ, ಲೋಕತ್ರಯ-ವಾಚಕವ್ಯಂದಸಂದೇಹಗಳ ಏಕಾಶ್ರಯನಾದ ಮುಂಗರಾಯನು ಇಂದು ವಾಚಕರಿಗೆಯೆ ತನ್ನ ಸಂದೇಹವೊಂದನ್ನು – ಅಥವಾ, ಸ್ವಲ್ಪದರಲ್ಲಿ ಹೇಳುವುದಾದರೆ ಮುಂಗರಾಯನು ಪೇಚಿನಲ್ಲಿ ಸಿಕ್ಕಿದ್ದಾನೆ. ವಾಚಕಮಹಾಶಯಾ, 'ನೀ ಪೇಳೆಲೊಸನಗೊಂದ್ ಉಪಾಯಾ!' ಎಂಬ ಹಾಡಾಗಿನೆ ಅವನದು. ಅದು ಹೀಗೆ: ಈ ವರ್ಷದ ಇದೇ ತಿಂಗಳ ಜನಗಣನೆಯ ಸಂದರ್ಭ. ಕಳೆದ ಮೂರು ವರ್ಷಗಳಿಂದ ಮುಂಗರಾಯನ ಪ್ರಚಾರಮೂಲಕವಾಗಿ ಮುಂಗೀಯ ಜಾತಿ (ಅಥವಾ ಮುಂಗೈಷ್ಣವ ಇಲ್ಲವೆ ಮುಂಗಾಯತ ಜಾತಿ ಎನ್ನೋಣ) ಬೆಳೆದಿದೆ; ಶಕ್ತಿ ಬೆಳೆಯುತ್ತಲಿದೆ. ಆದ್ದರಿಂದ ಜನಗಣನೆಯಲ್ಲಿ ಮುಂಗಮತದ ಘೋಷಣವೇನಿರಬೇಕು? ರಾಮಾಯಣ ಸಂಬಂಧವನ್ನು ನೆನೆಸಿ ಮುಂಗರಾಯನು 'ಆರ್ಯ' ನೆನಿಸಿಕೊಳ್ಳಬೇಕೆ? ಇಲ್ಲವೆ ಬಾದರಾಯಣ ಸಂಬಂಧ ನೆನೆಸಿ 'ದ್ರಾವಿದ' ನಾಗಿಯೆ ಉಳಿಯಬೇಕೆ? 'ಆರ್ಯ' ನಾದರೆ ರಾಜ್ಯಸೂತ್ರದಲ್ಲಿ ವಿಶಿಷ್ಟಸಪಲತ್ತುಗಳು ಜೊರೆಯುವುದಿಲ್ಲ; 'ದ್ರಾವಿದ' ನಾದರೆ ಬುದ್ಧಿಶಕ್ತಿಗೆ ಬಹುಮತ ದೊರೆಯುವುದಿಲ್ಲ. ಅಥವಾ ಈ ಗೊಂದಲವನ್ನೆ ಬಿಟ್ಟು 'ಶುದ್ಧ ಮುಂಗ' ನೆಂದೇ ಬರೆಯಿಸಬೇಕೆ? ಹಾಗಾದರೆ ಮಿಕ್ಕವರು 'ತಾವು ಅಶುದ್ಧ ಮುಂಗರೆ?' ಎಂದು ಕೋಪಿಸಬಹುದಲ್ಲ? ಮಾಡಬೇಕೇನು? ಇಡಿಯ ಹತ್ತುವರುಷ ಈ ವಿಚಾರವೆ ತೋಚಲಿಲ್ಲ; ಕೊನೆಯ ದಿನ ಪೇಚಿನಲ್ಲಿ ಸಿಕ್ಕಿದ್ದಾನೆ! ಆದಕಾಗಿ ಒಮ್ಮೊಮ್ಮೆ 'ಜನರಲ್ಲಿ ತನ್ನ ಗಣನೆ ಕೂಡ ಬೇಡ' ಎಂದು ಜುಗುಪ್ಸೆಯಾಗುವುದು ಮುಂಗರಾಯನಿಗೆ. ವಾಚಕರೆ– ಅಥವಾ, ನೀವಾದರೂ ಇಂತಹ ಪೇಚಿನಲ್ಲಿಯೆ ಸಿಕ್ಕಿದ್ದರೆ ನಿಮಗೇಕೆ ತೊಂದರೆ?

* * * *

Thank You! (ಥ್ಯಾಂಕ್ ಯು)

ವಯಾಸಾಗರ ಇಲ್ಲವೆ ಬುದ್ಧಿಸಾಗರನಾಗಿರಬಹುದಾದ ವಾಚಕನೊಬ್ಬನು ಮುಂಗರಾಯನಿಗೆ ಹೀಗೆ ಕಾಗದವನ್ನು ಬರೆದಿದ್ದಾನೆ:—

'ಕೊಂಬೆಯ ಕುವರಾ, ಕನ್ನಡ ಕವೀಶ್ವರಾ—

ಸುಮಾರು ಮೂರು ವರ್ಷಗಳಿಂದ ನಿನ್ನ ಆರಾಧನೆಯನ್ನು ಮಾಡುತ್ತ ಬಂದಿರುವೆ. ಇದೀಗ ನೀನು ನಿಜವಾಗಿಯೆ ಮುಂಗನೆಂದು ನನಗೆ ಪ್ರತೀತಿಯಾಗಿದೆ. ಈ ಮಾತು ಟೀಕೆಯಲ್ಲ, ಕ್ಷಮೆ ಇರಲಿ; ಯಾಕೆಂದರೆ, ನೀನು ಮರ್ಕಟನೆಂದು ಮನವರಿಕೆಯಾದಂದಿನಿಂದ ನಿನ್ನ ಸಲುವಾಗಿ ನನ್ನಲ್ಲಿ ಆದರಬುದ್ಧಿ ಹೆಚ್ಚಿದೆ. ಕಂಡುದನ್ನು ಕಲಕಿ, ಕೆಣಕಿ, ಕೆದರಿ, ಕೆಡುಹಿ ಅದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವುದು ಕೇವಲ ಮುಂಗನಿಗೆಯೆ ಸಹಜ ಮತ್ತು ಶಕ್ಯ ಎಂಬುದು ನನಗೆ ಗೊತ್ತಿದೆ. ಆದಕಾಗಿಯೆ ನಿನ್ನಂತಹ ಸತ್ಯದ ಸೈನಿಕನು ಇನ್ನೊಬ್ಬನಿಲ್ಲ ಎಂದು ನನ್ನ ವೃಥಾಭಿಪ್ರಾಯ. ಇಷ್ಟೇಕೆ, ನೀನು ಮಿಥ್ಯಾಸ್ತುತಿ ಎಂದು ಭಾವಿಸದಿದ್ದರೆ, ಇನ್ನೊಂದು ಮಾತನ್ನೂ ಹೇಳುವೆ. ನೀನು ಇರುವುದು ಮರಗಳ ತುದಿಯಲ್ಲಿ, ಉಣ್ಣುವುದು ಕೇವಲ ಫಲ-ಪತ್ರಗಳನ್ನು. ಉನ್ನತವಾದ ಸ್ಥಾನದಲ್ಲಿದ್ದರೂ ಫಲಾಹಾರಮಾತ್ರದ ಪರಮಕಾರುಣಿಕನು ನೀನು.. ಇಂದಿನ ಭಾಷೆಯಲ್ಲಿ ಹೇಳುವುದಾದರೆ, ಆಹಾರದಲ್ಲಿ ಅಹಿಂಸಾಪ್ರಿಯನಾದ ನೀನು, ಆಚಾರ - ವಿಚಾರಗಳಲ್ಲೂ ಅಹಿಂಸಾವಾದಿಯಾಗಿರುವೆ. ಹೀಗೆ ಸತ್ಯ – ಅಹಿಂಸೆಗಳನ್ನು

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,
೬ ಆಣೆಗೆ ಒಂದು ಸೆಟ್ಟು.

6

ದಮ್ಮು ನೆಟ್ಟಗೆ
ಆಗಲೇ ಬೇಕು

ಇದು ಅಸಾಧ್ಯವೆಂದು
ಡಾಕ್ಟರರು
ಹೇಳುವುದಿಲ್ಲ

★

ನಿಮಗೆ ನಿರಾಶೆಯು ಆದರೆ
ಅದರ ಕಾರಣ ತಪ್ಪು ಔಷಧ
ತೆಗೆದುಕೊಂಡದ್ದು ಇರಬಹುದು. ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಆನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೆ, ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಷ್ಪಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨-೪-೦, ರೂ. ೩-೧೨-೦, ರೂ. ೬-೮-೦ ಈ ಕ್ರಯಕ್ಕೆ ಸಣ್ಣ ದೊಡ್ಡ ಬಾಟಲಿಗಳಲ್ಲಿ ಎಲ್ಲಾ ಕಡೆಗೆ ಸಿಗುವುದು. ತರಿಸಿ ಕೊಳ್ಳುವ ವಿಳಾಸ :

ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ

ಪುರೋಹಿತ ಶ್ವಾಸಹಾರಿ

ಮೈಗೂಡಿಸಿಕೊಂಡ ಮಂಗರಾಯಾ, ನಾನು ಬರೆದುದಕ್ಕೆ ಹಲ್ಲು ಕಿರಿಯಬೇಡ. ಯಾಕೆಂದರೆ, ನಿನ್ನ ಹಲ್ಲನ್ನು ನೋಡಿದ ಮಾತ್ರಕ್ಕೆ 'ನೀನು ಕಡಿಯುವ ಕ್ರೂರ' ಎಂದು ಭಾವಿಸುವ ಹೇಡಿಗಳಿದ್ದಾರೆ. ಆದ್ದರಿಂದ ಬಾಯಿನುಟ್ಟಿ ಬಾಳು, ಇಲ್ಲವಾದರೆ ನಿನಗಾಗಿ ಶನಿವಾರವನ್ನು ನಾಡಹಬ್ಬವೆಂದು ಆಚರಿಸಬೇಕಾದೀತು.'

* * *

ಮಂಗಸಾಹಿತ್ಯ

ಕ್ಷಮೆ ಇರಲಿ. ಪರಿಷನ್ಮಂದಿರದಲ್ಲಿ ವಿದ್ವನ್ಮಣಿಗಳು ಒಂದು ಚರ್ಚೆಯನ್ನು ನಡೆಯಿಸಿದರಂತೆ; ಆದರಲ್ಲಿ 'ಮತಸಾಹಿತ್ಯ' ಎಂಬ ಪದವಿತ್ತಂತೆ. ಅದು ತಪ್ಪು ಎಂದು ಮಂಗರಾಯನು ಹೇಳಲು ಧೈರ್ಯಮಾಡುತ್ತಾನೆ. ನೀವು ಆ ಸಾಹಿತ್ಯವನ್ನು ನೋದಿರುವಿರಾ? ಒಬ್ಬನು 'ನನ್ನ ಮತಶ್ರೇಷ್ಠ' ಎನ್ನುವನು, ಇನ್ನೊಬ್ಬ ಸಾಹಿತಿಯು 'ನನ್ನ ಮತಶ್ರೇಷ್ಠ' ಎನ್ನುವನು, ಮೂರನೆಯವನೂ ಹಾಗೆಯೆ ಹೇಳುವನು. ತಾತ್ಪರ್ಯವೇನು? ಒಬ್ಬನನ್ನು ನೋಡಿ ಇನ್ನೊಬ್ಬನೂ ಅವನಂತೆಯೆ ವರ್ತಿಸುತ್ತಾನೆ; ಇದು ಮಂಗತನದ ಮುಖ್ಯ ಲಕ್ಷಣವಲ್ಲವೆ? ಅದಕಾಗಿಯೆ 'ಮತ ಸಾಹಿತ್ಯ' ಎನ್ನದೆ ಅದನ್ನು 'ಮಂಗಸಾಹಿತ್ಯ' ಎಷ್ಟೇಕೆಂದು ಮಂಗರಾಯನ ಸೂಚನೆ. ಇಲ್ಲವಾದರೆ ಮಂಗಜಾತಿಯ ಮಹತ್ವವೆಲ್ಲುಳಿಯಿತು? ಇನ್ನು ಆ ಚರ್ಚೆಯಲ್ಲಿ 'ಮಂಗಸಾಹಿತ್ಯ ಪ್ರಬಲವಾಗಿ ಶುದ್ಧಸಾಹಿತ್ಯ ಬೆಳೆಯಹಂತಾಗಿದೆ' ಎಂದು ಸಭಿಕರೂ ಬಹುಮತದಿಂದ ತೀರ್ಮಾನಿಸಿದರಂತೆ. ಸಭಿಕರ ಈ ಅನುಭವಲೋಪವನ್ನು ಮಂಗರಾಯನು ಮನಸಾವಿಷಾದಿಸುತ್ತಾನೆ. ಈ ಸಭಿಕರು ಯಾವ ಸಾಹಿತ್ಯಸಮ್ಮೇಳನವನ್ನೂ ನೋಡಿದಂತೆ ಕಾಣುವುದಿಲ್ಲ. ಪ್ರತಿಯೊಂದು ಸಮ್ಮೇಳನದಲ್ಲಿ, ಯಾವ ಜಾತಿಯ ಸಾಹಿತ್ಯವೂ ಪ್ರಬಲವಾಗಿರುವುದಿಲ್ಲ. ಇಷ್ಟೇಕೆ? ಕಾನ್ಯಪಾಚನದಲ್ಲಿ ಕೂಡ ಎಷ್ಟು ದಾಸರ ಪದಗಳನ್ನು ಹೇಳಲಾಗುವುದೊ ಅಷ್ಟೆ ವಚನಗಳನ್ನೂ ಹೇಳಲಾಗುವುದು. ಇಂತಹ ನಿಷ್ಪಕ್ಷಪಾತದ ವಾತಾವರಣದಲ್ಲಿ ಈ ವಿದ್ವನ್ಮಣಿಗಳು ಇಲ್ಲದ-ಒಲ್ಲದ ವಿಚಾರಗಳನ್ನು ಎಬ್ಬಿಸಬಾರದು ಎಂದು ಮಂಗರಾಯನು ದವಡೆತುಂಬಿದ ಕಂಠದಿಂದ ಬೇಡುತ್ತಾನೆ.

* * * *

ಅರ್ಥದಿಂದ ಮೋಕ್ಷ

ಇಂದಿಗೆ ಇಪ್ಪತ್ತು ವರುಷಗಳಾದುವು ಮಂಗರಾಯನು ಮೈ ತುರಿಸತೊಡಗಿ. ಯಾಕೆನ್ನುವಿರಾ? ನಮ್ಮವರಿಂದಲೆ ಇಡಿಯ ಜಗತ್ತಿನಲ್ಲಿ ಹೊಸತೆಂದು, ಹೆಚ್ಚಿನದೆಂದು ಹೇಳಲ್ಪಟ್ಟು ಹೆಮ್ಮೆಯನ್ನು ಹುಟ್ಟಿಸಬೇಕಾದ 'ಅಹಿಂಸೆ' ಎಂಬ ತತ್ತ್ವವನ್ನು ತಿಳಿದುಕೊಳ್ಳಲು. 'ಹಿಂಸೆ ಎಂದರೆ ಅಪಾಯವನ್ನು ಮಾಡದಿರುವುದೆ ಅಹಿಂಸೆ' ಎಂದು ಜೈನರಂತೆ ಮೂಗುಮುಚ್ಚಿಕೊಂಡು ನಡೆದರೆ, ಕಾಂಗ್ರೆಸಿನವರು ಇಲ್ಲದ ಸಂಶಯದಿಂದ ಸಿಟ್ಟಾದಾರು ಎಂಬ ಹೆದರಿಕೆ. ಹಿಂಸೆ ಎಂದರೆ ಯಜ್ಞ ಎಂದರೆ ಪ್ರಾಣವಧೆಯನ್ನು ಮಾಡಬಾರದು ಎಂದು ಬೌದ್ಧರಂತೆ ಹಟ ಹಿಡಿದರೆ, ಲಾಠೀ ಏಟಿಗೆ ತರುಣ ಸ್ವಯಂಸೇವಕರನ್ನು ಅರ್ಘ್ಯಾತ್ ಇನ್ನೊಬ್ಬರನ್ನು ನೂಕಲು ತೊಂದರೆ. ಆಂತೂ ಅಹಿಂಸೆ ಎಂಬ ತತ್ತ್ವವನ್ನು ತಿಳಿದುಕೊಳ್ಳಲು ಮಂಗರಾಯನು ಮೈ ತುಂಬಾ ಹಿಂಸೆಯನ್ನು ಅನುಭವಿಸಬೇಕಾಯಿತು. ಆಗಲಿ; ಕೊನೆಗೆ ಈ ತಿಂಡಿತಪಸ್ಸಿಗೆ ಸಿದ್ಧಿ ಲಭಿಸಿತೆಂದು ಹೇಳಲು ಮಂಗರಾಯನಿಗೆ ಅತ್ಯಂತ ಸಂತೋಷವಾಗುತ್ತದೆ. 'ಅಹಿಂಸೆ' ಎಂಬ ತತ್ತ್ವದ ತಿರುಳನ್ನು ಬಿಚ್ಚಿಟ್ಟಿದ್ದಾನೆ ಮಂಗಮಹರ್ಷಿ. ಅದೇಕೆ? ಅಹಿಂಸೆ ಎಂಬ ಪದವನ್ನು ಬಿಚ್ಚಿ ಬಿಚ್ಚಿ ಸ್ಪಷ್ಟೀಕರಿಸಿದ್ದಾನೆ. ಅದು ಹೀಗೆ:—

ಅ=ಅಖಿಲ.

ಹಿಂ=ಹಿಂದುಸ್ತಾನ.

ಸೆ=ಸೇವಾಗ್ರಾಮ.

(೬೦೫ನೆಯ ಪುಟಕ್ಕೆ ಮುಂಬರಿದಿದೆ.)

ಅಮೇರಿಕೆಯ ★ ಆಡಳಿತ

'ಜಾರ್ಮನಿಯ ತಂತ್ರಿ' ಬರೆದುದು

★

ಸ್ವಾತಂತ್ರ್ಯದಿಂದ ಸ್ವಾರಾದ ಅಮೇರಿಕೆ, ತನ್ನ ಸಂಯುಕ್ತ ಸಂಸ್ಥಾನದ ಆಡಳಿತಕ್ಕೆ ತಕ್ಕುದಾದ ಸ್ವತಂತ್ರ ರಾಜ್ಯಘಟನೆಯನ್ನು ನಿರ್ಮಿಸಿಕೊಂಡಿತು. ಅಧ್ಯಕ್ಷರು, ಕಾಂಗ್ರೆಸು, ನ್ಯಾಯಸ್ಥಾನ ಇವು ಮೂರು ಮುಖ್ಯಘಟಕಗಳು. ಇವೆಲ್ಲ ಪರಸ್ಪರ ಸಾಂಕುಶ ಶಕ್ತಿಗಳಾಗಿದ್ದು, ಸುಯಂತ್ರಿತವಾಗಿ ರಾಜ್ಯಕಾರಭಾರವನ್ನು ಹೇಗೆ ನಡೆಯಿಸಿವೆ ನೋಡಿ!

★

ಜನಪ್ರಿಯ ಅಧ್ಯಕ್ಷ ರೂಜ್‌ವೆಲ್ಟ್‌ರು

ಈ ಸಲದ ಮಹಾಯುದ್ಧವು ಅನೇಕ ಘಟನೆಗಳನ್ನು ತಂದು ಒಡ್ಡಿತು. ಪುರಾಣಕಾಲದ ದೇವ-ದಾನವರಲ್ಲಿಯ ಶಿಕ್ಯಾಟದ ಮೂಲಕ ಸಮುದ್ರಮಥನವಾಗಿ, ಅನೇಕ ರತ್ನಗಳು ಹೊರಕ್ಕೆ ಬಂದುವು. ಕಳೆದ ಮಹಾಯುದ್ಧದನಂತರ ಸಾಮ್ಯವಾದ, ಸಂಘವಾದ ಮುಂತಾದ ತತ್ತ್ವಗಳುದಯಿಸಿ, ಬೇರೆಬೇರೆ ಸರಕಾರಗಳನ್ನು ಅಲುಗಿಸಿದುವು. ಪ್ರಜಾಧಿಪತ್ಯದಿಂದ ಸರ್ವಾಧಿಕಾರಿಗಳು ಉದಯಿಸಿ, ದೇಶದ ಸಲುವಾಗಿಯೆ ದೇಶವನ್ನು ಹಾಳುಮಾಡಲು ತೊಡಗಿದರು. 'ಶಾಂತಿಸ್ಥಾಪನೆಗೆ ಯುದ್ಧವೇ ಯೋಗ್ಯ ಉಪಾಯ' ಎಂಬುದು ಆಭಾಸಪೂರ್ಣವಾದ ಮಾತಾಗಿದ್ದರೂ ಸಾಗಿದೆ ಯುದ್ಧ— ಶಾಂತಿಸ್ಥಾಪನೆಗೆ ಕೇವಲ ಶಾಂತಿಸ್ಥಾಪನೆಗೆಂದೆ!

ಅಮೇರಿಕೆಯು ಪ್ರಪಂಚದ ಸೂತ್ರಗಳಿಂದ ದೂರವಾಗಿ ಇದ್ದುದರಿಂದಲೂ, ದುಡ್ಡಿನ ದೊಡ್ಡಸ್ತಿಕೆಯ ಕಾರಣದಿಂದಲೂ 'ಇಲ್ಲಿಯವರೆಗೆ, 'ಅಜಾತಶತ್ರು' ಎಂದೆನಿಸಿಕೊಂಡಿತ್ತು. ಆದರೆ ಇಂದು ಯುದ್ಧ ಒಲ್ಲೆನೆಂದರೆ ಅದನ್ನು ಕೇಳುವವರಾರು? 'ಯುದ್ಧದಲ್ಲಿ ಬೀಳುವುದು ನಿಮಗೆ ಬೇಡವಾಗಿದ್ದರೆ ನಮಗೆ ಬೇಕಾಗಿದೆಯಲ್ಲ!' ಎಂದು ಎದುರಾಳಿಯನ್ನು ಜಗ್ಗುವುದು ನಡೆದಿದೆ. ಜಗ್ಗಿದ ಮೇಲೆ 'ಒಲ್ಲೆ' ಎಂದರೆ ಹೇಡಿತನವಾಗುವುದೆಂಬ ಹೆದರಿಕೆಯಿಂದ, ಹೆಮ್ಮೆಯಿಂದಲೆ "ನಾವು ನಿಮ್ಮನ್ನು ಹುಡಿಗೂಡಿಸಿ ಬಿಡುವೆವು" ಎಂದು ನಡ್ಡುಹೊಡೆದು ನಿಂತಿದೆ ಇಂದಿನ ಅಮೇರಿಕೆ. ಅಮೇರಿಕೆಗೂ ಈಗ ಯುದ್ಧದ ಜಳವು ತಾಗಿದೆ. ಆದಕ್ಕೆಂದೇ ಆದರ ಘಟನೆಗಳಿಂದ ಹೊಸದಾದ ವಿಷಯಗಳು ಹೊರಗೆ ಬಂದಿವೆ..ಅಧ್ಯಕ್ಷರ ಆಯ್ಕೆಯದು.

ಫ್ರೆ. ರೂಜವೆಲ್ಟರು ಮೂರನೆಯ ಸಲ ಅಧ್ಯಕ್ಷಪದವಿಗೆ ಆರಿಸಿ ಬಂದರು. ಈ ಸಂಗತಿಯು ಇಡಿ ಜಗತ್ತನ್ನೆ ಅಮೇರಿಕೆಯ ಘಟನೆಯ ಬಗ್ಗೆ ಕುತೂಹಲಿಯನ್ನಾಗಿ ಮಾಡಿದೆ. ಎಂತಲೆ ಅಮೇರಿಕೆಯ ಘಟನೆಯನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿದೆಯೆಂದು ಕಂಡುಬರತೊಡಗಿದೆ.

ಅಮೇರಿಕೆಯು ಆಂಗ್ಲರ ಆಡಳಿತದಿಂದ ಬೇರೆಯಾದಂದಿನಿಂದ, ತಮ್ಮದೆ ಆದ ಘಟನೆಯೊಂದನ್ನು ಅಲ್ಲಿಯವರು ಮಾಡಿಕೊಂಡಿದ್ದಾರೆ; ಎಂದರೆ ಬ್ರಿಟಿಶರರಾಜ್ಯಘಟನೆಯನ್ನೆ ಮಾದರಿಯನ್ನಾಗಿಟ್ಟುಕೊಂಡು, ತಮ್ಮ ದೇಶಕ್ಕೊಂದನ್ನು ಸಿದ್ಧಮಾಡಿದ್ದಾರೆ. ಅಂದು ಅಮೇರಿಕೆಯವರು ಬ್ರಿಟಿಷ್‌ಘಟನೆಯನ್ನು ತಿಳಿದುದು ಹೀಗೆ: "ಬ್ರಿಟಿಷರ ಸ್ವಾತಂತ್ರ್ಯಕ್ಕೆ ಅವರ ಘಟನೆಯೆ ಮೂಲಕಾರಣವಾಗಿದೆ. ಆ ಘಟನೆಯು 'ಅಧಿಕಾರಗಳ ಬೇರ್ಪಡಿಸುವಿಕೆ'ಯ ತಳಹದಿಯ ಮೇಲೆ ನಿಂತಿದೆ. ಘಟನೆಯನ್ನೂ ಕಟ್ಟಳೆಗಳನ್ನೂ ಮಾಡುವ ಕಾರ್ಯ ಪಾರ್ಲಿಮೆಂಟಿನದು. ಮಂತ್ರಿಗಳು ಅವುಗಳಿಗೆ ಜೀವಕಳೆ ತುಂಬುವರು; ನ್ಯಾಯಾಧೀಶರು ಅವುಗಳನ್ನು ಬಳಸಿ ಅರ್ಥ ಮಾಡುವರು." ಈ ಮೂರು ಅಧಿಕಾರಮಂಡಲಗಳು ಒಂದನ್ನೊಂದು ಅವಲಂಬಿಸಿಲ್ಲವೆಂದೂ ಒಂದು ಮಂಡಲವು ಮತ್ತೊಂದರ ಅವ್ಯಾಪಾರೇಷು ವ್ಯಾಪಾರವನ್ನು 'ತಡೆ'ಯುವುದೆಂದೂ ತಿಳಿದುಕೊಂಡರು ಅಮೇರಿಕೆಯವರು.

ಅಮೇರಿಕೆಯಲ್ಲಿಯ ಬಹುಸಂಖ್ಯಾಕರೂ ಒಂದುಕಾಲಕ್ಕೆ ಇಂಗ್ಲಂಡಿನಲ್ಲಿ ಇದ್ದವರೆ; ಅದಕ್ಕಾಗಿ ಇಂಗ್ಲಂಡ್‌ದೇಶದ ಘಟನೆಯ ವಿಷಯದಲ್ಲಿ ಒಳಗೊಳಗೇ ಆದರ. ಅದರ ಪ್ರತಿಮೂರ್ತಿಯನ್ನೆ

ತಮ್ಮ ದೇಶದಲ್ಲಿ ಮೂಡಿಸಬೇಕೆಂದು, ತಾವು ಅದರ ಗುಟ್ಟನ್ನು ತಿಳಿದಂತೆ– ಅದೇ ಮಾದರಿಯಲ್ಲಿಯೆ–ತಮ್ಮ ದೇಶದ ಘಟನೆಯನ್ನು ಸಿದ್ಧಮಾಡಲು ಉದ್ಯುಕ್ತರಾದರು. ಇಂದು ಅಮೇರಿಕೆಯ ಆಡಳಿತದ ಸೂತ್ರ ಹೀಗಿದೆ :

ಕಾರ್ಯಾಧಿಕಾರವು ಅಧ್ಯಕ್ಷನದು: ಇತ್ತ ಅಮೇರಿಕೆಯ ಜನತೆಯಿಂದ ಅಧ್ಯಕ್ಷನು ನಾಲ್ಕು ವರುಷಕ್ಕೊಮ್ಮೆ ಆರಿಸಲ್ಪಡುವನು. ಅವನನ್ನೇ ನಾಲ್ಕು ವರುಷದ ಅವಧಿಯ ಮಟ್ಟಿಗೆ ಮತ್ತೊಮ್ಮೆ ಕೂಡ ಆರಿಸಬಹುದು. ರಾಜನೆಲ್ಲರನ್ನೆಲ್ಲದೆ ಇಂದಿನ ವರೆಗೂ ದೇಶ ಯಾವನನ್ನೂ ಮೂರನೆಯ ಸಲ ಅಮೇರಿಕೆಯವರು ಅಧ್ಯಕ್ಷಪದವಿಯ ಘನತೆಗೆ ಏರಿಸಿಲ್ಲ. ಎರಡು ಸಲ ಅಧ್ಯಕ್ಷಪದವಿಯನ್ನು ಪಡೆದ **ಜಾರ್ಜ್ ವಾಶಿಂಗಟನ್**ನೂ ಮೂರನೆಯ ಸಲ ತಾನು ಪುರಿಯಾಳಾಗಲಿಕ್ಕೆ ಸಮ್ಮತಿಸಲಿಲ್ಲ– ಅದು ಸರ್ವಾಧಿಕಾರಿತ್ವದ ಸೋಗಿಗೆ ಎಳೆಯುವುದೆಂಬ ಹೆದರಿಕೆಯಿಂದ—ಆದರೆ ಇಂದಿನ ಬಿಕ್ಕಟ್ಟಿನ ಸ್ಥಿತಿಯಲ್ಲಿ, ಜಗತ್ತಿನಲ್ಲಿಯ ಸರ್ವಾಧಿಕಾರಿಗಳ ಉಪಟಳವನ್ನು ಎದುರಿಸಿ ಜೆದರಿಸಲು ರೂಜವೆಲ್ಟನೇ ತಕ್ಕವನೆಂದು ಅಮೇರಿಕೆಯ ಜನತೆಗೆ ಎನಿಸಿದ್ದರಿಂದ– ಘಟನೆಯಲ್ಲಿ ಆ ಬಗ್ಗೆ ಅನುವು ಇಲ್ಲದಿದ್ದರೂ—ಅವನನ್ನು ಮೂರನೆಯ ಸಲವೂ ಅಧ್ಯಕ್ಷಸ್ಥಾನಕ್ಕೆ ಆರಿಸಿದರು. ಕಟ್ಟಳೆಯನ್ನು ಮಾಡುವ ಅಧಿಕಾರವು ಜನತೆಯದೆಂದಮೇಲೆ, ತಮ್ಮ ಹಿತದ ಸಲುವಾಗಿ ಅದರಲ್ಲಿ ಬದಲಾವಣೆಗಳನ್ನು ಮಾಡುವ ಅಧಿಕಾರವಾದರೂ ಅದಕ್ಕೆಯೆ ಇರಬೇಕಲ್ಲವೆ ?

ಅಮೇರಿಕೆಯಲ್ಲಿ ಅಧ್ಯಕ್ಷನೆ ತನ್ನ ಮಂತ್ರಿಮಂಡಲವನ್ನು ರಚಿಸುವನು; ಅಲ್ಲದೆ ಕಟ್ಟಳೆಗಳನ್ನು ಕಾರ್ಯರೂಪದಲ್ಲಿ ತರುವ. ರಾಜ್ಯದ ನೀತಿಯನ್ನು ನಿಷ್ಕರ್ಷಿಸುವ ಹೊಣೆಯೂ ಅವನದೆ. ಕಟ್ಟಳೆಗಳನ್ನು ಸಿದ್ಧಮಾಡುವುದೂ ಕರಗಳನ್ನು ಹೇರುವುದೂ ಕಾಂಗ್ರೆಸಿನ ಅಧಿಕಾರಕ್ಕೆ ಸೇರಿದುದು. ಕಾಂಗ್ರೆಸಿನಲ್ಲಿ ಎರಡು ಮಂಡಲ : **ಸಿನೇಟ್**–ಎಂಬುದೊಂದು; ಇದರಲ್ಲಿ ಸಂಯುಕ್ತ-ರಾಜ್ಯದ ಪ್ರತಿಯೊಂದು ಘಟಕವೂ ತನ್ನ ಪ್ರತಿನಿಧಿಯನ್ನು ಕಳುಹಿರುವುದು. ಎರಡನೆಯದು **ಪ್ರತಿನಿಧಿಗಳ ಮಂಡಲ.** ಇಲ್ಲಿ ಆಯ್ಕೆ ನಡೆಯುವುದು; ಆಯ್ಕೆಯ ರೀತಿಯು ಇಂಗ್ಲೆಂಡಿನ ಕಾಮನ್ಸ್ ಮಂಡಲದಂತೆಯೆ. ಹಿರಿಮನೆ—ಸಿನೇಟ್–ಯವರು ಆರುವರುಷದ ಅವಧಿಯಮಟ್ಟಿಗೆ ಅಲ್ಲಿ ಕಾರ್ಯಮಾಡುವರು. ಅವರಲ್ಲಿಯ ಶ್ರೀಮಷ್ಟಿಜನರು ಪ್ರತಿ ಎರಡು ವರುಷಕ್ಕೆ ಕರಗುವರು. ಪ್ರತಿನಿಧಿಮಂಡಲದ ಸದಸ್ಯರು ಎರಡು ವರುಷಗಳ ಮಟ್ಟಿಗೆ ಮಾತ್ರ ಕಾರ್ಯಶಕ್ತರು.

ಕಟ್ಟಳೆಗಳ ಅರ್ಥಮಾಡುವ ಅಧಿಕಾರವು ನ್ಯಾಯಾಧೀಶರ ಕಡೆಗಿರುವುದು. ಇದರ ಸಲುವಾಗಿಯೆ ನ್ಯಾಯಾಧೀಶರು ಕಾಂಗ್ರೆಸಿನ ಮತ್ತು ಅಧ್ಯಕ್ಷರ ಅಧಿಕಾರಕ್ಕೊಳಪಟ್ಟವರಾದರೆಂದು ಹೆಣಗಿದರು, ಘಟನೆಯ ರಚನಾಕಾರರು. ಸಾಮಾನ್ಯ ದೃಷ್ಟಿಯಿಂದ ಅಮೇರಿಕೆಯ ನ್ಯಾಯಾಧೀಶರು ಬ್ರಿಟಿಷ್ ನ್ಯಾಯಾಧೀಶರಂತೆಯೆ ಇದ್ದರೂ, ಈ ಪರಿಸ್ಥಿತಿಯ ಮೂಲಕ ಇವರಿಗೆ ಅಧಿಕಾರ ಹೆಚ್ಚು ಇರುವುದು.

ಅಮೇರಿಕೆಯ ಅಧ್ಯಕ್ಷನು ಬ್ರಿಟಿಷ್ ಮುಖ್ಯಮಂತ್ರಿಯಂತೆ ಅಲ್ಲ. ಮುಖ್ಯಮಂತ್ರಿಯು ಕಾನೂನುಮಂಡಲದ ಸದಸ್ಯನು; ಯಾವುದೊಂದು ರಾಜಕೀಯ ಪಕ್ಷದ ಮುಂದಾಳು. ಸಾಮಾನ್ಯವಾಗಿ ಅವನ ಪಕ್ಷ ಬಹುಮತದ್ದಾಗಿರುವುದು. ಈ ಕಾರಣಗಳ ಮೂಲಕವಾಗಿಯೆ ಮುಖ್ಯಮಂತ್ರಿಯು ತನ್ನ ರಾಜನೀತಿಯನ್ನು ಆತ್ಮವಿಶ್ವಾಸದಿಂದ ಮುಂದೂಡಬಹುದು. ಅಮೇರಿಕೆಯ ಅಧ್ಯಕ್ಷನ ವಿಷಯ ಹಾಗಲ್ಲ. ಅವನು ಕಾಂಗ್ರೆಸ್ಸಿನ ಸದಸ್ಯನಲ್ಲ. ಅಮೇರಿಕೆಯವರ ಘಟನೆಯ ಪ್ರಕಾರ ಯಾರು ಸರಕಾರದ ಸಂಬಳದ ಮೇಲೆ ಕೆಲಸ ಮಾಡುವರೋ ಅವರು, ಕಾಂಗ್ರೆಸಿನ ಸದಸ್ಯರಾಗಲಾರರು. ಅದು ಕಾರಣ ಅಧ್ಯಕ್ಷನು ತನ್ನವರೆಂದೂ ತನ್ನ ಪಕ್ಷದವರೆಂದೂ ಇದ್ದ ಹಿರಿಯ ಮನೆಯವರನ್ನಾಗಲಿ, ಪ್ರತಿನಿಧಿಗಳನ್ನಾಗಲಿ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾರ.

ಸರಕಾರದ ಯಾವುದಾದರೂ ಒಂದೇ ಒಂದು ಅಂಗವು ಬಲಿಷ್ಠವಾಗಬಾರದೆಂದು ‘ಹಿಡಿತ-ತೂಕ’ ಗಳಿಂದ ಅಮೇರಿಕೆಯವರು ಒಂದು ಜಂತ್ರಿಯನ್ನು ಸಿದ್ಧಮಾಡಿದ್ದಾರೆ. ಹಿರಿಮನೆಯವರಿಗೂ–ಪ್ರತಿನಿಧಿಗಳಿಗೂ ಮತಭೇದವುಂಟಾದರೆ, ಬಗೆಹರಿಯುವ ಮಾರ್ಗವೆ ಇಲ್ಲ. ಇವೆರಡೂ ಮಂಡಲಗಳಲ್ಲಿಯ ಒಂದರ ನೀತಿಗೆ ಅಧ್ಯಕ್ಷನ ನೀತಿಯು ವಿರುದ್ಧವಾದರೆ ಬಿಕ್ಕಟ್ಟು ಬರುವುದು. ಅಧ್ಯಕ್ಷನು ಅವಧಿತೀರುವ ವರೆಗೆ ಪದಭ್ರಷ್ಟನಾಗುವ ಹಾಗಿಲ್ಲ; ಕಾಂಗ್ರೆಸ್ ಮುರಿಯುವಂತೆ ಇಲ್ಲ. ಅವರವರ ಅವಧಿಯು ನಿಶ್ಚಿತವಿದ್ದುದರಿಂದ, ಆ ಅವಧಿಯು ಮುಗಿಯುವ ವರೆಗೆ ಬೇರೆ ಚುನಾವಣೆಗಳು ಆಗುವಂತಿಲ್ಲ. ಅಧ್ಯಕ್ಷನೂ, ಪ್ರತಿನಿಧಿಗಳೂ, ಶ್ರೀಮಷ್ಟಿಹಿರಿಯ ಮನೆಯವರೂ ಒಂದೇ ಕಾಲಕ್ಕೆ ಆರಿಸಲ್ಪಡುವರು. ಆದರೆ ಅಧ್ಯಕ್ಷನ ಅವಧಿಯು ನಾಲ್ಕುವರುಷವಾದರೆ, ಪ್ರತಿನಿಧಿಗಳ ಮತ್ತು ಶ್ರೀಮಷ್ಟಿ ಹಿರಿಮನೆಯವರ ಅವಧಿ ಎರಡೇ ವರುಷ. ಅಧ್ಯಕ್ಷನ ಅಧಿಕಾರದ ಅವಧಿಯಲ್ಲಿಯೇ ಹೀಗೆ ಆಯ್ಕೆಯಾಗುವುದರಿಂದ, ಜನತೆಯ ಅಭಿಪ್ರಾಯ ತಿಳಿದು, ಅಧ್ಯಕ್ಷನೇನಾದರೂ ಮಾಡಿದ ಅವ್ಯಾಪಾರಕ್ಕೆ ‘ತಡೆ’ ಉಂಟಾಗುವುದು.. ಎಂಬುದು ಘಟನಾ ಕರ್ತೃಗಳ ಮನೀಷೆಯಾಗಿತ್ತು.

ಇದೆಲ್ಲ ವಿಚಾರದ ವಿಷಯವಾಯಿತು. ಆಚಾರದಲ್ಲಿ ಅದರ ಸ್ಥಿತಿ ಹೇಗಿದೆ ? ಅಮೇರಿಕೆಯಲ್ಲಿ ಎರಡು ದೊಡ್ಡ ರಾಜಕೀಯ ಪಕ್ಷಗಳಿವೆ: ರಿಪಬ್ಲಿಕನ್‌ರು; ಡೆಮಾಕ್ರಾಟ್‌ರು. ಎಂದರೆ ಸಮಾಜ ಸಂರಕ್ಷಕರು; ಜನತಾಜನಾರ್ದನರು. ಅಧ್ಯಕ್ಷಪದವನ್ನು ಪಡೆದ ಪಕ್ಷವು ಮುಂಬರುವ ಆಯ್ಕೆಯಲ್ಲಿ ಸೋಲುವ ಸಂಭವವಿಲ್ಲದಿಲ್ಲ. ಹೀಗೊಮ್ಮೆ ಹಿಂದೆ ಸಂಭವಿಸಿದ ಉದಾಹರಣೆಯಿದೆ. ವಿಲ್ಸನ್‌ರು ಅಧ್ಯಕ್ಷರಿದ್ದರು. ವಿಲ್ಸನ್‌ರು ಜನತಾಜನಾರ್ದನ ಪಕ್ಷದವರು. ೧೯೧೮ರಲ್ಲಿ ವಿಲ್ಸನ್‌ರ ಆಯ್ಕೆಯಾದಾಗ, ಆ ಪಕ್ಷವೆ ಬಹುಮತದಲ್ಲಿತ್ತು. ೧೯೨೦ ರಲ್ಲಿ ಇವರ ಪಕ್ಷವು ಬಹುಮತ

ವನ್ನು ಕಳೆದುಕೊಂಡಿತು. ಅಧ್ಯಕ್ಷನ ಮಾನ ಕಡಿಮೆಯಾಯಿತು. ಮಾನ ಕಡಿಮೆಯಾದರೇನು—ಹೋದರೇನು ? ನಾಲ್ಕು ವರುಷದ ಅವಧಿ ಮುಗಿವ ವರೆಗೆ ಅವನು ತನ್ನ ಆಸನವನ್ನು ಬಿಡಲಾರ—ಅವನನ್ನು ಕಟ್ಟಿಹಾಕಿದಂತೆಯೆ ! ಅಲ್ಲಿಂದ ಏಳಲೂ ಆರ ; ಅಲ್ಲಿ ಉಳಿಯಲೂ ಆರ.

ಆದೊಂದು ವೋಜು : ವಿಲ್ಸನ್‌ನು ಗಿ.ಗಿ ರಲ್ಲಿ ಶಾಂತಿ ಸ್ಥಾಪನೆಗೆಂದು ಯುರೋಪಕ್ಕೆ ಬಂದ; ಯುರೋಪಿಯನರು ಅವನನ್ನು ಶಾಂತಿದೂತನೆಂದು ಗೌರವಿಸಿದರು. ಹೊರಗೆ ಸನ್ಮಾನ ವಾಯಿತು. ಮನೆಯಲ್ಲಿ ಮಾತ್ರ ಮುನಿಸು ತಲೆದೋರಿತು. ಇವನ ಪಕ್ಷ ಬಹುಮತದಲ್ಲಿದ್ದಿಲ್ಲ. ಅದಕ್ಕೆಂದೇ ಅವನು ಯುರೋಪಿನಲ್ಲಿ ಮಾಡಿದ ವರ್ಸೇಲಿನ ಒಪ್ಪಂದಕ್ಕೆ ಅಮೇರಿಕೆಯವರ ಒಪ್ಪಿಗೆ ಇರಲಿಲ್ಲ. ಅಮೇರಿಕೆಯ ಅಧ್ಯಕ್ಷನು ತನ್ನ ಸೊದರಿನ ಎರಡು ವರುಷಗಳಲ್ಲಿ ಅತ್ಯಂತ ಬಲಿಷ್ಠನಾಗಿದ್ದರೂ, ಮುಂದಿನ ಎರಡು ವರುಷಗಳಲ್ಲಿ ಅವನಷ್ಟು ದುರ್ಬಲನು ಅವನೇ ಆಗಬಹುದು.

ಅಮೇರಿಕೆಯದು 'ಸಂಯುಕ್ತ ರಾಜ್ಯಘಟನೆ'. ಮಧ್ಯವರ್ತಿ ಸರಕಾರದಲ್ಲಿ – ಪ್ರಾದೇಶಿಕ ಸರಕಾರದಲ್ಲಿ—ಅಧಿಕಾರವು ವಿಭಾಗ ಗೊಂಡಿರುತ್ತದೆ. ಅವರವರ ಅಧಿಕಾರವ್ಯಾಪ್ತಿಯನ್ನು ಘಟನೆಯು ಹೇಳುವುದು. ಈ ಅಧಿಕಾರವನ್ನು ಸಾಮಾನ್ಯ ಕಟ್ಟಳೆಗಳಿಂದ ಅದಲು ಬದಲು ಮಾಡಲು ಬರುವುದಿಲ್ಲ. ಘಟನೆಯ ವಿರುದ್ಧವಾದ ಕಟ್ಟಳೆಗಳೆಲ್ಲ ನಿರ್ಜೀವವಾದುವು. ಘಟನೆಯನ್ನೆ ಮೊದಲು ಬದಲು ಮಾಡಬೇಕು. ಬದಲಾವಣೆಯ ಸೂಚನೆ ತರುವುದೇನು ಸುಲಭವಲ್ಲ. ಅದು ಕಾಂಗ್ರೆಸಿನ ಕ್ಷೇ ದಷ್ಟು ಜನರಿಂದ ಸೂಚಿತವಾಗಬೇಕು. ಕ್ಷೆ ರಾಜ್ಯಾಂಗಗಳ ಸಮ್ಮತಿ ಪಡೆಯಬೇಕು. ಅದು ಘಟನೆಯ ಅಳವಿಗೆ ಅಸಮ್ಮತವಲ್ಲವೆಂದು ನ್ಯಾಯಾಧೀಶರು ನಿರ್ಣಯಿಸ ಬೇಕು. ವಿಚಾರದಲ್ಲಿ ಕಾಂಗ್ರೆಸ್ಸು ನಿಯಮಿಸಿದ ಅಧಿಕಾರಿಗಳಾಗಿ ದ್ದರೂ, ಆಚಾರದಲ್ಲಿ ಕೊನೆಯ ನಿರ್ಣಯಾಧಿಕಾರ ನ್ಯಾಯಾಧೀಶರ ಕಡೆಗೇ ಇರುವುದು. ೫ ಮಂದಿ ನ್ಯಾಯಾಧೀಶರು ಸೇರಿ, ಒಂದು ಕಟ್ಟಳೆಯನ್ನು ಸಹಜವಾಗಿ ಕಿತ್ತೊಗೆಯ ಬಲ್ಲರು.

ಇಂದು ರೂಜವೆಲ್ಟ್‌ನು ಕನಸಿನಲ್ಲಿಯೂ ಎಣಿಸದಷ್ಟು ಅಧಿಕಾರ ವನ್ನು ಪಡೆದಿದ್ದಾನೆ; ಆದರೆ ಜನತೆಯ ಅಭಿಪ್ರಾಯದ ಮೂಲಕ ಅವನು ತನ್ನ ಸ್ಥಾನವನ್ನು ಪಡೆದಿದ್ದಾನೆ. ಮೂರನೆಯ ಸಲ ಅವನೇ ಅಧ್ಯಕ್ಷನಾಗುವುದೆಂದರೆ ಹಿಂದಣ ಕಾಲದಲ್ಲಿ ಹಿಡಿಯದ ವಿಷಯವಾಗಿತ್ತು. ಆದರೆ ಇಂದಿನ ಭಯಾನಕ ಸ್ಥಿತಿಯಲ್ಲಿ ರೂಜವೆಲ್ಟನೇ ಯೋಗ್ಯಪೂರ್ಣದರ್ಶಿಯೆಂದು ಅಮೇರಿಕೆಯವರು ತಿಳಿದಿರುವುದರಿಂದ ಅವನನ್ನೆ ಆರಿಸಿದ್ದಾರೆ. ಗಿ೯೩೨ ರಲ್ಲಿ ಮೊದಲು ಆಯ್ಕೆಯಾಯಿತು ರೂಜವೆಲ್ಟನದು. ಇವನ ನೀತಿಯು ಸಮಂಜಸ ವಿದ್ದುದರಿಂದ, ಪ್ರತಿಪಕ್ಷದ ಜನರೂ ಇವನ ನೀತಿಗೆ ಕೈಗೊಟ್ಟರು. ಹೀಗಾಗಿ ಗಿ೯೩೬ ರಲ್ಲಿಯೂ ಅವನ ಸ್ಥಾನ ಭದ್ರವಾಯಿತು. ಕಾಂಗ್ರೆಸ್ಸು ಕೈಗೊಡುವಾಗ ಅಧ್ಯಕ್ಷನು ಏನನ್ನೂ ಮಾಡಬಲ್ಲ. ಆದರ ಕೈ ದೂರವಾದಾಗ ಅವನ ಕೈ ಕಟ್ಟಿದಂತೆ—ಏನನೂ ಮಾಡ ಲರಿಯನು. ಆದರೆ ರೂಜವೆಲ್ಟರ ಸ್ಥಿತಿಯೆ ಬೇರೆ. ಅವಧಿ ಮುಗಿ ದಿಲ್ಲವೆಂದು ಅವನು ಅಲ್ಲಿ ಇದ್ದಾನೆಂದಲ್ಲ ; ಅವಧಿ ಮುಗಿಯಿತು, ಘಟನೆಯು ಸಾಕೆಂದಿತು, ಆದರೆ ಜನತೆ ಬೇಕೆಂದಿತು ; ಕಾಂಗ್ರೆಸ್ಸು ಕೈಗೊಟ್ಟಿತು. ರೂಜವೆಲ್ಟರು ಮೂರನೆಯ ಸಲ ಮುಂದೆ ಬಂದರು; ಅಧ್ಯಕ್ಷಪದವಿಗೇರಿದರು. ಇಂದು ಜಗತ್ತಿನ ಯುದ್ಧದಲ್ಲಿ ತೂಕ-ಹಿಡಿಯುವ ಕಾರ್ಯವನ್ನು ಅವರೇ ಮಾಡುತ್ತಿದ್ದಾರೆ. ಇದೆಲ್ಲವೂ ಅವರ ಶಕ್ತಿಯಾದರೂ, ಅವರಿಗೆ ಸುಖವು ಸಿಕ್ಕುದು ಜನತೆಯಿಂದಲೆ. ಜನತೆಯ ನೆರವಿನ ಶಕ್ತಿ ಎಣಿಸಲಸಾಧ್ಯವಾದುದು !

(೬೦೨ನೇ ಪುಟದಿಂದ ಮುಂದುವರಿದುದು)

ಇಂಡಿಯ ಪದದ ಅರ್ಥ ಹೀಗೆ. ಅ-ಖಿಲಾಪತ- (ಎಂದರೆ ಖಿಲಾಪತದ ಸಂಬಂಧವಿಲ್ಲದ) ಹಿಂದುಸ್ತಾನವೆ ಸೇವಾಗ್ರಾಮ=ಅ. ಹಿಂ. ಸೆ. 'ಥೂ-ಛೆ-ಅಬ್ಬ' ಎಂಬ ಪಾಣಿನಿಯ ಸೂತ್ರಕ್ಕನುಸರಿಸಿ ಈ ಸಮಾಸವನ್ನು ಅರಿತು ಕೊಳ್ಳಬೇಕಾಗಿ ವಾಜಕರಿಗೆ-ಛೆ ! ಹೆಚ್ಚಿಗೆ ಹೇಳುವುದೇನು ?

ತಾರೀಕು ತಪ್ಪಿತು !

ಈ ಸಲ 'ಜಯಂತಿ' ಯ ಸಂಚಿಕೆ ತಡವಾದುದಕ್ಕೆ ಪ್ರಕಾಶಕರ ವತಿಯಿಂದ ಮಂಗರಾಯನು ಕ್ಷಮೆ ಬೇಡುವವನಿದ್ದಾನೆ. ತಡವಾದು ದರ ಕಾರಣವೂ ಮನೋರಂಜಕವಾಗಿದೆ. ಒಂದಾನೊಂದು ದಿವಸ ಮುದ್ರಣಾಲಯದಲ್ಲಿ ಒಂದು ಭಾಷಣ ಪ್ರಸಿದ್ಧಿಗಾಗಿ ಬಂದಿತು. ಅದನ್ನು ನೋಡಿದೊಡನೆಯೆ ಕೆಲಸಗಾರರೆಲ್ಲ ರಜೆ ಬೇಕೆಂದು ಹಟ ತೊಟ್ಟರು. ಇದೇನು ಸೋಜಿಗ—ಎನಬೇಡಿರಿ. ಆ ಭಾಷಣವನ್ನು ನೋಡಿದೊಡನೆಯೆ ಹೋಳೀ ಹುಣ್ಣಿಮೆ ಆಗಿರಲೇಬೇಕೆಂದೂ, ತಮಗೆ ಅಂದು ಕಣ್ಣು ತಪ್ಪಿಸಿ ರಜೆ ಕೊಟ್ಟಲ್ಲವೆಂದೂ ಕೆಲಸಗಾರರೆ ತಕರಾರು. ಎಲ್ಲರೂ ಪಂಚಾಯಿತಿ (Arbitration) ಗಾಗಿ ಮಂಗರಾಯನ ಕಡೆಗೆ ಬಂದರು. ಮಂಗರಾಯನು ಎಲ್ಲವನ್ನೂ ಕೇಳಿ ಹೀಗೆ ನಿರ್ಣಯ ಕೊಟ್ಟನು :—

'ಈ ಭಾಷಣವು ಮಿರಾಟಯಲ್ಲಿ ಬರೆದದ್ದು, ಅರ್ಥಾತ್ ಟಿಳಕ ಪಂಚಾಂಗವನ್ನು ಪಾ ಲಿ ಸಿ ಬರೆದದ್ದು. ಟಿಳಕ ಪಂಚಾಂಗದಂತೆ ಹೋಳಿಹುಣ್ಣಿಮೆ ಆಗಿರಬಹುದೆಂದೂ ಆ ದ ಕಾ ಗಿ, ರಾಡಿಯಿಂದ ಕೈಗಳನ್ನು ಮೆತ್ತಿಕೊಂಡು—ಅಥವಾ ಈ ಭಾಷಣವೆಂದರೆ ಬಾಲಕ್ಕೆ ಕಟ್ಟಿದ ಖಾಲಿ ಡಬ್ಬಿಯಾಗಿರಬಹುದು. ಅದ್ದರಿಂದ ಕನ್ನಡಿಗರು ಈ ತಪ್ಪುಗುಳಿನೆಯನ್ನು ನುಂಗಬಾರದು, ಅರ್ಥಾತ್ ಕುಂದಗೋಳದ ಕಾಮಣ್ಣನ ಚಿತೆಯಲ್ಲಿ ಈ ಭಾಷಣವನ್ನು ಬಿಸಾಡಬೇಕು.

(೬೦ನೆಯ ಪುಟದಿಂದ ಮುಂದುವರಿದುದು)

ಲಕ್ಷ್ಯದಲ್ಲಿ ಇರಿಸಿಕೊಂಡಿರಬೇಕು: ಯಾವುದೆ ಆಂಚೆಯ ಕಚೇರಿಯಲ್ಲಿ ಅಲ್ಲಿಯ ಕೆಲಸಗಾರರು ಕನ್ನಡವಲ್ಲದ ನಾಮರ್ಮಗಳನ್ನು ಚಾಚಲು ಬಂದಾಗ 'ನನಗೆ ಕನ್ನಡ ಫಾರ್ಮುಗಳನ್ನೇ ಕೊಡಿರಿ' ಎಂದು ಗಟ್ಟಿಯಾಗಿ ಕೇಳಿ, ಕನ್ನಡ ಫಾರ್ಮನ್ನೇ ಪಡೆದುಕೊಳ್ಳಬೇಕು. ಇಂತಹ ಗಟ್ಟಿತನ ಕನ್ನಡಿಗರಲ್ಲಿ ಇರದುದರಿಂದಲೆ ಧಾರವಾಡ, ಹುಬ್ಬಳ್ಳಿ, ಗದಗು, ಬಾಗಿಲುಕೋಟೆ ಮೊದಲಾದ ಕನ್ನಡ ಕೇಂದ್ರ-ನಗರಗಳ ಆಂಚೆಯ ಆಫೀಸುಗಳಲ್ಲಿಯೂ ಸಾಕಷ್ಟು ಕನ್ನಡ ಫಾರ್ಮುಗಳನ್ನು ತರಿಸಿ ಇರಿಸಿರುವುದಿಲ್ಲ. ಯಾರಾದರೊಬ್ಬರು ತಮಗೆ ಕನ್ನಡ ಫಾರ್ಮು ಬೇಕೆಂದು ಹಟದಿಂದ ಕೇಳಿದರೆ 'ಎಲ್ಲಾ ಕೇರಿ ಹೋಗ್ಯಾವ್ರೀ, ಎಲ್ಲೀದು ಕೊಡತಾರ?' ಎಂದು ಅಸಂಭಾವಿತ ರೀತಿಯಲ್ಲಿ ಜನರ ಮೇಲೆ ರೇಗುವ ಪೋಸ್ಟ್ ಮಾಸ್ಟರೂ ಹಲವು ಕಡೆಗೆ ಇರುವರು. ಧಾರವಾಡ-ಹುಬ್ಬಳ್ಳಿಗಳಲ್ಲಿ ಕೂಡ, ಹೋದಾಗಲೆಲ್ಲ ಕನ್ನಡ ಫಾರ್ಮುಗಳು ಸಿಕ್ಕೇಸಿಕ್ಕುವುವೆಂಬ ಭರವಸೆಯಿಲ್ಲ. ಅಲ್ಲಲ್ಲಿಯ ಆಂಚೆಯ ಕಚೇರಿಗಳಲ್ಲಿರುವ ಪರಭಾಷೆಯ ಕೆಲಸಗಾರರ ದುರಭಿಮಾನ— ಅಧಿಕಪ್ರಸಂಗಗಳ ಮೂಲಕ, ಕನ್ನಡಿಗರಿಗೆಲ್ಲ ಅನನುಕೂಲಗಳನ್ನು ಅನುಭವಿಸುವ ಸಂದರ್ಭ ದಿನದಿನವೂ ಬರುತ್ತಲಿದೆ. ಹೀಗಾಗದಂತೆ ಮಾಡಬೇಕಾದುದು ಕನ್ನಡಿಗರ ಕೈಯಲ್ಲಿದ್ದರೂ, ಅವರಲ್ಲಿ ಮನೆಮಾಡಿಕೊಂಡಿರುವ ಔದಾಸೀನ್ಯಭಾವ ಅದನ್ನು ಮಾಡಗೊಡಿಸದಾಗಿದೆ. ಕನ್ನಡಿಗರೆ, ನೆರೆಹೊರೆಯ ಪ್ರಾಂತಗಳವರ ದೇಶಾಭಿಮಾನ-ಭಾಷಾಭಿಮಾನಗಳನ್ನು ನೋಡಿರಿ; ಅವರಲ್ಲಿಯ ಸಹಕಾರ-ಸಂಘಟನೆಗಳನ್ನು ನೋಡಿರಿ. ಸಣ್ಣಮಾತೆಂದು ದುರ್ಲಕ್ಷಿಸುತ್ತ ಹೋಗುವ ಚಟ ಬಿದ್ದವರಿಗೆ ಎಲ್ಲ ಮಾತುಗಳೂ ಸಣ್ಣವಾಗಿ ತೋರಿ, ಕರ್ತವ್ಯಬುದ್ಧಿಯೆ ಹಾಳಾಗಿ ಹೋಗುತ್ತದೆ. ನಿಮ್ಮ ಕರ್ತವ್ಯಚ್ಯುತಿಯ ಫಾತಕದ ಫಲವನ್ನು ನಿಮ್ಮ ಪೀಳಿಗೆ ಅನುಭವಿಸಬೇಕಾಗಿ ಬಂದಾಗ, ಅವರಿಂದ ದಿನದಿನವೂ ನೀವು ಶಾಪಸಹಸ್ರಗಳನ್ನು ಪಡೆಯಬೇಕಾಗುವುದೆಂಬುದನ್ನು ಮರೆಯಬೇಡಿರಿ. ಸಕಾಲದಲ್ಲಿ ಜಾಗ್ರತರಾಗಿ, ಮಾಡಬೇಕಾದ ಮಾಡಿಸಿಕೊಳ್ಳಬೇಕಾದ ಯಾವ ಕೆಲಸವನ್ನೂ ಮಾಡಿರಿ, ಮಾಡಿಸಿಕೊಳ್ಳಿರಿ! ತಮಗಿರುವ ಹಕ್ಕನ್ನು ಸಲ್ಲಿಸಿಕೊಳ್ಳುವ ಚಟವು ಯಾವಾಗಲೂ ಇರಬೇಕು. ಹಕ್ಕುಗಳಿಗೆ ಧಕ್ಕೆ ಬರುವ ಸಂದರ್ಭವಿದ್ದರೆ, ಪ್ರತಿಪಕ್ಷದೊಂದಿಗೆ ಕಾದಾಡುವುದು ಜೀವಂತ ಮನುಷ್ಯರ ಲಕ್ಷಣ. 'ಅಯ್ಯೊ ಸೈನ್‌ಬೋರ್ಡಂತೆ, ಕನ್ನಡವಂತೆ!' 'ಹಿ ಹಿ..! ಆಂಚೆಯ ಫಾರ್ಮುಗಳಂತೆ, ಕನ್ನಡವಂತೆ!' ಎಂದು ಉಪೇಕ್ಷೆಯ ನಗೆಯನ್ನು ನಕ್ಕುಬಿಡುವವರು, ನಿಜವಾಗಿಯೂ ಕನ್ನಡದ ದ್ರೋಹಿಗಳು; ಕನ್ನಡ ನಾಡಿನ ಹಿತಶತ್ರುಗಳು. ಆಂಚೆಯ ಖಾತೆಯಲ್ಲಿ ಎಲ್ಲ ಕಡೆಗೂ ಕನ್ನಡ ಭಾಷೆಗೆ ಉಚಿತಸ್ಥಾನ ಸಿಕ್ಕುವಂತೆ ಮಾಡಬೇಕಾದುದು ಕನ್ನಡಿಗರೆ, ನಿಮ್ಮ ಕೈಯಲ್ಲಿದೆ. ಕಂದೆರೆದು ನೋಡಿ ಕಾರ್ಯೋನ್ಮುಖರಾಗಬೇಕು ಇಷ್ಟೆ!

ಬಿನ್ನಹವೊಂದು

ಜಯಂತಿಯನ್ನು ವ್ಹಿ. ಪಿ.ಯಿಂದ ಕಳುಹಿಸಬೇಕೆಂದು ತಾವಾಗಿಯೆ ಪತ್ರಬರೆದ ಕೆಲವು ಜನ ಮಹನೀಯರ ಕಡೆಗೆ ಹೋದ ವ್ಹಿ. ಪಿ.ಗಳು ಹಾಗೆಯೆ ಮರಳಿ ಬಂದಿವೆ. ಯಾರ ತಪ್ಪಿನಿಂದ ಹೀಗಾಗುವುದೋ ಕಾಣೆವು. 'ಮಾಲಕರು ಬೇಡವೆನ್ನುತ್ತಾರೆ' ಎಂದು ಆಂಚೆಯಾಳಿನ ಬರಹ ಮೇಲಿದ್ದುದನ್ನು ನೋಡಿದರೆ, ಪತ್ರಬರೆದು ತರಿಸಿಕೊಂಡವರದೇ ತಪ್ಪೆಂದು ಯಾರೂ ಹೇಳುವಂತಿದೆ. ಯಾರಿಂದಲೆ ತಪ್ಪು ನಡೆದರೂ ಅದರ ದುಷ್ಪರಿಣಾಮವನ್ನು ಪಾಪ, ಬಡ ಜಯಂತಿ ಅನುಭವಿಸಬೇಕಾಗಿ ಬರುತ್ತದೆ. ಒಂದು ವ್ಹಿ. ಪಿ. ಮರಳಿ ಬಂದರೆ, ವ್ಯರ್ಥವಾಗಿ ೩-೪ ಆಣೆ ಹಾಳು. ಯುದ್ಧದ ಮೂಲಕ ಮೊದಲೆ ಬಿಕ್ಕಟ್ಟಿನಲ್ಲಿ ಬಿದ್ದಿರುವ ಜಯಂತಿಗೆ, ಇಂತಹ ಮಹನೀಯರ ನೆರವಷ್ಟು ದೊರೆತರೆ ಆಯಿತು. 'ಯು' ಜೋಟಿಗೆ ಸಿಕ್ಕ ಹಡಗಿನಂತೆ ಅದರ ಸ್ಥಿತಿ ಯಾಗದೆ ಹೋಗದೆಂಬುದನ್ನು ಎಲ್ಲರೂ ಲಕ್ಷ್ಯದಲ್ಲಿ ಇಡಬೇಕು. ಬೇಡಿಕೆ ಕಳುಹಿ, ಬಂದಾಗ ಮರಳಿಬಿಡುವ ಈ ಆಟವನ್ನಾಡುವವರಿಗೆ ಯಾವ ಆನಂದವಿದೆಯೊ ಏನೊ!

—ಸಂಪಾದಕರು.

ಇಟಲಿಯ ಪರಿಸ್ಥಿತಿ ವಿಶ್ಲೇಷಣೆ

(ಜಯಂತಿ ಈಗ ೨೨ ತಿಂಗಳಿಗೆ ಮೊದಲೇ ಸಾರಿದ ಭವಿಷ್ಯ)

"ಆದರೂ ಇಟಲಿಯು ಇಷ್ಟಕ್ಕಾಗಿ ಬಲಾಢ್ಯರಾಷ್ಟ್ರವೆಂದಾಗಲಿ; ಮಿಕ್ಕ ಬಲಾಢ್ಯರಾಷ್ಟ್ರಗಳನ್ನು ಸದೆಬಡೆಯುವಷ್ಟು ಶಕ್ತಿಯುಳ್ಳದ್ದೆಂದಾಗಲಿ, ಸಮರಾಂಗಣದಲ್ಲಿ ಸಡ್ಡುಹೊಡೆದು ಸಾಯುವವರೆಗೆ ಹೋರಾಡುವಂತಹ ಶೂರ ರಾಷ್ಟ್ರವೆಂದಾಗಲಿ ಒಪ್ಪಲು, ಇತಿಹಾಸವನ್ನರಿತವನ ಮನಸ್ಸಾಗದು....ಕೈಕಾಲು ಹರಿಬಿಟ್ಟು ಕುಳಿತಲ್ಲಿಯೆ ದೊರೆತುದರಲ್ಲಿ ಸುಖವನ್ನು ಕಾಣುವ ಆಲಸ್ಯವಿಲಾಸಿಗಳಾದ ಇಟಾಲಿಯನರಿಗೆ ಮುಸೊಲಿನಿಯ ಹೇಡಿತನದಲ್ಲಿ ಯಾವ ದೋಷವೂ ಕಾಣಲಿಲ್ಲ!"

—ಚಾಣಿಯ ಚಾಣಕ್ಯ-ಜೂನ್ ೧೯೪೦.

ಪ್ರಪಂಚ-ಪ್ರವಾಹ

ಅನುಭವದ ಅಭ್ಯೈತ

(ಒಂದು ದೃಶ್ಯ)*

ಶ್ರೀರಂಗ

(೬-೧೦-೧೯೪೧)

— ಪಾತ್ರಗಳು —

ತೆರೆಯ ಮುಂದೆ		ತೆರೆಯ ಹಿಂದೆ
ಈಕೆಯ ಗಂಡ	★	ಈಕೆ
ಆತನ ಹೆಂಡತಿ		ಆತ

ರಂಗಸಂದರ್ಭ

[ಈ ದೃಶ್ಯದಲ್ಲಿ, ರಂಗಸ್ಥಲದ ಮೇಲೆ ಏಕಕಾಲಕ್ಕೆ ಎರಡು ಬೇರೆ ಬೇರೆ ಮನೆಗಳ ಭಾಗಗಳನ್ನು ಕಾಣಿಸಿದೆ. (ಪ್ರೇಕ್ಷಕರ) ಎಡಬದಿಯ ಅರ್ಧ ಒಂದು ಮನೆ, ಬಲಬದಿಯ ಅರ್ಧ ಮತ್ತೊಂದು ಮನೆ. ಎಡಬದಿಯ ಅರ್ಧದಲ್ಲಿ ಒಂದು ಮೇಜು, ಅದರ ಹಿಂದೆ ಒಂದು ಕುರ್ಚಿ ಇದೆ. ಮೇಜಿನ ಮೇಲೆ ಪುಸ್ತಕಗಳೂ ಕಾಗದಗಳೂ ಹರಡಿ ಬಿದ್ದಿವೆ. ಕುರ್ಚಿಯ ಹಿಂಬದಿಗೆ ಒಂದು ಕೋಟನ್ನು ತೂಗಬಿಟ್ಟಿದೆ. ಎಡದ ಕೊನೆಗೆ ಒಂದು ಗೋಡೆ, ಅದರಲ್ಲಿ ಒಂದು ಬಾಗಿಲು. ಈ ಮನೆ ಈಕೆಯ ಗಂಡನದು. ಈಕೆಯ ಗಂಡನು ಶರ್ಟನ್ನು ತೊಟ್ಟು, ಹಣೆಗೆ ಕನ್ನಡಕವನ್ನೇರಿಸಿ, ಅತ್ತಿಂದಿತ್ತ ಏನನ್ನೋ ಹುಡುಕುತ್ತ ಚಡಪಡಿಸುತ್ತಿದ್ದಾನೆ. ಎಡದ ಬಾಗಿಲಿನಿಂದ ಹೋಗುವ ಕೋಣೆಯಲ್ಲಿ ಇವನ ಹೆಂಡತಿ—ಈಕೆ—ಜ್ವರದಿಂದ ಹಾಸಿಗೆ ಹಿಡಿದಿದ್ದಾಳೆ, ಇವಳು ಈ ದೃಶ್ಯದಲ್ಲಿ ರಂಗಸ್ಥಲಕ್ಕೆ ಬರುವುದೆ ಇಲ್ಲ. ಇನ್ನು ಬಲದ ಅರ್ಧ ಆತನ ಮನೆ. ಬಲದ ಕೊನೆಗೆ ಒಂದು ಗೋಡೆ, ಅದರಲ್ಲಿ ಒಂದು ಬಾಗಿಲು, ಆ ಬಾಗಿಲಿನಿಂದ ಒಳಗೆ ಹೋಗುವ ಕೋಣೆಯಲ್ಲಿ ಆತ ಜ್ವರದಿಂದ ಹಾಸಿಗೆ ಹಿಡಿದಿದ್ದಾನೆ. ಈ ಪಾತ್ರವೂ ರಂಗಸ್ಥಲದ ಮೇಲೆ ಕಾಲಿಡುವುದಿಲ್ಲ. ಸದ್ಯಕ್ಕೆ ಬಲದ ಅರ್ಧದಲ್ಲಿ ಆತನ ಹೆಂಡತಿ ಕನ್ನಡಿಯನ್ನು ಮುಂದಿಟ್ಟುಕೊಂಡು ಹೆರಳು ಹಾಕಿಕೊಳ್ಳುತ್ತಿದ್ದಾಳೆ. ಎದುರಿನ ಗೋಡೆಗೆ ಧಾನ್ಯದ ಪಾತ್ರೆಗಳಿವೆ; ಒಂದು ಮೂಲೆಯಲ್ಲಿ ನೀರಿನ ಪಾತ್ರೆಗಳಿವೆ; ಇನ್ನೊಂದೆಡೆ ಕಾಯಿ-ಪಲ್ಲೆ-ಉಳಿಗೆ ಮೊದಲಾದ ವಸ್ತುಗಳಿವೆ.

ಎರಡು ಬೇರೆ ಮನೆಗಳ ಭಾಗಗಳನ್ನು ಕಾಣಿಸಿದ್ದರಿಂದ, ರಂಗಸ್ಥಲದ ಮೇಲಿನ ಎರಡೂ ಪಾತ್ರಗಳು—ಈಕೆಯ ಗಂಡ ಮತ್ತು ಆತನ ಹೆಂಡತಿ—ಪರಸ್ಪರರಿಂದ ಮುಖ ತಿರುಗಿಸಿಯೆ ಮಾತನಾಡಬೇಕು. ತಪ್ಪಿ ಕೂಡ ಒಬ್ಬರನ್ನೊಬ್ಬರು ನೋಡುವಂತಿಲ್ಲ. ಈಕೆಯ ಗಂಡ ತನ್ನ ಮನೆಯೊಳಗೆ ಮಲಗಿದ ಈಕೆಯ ಕೂಡ, ಆತನ ಹೆಂಡತಿ ತಮ್ಮ ಮನೆಯೊಳಗೆ ಮಲಗಿದ ಆತನ ಕೂಡ—ಹೀಗೆ ಸಂಭಾಷಣವನ್ನು ನಡೆಯಿಸಬೇಕು.]

ಈಕೆಯ ಗಂಡ:— (ಅತ್ತಿತ್ತ ಸುತ್ತಾಡುತ್ತ, ಏನನ್ನೊ ಹುಡುಕಿ, ಹುಬ್ಬುಗಂಟಿನಿಂದ ಬಾಗಿಲಿನ ಕಡೆ ನೋಡಿ) ನನ್ನ ಕೋಟು ಎಲ್ಲಿ ಇದೆ ಅಂದೆ? .. ಆಂ? .. ನಿನಗೆ ಜ್ವರ ಬಂದಿದೆ, ನನಗೆ ಗೊತ್ತಿದೆ, ಒಣೆಯವರಿಗೂ ಗೊತ್ತಾಗಿದೆ! .. ಇನ್ನು ಯಾಕೆ ನೆರಳುವೆ? .. ಏನಂದೆ? ನೆರಳೋದಿಲ್ಲಾ? ಮಾತಾಡತೀಯಾ?..ಅಂದರೆ ಒಂದಿಷ್ಟು ಗಟ್ಟಿಸಿ ಮಾತಾಡಲ್ಲ!..ಥೂ!.. (ಎಸುತ್ತ ಮತ್ತೆ ಸುತ್ತಾಡುವನು.)

ಆತನ ಹೆಂಡತಿ:— (ಹೆರಳು ಹಾಕಿಕೊಳ್ಳುತ್ತಿರುವಾಗ ಇದಿರಿನ ಕೋಣೆಯ ಕಡೆ ನೋಡಿ) ಅಷ್ಟು ಯಾಕ ಗಟ್ಟಿಸಿ ಮಾತಾಡತೀರಿ ಅಂದೆ. ಕೇಳಿಸಿತು ನನಗ ನೀವು ಹೇಳೋದು..ಮೈಯೊಳಗ ಜ್ವರ ಅವೆ, ಗಟ್ಟಿಸಿ ಮಾತಾಡಬೇಡಿರೀ— ಅಂತೀನಿ..ಇನ್ನೇನು

---

* ಈ ದೃಶ್ಯಕ್ಕೆ ಸಂಬಂಧಪಟ್ಟ ಎಲ್ಲ ಅಧಿಕಾರಗಳು ಶ್ರೀರಂಗರ ಕೈಸೇರಿವೆ.

ಣಿಯವರಿಗೆಲ್ಲಾ ನಿಮಗ ಜ್ವರ ... ತೋರಿಸೋದೇನು, ಗಟ್ಟಿ-ಗಟ್ಟಿಸಿ ಬದರಿ?

ಈಕೆಯ ಗಂಡ:— (ಮತ್ತೆ ಹತಾಶನಾಗಿ) ಥೂ!..ನನ್ಮ ಮನೆ ಅವ್ಯವಸ್ಥೆಯ ಮಠ.. (ಮತ್ತೆ ಕೋಣೆಯ ಕಡೆಗೆ ನೋಡಿ) ನೆನಪಾಯಿತೇನು ನಾ ಕೋಟ ಎಲ್ಲಿ ಇಟ್ಟೀನಿ ಅಂತ?.. (ಹತ್ತಿರ ಬಂದು) ಏನಂದೆ?..ಕಾಣಿಸದಿದ್ದರೆ ಕಣ್ಣಿಗೆ ಕನ್ನಡಕ ಹಾಕಿಕೊಂಡು ನೋಡಲಿಯಾ?..(ತಿರಸ್ಕಾರದಿಂದ) ಹೆಂಗಸಿಗೆ ಬುದ್ಧಿ ಇಲ್ಲಾ ಅನ್ನೋದು ಇದಕ್ಕೇ!..ಆ ಕನ್ನಡಕಾನೇ ನನ್ನ ಕೋಟಿನ ಕಿಸೆಯೊಳಗೆ ಇದೆ, ಅದಕಾಗಿಯೆ ಕೋಟ ಹುಡುಕೋದು ನಾನು— (ಎನುತ್ತ ಮತ್ತೆ ಸುತ್ತಾಡುವನು).

ಆತನ ಹೆಂಡತಿ:— ಕೋಟ ತಕ್ಕೊಂಡು ಏನ್ಮಾಡತೀರಿ ಈಗ, ಸುಮ್ಮನೆ ಹೊತ್ತುಕೊಂಡು ಮಲಗೋದನ್ನು ಬಿಟ್ಟು?..ಜ್ವರ ಬಂದಾಗಾದರೂ ನಮ್ಮನ್ನಿಬ್ಬಾರದೂ ನಿಮ್ಮ ಗಂಡಸರ ಜೀವನ ಅಂದರೆ?.. (ಕೇಳಿದಂತೆ ಮಾಡಿ) ಏನಂದಿರಿ?.. ಅಯ್ಯೊ, ನಿಮ್ಮ ಕೋಟಿಗೆ ಯಾರು ಕೈಹಚ್ಚಲಿಕ್ಕೆ ಕೂತಾರೆ ಇಲ್ಲಿ— (ಒಟ್ಟನಿಂದ ಬಾಚಿಕೊಳ್ಳುವಳು).

ಈಕೆಯ ಗಂಡ:— (ಒಟ್ಟನಿಂದ ಬಾಗಿಲಿಗೆ ಬಂದು) ನಿನಗೆ ಎಷ್ಟು ಸಲ ಹೇಳಲ್ಲ ನನ್ನ ಕೋಟಿಗೆ ಕೈಹಚ್ಚಬೇಡ ಅಂತ?.. ಅವಸ್ತೇ ಇದ್ದಲ್ಲಿ ಇರೋದೇ ಇಲ್ಲ ಕೋಟು, ಒಂದು ದಿವಸಾ ದೂರ!.. (ಮತ್ತೆ ಅತ್ತಿತ್ತ ಹುಡುಕುತ್ತ) ಎಷ್ಟು ಹೊಡೆಯಿತೋ ಏನ್ಮಣ್ಣೋ! ಗಡಿಯಾರನೂ ಕೋಟಿನ ಕಿಸೆಯೊಳಗೇ—(ಎಂದು ಮೇಜಿನ ಮೇಲಿನ ಪುಸ್ತಕಗಳನ್ನು ಎತ್ತಾಡಿ ನೋಡುತ್ತಿರುವನು).

ಆತನ ಹೆಂಡತಿ:— (ಒಡುಕಿನಿಂದ) ನನಗೊತ್ತಿಲ್ಲ ನಿಮ್ಮ ಕಿಸೇದೊಳಗ ಗಡಿಯಾರ ಅದಕನೂ ಇಲ್ಲೊ?.. (ತಡೆದು ಕೇಳಿದಂತೆ ಮಾಡಿ) ಗಡಿಯಾರಕ್ಕ ಕೀಲೀ ಕೊಡೋದು ಏನವಸರೊ ಇವರಿಗೆ?.. (ಬೇಜಾರದ ದನಿಯಲ್ಲಿ) ಅಯ್ಯ! ನನ್ನ ಕೈ ಎಣ್ಣೆಣ್ಣೆ ಆಗೇದ; ನಾ ಹ್ಯಾಂಗ ಕೈಹಾಕಲಿ ನಿಂ ಕಿಸೇದೊಳಗ?..

ಈಕೆಯ ಗಂಡ:— (ಗಡಿಯಾರ ಪುಸ್ತಕಗಳ ಕೆಳಗೆ ಕಾಣಲು ಗೆದ್ದೆನೆಂಬಂತೆ ಬಾಗಿಲಿಗೆ ಬಂದು) ಏ!.. (ದರ್ಪದಿಂದ) ಕಿಸೇದೊಳಗಿನ ಗಡಿಯಾರ ಕಡೆಗೆ ಹ್ಯಾಗ್ಗೆ ಬಂದಿತು?.. (ಕೇಳುತ್ತ) ಏನೇನೇನೇನು?.. 'ಸಿಕ್ಕಿತೊ ಇಲ್ಲೊ' ಅಂದರೆ?.. ಸಿಗಲಿ, ಬಿಡಲಿ..ವ್ಯವಸ್ಥಾ ಮಹತ್ವದ್ದು..ಕಿಸೇದೊಳಗೆ ಇದ್ದುದ್ದು ಕಿಸೆದೊಳಗೇ ಇರಬೇಕಾಗಿತ್ತು? (ಗೋಳಿ ನೋಡಿ ಒಮ್ಮೆಲೆ) ಎಲೆಲೆ! ೯ ಗಂಟೆ ಆಯಿತಲ್ಲ?..ಡಾಕ್ಟರನ್ನಾದರೂ ನೋಡಿ ಬರಲಿಯಾ?.. (ಎಂದು ಗಡಿಯಾರಕ್ಕೆ ಕೀಲಿ ಕೊಡತೊಡಗುವನು).

ಆತನ ಹೆಂಡತಿ:— (ಹೆರಳು ಮುಗಿದು, ತುರುಬು ಕಟ್ಟಿ ಕೊಳ್ಳುತ್ತ) ಸಾಕ ತಗೀರಿ! ಅಷ್ಟು ಇಷ್ಟು ನೆಗಡಿ ಕೆಮ್ಮಿಗೆ ಡಾಕ್ಟರ್ ಯಾಕೊ!..ನನ್ಮ ನೆರೆಮನೀ ನಾಗಕ್ಕ ಒಂದು ಕಾಫೆ (ಕಷಾಯ) ಮೇಳಿಕೊಟ್ಟಾಳು—(ಎನುತ್ತ ಕನ್ನಡಿಯಲ್ಲಿ ತುರುಬು ಸರಿಯಾಗಿದೆಯೆ ಇಲ್ಲವೆ ನೋಡತೊಡಗುವಳು).

ಈಕೆಯ ಗಂಡ:— (ಸಿಡುಕುತ್ತಲೆ) ಸಾಕು ನಿನ್ನ ಕಾಫೆ!..ಏನಂದೆ?..ಡಾಕ್ಟರಿಗೆ ದುಡ್ಡು ಯಾರು ಕೊಡಬೇಕು?. ನಾ ಕೊಡತೀನಿ, ಮದಿವೀ ಮಾಡಿಕೊಂಡ ತಪ್ಪಿಗೆ!... ಒಂದಿಷ್ಟು ಜ್ವರ ಏನೊ, ಅದರ ಸಲುವಾಗಿ ಕಾಫೆ ಕುಡಿದು ಹಾಸಿಗೆ ಹಿಡಿಯೋದು ಎಷ್ಟು ದಿವಸ!..ಏನಂದೆ?..ಏನು— (ಎನುವಷ್ಟರಲ್ಲಿ ಒಂದೇ ಸವನೆ ಕೀಲಿ ಕೊಟ್ಟುದಕ್ಕೆ ಸ್ಪ್ರಿಂಗ್ ಚಟ್ ಎಂದು ಹರಿಯಲು) ಥೂ!.. ನಿನ್ನ ಜೋಡಿ ಮಾತಾಡತಾ ಗಡಿಯಾರ ಕೆಟ್ಟಿತು..! (ಎಂದು ಬಲವಾಗಿ ಅದನ್ನು ಅಲುಗಿಸುತ್ತ ಕವಿಯ ಹತ್ತಿರ ಆಗಿಂದಾಗ ಬಯ್ಯುತ್ತಿರುವನು).

ಆತನ ಹೆಂಡತಿ:— (ಎದ್ದು ಕೇಳಿ) ಅಯ್ಯೊಽ! ಸುಟ್ಟಿತು ನಿಮ್ಮ ಗಡಿಯಾರ! ಎಷ್ಟರೇ ಹೊಡೆದಿರಬೇಕು..ಇಂದೇನು ನಿಮಗ ಆಫೀಸಿಗೆ ಹೋಗೋದಿಲ್ಲಲಾ!..(ಕನ್ನಡಿಯನ್ನು ತೆಗೆದಿಡತೊಡಗುವಳು)

ಈಕೆಯ ಗಂಡ:— (ಚಡಪಡಿಸುತ್ತ) ಆಫೀಸಿಗೆ ತಡ ಆಗತಕದೊ–ಏನ್ಮಣ್ಣೊ?..ನಿನ್ನ ಜಡ್ಡು ಅಂದರೆ ನಮಗೇ ನೋಡು ಎಲ್ಲಾ ಗೋಳು!..ಗಡಿಯಾರ ಕೆಟ್ಟಿತು, ಕೋಟು ಸಿಗುವೊಲ್ಲದು, ಆಫೀಸಿನ ಗತಿ ಇಲ್ಲ– (ತಡೆದು, ಕೇಳಿ) ಏನಂದೆ? ಹುಂ! 'ಇವತ್ತೊಂದು ದಿವಸ ಆಫೀಸ್ ಬಿಟ್ಟರೆ ಆಗೋದಿಲ್ಲೇನು?' ಅಂತ!..

ಆತನ ಹೆಂಡತಿ:— (ಕನ್ನಡಿಯನ್ನು ನಿಡುವಾಗ ಒಮ್ಮೆಲೆ ಕೋಣೆಯ ಕಡೆ ನೋಡುತ್ತ) ಏನು? 'ಇವತ್ತೊಂದು ದಿವಸ ಅಡಿಗೆ ಬಿಟ್ಟರೆ ಆಗೋದಿಲ್ಲೇನು?' ಅಂತೀರಾ?..

ಈಕೆಯ ಗಂಡ:— ಏನಾದರೂ ಆಫೀಸಿನವರು ಕೇಳಬೇಕಲ್ಲ?

ಆತನ ಹೆಂಡತಿ:— ಏನಾದರೂ ಸುಟ್ಟ ಹೊಟ್ಟೆ ಒಂದು ಕೇಳಬೇಕಲ್ಲ?.. (ಕೇಳಿ) ಸಾಕು, ತಗೀರಿ! ಇವತ್ತೊಂದು ದಿವಸ ಆದರೂ ಊಟಾ ಬಿಡ್ಬಾರದೆ ನೀವು?.. ಹೊಟ್ಟೆ ಹಾರಾಗಿದ್ದರೆ ಜ್ವರ ತಂತಾನೇ ಇಳೀತಾವ.. (ಕಾಯಿಪಲ್ಲೆ ತಂದಿಟ್ಟುಕೊಂಡು ಅರಿಸುತ್ತ ಕುಳಿತುಕೊಂಡು) ಊಟಾನೆ ಬೇಕು, ಅಡಿಗೆ ಬ್ಯಾ ... ಗಂಡಸರ ಮಾತಂತೇ ಜೆಂದ!

ಈಕೆಯ ಗಂಡ:— ಏನಂದೆ?.. (ಮೂಗು ಏರಿಸಿ) ಹಃ.. ನನ್ನ ಊಟದ ಕಾಳಜಿ ಬೇಡ ನಿನಗೆ..ನಾನು ಅಲ್ಲಿಯೆ ಆಫೀಸಿನಲ್ಲಿ ಏನಾದರೂ ತರಿಸಿ ತಿಂತೀನಿ..ಏನು?..ಆಂ?.. 'ಮನೀವೊಳಗ ಅನ್ನ ಕುದಿಸಲಿ'?.. ಏನೇನೇನು?..'ಅಂದರ ನಿನಗೂ ಒಂದು ತುತ್ತು ಆಗತಕದ?'..ಛೀ!.. ಇಷ್ಟು ಜ್ವರ ಮೈಯೊಳಗೆ, ಮತ್ತೆ ಅನ್ನ ತಿನ್ನಬೇಕಂತೆ!.. (ಸೌಮ್ಯನಾಗಿ) ಇದೇನು ಹುಡುಗರ ಹಾಗೆ?.. ನಾಳೆ ಜ್ವರ ಇಳಿದ ಕೂಡಲೆ, ಬೇಕಾದರೆ ಲಗೂನೇ ಅಡಿಗೆ ಮಾಡಿ ಬಿಡು (ಎನುತ್ತ ಮೇಜಿನ ಹತ್ತಿರದ ಕುರ್ಚಿಯಲ್ಲಿ ಕುಳಿತುಕೊಳ್ಳುವನು).

ಆತನ ಹೆಂಡತಿ:— (ಬೇಜಾರದ ದನಿಯಲ್ಲಿ) ಅಯ್ಯ! ಲಗೂನೆ ಮಾಡ್ತೀನಿ, ಅಡಿಗೀ ಅನ್ನಲಿಕ್ಕೆ ಏನಿದೆ?.. ಹೊಟ್ಟೆಯು

ನಿಷ್ಕರ್ಕ ಅಕ್ಕಿ ಕುದಿಸೋದು! .. ನಿನ್ನಿನ ರಾತ್ರೀವೇ ಎರಡು ಬಕ್ಕರಿ ಹಾಲಿಂಗೇ ಉಳಿದಾವ ಇನ್ನೂ!..(ಅರಿಸಿದ ಚೂರುಗಳನ್ನು ಸಾವರಿಸುತ್ತ) ಕಾಫೆ ಮಾಡಬೇಕಿಲ್ಲೊ ಮತ್ತ?

ಈಕೆಯ ಗಂಡ:— (ಕುಳಿತಲ್ಲಿಯೆ ಕಣ್ಣುಗಳನ್ನಷ್ಟೆ ಮೇಲಕ್ಕೆ ಏರಿಸಿ) ಏನಂದೆ?.. 'ಕಾಫೆ ಆದರೂ ಮಾಡಿರಿ, ಅನ್ನ ಕುದಿಸದಿದ್ದರೂ ಅಷ್ಟೇ ಹೋಯ್ತೂ' ಅಂದರೆ— ನಾ ಏನು ಅನ್ನ ಕುದಿಸಲಿಕ್ಕೆ ಒಲ್ಲೆ ಅಂದೆ ಅಂತ ತಿಳಿದೆಯಾ?.. ಅನ್ನ ನಿನಗ ಪಥ್ಯ ಅಲ್ಲ ಅಂದೆ– (ಮತ್ತೆ ಕೆಲಸದಲ್ಲಿ ತೊಡಗುವನು).

ಆತನ ಹೆಂಡತಿ:— (ಸಾವರಿಸುವುದನ್ನು ಮುಗಿಸುತ್ತ) ಅನ್ನ! ಅನ್ನ! ಅನ್ನ!..ಅನ್ನ ನಿಮಗ ಪಥ್ಯ ಅಲ್ಲಾ ಅಂತ ಬ್ಯಾಡಂತೀನಿ.. ಮಾಡಿದಾಗ ಚಹಾದಂಗಡಿಗೆ ಹೋಗಿ ತಿಂದ ಬರೋದು, ಬ್ಯಾಡ ಅಂದಾಗ ಹಟ ಹಿಡಿದು ಬೇಡೋದು .. ಏನ ಗಂಡಸರ ಸ್ವಭಾವನೊ! (ಎನುತ್ತ ಏಳುವಳು).

ಈಕೆಯ ಗಂಡ:— (ಮೊದಲಿನಂತೆ, ಆದರೆ ಒಟ್ಟಿನಿಂದ) ಥೂ! ಏನು ಹೆಂಗಸರ ಸ್ವಭಾವನೊ–ಅಂತೀನಿ! ಡಾಕ್ಟರನ್ನ ತರತೀನಿ ಅಂದರೆ 'ಬ್ಯಾಡ' ಅಂತೆ! ಕಾಫೆ ಬ್ಯಾಡ ಅಂದರೆ 'ಔಷಧ ಇಲ್ದೆ ಸಾಯ್ತೀನಿ' ಅಂತೆ! .. ಒಂದಿಷ್ಟು ಆಫೀಸಿನ ಕೆಲಸ ನೋಡಬೇಕು ಅಂದರೆ– (ಎಂದು ಎದ್ದು ಕುರ್ಚಿಯನ್ನು ಅಪ್ಪಳಿಸುವನು)..

ಆತನ ಹೆಂಡತಿ:— (ಅಕ್ಕಿಯನ್ನು ಅರಿಸತೊಡಗುತ್ತ) ಒಂದಿಷ್ಟು ಅಡಿಗೆ ಕೆಲಸಾ ಮಾಡಬೇಕೂ ಅಂದರೆ– (ಒಮ್ಮೆಲೆ) ಏನು?

ಈಕೆಯ ಗಂಡ:— (ಒಮ್ಮೆಲೆ) ಎಲಾ! ಇಲ್ಲೇ ಇದೆಯಲ್ಲ?

ಆತನ ಹೆಂಡತಿ:— (ಒಳಗೆ ಕೇಳುತ್ತ) ಏನು ಇದೆ ಅಂದಿರಿ?

ಈಕೆಯ ಗಂಡ:— (ನಗೆಯಿಂದ) ಕೂತ ಕುರ್ಚಿಗೆಯೆ ತೂಗಹಾಕಿತ್ತು ಕೋಟು.. (ಒಳಗೆ ನೋಡಿ) ಅಂ?.. ಅದೇ ಸಿಕ್ಕಿತು–ಅಂದೆ!

ಆತನ ಹೆಂಡತಿ:— (ಸಂಶಯದ ದನಿಯಲ್ಲಿ) ಏನು ಸಿಕ್ಕಿತು ಅಂದಿರಿ?.. ಗಡಿಯಾರ?.. ತಲೆದಿಂಬಿನ ಕೆಳಗ ಇದ್ದಿತ?.. ಇರದೇ ಎಲ್ಲಿ ಹೋಗತಕದ?..

ಈಕೆಯ ಗಂಡ:— (ಒಳಗೆ ನೋಡುತ್ತ) 'ಇರದೇ ಎಲ್ಲಿ ಹೋಗತಕದ?'– ಅಂದರೆ? ಇಷ್ಟೊತ್ತು ಹುಡುಕಿ ಹುಡುಕಿ ಹಣ್ಣಾದೆ! ಈಗ ಹೇಳ್ತಾಳೆ ದೊಡ್ಡ ಮಾತು! ಏನಂದೆ?.. ಅಂ?.. (ಎನುತ್ತ ಕೋಣೆಯಕಡೆ ಹೊರಡುವನು).

ಆತನ ಹೆಂಡತಿ:— (ಹಂಗಿಸುವ ದನಿಯಲ್ಲಿ) ದೊಡ್ಡಮಾತು ಹೇಳಲಿಕ್ಕೆ ನಾ ಏನು ಸಾಲಿಬರೆದ ಸುಂದರಿಯೆ?.. 'ಸಿಕ್ಕಿತು' ಅಂದಿರಿ, ಸಿಗಲಿಕ್ಕೆ ಆದೇನು ಕಳಿದಿತ್ತೇನು– ಅಂದೆ!.. ಆಡಿ ಆಡಿಸಿಕೊಳ್ಳೋದು ನನ್ನದೆ ಹಣೆಬರೆಹ!

ಈಕೆಯ ಗಂಡ:— (ಬಾಗಿಲಹತ್ತಿರ ನಿಂತು, ಕೇಳಿ) ನಿನ್ನದಲ್ಲ, ನನ್ನದೇ ಹಣೆಬರೆಹ! (ಎಂದು ಹಣೆ ಬಡಿದುಕೊಳ್ಳುವಷ್ಟರಲ್ಲಿ ಕನ್ನಡಕ ಕೈಗೆ ಸಿಗಲುವುದು. ಅವಿನಿಮಿಷ ಚಕಿತನಾಗಿ–) ನೋಡಿದೆಯಾ? ನಿನ್ನ ಸಲುವಾಗಿ ನನ್ನ ಬುದ್ಧೀನೇ ಹೋಗಿದೆ.. (ಎಂದು ಕಲೆಅಲ್ಲಾಡಿಸುತ್ತ ಮೇಜಿನ ಕಡೆ ನಡೆಯುವನು).

ಆತನ ಹೆಂಡತಿ:— (ಮೊದಲಿನ ದನಿಯಲ್ಲಿಯೆ) ಬುದ್ಧೀನೇ ಹೋಗೇದ ಮದಿವೆ ಆದವ್ಯಾಲ– ಅಂತೀರಿ.. ಅಷ್ಟರೆ ನಿನ್ನ ಸುದ್ಯೆವಾ ಅಂತೀನಿ..ಮದಿವೆಮಾಡಿಕೊಳ್ಳುವಾಗಲಾದರೂ ಬುದ್ಧಿ ಇತ್ತೂ ಅಂದ್ಹಾಂಗ ಆಯಿತಲ್ಲ?.. (ಎಂದು ಮುಸುಗುಡುವಳು).

ಈಕೆಯ ಗಂಡ:— (ಒಮ್ಮೆಲೆ ತಿರುಗಿ ನಿಂತು, ಲಕ್ಷ್ಯಗೊಟ್ಟು ಕೇಳಿದಂತೆ ಮಾಡಿ) ಏ.. (ಹತ್ತಿರಬಂದು) ಹುಚ್ಚಿ! ಅಳುವೆಯಾಕೆ?.. ಹುಂಹುಂ.. ಜ್ವರ ಹೆಚ್ಚಾದಾವು— ಏನಂದೆ?— ಅಲ್ಲ, ಬುದ್ಧೀನೇ ಹೋಗಿದೆ ಅಂದರೆ, ಇಷ್ಟೊತ್ತು ಹಣೆಯ ಮೇಲೆಯೆ ಏರಿಸಿದ್ದ ಕನ್ನಡಕ, ಗೊತ್ತಿಲ್ಲದೆ ಹುಡುಕಿದೆ– (ಮುಗುಳ್ನಗೆಯಿಂದ) ಹಂ.. ನಗುವೆಯಲ್ಲ, ಈಗ ನೀನು?.. ಕಣ್ಣಿಗೆ ಕನ್ನಡಕ ಇಲ್ಲದೆ ನನಗೆ ಕಾಣಿಸೋದಿಲ್ಲ, ಆದರೆ ನನ್ನ ಹಣೆ ಮೇಲೆ ಇದ್ದದ್ದು ನಿನಗಾದರೂ ಕಾಣಿಸತೊ ಇಲ್ಲೊ?.. ಹೇಳಬೇಕಾಗಿತ್ತು ನನಗೆ?.. ಕಣ್ಣು ನೋಡಲಿಕ್ಕೆ ಇವೆಯೊ, ಅಳುವುದಕ್ಕೊ?

ಆತನ ಹೆಂಡತಿ:— ಕಣ್ಣಿದ್ದದಕ್ಕೆ ಅಳೋದೇ ನಮ್ಮ ಗತಿ!.. ನೋಡೋ ಭಾಗ್ಯ ದೂರ ಉಳಿಯಿತು, ಮಾಡೇನೆಂದರೂ ಇಲ್ಲ. ಜಡ್ಡಿನವರು, ಇವರಿಗ್ಯಾಕ ತಲ್ಯಾಸ ಕೊಡಬೇಕು, ಲಗೂನೆ ಒಂತುತ್ತು ಅನ್ನಾ ನುಂಗಿ, ಹಾಸಿಗೆ ಹತ್ತಿರ ಕೂಡಬೇಕು—ಅಂತ ನಾ ಇಲ್ಲಿ ಅವಸರ ನಡೆಸಿದರೆ ಮಾತಿಗೆ ಮಾತು, ಮಾತಿಗೆ ಮಾತು ಬೆಳಸಿ ಯಾಕ ಅಯಾಸ ಮಾಡಿಕೋ ಬೇಕೊ? ಜ್ವರಾ ಅವ ಅಂತ ಒಂದಿಷ್ಟು ಹೊಟ್ಟಿಗೆ ಹಾರ, ಮನಸಿಗೆ ವಿಶ್ರಾಂತಿ ಇರಲಿ ಅಂದರೆ– 'ಅಡಿಗೆ ಆಯಿತಿಲ್ಲೊ, ಗಡಿಯಾರಕ್ಕ ಕೀಲಿ ಕೊಟ್ಟಿತಿಲ್ಲೊ, ಅಡಿಗೆ ಆಯಿತಿಲ್ಲೊ, ಗಡಿಯಾರಕ್ಕ ಕೀಲಿ ಕೊಟ್ಟಿತಿಲ್ಲೊ' ಅಂತ ಒಂದಸವನೆ ಆಕ್ಕೋಶ! (ಕಣ್ಣು ಒರಸಿಕೊಳ್ಳುತ್ತಿರುವಳು)..

ಈಕೆಯ ಗಂಡ:— (ರಮಿಸುವ ದನಿಯಲ್ಲಿ) ಅಲ್ಲೇ, ಹೀಗೆ ಯಾಕೆ ಮಾತಾಡತೀ?.. 'ಆಕ್ರೋಶ' ಅಂದರೇನು?.. ಮಾಡಿಕೊಂಡ ಹೆಂಡತೀನ್ನ ಬಿಟ್ಟು ಮಂದಿಗೆ ಕೇಳಲಿಯಾ ನನ್ನ ಕೋಟು ಎಲ್ಲಿ ಇದೆ ಅಂತ?..ಕೇಳಿದ ಹಾಗೆ–ಕೇಳಿದ ಹಾಗೆ ನೀನು ಮೆತ್ತಗಾಗಿಯೆ ಮಾತಾಡಿದಿ, ಆದಕ್ಕೆ ನಾನೇ ಒದರಿ ಕೇಳಿದೆ.. ಆಯಿತಲ್ಲ? ಕೋಟೂ ಸಿಕ್ಕಿತು, ಕನ್ನಡಕನೂ ಸಿಕ್ಕಿತು.. ಇನ್ನು ಯಾಕೆ ಆ ರಸಕಸಿ? (ಎನುತ್ತ ಮೇಜಿನ ಕಡೆ ಹೊರಡುವನು).

ಆತನ ಹೆಂಡತಿ:— (ಕೋಣೆಯ ಕಡೆ ಆಶ್ಚರ್ಯದೃಷ್ಟಿಯಿಂದ ನೋಡುತ್ತ) ನನ್ನದೇ ರಸಕಸಿಯೆ ಮತ್ತ?.. (ಉಸುರ್ಗರೆದು) ಬೇಡಿಯೆ ಬಂದಿಲ್ಲ, ತಾಯಿಾ, ಯಾರೇನು ಮಾಡೋದು? ಯಾವಾಗ ಮುಂಜಾನೆಯಿಂದ ನಡೆದಿದೆ ಒಂದೇಸವನೆ, ವಾದ–ವಾದ–ವಾದ, ಮಾತು – ಮಾತಿಗೆ – ವಾದ! ಎದ್ದ ಕೂಡಲೆ ಬಲಗಣ್ಣು ಹಾರಿತು, ಆಗೇ ಅಂದೆ ನಾ, ಇವತ್ತೇನು– (ತಡೆದು) ಏನು?.. (ಎಂದು ಹುಬ್ಬುಗಂಟಿಕ್ಕಿ ಲಕ್ಷ್ಯಗೊಟ್ಟು ಕೇಳಿದಂತೆ ಮಾಡುವಳು).

ಈಕೆಯ ಗಂಡ:— (ನೇಣಿನ ಹತ್ತಿರ ಬಂದು ತಟ್ಟನೆ ತಿರುಗಿ ನಿಂತು) ಮತ್ತೇನೂ (ಎನುತ ಬಿ ಜಾತನ ದನಿಯಲ್ಲಿ ಎಳೆಯುವನು). ಏನಂದೇ?.. ಬಲಗಣ್ಣು ಹಾರತಿನೆಯೆ?'.. ಅದಕೇ ಹೇಳಲಿಲ್ಲೇನಿ ನಿನಗೆ' ಈ ಹೊತ್ತು ಊಟ ಬೇಡ ನಿನಗೆ– ಅಂತ?.. ಅಜೀರ್ಣ ಆಗಿದೆಯೊ, ಪಿತ್ತ ಆಗಿದೆಯೊ, ಹಾಗದೇ ಬಿಟ್ಟೀತೇ ಬಲಗಣ್ಣು?.. (ಕೇಳದಂತೆ) ಮಟ್ಟಿತು ನಿನ್ನ ಅಶುಭ ಶಕುನ?.. ಎತಗಣ್ಣಿನೂ ಹಾರಿತು, ಆಷ್ಟು ವಿಶ್ವಾಸ ಇದ್ದರೆ; ಕಣ್ಣಿನ ಅಧ್ವಾಂಗವಾಯು ಏನು ಆಗಿಲ್ಲವಲ್ಲ?.. (ತೀರ ಬೇಜಾರದಿಂದ) ನನಗಿನ್ನು ಕೆಲಸಕ್ಕೆ ಹೊರಡು ಅಂತಿಯೋ? (ಎಂದು ಆವ್ವಾನಿಸುವನಂತೆ ಉತ್ತರನಿರೀಕ್ಷಣೆಯ ದೃಷ್ಟಿಯಿಂದ ನಿಲ್ಲುವನು).

ಆತನ ಹೆಂಡತಿ:— (ಹುಬ್ಬುಗಂಟು ಸಡಿಲಿಸುತ್ತ ತಿರಸ್ಕಾರದಿಂದ) ನನಗಿನ್ನ ಕೆಲಸಕ್ಕ ಹೊರಡಂತೀರೊ ಬ್ಯಾಡಂತೀರೊ?— (ಮುಂದೆಬಿದ್ದ ಹರಳುಗಳನ್ನು ಸಾವರಿಸುತ್ತ) ಗಂಡಸರಿಗೆ ಜಡ್ಡು ಆಗೋದೂ ಅಪ್ರ ಒಂದು ಸಂಭ್ರಮಾನೇ!.. ಇವರ ಬದಲಿ ಖೋಡಿ ನನಗೇ ಬಜಬಾರದಾಗಿತ್ತ, ಕಾಟಾ-ಕಸಾರಿಕೆ?..

ಈಕೆಯ ಗಂಡ:— (ಕೈಜಿಲ್ಲಿ) ಹೆಂಗಸರ ಜಡ್ಡು ಅಂದರೆ ಒಂದು ದೊಡ್ಡ ಯಜ್ಞ ಇದ್ದಹಾಗೆ! ಇಡಿಯ ಜಗತ್ತೇ ಆಹುತಿ ಆಗಬೇಕು ಅದರೊಳಗೆ!.. (ಕೇಳಿದಂತೆ ಮಾಡಿ) 'ಅಂಥಾದ್ದೇನು ಆಗೇದ ಈಗ' ಅಂದರೆ?.. ನೋಡಲ್ಲ— ಇತ್ತ ಮನೆಯೊಳಗೂ ಕೆಲಸ ಮಾಡಗೊಡವೊಲ್ಲೆ. ಇತ್ತ ಆಫೀಸಿಗೂ ಹೋಗಗೊಡವೊಲ್ಲೆ!.. (ಮತ್ತೆ ಕೇಳಿದಂತೆ ಮಾಡಿ) ಏನು ಹಾಗೆ ಮಾತಾಡಿದಿ?.. ವ್ಯವಹಾರೇ ನಿಂತುಹೋಗಬೇಕು ಅಂತೀ ಏನು— ನಿನ್ನ ಉಗುರುಬೆಚ್ಚಗಿನ ಜ್ವರದ ಸಲುವಾಗಿ?.. (ಎನುತ ಕೋಟನಲ್ಲಿ ಬಂದು ಕೈ ಸಿಕ್ಕಿಸಿಕೊಂಡು ನಿಲ್ಲುವನು).

ಆತನ ಹೆಂಡತಿ:— (ಮುಂದಿನ ಕೆಲಸವನ್ನು ಮುಗಿಸುತ್ತ) ಅಂದ್ರೆ–? ಮನೆಗೆಲಸೇ ತಡೀಬೇಕು ಅಂತೀರೇನು?.. (ಕೇಳಿದಂತೆ ಮಾಡಿ) ಅಯ್ಯಯ್ಯಯ್ಯೋ! ಇದು ನೋಡೇ ಮತ್ತೆ ನನ್ನ ಮ್ಯಾಲೇ ಹರಿಹಾಯೋದು?.. ಏನಂತಾರ?.. ಹೂಂ!.. ಒಂದೇಸವನೆ ಮಾತು ನಡೆಸೀನೇ ನಾನು?.. (ನಿಲುತ್ತ) ನಾನಾದ್ರೂ ಏನ್ಮಾಡಲಿ?.. ಎಂದೂ ಇಲ್ಲದ ಒಂದು ಜಡ್ಡಿನ ನಿಮಿತ್ತಕ್ಕ ಇಂದು ಮನೆಯೊಳಗೆ ಇದ್ದೀರಿ — ಅಂತ ಮಾತಾಡತೇನಿ.. ಇಲ್ಲಾ ಅಂದ್ರು ನೀವು ಮನೆಯೊಳಗ ಇರೋದೂ ಅಷ್ಟರಾಗೇ, ನಾನು ನಿಂ ಜೋಡಿ ಮಾತಾಡೋದೂ ಅಷ್ಟರಾಗೇ! (ಎನುತ ಹೊರಟು ಅಕ್ಕಿಯನ್ನು ಅಡುಗೆಗೆ ಸಿದ್ಧವಾಗಿಟ್ಟು, ಹಿಟ್ಟು-ಚಾಳಣಿ-ಪೊದಲಾದ ಸಾಮಗ್ರಿಗಳನ್ನು ತಂದಿಟ್ಟುಕೊಂಡು ಕುಳಿತುಕೊಳ್ಳುವುದರಲ್ಲಿದ್ದಾಳೆ.)

ಈಕೆಯ ಗಂಡ:— (ಇನ್ನೊಂದು ಕೈಯನ್ನು ತೋಳಿನಲ್ಲಿ ಹಾಕುವುದನ್ನು ಬಿಟ್ಟು) ಏನಂದೆ?.. (ಸಿಡುಕಿನ ದನಿಯಲ್ಲಿ) ಅಹುದು! ಅಲ್ಲವೆ ಮತ್ತೆ! ನಾನು ಮನೆಯೊಳಗೆ ಇರೋದೇ ಇಲ್ಲ!..(ಹತ್ತಿರ ಬರುತ್ತ) ಏನದು?.. ಅಂ?.. ಹುಂ! 'ದಿನಾಲು ಮನೆಹೊರಗೇ ಇರ್ತೀರಿ, ಇವತ್ತೊಂದು ದಿವಸ ಆದ್ರೂ ಮನಿಯೊಳಗ ಇರ್ಬಾರ್ದೆ?' ಅಂತಾಳೆ..(ತಲೆ ಅಲ್ಲಾಡಿಸುತ್ತ) ಕಠಿಣ!.. ಈ ಹೆಂಗಸರ ಜೋಡಿ ಮಾತಾಡೋದೇ ಕಠಿಣ!.. (ಎನುತ ಮತ್ತೆ ಕೈಯನ್ನು ಹಾಕಲು ಯತ್ನಿಸುವನು, ಲಕ್ಷ್ಯವಿಲ್ಲದ್ದಕ್ಕೆ ಅದು ಸಾಧಿಸುವುದಿಲ್ಲ, ಮುಖದ ನೋಟ ಸಿಟ್ಟನ ಕಳೆ ಮೂಡುವುದು).

ಆತನ ಹೆಂಡತಿ:— (ಹಿಟ್ಟು ಚಾಳಿಸುವುದನ್ನು ತಡೆದು) ಇಲ್ಲ! ನನಗ ಕೇಳಿಸಲಿಲ್ಲ–ಅಂದೆ!.. (ಕೇಳಿದಂತೆ ಮಾಡಿ) ಹುಂ! ಕಠಿಣ ಇರದೇ ಏನು ಹೆಂಗಸರ ಜೋಡಿ ಮಾತಾಡೋದು? ರೂಢಿ ಆದರೂ ಎಲ್ಲಿದೆ ನಿಮಗೆ ಮನಿಯ ಹೆಂಡತಿ ಜೋಡಿ ಮಾತಾಡೋದಕೆ? (ಮತ್ತೆ ಚಾಳಿಸತೊಡಗುವಳು).

ಈಕೆಯ ಗಂಡ:— (ಕೋಟನ ತೊಂದರೆಗಾಗಿ ಸಿಟ್ಟಿನ ದನಿಯಿಂದ) ಏನು ಹಾಗೆ ಮಾತಾಡಿದರೆ?..ಹಂ–ನನಗೆ ತಿಳಿದಿದೆ ನೀನು ಮಾತಾಡಿದ್ದು! 'ಹೆಂಗಸರ ಜೋಡಿ ಯಾಕ, ಹೆಂಡತಿ ಜೋಡಿ ಕಠಿಣ ಅನ್ನಿರಿ' ಅಂತೆ!..ಜ್ವರ ಏರತಾ ಇದೆಯೊ ಏನು–ಹೀಗೇಕೆ ಬಡಬಡಿಸುವೆ?..ಏನಂದೆ?.. 'ಹೊರಗೆ ಹೋಗಲಿಕ್ಕೆ ಯಾವಾಗಲೂ ಆತುರ'—ಅಂದರೆ?.. (ಹತ್ತಿರ ಬಂದು) ಏ, ಹುಚ್ಚೀ, ಹೊರಗೆ ಅಂದರೆ ನಾ ಎಲ್ಲಿ ಹೋಗತಿರತೀನಿ ಅಂತ ತಿಳಿದಿರುವೆ?..ಆಫೀಸಿಗೆ!..ಆಫೀಸಿನೊಳಗೆ ಹೆಂಗಸರು ಇದ್ದಾರೆ ಅಂತ ತಿಳಿದೆಯೊ ಏನು?.. (ತಿರಸ್ಕಾರದಿಂದ ಉಸುರ್ಗರೆದು ಮತ್ತೆ ಮೇಜನ ಕಡೆ ನಡೆಯುವನು; ಕೋಟು ಹಾಗೇ ತೂಗಬಿದ್ದಿದೆ).

ಆತನ ಹೆಂಡತಿ:— (ಕೆಲಸದಲ್ಲಿ ತೊಡಗಿದಂತೆಯೆ ನಟಿಸುತ್ತ) ಆಫೀಸಿನಾಗ ಹೆಂಗಸರು ಇರತಾರೊ ಇಲ್ಲೊ ನನಗೇನು ಗೊತ್ತು, ತಾಯಿಾ? ನಾ ಏನು ಕಲಿತಾಕೆಯೆ, ಏನು ಸುಧಾರಿಸಿದಾಕೆಯೆ? ನಾ ಆಯ್ತು, ನನ್ನ ಮನೆ ಆಯ್ತು, ನನ್ನ ಕೆಲಸ ಆಯ್ತು!.. ಹೊರಗೆ ಹೋದಾಗ ಗಂಡಸರು ಏನೇನು ಮಾಡ್ತಾರ, ಎಲ್ಲೆಲ್ಲಿ ಹೋಗ್ತಾರ, ಅನ್ನೊ ಉಸಾಬರಿ ನನಗ ಯಾಕೆ?

ಈಕೆಯ ಗಂಡ:— (ಒಮ್ಮೆಲೆ ಸಿಟ್ಟಿನಿಂದ ನಡೆದುಬರುತ್ತ) ಏ–ಏ–ಏ! ಸಾಹೇಬರು ಖಟ್ಲೆ ಹಾಕಿಯಾರು ಅಂದೆ ಖಟ್ಲೆ ನಿನ್ನ ಮೇಲೆ, ಹೀಗೆ ಮಾತಾಡಿದರೆ!.. ಆಫೀಸು ಅಂದರೇನು ಯಮನೂರ ಜಾತ್ರೆ ಅಂತ ತಿಳಿದಿರುವೆಯಾ?.. ಏನಂದೆ?.. ಮತ್ತೆ ನಾನೇ ಕೆಟ್ಟ ಕೆಟ್ಟ ಮಾತಾಡತೀನೆಯೆ?.. (ಕೋಟು ತೂಗುಬಿದ್ದದ್ದು ಲಕ್ಷ್ಯಕ್ಕೆ ಬಂದು) ಥೂ!.. ಈ ತೋಳಿಗೇನು ಧಾಡಿ ಆಗಿದೆ ಅಂತೀನಿ!.. (ಸರಿಯಾಗಿ ಕೈಯನ್ನು ಸೇರಿಸುವ ಯತ್ನದಲ್ಲಿದ್ದಾನೆ).

ಆತನ ಹೆಂಡತಿ:— (ಒಮ್ಮೆಲೆ ಚಕಿತಳಂತೆ ಒಳಗೆ ನೋಡುತ್ತ) ಅಯ್ಯಯ್ಯ!..ಏನದು?..ಏನು?.. ಏನ ತಾಯಿಾ! ಒಂದು ಮಾತಿಗೆ ಒಂದು ಅಬ್ಬರ!.. ನನ್ನ ಮಾತಿಗೆ ಉತ್ತರ ಕೊಡಲಿಕ್ಕೆ ಬರಲಿಲ್ಲ, ಆದಕ್ಕ ತೋಳಿನ ಮ್ಯಾಲೆ ಸಿಟ್ಟು!.. 'ತೋಳಿಗೇನು ಧಾಡಿ' ಅಂದ್ರೆ?.. ನಾ ನಿಮಗ ಎಷ್ಟು ಸಾರೆ ಹೇಳೀನಿ, ತಲೆ-

ದಿಂಬಿನ ಮ್ಯಾಲೆ ತಲೆ ಇಡಿರಿ, ನಿಮ್ಮೋವಳಗ ತೋಳು ಬುಂ ಹಿಡೀತದೆ, ತೋಳ ಹಾಂಗ ಇಡಬ್ಯಾಡಿರಿ ಮುಲಗುವಾಗ-ಅಂತ!.. ಏನಂದಿರಿ? .. ನನ್ನ ಕೈಯೆ ಲ್ಲಾ ಹಿಬ್ಬಾಗೇದ, ಈಗ ನೀವೇ ಬಂದಿಷ್ಟು ಮೆಲ್ಲಗೆ ಕೈ ತಗೀರಲ್ಲ ಕೆಳಗ?.. (ಮತ್ತೆ ಕೇಳಿದಂತೆ ಮಾಡಿ) ಆಯ್ಯ! ಯಾತಕ್ಕೂ ನಾನೇ ಬೇಕು! (ಎಂದು ಕೈ ಒರಸಿಕೊಂಡು ಒಳಗೆ ಹೋಗುವಳು).

ಈಕೆಯ ಗಂಡ:— (ಸಿಟ್ಟು ಬಂದುದಕ್ಕೆ ಕೈಸೇರಿಸಲು ನಿಂತಲ್ಲಿಯೆ ಸುತ್ತು ತಿರುಗುತ್ತಿದ್ದಾನೆ. ಕೊನೆಗೆ ಕಾಲು ಅಪ್ಪಳಿಸಿ) ಧೂ!..ಏನಂದೆ?.. 'ಯಾತಕ್ಕೂ ನಾನೇ ಬೇಕು' ಅಂದರೆ?.. ತೋಳು ತಿರುವಿ ಬಿದ್ದಿದೆಯೊ ಏನೊ! ಬಂದೇ ಕೈಯಿಂದ ಅದನ್ನ ಹೇಗೆ ಸರಿಮಾಡೋದು! .. (ತಿರಸ್ಕಾರದಿಂದ) ಸಾಕು! ನೋಡಿಲ್ಲಿ, ನಾನು ಬರಿಯ ಸಿಟ್ಟಿಗೇ ಬಂದೀನೆಯೊ, ಏನು ಖರೇನೇ (ನಿಜವಾಗಿಯೂ) ತೋಳು ತಿರುವಿ ಬಿದ್ದಿದೆಯೊ? (ಎನುತ್ತ ಒಳಗೆ ಹೋಗುವನು).

ಆತನ ಹೆಂಡತಿ:— (ಹೆಣ್ಮೊಯ ಮುಗುಳ್ನಗೆಯಿಂದ ಹೊರಗೆ ಬರುತ್ತ) ಹುಡುಗರು ಬ್ಯಾರೆ ಅಲ್ಲ, ಇವರು ಬ್ಯಾರೆ ಅಲ್ಲ (ಎಂದು ಮತ್ತೆ ಗಂಡನ ಕೋಣೆಯ ಕಡೆಗೆ ಮುಖ ಮಾಡಿ ತನ್ನ ಕೆಲಸಕ್ಕೆ ಕುಳಿತು ಕೊಳ್ಳುವಳು).

ಈಕೆಯ ಗಂಡ:— (ಕೋಟು ಸರಿಯಾಗಿ ಹಾಕಿಕೊಳ್ಳುತ್ತ ಸಿಟ್ಟಿನಿಂದ ಮಾತನಾಡಲು ಯತ್ನಿಸುತ್ತ ಬರುವನು.) ಹಃ! 'ಹುಡುಗರು ಬ್ಯಾರೆ ಅಲ್ಲ, ಇವರು ಬ್ಯಾರೆ ಅಲ್ಲ'.ಅಂತೆ!.. ಏನು ದೊಡ್ಡ ವಿಷಯನೊ!.. (ಮೇಜಿನ ಹತ್ತಿರ ಬಂದು) ಗಡಿಯಾರ ನಿಂತು, ಈಕೆಯ ಬಾಯಿ ನಿಂತಿಲ್ಲ ಇನ್ನೂ! (ಎನುತ್ತ ಗಡಿಯಾರವನ್ನು ಕಿಸೆಯಲ್ಲಿ ಒಗೆದು).. ಆಂ? (ಎಂದು ಕೋಣೆಯ ಕಡೆಗೆ ನೋಡುವನು).

ಆತನ ಹೆಂಡತಿ:— (ಸಿಟ್ಟಿನ ಯತ್ನದಿಂದ) ಏನಂದಿರಿ?.. ಅಯ್ಯ! 'ಏನಿಲ್ಲ' ಯಾಕ? ..ನನಗ ಕೇಳಿಸೇದ ಅಂದೆ, ನೀವು ಅಂದದ್ದು..ನನ್ನ ಬಾಯಿ ನಿಂತಿಲ್ಲ ಅಂತ!.. ನನ್ನದೂ ಜೋಡಿ ಸ್ವಭಾವ!.. ಅವರ ಮನಸಿಗೆ ಬರೋದಿಲ್ಲ—ಅಂತ ಗೊತ್ತಿದ್ದರೂ ಪಾಪಿಂಗೇ ಮಾತಾಡತೀನಿ!..(ಉಸುರ್ಗರೆದು) ಸತ್ತ ಮ್ಯಾಲಾದರೂ ನನ್ನ ಮಾತು ನೆನಸಿಗೆ ಬಂದಾವಲ್ಲ! (ಕಣ್ಣೀರು ಹಿಟ್ಟಿನ ಮೇಲೆ ಬೀಳುವುದನ್ನು ಕಂಡು ಬದಿಗೆ ಮುಖಮಾಡಿ ಬಿಕ್ಕುವಳು).

ಈಕೆಯ ಗಂಡ:— (ಲಕ್ಷ್ಯಗೊಟ್ಟು ಕೇಳಿದಂತೆ ಮಾಡಿ) ಎಲೆ!.. (ಹತ್ತಿರ ಬಂದು) ಎಲೆಲೆ!.. ಒಮ್ಮೆಲೆ ಬಿಕ್ಕಲಕ್ಕೆ ಏನಾಯಿತು ನಿನಗೆ? (ಸುಳ್ಳು ನಗೆಯಿಂದ) ಸಾನೋ ವಿಚಾರ ಯಾಕೆ ನಿನಗೆ?.. (ಗಟ್ಟಿಯಾಗಿ ನಗುತ್ತ) 'ಸತ್ತ ಮ್ಯಾಲೆ ನಿನ್ನ ಮಾತು ನೆನಸಿಗೆ ಬರೋ' ದಂದ್ರೆ.. ಹಹ!.. ನೀನು ಪೆಪ್ಪ ಆಗುವುದೆ ಖಾತ್ರಿ ಮಾಡಿಕೊಂಡಿರುವೆ ಏನು? ಹಹ್ಹ! (ಎನುತ್ತ ಮೆಲ್ಲಗೆ ಮೇಜಿನ ಕಡೆ ಹೆಜ್ಜೆಗಳನ್ನಿಡುವನು).

ಆತನ ಹೆಂಡತಿ:— (ತಡೆದು, ಕಣ್ಣೊರಸಿಕೊಂಡು, ಕೋಣೆಯ ಕಡೆ ದಿಟ್ಟಿಸಿ, ತೀಕ್ಷ್ಣದ ಧನಿಯಲ್ಲಿ) ಯಾಕ ಖಾತ್ರಿ ಮಾಡಿಕೊಂಡಿರ ಬಾರದು ಪೆಪ್ಪ ಆಗೋದು—ಅಂತೀನಿ!.. ಮದಿವೆ ಆದದ್ದೇ ಆದದ್ದು, ಒಂದಾದರೂ ಮನಸಿನಾಗಿನ ವಾಸನಾ ಸಾಧಿಸಿಕೊಂಡಿಲ್ಲ ಈ ಮನೀವಳಗ!..(ಸಿಟ್ಟಿನಿಂದ) ಸಾಕು ತಗೀರಿ, ಏನು ಮೋಜು-ಮಾತು ಅಂತ ನಗತೀರಿ?

ಈಕೆಯ ಗಂಡ:— (ನಗೆ ತಡೆಯುತ್ತ) ಅಲ್ಲ— (ಒಮ್ಮೆಲೆ ಹೊರಗೆ ಗಂಟೆ ಬಾರಿಸಿದ್ದನ್ನು ಕೇಳಿ ಲಗಬಗೆಯಿಂದ) ಎಲೆಲೆ! ಹನ್ನೊಂದು ಹೊಡೀತೊ, ಹನ್ನೆರಡು ಹೊಡೀತೊ!.. ಧೂ!.. ನನ್ನ ರುಮಾಲು ಎಲ್ಲಿ?.. (ಸುತ್ತಾಡುತ್ತ) ದಿನಾಲು ತಡ ಆಗೋದೇನು ನನ್ನ ಹಣೆಬರೆಪಕ್ಕೆ ತಪ್ಪಿದ್ದಲ್ಲ!.. (ಎಂದು ಚೆಲ್ಲಾಪಿಲ್ಲಿಯಾಗಿ ಸಾಮಾನುಗಳನ್ನು ಹರಹುತ್ತ ರುಮಾಲನ್ನು ಹುಡುಕುವನು).

ಆತನ ಹೆಂಡತಿ:— (ಹಿಟ್ಟು ಸಾವರಿಸುತ್ತ) ಆಯಿತು- ತಡ ಆದರ ನನ್ನ ಊಟಕ್ಕೇ ತಡ ಆಗೋದು .. ನನಗೂ ಇನ್ನು ಹೊಟ್ಟೇನೆ ತುಂಬಿದ್ಹಾಂಗ ಆಗೇದ .. ಏನೂ?.. ಯಾಕ-ಅಂತೀರಾ?.. ಒಂದು ದಿವಸಾದರೂ ನೀವು ಹೆಂಡತೀ ಜೋಡಿ ನಕ್ಕು ನಲಿದಾಡಿದಿರಿ ಅಂತ ನನಗ ಅಷ್ಟು ಸಂತೋಷ ಆಗೇದ!.. (ಏಳತೊಡಗುವಳು).

ಈಕೆಯ ಗಂಡ:— (ಸಿಟ್ಟಿನಿಂದ) ಕೇಳಿಸಿತೇನು?..ನಗುವೆ ಯಾಕೆ ಹಾಗಾದರೆ?..ಏನೂ?.. ಓಹೊಹೊ! .. ಅಷ್ಟು ಸಂತೋಷ ಆಗಿದೆಯಲ್ಲವೆ ನಿನಗೆ?.. ಏನಂದೆ?.. 'ತಡಮಾಡಿ

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಮೇಲ್ತರಗತಿಯ

ಹಳುಕು (Concentrated) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು.
ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ

ಕ್ರೆಪಾಗ್ ಲಿಮಿಟೆಡ್,
ಪೋ. ಬಾ. ನಂ. ೨೧೦, ಮುಂಬಯಿ.

ಹೋದರೆ–' ಏನು ?..ಯಾರು–ಯಾರು ತಿಳೀತಾರೆ? .. ಆಫೀಸಿನೊಳಗೇ ?.. (ಒಮ್ಮೆಲೆ) ಏನೇನೇನೂ ?.. 'ಹೆಂಡತಿ ಜೋಡಿ ನಕ್ಕು ನಲಿದಾಡತಾನೆ, ಆದಕ್ಕ ತಡ ಆಯಿತು' ಅಂತೆ ಆಫೀಸಿನೊಳಗೆ ತಿಳೀತಾರೆಯೆ ?.. ಆಫೀಸಿನ ಕೆಲಸ ಬಿಟ್ಟು ಹೆಂಡತಿ ಜೋಡಿ ಜೆಲ್ಲಾಟ ಆಡುವಷ್ಟು ನನಗೆ ತಲೆ ಇಲ್ಲ ಅಂತೆ ತಿಳಿದೆಯೇನು ನೀನು ?.. ಆದಕ್ಕೇ ಜೇಳತೀನಿ– ತಲೆ ಇದೆ ನನಗೆ, ಆದರೆ ಆ ತಲೆಗೆ ಬೇಕಾದ ಹಾಳು ರುಮಾಲು ಎಲ್ಲಿ ಇದೆ ಅಂತೆ ಕೂಗಿಕೊಳ್ಳತಾ ಇದ್ದೀನಿ..ಥೂ! (ಮತ್ತೆ ಸುತ್ತಾಡುವನು)

ಆತನ ಹೆಂಡತಿ:— (ಎದ್ದು ಸಿಡುಕಿನಿಂದ) ಕೇಳಿಸಿತು–ಅಂದೆ !..ಹೌದು–ಮೈಯೊಳಗೆ ಜ್ವರ ಇದ್ದಾಗ ಯಾಕ ಕೂಗಿಕೊಳ್ಳಬೇಕೂ ಸುಮ್ಮ ಸುಮ್ಮನೆ ! .. ನಿನುಗೊಂದು ಇವತ್ತು ಜಡ್ಡು ಆಗೇದ ಅಂತ ಮನೆ ಹಿಡಿದೀರಿ.. ಅಷ್ಟಕ್ಕೇ ಮನೆಗೆಲಸ ಬಿಟ್ಟು ಜಕ್ಕಂದ ಆಡತಾ ಕೂಡಲಿಯಾ ನಾನು ? .. (ಕೇಳಿ, ನಾಚಿಕೆಯಿಂದ) ಸಾಕು, ತಗೀರಿ! ಪೊನ್ನೆ ಮದಿವಿ ಆದವರ ಹಾಂಗ ಮಾತಾಡತಾರ !.. ಮದಿವೀ ಹೊಸತಾಗಿ ಮಾಡಲಾರದ ಜಕ್ಕಂದ– (ಕೇಳಿ) ಉಂ (ಎಂದು ನಾಚಿಕೆಯಿಂದ ಸೆರಗಿನ ತುದಿಯನ್ನು ಕಚ್ಚುವಳು).

ಈಕೆಯ ಗಂಡ:— (ಅವಸರದ ಆತುರದಿಂದ) ಸಾಕಿನ್ನು ನಿನ್ನ ಮಾತಿಗೆ ಮಾತು ! 'ಮದಿವೆಯ ಹೊಸತಾಗಿ ಮಾಡಲಾರದ ಜಕ್ಕಂದ ಈಗ ಮಾಡ್ತಾರೆ?' ಅಂತ ಮತ್ತೆ ನನ್ನನ್ನೆ ಹಂಗಿಸತಾಳೆ !.. ಆ ಮಾತು ಯಾಕೆ ಈಗ ?.. ನನ್ನ ರೂಪಾಯಿ ಇಲ್ಲಾ ಅಂತ ತಲೆತಲೆ ಬಡಿದುಕೊಳ್ಳತೀನಿ ನಾನು !.. ಏನಂದೆ?.. ಹೋಗುವೆ–?.. ಎಲ್ಲಿಗೆ?.. ಏನೂ?.. ನಾನು ಹೀಗೆ ಮಾಡಿದರೆ ನೀನೇ ಹೋಗಿಬಿಡುವೆಯಾ ?.. ನಾ ನನ್ನ ರುಮಾಲು ಹುಡುಕಿದರೆ ನೀ ಯಾಕೆ ಹೋಗಬೇಕು ? ಹುಚ್ಚು ! (ಎನುತ್ತ ಕುರ್ಚಿಯ ಹತ್ತಿರ ನಡೆದು ಬರುವನು).

ಆತನ ಹೆಂಡತಿ:— (ಹೊರಡುತ್ತ) ಯಾಕೆ ಹೋಗಬೇಕು— ಅಂದರೆ? .... ಅಯ್ಯ ! ನನ್ನ ಹಣೆಬರೆಹ ! ಮಾತಿನ ಭರದೊಳಗೆ ಬೇಳೆ ಎಲ್ಲ ಹೊತ್ತಿಹೋಯಿತೋ ಏನೊ, ಇದರ ಸುಡಲಿ !.. ವಾಸಬರೂದಿಲ್ಲಽ?..(ಕೇಳಿ) ಏನೂ? (ಎಂದು ರಂಗದ ತುದಿಯು ಕಡೆಗೆ ನಡೆಯುವಳು).

ಈಕೆಯ ಗಂಡ:— ಏನಂದೆ? .. ವಾಸ ಬರತಿದೆಯೆ ? .. (ಅಣಕಿನ ದನಿಯಲ್ಲಿ) ಅಹುದು ! ಹೊರಗೆ ಹೋಗುವಾಗ ಗಮ್ ಗಮ ಅತ್ತರದೆಣ್ಣೆ ಸುರುವಿಕೊಳ್ಳುತಾ ಇದ್ದೀನಿ—ಮೈಮೇಲೆ ! ..ಅಂದರೇನು ಅಂದರೆ ? ... ಅವಸರದೊಳಗೆ ಮಸಿದೌತಿ ಉರುಳಿ ತಿಲ್ಲಿ ಮೇಜಿನ ಮೇಲೆ—ಎಷ್ಟು ದಿವಸದ ಮಸಿಯೊ !— ಅದರದು ವಾಸ ! (ಎಂದು ಪುಸ್ತಕಗಳನ್ನೂ ಕಾಗದಗಳನ್ನೂ ಸರಿಸಿಡುವಾಗ ಒಮ್ಮೆಲೆ ದು) ಥೂ !, ನೋಡಿದಿಯಾ? ಇದೂ ಇಲ್ಲಿಯೆ ಇದೆ (ಎಂದು ಕುರ್ಚಿಯಿಂದ ರುಮಾಲನ್ನು ಎತ್ತಿ) ಮೇಲೆ ಕೂತು ಇಸ್ತ್ರೀನೇ ಮುರಿದು ಹೋಗಿದೆ ! .. (ಸಿಟ್ಟಿನಿಂದ) ಯಾರದೇನು? ಇಸ್ತ್ರೀ ಏನು, ನನಗೆ ಮಾಡಿರುವುದೇನು ? .... (ರುಮಾಲನ್ನು ಜಾಡಿಸಿ ಅವಸರದಿಂದ ಸುತ್ತಿಕೊಳ್ಳುತ್ತ) ರುಮಾಲದ ಇಸ್ತ್ರೀ ! (ಲಗುಬಗೆಯಿಂದ ರಂಗದ ತುದಿಗೆ ನಡೆಯುತ್ತ) ನಾ ಬೇಗ ಬರತೀನಿ ಆಫಿಸಿನಿಂದ.

ಆತನ ಹೆಂಡತಿ:— (ರಂಗದ ತುದಿಗೆ ನಿಂತು ಮುಖ ತಿರುಗಿಸಿ ಗಂಡನ ಕೋಣೆಯ ಕಡೆಗೆ ನೋಡುತ್ತ) ಬ್ಯಾಗ–ಬ್ಯಾಗ ಅಂದ್ರೇನು? ಕಡೆಗ ಬ್ಯಾಳಿಗೆ ನೀರ್ಹಾಕಿ ಅನ್ನದ್ದು ಒಲೆಯ ಮ್ಯಾಲೆ ಇಟ್ಟಾದರೂ ಬರ್ತೀನಿ.

ಈಕೆಯ ಗಂಡ:— (ರಂಗದ ತುದಿಗೆ ನಿಂತು ಮುಖ ತಿರುಗಿಸಿ ಹೆಂಡತಿಯ ಕೋಣೆಯ ಕಡೆಗೆ ನೋಡುತ್ತ) ಬೇಗ—ಅಂದರೇನು ? ಆಫೀಸ ಬಿಟ್ಟಕೂಡಲೇ ಬರ್ತೀನಿ..

ಆತನ ಹೆಂಡತಿ:— (ಅರ್ಧ ತನ್ನಷ್ಟಕ್ಕೆ) ಬಿಡಲಾರದ ಕರ್ಮ!

ಈಕೆಯ ಗಂಡ:— (ಅರ್ಧ ತನ್ನಷ್ಟಕ್ಕೆ) ಬಿಟ್ಟೀತು ಹೇಗೆ ಪ್ರಪಂಚ !

[ಆ ಮೇಲೆ ಇಬ್ಬರೂ ನಿಂತಲ್ಲಿಯೆ ತಂತಮ್ಮ ಕೋಣೆಗಳ ಕಡೆಗೆ ಲಕ್ಷ್ಯಗೊಟ್ಟು ಕೇಳಿದಂತೆ ಮಾಡುವರು. ಆಮೇಲೆ ಬೇಜಾರದ ಮುಖಮುದ್ರೆಯಿಂದ ತಂತಮ್ಮ ಕೋಣೆಗಳ ಕಡೆಗೆ ಸಾಗಿ ಬಾಗಿಲ ಹತ್ತಿರ ನಿಂತು—]

ಆತನ ಹೆಂಡತಿ:— (ತನ್ನ ಗಂಡನಿಗೆ) ಮತ್ತ ಯಾಕ—

ಈಕೆಯ ಗಂಡ:— (ತನ್ನ ಗಂಡನಿಗೆ) —ಕರೆದೆ ಏನು ನನ್ನ?

[ಇಬ್ಬರೂ ನಿಂತಲ್ಲಿಯೆ ಉಸುರ್ಗರೆದು ತಲೆ ಅಲ್ಲಾಡಿಸುವರು]

(ತೆರೆ)

ಮುಗಿಯಿತು.

ವಿಚಾರಗಳ ವಿಚಿತ್ರ ಶಕ್ತಿ

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

ಮನಸ್ಸು ಹಲವು ಶಕ್ತಿಗಳನ್ನು ಒಳಗೊಂಡ ಒಂದು ಅತ್ಯದ್ಭುತವಾದ ಸೂಕ್ಷ್ಮೇಂದ್ರಿಯ. ಮನುಷ್ಯನ ವಿಚಾರವು ಮನಸ್ಸಿನ ಆ ಶಕ್ತಿಗಳನ್ನು ಒಂದೊಂದನ್ನಾಗಿ ಎಚ್ಚರಿಸುತ್ತಿರುವುವು. ವಿಚಾರವೂ ಒಂದು ಭೌತಪದಾರ್ಥದಂತೆ ಉದ್ದಗಲ, ತೂಕ-ಮಾಪುಗಳಿಂದ ಕೂಡಿರುವುದೆಂದು ಹೇಳಿದರೆ ನಮ್ಮ ಜನಸಾಮಾನ್ಯರು ವಿಸ್ಮಿತರಾಗದೆ ಇರಬಹುದೆ?

"ವಿಚಾರ"ವು ಭಾವವಾಚಕ ನಾಮವೆಂದೂ ಅದು ನಮಗೆ ಗೋಚರವಾಗುವುದಿಲ್ಲವೆಂದೂ ವ್ಯಾಯಾಕರಣಿಗಳು ಹೇಳಬಹುದು. ಆದರೆ ಪಾಶ್ಚಾತ್ಯರು ವಿಚಾರಗಳೂ ವಸ್ತುಗಳೆಂಬುದನ್ನು ಸಿದ್ಧಪಡಿಸಿದ್ದಾರೆ. ಉಷ್ಣತೆ, ಬೆಳಕು, ವಿದ್ಯುಚ್ಛಕ್ತಿಗಳಂತೆ ವಿಚಾರವೂ ಒಂದು ಅಮೋಘವಾದ ಶಕ್ತಿ, ಈ ಶಕ್ತಿಯನ್ನು ಅಳೆಯುವಂತಹ ಸೂಕ್ಷ್ಮ ಯಂತ್ರಗಳಿವೆ. ಅದರ ಸ್ವರೂಪ, ತೀಕ್ಷ್ಣತೆ, ವೇಗ ಮುಂತಾದುವನ್ನು ವ್ಯಕ್ತಪಡಿಸುವ ಸಾಧನಗಳಿವೆ.

ಒಮ್ಮೊಮ್ಮೆ ಯಾವುದಾದರೊಂದು ಸ್ಥಳಕ್ಕೆ ಹೋದಾಗ ನಮಗೆ ಅಕಾರಣವಾಗಿ—ನಮಗೆ ಹಾಗೆ ಎನಿಸುವುದು, ಅಷ್ಟೆ—ಸಂತೋಷವಾಗುವುದುಂಟು. ಮತ್ತೊಂದೆಡೆಯಲ್ಲಿ ಹೇಸಿಕೆ ಹುಟ್ಟಿ "ಇಲ್ಲಿಂದ ಯಾವಾಗ ಹೋದೇನು" ಎಂದೆನಿಸುವುದು. ಕೆಲವರು ನಮಗೆ ನಿಷ್ಕಾರಣವಾಗಿ ಪ್ರಿಯರಾಗುವುದನ್ನೂ, ನಾವು ಅವರ ಸಹವಾಸವನ್ನು ಬಯಸುವುದನ್ನೂ ಎಷ್ಟೋ ಸಲ ನೋಡುತ್ತೇವೆ. ಕೆಲವರಿಗಾಗಿ ನಮ್ಮಲ್ಲಿ ಕಾರಣವಿಲ್ಲದೆ ಜುಗುಪ್ಸೆಯುಂಟಾಗುವುದು; ಇಲ್ಲವೆ ಅತಿಯಾದ ಬೇಸರು ಹುಟ್ಟುವುದು, ಅಲ್ಲವೆ?

> "ನಿನ್ನ ರೂಢಭೂತ ವಿಚಾರಗಳು ಹೇಗಿರುವವೊ ಹಾಗೆ ನಿನ್ನ ಮನಸ್ಸಿನ ಸ್ವರೂಪವಾಗುವುದು; ಯಾಕೆಂದರೆ ಮನಸ್ಸು ವಿಚಾರಗಳಿಂದ ಚಿತ್ರಿತವಾಗುತ್ತದೆ.
>
> —ಮಾರ್ಕಸ್ ಆರ್ಲಿಯಸ್

ಒಬ್ಬ ಸದ್ಗೃಹಸ್ಥನು ಒಂದು ಸಲ ತನ್ನ ಗುರುತಿನವರ ಮನೆಗೆ ಹೋಗಿದ್ದನು. ಮಾತು-ಕಥೆ, ಆದರಾತಿಥ್ಯ ಮುಂತಾದುವು ಮುಗಿದ ಮೇಲೆ ಮನೆಯವನೊಂದಿಗೆ ತೈಲಚಿತ್ರಗಳನ್ನು ನೋಡಲೋಸುಗ ಒಂದು ಕೋಣೆಗೆ ಹೋದನು. ಕೋಣೆ ಒಳ್ಳೊಳ್ಳೆಯ ವಸ್ತ್ರಗಳಿಂದ ಸುಶೋಭಿತವಾಗಿ ಪರಿಷ್ಕಾರವಾಗಿದ್ದಿತು. ಆದರೇನು? ಆ ಸದ್ಗೃಹಸ್ಥನು ಅಲ್ಲಿ ಕೆಲವು ನಿಮಿಷ ಇರುವುದರೊಳಗೇ ಅತನಿಗೆ ತಲೆತಿರುಗಿದಂತಾಯಿತು; ಒಂದು ಅವರ್ಣನೀಯವಾದ ಭೀತಿಯು ಅವನನ್ನು ಆವರಿಸಿತು. ಅವನಿಗೆ ಅಲ್ಲಿ ಹೆಚ್ಚು ಕಾಲ ನಿಲ್ಲಲಿಕ್ಕಾಗಲಿಲ್ಲ. ಹೊರಕ್ಕೆ ಬಂದು ಮನೆಯವನನ್ನು ಕುರಿತು ಹೇಳಿದ:

"ಎಮ್ಮನೇ, ಆ ಕೋಣೆಯಲ್ಲಿ ಹೋದೊಡನೆಯೆ ನನಗೆ ನಾನಾ ವಿಧದ ಭಯಂಕರ ಭಾವನೆಗಳು ಬಂದುವು. ಇಕೊ, ನನ್ನ ಮೋರೆ ಬಾಡಿಹೋಗಿದೆ!"

ಮನೆಯವನು ಆಶ್ಚರ್ಯಚಕಿತನಾಗಿ ನುಡಿದ: "ತುಂಬಾ ವಿಷಾದವಾಗುತ್ತದೆ. ಆದರೆ ಹೀಗಾಗಲು ಕಾರಣವೇನೋ ಗೊತ್ತಾಗಲಿಲ್ಲ!"

ಸದ್ಗೃಹಸ್ಥನೆಂದ: "ಇರಲಿ, ಇಲ್ಲಿ ಎಂದಾದರೂ ಯಾವುದಾದರೂ ದುಷ್ಕೃತ್ಯ ನಡೆದಿರುವುದೇ?"

ಸ್ವಲ್ಪ ಯೋಚಿಸಿ, ಮನೆಯವನೆಂದ: "ಕೆಲವು ವರ್ಷಗಳ ಹಿಂದೆ ಆ ಕೋಣೆಯಲ್ಲಿ, ನನಗೆ ಆಪ್ತಳಾಗಿದ್ದ ಒಬ್ಬ ಹೆಂಗುಸಿನ ಕೊಲೆಯಾಗಿದ್ದಿತಂತೆ!"

"ತಿಳಿಯಿತು! ಅದೇ ಕಾರಣ!" ಎಂದು ಸದ್ಗೃಹಸ್ಥನು ಹೇಳಿದನು.

ಎಷ್ಟೋ ವರ್ಷಗಳ ಹಿಂದೆ ನಡೆದ ಸಂಗತಿಯ ಬಗೆಗೆ ಹುಟ್ಟಿದ ವಿಚಾರಗಳು, ಆ ಸದ್ಗೃಹಸ್ಥನ ಮೇಲೆ ಎಂತಹ ಪರಿಣಾಮವನ್ನು ಮಾಡಿದುವು!

ಎಂತಹ ತೋರಣ-ತೋರಣಗಳಿಂದ ಸಿಂಗರಿಸಿದ ಆರಮನೆಯಾದರೂ ಅಲ್ಲಿ ವಾಸಿಸುತ್ತಿದ್ದ ಹಾಗೂ ವಾಸಿಸುವ ಜನರ ವಿಚಾರಗಳು ಹೇಯವೂ ಕನಿಷ್ಠವೂ ಆಗಿದ್ದರೆ, ಅಲ್ಲಿ ನಮಗೆ ಸಮಾಧಾನವಾಗದು. ಅದೇ, ಬಡವನ ಗುಡಿಸಿಲೇ ಆಗಲೊಲ್ಲದು—ಒಳ್ಳೊಳ್ಳೆಯ ವಿಚಾರಗಳು ಅಲ್ಲಿ ವಾಸವಾಗಿದ್ದರೆ ನಮಗೆ ಸಂತೋಷವಾಗದೆ ಇರಲಾರದು. ದೇವಾಲಯ—ಮಸೀದೆ—ಇಗರ್ಜಿಗಳಿಗೆ ಹೋದಾಗ ಭಕ್ತಿಭಾವವು ಸ್ವಾಭಾವಿಕವಾಗಿ ತಲೆದೋರುವುದು, ಅಲ್ಲವೆ?

ಇಂತಹ ಪ್ರತಿಕ್ರಿಯೆಗಳಿಗೆ ಅಲ್ಲಲ್ಲಿ ನೆಲಸುವ ವಿಚಾರಗಳೇ ಕಾರಣ. ಯಾಕೆಂದರೆ ಧ್ವನಿಯ ತರಂಗಗಳು ಹವೆಯಲ್ಲಿ ಹರಡುವಂತೆ, ವಿಚಾರದ ಅಲೆಗಳೂ ನಮ್ಮ ಸುತ್ತಮುತ್ತಲೂ ವ್ಯಾಪಿಸು

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !

೫ ಆಣೆಗೆ ೧೦ ಬ್ಲೇಡು !

ವುವು. ಒಂದು ವಿಚಾರ ಮೂಡಿದರೆ ಅದರ ತರಂಗಗಳು ನಾಲ್ಕೂ ನಿಟ್ಟಿಗೂ ಹಬ್ಬಿ, ತನ್ನ ತೀಕ್ಷ್ಣತೆ, ಉದ್ದೇಶ, ವೇಗ, ದಿಶೆಗಳಿಗೆ ಅನುಗುಣವಾಗಿ ಪರಿಣಾಮವನ್ನುಂಟುಮಾಡುವುದು. ಭಿನ್ನ ಭಿನ್ನ ವಿಚಾರಗಳಿದ್ದಂತೆ ಅವುಗಳ ಪರಿಣಾಮಗಳೂ ಭಿನ್ನಭಿನ್ನವಾಗುವುವು. ಮತ್ತೊಂದು ಮಹತ್ತ್ವದ ವೈಶಿಷ್ಟ್ಯವೆಂದರೆ, ದುಷ್ಟ ವಿಚಾರಗಳು ದುಷ್ಟ ವಿಚಾರಗಳನ್ನು ಆಕರ್ಷಿಸುವುವು. ಉದಾತ್ತ ವಿಚಾರಗಳು—ಸದ್ವಿಚಾರಗಳು—ಅಂತಹ ಉದಾತ್ತ, ಸದ್ವಿಚಾರಗಳನ್ನೇ ಆಕರ್ಷಿಸುವುವು. ನಮ್ಮ ವಿಚಾರಗಳು ವಿಶುದ್ಧವಾಗಿದ್ದು, ಪ್ರಬಲವಾಗಿದ್ದರೆ ಬೇರೆಯವರ ಕುವಿಚಾರಗಳ ಪರಿಣಾಮವು ನಮ್ಮಮೇಲೆ ಆಗುವುದಿಲ್ಲ. ಬಲವಾದ ಸದ್ವಿಚಾರದ ಮುಂದೆ ಕೆಡಕು ವಿಚಾರದ ಆಟ ನಡೆಯುವುದಿಲ್ಲ.

ನಿಜವಾಗಿ ನೋಡಿದರೆ ನಾವು ತರತರದ, ಅಸಂಖ್ಯಾಕ ವಿಚಾರತರಂಗಗಳಿಂದ ತುಂಬಿ ಉಬ್ಬಸಪಡುವ ಮಹಾಸಾಗರದಲ್ಲಿ ಓಲಾಡುತ್ತಿದ್ದೇವೆ. ಅದೆಷ್ಟೋ ಅಲೆಗಳು ನಮ್ಮ ಮೇಲೆ ಹರಿದು-ಹಾಯ್ದು ಬಂದು, ಅಪ್ಪಳಿಸಿ, ತಳ್ಳಿಯಿಸಿ, ಮುದ್ಯಾಡಿ, ತಮ್ಮ ತಮ್ಮ ಪ್ರಭಾವವನ್ನು ಬೀರುವುವು ! ಆದರೆ ಕುವಿಚಾರಗಳ ಕಿಟ್ಟವು ನನಗೆ ಅಂಟಿಕೊಳ್ಳದಂತೆ ನಾವು ಜಾಗರೂಕರಾಗಿದ್ದರೆ ನನಗೇತರ ಭಯ ?

ವಿಚಾರಗಳು ಯಾವುದಾದರೊಂದು ಕೃತಿಗೆ ಪೋಷಕವಾಗಿರಬೇಕು. ಅವುಗಳ ಹಿಂದೆ ಯಾವುದಾದರೊಂದು ಉದ್ದೇಶ ವಿರಬೇಕು. ಹಾಗಲ್ಲದೆ, ವಿಚಾರಗಳನ್ನು ಮನಬಂದಂತೆ ಹರಿಯಗೊಟ್ಟರೆ ಅವು ನಮ್ಮನ್ನು ಯಾವ ಹೆಮ್ಮಡುವಿಗೆ ಎಳೆದೊಯ್ಯುವುವೋ ಹೇಳಬಲ್ಲವರಾರು ! ಅವನ್ನು ನಮ್ಮ ಅಧೀನದಲ್ಲಿಟ್ಟುಕೊಂಡು, ಹಸನುಮಾಡಿ, ಅವಕ್ಕೆ ಒಳ್ಳೆಯ ದಾರಿಯನ್ನು ಕಲ್ಪಿಸಿಕೊಟ್ಟರೆ ನಾವು ಎಷ್ಟೋ ಅಪಾಯಗಳಿಂದ ಪಾರಾಗಬಹುದು. ವಿಚಾರಗಳನ್ನು ಅಂಕೆಯಲ್ಲಿಡಬಲ್ಲವನು ತನ್ನ ಜೀವನವನ್ನು ಅಂಕೆಯಲ್ಲಿಟ್ಟುಕೊಂಡಂತೆಯೇ ಸರಿ. ಯಾಕೆಂದರೆ—

ವಿಚಾರವು ಅಪೇಕ್ಷೆಯ ಮೂಲ.
ಅಪೇಕ್ಷೆಯಿಂದ ಕಾರ್ಯವು ಹುಟ್ಟುವುದು.
ಕಾರ್ಯವು ಅಭ್ಯಾಸವನ್ನುಂಟುಮಾಡುವುದು.
ಅಭ್ಯಾಸವು ಸ್ವಭಾವಕ್ಕೆ ಎಡೆಗೊಡುವುದು.
ಸ್ವಭಾವವೇ ಅದೃಷ್ಟದ ಜನನಿಯು.

ವಿಚಾರಗಳ ಮೂಲಕ ಅಘಟಿತ ಘಟನೆಗಳನ್ನು ಮಾಡಬಹುದೆಂದು ಬಲ್ಲವರು ಹೇಳುತ್ತಾರೆ. ಮೋಹನಿದ್ರೆ, ಅಥವಾ ಆವೇಶನಿದ್ರೆ (Hypnotism) ಯಲ್ಲಿಯೂ, ಸಾವಿರಾರು ಮೈಲು ದೂರದಲ್ಲಿರುವ ರೋಗಿಗಳನ್ನು ಕುಳಿತಲ್ಲಿಂದ ಗುಣಪಡಿಸುವುದರಲ್ಲಿಯೂ (Distant Healing) ಇತರ ಸಾಧನವಿಲ್ಲದೆ, ದೂರದ ಆಪ್ತೇಷ್ಟರಿಗೆ ಹೃದ್ಗತವನ್ನು ತಿಳಿಸುವುದರಲ್ಲಿಯೂ (Telepathy) ಈ ಅದ್ಭುತಶಕ್ತಿಯ ಉಪಯೋಗವಾಗುತ್ತಿರುವುದು ವಾಚಕರಿಗೆ ಗೊತ್ತಿರಬಹುದು.

ಕಲ್ಪನಾಶಕ್ತಿಗೂ ವಿಚಾರಗಳಿಗೂ ತೀರ ಸವಿವಾದ ಸಂಬಂಧ ವಿದೆಯಷ್ಟೆ? ಮುಂದಾಗಲಿರುವ ಕೆಲಸವನ್ನು ಇಂದೇ ಕಲ್ಪನೆಯ ಕಣ್ಣಿನಿಂದ ಕಾಣುವುದರಲ್ಲಿ ಎಷ್ಟೋ ತಥ್ಯವಿದೆ. ಕಲ್ಪನೆ ಮತ್ತು ದೂರದೃಷ್ಟಿ ಇಲ್ಲದವನಾವನೂ ಘನತೆಗೇರಲಿಲ್ಲ. ಆಗಾಗ ಮನಸ್ಸಿನಲ್ಲಿ ಮಂಡಿಗೆತಿನ್ನುವುದೂ ಗಾಳಿಯಲ್ಲಿ ಗೋಪುರ ಕಟ್ಟುವುದೂ ಬೇಕೇಬೇಕು. ಶೋಧಕರು, ಶಿಲ್ಪಿಗಳು, ಕಾದಂಬರಿಕರ್ತರು, ವ್ಯಾಪಾರಿಗಳು– ಎಲ್ಲ ಕರ್ತೃತ್ವಶಾಲಿಗಳೂ ಕಲ್ಪನೆಯ ರೆಕ್ಕೆಯನ್ನೇರಿ ಮನೋರಥದ ವಿಶಾಲವಾದ ರಾಜ್ಯದಲ್ಲಿ ವಿಹರಿಸುವವರೆ. ಅಪ್ರತಿಮ ಶಿಲ್ಪಿಯಾಗಿದ್ದ ಮ್ಯಾಕೆಲ್ ಏಂಜೆಲೋ ಕಗ್ಗಲ್ಲಿನಲ್ಲಿ ಸುಂದರವಾದ ಪ್ರತಿಮೆಗಳನ್ನು ಕಾಣುತ್ತಿದ್ದನಂತೆ !

ಆದರೆ ಕಲ್ಪನೆಯ ಕುದುರೆಗೆ ಕಡಿವಾಣವಿರಬೇಕು. ಅದಕ್ಕೆ ಮಿತಿ-ಮೇರೆಗಳಿದ್ದರೆ ಜೆಂದ. ಅದಕ್ಕೆ ಉದ್ಯೋಗ-ದೃಢನಿಶ್ಚಯಗಳ ಜೋಡಣೆ ಬೇಕು.

ಯಾವುದಾದರೊಂದು ವಿಷಯವನ್ನು ಕುರಿತು ನಾವು ಸದಾ ಯೋಚಿಸುತ್ತಿದ್ದರೆ, ನಮ್ಮ ಪ್ರವೃತ್ತಿಯು ಆತ್ಮಕಡೆಗೆ ಹರಿಯುವುದು. ಆ ದಿಶೆಯಲ್ಲಿ ನಮ್ಮ ಏಳಿಗೆಗೆ ಪ್ರಾರಂಭವಾಗುವುದು. ನಮ್ಮ ಇಚ್ಛೆಯು ಬಲವಾಗಿದ್ದರೆ ಅದನ್ನು ನೆರವೇರಿಸಲಿಕ್ಕೆ ಬೇಕಾಗುವ ದಾರಿಯೂ ಶಕ್ತಿಯೂ ತಾವಾಗಿ ಕಾಣಿಸಿಕೊಳ್ಳುವುವು. ಇಚ್ಛೆಯು ಮಾತ್ರ ಕುಗ್ಗಕೂಡದು. ಆಕಾಂಕ್ಷೆಯಲ್ಲಿ ಸಬಲತೆಯಿಲ್ಲದಿದ್ದರೆ, ಅದು ಕ್ಷಣಿಕವಾದರೆ, ಅದು ಬರಿಯೆ ಆಕಾಂಕ್ಷೆಯಾಗಿಯೆ, ಕೇವಲ ಸವಿಗನಸಾಗಿಯೆ ಉಳಿಯುವುದು.

ನಾವು ಎಂತಹ ವಿಚಾರಗಳಿಗೆ ಮೇಲಿಂದಮೇಲೆ ಇಂಬುಗೊಡುತ್ತಿರುವೆವೊ ಅಂತಹರಾಗುವೆವು. ಆದುದರಿಂದ ಉದಾತ್ತವಾದ ವಿಚಾರಗಳು, ಶ್ರೇಷ್ಠವಾದ ವಿಚಾರಗಳು ನಮ್ಮಲ್ಲಿ ಮನೆಮಾಡಿಕೊಂಡಿರಲಿ !

ಗೋವಿಂದನ ★ ಸಾಹಸ

ನಂಬರ್ ೧

(ಪತ್ತೇದಾರಿ ಕಥೆ)

ಡಾ. ಎಚ್. ಬಿ. ಕೊಣ್ಣೂರ
ಎಲ್. ಸಿ. ಪಿ. ಎಸ್. ಗದಗು

★

ಕೆಲಸಕ್ಕಾಗಿ ಮುಂಬಯಿಗೆ ಹೋದ ಗೋವಿಂದನ ಕೊರಳಲ್ಲಿ, ಕಳ್ಳತನದ ಅಪರಾಧದ ಕಲ್ಲು ತೂಗುಬಿದ್ದಿತು. ಅದನ್ನು ಹರಿದೊಗೆಯಬೇಕಾದರೆ ಕಳವು ಮಾಡಿದ ಕಳ್ಳನಿಂದಲೆ ಸಹಾಯದೊರೆಯಿತು. ಅದಿಲ್ಲದೆ ಹೋಗಿದ್ದರೆ ಪೋಲೀಸ ಖಾತೆಯಲ್ಲಿ ಸೇರಬೇಕೆಂದಿದ್ದ ಗೋವಿಂದನು ಸೆರೆಮನೆಯನ್ನು ಸೇರಬೇಕಾಗುತ್ತಿದ್ದಿತು.

"ಹೌದು, ಹೌದು, ಯುದ್ಧಾಕ ಅಂದರೆ ನಮ್ಮಂಥವರಿಗೊಂದು ಅನ್ನ ಅದ್ಹಾಂಗ ಆತು! ನೌಕರಿಯ ಹಾದಿ ನೋಡಿ ನೋಡಿ ಬೇಸತ್ತು ಭಾವೀ ಬೀಳೋಹಾಂಗ ಆಗಿತ್ತು. ವ್ಯಾಳ್ಯಾಕ್ಕ ಈ ರಿಕ್ರೂಟ್ ಭರ್ತಿಯಾದರೂ ಬಂತು! ಇಲ್ಲದಿದ್ದರೇನು, 'ತಿರುಗೀ ಮುರುಗೀ ಹರಗಣ್ಣಾ' ಅಂತ;..ಒಂದಕ ತರದ ಅರ್ಜೀ ಬರಿಯೋದು; ಒಂದಕ ತರದ ಉತ್ತರಾ ತರಿಸೋದು. ಆಂ! ಸರಕಾರದವರಾರೇ ಏನು! ಅವರೂ ಸಕಾಜ್ಜಾಗಿ 'No Vecancy' ಅಂಬೂ ಕಾರ್ಡು ಛಾಪಿಸೇ ಒಗಿದು ಬಿಟ್ಟಾರ. ಆದರೆ ಈ ಸಾರೆ ಬಂತು ನೋಡೋ ಸರಕಾರೀ ಟವಾಲು: O. H. M. S. – ಆನ್ ಹೀಜ ಮೆಜೆಸ್ಟೀಜ್ ಸರ್ವಿಸ್ .. ವ್ಹಾ! O. H. M. S. ಚೆಲೋ ವ್ಯಾಳ್ಯಾ ಬರಬೇಕದಕ!" ಹೀಗೆಂದು ಗೋವಿಂದನು ತನ್ನಷ್ಟಕ್ಕೇ ಮಾತನಾಡಿಕೊಳ್ಳುತ್ತ ಸಂತೋಷಗೊಳ್ಳುತ್ತಲಿದ್ದನು. ಅವನ ಕೈಯಲ್ಲಿ ಒಂದು ಲಖೋಟಿ ಇತ್ತು. ಅವನ ತಲೆಯಲ್ಲಿ ನಡೆದಿರುವ ಇನ್ನೂ ಅನೇಕ ವಿಚಾರಗಳ ವೇಗವನ್ನೇ ಅನುಸರಿಸುತ್ತಲಿದೆಯೋ ಏನೋ ಅನ್ನುವಂತೆ, ಗೋವಿಂದನು ಕುಳಿತ 'ಚೂನಾ ಮೇಲ್' ಕೂಡ ಒಳ್ಳೇ ವೇಗದಿಂದ ಹೊರಟಿತ್ತು.

ಕುಲಕರಣಿ ಗೋವಿಂದ ಪ್ಯಾಟ್ರಿಕ್ಕಿನಲ್ಲಿ ಮೂರು ಸಲ ಲಾಗ ಬಿಗಿದು, ನಾಲ್ಕನೆಯ ಸಲ ಅಂತೂ ಇಂತೂ ವಾಸಾಗಿ, ಶಾಲೆಯನ್ನು ಬಿಟ್ಟು ಮೂರು ವರ್ಷವಾಗಿತ್ತು. ನೌಕರಿಗಾಗಿ ಎಷ್ಟೋ ಕಡೆಗೆ ಅಲೆದಾಡಿದ್ದ. ಅರ್ಜಿಯ ಮೇಲೆ ಅರ್ಜಿ ಹಾಕಿದ್ದ. ತನ್ನ ಕೈಯಿಂದಾದ 'ವತೀಲಿ' ಹಚ್ಚಿದ್ದ. ೨-೩ ಕಡೆ 'ಲಂಚ'ದ ಪ್ರಸಂಗ ಬಂದಾಗ ಮಾತ್ರ ಕೈ ಬಿಟ್ಟಿದ್ದ. ನಿರುದ್ಯೋಗಿಯಾಗಿ ತಿರುಗಾಡಿಯೂ, ಮಾಡಿದ ಪ್ರಯತ್ನಗಳಲ್ಲೆಲ್ಲ ನಿರಾಶೆ ಹೊಂದಿಯೂ ಅವನು ಉದಾಸೀನವೃತ್ತಿಯವನಾಗಿದ್ದನು. 'ಎಲ್ಲಕ್ಕೂ ದೈವ ಬೇಕು' 'ವ್ಯಾಳ್ಯಾ ಚಲೋ ಬರಬೇಕು' 'ಗ್ರಹಾ ನೆಟ್ಟಗಿರಬೇಕು' ಎಂಬವೇ ಪ್ರತಿ ಪ್ರಸಂಗಕ್ಕೂ ಅವನ ಉತ್ತರಗಳು. ಯಾವ ಪ್ರಸಂಗದಲ್ಲಿಯೂ ಅವನಲ್ಲಿ ಗಾಂಭೀರ್ಯವೆನ್ನುವುದೇ ಇರುತ್ತಿರಲಿಲ್ಲ. 'ಏನು ಮಗಂದು! ಆಗೋದು ಆಗತಿರತಕದ; ಹೋಗೋದು ಹೋಗತಿರತಕದ' ಎನ್ನುತ್ತಿದ್ದ.

ಇಂಗ್ಲಂಡ್–ಜರ್ಮನಿ ಯುದ್ಧ ಪ್ರಾರಂಭವಾಗುತ್ತಲೆ ಹಿಂದುಸ್ಥಾನದಲ್ಲಿ ಕೂಡ 'ರಿಕ್ರೂಟ್ ಭರ್ತಿ' ನಡೆದದ್ದನ್ನು ಕೇಳಿ, ಎಲ್ಲೆಲ್ಲಿಯೂ ನೌಕರಿ ಸಿಕ್ಕದುದರಿಂದ ರೊಚ್ಚಿಗೆದ್ದ ಗೋವಿಂದನೂ ಸೈನ್ಯಖಾತೆಗೆ ಒಂದು ಅರ್ಜಿ ಹಾಕಿದ್ದನು. ಅವನಿಗೆ ಬಂದು ಹಾಜರಾಗಲಿಕ್ಕೆ ಕರೆ ಬಂದುದರಿಂದ, ಮನೆಯಲ್ಲಿ ಹಿರಿಯರ ಮಾತನ್ನು ಕೇಳದೆ—ಚಿಕ್ಕಂದಿನಲ್ಲಿ ತಂದೆ-ತಾಯಿಗಳು ತೀರಿದುದರಿಂದ ಅವನು ಇರುತ್ತಿದ್ದುದು ಸೋದರ ಮಾವನ ಮನೆಯಲ್ಲಿ—ತನ್ನ ಗೆಳೆಯನೊಬ್ಬನ ಕಡೆಯಿಂದ ೧೫ ರೂಪಾಯಿ ಕೈಗಡ ತೆಗೆದು ಕೊಂಡು, ಮುಂಬಯಿಗೆ ಹೊರಟಿದ್ದ..ಈ ದಿನ.

ಬೆಳಿಗಿನಲ್ಲಿ ಗಾಡಿ ಪುಣೆ ಸ್ಟೇಶನ್ನಿಗೆ ಬಂದಕೂಡಲೆ, ಗೋವಿಂದನು ತನ್ನ ಸಾಮಾನುಗಳನ್ನು ಮುಂಬಯಿ ಗಾಡಿಯಲ್ಲಿಟ್ಟು, ಚಹಾ ಕುಡಿಯಲಿಕ್ಕೆಂದು 'ಇಂಡಿಯನ್ ರಿಫ್ರೆಶ್‌ಮೆಂಟ್' ಕೋಣೆಗೆ ಹೋದನು. ಅಲ್ಲಿ ಪುಣೆಯ 'ಪುರೀ ಭಾಜೀ, ಚಿನ್ಸಡಾ' ತಿಂದು, ಚಹಾ ಕುಡಿದು, ೧ದುಡ್ಡಿನ 'ಲೋಕಮಾನ್ಯ ಸಂಚಾರಿ' ಬಾಯಲ್ಲಿ ಹಾಕಿಕೊಳ್ಳುತ್ತ: 'ಏನಿದು? ಸೆಗಣೀ ಚರಟದಾಗ ಮೆಂಥೋಲ್ ಹಾಕ್ಯಾರೋ ಏನು?' ಎಂದುಕೊಂಡು, ಒಂದು ಸಿಗರೇಟ್ ತೆಗೆದು ಕೊಂಡು, ತನ್ನ ಕಂಪಾರ್ಟ್‌ಮೆಂಟಿಗೆ ಬಂದನು. ಹಾಗೆಯೆ ಸಿಗರೇಟು ಸೇದುತ್ತ ತನ ಟಿಕೇಟು ಭದ್ರವಾಗಿದೆಯೋ ಕಳ್ಳವೋ ಎಂದು ಜೇಬಿನಲ್ಲಿ ಕೈಹಾಕಿ ನೋಡಿಕೊಂಡನು. ಪಾಕೇಟು ತೆಗೆದು ಹತ್ತಿರ ಉಳಿದ ದುಡ್ಡನ್ನು ಎಣಿಸಿ ನೋಡಿದನು. ಕೇವಲ ೭ ರೂಪಾಯಿ ೨ ಆಣೆ ಇದ್ದುವು. ಗೋವಿಂದನು ವಿಚಾರಿಸ ತೊಡಗಿದ:— "ಈ ೭ ರೂ. ೨ ಆಣೆಗಳು ಮುಂಬಯಿಯಲ್ಲಿ ಬಹಳ ವಾದರೆ, ೨-೩ ದಿನ ಆದಾವು. ಮುಂದೆ..? ಮುಂದೇನು? ದೇವರೇ ಗತಿ! ಮುಂಬಯಿಗೆ ಬರಲಿಕ್ಕೆ ಬುದ್ಧಿಯನ್ನು ಕೊಟ್ಟ ದೇವರು ಮುಂದಿನ ವಿಚಾರ ಮಾಡಿಲಿಕ್ಕಿಲ್ಲನ? ೨-೩ ದಿನಾ ಅನಕಾ ಆಗತಕದ..! ಮುಂದಿನ ಮಾತು ಮುಂದೆ!" ಎಂದು ತನ್ನದೇ ಒಂದು ನಿರ್ಣಯಕ್ಕೆ ಬಂದ. ಅಷ್ಟರಲ್ಲಿಯೆ ಅವನಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸಿತು: "ಅಲ್ಲಾ! ಈ ರಿಕ್ರೂಟ್ ಭರ್ತೀ ಅಂದರ ಮಗಂದು..ಇನ್ನೇನು ನಮ್ಮನ್ನ 'ಹಡೇರವ' ಅಂತ ಹೆಣ ಬೀಳೇ ದುಡಿಸ್ಯಾರೇನಪಾ ಮತ್ತ? ನೌಕರೀನಕ ಮೊದಲು ಸಿಗೂ

ಹಾಂಗ ಇಲ್ಲ. ಸಿಕ್ಕರೆ ಮ್ಯಾಲೆ ಇಂಥಾವು: ನನಗೂ ನೆನಪಿನಾಗಕ ಒರಲಿಲ್ಲ.. ನಿಲ್ಲ್ಯಾದರೂ ನೌಕರೀ ಸಿಗಲೀ ಅಂಬೂ ಹುರುಪಿನಾಗ. ಹಾಯಸ್ಕೂಲಿನೊಳಗ ಇದ್ದಾಗ ಏನು ಒಮ್ಮೆ ಹೋಗಿದ್ದೆನೋ ಅರ್ಧಸಾರೆ ಹೋಗಿದ್ದೆನೋ ಆ ಡ್ರಿಲ್ ಕ್ಲಾಸಿಗೆ! ಆಂ, ಏನು ಮಾಡಬೇಕೂಽ.... ಹಾಂ ಹೌದು! ಹೌದೂ ಅಂದೆ! ಯುದ್ಧದ ದಿನದಾಗ ಒಂದು ಗುಪ್ತಪೋಲಿಸ್ ಡಿಪಾರ್ಟ್‌ಮೆಂಟ್ ಇರತಕದ; ಅದರಾಗಽ ಸೇರಬೇಕಽ. ಹೌದು ಮತ್ತಽ;..ಆದಕೂ ತ್ರಾಣ ಇದ್ದವನಽ ಜೀಕಲ್ಲಾ! ಏಽ, ಅದಕೇನು ಅಡ್ಡೀ ಇಲ್ಲಾ..ನಾ ಏನು ಸಿದ್ದಾ! ಅದರೆ ಆ 'ಹಡೆರಪ್' ಇಲ್ಲದಿದ್ದರಾಯಿತು; ಮುಂದಿನ ಸಾತು ಮುಂದೆ!" ಅಂತೂ ಗುಪ್ತಪೋಲಿಸ್ ಖಾತೆಯಲ್ಲಿ ಸೇರುವ ನಿರ್ಧಾರ ಮಾಡಿಕೊಂಡು, ಗೋವಿಂದ ಸಿಗರೇಟನ್ನು ಮುಗಿಸಿ ಕಿಟಕಿಯ ಹೊರಗೆ ಒಗೆದನು.

* * * *

"ಯಾ, ಯಾ, ಇಧಽಜ ಉತರಣಾರನಾ ತುಮ್ಹಾ? ಸಾತ ನಂಬರ ಖೋಲೀ ಖಾಲೀ ಆಹೇ (ಬನ್ನಿ ಬನ್ನಿ—ಇಲ್ಲಿಯೆ ಉಳಿದು ಕೊಳ್ಳುವವರಲ್ಲವೇ ನೀವು? ಏಳನೆಯ ನಂಬರಿನ ಖೋಲಿ ಬರಿಯದೆ ಇದೆ!)" ಎನ್ನುತ್ತ ವೆ. ಹಾರಾಷ್ಟ್ರ ಭವನದ ಮಾಲಕ ಮತ್ತು ಪಾಲಕನಾದ ಬಾಳಾರಾಮ ಗೋಡಬೋಲೆಯು, ಗೋವಿಂದನನ್ನು ಸ್ವಾಗತಿಸಿದನು.

ಗೋವಿಂದ :— ಆಂ....ನಿಮಗ....Yes. You know Kannada?

ಬಾಳಾರಾಮ:— ಹಾಂ ಹಾಂ ಕಾನಡೀ? ಎಸ್, ಹರಕತ್ತ ಇಲ್ಲಾ! ಪಾವೂ ಧಾರವಾಡದಾಗೇ ಇದ್ದಿವಿ. ಛೋಡೇ ಛೋಡೇ ಬರತಕದ.

ಇದೊಂದು ನೆಟ್ಟಗಾಯಿತೆಂದು ಗೋವಿಂದನು ಕೋಣೆಯ ಬಾಡಿಗೆಗೆ ದಿನಾಲು ೮ ಆಣೆ, ಊಟಕ್ಕೆ ೬ ಆಣೆ ಗೊತ್ತುಮಾಡಿ ಕೊಂಡು, ತನ್ನ ಏನೆಯ ನಂಬರಿನ ಕೋಣೆಗೆ ಹೋದನು. ಅಲ್ಲಿ ತನ್ನ ಅಂಗಿ-ಅರಿವೆಗಳನ್ನು ತೆಗೆದು, ಸಾಬೂನು-ಛೋತರ-ಪಂಜೆ ಗಳನ್ನು ತೆಗೆದುಕೊಂಡು ಸ್ನಾನಕ್ಕೆಂದು ಎದ್ದನು. ಗೋವಿಂದ ಕೋಣೆಯ ಬಾಗಿಲನ್ನು ಹಾಕುವಾಗ, ಮಗ್ಗಿಲಿನ ಕೋಣೆಯಿಂದ 'ಚಿರೂಟಿ'ನ ವಾಸನೆ ಬರುತ್ತಿತ್ತು. ಅಲ್ಲಿ ಯಾರಿರುವರೆಂದು ಹಣಿಕಿ ಹಾಕಿದನು; ಒಂದು ಭವ್ಯವಾದ ವ್ಯಕ್ತಿ, ಕನ್ನಡಕ ಹಾಕಿಕೊಂಡು ಚಿರೂಟು ಸೇದುತ್ತ 'ಟಾಯಿಮ್ಸ್' ಪತ್ರಿಕೆಯನ್ನು ಓದುತ್ತಲಿತ್ತು. ಬಾಗಿಲ ಮೇಲಿನ ಹಲಗೆಯ ಮೇಲೆ "ರಾ॥ ಸಾ॥ ಶೇಟ್ ಶ್ಯಾಮಲಾಲ್" ಎಂದಿತ್ತು. "ಯಾರದೋ ರೊಕ್ಕಾ ಹಾಕಿ ರಾವ್ ಸಾಹೇಬ ಆಗ್ಯಾನ, ಕಾಣಸ್ತತದ .. ಹಂ ಹಂ!" ಎಂದು ಒಟ್ಟು ಗುಡುತ್ತ ಗೋವಿಂದ ಸ್ನಾನಕ್ಕೆ ಹೋದನು. ಊಟದನಂತರ ತನ್ನ ಹಾಸಿಗೆಯನ್ನು ಬಿಚ್ಚಿ ಮಗ್ಗಿಲಾಗುತ್ತಲೇ ಗೋವಿಂದನಿಗೆ ಪ್ರವಾಸದ ಪ್ರಯಾಸದಿಂದ ಕೂಡಲೆ ಗಾಢನಿದ್ರೆ ಹತ್ತಿತು.

* * * *

"ಎಲಾ! ಎಷ್ಟು ಹೊತ್ತು ನಿದ್ದೆಯಪ್ಪಾ ಇದು?" ಎಂದು ಕಣ್ಣೊರಸಿಕೊಳ್ಳುತ್ತ ಗೋವಿಂದನು, ಎದುರಿನ ಬಾಳಾರಾಮನ ಮನೆಯಲ್ಲಿಯ ಗಡಿಯಾರವನ್ನು ನೋಡಿದನು. ೭ ಹೊಡೆದು ೫ ನಿಮಿಷವಾಗಿತ್ತು. ಗೋವಿಂದನು ಕೋಣೆಯ ಹೊರಗೆ ಬರುತ್ತಲೆ, ಹೋಟೆಲಿನಲ್ಲಿಯ ಬಹುತರ ಎಲ್ಲರೂ ಊಟತೀರಿಸಿ ಎಲ್ಲಿಗೋ ಹೊರಡುವ ಸಿದ್ಧತೆಯಲ್ಲಿದ್ದರು. ಉತ್ಸುಕನಾಗಿ ಗೋವಿಂದನು "ಏನು ಸ್ವಾಮಿಾ, ಇಷ್ಟೊಂದು ಗಡಿಬಿಡಿ?" ಎಂದು ಬಾಳಾರಾಮನನ್ನೇ ಕೇಳಿದನು. "ಹೇ ಹೋಯ್-ಆಂ ಇವತ್ತ ವೆಸ್ಟ್ ಎಂಡ್ ದೊಳಗ "ಮಿಲಿಯಾನಿಯರ್" ಸಿನೇಮಾ ಅಡಽ; ಮತ್ತು 'ಉದಯಶಂಕರ' ಪ್ರೊಗ್ರಾಮ್ ಆಹೆ. ನಾವೂ ಹೊಗತೀವಿ; ಬರತೀರಿ?" ಬಾಳಾರಾಮ ಕೇಳಿದ.

"ಛೇ, ನನಗ ಶಕ್ಯ ಇಲ್ಲ ಬಿಡಿರಿ; ನಾಳೆಗೆ ನಾಹೇಬನ ಭೆಟ್ಟಿಗೆ ಹೋಗಬೇಕು. ನಿದ್ದೀ ಕಟ್ಟಿ ಇವತ್ತ ಬಿದ್ದಾಂಗ ಬಿದ್ದೇ ಅಂದರೆ ಭಟ್ಟೀನಽ ಕೆಟ್ಟುಹೋದೀತು!"

"ನಿಮ್ಮದೂ ಇಚ್ಛಾ ಬುವಾ!"

* * * *

೮॥ ಗಂಟೆಗೆ ಊಟತೀರಿಸಿ ಗೋವಿಂದನು ಮಂಚದ ಮೇಲೆ ಬಿದ್ದುಕೊಂಡು, O. H. M. S. ಲಖೋಟಿಯನ್ನು ಪುನಃ ತೆಗೆದು ನೋಡುತ್ತ "ಈ ಕವ್ವರಿನೊಳಗ ಏನಾದರೂ ಇದ್ದೀತಪಾ? ಮತ್ತೂಽ ಮತ್ತೂಽ ನೋಡೂಹಾಂಗಽ ಆಗತಕದ. ಆಂ? ಒಳ್ಳೆದು! ನಾಳೆ ಹನ್ನೊಂದಕ್ಕರೇ ಭೆಟ್ಟಿ ಆಗೋದಽ? ಮತ್ತ ಹೌದು, ಅಂದ್ಹಾಂಗ' Nervous ಆಗಬಾರದೂ! ಮೊದಲು ಹೋದ ಗಳಿಗ್ಗೆ ಹೀಂಗ Salute ಮಾಡಬೇಕು; ತಿರುಗಿ ಬರೋ ಮುಂದ 'ಥ್ಯಾಂಕ್ಯೂ ಸರ್' ಅನಬೇಕು!" ಎಂದು ಏನೇನೋ, ಸಾಹೇಬರ ಭೆಟ್ಟಿಗೆ ಹೋದಾಗಿನ ಎಟಿಕೇಟ್ ಧ್ಯಾನಿಸಿಕೊಳ್ಳುತ್ತ ಲಿದ್ದನು. ನಿದ್ರೆಬರತೊಡಗಿತು. "ಏನಿದು? ಇನ್ನೂ ಎಷ್ಟು ಬಾಕೀ ಅದಽಪಾ ನಿದ್ದೀ? ಹಿಂಗಾದರ ನಾಳೆ ನಾವು ಡೊಗ್ಗಾಲು ಹೂಹೋದೇ! ಮ್ಯಾಲೆ ಗುಪ್ತಪೋಲಿಸ್ ಡಿಪಾರ್ಟಮೆಂಟಿನೊಳಗ ಸೇರಬೇಕಂತೀನಿ. ಆಂ? ಆಗಲಿ ಆಗಲಿ, ಈಗಽ ತೀರಿಸಿಕೊಂಡು ಬಿಡೋಣು, ಮುಂದಿನ ಮಾತು ಮುಂದೆ!" ಎಂದವನೇ ಪುನಃ ಮುಸುಕನ್ನು ಹಾಕಿಯೆ ಬಿಟ್ಟ.

ರಾತ್ರಿ ಸುಮಾರು ೧೧॥ ಗಂಟೆಯಾಗಿರಬಹುದು. ಗೋವಿಂದ ನಿಗೆ ಎಚ್ಚರವಾಯಿತು. ಉತ್ತಮ ನಿದ್ರೆಯಾಗಿ ಅವನ ಮನಸ್ಸು, ಮೈ ಎರಡೂ ಹಗುರಾಗಿದ್ದುವು. ತಾನು ಡಿಟೆಕ್ಟಿವ್ ಖಾತೆಯಲ್ಲಿ ಸೇರಬೇಕಾದರೆ ಏನೇನಿರಬೇಕೆಂಬುದನ್ನು ಅವನು ವಿಚಾರಮಾಡ ತೊಡಗಿದನು; "ಹೌದು, ಅದಕ ಬುದ್ಧಿ ಬಲು ಜೋರಕು ಇದ್ದವರೇ ಬೇಕು.. ಮತ್ತ ನಂದೇನು ಕಡಿಮಿ ಅದ? ದೊಡ್ಡ ಪರೀಕ್ಷಾ ಆಗಿಲ್ಲಽ? ಹೇ! ಅದೇನು! ದೊಡ್ಡ ಪರೀಕ್ಷಾ ಪಾಸಾದವರಿಗೇನೇ ದೇವರು ಬುದ್ಧಿಯ ಗುತ್ತಿಗೀ ಕೊಟ್ಟಾನಽ ಹೀಂಗೆನೂ ಇಲ್ಲ! ತೀರ್ಕೊಳ್ಳೀತು.. ಅಂದರೂ ನಮ್ಮ ಉದ್ಯೋಗಾ ಅಂದಮ್ಯಾಲೆ ಅದರ ಸಂಬಂಧೀ ಮಾಹಿತಿ ಗೊತ್ತಿರಲಿಕ್ಕೇ ಬೇಕು. ಅದಕ್ಕಽ ಇನ್ನಮ್ಯಾಲೆ "Scotland yard" ಪೋಲೀಸರ ರಿಪೋರ್ಟು ಓದಬೇಕು. Mystry Novels ಓದಬೇಕು. ಖೂನೀಖಟ್ಟಿ

ಅಭ್ಯಾಸಮಾಡಬೇಕು.. ಒಳ್ಳೇದು ಒಳ್ಳೇದು. ನಾಳೆ ಸಾಹೇಬರ ಭೆಟ್ಟಿಯಂತೂ ಆಗಲಿ; ಮುಂದಿನ ಮಾತು ಮುಂದೆ!"

ಅಷ್ಟರಲ್ಲಿ ಬಾಳಾರಾಮನ ಮನೆಯಲ್ಲಿ 'ಖಟ್ ಖಟ್' ಎಂದು ಸಪ್ಪುಳಾಗತೊಡಗಿತು. "ಏನಪಾ ಇದು.. ನಡುರಾತ್ರಿಯೊಳಗೆ? ಡಿಟೆಕ್ಟಿವ್ಹ್ ಕೆಲಸ ಈಗಸ ಕೊಳ್ಳಿಗೆ ಬೀಳತಽದೇನು ಮತ್ತೆ?" ಎಂದುಕೊಳ್ಳುತ್ತ ಗೋವಿಂದನು ಆ ಸಪ್ಪುಳನ್ನು ಆಸ್ಥೆಯಿಂದ ಆಲಿಸತೊಡಗಿದನು. ಮತ್ತೆ 'ಖಟ್ ಖಟ್' ಸಪ್ಪುಳು; ಪುನಃ 'ಸರ್ ಸರ್' ಎಂದು ಸಪ್ಪುಳು. ಗೋವಿಂದನು 'ನೋಡಿಯೇ ಬಿಡುವಾ' ಎಂದು ಬಾಗಿಲನ್ನು ತೆಗೆದು ಹೊರಗೆ ಬಂದನು. ಮುಂದೆ ಇರುವ ಬಾಳಾರಾಮನ ಮನೆಗೆ ಕೀಲಿಹಾಕಿತ್ತು. ಮನೆಯವರೆಲ್ಲರೂ ಸಿನೇಮಾಕ್ಕೆ ಹೋಗಿರುವರೆಂಬುದು ಅವನಿಗೆ ಗೊತ್ತಿತ್ತು. ಹಾಗಾದರೆ ಸಪ್ಪುಳೇತರದು? ಸರಕ್ಕನೆ ಆ ಕತ್ತಲೆಯ ಮನೆಯಲ್ಲಿ, ಒಂದೇ ಒಂದು ನಿಮಿಷ ಬೆಳಕು ಕಾಣಿಸಿ ದಂತಾಗಿ ಪುನಃ ಕತ್ತಲಾಯಿತು. ಗೋವಿಂದನೆಂದನು: "ದೆವ್ವ ಅನಕಾ ಅಲ್ಲ! ಮುಂಬಯಿಗೆ ಬಂದು ಆವು ಏನು ಮಾಡ್ಯಾವು? ನಮ್ಮ ಹಳ್ಳಿಯೂರಿಗೇ ಅವಕ್ಕೇ ಗಂಟು! ಒಳಗೆ ಯಾರೋ ಇರಲಿಕ್ಕೇ ಬೇಕು. ಇದೊಂದು ಚೆಲೋ ಚಾನ್ಸ್ ಸಿಕ್ಕಿತು. ನಾಳೆ ಸಾಹೇಬರಿಗೆ ಹೇಳಲಿಕ್ಕೆ!"

ಮನೆಯ ಸುತ್ತುಮುತ್ತು ನೋಡುವಷ್ಟರಲ್ಲಿ ಮಗ್ಗಿಲಿನ ಕಿಟಕಿಯೊಂದು ತೆರೆದುದು ಕಂಡಿತು. ಗೋವಿಂದನು ಕೂಡಲೆ ಕಿಟಕಿಯಿಂದ ಒಳಗೆ ಹಾರಿದನು. ಸಟಕ್ಕೆಂದು ಅವನ ಮೇರೆಯ ಮೇಲೆ ಟಾರ್ಚ್‌ಬೆಳಕು ಬಿತ್ತು. ಸ್ವಲ್ಪ ಸಾವರಿಸಿಕೊಳ್ಳುವಷ್ಟರಲ್ಲಿ ಅವನ ಮೇಲೆ ಯಾರೋ ಬಿದ್ದರು. ಕೂಡಲೆ ಕುಸ್ತಿಯೇ ಪ್ರಾರಂಭವಾಯಿತು. ನಾಳೆಯ ನೌಕರಿಗೊಂದು ಸಾಧನವಾಯಿ ತೆಂಬ ಹುರುಪಿನಲ್ಲಿ ಗೋವಿಂದನು ತುಂಬಾ ಕಸುವಿನಿಂದ ಗುದ್ದಾಡಿದನು. ಅವನು ಸುಮಾರು ಒಂದು ತಾಸು ಕತ್ತಲೆಯಲ್ಲಿ ಗುದ್ದಾಡಿರಬೇಕು. ಅಷ್ಟರಲ್ಲಿಯೆ ಸಿನೇಮಾದಿಂದ ಜನರು ಬರತೊಡಗಿದ್ದರು. ಗೋವಿಂದನು ಅತ್ಯಾವೇಶದಿಂದ ಆ ವ್ಯಕ್ತಿಗೆ ತಕ್ಕೆಬಿದ್ದು ಕೆಳಕ್ಕೆ ಕೆಡವಿ, ಅಲ್ಲಿಯೇ ಬಿದ್ದ ಟಾರ್ಚ್ ಹಚ್ಚಿ ನೋಡುತ್ತಾನೆ .. ರಾವಸಾಹೇಬ್ ಶೇಟ್ ಶ್ಯಾಮಲಾಲ್! "ಕ್ಯಾಂ ಶೇಟ್‌ಜೀ? ಏ ಕ್ಯಾ?" ಎಂದು ಕೇಳುತ್ತ ಸ್ವಲ್ಪ ಮೈ-ಮರೆತನೊ ಇಲ್ಲವೊ, ಶ್ಯಾಮಲಾಲನು ಅವನನ್ನು ಒಳ್ಳೇ ಕಸುವಿನಿಂದ ನೂಕಿ, ಗೋವಿಂದನು ಕೆಳಗೆ ಬೀಳುತ್ತಲೆ ಅವನ ಎದೆಯ ಮೇಲೆ ಕುಳಿತು "ಏ ಬದ್ಮಾವ್, ಈಧರ್ ಜೋರೀ ಕರ್ನೇಕೇ ಆಯಾ ಕ್ಯಾ?" ಎಂದು ಮುಂತಾಗಿ ಒದರಾಡತೊಡಗಿದನು. ಗೋವಿಂದನು "ಶಹಬಾಸ್! ಒಳ್ಳೇ ಕೆಲಸಪಾ ಇದು! ಹಿಂಗಸ ಮಂದಿಗಂಟುಹಾಕಿ ರಾವಸಾಹೇಬ್ ಆಗೀ ಅಲ್ಲಸ? ನಿಂದ್ರು ಈಗ ಜನಾಬರ್ಲಿ!" ಎಂದು ನುಡಿಯುತ್ತಿದ್ದ.

ಅಷ್ಟರಲ್ಲಿಯೆ ಬಾಳಾರಾಮನೂ ಅವನ ಮನೆಯವರೂ ಬಂದರು. ಮನೆಯೊಳಗಿನ ಗದ್ದಲವನ್ನು ಕೇಳಿ ಗಾಬರಿಯಾಗಿ, ಕೂಡಲೆ ಕೀಲಿಯನ್ನು ತೆಗೆದು ದೀಪಹಚ್ಚಿ ನೋಡುತ್ತಾರೆ— ಗೋವಿಂದನು ಕೆಳಗೆ ಬಿದ್ದಿದ್ದಾನೆ; ಶೇಟ್ ಶ್ಯಾಮಲಾಲನು ಅವನ ಎದೆಯ ಮೇಲೆ ಕುಳಿತು ಬೈಯುತ್ತಿದ್ದಾನೆ. ತಿಜೋರಿಯಲ್ಲಿಯ ನೋಟು-ಆಭರಣಗಳು ಸೂರೆಯಾಗಿವೆ! "ಆರೆರೇ ಹೇ ಕಾಯ್? ಹೇ ಕಾಯ್?" ಎನ್ನುತ್ತ ಬಾಳಾರಾಮನು ನೋಟುಗಳನ್ನೂ ಆಭರಣಗಳನ್ನೂ ತೆಗೆದಿಡತೊಡಗಿದನು. ಆಗ ಶ್ಯಾಮಲಾಲನು: "ಏ ದೇಖೋ ಭಾಯಿ! ಏ ಬದ್ಮಾಷ್ ಇಧರ್ ಜೋರೀ ಕರ್ನೇಕೆ ಲೀಯೇ ಆಯಾಥಾ. ಪೈ ಇಸ್ಕು.." "ಮಾಲೂಮ್ ಹುವಾ, ಮಾಲೂಮ್ ಹುವಾ ರಾವಸಾಹೇಬ್. ಹಾ ಘಾರ್ ಲುಚ್ಚಾಕೆ ದಿಸ್ತೊಯ್" ಎಂದು ಬಾಳಾರಾಮನು ಗೋವಿಂದನ ಕಡೆಗೆ ನೋಡತೊಡಗಿದನು. ಗೋವಿಂದನು ಏನನ್ನೋ ಹೇಳಬೇಕೆನ್ನು ವಷ್ಟರಲ್ಲಿ ಬಾಳಾರಾಮನು "ಸಮಗೂ ತಿಳಿತಽದರೀ ನೀವು ಶೇಡಜೀ ಪ್ಯೂಲ ಹಾಕಾವುರು; ಅಂಥಾ ಧೋಡ್ ಮನಸ್ಯಾ ಹೀಂಗ್ ಜೋರೀ ಮಾಡತಾರಽ? ಹಂಹಂಹಂ; ನಿಂದರ್ರಿ, ಪೋಲೀಸಗ ಫೋನ್ ಮಾಡತೀನಿ!" ಎಂದು ಕೂಗಿದನು.

ಮುಂದೆ ೧೦ ನಿಮಿಷಗಳಲ್ಲಿಯೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರನೂ ಇಬ್ಬರು ಪೋಲೀಸರೂ ಬಂದರು. ಪೋಲಿಸರಿಗಾದರೂ ಇದ್ದ ಸಂಗತಿಯನ್ನು ತಿಳಿಸಿದರೆ ಬಗೆಹರಿದೀತೆಂದು ಗೋವಿಂದನು ತನ್ನ ದೈವವನ್ನು ಹಳಿಯುತ್ತ, ಮೂಲೆ ಹಿಡಿದು ಕುಳಿತಿದ್ದ. ಫೌಜದಾರರು ಬರುತ್ತಲೇ ಬಾಳಾರಾಮನು ತಾನು ಸಿನೇಮಾಕ್ಕೆ ಹೋದಾಗ ಗೋವಿಂದನು ಕಿಟಕಿಯಿಂದ ಹಾರಿ ತನ್ನ ಮನೆಯಲ್ಲಿ ಕಳವು ಮಾಡುತ್ತಿದ್ದನೆಂದೂ, ಅವನನ್ನು ರಾ. ಸಾ. ಶ್ಯಾಮಲಾಲ್ ಶೇಟಜೀ ತಡೆದದ್ದರಿಂದಲೇ ತನ್ನ ಹಣ-ಒಡವೆಗಳು ಉಳಿದುವೆಂದೂ ಹೇಳಿದನು. ಫೌಜದಾರರು ಎಲ್ಲವನ್ನೂ ವಿಚಾರಿಸಿ, ರಾ॥ ಸಾ॥ ಪದವಿಗೇರಿದ ಶ್ರೀಮಂತ ಶೇಟಜಿಯು ಕಳವು ಮಾಡುವುದು ಶಕ್ಯವಿಲ್ಲವೆಂದೂ, ನೌಕರಿಗಾಗಿ ಅಲೆದಾಡುತ್ತಿರುವ ಗೋವಿಂದನೇ ಕಳವು ಮಾಡಲು ಪ್ರಯತ್ನಿಸಿರಬೇಕೆಂದೂ ನಿರ್ಧರಿಸಿ, ಗೋವಿಂದನನ್ನು ಬಂಧಿಸಲಿಕ್ಕೆ ಹೇಳಿದರು.

ಗೋವಿಂದ:— ಸಾಹೇಬ್!

ಫೌಜದಾರ್:— ತಾನೆಮೇ ಜವಾಬ್‌ದೇನಾ!

"ಇದೇನು ಬಂತಪ್ಪಾ ಪೀಕಲಾಟ? ಏನೋ, ಪೋಲಿಸರಾದರೂ ಕೇಳ್ಸಾರೂ ಅಂತ ಮಾಡಿದ್ದೆ. ಅವರೂ ಹಿಂಗಸ ಕಣ್ಣುಮುಚ್ಚೇ ನಡೀತಾರಲ್ಲಾ? ಅಂ, ಇದೇನು ಬಂತು ಮರ್ಯಾದೆಗೇಡು? ಅಂ? ಅಲಲ! ಏನು ನನ್ನ ರಿಕ್ರೂಟೂ..ಏನು ನನ್ನ ಭರ್ತೀ..ಅಽಹಾ! ಏನು ಆ O. H. M. S; ಆಯಿತಲ್ಲಾ ಇದೂ ಒಂದು O. H. M. S.! ಸೈನ್ಯದಾಗ ಭರ್ತಿ ಆಗೂದು ಜೇಲಿನ್ಯಾಗ ಭರ್ತೀ ಆಗಬೇಕಾಯಿತು!" ಎಂದು ಯೋಚಿಸುತ್ತ ಗೋವಿಂದನು ಮುಂದುಗಾಣದವನಾಗಿದ್ದನು. ಹಿಂದಿಲ್ಲ, ಮುಂದಿಲ್ಲ! ಹೇಳುವವರಿಲ್ಲ, ಕೇಳುವವರಿಲ್ಲ! ಪರಪ್ಪಳ, ಪರಭಾಷೆ! ಅಕಸ್ಮಾತ್ ಒದಗಿದ ಸಂಕಟಗಳಿಂದ ಗೋವಿಂದ ಹೌಹಾರಿ ಹೋಗಿದ್ದ. ಉದಾಸೀನ ಬುದ್ಧಿ ಅವನನ್ನು ಸಂಪೂರ್ಣ ಆವರಿಸಿ ಬಿಟ್ಟಿತು. ತನ್ನ ಹಣೆಯ ಬರೆಹದಲ್ಲಿದ್ದದ್ದು ಆಗಿಯೇ ತೀರುವುದೆಂದೂ ದೇವರು ಅಂಬಾಂಬವಯಾರಾದರೂ ಇದ್ದರೆ ಅವನೇ ತನ್ನನ್ನು ಕಾಯ

ಬೇಕೆಂದೂ ವಿಚಾರಿಸಿ, ಮಂಕನಂತೆ ಪೋಲೀಸರ ಬೆನ್ನನ್ನು ಹತ್ತಿದನು.

* * *

ಮರುದಿನ ಮಧ್ಯಾಹ್ನ ಎರಡು ಗಂಟೆಗೆ ಶೇಟ್ ಶ್ಯಾಮಲಾಲನು ಬಾಳಾರಾಮನನ್ನು ಕಂಡು, ತಾನು ಊರಿಗೆ ಹೊರಟಿರುವುದಾಗಿಯೂ ತನ್ನ ಹೊಟೆಲ್ಲಿನ ಬಿಲ್ಲು ಎಷ್ಟೆಂಬುದನ್ನು ತಿಳಿಸ ಬೇಕಾಗಿಯೂ ಕೇಳಿದನು.

ಬಾಳಾರಾಮು:— ರಾವಸಾಹೇಬ್, ಕಾಂಹೀ ದೇವುನಕಾ ! ಆಪಲಾ ಉಪಕಾರ ಫಾರ್ ಝಾಲಾ ಆಹೆ (ರಾವಸಾಹೇಬ್, ತಾವೇನೂ ಕೊಡಬೇಕಾಗಿಲ್ಲ; ತಮ್ಮ ಉಪಕಾರ ಬಹಳವಾಗಿದೆ.)

" ಟು ! ಕ್ಯಾ ಸಂಬಂದ ಸಹಿಂ ! ಲೇನಾ ತುಮ್ " ಎಂದು ಶ್ಯಾಮಲಾಲನು ಹತ್ತು ರೂಪಾಯಿಯ ನೋಟನ್ನು ಮೇಜಿನ ಮೇಲಿಟ್ಟನು. ಬಾಳಾರಾಮನು ' ನಿಮ್ಮ ಉಪಕಾರ ಬಹಳವಾಯಿತು ! ' ಎನ್ನುತ್ತ ರೂಪಾಯಿಗಳನ್ನು ತೆಗೆದುಕೊಂಡನು. ಗಾಬರಿಗೆ ಹೊರಟಿದ್ದ ಮುಂದೆ ಶ್ಯಾಮಲಾಲನು, ತಾನು ಕಾಶೀವಾಡದಲ್ಲಿ ಅನಾಥಾಶ್ರಮವನ್ನೊಂದನ್ನು ತೆಗೆದಿರುವುದಾಗಿ ಹೇಳಿ, ಅದಕ್ಕಾಗಿ ಬಾಳಾರಾಮನಿಂದ ೨೦೦ ರೂ. ಸಹಾಯಧನವನ್ನು ಬೇಡಿದನು. ಬಾಳಾರಾಮನು ಮನಸ್ಸಿಲ್ಲದಿದ್ದರೂ ಶೇಟಜಿಯ ಉಪಕಾರ ನೆನೆದು, ಹಾಗೆ ಹೀಗೆ ಎನ್ನದೆ ೧೦೦ ರೂಪಾಯಿಗಳನ್ನು ಕೊಟ್ಟನು.

* * *

ಸಂಜೆಯ ೫ ಗಂಟೆಗೆ ಫೌಜದಾರರು, ಕಚೇರಿಯಲ್ಲಿ ಗೋವಿಂದನ ಜವಾಬನ್ನು ತೆಗೆದುಕೊಳ್ಳುತ್ತಲಿದ್ದರು. ಅಷ್ಟರಲ್ಲಿಯೆ ಬಾಳಾರಾಮನು ಲಗುಬಗೆಯಿಂದ ಅಲ್ಲಿಗೆ ಬಂದನು. ಅವನು ಗಾಬರಿಯಾದಂತೆ ಕಾಣುತ್ತಿತ್ತು.

ಫೌಜದಾರ್:— ಆಣೀ ಕಾಯ್ (ಮತ್ತೇನು ?)

ಬಾಳಾರಾಮು:— ಹೇ ಪಹಾ, ಚಿಟ್ಟಿ (ಈ ಚೀಟಿ ನೋಡಿರಿ) ಆ ಚೀಟಿಯನ್ನು ಓದಿ ನೋಡಿಯಾದಮೇಲೆ

ಫೌಜದಾರರು:— ಓ ಫತ್ತೇಸಿಂಗ್ ! Nations Dewil !

ಬಾಳಾರಾಮು:— ಹೋಯ್ ಸಾಹೇಬ್. ಮಾಝಾ ಶಂಭರ ರೂಪಯೇ ಘೇವೂನ ಗೇಲಾ. ವಿತಾ ಕಾಯ್ ಕರೂ (ನನ್ನ ೧೦೦ ರೂಪಾಯಿ ಒಯ್ದಿದ್ದಾನೆ, ನಾ ಏನು ಮಾಡಲೀ ?)

ಗೋವಿಂದ:— (ಏನೂ ತಿಳಿಯದಂತಾಗಿ) ಏನು ಮಿಸ್ಟರ್ ಬಾಳಾರಾಮು; ಏನಾಯಿತು ? ಶೇಟಜೀ ಗತ್ತು ಹೌದಲ್ಲೊ ?

ಬಾಳಾರಾಮು:— ಹೌಂದು ಮಿ॥ ಕುಲಕರ್ಣಿ; ಕ್ಷಮಾ ಕರಾ. ಹಿಂಗಾತೂ, ನಾವು ಆ ಖೋಲ್ಯಾಗ ಕೇರ್ ಕಾಡಸ್ತಾ ಇದ್ದಿವಿ. ಈ ಚೀಟಿ ಸಿಕ್ಕಿತು !

ಗೋವಿಂದ:— ಆ ಚೀಟ್ಯಾಗ ಏನದ ?

ಬಾಳಾರಾಮು:— ಅದs, ಶೇಟಜೀ ಅಂವಾs ಡಕಾಯತಿ ಇದ್ದಾನ. ನಿಮ್ಮನ್ನ ನಮ್ಮನ್ನ ಕಂಡು ಅಂವಗ ನಗೀ ಬರತsದಂತ ! ಚೀಟಿ ಬರದಾನ; ಔಂದು ಹೆಸರೂ ಫತ್ತೇಸಿಂಗ !

ಗೋವಿಂದ:— ಈಗಾರೇ ತಿಳೀತರೇ ನಿಮಗ ?

ಫೌಜದಾರ್:— ಕಾಯ್, ಕಾಯ್. (ಏನು ಎನು ?)

ಬಾಳಾರಾಮು:— ಕೇದ್‌ಕಾಡತಾನಾ ಚಟ್ಟೀ ಸಾಪಡಲೀ ಮ್ಹಂಟ್ಲ (ಕಸಾ ತಗಿಸೂ ಮುಂದೆ ಈ ಕಾಗದ ಸಿಕ್ಕ್ಯತೂ ಅಂದೆ) ಫೌಜದಾರರು ಎಲ್ಲವನ್ನೂ ಪುನಃ ವಿಚಾರಿಸಿ, ಗೋವಿಂದನನ್ನು ಬಿಡುಗಡೆಮಾಡಿದರು.

ಗೋವಿಂದನು:— ಸಗುತ್ತ " ಈಗ ವ್ಯಾಳ್ಯಾ ಬಂತು ನೋಡ್ರಿ ಬಾಳಾರಾಮ ! " ಎಂದು ಮತ್ತೆ ಕೇಳಿದ :

" ಈಗ ವ್ಯಾಳ್ಯಾ ಎಷ್ಟಾಗೇದ ? "

ಬಾಳಾರಾಮು:— ಸವ್ವಾ ಪಾಡ (ಐದುಕಾಲು) !

ಗೋವಿಂದ:— ಹಾಂಗಾದರೆ ಇನ್ನೂ ನನ್ನ ದೈವ ಪರೀಕ್ಷಾ ಮಾಡೇ ಬಿಡತಿನಿ. ಈಗ ನಿಮ್ಮ ಹಾಟೆಲ್ಲಿಗೇ ಬರತೀನಿ, ಹಾಂ ! " ಎಂದವನೇ ಗೋವಿಂದನು ಟ್ರಾವ್ ಹತ್ತಿ, ತನ್ನ ಸಾಹೇಬರ ಬಂಗ್ಲೆಗೆ ಹೋದನು. ಬಾಗಿಲಲ್ಲಿದ್ದ ಸಿಪಾಯಿಯು ' ಸಾಹೇಬರು ೧೧ ಗಂಟೆಗೆ ಉಮೇದವಾರರನ್ನು ಆರಿಸಿ ಊರಿಗೆ ಹೋದರು, ಎಂದು ಹೇಳಿದನು. ಗೋವಿಂದನು ಉಸ್ಸೆಂದು ಉಸುರ್ಗರೆದು, ಮನಸ್ಸೀ ತನ್ನ ದೈವವನ್ನು ಹಳಿಯುತ್ತ ಒಂದು ಜಹಜದ ಅಂಗಡಿಯನ್ನು ಹೊಕ್ಕನು. ಸಂಜೆಯ ವರೆಗೆ ಹೊಟ್ಟೆಯಲ್ಲಿ ಏನೂ ಇಲ್ಲದ್ದರಿಂದ ಅವನಿಗೆ ಆಯಾಸವಾಗಿತ್ತು. ಹೊಟ್ಟೆ ತುಂಬ ತಿಂದು, ಒಂದು 'ಪಾನಪಟ್ಟಿ' ಹಾಕಿಕೊಂಡು, ಸಿಗರೇಟೊಂದನ್ನು ಸೇದುತ್ತ ಮಹಾರಾಷ್ಟ್ರ ಭವನಕ್ಕೆ ನಡೆದನು. ಬಾಳಾರಾಮನು ಎಷ್ಟು ಮಾತನಾಡಿಸಿದರೂ ಅವನು ವಿಶೇಷ ಉತ್ತರವನ್ನೇ ಕೊಡಲಿಲ್ಲ. ಅವನಿಗೆ ಅತೀವ ನಿರಾಶೆಯಾಗಿತ್ತು. ಅವನಿಗೆ ಸಿಟ್ಟು ಬಂದಿರಬಹುದೆಂದು ಬಾಳಾರಾಮನು ಸುಮ್ಮನಾದನು. ತನ್ನ ೩ ದಿನದ ವೆಚ್ಚ ೧ ರೂ. ೧೫ ಅ. ಕೊಟ್ಟು " ನಾಳೆಯ ಗಾಡೀ ಖರ್ಚಿಗೆ ಕಡಿಮೆ ಬಿದ್ದವಲ್ಲ ? " ಎಂದು ಜಡಪಡಿಸತೊಡಗಿದನು. ಅವನು ಎಷ್ಟೋ ಹೊತ್ತು ಹಾಗೆಯೇ ವಿಚಾರಗ್ರಸ್ತನಾಗಿದ್ದನು. ' ಅಂತೂ ನಾಳೆ ಅದನ್ನಷ್ಟು ಮಾಡೋಣ, ಮುಂದಿನ ಮಾತು ಮುಂದೆ ! ' ಎಂದುಕೊಂಡು ಮಲಗಿದ. ಮರುದಿನ ಬೆಳಗಿನಲ್ಲಿ ಫೌಜದಾರರು ಕಚೇರಿಯಲ್ಲಿ ಕುಳಿತು ಏನನ್ನೋ ಓದುತ್ತಲಿದ್ದರು. ಲಗುಬಗೆಯಿಂದ ಗೋವಿಂದನ ಸ್ವಾರಿ ಅಲ್ಲಿಗೆ ಬಂದು :— " Sahib ! I want 10 Rs. to go home. Other wise put me in Jail till Shetjee comes ! " ಎಂದು ತನ್ನ ಇಂಗ್ಲೀಷಿನಲ್ಲಿ ಹೇಳಿದ. ಫೌಜದಾರರು ಇದೇನೋ ತಮ್ಮಮೇಲೆಯೇ ಹೊಡೆಮರಳಿತೆಂದು ವಿಚಾರಿಸಿ, ೧೦ ರೂಪಾಯಿಯ ನೋಟೊಂದನ್ನು ಗೋವಿಂದನ ಕೈಗಿತ್ತರು.

ಗೋವಿಂದನು ಮತ್ತೆ ತನ್ನೂರಿಗೆ ಬಂದಿದ್ದಾನೆ. ಪುನಃ ಕೆಲಸಕ್ಕೆ ಅರ್ಜಿ ಹಾಕುತ್ತಲಿದ್ದಾನೆ. ಆದರೆ ಪರಸ್ಥಳದ ಸುದ್ದಿ ಬಂದಾಗ, ತನ್ನ ಈ ಅನುಭವವನ್ನು ಹೇಳದೆ ಬಿಡುವುದಿಲ್ಲ. ಅದನ್ನು ಬಹು ಸ್ವಾರಸ್ಯವಾಗಿ ಹೇಳುತ್ತಾನೆ. " ಮನುಷ್ಯನಿಗೆ ಎಲ್ಲಾ ತರದ ಅನುಭವ ಬೇಕು; ಅದರಾಗ ಪ್ರವಾಸದ ಅನುಭವ ಮುಂಚೆ ಬೇಕು " ಎಂದು ಅವನ ಸಿದ್ಧಾಂತ. " ಅನುಭವ ವಾಯಿತು, ಎಲ್ಲಾ ಆಯಿತು; ಮುಂದೆ ?" ಎಂದು ಕೇಳಿದರೆ " ಮುಂದಿನ ಮಾತು ಮುಂದೆ ! ಅನುಭವ ಅನಕಾ ಇರಬೇಕು! " ಎಂದು ಹೇಳುತ್ತಾನೆ.

ದಿವ್ಯದರ್ಶನ

★

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

ನಭನೀಲ, ಜಲನೀಲ, ಸಕಲವೇಲಾ ನೀಲ!
ವಟಪತ್ರ ಶಯ್ಯೆಯಲಿ, ಮುಗ್ಧ ಶಿಶುರೂಪಿನಲಿ,
ಅಂಗುಟವನೆಂಜಲಿಸಿ ಪಟ್ಟು ವಿಶ್ರಾಂತಿಯಲಿ,
ನೀಲಿಮಾ ಶಾಂತಿಯಲಿ ಮೆರೆದೆಯೆಲೆ ಶ್ರೀಲೋಲ!
ವೀಚಿರಹಿತಾಂಭೋಧಿ, ನಿಶ್ಚಲಂ ಆ ಪವನ;
ನೀರದ ವಿಹೀನಾಂಬರಂ;— ಸೃಷ್ಟಿಯಾದಿಯಲಿ,
ಭ್ರಾಂತಿಯಾ ಸೊಲ್ಲಡಗಿ, ನಿಷ್ಪಂದ ಶಾಂತಿಯಲಿ
ಮೆರೆದಿರಲು, ಬಗೆಯಲೆನಿತೋ ಮನಕೆ ಸಮ್ಮಾನ!
ಬಗೆವೊಡೆನಿತೋ ಸೊಗಸು? ಕವಿಗೆ ಅಮೃತದ ಪಾನ!
ಕರವಿಲ್ಲ; ಹಗೆಯಿಲ್ಲ; ದ್ವಂದ್ವಗಳ ಸುಳಿವಿಲ್ಲ;
ಅರಿವಿಲ್ಲ; ಮರೆವಿಲ್ಲ; ನಾನಿಲ್ಲ; ನೀನಿಲ್ಲ;—
ಸಾಯುಜ್ಯ ಶಾಂತಿಯಾ ಅವ್ಯಕ್ತ ಸುರಗಾನ!
ಆ ದಿವ್ಯದರ್ಶನದ ವರವ ಕರುಣಿಪೊಡಿಂದೆ
ಪ್ರಳಯವನು ಬರಿಸು— ದರ್ಶನವ ಕರುಣಿಸು ತಂದೆ!

ಇಳಿಸಂಜೆಯಲ್ಲಿ

★

ಶ್ರೀ. ಬಿ. ವಿ. ಸುಬ್ಬರಾವ್, ಬೆಂಗಳೂರು

ದಿವಸಾವಸಾನದೊಳಗಳಿವ ಹಗಲ್ಗೆಸರಿಗೆ
ವನದಿ ಬೀಳ್ಕೊಡಲು ಬಂದಂದದೊಳಗಿಳಿಸಂಜೆ
ಬಿನದದಿಂದಂಬರದ್ಕಿಹಲವು ರಂಗನು ಚೆಲ್ಲಿ,
ಬುವಿಯ ಸಿಗ್ಗಿನ ಕಳೆಗೆ ಸೌಂದರವನೆರಚಲು,—
ಬೇನೆ, ದುಃಖ, ನಿರಾಶೆ ಸಂಗಮಿಸುತುದ್ಭವಿಸಿ-
ಬಂದಂತೆ, ಬಾನನೇ ನಿಟ್ಟಿಸುತ ನಿಂತಿರುವ
ಸುಂದರಿಯಿದಾರಿವಳು? ಚೆಲುವೆ, ಚಂಚಲೆ, ಬಾಲೆ!
ಕಣ್ಣೀರನೇತಕ್ಕೆ ಸುರಿಸುವಳ್ತಬಿಸುಸುಯ್ದು?
ಸ್ವಭವದ ಮುಂಬಾಳ ನೋಹದೊಳಗುಳಿದಿರುವ
ಸಂಜೆವೆಣ್ಣಿನ ಆಸೆ, ಬಾನಿನೊಳು ಮೆರೆದಿರ್ದ
ರಂಗು-ರಂಗುಗಳಳಿದು ಮಬ್ಬಿನೊಳು ಜಾರಿದೊಲು,
ಸೃಷ್ಟಿ ದರ್ಪಣದೊಳಗು ತನ್ನ ಬಾಳನೆ ಕಂಡು
ಹೃದಯದಗ್ನಿಜ್ವಾಲೆ ಮನವ ದಹ-ದಹಿಸುತಿರೆ
ಕಂಬನಿಯ ಸುರಿಸುವಳೊ ಕಡುನೊಂದ ಬಾಲವಿಧವೆ!

——o——

'ಜೋಗ' ಜಲಪಾತ

★

ಶ್ರೀ. ದೇಸಾಯಿ ದತ್ತಮೂರ್ತಿ

ಸಾಜವೆಲೆ ಸಹ್ಯಾದ್ರಿ ಸೃಷ್ಟಿಯಂದದ ಸೂಡು!
ಓಜೆಯನು ತೂರುವುದು ತುಂಗಶೃಂಗದ ಬೀಡು!
ಈ ಜಗದಿ ಆ ಜಗಕೆ ಕೈಯ ಚಾಚಿದ ಕಾಡು
ಜೋಗ ಜಲಪಾತ ನೋಡು! ॥

'ರಾಜ' 'ಅಬ್ಬರೆ' 'ಬಾಣ' 'ಗೌರವನಿತಾ' ನಾಲ್ಕು
ಸೋಜಿಗದ ಹೆಸರಿನಲಿ ಹೆಸರ ತಕ್ಕಂತೆಯೇ
ತೇಜ, ಸಪ್ಪಳು, ಚಿಮ್ಮು, ಚೆಲ್ವಿನಲಿ ನಯವಾಗಿ
ನೋಟಕರ ಕರೆಯುತಿಹವು! ॥೧॥

ಗಾಂಭೀರ್ಯದಾತಪತ್ರದ ತೇಜ ರಾಜನಲಿ,
ರಂಭೋರುನಯ ಗೌರವನಿತೆಯಿಳಿಚಾರಿನಲಿ,
ಕಂಭದಿಂ ಹೊರಬರುವ ನಾರಸಿಂಹನ ಗುಡುಗಿ-
ನಬ್ಬರವು ಅಬ್ಬರದಲಿ!॥

ಕುಂಭರಂಧ್ರದಿ ನೀರು ಸುತ್ತು ಬಾಣಾಕಾರ
ಜಂಭದಿಂ ಜಿಗಿದ ಜಿಗಿತವು ಬಾಣತಡಿಸಿಲಲಿ,
ಕುಂಭಿನಿಯ ಚಿತ್ರಚಿತ್ರದ ಚಿತ್ರ ಚಿತ್ರಿಸುವ
ಚಿತ್ರಗಾರನ ನೆನೆವುದು! ॥೨॥

ಅಚ್ಚಹಸ ಸೌಂದರ್ಯ, ಕೃತ್ರಿಮದ ಸೋಂಕಿಲ್ಲ!
ಕೊಚ್ಚುತಿದೆ ನೀರು ಕಲ್ಲನು, ಬಲಕೆ ನೆಲೆಯಿಲ್ಲ!
ಹೆಚ್ಚು ಹೆಚ್ಚಾಗುತಿದೆ ಚೆಲುವು ನಿಟ್ಟಿಸಿದಂತೆ
ಚೆಲುವು ನಿಜ ನಿಜವು ಚೆಲುವು! ॥
ಅಚ್ಚರಿಯು! ಆನಂದ! ಮೈಯು ನವಿರೇಳುವುದು!
ಮೆಚ್ಚಿ ಮೈಯುಬ್ಬಿಯಾತ್ಮದ ಹಂಸ ಗರಿಗೆದರಿ
ನಿಚ್ಚಟವು ಅಚ್ಯುತನ ಭವ್ಯಲೀಲೆಯ ನೆನೆದು
ಮನವು ತನ್ಮಯವಾಗಿದೆ! ॥೪॥

ದಕ್ಷಿಣ ಸಂಸ್ಥಾನಗಳಲ್ಲಿ ★

ಶ್ರೀ. ಕೃಷ್ಣಶರ್ಮ, ಸಂಘಟನಾಮಂತ್ರಿ,
ಅಖಿಲಭಾರತ ದೇಶೀರಾಜ್ಯ-
ಲೋಕಪರಿಷತ್ತು, ಮುಂಬಯಿ

(ದೇಶಪರಿಚಯ)

ಭಾರತದಲ್ಲಿ ದೇಶೀಯಸಂಸ್ಥಾನಗಳು ಉಳಿದುಕೊಂಡುದು ಭಾರತದ ಹಿತಕ್ಕೋ ಅಹಿತಕ್ಕೋ ಎಂಬುದು ಬಹುಜನರಿಗೆ ತಿಳಿಯದ ವಿಷಯವಾಗಿದೆ. ಭಾರತಕ್ಕೆ ಒಳ್ಳೆಯ ಭವಿಷ್ಯವನ್ನು ತರಬೇಕೆನ್ನುವವರು, ಸಂಸ್ಥಾನಗಳ ವಿಷಯವನ್ನು ಪರಿಚಯ ಮಾಡಿಕೊಳ್ಳಬೇಕಾದುದು ಅವಶ್ಯವಾಗಿದೆ. ಸಂಸ್ಥಾನಲೋಕದಲ್ಲಿ ಆಟವಾಡುತ್ತಿರುವ ಚಮತ್ಕೃತಿಗಳು ಎಷ್ಟೆಷ್ಟೋ ಇವೆ.

★

೧

ದಕ್ಷಿಣದ ಸಂಸ್ಥಾನಗಳೆಂದರೆ ಹಿಂದುಸ್ತಾನದ ದಕ್ಷಿಣದ ಕೊನೆಗೆ ಇರುವ ತಿರುವಾಂಕೂರು, ಕೊಚ್ಚಿ, ಪುದುಕೋಟೆ ಸಂಸ್ಥಾನಗಳಲ್ಲ; ಮೈಸೂರೂ ಅಲ್ಲ. ಪಶ್ಚಿಮಘಟ್ಟಗಳಿಗೆ ಸವಿಾಪವಾಗಿ, ಕೊಂಕಣಪಟ್ಟಿ-ಕರ್ನಾಟಕಗಳಲ್ಲಿರುವ ಚಿಕ್ಕಪುಟ್ಟ ಪಾಳೆಯ ಪಟ್ಟಿನ ಸಂಸ್ಥಾನಗಳು. ಸೊಂಡೂರು ಬಂದನ್ನು ಬಿಟ್ಟರೆ, ಉಳಿದ ದಕ್ಷಿಣಸಂಸ್ಥಾನಗಳೆಲ್ಲವೂ ಮುಂಬಯಿ ಪ್ರಾಂತದಲ್ಲಿಯೇ ಇವೆ. ನಿಜಾಮನ ಹೈದರಾಬಾದನ್ನೂ ಈ ಗುಂಪಿಗೆ ಜನ ಸೇರಿಸಿಕೊಳ್ಳುತ್ತಾರೆ. ಇದು ನಿಜಾಮನಿಗೂ ಒಪ್ಪಿಗೆಯಾಗಲಿಕ್ಕಿಲ್ಲ; ಸಾಧಾರಣ ವಿಚಾರಕ್ಕೆ ಹೊಂದಿಕೆಯೂ ಆಗುವುದಿಲ್ಲ. ಸವಣೂರು, ಜಂಜೀರ ಎರಡನ್ನು ಬಿಟ್ಟರೆ ಉಳಿದುವೆಲ್ಲ ಮಹಾರಾಷ್ಟ್ರ—ಅವರಲ್ಲಿ ಬ್ರಾಹ್ಮಣರೂ ಉಂಟು, ಮರಾಠರೂ ಉಂಟು— ಮನಂಡಲಿಕರ ಒಡೆತನದಲ್ಲಿವೆ. ಒಂದು ಕಾಲಕ್ಕೆ ಮಹಾರಾಷ್ಟ್ರರ ಒಡೆತನ ಕರ್ನಾಟಕದ ಮೇಲೆ ಹರಡಿಕೊಂಡಿತ್ತು. ವಿಜಯನಗರ ಸಾಮ್ರಾಜ್ಯವು ಕಣ್ಮರೆಯಾದ ಮೇಲೆ, ಕನ್ನಡನಾಡಿನ ಮುಂದಾಳುತನ ಕೃಷ್ಣಾ-ತುಂಗಭದ್ರೆಗಳ ನಡುಭೂಮಿಯಿಂದ ಕಾವೇರಿಯ ದಡದ ಕಡೆಗೆ ಸರಿಯಿತು. ಆಗ ಕನ್ನಡದ ಉತ್ತರ ಸೆರಗು ಮಹಾರಾಷ್ಟ್ರರ ದಾಳಿ-ಸುಲಿಗೆಗಳಿಗೆ ಒಳಗಾಗಿ, ಕ್ರಮೇಣ ಆ ಪೀಡೆಯನ್ನು ತಪ್ಪಿಸಿಕೊಳ್ಳಲು ಅದೇ ಪ್ರಾಂತದ ಜನರ ಒಡೆತನಕ್ಕೆ ತಲೆಬಾಗಬೇಕಾಯಿತು. ಮುಂಬೆಯಂತೂ ಮಹಾರಾಷ್ಟ್ರರ ರಾಜಕೀಯ ಪ್ರಾಬಲ್ಯ ಅಡಗಿದ ಮೇಲೆ, ಅವರು ಆಳುತ್ತಿದ್ದ ದೇಶ ಹತ್ತೆಂಟು ಚೂರಾಗಿ ಹಂಚಿಹೋಯಿತು.

ಇಂತಹ ಚಿಕ್ಕ ಚಿಕ್ಕ ಸಂಸ್ಥಾನಗಳಿಗೆಲ್ಲ ಒಟ್ಟಾಗಿ ದಕ್ಷಿಣೀ ಸಂಸ್ಥಾನಗಳೆಂದೂ ಡೆಕ್ಕನ್ ಸ್ಟೇಟ್ಸ್ ಎಂದೂ ಕರೆವ ರೂಢಿಯಿದೆ. ದಕ್ಷಿಣಮಹಾರಾಷ್ಟ್ರ ಸಂಸ್ಥಾನಗಳೆಂದೂ ಸ್ವಲ್ಪ ಮಟ್ಟಿಗೆ ಬೃಹನ್ಮಹಾರಾಷ್ಟ್ರದ ಅಭಿಮಾನವಿದ್ದವರು ಹೇಳುವುದುಂಟು. ಈ ಸಂಸ್ಥಾನಗಳೆಲ್ಲ ಪುಣೆಯ ದಕ್ಷಿಣಕ್ಕೇ ಇರುವುದರಿಂದ ಹಾಗೆ ಅನ್ನುತ್ತಿದ್ದಾರು. ವಿಂಧ್ಯಪರ್ವತಗಳಿಂದ ನೀಲಗಿರಿಯ ವರೆಗೆ ಇರುವ ಎತ್ತರವಾದ ಪ್ರದೇಶವನ್ನು ಈಗ ಡೆಕ್ಕನ್ ಎಂದು ಕರೆಯುತ್ತಾರೆ. ಈ ಹೆಸರು ಯಾವಾಗ ಬಂತೋ ಹೇಗೆ ಬಂತೋ ಇತಿಹಾಸ ಪಂಡಿತರಿಗೆ ಗೊತ್ತು. ಮೊಗಲಾಯಿ ಬಾದಷಹರು ತಮ್ಮ ತೆಂಕಣ ಆಧಿಪತ್ಯಕ್ಕೆ ದಖನ್—ಎಂದರೆ ದಕ್ಷಿಣ—ಅಂದಿದ್ದರು. ಅವರ ಆಡಳಿತಕ್ಕೆ ಆಗಲೂ ಈಗಲೂ ಒಳಗಾದ ನಾಡು, ಸುಮಾರಾಗಿ ವಿಂಧ್ಯಾದ್ರಿ—ನೀಲಗಿರಿಗಳ ನಡುವಿನ ಪ್ರದೇಶದಲ್ಲಿ ಅರ್ಧಕ್ಕಿಂತ ಹೆಚ್ಚಾಗಿಯೇ ಇದೆ. ಹಾಗೂ ಹೀಗೂ ಮೊಗಲರ ದಖನ್ ಮತ್ತು ಮಹಾರಾಷ್ಟ್ರರ ದಕ್ಷಿಣ ಎರಡೂ ಈ ಭಾಗಕ್ಕೇ ಬಂದ ಹೆಸರು. ಕಾವೇರಿಯ ತೆಂಕಣದ ದಕ್ಷಿಣಾದಿ ಸೀಮೆಗಲ್ಲ.

ಈ ಗುಂಪಿನಲ್ಲಿ ಒಟ್ಟು ೧೯ ಸಂಸ್ಥಾನಗಳಿವೆ. ಕೊಲ್ಲಾಪುರವೇ ಅದರಲ್ಲಿ ಎಲ್ಲಕ್ಕಿಂತ ದೊಡ್ಡ ಸಂಸ್ಥಾನ. ಇತಿಹಾಸದಿಂದಲೂ ಅದೇ ಶ್ರೇಷ್ಠವಾದುದು. ಕೊಲ್ಲಾಪುರ ಸಂಸ್ಥಾನ ಪ್ರತ್ಯಕ್ಷವಾಗಿ ಶಿವಛತ್ರಪತಿಯ ಗದ್ದುಗೆ. ಆತನ ವಂಶದ್ದು. ಈ ಸಲದ ಜನಗಣನೆಯಲ್ಲಿ ಅದರ ಜನಸಂಖ್ಯೆ ೧೦ ಲಕ್ಷಕ್ಕಿಂತ ಹೆಚ್ಚಾಗಬಹುದು. ವರಮಾನ ವರ್ಷಕ್ಕೆ ೨೫ ಲಕ್ಷ ೫೧ ಸಾವಿರ. ಆ ಸಂಸ್ಥಾನದಲ್ಲಿರುವ ೯ ಜಾಗೀರುಗಳ ವರಮಾನವನ್ನೂ ಸೇರಿಸಿದರೆ, ಮುಕ್ಕಾಲು ಕೋಟಿಗಿಂತ ಹೆಚ್ಚೇ ಆಗುತ್ತದೆ. ಕೊಲ್ಲಾಪುರದ ತರುವಾಯ **ಸಾಂಗಲಿ, ಸಾವಂತವಾಡಿ, ಜತ್** ಸಂಸ್ಥಾನಗಳು ದೊಡ್ಡವು.

ಸಂಸ್ಥಾನ.	ಜನಸಂಖ್ಯೆ.	ವರಮಾನ.
ಕೊಲ್ಲಾಪುರ	೯,೫೭,೧೩೭	೫೫,೪೧,೦೦೦ ರೂ.
ಸಾಂಗಲಿ	೨,೫೮,೪೪೭	೧೫,೧೯,೦೦೦
ಸಾವಂತವಾಡಿ	೨,೩೦,೫೮೯	೬,೬೫,೦೦೦
ಜತ್	೧,೯೩,೬೯೮	೩,೨೪,೦೦೦
ಭೋರ್	೧,೪೧,೫೪೬	೫,೯೬,೦೦೦
ಜಮಖಂಡಿ	೧,೧೪,೨೮೨	೯,೪೧,೦೦೦

ಸಂಸ್ಥಾನ.	ಜನಸಂಖ್ಯೆ.	ವರಮಾನ.
ಜಂಜೀರ	೧,೦೦,೩೪೫	೧೧,೩೦,೦೦೦
ಮಿರಜ-(ಹಿರಿ)	೯೩,೯೫೭	೫,೨೫,೦೦೦
ಅಕ್ಕಲಕೋಟೆ	೯೨ ೬೦೫	೬,೩೯,೦೦೦
ಔಂಧ	೭೬,೫೦೭	೪,೦೧,೦೦೦
ಮುಧೋಳ	೬೨,೪೬೦	೩,೫೨,೦೦೦
ಫಲ್ಟಣ್	೫೪,೭೬೧	೩,೪೬,೦೦೦
ಕುರುಂದವಾಡ-(ಹಿರಿ)	೪೪,೨೦೪	೨,೬೦,೦೦೦
ಮಿರಜ-(ಕಿರಿ)	೪೦,೬೪೬	೨,೪೬,೦೦೦
ಕುರುಂದವಾಡ-(ಕಿರಿ)	೩೯,೫೪೩	೧,೪೪,೦೦೦
ರಾಮದುರ್ಗ	೩೫,೪೦೧	೨,೪೨,೦೦೦
ಸವಣೂರು	೨೦,೩೨೦	೨,೩೦,೦೦೦
ಸೊಂಡೂರು	೧೩,೫೪೩	೧,೫೯,೦೦೦
ವಾಡಿ	೧,೭೦೪	೯,೪೭೪

ಜನಸಂಖ್ಯೆಯ ಲೆಕ್ಕದಿಂದ ಹೀಗೆ ಪಟ್ಟಿಮಾಡಿದೆ. ವರಮಾನದ ಪ್ರಕಾರ **ಜಂಜೀರ, ಜಮಖಂಡಿಗಳು** ಮೂರು—ನಾಲ್ಕನೆಯವಾಗುತ್ತವೆ. ಈ ಸಂಸ್ಥಾನಗಳಲ್ಲಿ ಕೆಲವು ವಿಶಾಲವಾಗಿದ್ದರೂ ಜನಸಂಖ್ಯೆ ಕಡಮೆ. **ಸಾವಂತವಾಡಿಯನ್ನು** ನೋಡಿರಿ; ಅದರ ವೈಶಾಲ್ಯ ೯೩೦ ಚದರ ಮೈಲಿ. ಅದರಲ್ಲಿ ೨ ಲಕ್ಷ ೩೦ ಸಾವಿರ ಜನವಸತಿ. **ಸಾಂಗಲಿಯ** ವೈಶಾಲ್ಯ ೧,೧೩೬ ಚದರ ಮೈಲಿ. ಇದರಲ್ಲಿಯೂ ಹೆಚ್ಚು ಕಡಮೆ ಸಾವಂತವಾಡಿಯಷ್ಟೇ ಜನಸಂಖ್ಯೆ: ೨ ಲಕ್ಷ ೫೮ ಸಾವಿರ. ಆದೇ ಅವುಗಳ ವರಮಾನವನ್ನು ನೋಡಿರಿ; ಸಾಂಗಲಿಗೆ ೧೫ ಲಕ್ಷವಾದರೆ ಸಾವಂತವಾಡಿಗೆ ೬ ಲಕ್ಷ ೬೫ ಸಾವಿರ ಮಾತ್ರವೆ; ಅದರ ಅರ್ಧದಷ್ಟಾದರೂ ಇಲ್ಲ. ಸಾವಂತವಾಡಿಯ ಅರ್ಧಭಾಗ ಜನ ಜಂಜೀರದಲ್ಲಿ, ಆದರೆ ವರಮಾನ ಮಾತ್ರ ಒಂದಕ್ಕೆರಡು. ಸಾವಂತವಾಡಿ ಗುಡ್ಡಗಾಡಿನ ರಾಜ್ಯ. ಪೂರಾ ಮಲೆನಾಡು, ಕಾಡು. ಜಿಂಜೀರ-ಸಾಂಗಲಿಗಳು ಹಾಗಲ್ಲ. ಇವು ಸಮಭೂಮಿಯ ನೆಲ. ಎಂದರೆ ಒಂದು ದೇಶದ ನೆಲೆ-ನೆರೆಗಳಿಂದ ಅದರ ಪ್ರಾಮುಖ್ಯ ಬೆಳೆಯುತ್ತದೆ. ಅದಿರಲಿ!

ಈ ಗುಂಪಿನಲ್ಲಿ ಹೈದರಾಬಾದನ್ನು ಬಿಟ್ಟಿದೆ. ಅದು ಒಂದೇ ಈ ಇಡೀ ಗುಂಪಿನ ಹತ್ತಾರು ಪಟ್ಟು ದೊಡ್ಡ ಸಂಸ್ಥಾನ. ಅದರೊಳಗೆ ಇಂಥ ೧೯ ಸಣ್ಣ ಜಾಗೀರುಗಳೇ ಇವೆ. ಅದಕ್ಕೆ ಪ್ರತ್ಯೇಕವಾದ ಒಬ್ಬ ರೆಸಿಡೇಂಟ್ ಇದ್ದಾನೆ. **ಸೊಂಡೂರು** ಸರಕಾರದ ಲೆಕ್ಕಗಳಲ್ಲಿ ಈ ಗುಂಪಿಗೆ ಸೇರಿಲ್ಲ; ಮದರಾಸು ಸಂಸ್ಥಾನಗಳ ಗುಂಪಿಗೆ ಸೇರಿದೆ. ಹಿಂದುಸ್ಥಾನದ ಪ್ರಾಂತೀಕರಣದ ರಾಜ್ಯವಿಭಾಗದ ನಾನಾ ಆಶ್ಚರ್ಯಗಳಲ್ಲಿ ಇದೂ ಒಂದು. ಮದರಾಸು ಸಂಸ್ಥಾನಗಳಾದ **ತಿರುವಾಂಕೂರು, ಪುದುಕೋಟೆ, ಕೊಚ್ಚಿ, ಬನಗಾನಪಲ್ಲಿ**ಗಳಿಗೂ ಸೊಂಡೂರಿಗೂ ಏನೂ ಸಂಬಂಧವಿಲ್ಲ. ನೆರೆಯೂ ಇಲ್ಲ, ನಂಟೂ ಇಲ್ಲ. ತಿರುವಾಂಕೂರೂ ಕೊಚ್ಚಿಯೂ ಮಲೆಯಾಳಿಯಾದರೆ, ಬನಗಾನದಲ್ಲಿ ತೆಲುಗು. ಅವು ಕನ್ಯಾಕುಮಾರಿಯ ಹತ್ತಿರ; ಇದು ಕರ್ನೂಲು ಜಿಲ್ಲೆಯಲ್ಲಿ. ಸೊಂಡೂರು ಇರುವುದು ಬಳ್ಳಾರಿ ಜಿಲ್ಲೆಯಲ್ಲಿ. ಮೈಸೂರಿಗೆ ಹತ್ತಿಕೊಂಡಿದೆ. ಮೊದಲು ಬಳ್ಳಾರಿ ಜಿಲ್ಲೆ ಮುಂಬಯಿಪ್ರಾಂತದಲ್ಲಿತ್ತು. ಆಗ ಇದೂ 'ದಕ್ಷಿಣೀ' ಗೋತ್ರಕ್ಕೆ ಸೇರಿದ್ದಿರಬೇಕು. ಈಗ ಮದರಾಸೀ ಕುಲಕ್ಕೆ ತಳ್ಳಿದ್ದಾರೆ.

ಕೊನೆಯದಾದ **ವಾಡಿ** ಸಂಸ್ಥಾನ ನಿಜವಾಗಿ ಒಂದು ಜಾಗೀರು. ಜಾಗೀರಿಂತಲೇ ಸರಕಾರದ ಲೆಕ್ಕಗಳಲ್ಲಿದೆ. ಆದರೂ ಅದು ನಮ್ಮ ನರೇಂದ್ರ ಮಂಡಲದಲ್ಲಿ. ಅದರ ವಿಸ್ತೀರ್ಣ ೧೨ ಚದರ ಮೈಲಿ ಮಾತ್ರ. ನಮ್ಮ ಹಳ್ಳಿಗಳಲ್ಲಿ ಇದಕ್ಕಿಂತ ಹಿರಿಯವು ಎಷ್ಟೋ ಇವೆ. 'ಇಂತಹ ಗೇಣಗಲ ಸೀಮೆಯೂ ಒಂದು ರಾಜ್ಯವೇ!' ಎಂದು ನಮಗೆನಿಸುತ್ತದೆ. ನಮ್ಮ ಪುಣ್ಯ; ಇದಕ್ಕಿಂತಲೂ ಚಿಕ್ಕವು, ಗೇಣಲ್ಲ ಅಂಗುಷ್ಠಮಾತ್ರ ಪ್ರಮಾಣದ ಸಂಸ್ಥಾನಗಳೂ ಇವೆ. ಹಿಂದುಸ್ಥಾನದಲ್ಲಿ, ಸಾವಿರ ಜನವಸತಿಯೂ ಇಲ್ಲದ ಸಂಸ್ಥಾನಗಳು ೧೩೧ ಇವೆ. ನೂರು ಸಂಸ್ಥಾನಗಳಲ್ಲಿ ೫೦೦ಕ್ಕೆ ಹೆಚ್ಚಾಗಿ ಜನರಿಲ್ಲ. **೨೭ ಸಂಸ್ಥಾನಗಳಲ್ಲಿ ಒಂದೇ ಒಂದು ನೂರಕ್ಕೆ ಕಡಮೆ ಜನಸಂಖ್ಯೆ.** ವಿಸ್ತೀರ್ಣದಲ್ಲಿಯೂ ವಾಡಿ ಜಾಗೀರಿಗಿಂತ ಕಡಮೆಯಾಗಿ, ಹತ್ತು ಚದರ ಮೈಲಿಯೂ ಇಲ್ಲದ ಸಂಸ್ಥಾನಗಳು ಹಿಂದುಸ್ಥಾನದಲ್ಲಿ ಎರಡು ನೂರಾ ಎರಡು ಇವೆ. ಇವುಗಳಲ್ಲಿ ಒಂದು ನೂರಾ ಮೂವತ್ತೊಂಭತ್ತರ ಸೀಮೆ ೫ ಚದರ ಮೈಲಿಯಷ್ಟೂ ಇಲ್ಲ. ಈ ಗುಂಪಿನಲ್ಲಿ **ಎಪ್ಪತ್ತು ಸಂಸ್ಥಾನ, ಒಂದೊಂದು ಚದರ**

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: **ಮುಂಬಯಿ**

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್'ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು

'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಆಥಣಿಕರ್,
ಶಳಕವಾಡಿ, ಬೆಳಗಾಂವಿ.

ಮೈಲಿಯೂ ಇಲ್ಲ. ಇವುಗಳಲ್ಲಿ ಗುಜರಾತಿನಲ್ಲಿರುವ ಬಲಬರಿ ಸಂಸ್ಥಾನದಲ್ಲಿ ೨೭ ಜನಸಂಖ್ಯೆ; ಲಂ ರೂಪಾಯಿ ವರಮಾನ. ಈ ರಾಜನೂ ಒಬ್ಬ ರಾಜ !

ಈ ಅಂಗುಷ್ಠ ಪ್ರಮಾಣ ಸಾಮ್ರಾಜ್ಯಗಳೆಲ್ಲ ಗುಜರಾತಿನಲ್ಲಿ ಪಶ್ಚಿಮಭಾರತದಲ್ಲಿ ಇವೆ. ಇಂಥ ಹಾಸ್ಯಾಸ್ಪದ! ಪರಿಸ್ಥಿತಿ ಹಿಂದುಸ್ತಾನದಲ್ಲಿ ಎಕೆ ಬಂತೋ, ಇನ್ನೂ ಎಕೆ ಇದೆಯೋ ಅದರ ಚರ್ಚೆ ಇಲ್ಲಿ ಸರಿಯಲ್ಲ.

ಈ ೧೯೨ ಗುಂಪಿನೊಳಗೆ ೧೫೫ ಸಂಸ್ಥಾನಗಳಲ್ಲಿ ಕನ್ನಡಜನರು ಇದ್ದಾರೆ. ಜಂಜೀರ, ಸಾವಂತವಾಡಿ ಭೋರ್ ಫಲ್ಟಣ್‌ಗಳಲ್ಲಿ ಮಾತ್ರ ಕನ್ನಡ ಜನರು ಕಾಣಿಸರು. ಇಲ್ಲವೆಂದೇ ಹೇಳಬಹುದು. ಉಳಿದ ಎಲ್ಲ ಸಂಸ್ಥಾನಗಳಲ್ಲಿಯೂ ಕನ್ನಡರು ಇದ್ದಾರೆ. ಮೊದಲೇ ಹೇಳಿದಂತೆ ಕೊಲ್ಲಾಪುರ ಸಂಸ್ಥಾನ ಶಿವಛತ್ರಪತಿಯ ರಾಜ್ಯ. ಮರಾಠಾರಾಜ್ಯ. ಬಿರುದಿನ ಎಲ್ಲ ಹೆಮ್ಮೆಯೂ ಅಲ್ಲಿದೆ. ಆ ರಾಜ್ಯದಲ್ಲಿ ಕನ್ನಡಜನ— ಜನಗಣನೆಯ ಅರೆಮನಸಿನ ಲೆಕ್ಕದ ಪ್ರಕಾರ—ಒಂದೂವರೆ ಲಕ್ಷ ಜನ ಇದ್ದಾರೆ. ಅವರ ಕನ್ನಡ ಹೇಗೇ ಇರಲಿ, ಅವರು ನಮ್ಮ ಕನ್ನಡ ಜನ. ಮುಧೋಳ, ಜಮಖಂಡಿ, ರಾಮದುರ್ಗ,ಸೊಂಡೂರು, ಸವಣೂರುಗಳು ಹದಿನಾರೂ ಬಣ್ಣದ ಕನ್ನಡ ಸಂಸ್ಥಾನಗಳು. ವಾಡಿ ಜಾಗೀರೂ ಅಷ್ಟೆ. ಸಾಂಗಲಿ, ಹಿರಿಯುಮಿರಜೆಗಳಲ್ಲಿ ಒಂದು ಲಕ್ಷ ಹದಿನೈದು ಸಾವಿರ ಜನ ಕನ್ನಡಿಗರಿದ್ದಾರೆ. ಇಡೀ ಜನಸಂಖ್ಯೆಯಲ್ಲಿ ಮೂರರಲ್ಲೊಂದು ಪಾಲಿನಷ್ಟು ಇದ್ದಾರೆ. ಹಿರಿಕುರುಂದವಾಡ, ಕಿರಿಕುರುಂದವಾಡ, ಕಿರಿಮಿರಜೆಗಳಲ್ಲಿ ಸಮಸಮನಾಗಿದ್ದಾರೆ. ಔಂಧ್ ಸಂಸ್ಥಾನದ ಒಂದು ಇಡೀ ತಾಲೂಕು ಬಿಜಾಪುರ ಜಿಲ್ಲೆಯಲ್ಲಿದೆ–ಗುಣದಾಳ ತಾಲೂಕು. ಜತ್ ಅಕ್ಕಲಕೋಟೆಗಳಲ್ಲೂ ಕನ್ನಡವಿದೆ. ಈ ಸಂಸ್ಥಾನಗಳಲ್ಲಿ ಒಟ್ಟು ೭ ಲಕ್ಷ ಜನ ಕನ್ನಡಿಗರಿದ್ದಾರೆ.

ಹೈದರಾಬಾದಿನ ಮಾತು ಹೇಳಿದಾಗ, ರೆಸಿಡೆಂಟಿನ ವಿಷಯ ಬಂದಿತ್ತು; ರೆಸಿಡೆಂಟ್ ಎಂದರೆ ನಿವಾಸಿ ಎಂದು ಶಬ್ದಾರ್ಥ. ಹೈದಾರಾಬಾದು ರೆಸಿಡೆಂಟ್ ಎಂದರೆ ಹೈದರಾಬಾದನಿವಾಸಿ. ಹಾಗೆ ನೋಡಿದರೆ ಹೈದರಾಬಾದಿನವರೆಲ್ಲ ಹೈದರಾಬಾದುವಾಸಿಗಳೇ. ಆದರೆ ರೆಸಿಡೆಂಟ್ ನಮ್ಮ ನಿಮ್ಮಹಾಗೆ ನಿವಾಸಿಯಲ್ಲ. ಮನೆಮಾರು ಯಾವುದೂ ಇಲ್ಲದ ಪ್ರವಾಸಿ. ಅವನ ಕೆಲಸ ಮೇಸ್ತ್ರಿಯ ಕೆಲಸವಿದ್ದ ಹಾಗೆ. ಪರೀಕ್ಷೆಯ ಕಾಲದಲ್ಲಿ ಹುಡುಗರನ್ನು ಕಾಯುತ್ತಾರಲ್ಲ— ಮಾಸ್ತರ ನಿರೀಕ್ಷಕರು, ಹಾಗೆ ಹುಡುಗರು ಮೋಸಮಾಡದ ಹಾಗೆ ಅವರು ನೋಡಿಕೊಳ್ಳಬೇಕು. ಅಥವಾ ನೂರಾರು ಜನ ಬಂಗಾರದವರನ್ನು ಅಂತಃಪುರದಲ್ಲಿ ಕೊಳೆಯಿಸುವ ರಾಜರ ಅರಮನೆಯ ಕಾವಲಜ್ಜಿಯರಂತೆ, ಆ ಪಾಪಿಹೆಂಗುಸರು ಏನು ಮಾಡುತ್ತಾರೆಯೋ ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕು. ಹಾಗೆಯೆ ಈ ರಾಜರ ನಡೆನುಡಿ, ನಂಟುಗಂಟು, ಸ್ನೇಹದ್ವೇಷ ಎಲ್ಲವನ್ನೂ ಆ ರೆಸಿಡೆಂಟ್ ನಿರೀಕ್ಷಿಸಬೇಕು. ಕೊಂಚ ಹೆಚ್ಚುಕಡಿಮೆಯಾದರೆ, ಅಜ್ಜಿಗೆ ಅನುಮಾನವಾದರೆ ಮರ್ಯಾದೆಯಾಗಿ ಬುದ್ಧಿಹೇಳುತ್ತಾಳೆ. ಈ ಬಂಗಾರ ಮಹಾರಾಣಿ ಆಕೆಯ ಮಾತು ಕೇಳಲಿಲ್ಲವೋ ಸಿಂಹಪೀಠದ ತನಕ ದೂರು ಮುಟ್ಟುತ್ತದೆ. ಮುಂದಿನ ಮಾತು ಮುಂದೆ.

೧೮೧೮-೧೯ರಲ್ಲಿ ಪೇಷವಾಯಿ ಮನೆತನ ಪೂರಾ ಸೋತು ಹೋದಾಗ, ಆ ರಾಜ್ಯವೆಲ್ಲ ಇಂಗ್ಲಿಷರಿಗೆ ಸಿಕ್ಕಿತು. ಈ ದಕ್ಷಿಣ ಪ್ರದೇಶವೆಲ್ಲ ಆಗ ಇಂಗ್ಲಿಷರ ಕೈಕೆಳಗೆ ಬಂತು. ಆಗ ಬೆಳಗಾಂವಿ, ಧಾರವಾಡ, ಕಲಘಟಗಿಗಳು ಜಿಲ್ಲೆಗಳು. ಧಾರವಾಡ ಜಿಲ್ಲೆಯ ಕಲೆಕ್ಟರನೇ ಈ ಸಂಸ್ಥಾನಗಳ ಮೇಲ್ವಿಚಾರಣೆ ಮಾಡುತ್ತಿದ್ದ. ದಖನ್‌ಗೆ ಒಬ್ಬ ಕಮಿಷನರ್ ಇದ್ದ. ತರುವಾಯ ಕಮಿಷನರ್ ಪದವಿಯೇ ಹೋಯಿತು. ೧೮೩೬ ರಲ್ಲಿ ಜಿಲ್ಲೆಗಳನ್ನು ಪುನರ್ವಿಭಾಗ ಮಾಡಿದರು. ಆಗ ನರಗುಂದ ಇನ್ನೂ ಸಂಸ್ಥಾನವಾಗಿತ್ತು. ನರಗುಂದ,ಸವಣೂರು ಎರಡೂ ಧಾರವಾಡ ಜಿಲ್ಲೆಗೂ ಉಳಿದುವೆಲ್ಲ ಬೆಳಗಾಂವಿಗೂ ಜೋಡಿಸಿದರು. ಬೆಳಗಾಂವಿ ಜಿಲ್ಲೆಯ ಕಲೆಕ್ಟರನಿಗೆ ಪೊಲಿಟಿಕಲ್ ಏಜಂಟ್ ಎಂದು ಹೆಸರಿಟ್ಟರು. ೧೮೫೭ ರಲ್ಲಿ ದೇಶದಲ್ಲಿ ದಂಗೆ ಗಲಭೆಗಳಾದುವು. ಆಗ ಕೊಲ್ಲಾಪುರಕ್ಕೇ ಬೇರೊಬ್ಬ ಅಧಿಕಾರಿಯಾದ. ಮುಂದೆ ಕೊಲ್ಲಾಪುರದ ಏಜಂಟನಿಗೇ ಇದನ್ನೂ ಕಟ್ಟಿ, ಬೆಳಗಾಂವಿಯ ಕಲೆಕ್ಟರನ ಭಾರ ತಗ್ಗಿಸಿದರು. ಅಕ್ಕಲಕೋಟೆ, ಔಂಧ್, ಭೋರ್, ಜಂಜೀರ, ಫಲ್ಟನ್, ಸವಣೂರು, ಸಾವಂತವಾಡಿ, ಜತ್ ಸಂಸ್ಥಾನಗಳು ಈ ಏಜಂಟಿನ ಕಡೆ ಇರಲಿಲ್ಲ. ೧೯೩೬ ರಲ್ಲಿ ಎಲ್ಲವನ್ನೂ ಸೇರಿಸಿ ಒಂದೇ ಮಾಡಿದರು. ಅದಕ್ಕೆ 'ಕೊಲ್ಲಾಪೂರ ಮತ್ತು ದಕ್ಷಿಣಸಂಸ್ಥಾನಗಳ ರೆಸಿಡೆನ್ಸಿ' ಎನ್ನುತ್ತಾರೆ.

ದಕ್ಷಿಣಸಂಸ್ಥಾನಗಳಿಗೆಲ್ಲ— ಸೊಂಡೂರೊಂದು ಬಿಟ್ಟು– ಒಬ್ಬ ರೆಸಿಡೆಂಟ್ ಇದ್ದಾನೆ. ಅವನು ಇರುವುದು ಕೊಲ್ಲಾಪುರದಲ್ಲಿ. ಅವನ ಮಾತು ಏನಾರಿ ಇವನು ಯಾರೂ ನಡೆಯುವಹಾಗಿಲ್ಲ. ನಡೆದರೆ ನಾಭಾ, ಪನ್ನಾ ಮುಂತಾದ ರಾಜರಿಗಾದ ಗತಿ ಕಾದೇ ಇದೆ. ಅರಸುತನ ಕಳೆದುಕೊಳ್ಳುವುದು.

ನಮ್ಮ ದೊರೆಗಳ ದೊರೆತನ, ರೆಸಿಡೆಂಟರು– ಅವರ ಧಣಿಗಳಾದ ಇಂಗ್ಲಿಷರು ಹಾಕಿಸಿದ ವೇಷ. ಸೂತ್ರಧಾರನ ಮನಸಿಗೆ ಬಂದರೆ ಇವರ ದರಬಾರಿನ ನೋಟ. ಇಲ್ಲವಾದರೆ ಇಲ್ಲ. ಇರಲಿ!

ನಾನೇ ಸತ್ತಾಗ

(ಒಂದು ಹುಚ್ಚಾಟ)

ಡಿ. ಬಳ್ಳಾರಿಯ 'ಬೀಚಿ' ಬರೆದುದು

★

— ಪಾತ್ರಗಳು —

ಬೀಚಿ (ಗಾಣದೆತ್ತಿನಂತೆ ದುಡಿಯುವ ಒಡೆಯ)
ಗೋಪಿ (ಬೀಚಿಯ ತಮ್ಮ; ಹೊಸದಾಗಿ ಕಾಲೇಜು ಸೇರಿದವ)
ರಾಘು (ಬೀಚಿಯ ಚಿಕ್ಕ ತಮ್ಮ)
ಅವಳು (ಬೀಚಿಯ ಕೈ ಹಿಡಿದಾಕೆ)
ಪದ್ದು (ಬೀಚಿಯ—ಮದುವೆಗಾದ—ಮಗಳು)
ಅತ್ತೆಯವರು ('ಅವಳ' ತಾಯಿ)
ಅಮ್ಮ (ಬೀಚಿಯ ತಾಯಿ)
ಆಚಾರ್ಯರು (ದೇವರಪೂಜೆಯ ಬ್ರಾಹ್ಮಣ)

ತಾರೆವ್ವ (ಪಕ್ಕದ ಮನೆಯ ೫೦ ವರ್ಷದ ವಿಧವೆ)

ಪ್ರಸ್ತಾವನೆ

ಬೀಚಿ:— (ರಂಗದ ಮೇಲೆ ಪ್ರವೇಶಿಸಿ)

'ಕೊಟ್ಟದೇವರು ಕೊಂಡು ಒಯ್ದರೆ
ಕಟ್ಟಿಕೊಂಡು ಅಳುವುದ್ಯಾಕೋ'

ಎಂದು ಪುರಂದರ ದಾಸರೇನೋ ಹೇಳಿದ್ದಾರೆ.. ಆಗಲಿ! ಇದು ಕೇವಲ ಅವರಂತಹ ರಿಟಾಯರ್ಡ್ ಪೆನ್ಶನರ್ಸ್‌ಗೇ ಹೊರತು, ನಮ್ಮಂತಹ ಲೌಕಿಕರಿಗೆ ಹೇಗೆ ತಾನೇ ಸಾಧ್ಯ ಅಂತ··; ಆಂ.. ಅಲ್ಲ, ಇದೊಂದು ಹೊಸ ಯೋಚನೆಯು ತಲೆಯಲ್ಲಿ ತೂರಿದೆಯಲ್ಲ! ಯಾರೋ ಸತ್ತಾಗ ಯಾರೋ ಅಳುವುದನ್ನು ನೋಡಿದ್ದೆ, ಕೇಳಿದ್ದೆ. ಆದರೆ ಸ್ವತಃ ನಾನೇ ಸಾಕ್ಷಾತ್ ಸತ್ತಾಗ, ಯಾರು ಯಾರು ಹೇಗೆ ಹೇಗೆ ಅಳುತ್ತಾರೋ ನೋಡಬೇಕೂ ಅಂತ ಆಶೆ; ಆದರೆ ಇದು ಹೇಗೆ ಸಾಧ್ಯ..? ಸತ್ತ ಮೇಲೂ ಮನುಷ್ಯ ಬದುಕಿದ್ದರೆ ಚೆನ್ನಾಗಿ ಇರೋದಲ್ವೆ?..(ಯೋಚಿಸಿ) ಆಂ! ಒಳ್ಳೆ ಉಪಾಯ; ಔಷಧಿಯ ಸೀಸೆಯನ್ನೂ, ಮೋಸಂಬಿ ಹಣ್ಣುಗಳನ್ನೂ ತೆಗೆದುಕೊಂಡು, ಜಟ್ಕಾದಲ್ಲಿ ಮನೆಗೆ ಹೋಗಿ ಸತ್ತು ಬಿಡ್ತೇನೆ; ನಿಜವಾಗಿ ಸಾಯುತ್ತೇನೆ..ಮತ್ತೆ ನಿಜವಾಗಿ ಎಂದರೆ ನಿಜವಾಗಿಯೂ ನಿಜವಾಗಿ ಅಲ್ಲ; ಸುಳ್ಳು ಸುಳ್ಳೇ ನಿಜವಾಗಿ ಅನ್ನಿ !

(ಹೋಗುವನು.)

ಪ್ರಾರಂಭ

(ಬೀಚಿಯ ಮನೆಯ ಬಾಗಿಲ ಮುಂದೆ ಜಟ್ಕಾ ನಿಲ್ಲುವುದು. ಎಲ್ಲರೂ ಬಂದು ಬೀಚಿಯನ್ನು ಇಳಿಸಿಗೊಳ್ಳುತ್ತಾರೆ. ಐದಾರು ಸಲ ಅಲ್ಲಲ್ಲಿ ಕುಳಿತು—ನಿಂತು—ಹಾಸಿಗೆಗೆ ಬರುತ್ತಾನೆ.)

ಗೋಪಿ:— (ಗಾಬರಿಯಿಂದ) ಏನಣ್ಣಾ?..ಏನಾಗಿದೆ ಅಣ್ಣಾ?

ಬೀಚಿ:— .... (ಮೋರೆ ಕಿವುಚಿ ಎದೆ ಮುಟ್ಟಿ ತೋರಿಸುತ್ತಾನೆ.)

ಗೋಪಿ:— ಮಾತಾಡಲು ಬರೋಲ್ವೇನಣ್ಣಾ?

ಬೀಚಿ:— ....(ಕೈ ಕಿರುವುತ್ತಾನೆ. 'ಕಾಗದ ಮತ್ತು ಸೀಸಕಡ್ಡಿ ಕೊಡು' ಎಂದು ಸಂಜ್ಞೆ ಮಾಡುತ್ತಾನೆ. ಗೋಪಿ ತಂದುಕೊಡುವನು. "ಹಾರ್ಟ್ ಫೈಲ್ ಆಗಿದೆ" ಎಂದು ಎಡಗೈಯಿಂದ ಗೀಚುತ್ತಾನೆ.)

ಗೋಪಿ:— ಅಯ್ಯೋ! (ಎಂದವನೇ ಬೈಸಿಕಲ್ಲಿಗೆ ಓಡುತ್ತಾನೆ)

ಅಮ್ಮ:— ಏನೋ ಗೋಪೀ .. ಏನೋ ಆದೂ? (ಹಿಂದೆ ಓಡುತ್ತಾಳೆ)

ಗೋಪಿ:— ಆಯಿತಮ್ಮ, ಅಣ್ಣಂದಾಯಿತು. ಡಾಕ್ಟರು.. (ಸೈಕಲ್ಲನ್ನು ಹತ್ತಿ ಹೋಗುತ್ತಾನೆ)

ಅಮ್ಮ:— ಅಯ್ಯೋ! ಬೀಜೀ, ಏನಾಯಿತಪ್ಪಾ! (ಅಳುವಳು. ಎಲ್ಲರೂ ಬೀಚಿಯನ್ನು ಸುತ್ತುಗಟ್ಟುವರು. ಬೀಚಿ ಕರಿಯ ಗುಡ್ಡೆಗಳನ್ನು ಮೇಲೆಳೆದು, ಉಸಿರು ಬಿಗಿಹಿಡಿದು ಮಲಗುತ್ತಾನೆ. 'ಅವಳು' ಬಟ್ಟಲಲ್ಲಿ ಹಾಲನ್ನು ತಂದು ಬಾಯಲ್ಲಿ ಹಾಕುತ್ತಾಳೆ. ಬೀಚಿ ಎಲ್ಲವನ್ನೂ ಎಡಗಡೆಯ ಸೋಟೆಯಿಂದ ಉಗುಳುತ್ತಾನೆ.)

ಅವಳು:— ಅಯ್ಯೋ! ಗಂಟಲಲ್ಲಿ ಹಾಲು ಕೂಡ ಇಳಿಯಲೊಲ್ಲದಲ್ಲಾ! ಡಾಕ್ಟರು ಇನ್ನೂ ಬರಲಿಲ್ಲವೆ! (ಅಳುತ್ತಾಳೆ.)

ಆಚಾರ್ಯರು:— (ಮೂಗುಮುಟ್ಟಿ ನೋಡಿ) ನಾರಾಯಣ.. ನಾರಾಯಣ .. (ಕಾಲುಮಡಿಸಿ) ಹಾಸಿಗೆ ಬಿಡಿಸಿ ಭೂಶಯನಕ್ಕೆ ಹಾಕಿಬಿಡಿರಿ. ಪ್ರಾಯಶ್ಚಿತ್ತದ ದಾನಾ ಕೊಡಿಸೋದು ತೀವ್ರ ಕೊಡಿಸಿಬಿಡಿರಿ!

ಬೀಚಿ:— (ತನ್ನಲ್ಲಿಯೇ) ಡಾಕ್ಟರು ಬರೋದರೊಳಗೇ ಪೂರ್ಣವಾಗಿ ಸತ್ತೆ, ಬದುಕಿಕೊಂಡೆ. ಇನ್ನ ಸುರು ಆಯಿತು ನೋಡಿ, 'ನಾನೇ ಸತ್ತಾಗ'!

ಅವಳು:— ಅಯ್ಯೋ! ಹಯ್ಯೋ! ಹಯ್ಯಾ ದೇವರೇ — ಏನ್ಗತಿ ತಂದೆಪ್ಪಾ ದೇವರೇ— ನನ್ಗತಿ ಏನೂ?.. ಗತಿ ಏನು..ನಂದೇನು ಗತೀ..ನನ್ನ ನಡುನೀರ್ನಾಗ ಕೈಬಿಟ್ಟು ಹೋಗ್ತೀರಾ..ನನ್ಗೇನು ಹೇಳ್ತೀರಿ .. ಏನು ಹೇಳ್ತೀರಿ ನನಗ ..! ತಿಂಗಳಾಗಲಿಲ್ಲ, ಬೇಡಾ ಬೇಡಾ ಅಂದ್ರೆ ವಜ್ರದ ಬೆಂಡೋಲೀ ತೆಕ್ಕೊಂಡ್ಹೋದ್ರಿ. ಲಕ್ಷಣ ವಾಗಿ ಮುತ್ತೈದೀ ಬೆಂಡೋಲಿ ವತ್ತೀ ಇಡಬಾರದೂ ಅಂತ ಹೇಳಿದೆ ನಿನ್ಗೆ! .. ಗಲ್ಲಕ್ಕೆ ಹೇಳಿದ ಹಾಗೆ ಹೇಳಿದೆ, ನಿನ್ಮ ಗಿಳೀ ಹಿಡಕೊಂಡು! .. ಎರಕೊಳ್ಳಿಕ್ಕೇ ಅಂತ ಉಚ್ಚಿಟ್ಟ ಬೆಂಡೋಲಿ ಮತ್ತೆ ಇಟ್ಕೊಳ್ಳೇ ಇಲ್ಲ ನಾನು..!ಇದ್ದಬಂದು ಜತೀ ಬೆಂಡೋಲೀ ಒಯ್ದು ಮಂದೀ ಮನ್ಯಾಗ ಇಟ್ಟು ಬಂದ್ರೀ .. ! ಯಾರು ಬಿಡಿಸಿ ಕೊಡತ್ತಾರ ನನ್ಗೆ? ಅಯ್ಯೋ ದೇವ್ರೇ—ಸಾಯೋಕಾಲಕ್ಕೆ ಇವರಿಗೇಕೆ ಆ ದುರ್ಬುದ್ದಿ ಕೊಟ್ಟೆಪ್ಪಾ ನೀನು?..ನನ್ನ ಆಡವೀಪಾಲು ಮಾಡಿದ್ರೀ; .. ಮುಕ್ಕಳ ಕೈಯ್ಯಾಗ ಬಿಪ್ಪು ಕೊಟ್ರೀ..ನೀವು ಮುಕ್ಕಳ ಕೈಯಾಗ!..ಅಯ್ಯೋ— ಮುಕ್ಕಳನ್ನೆಲ್ಲಾ ಹುಟ್ಟಿದಾಗಲೆ ಕೊಂದಿದ್ದ್ರೆ ಚೆನ್ನಾಗಿರತಿತ್ತು — ಅಯ್ಯೋ – ಅಯ್ಯೋ .. ವಜ್ರದ....

ಅತ್ತೆಯವರು:— ಅಳಬೇಡಮ್ಮಾ , ಅಳಬೇಡಾ ! ಯಾಕ ಅಳತೀದಿ? ಅತ್ತರೇನು ಸತ್ತವರಿಗೆ ಕೇಳುತ್ತೇನು ! ಯಾತಕ್ಕಳತೀ– ಮತ್ತೆ ತಲೆ ನೋಯುತ್ತಮ್ಮಾ..ಅಳಬೇಡ ; ಬಸುರು ಹೆಣ್ಣು ಮಗಳೂ— ಅಳಬೇಡ ! ಹಣೇಬರಹಾ ಯಾರು ಅಳಿಸ್ಯಾರೇ ! ಹಣೇ ಕಂಕುಮಾ ಅಳಿಸಿಹೋಗಿ ಬಿಟ್ಟ..ನನ್ನ ಮಗಳನ್ನ ಪೂರ್ತೀ ಹಾಳುಮಾಡಿ ಹೋದ..ಅನ್ಯಾಯಮಾಡಿ ಹೋದ..ಇನ್ನೊಂದು ಮೂರು ವರ್ಷಾದರೂ ಒದುಕಿದ್ದ್ರೆ ಹುಡುಗರು ಕೈಗೆ ಬರುತಿದ್ದ್ವು— ಇನ್ಯಾಕ ಈ ಮನೀ ಆಶಾ ನನಗೆ..! ದೀಪಾ ಇಳಿಸು, ಗ್ಲಾಸು ತೀಕೀತು, ದೀಪಾ ಇಳಿಸು— ಪದ್ದೂ ಮದುವಿಗಾಗಿ ನಿಂತಿದೆ—ಅವಳ ಮದುವಿ ನೀನೇನು ಮಾಡ್ತೀಯಮ್ಮಾ—ಆ ಇದ್ದ ಬೆಂಡೋಲೀನೂ ಒಯ್ದು ಹಾಳಾಮಾಡಿಟ್ಟ...! ಈ ಗಬ್ಬಿನ ಮನಿ, ಈ ಆಂತಸ್ತಿನ ಮನೀ ನೋಡಿ ಕೊಳ್ಳೆಮ್ಮಾ ನಿನ್ನಾ !..ಪ್ಯಾಸಾದ ಹುಡುಗ, ಎಲ್ಲಾದರೂ ದೊಡ್ಡ ಕೆಲಸಾದೀತೂ ಅಂತ ಕೊಟ್ನೆಮ್ಮಾ ನಿನ್ನಾ !...ನೀನೂ ಒಬ್ಬ ಗೌರ್ಮೆಂಟು ಆಧಿಕಾರಸ್ತನ ಹೆಂಡ್ತೀಆಗಿ ಪೋಟಾರಿನಲ್ಲಿ ಓಡಾಡಿ ೀದೀ ಅಂತ ಕೊಟ್ಟೆಮ್ಮಾನಿನ್ನಾ..! ನನಗೆ ದುರ್ಮಾರ್ಗದ ಪುಂಗ, ಸೊಸಿದೇ ಎಲ್ಲಾ ರಾಜ್ಯ, ಅನುವು ಆಪತ್ತಿಗೆ ಇರತದೆ ಅಂತ ಇವರ ಮನಿಗೆ ಕೊಟುಗೊಂಡ್ನೆಮ್ಮಾ ನಿನ್ನ!... ಎಲ್ಲಾರಿಗೂ ಕೈಯಲ್ಲಿ ಬಿಪ್ಪುಕೊಟ್ಟ..; ಈ ಮನೀ ನನಗೇನು ಸಮ್ಮಂಧ ಇನ್ನ..ನನಗ್ಯಾಕೆ ಬೇಕೂ — ಪದ್ದೂ ! ಹಾಲೂ ಮಸರೂ ಬಿಡಿಸಿಡು, ಹಾಲೊಡೆದಾವ್ತ, ಬಿಡಿಸಿಡಮ್ಮಾ— ನಿನಗೆ ವರ್ಷದಿಂದ ಹೇಳ್ತಾ ಇದ್ದೆ: ನಿನ್ಗಂಡಗೆ ಹೇಳಿ ಅಣ್ಣ-ತಮ್ಮಂದಿರ ಪಾಲು ಮಾಡ್ಸಿಬಿಡೂ ಅಂತ!..ದೇಹ ಶಾಶ್ವತ ಅಲಲ್ಲಾ, ಇವತ್ತಿದ್ದ ವರು ನಾಳೆ ಇಲ್ಲಾ ಅಂತ! 'ಸುಮ್ಮನಿರಮ್ಮಾ, ಹಾಗನಬ್ಯಾಡಾ' ಅಂದಿ—ಬರೇ ಹೆಣ್ಣು ಹಡೆದು ಕೂತೀದಿ!..ನಿನಗೆ ನಾಳೆ ಯಾರು ಪಾಲು ಕೊಡ್ತಾರೇ..ಅಯ್ಯೋ, ಅಯ್ಯೋ, ಅಳಬ್ಯಾಡಾ.. ಹಯ್ಯೋ... !

ಅವಳು:— ಏನನ್ಯಾಯ ಮಾಡಿಬಿಟ್ರೂ..ಭಾಳ ಅನ್ಯಾಯ ಮಾಡಿದ್ರೂ...ಎಲ್ಲಾ ಹಾಳು ಮಾಡಿ ಬಿಟ್ರೂ! ಇನ್ನ ನನಗ್ಯಾಕೆ ಈ ಮನೀ—ಹತ್ತಲಬಾಗಿಲಾ ಹಾಕ್ರಿ, ನಾಯಿ ಬಂದಾವೂ..ಹತ್ತಲ ಬಾಗಿಲಾ ಹಾಕ್ರೀ!..ಹೊಲಕ್ಕೆ ಕಬ್ಬಿಣ ನೇಗಿಲಾ ಹೊಡಸ್ತೀನಿ ಅಂತ ಮನಿಗೇ ನೇಗಿಲಾ ಹೊಡಿಸಿಬಿಟ್ರೂ!...ಲಕ್ಷ್ಮಿ, 'ಲಕ್ಷ್ಮಿನ್ನವಮಾರ ಬಾರ್ದು, ಅವಲಕ್ಷಣ ' ಅಂದೆ!..'ಬೆಂಡೋಲೆ ಇಟುಗೊಂಬೋ ಹುಡ್ಗ್ರಾ ಒಂದಲ್ದೆ ಮೂರು ಅವೆ, ಮದಿವಿಗಾದವಳ ಕಿವ್ಯಾಗಿನವು ಕಪ್ಪಾಗಿವೆ' ಅಂದೆ...ಅವಳಿಗಿಡೋಣಾ ಅಂದೆ..ಸಿಟ್ಟಾಗಿ ಒಪ್ಪತ್ತು ಊಟಾ ಬಿಟ್ಟೆ...ಸಾಫ್ ಸಾಫ್ ಬ್ಯಾಡಾ ಅಂದೆ..ಬಾಯಿ ಮುಚ್ಚೂ ಅಂತ ಗದ್ದಸಿ ಬಿಟ್ರೂ—ವತ್ತೀ ಇಟ್ಟು ತಿಂಗಳಾಗಲಿಲ್ಲಾ, ನೀವೇ ಕಣ್ಮುಚ್ಚಿ ಬಿಟ್ರಿ..! ಇದರ ಕಾಲಾಗಸ ನನ್ಸರೀ ಎಂಟು ದಿವಸ ಮಾತು ಬಿಟ್ರೂ..ಮಾತು ಬಿಟ್ಟವರು ತಿರಿಗಿ ಮಾತೇ ಆಡಲಿಲ್ಲಾ— ದೇವರು ಆಡಧಾಂಗೇ ಮಾಡಿಬಿಟ್ಟ..ಹಯ್ಯೋ..ದೇವ್ರೆ !

ರಾಘು:— ಮೂರ್ಗಾಲೀ ಬೈಸ್ಕಲ್ಲಣ್ಣಾ!..ಸಂಬಳ ಬಂದ ಮೇಲೆ ಮೂರ್ಗಾಲೀ ಬೈಸ್ಕಲ್ಲು ಕೊಡಿಸ್ತೀನಿ ಅಂತ್ಹೇಳಿದ್ದೆಲ್ಲಾ ಅಣ್ಣಾ!..ಯಾರು ಕೊಡಸ್ತಾರಣ್ಣಾ..ನನಗೆ! ಮೂರ್ಗಾಲೀ ಬೈಸ್ಕಲ್ಲ ಮೇಲೆ ಕೂಡ್ಲಿಕ್ಕೆ ಬೇಕೂ ಅಂತ, ಕಾಕೀ ನಿಕ್ಕರು ಧೋರೀ ಟೋಪೀ ತಂದ್ಕೊಟ್ಟಿದ್ದೆಲ್ಲಣ್ಣಾ!.. ಅವನ್ನೆಲ್ಲಾ ಹಕ್ಕೊಂಡು ಬೈಸೀಕಲ್ಲು ಕೊಡಿಸೂ ಅಂತ ಯಾರನ್ನ ಕೇಳಲಣ್ಣಾ..!

ಗೋಪಿ:— ಅಳಬೇಡ ರಾಘೂ, ಅಳಬೇಡ— ಇನ್ನೆಲ್ಲೀ ಮೂರ್ಗಾಲೀ ಬೈಸಿಕಲ್ಲಪ್ಪಾ!— ನಮ್ಮನ್ಯಾರು ಕೇಳ್ತಾರಪ್ಪಾ ಇನ್ನ!—ಅಣ್ಣಾ ಇದ್ದಾಗ್ಲೇ ಅತ್ತಿಗಿ ನಮ್ಮ ವ್ಯಾಲೆ ಕತ್ತೀ ಎಸೀತಾ ಇದ್ರೂ!..ಹಬ್ಬಕ್ಕೆ ಬಟ್ಟೇ ನಮಗೆ ಹೊಲಿಸಿದ್ರೆ ಹೊಟ್ಟೆಬೇನೆ ಏಳುತಿತ್ತು..ಅವರಿಗೆ.. ! 'ಎಲ್ಲಾ ಅವರಿಗೇ ಮಾಡ್ತೀರಿ, ನನ್ನ ಮುಕ್ಕಳಿಗೆ ಲುಂಗಾ ಕೂಡ ಇಲ್ಲ' ಅಂತಿದ್ರು..! ಇನ್ನೆಲ್ಲೀ ಬೈಸಿಕಲ್ಲಪ್ಪಾ ನಿನಗೆ?..ನನ್ಗತೀ ಏನು ಮುಂದೆ? ಕಾಲೇಜ ಬಾಗಿಲ್ದಾಗೆ ನಿಂತ , ಬಿಕ್ಕೆ ಬೇಡ್ಲೇನು ನಾನು?..ಯಾರು ಹೇಳಿದ್ರೂ ತಾಲ್ಲೂಕು ಕಚೇರೀಮ್ಹೊಳಗೆ ಸೇರದೆ, ಹಟಾ ಹಿಡಿದು ಕಾಲೇಜಿಗೆ ಹೋದೆ..ನಿನ್ನ ಮೇಲೆ ಭಾರಾ ಹಾಕಿ ನಾ ಹೋದ್ರೆ, ನನ್ನ ಮೇಲೇ ಭಾರಾ ಹಾಕಿ ನೀ ಹೋದಿ— ಇನ್ಯಾರು ನನಗೆ ಮೂರನೇ ತಾರೀಕಿಗೆ ಸರಿಯಾಗಿ ಮನಿಯಾರ್ಡರು ಕಳಿಸ್ತಾರೆ—'ಭಾಳ ಕಷ್ಟ; ಹಣ ಬರದಿದ್ದರೆ ಭಾವೀ ಕೆರೀ ಪಾಲಾಗ್ತೀನಿ' ಅಂತ ಯಾರಿಗೆ ತಂತೀ ಕೊಡಲಣ್ಣಾ....

ಪದ್ದೂ :— ದೀಪಾವಳೀ ಬಸವನಾಟಕ್ಕೆ ಒಂದು ರೂಪಾಯಿ ಕೊಡ್ತೀನಿ ಅಂದಿದ್ದೆಲ್ಲಪಾ— ನನಗ್ಯಾರು ಕೊಡ್ತಾರವಾ— ಯಾರನ್ನ ಕೇಳ್ಳೀ ನಾನೂ?..

ಅವಳು :— ಇನ್ಯಾರನ್ನ ಕೇಳ್ತೀ ಪದ್ದೂ—ಕೇಳು, ಇದ್ದಾದಲ್ಲಾ, ನಿಮ್ಮ ಕಕ್ಕ— ಎಷ್ಟು ದೇವರಿಗೆ ಹರಕೀ ಹೊತ್ತಿದ್ರೋ ಏನೋ— ಕಬ್ಬಿಣದ ಪೆಟ್ಟಿಗೀ ಬೀಗದ ಕೈ ಜನಿವಾರದಲ್ಲಿ ಬಿತ್ತು ಅವರಿಗೆ!..ಅವರ ಮನಸಿನಂತೆ ಆಯ್ತು ಎಲ್ಲಾ!..ಕೇಳು ಅವರ್ನ, ಗೋಪೀನಾಥರಾಯರನ್ನ ಕೇಳು!.. ಕಾಲೇಜು ಕಾಲೇಜು ಅಂತ

ಮನೀನೇ ಖಾಲಿಮಾಡಿದ್ರು—! ಒಂದು ಹಬ್ಬಾಮಾಡಿದ್ನೇ, ಹುಣ್ಣಿವೀ ಮಾಡಿದ್ನೇ—ರೊಕ್ಕ ಹಾಳೂ ಅಂತ ಗದರ್ಸಿ, ಎಲ್ಲ ರೊಕ್ಕಾ ಉಳಿಸಿ,ತಮ್ಮನ ಓದಿಗಿಟ್ರೇ— ನನ್ನ ತಮ್ಮನ ಮದಿವ್ಯಾಗ ಒಂದು ಸೆಲ್ಯಾ ಕೊಡೋಣಾ ಅಂದೆ; ಇಲ್ಲಾ ಅಂದರೆ ಇಲ್ಲಾ ಅಂದ್ರಿ— ಈಗೇನು ನನ್ನ ಮಕ್ಕಳಿಗೆ? ಅದೇನೋ—ತಾಯಿ ಸತ್ತು ಸೋದರ ಮಾವ ಉಳೀಬೇಕಂತೆ, ತಂದೆ ಸತ್ತು ಕಕ್ಕುಂದಿರು ಉಳೀಬೇಕಂತೆ— ಸುಳ್ಳಲ್ಲಾ ಅದೂ!—ಹಯ್ಯೋ..ಈ ಸಂಸಾರದ್ದು ಇನ್ನ ನಂಗೇನು ಹತ್ತದೆ— ಇದು ಯಾಕೆ ಬೇಕು ನನಗಿನ್ನ?..ಕೂಸಿನ ಕೈಯಾಗಿನ ಕಡ್ಡೀಪೆಟಿಗಿ ಇಸುಗೊಳ್ರೀ, ನೀರಾಗ ಹಾಕ್ಯಾಳು!..ಈ ಕೆಡಿಗೇಡಿ ಮಕ್ಕಳು— ಕಕ್ಕುಂದಿರ ಕೈಯಾಗ ಇವು ಹ್ಯಾಂಗೆ ಬದುಕ್ಯಾವೂ ಅಂತೀನಿ .. ಎಲ್ಲಾ ಇವರದೇ ಆಯ್ತಮ್ಮಾ, ನನ್ನ ಕೈಯಾಗ ಪರಟೇಕೊಡ್ತಾರಿವರು!..ಅವರಿದ್ದಾಗೇ ಇಷ್ಟುನಡಿಸಿಗೊಂಡವ್ರು, ಇನ್ನ ಬಿಡ್ತಾರೇನಮ್ಮಾ!..ಅತ್ಕೆಗೆ ಮುಪ್ಪು—ಹುಚ್ಚು..ಎಲ್ಲಾ ಇವರದೇ ಇನ್ನ— ಮೈದುನ ನಗೆಣ್ಣೀರಿಗೆ ದುಡಿಯಲಿಕ್ಕೆ ಹಡಿದಿ ಏನಮ್ಮಾ ನನ್ನ..! ತವರು ಸೇರಿದರೆ ನಾದಿನೀ ನಾಲಿಗೀ ಮ್ಯಾಲೆ ನಡೀಬೇಕು— ಊಟಕ್ಕೂತ್ರೆ 'ಎಷ್ಟು ಉಣ್ತೀರಲ್ಲಾ ವೈನೀ' ಅಂತಾರವರು! ದೇವರೇ! ಇವರ ಕಣ್ಣಾಮುಜ್ಜೋ-ಬದಲಿ .. ..

ಆಚಾರ್ಯರು :— ಭೀಮರಾಯಾ, ಕರ್ಣನ ಕೈಯಲ್ಲಪಾ ನಿಂದೂ!— ಬ್ರಾಹ್ಮಣ್ರೂ ದೇವ್ರೂ ಅಂದ್ರೆ ಭಾಳಾ ಆಶ್ರಯ ಕೊಡ್ತಿದ್ದಿ! ಬೆಳ್ಳೀ ನಾಲ್ಕಾಣೆಗಿಂತಾ ಕಡಿಮಿ ದಕ್ಷಿಣೀ ಕೊಟ್ಟ ಕೈಯಲ್ಲಪಾ ನಿಂದು..! ಈಗಿನ ಕಾಲದಾಗ ಇಂಥಾ ಯೋಗ್ಯ ಆಸ್ತಿಕ ಸದ್ಗೃಹಸ್ಥರು ಎಲ್ಲಿ ಸಿಗ್ತಾರಪಾ ನಂಗೇ..? ಕೈ ಖರ್ಚಿಲೆ ಪುರಾಣ ಹೇಳ್ಸೀ, ಮನೀವೊಳಗೇ ಮಂಗಳಾ ಮಾಡಿಸ್ತೀ— ಭೀಮರಾಯಾ!....ನನ್ನಾಯರು ಪೂಜಿಗಿಟ್ಟುಗೋತಾರ ಇನ್ನ? ಏನ್ಸೆಮ್ಮಾ! ನನಗೆ ನಿಮ್ಮ ದೇವರ ಪೆಟಿಗಿ ಎತವಾಯ್ತು--ನನ್ನಾ ನಿಮ್ಮಾ ರುಣಾನುಬಂಧ ಕಡಿದು ಹೋತು ಈವತ್ಗೆ.... .

ಅವಳು :— ಆಚಾರ್ರೇ! ನಮ್ಮನ್ಯಾಗ ಇನ್ಯಾಕೆ ಇರ್ತೀರಿ ನೀವು. ಇನ್ಯಾಕಿದ್ದೀರಿ..! ತೀರ್ಥಕೊಟ್ಟು, ಕೈಯಾಗ ದೇವರ ಮ್ಯಾಲಿನ ಹುವ್ವು ಹಾಕ್ತಿದ್ರಿ..; ಅದೇ ಕೈಯಾಗೇ ಅಂಗಾರ ಹಾಕ್ಹಾಂಗ ಮಾಡಿದಾ ದೇವ್ರೂ..ಅಯ್ಯೋ..ಮ್ಹಾರಾಯ್ರೆ!

ತಾರವ್ವ:— ಏನಾಗಿತ್ರೇ ಪಾಪಾ! ಖಬ್ಬನಂಥಾ ಹುಡುಗಾ! ಕಂಡಾಗೆಲ್ಲಾ "ಊಟಾತೀನವ್ವಾ" ಅಂತಿದ್ದ. ರಾತ್ರೀ ನಮ್ಮನ್ನ ಹಾಂಗ ಕೇಳ್ಬಾರದಪ್ಪಾ ಅಂತಿದ್ದೆ, ಭಂಗಾರದಂಥಾ ಹುಡುಗ..! ನಮ್ಮ ಯಜಮಾನ್ರೂ ಹೋಗಿ ಮೊನ್ನಿನ ನವರಾತ್ರೀ ಮುಂದಿನ ದಶವಿಗೆ ಇಪತ್ತೇಳು ವರ್ಷಾದುವೂ-ಅಯ್ಯೋ!

ಅಮ್ಮ:— ಬೀಚೀ! ಬೀಜಣ್ಣಾ! ಹೋಗ್ತೀ ಏನಪಾ? ಹೋಗು!.. ಇಷ್ಟಕ್ಕೇ ಈ ಪಾಪಿಷ್ಟಳ ಹೊಟ್ಟೀಲಿ ಹುಟ್ಟಿದೇ ನಪ್ಪಾ?..ಏನು ಸುಖಬಟ್ಟಿ? ಈ ಅಷ್ಟದರಿದ್ರಳ ಹೊಟ್ಟೀಲಿ ಹುಟ್ಟಿ-ಏನು ಸುಖಬಟ್ಟಿ? ಹೊತ್ತುಂಟ್ಲೆ ಆ ಮಾರಾಯರೂ ಕಣ್ಣು ಮುಚ್ಚಿದ್ರೂ..ಕಂಡವರ ಬಾಗ್ಲಾಗೆ ನಿಂತು ವಾರದನ್ನ ಪಟ್ಟೇ ಸಂಬಳದ ಮ್ಯಾಲೆ ಮುಂದಕ್ಕೆ ಬಂದಿ..! ನಿನ್ನಷ್ಟಕ್ಕೆ ನೀನೇ ಕಷ್ಟ-ಬಟ್ಟು ಕೆಲಸಾ ಸಂಪಾದಿಸಿಗೊಂಡಿ..! ಈಗ ಎಲ್ಲಾರೂ ಬಳಗಾ ಹಚ್ಚಿಗೊಂಡ್ರೂ-ದುಡಿದು ಅದರೂ ಸುಖಬಟ್ಟಾ? ಈ ನನ್ನ ಬಳಗಾ ಹಚ್ಚಿಕೊಂಡು ಬಡತನ ಡುಬ್ಬಕ್ಕೆ ಕಟ್ಟಿಗೊಂಡಿ— ಬೀಚೀ! ಈ ಅಪಹಾತಳ ಹೊಟ್ಟೀಲಿ ಯಾಕೆ ಹುಟ್ಟಿದೆಪ್ಪಾ..? ಏನೋ, ದೇವ್ರು ದೊಡ್ಡ ಕಣ್ಣಿಲೆ ನೋಡಿದ್ದ-ಮುಂದಾದರೂ ಸುಖಬಡುತ್ತಿದ್ದೊ ಏನೋ..! ನಿನ್ನಿ ಚ್ಚಿಗೆ ನೀನು ಬದುಕಿರಬೇಕಾಗಿತ್ತೂ— ಬೀಜಣ್ಣಾ!.. ಬೀಚೀ. ಅಯ್ಯೋ!

ಬೀಚಿ :— (ಜಪ್ಪೆಲೆ ಎದ್ದು) ಅಮ್ಮಾ! ನಿನಗಾಗಿಯೆ ನಾನು ಬದುಕಿರಬೇಕಂತಮ್ಮಾ! ದೇವರು ಪರಲೋಕದಿಂದ ವಾಪಸು ಕಳಿಸಿಬಿಟ್ಟ ನನ್ನ! (ನಮಸ್ಕರಿಸುವನು)

ಅರ್ಪಣೆ

ಇದನ್ನೋದಿ ಸಿಟ್ಟಾಗಿದ್ದ ನನ್ನ ಅವಳಿಗೆ, ಮತ್ತು ಆಗಬಹುದಾದ ಬಂಧುವರ್ಗಕ್ಕೆ ಅವರ ಅನುಮತಿ ಇಲ್ಲದೆ.

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರಗ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ಏಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟೆಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಹಿಮಾಲಯದಲ್ಲಿ ಜೇನುಸಾಕುವಿಕೆ

ಭಾರತಸಂಚಾರಿ ಶ್ರೀ. ಕೃ. ನಾ. ಗೋಸಾವಿ

★

ಜೇನುಸಾಕುವುದಕ್ಕೆ ಅನುಕೂಲತೆಗಳು ನಮ್ಮಲ್ಲಿ ಸಾಕಷ್ಟು ಇದ್ದರೂ ಶುದ್ಧವಾದ ಜೇನುತುಪ್ಪ ಪೇಟೆಯಲ್ಲಿ ಸಿಕ್ಕದಾಗಿದೆ. ಹಿಮಾಲಯದ ಕಾಡಿನಲ್ಲಿ ಹೊರಡಬಹುದಾದ ಜೇನುತುಪ್ಪವಷ್ಟೇ ನನುಗೆಲ್ಲ ಸಾಕಾಗಿ ಹೆಚ್ಚಾಗಬಹುದಾದರೂ, ನಾವಿಂದು ಪರದೇಶಗಳಿಂದ ಅದನ್ನು ತರಿಸಿಕೊಳ್ಳಬೇಕಾಗಿದೆ.

★

"ಹಿಮಾಲಯ ಮಧುಶಾಲಾ (Himalaya Bee Keepers Association)" ಎಂಬ ಸಂಸ್ಥೆಯನ್ನು ಸ್ಥಾಪಿಸುವುದರ ಮುಖ್ಯ ಉದ್ದೇಶವೆಂದರೆ, ಶತಕಾನುಶತಕಗಳಿಂದಲೂ ಹಿಮಾಲಯ ಪ್ರದೇಶದಲ್ಲಿ ರೂಢಿವಾಗಿರುವ ಜೇನುಸಾಕುವ ಹಳೆಯ ಪದ್ಧತಿಯನ್ನು ಮಾರ್ಪಡಿಸಿ, ಲಾಭದಾಯಕವಾದ ಹೊಸ ಪದ್ಧತಿಯನ್ನು ಅಲ್ಲಿ ಪ್ರಚಾರಗೊಳಿಸಬೇಕೆಂದು. ಉನ್ನತವಾದ ಗಿರಿಶಿಖರಗಳಲ್ಲಿಯೆ ಇದ್ದು ಜೀವನಸಾಗಿಸಬೇಕಾಗಿರುವ ಅಲ್ಲಿಯ ಜನರಿಗೆ, ಸುಲಭ ಬೆಲೆಯಲ್ಲಿ ಬೆಲ್ಲ-ಸಕ್ಕರೆಗಳು ದೊರೆಯುವಂತಿಲ್ಲ; ಏಕೆಂದರೆ ಆ ಪ್ರದೇಶವು ಕಬ್ಬಿನ ಬೆಳೆಗೆ ತಕ್ಕುದಾಗಿಲ್ಲವಿಷ್ಟೇ ಅಲ್ಲ; ಬೇರೆ ಕಡೆಯಿಂದ ಬೆಲ್ಲ-ಸಕ್ಕರೆಗಳನ್ನು ತರಿಸಿಕೊಳ್ಳುವುದಕ್ಕೆ ವಾಹನಸೌಕರ್ಯಗಳೂ ಇಲ್ಲ. ಆದುದರಿಂದಲೆ ಬೆಲ್ಲ-ಸಕ್ಕರೆಗಳ ಕೊರತೆಯನ್ನು ಅಲ್ಲಿಯ ಜನರು ಜೇನುತುಪ್ಪದಿಂದಲೆ ತುಂಬಿಕೊಳ್ಳಬೇಕಾಗುತ್ತದೆ. ಬೆಲ್ಲ-ಸಕ್ಕರೆಗಿಂತ ಜೇನುತುಪ್ಪ ಸುಲಭವಾಗಿಯೂ ಸಿಕ್ಕುತ್ತದೆ. ಎಂತಲೆ ಅಲ್ಲಿಯವರು ಸವಿಯುಣಿಸುಗಳನ್ನೆಲ್ಲ ಜೇನುತುಪ್ಪದಿಂದಲೆ ತಯಾರಿಸುವರಲ್ಲದೆ, ಸೇದುವುದಕ್ಕೆ ಉಪಯೋಗಿಸುವ ತಂಬಾಕಿ (ಗುಡಾಕ್)ನಲ್ಲಿ ಕೂಡ-ಬೆಲ್ಲಕ್ಕೆ ಬದಲು-ಜೇನುತುಪ್ಪವನ್ನು ಬೆರಸುತ್ತಾರೆ. ಹೀಗೆ ಬೆರಸುವ ಜೇನುತುಪ್ಪವು ಇಂತಿಂತಹ ಜಾತಿಯ ಹೂಗಳಿಂದಲೆ ತಯಾರಾದುದಿರಬೇಕೆಂದು ಅಲ್ಲಿಯವರು ಹೇಳುವರು.

ಅಲ್ಮೋರಾ ಜಿಲ್ಲೆಯಲ್ಲಿ, ಮದುವೆಯಾದ ಮೊಲೆ ಮದುಮಕ್ಕಳಿಗೆ ಉಡುಗೊರೆಯೆಂದು ಜೇನಿನ ಹಿಂಡನ್ನು (ರಾಣಿಹುಟ್ಟುಸಹಿತ) ಕೊಡುವ ಪದ್ಧತಿಯಿದೆ. ಸಂಕ್ರಮಣದಲ್ಲಿ ನಾವು ಒಬ್ಬರಿಗೊಬ್ಬರು ಎಳ್ಳುಬೆಲ್ಲ ಕೊಟ್ಟು 'ಎಳ್ಳುಬೆಲ್ಲ ತಿಂದು ಒಳ್ಳೆಯ ಮಾತನಾಡಿರಿ' ಎಂದು ಹಾರೈಸುತ್ತಿರುವುದಿಲ್ಲವೆ? ಹಾಗೆಯೆ ಅಲ್ಲಿಯವರು, ಜೇನಿನ ಉಡುಗರೆ ಕೊಟ್ಟು 'ಜೇನುಸಾಕಿ, 'ಅಮೃತದಂತಹ ಆದರ ತುಪ್ಪವನ್ನು ತಿಂದು ಆರೋಗ್ಯವಂತರಾಗಿ ಬಾಳಿರಿ!' ಎಂದು ಹರಸುವ ರೂಢಿಯಿದೆ.

ಜೇನಿನಲ್ಲಿರುವ ಆರೋಗ್ಯಕಾರಕ ಗುಣಗಳನ್ನು ಕುರಿತು ಭಾರತೀಯರಿಗೆ ಬೇರೆಯಾಗಿ ಹೇಳಬೇಕಾದುದೇನೂ ಇಲ್ಲ. ಆಯುರ್ವೇದ— ವೈದ್ಯಶಾಸ್ತ್ರದಲ್ಲಿ ಜೇನುತುಪ್ಪಕ್ಕೆ ದೊರೆತಿರುವ ಸ್ಥಾನ ತುಂಬ ಮಹತ್ವದುದು. ತನ್ನ ಮಹೌಷಧೀ ಗುಣದ ಮೂಲಕವಾಗಿಯೆ ಧಾರ್ಮಿಕ ಆಚಾರಗಳಲ್ಲಿ ಕೂಡ ಇದನ್ನು ಪವಿತ್ರವಾದುದೆಂದು ಗಣಿಸಲಾಗುತ್ತಿದೆ. ಎಂತಲೆ ಪಂಚಾಮೃತಾಭಿಷೇಕಕ್ಕೆ ಜೇನುತುಪ್ಪ ಬೇಕೇ ಬೇಕು. ಭರತಖಂಡದ ಜನರಿಗೆ ಜೇನುತುಪ್ಪದ ಉಪಯುಕ್ತತೆಯ ಅರಿಕೆ ಇಂತಹ ಕಾಲದಲ್ಲಿಯೆ ಆಯಿತೆಂದು ಹೇಳಲಿಕ್ಕೆ ಬಾರದಷ್ಟು ಅದು ಪುರಾತನ ಪರಿಚಿತ ವಸ್ತುವಾಗಿದೆ. ಎಂತಲೆ ಜೇನುಸಾಕುವ ಪದ್ಧತಿ ನಮ್ಮಲ್ಲಿ ಸಾವಿರಾರು ವರ್ಷಗಳಿಗೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಹಳೆಯ ಪದ್ಧತಿಯಿಂದ-ಬೀಡಿಕೆಯ ಪ್ರಮಾಣಕ್ಕೆ ಸರಿಯಾಗಿ-ಮೂಲ ಒದಗಲಿಕ್ಕೆ ಸಾಧ್ಯವಾಗದಿರಲು, ವ್ಯಾಪಾರದಲ್ಲಿ ಮೋಸಗಾರಿಕೆ ತಲೆಯಿಕ್ಕಿತು. ಜೇನುತುಪ್ಪವೆಂಬ ಹೆಸರಿನಿಂದ ಸಕ್ಕರೆಯ ಪಾಕ ಮತ್ತು ಕಾಕಂಬಿಗಳು ಪೇಟೆಯಲ್ಲಿ ಮಾರಾಟವಾಗ ತೊಡಗಿದುವು. ನಮ್ಮ ದೇಶದಲ್ಲಿ ಕಾಡಿಗೇನೂ ಕಡಿಮೆಯಿಲ್ಲ; ಕಾಡು ಇದ್ದವೇಲೆ ಹೂಗಳಿಗೇನು ಕೊರತೆ? ಆದರೆ ಹೂವಿದ್ದ ಪ್ರಮಾಣದಲ್ಲಿ ಹುಳುಗಳಿಲ್ಲ ನಮ್ಮಲ್ಲಿ. ಆದುದರಿಂದಲೆ ಜೇನುತುಪ್ಪದ ಪೂರೈಕೆಯಾಗದಂತಾಯಿತು; ಪರದೇಶ (ಅಮೇರಿಕಾ, ಆಸ್ಟ್ರೇಲಿಯಾ)ಗಳಿಂದ ನಮ್ಮ ದೇಶಕ್ಕೆ ಲಕ್ಷಾಂತರ ರೂಪಾಯಿಗಳ ಜೇನುತುಪ್ಪ ಬರಲಾರಂಭಿಸಿತು.

ಹಳೆಯ ಪದ್ಧತಿಯಿಂದ ಜೇನುಸಾಕುವ ಕ್ರಮವು ಬರಿಯೆ ಪರ್ವತಪ್ರಾಂತ್ಯದಲ್ಲಿಯೆ ಇದ್ದುದರಿಂದ, ಅದಕ್ಕೆ ವ್ಯಾಪಾರಸೌಕರ್ಯಗಳು ಇಲ್ಲದೆಹೋದುವು. ಹಾಗೆ ವ್ಯಾಪಾರಸೌಕರ್ಯಗಳನ್ನು ಒದಗಿಸಿಕೊಡಬೇಕೆಂದರೆ, ಹಳೆಯ ಪದ್ಧತಿಯ ಜೇನುಸಾಕುವಿಕೆಯಿಂದ ಅಷ್ಟೊಂದು ಹೆಚ್ಚು ಪ್ರಮಾಣದಲ್ಲಿ ಜೇನುತುಪ್ಪ ಹೊರಡುತ್ತಿರಲಿಲ್ಲ. ಹೀಗಾಗಿ ಅಲ್ಲಿಯ ಜೇನು-

ನಾಕುವ ಉದ್ಯಮವೆ ಕುಗ್ಗಿಹೋಗತೊಡಗಿತು. ಆದುದರಿಂದಲೆ ಈ ಗಾಂಧೀಯುಗದಲ್ಲಿ, ಖಾದಿಯ ಉದ್ಯಮದಂತೆ ಜೇನುನಾಕುವ ಉದ್ಯಮಕ್ಕೂ ಹಿಂದುನ್ಯಾಸದಲ್ಲಿ ಸ್ಥಾನದೊರೆಕಿಸಿಕೊಡಬೇಕೆಂದು, ಈ ಉದ್ಯಮದ ಉನ್ನತಿಗಾಗಿ ಅನೇಕರು ಹೆಣಗತೊಡಗಿದರು. ಕಾಂಗ್ರೆಸ್ಸು ಅಧಿಕಾರವನ್ನು ಸ್ವೀಕರಿಸಿದಾಗ ಅದರ ಆಡಳಿತದಲ್ಲಿದ್ದ ಆರೇಳು ಪ್ರಾಂತ್ಯಗಳ ಸರಕಾರದವರು, ಜೇನು ನಾಕುವ ಉದ್ಯಮಪ್ರಚಾರದ ಕಾರ್ಯವನ್ನು ಕೈಕೊಂಡಿದ್ದರು. ಅವರು ಪ್ರಾರಂಭಿಸಿದ ಪ್ರಯೋಗಶಾಲೆಗಳಲ್ಲಿಯು ಕೆಲವು ಈಗಲೂ ಜೀವಹಿಡಿದು ನಿಂತಿರುವುವು. ಸಂಯುಕ್ತಪ್ರಾಂತದ ಸರಕಾರದ ವರು ನಮ್ಮ 'ಹಿಮಾಲಯ ಮಧುಶಾಲೆ'ಯನ್ನು ನೋಡಿಯೆ ಐದಾರು ಪ್ರಯೋಗಶಾಲೆಗಳನ್ನು ತೆರೆದರು. ಆ ಕಾರ್ಯದಲ್ಲಿ ನಾನು ಕೂಡ ಅವಶ್ಯಕ ನೆರವನ್ನು ಕೊಟ್ಟೆನು. ಅದೇ ಕಾಲದಲ್ಲಿ ನಾನು ಹಿಮಾಲಯ ಪ್ರಾಂತದ ಕೆಲವು ಜಿಲ್ಲೆಗಳಲ್ಲಿ ಸುತ್ತಾಡಿ, ಅಲ್ಲಿ ರೂಢಿವಾಗಿದ್ದ ಜೇನುನಾಕುವ ಹಳೆಯ ಪದ್ಧತಿಯನ್ನು ವಿಮರ್ಶಾ ಪೂರ್ವಕ ಅಭ್ಯಾಸಮಾಡಿ, ಹಳೆಯ ಪದ್ಧತಿಯಲ್ಲಿರುವ ಕೊರತೆ ಗಳನ್ನೂ ಹೊಸ ಪದ್ಧತಿಯಲ್ಲಿರುವ ಅನುಕೂಲತೆಗಳನ್ನೂ ಅಲ್ಲಿಯ ಜನರಿಗೆ ಮನವರಿಕೆಮಾಡಿಕೊಡಲು ಪ್ರಯತ್ನಿಸಿದೆ. ಆಗ ಪಡೆದ ಅನುಭವಗಳನ್ನೇ ನಾನೀಗ ಜಯಂತಿಯ ವಾಚಕರಿಗಾಗಿ ಇಲ್ಲಿ ಕೊಡಬೇಕೆಂದಿದ್ದೇನೆ. (ಇದಕ್ಕೆ ಮೊದಲು, ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ನಾನು ತಿರುಗಾಡಿ, ಅಲ್ಲಲ್ಲಿಯ ಜೇನು-ನಾಕುವ ಮುಖ್ಯ ಸಂಸ್ಥೆಗಳನ್ನೆಲ್ಲ ನೋಡಿ ಬಂದಿದ್ದೆನು. ವಿಳ್ಳು ಕಡೆಗಳಿಗಿಂತ ತ್ರಾವಣಕ್ಕೋರ್, ಕೋಯಿಮತ್ತೂರ್, ಸೇಲಂ, ನೀಲಗಿರಿ, ಕುರ್ಗ್, ಮೈಸೂರು, ವರ್ಧಾ (ಸಿ. ಪಿ.) ಇಲ್ಲಿಯ ಪ್ರಯೋಗಶಾಲೆಗಳು ಹೆಚ್ಚು ಮಹತ್ತ್ವದುವಾಗಿವೆ.)

ಜೇನು ನಾಕುವುದರ ಬಗೆಗಿರುವ ಹಳೆಯ ಪದ್ಧತಿಗಳ ಪರಿಚಯ ವಿರದೆ, ಹೊಸದರಲ್ಲಿಯ ಮಹತ್ತ್ವವನ್ನು ತೋರಿಸಿ ಅದನ್ನು ಪ್ರಚಾರದಲ್ಲಿ ತರುವುದು ಕಠಿಣವೆಂದು ತೋರಿದುದರಿಂದ, ನಾನು ಹಿಮಾಲಯ ಪ್ರದೇಶದ ಅನೇಕ ಭಾಗದಲ್ಲಿ ಅಡ್ಡಾಡಿ, ಅಲ್ಲಿಯ ಎಲ್ಲ ರೀತಿಯನ್ನೂ ನೋಡಿಕೊಂಡು ಬಂದೆ. (ಸಂಯುಕ್ತ ಪ್ರಾಂತದ ಸರಕಾರಕ್ಕೆ ನನ್ನ ಈ ಪ್ರವಾಸದ ವರದಿ ಹೋಗಿದೆ.) ಡೇಹರಾ-ಡೂನ್ ಹಾಗು ಗಢವಾಲ ಜಿಲ್ಲೆಗಳಲ್ಲಿಯ ೧೦೬ ಹಳ್ಳಿಗಳನ್ನು ಸಂದರ್ಶಿಸಿ, ಅಲ್ಲಲ್ಲಿಯ ಜನರು ಜೇನುನಾಕುವ ಹಳೆಯ ಪದ್ಧತಿಯನ್ನಾದರೂ ಸಂಪೂರ್ಣವಾಗಿ ಅರಿತುಕೊಂಡಿದ್ದಾರೆಯೆ ಎಂಬುದನ್ನು — ಹಲವರಿಗೆ ಹಲವು ವಿಧದ ಪ್ರಶ್ನೆಗಳನ್ನು ಕೇಳಿ — ತಿಳಿದುಕೊಂಡೆನು. ಇಲ್ಲಿಯ ಜನರು, ತಂತಮ್ಮ ಮನೆಗಳನ್ನು ಕಟ್ಟುವಾಗಲೆ ಸುತ್ತಣ ಗೋಡೆಗಳಲ್ಲಿ — ನೆಲದಿಂದ ಸುಮಾರು ೪-೫ ಅಡಿ ಎತ್ತರದ ಮೇಲೆ — ೬-೭ ಅಡಿಗಳ ಅಂತರಕ್ಕೊಂದರಂತೆ ಮಾಡುಗಳನ್ನು ಬಿಡುವರು. ಈ ಮಾಡುಗಳು ಕೆಲವ್ವ ಕಡೆಗೆ ೧ ಅಡಿ ಚೆಚ್ಚೌಕಾಗಿರುವುವು. ಇನ್ನು ಕೆಲವು ಕಡೆ ಒಂದು ಅಡಿ ಉದ್ದಗಲಗಳಿಂದ ಕೂಡಿದ್ದರೂ ಎರಡು ಅಡಿಗಳವರೆಗೆ ಆಳವಾಗಿರುವುವು. ಮತ್ತೆ ಕೆಲವು ಇದಕ್ಕೂ ಹೆಚ್ಚು ಉದ್ದ-ಅಗಲ-ಆಳಗಳಿಂದ ಕೂಡಿರುವುವು. ಇವು ಹೀಗೆ ಭಿನ್ನ ಭಿನ್ನ ಆಕಾರದುವಾಗಿ ಇರಲಿಕ್ಕೆ ಅಲ್ಲಲ್ಲಿಯ ಹೂಗಿಡಗಳ ಪ್ರಮಾಣಭಿನ್ನತೆಯೆ ಮುಖ್ಯ ಕಾರಣವಾಗಿದೆ. ಈ ಮಾಡುಗಳ ಮುಂಬದಿಯೆಲ್ಲ ಮುಚ್ಚಿ-ಕೊಂಡಿದ್ದು, ಜೇನುಹುಳುಗಳು ಒಳಗೆ ಹೋಗಿ ಹೊರಗೆ ಬರಲಿಕ್ಕೆಂದು ಒಂದು ಬೆರಳಿನಗಲದ ದಾರಿಯಿರುವುದು. ಹಿಂಬದಿಗೆ ಒಂದೊಂದಕ್ಕೂ ಒಂದೊಂದು ಹಲಗೆಯನ್ನು ಕೂಡಿಸಿ ಮುಚ್ಚಿ ಬಿಟ್ಟಿರುವರು (ಕಾಶ್ಮೀರ, ಕಾಂಗಡಾ, ಸಿಮ್ಲಾ, ರಾಮಪೂರ, ಬುಶ್‌ಹರಾ, ಡೇಹರಾಡೂನ್, ಗಢವಾಲ, ನೈನಿತಾಲ, ಅಲ್ಮೋರಾ, ನೇಪಾಳ, ದಾರ್ಜಿಲಿಂಗ ಮತ್ತು ಆಸಾಮ್ ಪ್ರದೇಶಗಳಲ್ಲೆಲ್ಲ ಸ್ವಲ್ಪ ಹೆಚ್ಚು-ಕಡಿಮೆಯಾಗಿ ಇವೇ ಪದ್ಧತಿಯಿರುವುದು). ತೊಡಿವೆಜೇನುಗಳು ಕತ್ತಲೆಯಲ್ಲಿಯೆ ಇರುವಂತಹವಾದುದರಿಂದ, ಈ ಮಾಡುಗಳಲ್ಲಿ ಹುಳುಗಳು ತಾವೆ ತಾವಾಗಿಯೆ ಬಂದು ಸೇರುವುವು. ಅದು ತುಂಬ ಚಳಿಯ ಪ್ರದೇಶವಾದುದರಿಂದ, ಈ ಗೋಡೆಯಲ್ಲಿ ಕಟ್ಟಿದ ಮಾಡುಗಳು ಜೇನುಹುಳುಗಳಿಗೆ ಸಂರಕ್ಷಕ ಸ್ಥಳಗಳಾಗಿ ತೋರುವುವಲ್ಲದೆ, ಜೇನು ಕೂಡಿಸಿಡಲೂ ಅನುಕೂಲ

'ಹಿಮಾನೀ' ಸೌಂದರ್ಯಗಳನ್ನೆ ಕೊಳ್ಳಿರಿ!

ಹಿಮಾನೀ ಸ್ನೋ

★

ಮುಖದ ಶೋಭೆಗೂ ಪರಿಮಳಕ್ಕೂ ಇದನ್ನು ಸರಿಗಟ್ಟುವುದು ಇನ್ನೊಂದಿಲ್ಲ.

ಹಿಮಾನೀ ಮಂಜರೀ ಸಾಬೂನು!



ಇದರಿಂದ ನಿತ್ಯವೂ ಸ್ನಾನ ಮಾಡಿದಲ್ಲಿ ಮೈಯು ಸುಂದರವೂ ಕಾಂತಿಯುಕ್ತವೂ ಆಗುವುದು.

ಪ್ರಸಿದ್ಧ ಅಂಗಡಿಗಳಲ್ಲೂ ಔಷಧ ವ್ಯಾಪಾರಿಗಳ ಕಡೆಗೂ ಸಿಗುತ್ತವೆ.

ಸೋಲ್ ಡಿಸ್ಟ್ರಿಬ್ಯೂಟರ್ಸ್: ಶರ್ಮಾ ಬಾನರ್ಜಿ ಮತ್ತು ಕಂ. ಕಲಿಕತ್ತೆ; ಮತ್ತು ಪ್ರಿನ್ಸೆಸ್ ಸ್ಟ್ರೀಟ್ ಮುಂಬಯಿ ನಂ. ೨

ರಾಜಯೋಗಿ

●

ಅನಂದಕಂದರ ಐತಿಹಾಸಿಕ ಕಾದಂಬರಿ

ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮ ವಂಶದಲ್ಲಿಯ ಕೊನೆಯ ದೊರೆ ತನೆಯ ವಿರೂಪಾಕ್ಷನ ಕರ್ತವ್ಯ-ಚ್ಯುತಿಯ ದುಷ್ಪರಿಣಾಮ; ಅದನ್ನು ತಪ್ಪಿಸಲು ಹೆಣಗಿದ ರಾಜಶೇಖರ, ನರಸಿಂಹನಾಯಕ, ಹೇಮಾಂಬಿಕೆ ಇವರ ಸಾಮ್ರಾಜ್ಯನಿಷ್ಠೆಯ ಸುಪರಿಣಾಮ ಇವುಗಳ ಹೃದ-ಯಂಗಮ ಚಿತ್ರವಿದು. ಬೆಲೆ ೧–೦–೦. ಬೇಕಾದವರು ಜಯಂತಿ ಕಾರ್ಯಾಲಕ್ಕೆ ಬರೆಯಿರಿ.

ಸ್ಥಳಗಳಾಗಿ ಪರಿಣಮಿಸುವುವು. ಜಳಿಯು ತೀರ ಹೆಚ್ಚಿರುವ ಕೆಲವು ಕಡೆಗಳಲ್ಲಿ, ಗೋಡೆಯಲ್ಲಿ ಬಿಟ್ಟ ಮಾಡುಗಳಲ್ಲಿ ಗಡಿಗೆಗಳನ್ನು ಇಟ್ಟು ಮುಚ್ಚುವ ಪದ್ಧತಿಯೂ ಉಂಟು. ಈ ಗಡಿಗೆಗಳಿಂದ ಹುಳುಗಳಿಗೆ ಜಳಿಯ ಬಾಧೆ ಇನ್ನಿಷ್ಟು ಕಡಿಮೆಯಾಗುವುದು. ಚಳಿ ಕಡಿಮೆ ಇರುವ ಸ್ಥಳಗಳಲ್ಲಿ, ಈ ಮಾಡುಗಳಂತೆಯೆ ಮರದ ಬೊಡ್ಡೆಗಳಲ್ಲಿ ೫॥ ಅಡಿ ಉದ್ದ ೧೦ ಇಂಚು ವ್ಯಾಸ ಇದ್ದ ಟೊಳ್ಳು ಗಳನ್ನು ಮಾಡಿ ಇಡುವರು. ಇಂತಹ ಟೊಳ್ಳುಮರಗಳಿಗೆ 'ಕುಂಟೆ' ಎಂದು. ಉ. ಕನ್ನಡ ಜಿಲ್ಲೆಯಲ್ಲಿ ಹೇಳುವರು. ಈ ಟೊಳ್ಳುಮರದ ಎರಡೂ ಬದಿಗಳನ್ನು ಹಲಗೆಯಿಂದ ಮುಚ್ಚಿ, ಹುಳುಗಳು ಹೋಗಿಬರುವುದಕ್ಕೆ ತೂತುಮಾಡುವರು. ಕುಂಟೆ ಯಲ್ಲಿ ಜೇನು ಸಾಕುವ ಪದ್ಧತಿ ಉತ್ತರಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ. ಹಿಮಾಲಯಪ್ರದೇಶದ ಕೆಲವು ಕಡೆಗಳಲ್ಲಿ ಕೂಡ ಇದೇ ಪದ್ಧತಿಯಿದೆ. ಅಲ್ಲಿಯ ಜನರಿಗೆ ಜೇನು-ಹುಳುಗಳ ಕುಟುಂಬದ ಪರಿಚಯವು ಚೆನ್ನಾಗಿ ಇರುವುದು. ನಮ್ಮಲ್ಲಿ 'ರಾಣಿಹುಳು' ಎಂದು ಹೇಳುವುದನ್ನೆ ಅಲ್ಲಿಯವರು 'ರಾಜ' ಎಂದು ಕರೆಯುತ್ತಾರೆ. ನಮ್ಮ ಹಳೆಯ ಗ್ರಂಥ (ಉಪನಿಷದಾದಿ) ಗಳಲ್ಲಿ ಕೂಡ 'ಮಧುಕರ ರಾಜ' ಎಂಬು ದಾಗಿಯೆ ಇದೆ. ಈ ನಾಮಭಿನ್ನತೆಗೆ ಕಾರಣನೇನಿದೆಯೊ ಗೊತ್ತಾಗದು.

ಜೇನುಹುಳುಗಳು ಯಾವುದಾದರೊಂದು ಗಿಡಕ್ಕೆ ಹತ್ತಿ ಕುಳಿತಿದ್ದರೆ ಅವುಗಳನ್ನು ಹಿಡಿದುಕೊಂಡು ಬರುವುದೂ, ಹಾರಿ ಹೋಗುತ್ತಲಿರುವ ಹಿಂಡುಗಳೆದುರು ಬೂದಿ–ಮಣ್ಣುಗಳನ್ನುಗ್ಗಿ ಒಂದು ಸ್ಥಳದಲ್ಲಿ ಕೂಡಿಸುವುದೂ, ಬಳಿಕ ರಾಣಿ ಹುಳುವನ್ನು ಕಂಡು ಹಿಡಿದು ಅದರ ರೆಕ್ಕೆ ಕತ್ತಿ ಒಂದು ಬುಟ್ಟಿಯಲ್ಲಿ ಹಾಕಿ ತಮ್ಮ ಮಾಡುಗಳಲ್ಲಿ ವಸತಿಮಾಡುವಂತೆ ತಂದು ಬಿಡುವುದೂ ಇಲ್ಲಿಯ ಜನರಿಗೆ ಚೆನ್ನಾಗಿ ಗೊತ್ತಿದೆ. ಆದರೆ ಜೇನುತುಪ್ಪ ತೆಗೆಯುವಾಗ ಹುಳುಗಳನ್ನು ಪೀಡಿಸದಂತೆ ತೆಗೆಯುವುದು ಇವರಿಗೆ ಗೊತ್ತಿಲ್ಲ.

ಹುಟ್ಟುಗಳಲ್ಲಿ ಜೇನುತುಪ್ಪ ತುಂಬುವ ಮಾಸಗಳು ಯಾವ-ಯಾವುವೆಂಬುದನ್ನು ಇಲ್ಲಿಯ ಜನರು ಚೆನ್ನಾಗಿ ಅರಿತಿರುವರು. ಜ್ಯೇಷ್ಠ–ಆಷಾಢಗಳಲ್ಲಿ ಒಂದು ಸಲ, ಆಶ್ವಿನ ಅಥವಾ ಕಾರ್ತಿಕದಲ್ಲಿ ಇನ್ನೊಂದು ಸಲ ಹೀಗೆ ವರ್ಷದಲ್ಲಿ ಎರಡು ಬಾರಿ ಜೇನುತುಪ್ಪ ತೆಗೆಯುತ್ತಾರೆ. ತೆಗೆಯಬೇಕಾದ ದಿನಗಳು ಬಂದಾಗ, ರಾತ್ರಿಯ ಹೊತ್ತಿನಲ್ಲಿ ಮಾಡಿನ ಒಳಬದಿಯ ಹಲಗೆಯ ಮುಚ್ಚಳವನ್ನು ತೆರೆದು, ಒಳಗೆ ಕುಳ್ಳು ಹೊತ್ತಿಸಿ ಹೊಗೆ ಮಾಡುವರು. ಇದರಿಂದ ಹುಳುಗಳೆಲ್ಲಾ ಗಾಬರಿಗೊಂಡು, ಹುಟ್ಟನ್ನು ಬಿಟ್ಟು, ದಾರಿಸಿಕ್ಕತ್ತ ಹಾರಿ ಹೋಗುವುವು. ರಾತ್ರಿಯ ವೇಳೆಯಾದುದರಿಂದ ಹಾರಲಿಕ್ಕಾಗದ ಎಷ್ಟೋ ಹುಳುಗಳು ಕೆಳಗೆ ಬಿದ್ದು ಸಾಯುತ್ತವೆ. ಎಲ್ಲ ಹುಳುಗಳೂ ಹೋದುವೆಂದು ಗೊತ್ತಾದಮೇಲೆ, ಮಾಡಿನ ಮೇಲ್ಬದಿಯಿಂದ ಸಾಲಾಗಿ ಇಳಿಬಿದ್ದ ಹೋಳಿಗೆಗಳನ್ನು, ಒಂದೊಂದನ್ನಾಗಿ ಕೊಯ್ದು ತೆಗೆಯುತ್ತಾರೆ. ಮುಂದೆ ಕೊನೆಯ ಹೋಳಿಗೆಯನ್ನು ಕೊಯ್ಯದೆ ಹಾಗೆಯೆ ಬಿಟ್ಟು, ಮತ್ತೆ ಮೊದಲಿನಂತೆಯೆ ಮಾಡಿನ ಹಿಂಬದಿಯನ್ನು ಹಲಗೆಯಿಂದ ಮುಚ್ಚಿ ಬಿಡುತ್ತಾರೆ. ಹೊರಗೆ ಹಾರಿಹೋದ ಹುಳುಗಳು ಜಳಿಗೆ ಬೆದರಿ ಸುರಕ್ಷಿತ ಸ್ಥಳವನ್ನು ಹುಡುಕುತ್ತ ಹಾರಾಡುತ್ತಿರುವಾಗ, ಮತ್ತೆ ಮಾಡುಗಳನ್ನು ನೋಡುವುವು. ಒಳಹೊಕ್ಕು ಉಳಿದಿದ್ದ ಹೋಳಿಗೆಯ ಆಶೆಯಿಂದ ಅಲ್ಲಿಯೆ ಇದ್ದು ಬಿಟ್ಟು, ಮತ್ತೆ ಹೊಸ ಹುಟ್ಟುಗಳನ್ನು ಕಟ್ಟ-ತೊಡಗುವುವು. ಒಂದೊಂದು ಮಾಡಿನಲ್ಲಿ ೪–೫ರಿಂದ ಮೊದಲು ಗೊಂಡು ೨೦–೨೫ರ ವರೆಗೂ ಜೇನ ಹೋಳಿಗೆಗಳು (ಹುಟ್ಟು) ಇರುವುವು. ಒಂದೊಂದು ಮಾಡಿನಲ್ಲಿಯೂ ೫–೬ ಪೌಂಡಿನಿಂದ ೨೦–೨೨ ಪೌಂಡಿನ ವರೆಗೂ ಜೇನುತುಪ್ಪ ಸಿಕ್ಕುವುದು. ಹೂಗಳು ಹೆಚ್ಚಾಗಿ ಸಿಕ್ಕುತ್ತಿರುವಾಗ ರಾಣಿಹುಳು ಹೆಚ್ಚಾಗಿ ತತ್ತಿಗಳನ್ನು ಇಡುವುದು. ಮುಂದೆ ಹುಳುಗಳ ಸಂತಾನ ಹೆಚ್ಚಾಗಿ, ಮಾಡಿನೊಳಗೆ ಸ್ಥಳದ ಅಡಚಣೆ ಹೆಚ್ಚಾಗಲು, ಮೊದಲಿನ ರಾಣಿಹುಳುವು (ಹೊಸ ರಾಣಿಯ ತತ್ತಿಯನ್ನಿರಿಸಿ) ಕೆಲವು ಹುಳುಗಳನ್ನು ಕರೆದುಕೊಂಡು ಹೊಸ ಸ್ಥಳಕ್ಕೆ ಹೊರಟು ಹೋಗುವುದು. ಇದೆಲ್ಲ ವಿಷಯ ಇಲ್ಲಿಯ ಜನರಿಗೆ ಗೊತ್ತಿಲ್ಲ. ಎಂತಲೆ ರಾಣಿ-ಹುಳು ಹಾರಿಹೋಗದಂತೆ ಮಾಡಲು ಒಂದೊಂದು ಕಾಲದಲ್ಲಿ, ತತ್ತಿ-ಮರಿಗಳಿಂದ ತುಂಬಿದ ಕೆಲವು ಹುಟ್ಟುಗಳನ್ನು ಕೊಯಿದು ಚೆಲ್ಲುವರು. ಇದರಿಂದ ಹುಳುಗಳ ಸಂತಾನ ಕಡಿಮೆಯಾಗುವುದರಿಂದ ಮಾಡಿನಲ್ಲಿ ಸ್ಥಳದ ಕೊರತೆಯೆನಿಸದು; ಹಳೆಯ ರಾಣಿ ಹುಳು ಹಾರಿ ಹೋಗುವ ಸಂದರ್ಭ ಬಾರದು. ಆದರೆ ಹೀಗೆ ಹುಳುಗಳ ಸಂತಾನ ನಷ್ಟಪಡಿಸುವುದು ಜೇನುಸಾಕುವ ಉದ್ಯಮದ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ಹೊಸ ಪದ್ಧತಿ ಹೇಳುವುದು. ಅಂತೂ ಜೇನುಹುಳು ಹಿಡಿದು ಸಾಕುವುದರಿಂದ ಮೊದಲು ಮಾಡಿ, ತುಪ್ಪ ತೆಗೆಯುವವರೆಗಿನ ಎಲ್ಲ ವಿಧಿ–ವಿಧಾನ ಗಳನ್ನೂ ಇಲ್ಲಿಯ ಜನರು ಸ್ವಾಭಾವಿಕವಾಗಿ ಅರಿತುಕೊಂಡಿದ್ದಾರೆ.

'ಹುಸಿ ನಂಬಿಕೆ'

ಕವಿ ರವೀಂದ್ರನಾಥ ಠಾಕೂರರ ಕತೆಯ ಅನುವಾದ

★

ಶ್ರೀ. ಕೋ. ರಾ. ಕೃಷ್ಣಮೂರ್ತಿ ಬಿ.ಎ.

★

ನಾನು ಡಾರ್ಜಿಲಿಂಗಿಗೆ ಬಂದಾಗ, ಬೆಟ್ಟಗಳೆಲ್ಲವೂ ಕರಿಯ ಬಣ್ಣದ ಮುಗಿಲಿನಿಂದ ಆಚ್ಛಾದಿತವಾಗಿದ್ದುವು. ಹೊರಕ್ಕೆ ತಿರುಗಾಡಲು ಹೋಗಲು ಕೊಂಚವೂ ಮನಸ್ಸಿರಲಿಲ್ಲ; ಹಾಗೆಯೆ ಹೊರಗೆ ಹೊಗದಿರಲೂ ಇಷ್ಟವಿರಲಿಲ್ಲ. ಆದುದರಿಂದ ಉಪಹಾರಾನಂತರ ಮಳೆಯಂಗಿಯನ್ನು ಧರಿಸಿಕೊಂಡು, ದಪ್ಪಗಿನ ಪಾದರಕ್ಷೆ ಹಾಕಿಕೊಂಡು ಹೋಟಲಿನಿಂದ ಹೊರಬಿದ್ದೆ.

ತುಂತುರು-ತುಂತುರಾಗಿ ಕೂಡ ಮಳೆ ಬೀಳುತ್ತಿರಲಿಲ್ಲವಾದರೂ, ಎಲ್ಲಕಡೆಯಲ್ಲಿಯೂ ಮಂಜು ವ್ಯಾಪಿಸಿ, ಏನೂ ಗೋಚರವಾಗದಂತಾಗಿತ್ತು. ಕಲ್ಕತ್ತಾ ರಸ್ತೆಯಲ್ಲಿ ನಾನು ಅಲ್ಲಿಂದಿಲ್ಲಿಗೆ ನಿರುತ್ಸಾಹದಿಂದ ಸುತ್ತುತ್ತಿದ್ದೆ. ನನ್ನ ಪಂಚೇಂದ್ರಿಯಗಳಿಂದಲೂ, ಬಹುವಿಧದ ವರ್ಣ ಮತ್ತು ನಿನಾದದ ಸೊಗಸಿನಿಂದಿರುವ ಭೂಮಾತೆಯ ಸುಖಸ್ಪರ್ಶನ ಮಾಡಬೇಕೆಂದು ಹಂಬಲಿಸುತ್ತಿದ್ದೆ.

ಇದ್ದುದಿದ್ದ ಹಾಗೆಯೆ ಯಾವಳೋ ಒಬ್ಬ ಹೆಂಗುಸು ಅಳುತ್ತಿರುವಂತೆ ಮೆಲುದನಿಯೊಂದು ಅಸ್ಪಷ್ಟವಾಗಿ ಕೇಳಬಂದಿತು. ದುಃಖಮಯವಾದ ಈ ಜಗತ್ತಿನಲ್ಲಿ, ಇದು ಏನೂ ಮಹತ್ತ್ವದ್ದಾಗಿರಲಿಲ್ಲ; ಆದುದರಿಂದಲೆ ನನ್ನ ಪುನರಾಲೋಚನೆಯೂ ಅನವಶ್ಯವಿದ್ದಿತು. ಆದರೆ ಶೂನ್ಯತೆಯಿಂದ ಕೂಡಿದ ಆ ಸ್ಥಳದಲ್ಲಿ ಆ ಧ್ವನಿಯು, ಆಘಾತಗೊಂಡ ಪೂರ್ಣಪ್ರಪಂಚದ ಗೋಳಿನ ಪ್ರತಿನಿಧಿತ್ವವನ್ನು ವಹಿಸಿದ್ದಂತೆ ತೋರಿತು.

ಧ್ವನಿಬಂದ ದಾರಿಯನ್ನು ಹಿಡಿದೆನು. ಮಾರ್ಗದ ಪಾರ್ಶ್ವದಲ್ಲಿದ್ದ ಬಂಡೆಯೊಂದರ ಮೇಲೆ ಕುಳಿತು, ಹೆಂಗುಸೊಬ್ಬಳು ಮೆಲ್ಲಗೆ ರೋದಿಸುತ್ತಿದ್ದಳು. ಆಕೆ ಸಂನ್ಯಾಸಿನಿಯಂತೆ ವಸ್ತ್ರವನ್ನು ಧರಿಸಿ, ಜಡೆಗಟ್ಟಿದ ಕೇಶರಾಶಿಗಳಿಂದ ಕೂಡಿದವಳಾಗಿದ್ದಳು. ಅವಳ ದುಃಖವು ಆಗಿನದೇ ಆಗಿರಲಿಲ್ಲ.

ಇದೊಂದು ದೃಶ್ಯಕಾವ್ಯದ ಆದಿಯೆಂದು ನಾನು ಭಾವಿಸಿದೆ. ನನ್ನ ಈ ಕಣ್ಣುಗಳಿಂದ ಪರ್ವತಾಗ್ರದಲ್ಲಿ ರೋದಿಸುವ ಸಂನ್ಯಾಸಿನಿಯೊಬ್ಬಳ ದೃಶ್ಯವನ್ನು ನೋಡುವೆನೆಂದು ನಾನು ನಿರೀಕ್ಷಿಸಿರಲಿಲ್ಲ. ಆಕೆ ಯಾವ ದೇಶದವಳೆಂಬುದು ನನಗೆ ಹೊಳೆಯಲಿಲ್ಲ. ಹಿಂದುಸ್ತಾನೀ ಭಾಷೆಯಲ್ಲಿ "ಏನು ವಿಷಯ?" ಎಂದು ಪ್ರಶ್ನಿಸಿದೆ.

ಅವಳೊಮ್ಮೆ ಆ ಮುಂಜಿನ ಮುಸುಕಿನಲ್ಲಿ—ಅಶ್ರುಪೂರಿತನೇತ್ರಗಳಿಂದ—ನನ್ನನ್ನು ನೋಡಿದಳು; ಏನನೂ ಹೇಳಲಿಲ್ಲ.

"ಅಂಜದಿರು; ನಾನು ಗೌರವಸ್ಥ" ಎಂದವಳಿಗೆ ಧೈರ್ಯಕೊಟ್ಟೆ. ಆಕೆ ವಿಷಾದಪೂರಿತ ಕಿರುನಗೆಯೊಂದಿಗೆ, ಶುದ್ಧ ಉರ್ದುಭಾಷೆಯಲ್ಲಿ ಹೇಳಿದಳು: "ಹೆದರಿಕೆಯೆಂಬುದನ್ನು ಮರೆತು ಬಹುಕಾಲವಾಯಿತು. ಇಷ್ಟೇ ಅಲ್ಲ, ನನಗೆ ಲಜ್ಜೆಕೂಡಾ ಇಲ್ಲವೆ ಇಲ್ಲ. ಅದೊಂದು ಕಾಲವಿತ್ತು ಬಾಬೂಜಿ! ನನ್ನ ಕೊಠಡಿಯನ್ನು ಪ್ರವೇಶಿಸಲು ನನ್ನ ಸೋದರನು ಕೂಡ ನನ್ನ ಅನುಮತಿ ಕೇಳಬೇಕಿತ್ತು. ಇಂದು ಈ ವಿಶಾಲ ವಿಶ್ವದಲ್ಲಿ ನಾನು, ಇದ್ದ ಅವಗುಂಠನವನ್ನೆಲ್ಲ ತೆಗೆದೊಗೆದವಳಿದ್ದೇನೆ."

ಮನದಲ್ಲಿ ಸ್ವಲ್ಪ ಕಿರುಕುಳವಾದಂತಾಯಿತು. ಚಾಚೂತಪ್ಪದೆ ಆಂಗ್ಲ–ಭಾರತೀಯ ಪದ್ಧತಿಯ ಉಡುಪುಳ್ಳ ನನ್ನನ್ನು 'ಬಾಬೂಜಿ!' ಎಂದು ಸಂಬೋಧಿಸಬೇಕಾದರೆ, ಈ ಯಃಕಶ್ಚಿತ್ ಹೆಂಗುಸಿನ ಧೈರ್ಯವೆಷ್ಟು? 'ಕತೆಯು ಇಲ್ಲಿಯೆ ಪರ್ಯವಸಾನ ಪಡೆಯಲಿ' ಎಂದು ನಿರ್ಧರಿಸಿದೆ. ಅಪವಾಸವಾದುದರಿಂದ ಅಲ್ಲಿಂದ ಹೊರಡಬೇಕೆಂದು ಮನಸ್ಸು ಆತುರಿಸಿತು. ಈ ಹುಚ್ಚು ಹಂಬಲವನ್ನು ನನ್ನಲ್ಲಿದ್ದ

★

ಒಲವಿನ ದಾರಿ ಹಿಡಿದು ಹೊರಟ ಯವನಿಯೊಬ್ಬಳು, ಭೋಗವನ್ನು ಸುಟ್ಟುಕೊಂಡು ಬ್ರಾಹ್ಮಣ ಸಂನ್ಯಾಸಿನಿಯಾದಳು. ಸನಾತನ-ಸಂಪ್ರದಾಯವನ್ನು ಚಾಚು ಬಿಡದೆ ಜೀವನ ಸಾಗಿಸಿದ್ದ ಬ್ರಾಹ್ಮಣನೊಬ್ಬ, ಯಾವುದೊ ಆಶೆಯ ದಾರಿಹಿಡಿದು ತ್ಯಾಗವನ್ನು ಮರೆತು ಅತಿಶೂದ್ರನಾದ. ಸೀಪಾಯಿಗಳ ದಂಗೆಯ ಕಾಲದ ಕತೆಯಿದು!

★

ಕುತೂಹಲವು ಗೆದ್ದಿತು. ಕಿಂಚಿತ್ ದರ್ಪ ಮತ್ತು ಸ್ವಾಭಿಮಾನದಿಂದ "ನೀನಾವ ದೇಶದವಳು? ನನ್ನಿಂದೇನಾದರೂ ಸಹಾಯಬೇಕೆ?" ಎಂದು ಕೇಳಿದೆ.

ಕ್ಷಣಕಾಲ ನನ್ನ ಮುಖವನ್ನು ಸೌಮ್ಯದೃಷ್ಟಿಯಿಂದ ನೋಡಿ "ನಾನು ಬದ್ರಾನಿನ ನವಾಬ್ ಗುಲಾಮ್ ಕಾದರ್‌ಖಾನರ ಪುತ್ರಿ" ಎಂದು ಉತ್ತರವಿತ್ತಳು.

ಬದ್ರಾನ್ ಎಂಬ ಹೆಸರುಳ್ಳ ಸ್ಥಳ ಮತ್ತು ಗುಲಾಂಕಾದರ್‌ಖಾನ್ ಎಂಬ ಹೆಸರಿನ ನವಾಬ— ನಾನು ಕೇಳಿಯೇ ಅರಿಯೆ. ಅಂತಹ ನವಾಬನಂದಿನಿಗೆ ಡಾರ್ಜಿಲಿಂಗಿನ ರಸ್ತೆಯಲ್ಲಿ, ಹಿಂದೂ ಸಂನ್ಯಾಸಿನಿಯಂತೆ ಬಟ್ಟೆಯುಟ್ಟು ಅಳುತ್ತ ಕುಳಿತಿರಲು ಬಂದಂತಹ ದುರದೃಷ್ಟವೇನು? ಇದೆಲ್ಲವನ್ನೂ ನಂಬಲಾರದೆ ಹೋದೆ. ಆ ಕತೆಯು ಸ್ವಾರಸ್ಯವುಳ್ಳದ್ದಾಗಿರಬಹುದೆಂದು ವಿಚಾರಮಾಡಿ ಕೆಲಹೊತ್ತು ಸುಮ್ಮನಾದೆ.

ಅವಳಿಗೆ 'ಸಲಾಂ' ಮಾಡಿ "ಬಾಯಿಸಾಹೇಬ್, ನಿಮ್ಮನ್ನು ಗುರುತಿಸಲು ಅಸಮರ್ಥನಾದುದಕ್ಕೆ ಮನ್ನಿಸಿ!" ಎಂದೆ.

ಅವಳನ್ನು ಗುರುತಿಸದೆ ಇರಲು ಕಾರಣಗಳೂ ಇದ್ದವು. ಇದಕ್ಕೆ ಪೂರ್ವದಲ್ಲಿ ನಾನು ಅವಳನ್ನೆಂದೂ ಕಂಡಿರಲಿಲ್ಲ. ಅಲ್ಲದೆ ಆ ಮಂಜಿನ ಸುರಿಮಳೆಯಲ್ಲಿ ತಮ್ಮ ದೇಹದ ಅವಯವಗಳನ್ನು ತಾವೆ ಗುರುತಿಸುವುದೂ ಅಶಕ್ಯವಾಗಿತ್ತು. ಅವಳು "ದಯವಿಟ್ಟು ಕುಳಿತು ಕೊಳ್ಳಿ" ಎಂದು ಪತ್ತಿರದಲ್ಲಿದ್ದ ಒಂದು ಬಂಡೆಯನ್ನು ತೋರಿಸಿದಳು.

ನಿಶ್ಚಯವಾಗಿಯೂ ಅವಳಿಗೆ ಆಜ್ಞಾಪಿಸಲು ಬರುತ್ತಿತ್ತು. **ನಿಹರುನ್ನಿಸಾ**–ಅಥವಾ **ಮೊಹರುನ್ನಿಸಾ**–ಇಲ್ಲವೆ **ನೂರ್‌ಉಲ್-ಮುಲ್ಕ್**– ಅವಳ ಹೆಸರೇನೇ ಇರಲಿ, ಬದ್ರಾನ್ ನವಾಬನಂದಿನಿಯ ಘನವಾದ ಸಮ್ಮುಖದಲ್ಲಿ, ಒದ್ದೆಯಾದ ಬಂಡೆಯೊಂದರ ಮೇಲೆ ಆಸೀನನಾಗುವ ಸುಯೋಗವನ್ನು ಕಲ್ಪಿಸಿಕೊಟ್ಟುದೆಂದರೆ ನನಗೆ ಹೆಚ್ಚಿನ ಮರ್ಯಾದೆ ಸಲ್ಲಿಸಿದಂತಾಯಿತು. ಹೋಟಲಿನಿಂದ ಹೊರಡುವ ಮುನ್ನ ನನಗಿಂದು ಇಷ್ಟು ಅಚ್ಚರಿಯಾಗುತ್ತದೆಂದು ತಿಳಿದಿರಲಿಲ್ಲ.

ಕುಳಿತುಕೊಂಡು ಮತ್ತೆ ಪ್ರಶ್ನಿಸಿದೆ: "ಬಾಯಿಸಾಹೇಬ್, ಈ ಸ್ಥಳಕ್ಕೆ ತಾವು ಬರುವುದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಾನು ಆಶೆ ಪಡಲೇ?"

ಅದೃಷ್ಟದ ಅನಪೇಕ್ಷಿತವಾದ ಹಣೆಯನ್ನು ಆಕೆ ಲಂಗೈಯಿಂದ ಮುಟ್ಟಿ ಹೇಳತೊಡಗಿದಳು: "'ಹೀಗೆಲ್ಲಾ ಆಗಲು ಕಾರಣಕರ್ತೆ ಯಾರು ಎಂಬುದು ನನಗೆ ಏನು ಗೊತ್ತು? ಮಹತ್ತರವಾದ ಈ ಹಿಮಾಚಲವನ್ನು ಹೀಗೆಲ್ಲಾ ಮಂಜು ಆವರಿಸಲು ಯಾರು ಕಾರಣರು?"'

"ಹೌದು, ಹೌದು! ನಾವು ಕೇವಲ ಅಣು ಮಾತ್ರರಿದ್ದು ವಿಧಿಯ ಕಟ್ಟಳೆಯನ್ನು ಪ್ರತಿಸಲು ನಾವು ಯಾರು?" ಎಂದು, ಕೂಡಲೆ ಸಮ್ಮತಿ ಸೂಚಿಸಿದೆ.

ಅಷ್ಟಕ್ಕೇ ನಾನು ಬೀಬೀಸಾಹೇಬಳೊಂದಿಗೆ ಮಾತನಾಡುವುದನ್ನು ನಿಲ್ಲಿಸುತ್ತಿರಲಿಲ್ಲ; ಆದರೆ ಉತ್ತರಪ್ರಾಂತದ ಅಳುಗಳಾಡುವ ಭಾಷೆಯಿಂದ ಮಾತ್ರ ಕಲಿತ ನನ್ನ ಹಿಂದೂಸ್ಥಾನಿ ಭಾಷೆಯು ವಿಧಿ, ಸ್ಮರಮನಸ್ಸು ಮೊದಲಾದ ಗೂಢ ವಿಷಯಗಳ ಮೇಲೆ ನವಾಬನ ಮಗಳ ಕರ್ಣಗಳಿಗೆ ಇಂಪಾಗಿರುವಂತೆ ನಿರೂಪಣೆ ಮಾಡುವುದಕ್ಕೆ ಹೇಗೆ ಸಾಧ್ಯವಾಗಬೇಕು?

"ಈ ದಿವಸ, ಇಲ್ಲಿ ಡಾರ್ಜಿಲಿಂಗಿನಲ್ಲಿ, ನನ್ನ ಅಪರೂಪವಾದ ಜೀವನದ ಕತೆಯು ಪೂರ್ಣವಾಗಲಿದೆ. ನಿಮಗೆ ಇಷ್ಟವೆನಿಸಿದರೆ ನಾನು ಹೇಳುತ್ತೇನೆ" ಎಂದಳು ಬೀಬೀ ಸಾಹೇಬಳು.

"ನನಗೆ ಇಷ್ಟವೆ?" ನಾನು ಪ್ರತಿಭಟಿಸುವಂತೆ ನುಡಿದೆ, "ನೀವು ಇಷ್ಟು ಮನಸ್ಸು ಮಾಡಿದ್ದೇ ಆದರೆ, ನಿಮ್ಮ ಸೇವಕನಾದ ನಾನು ಕೇಳಿ ಧನ್ಯನಾಗುವೆನು."

ನಾನು ಹೀಗೆಯೆ ಹೇಳಿದೆ ಎಂದು ಯಾರೂ ತಿಳಿಯಕೂಡದು. ಹೇಳಲಿಚ್ಛಿಸಿದೆ; ಸಾಧ್ಯವಾಗದೆ ಹೋಯಿತು ಅಷ್ಟೆ! ನವಾಬನಂದಿನಿಯು ಮಾತನಾಡಿದಾಗ, ಪ್ರಾತಃಕಾಲದ ತಂಗಾಳಿಯೊಂದಿಗೆ ಪೈರಿನಿಂದ ಕೂಡಿದ ಹಸಿರುಹೊಲಗಳು ಮೆಲ್ಲಗೆ ಅಲ್ಲಾಡಿದಂತೆ ಆಗುತ್ತಿತ್ತು. ಅವಳು ಕತೆಯನ್ನು ಪ್ರಾರಂಭಿಸಿದಳು:

"ನನ್ನ ತಂದೆಯ ವಂಶದವರ ಧಮನಿಗಳಲ್ಲಿ ಮೊಗಲ್ ಸಂತತಿಯವರ ರಕ್ತವು ಹರಿಯುತ್ತಿತ್ತು. ನಮ್ಮ ವಂಶವು ಅಷ್ಟು ಉಚ್ಚ್ರತರಗತಿಗೆ ಸೇರಿದುದಾದ್ದರಿಂದ, ನಾನು ಯೌವನಾವಸ್ಥೆಗೆ ಬಂದಾಗ ನನಗೆ ತಕ್ಕವರನನ್ನು ಆರಿಸುವುದು ಕಷ್ಟವಾಯಿತು. ಕೊನೆಗೆ ನನ್ನ ತಂದೆಯು ನನ್ನನ್ನು ಲಖನೌದ ನವಾಬನೊಂದಿಗೆ ವಿವಾಹ ಮಾಡಿ ಕೊಡಬೇಕೆಂದು ಯೋಚಿಸುತ್ತಿರುವಾಗ, ಸಿಪಾಯಿಗಳು ಆಂಗ್ಲ-ಅಧಿಕಾರಿಗಳ ಮೇಲೆ ದಂಗೆಯೆದ್ದರು; ಹಿಂದೂಸ್ಥಾನವೆಲ್ಲಾ ತುಬಾಕಿಯ ಧೂಮದಿಂದ ಕೂಡಿಹೋಯಿತು.

ನಿರರ್ಗಳವಾಗಿ ಉರ್ದುಭಾಷೆಯಲ್ಲಿ ಹೆಂಗಸು ಮಾತನಾಡಿದುದನ್ನು ನಾನು ಕೇಳಿದುದು ಇದೇ ಮೊದಲು; ಆ ಭಾಷೆಯು ಪುರಾತನ ಕಾಲದ ನವಾಬರಿಗೆ ಮತ್ತು ಅವಿವಾರರಿಗೆ ವಿವಾಸಲೆಂದೂ, ರೈಲ್ವೆ, ಟೆಲಿಗ್ರಾಫ್ ಮುಂತಾದ ನವೀನ ಕಾಲಕ್ಕೆ ಈ ಕತೆಯು ಸೇರಿಸಿದ ಇಂದಿನ ಕಾಲದಲ್ಲಿ ಇದನ್ನು ಉಪಯೋಗಿಸುವುದೆಂದರೆ ಅಸಾಧ್ಯವೆಂದೂ— ಇದುವರೆಗೆ— ನನ್ನ ಕಲ್ಪನೆ ಇದ್ದಿತು. ಬೀಬೀಸಾಹೇಬಳ ಬಾಯಿಂದ ಆ ಭಾಷೆ ಹೊರ-ಹೊರಟು ಕೂಡಲೆ, ನನ್ನ ಕಲ್ಪನಾಪಥದ ಮುಂದೆ ಶ್ವೇತಶಿಲಾಸೌಧಗಳು, ಅಮೂಲ್ಯವಾದ ಆಭರಣಗಳಿಂದ ಕೂಡಿದ ತುರಂಗಗಳು, ಅಲಂಕೃತವಾದ ಅಂಬಾರಿಯುಳ್ಳ, ಗಂಭೀರವಾದ ಆನೆಗಳು, ಜನರಿಂದ ತುಂಬಿದ ರಾಜಬೀದಿಗಳು, ಜನರ ಬಣ್ಣಬಣ್ಣದ ರುಮಾಲುಗಳು, ಸೈನಿಕರ ಹೊಳೆಯುವ—ಬಗ್ಗಿದ—ಕತ್ತಿಗಳು ಇವೇ ಮುಂತಾದ ಹಲವು ದೃಶ್ಯಗಳು ಸುಳಿದಾಡತೊಡಗಿದುವು.

ನವಾಬನಂದಿನಿಯು ತನ್ನ ಕಥಾಧಾರೆಯನ್ನು ಮುಂದುವರಿಸಿದಳು: "ನಮ್ಮ ಕೋಟೆ, ಯಮುನಾನದಿಯ ದಡದಲ್ಲಿತ್ತು. ನಮ್ಮ ಸೇನಾಧಿಪತಿಯೆಂದರೆ ಒಬ್ಬ ಬ್ರಾಹ್ಮಣನಿದ್ದನು. ಅವನ ಹೆಸರು ಕೇಸರಲಾಲ್ ಎಂದು.

ಕೇಸರಲಾಲ್ ನಿಯಮನಿಷ್ಠ ಹಿಂದುವು. ಪ್ರತಿ ಪ್ರಾತಃಕಾಲದಲ್ಲೂ ಯಮುನಾನದಿಯಲ್ಲಿ ಸ್ನಾನಮಾಡಿ, ನೀರಿನಲ್ಲಿ ನಿಂತು ಸೂರ್ಯದೇವನಿಗೆ ಅರ್ಘ್ಯಪ್ರದಾನಮಾಡುತ್ತಿದ್ದುದ್ದನ್ನು ನಾನು ನನ್ನ ಮಹಲಿನ ಕಿಟಕಿಯ ಮೂಲಕ ನಿತ್ಯವೂ ನೋಡುತ್ತಿದ್ದೆ. ಬಟ್ಟೆ ನನೆದಿದ್ದೂ ಅವನು ಸೋಪಾನದ ಮೇಲೆ ಕುಳಿತು, ಅಚಲಭಾವದಿಂದ ದೇವಧ್ಯಾನಮಾಡುತ್ತಿದ್ದನು. ಅನಂತರ ಏನೇನನ್ನೋ ಮಂತ್ರೋಚ್ಚಾರಮಾಡುತ್ತ ಮನೆಗೆ ತಿರಳುತ್ತಿದ್ದನು.

ಮಹಮ್ಮದೀಯ ವಂಶದಲ್ಲಿ ಜನಿಸಿದ ನನಗೆ ನಮ್ಮ ಮೆತದ ವಿಷಯವಾಗಿ ಏನೂ ತಿಳಿದಿದ್ದಿಲ್ಲ; ಏಕೆಂದರೆ ನಮ್ಮ ಅರಮನೆಯಲ್ಲಿ ಕಾಣುತ್ತಿದ್ದುದು ಕೇವಲ ಅಸೂಯೆ, ಪಾಪಕೃತ್ಯಗಳು. ಆದರೆ

ಮತದ ಕಡೆಗೆ ನನಗೆ ದೇವದತ್ತವಾದ ಸ್ವಾಭಾವಿಕವಾದ ಕುತೂಹಲತೆ ಇದ್ದುದರಿಂದಲೊ, ಅಥವಾ ನಾನರಿಯದ ಅನ್ಯ ಕಾರಣದಿಂದಲೊ; ಶಾಂತತೆಯಿಂದ ಪ್ರವಹಿಸುತ್ತಿರುವ ಯಮುನೆಯ ಸೋಪಾನಪಂಕ್ತಿಯ ಮೇಲೆ ಕುಳಿತ ಕೇಶರಲಾಲನ ದೈನಿಕ ದೇವ-ಧ್ಯಾನವು, ಆಗ ತಾನೆ ಜಾಗೃತಗೊಳಿಸಲ್ಪಟ್ಟ ನನ್ನ ಹೃದಯಾಂತ-ರಾಳವನ್ನು, ಅವರ್ಣನೀಯ ಭಕ್ತಿಯಿಂದ ತುಂಬಿಸಿತು. ಕೇಶರ ಲಾಲನ ಮೋಹಕವಾದ ಯೌವನದ ರೂಪು, ನನಗೆ ಹೊಗೆಯಾಡದ ಜ್ಯೋತಿಸದೃಶವಾಗಿ ಕಾಣಹತ್ತಿತು. ಆ ಹಿಂದೂ ಯುವಕನ ಮಕಾಭಿಮಾನ ಮತ್ತು ನಿಷ್ಠೆಯು, ಈ ಯವನ ಯುವತಿಯನ್ನು ಮುಗ್ಧಳನ್ನಾಗಿಮಾಡಿತು.

ನನಗೊಬ್ಬ ಸೇವಕಿ ಇದ್ದಳು; ಅವಳ ವಯಸ್ಸು ಸುಮಾರು ನನ್ನಷ್ಟೆ; ಅವಳು ಹಿಂದು. ಪ್ರತಿದಿನ ಪ್ರಾತಃಕಾಲವೂ ಅವಳು— ಕೇಶರಲಾಲನು ಧ್ಯಾನಾನಂತರ ಮನೆಗೆ ಹೋಗುವಾಗ—ಅಲ್ಲಿಗೆ ಹೋಗಿ ಅವನಿಗೆ ಪ್ರಣಾಮಮಾಡಿ ಬರುತ್ತಿದ್ದಳು. ಆ ನೋಟವು ನನಗೆ ಸಂತೋಷದಾಯಕವಾಗಿರುತ್ತಿತ್ತು; ಅಲ್ಲದೆ ಏನೋ ಒಂದು ಅಸೂಯೆಗೂ ಕಾರಣವಾಗುತ್ತಿತ್ತು. ಹಿಂದುಗಳ ಹಬ್ಬ-ಹರಿದಿನಗಳಲ್ಲಿ ನನ್ನ ಈ ಸೇವಕಿಯು, ಬ್ರಾಹ್ಮಣರನ್ನು ಮನೆಗೆ ಕರೆದು ಸತ್ಕರಿಸುತ್ತಿದ್ದಳು. ನಾನೊಂದು ದಿನ ಅವಳಿಗೆ, ಕೇಶರಲಾಲನನ್ನು ಆಮಂತ್ರಿಸಬೇಕೆಂದೂ, ಅವನಿಗೆ ಯೋಗ್ಯವಾದ ಮುಡಿಪನ್ನು ನಾನು ಕೊಡುವೆನೆಂದೂ ಹೇಳಿದೆನು. ಆದರೆ ಅವಳು ತನ್ನ ನಾಲಗೆಯ ತುದಿಯನ್ನು ಕಚ್ಚಿದಳು— ಅದು ನನ್ನ ಸಲಹೆಯನ್ನು ತಳ್ಳಿದ ಸೂಚನೆಯಾಗಿತ್ತು. "ಬಹುಮಾನಗಳನ್ನು ಸ್ವೀಕರಿಸಿ ತನ್ನ ಮರ್ಯಾದೆಗೆ ಕುಂದುತಂದುಕೊಳ್ಳುವುದಿಲ್ಲ ಅವನು!" ಎಂದಳು ನನ್ನ ಸೇವಕಿ.

ರಹಸ್ಯವಾಗಿಯೆ ಆಗಲಿ, ಬಹಿರಂಗವಾಗಿಯೆ ಆಗಲಿ, ನನ್ನಲ್ಲಿ ಕೇಶರಲಾಲನ ವಿಷಯಕವಾಗಿ ಇರುವ ಪೂಜ್ಯಬುದ್ಧಿಯನ್ನು ವ್ಯಕ್ತಗೊಳಿಸಲು ಅಶಕ್ತಳಾದೆ. ಆ ಆಶೆಯು ನನ್ನ ಎದೆಯಲ್ಲಿ ಸಫಲವಾಗದೆ ಹಾಗೆಯೆ ಇದ್ದಿತು. ನಮ್ಮ ವಂಶದಲ್ಲಿ ಯಾರೋ ಒಬ್ಬರು ಸೆರೆಹಿಡಿಯಲ್ಪಟ್ಟ ಬ್ರಾಹ್ಮಣ ಕನ್ಯೆಯನ್ನು ವರಿಸಿದ್ದರು. ಆ ಬ್ರಾಹ್ಮಣ ಕನ್ಯೆಯ ರಕ್ತವು ನನ್ನ ಧಮನಿಯಲ್ಲಿ ಹರಿಯುತ್ತಿದ್ದಂತೆ ನನಗೆ ಎನ್ನಿಸಿತು; ಈ ಯೋಚನೆ ನನಗೆ ಎಷ್ಟೊಂದು ಸಮಾಧಾನವನ್ನು ಕೊಟ್ಟಿತೆಂದು ಹೇಳಲಿ!

ನನ್ನ ಸೇವಕಿಯಿಂದ ಹಿಂದೂಧರ್ಮದ ವಿಷಯಗಳನ್ನೆಲ್ಲ ತಿಳಿದು-ಕೊಂಡೆನು. ಅಸಂಖ್ಯಾತರಾದ ದೇವರ— ದೇವಿಯರ ಹೆಸರನ್ನೂ, ಹಿಂದುಗಳ ಸಂಸ್ಕೃತಿ-ನಡೆ-ನುಡಿಗಳನ್ನೂ ತಿಳಿದುಕೊಂಡೆನು. ರಾಮಾಯಣ-ಭಾರತದ ಕಥೆಗಳನ್ನು ಕೇಳಿದೆನು. ನನ್ನ ಮನಸ್ಸಿನ ಮೇಲೆ ಹಿಂದೂಪ್ರಪಂಚದ ಪೂರ್ಣ ಪರಿಣಾಮವಾಯಿತು. ಅಮೋಘವಾದ ವಿಗ್ರಹಗಳು, ಸಕ್ರಮವಾದ ಅರ್ಚನೆ, ಅರ್ಚನೆಯಲ್ಲಿ ಶಂಖನಿನಾದ, ಪುಷ್ಪಗಳು, ಬ್ರಾಹ್ಮಣರ ಬ್ರಹ್ಮತೇಜಸ್ಸು, ದೇವತೆಗಳ ಅತ್ಯಾಶ್ಚರ್ಯಕರವಾದ ಸಾಹಸಕಾರ್ಯಗಳು, ಅವತಾರಗಳು— ಇವೆಲ್ಲಾ ವಿಷಯಗಳನ್ನು ಕೇಳುವಾಗ, ನನ್ನ ಮನಸ್ಸಿಗೆ ಗೂಡು ಮೆರೆತ ಪಕ್ಷಿಯೊಂದು ಅಪರಿಚಿತವಾದ ಕೊತ್ತಳದಲ್ಲಿ ಹಾರುತ್ತಿದ್ದಂತೆ ಎನಿಸುತ್ತಿತ್ತು.

ಸಿಪಾಯಿಗಳ ದಂಗೆಯಾಯಿತು; ನಮ್ಮ ಅಂತಃಪುರದ ಪರಿಗೂ ಅದರ ನಾಶಕಾರಕ ಅಲೆಗಳು ಬರತೊಡಗಿದುವು. "ಕಾಲ ಸಮಯ ಒದಗಿದೆ.. ಈ ಬಿಳಿಯ ಜನಂನ್ನು ಓಟ್ಟಲು. ಆಮೇಲೆ ಭಾರತದಲ್ಲಿ ಅಧಿಕಾರ ನಡೆಯಿಸಲು ಹಿಂದುಗಳೂ ಮಹಮ್ಮದೀಯರೂ ಹೋರಾಡುವುದಿದ್ದೇ ಇದೆ" ಎಂದು ಕೇಶರಲಾಲನು ಪ್ರಕಟಿಸಿದನು.

ನನ್ನ ತಂದೆಯು ಬಹಳ ಜಾಗರೂಕವ್ಯಕ್ತಿ. ಬಿಳಿಯ ಜನರನ್ನು ದೂಷಿಸುತ್ತ ಇಂತೆಂದನು: "ಈ ಜನರಿಗೆ ಅಸಾಧ್ಯವೆನಿಸಿದ್ದು ಯಾವುದಿಲ್ಲ. ನಮಗೆ ಅವರೊಡನೆ ಹೋರಾಡುವುದು ಕೇವಲ ಕನಸೇ—ಆದುದರಿಂದ, ನಾನು ಭಾವೀಸುಖದ ಹುಚ್ಚು ಕಲ್ಪನೆಗೆ ಮರುಳಾಗುವುದಿಲ್ಲ; ದಂಗೆಕೋರರೊಂದಿಗೆ ಸೇರುವುದಿಲ್ಲ!"

ಭಾರತದ ರಕ್ತವೆಲ್ಲ ಉತ್ಸಾಹದಿಂದ ಕುದಿಯುತ್ತಿರುವಾಗ, ನನ್ನ ತಂದೆಯ ಮನೋವೃತ್ತಿಯು ಯಾರಿಗೂ ಸರಿಬೀಳಲಿಲ್ಲ. ಇಷ್ಟೇ ಅಲ್ಲ, ನನ್ನ ತಾಯಿ ಮತ್ತು ಅಂತಃಪುರನಿವಾಸಿಗಳಿಗೆ ಕೂಡ ಇದು ಯೋಗ್ಯವೆನಿಸಲಿಲ್ಲ.

ಕೇಶರಲಾಲನು ನನ್ನ ತಂದೆಯನ್ನು ಕುರಿತು ಧೈರ್ಯದಿಂದ "ಸರ್ವಾಬಸಾಹೇಬರೆ, ನೀವು ನಮ್ಮೊಡನೆ ಸೇರದಿದ್ದರೆ, ನಮ್ಮ ಇಷ್ಟ ಈಡೇರುವ ವರೆಗೆ ನೀವು ನಿಮ್ಮ ಕೊಠಡಿಯಲ್ಲಿ ಬಂಧಿತರಾಗುವಿರಿ. ಈ ಮಧ್ಯೆ ನಾನು ಎಲ್ಲಾ ವ್ಯವಹಾರ ನಡೆಯಿಸುತ್ತೇನೆ, ತಿಳಿಯಿತೆ?" ಎಂದನು. ಕಪಟದ ನಗೆಯನ್ನು ತೋರುತ್ತಾ "ಹಾಗೇನೂ ಇಲ್ಲ; ನಾನೂ ನಿಮ್ಮೊಡನೆ ಇದ್ದೇನಲ್ಲಾ" ಎಂದು ನನ್ನ ತಂದೆ ಹೇಳಿದನು. ಕೇಶರಲಾಲನು ಧನವನ್ನು ಕೇಳಲು, ತಾತ್ಕಾಲಿಕವಾಗಿ ಸ್ವಲ್ಪ ಕೊಟ್ಟು, ಮುಂದೆ ಕೊಡುವೆನೆಂದು ಭರವಸೆ ಇತ್ತನು.

ನನ್ನ ಅಮೂಲ್ಯವಾದ ಆಭರಣಗಳು ಹೊರೆಹೊರೆಯಾಗಿ ಇದ್ದುವು. ಅವನ್ನೆಲ್ಲಾ ಸೇವಕಿಯ ಮೂಲಕ ಕೇಶರಲಾಲನಿಗೆ ಕಳುಹಿಸಿದೆನು. ಕೃತಜ್ಞತೆಯಿಂದ ಅವನು ತೆಗೆದುಕೊಂಡುದರಿಂದ, ಒಡವೆಗಳೆಲ್ಲದಿದ್ದರೂ ನನ್ನ ಅಂಗಗಳೆಲ್ಲ ಸಂತೋಷದಿಂದ ಕುಣಿದಂತೆ ತೋರಿತು.

ಕೇಶರಲಾಲನು ಒಂದು ಮಧ್ಯಾಹ್ನ ಆಯುಧಗಳನ್ನು ಪರೀಕ್ಷಿಸುತ್ತಿದ್ದಾಗ, ಆ ಜಿಲ್ಲೆಯ ಆಂಗ್ಲ ಅಧಿಕಾರಿಯು ಕೋಟೆಯೊಳಕ್ಕೆ ಸೇನೆಯೊಂದಿಗೆ ನುಗ್ಗಿದನು. ನನ್ನ ತಂದೆಯ ವಿಶ್ವಾಸಘಾತುಕ-ತನದಿಂದಲೆ ಹೀಗೆ ಆಗಿದ್ದಿತು.

ನಮ್ಮ ಸೈನಿಕರ ಮೇಲೆ ಕೇಶರಲಾಲನ ವರ್ಚಸ್ಸು ವಿಶೇಷವಿದ್ದುದರಿಂದ,ಅವರೆಲ್ಲ ತಾವು ಸಾಯುವ ವರೆಗೂ ಕಾದಬೇಕೆಂದು ದೃಢಸಂಕಲ್ಪಮಾಡಿದರು. ದೇಶದ್ರೋಹಿ ತಂದೆಯ ಮನೆಯಲ್ಲಿರುವುದು ನನಗೆ ನರಕವಾಸದಂತಾಯಿತು. ದುಃಖ, ನಾಚಿಕೆ, ಸಿಟ್ಟು ಇವೆಲ್ಲ ನನ್ನ ಎದೆಯನ್ನು ತುಂಬಿದುವು. ಹೇಡಿಯಾದ ನನ್ನ ಸಹೋದರನೊಬ್ಬನ ಉಡುಪನ್ನು ತೊಟ್ಟು, ನಾನು ಕೋಟೆಯಿಂದ

ಹೊರಟಿದ್ದೆ; ಅಪ್ರತಿಹತವಾಗಿ ಯುದ್ಧ ನಡೆದಿತ್ತು. ಸೂರ್ಯಾಸ್ತಮಯ ಸಮಯವಾಗಿತ್ತು. ಯಮುನೆಯ ನೀರು ಮಾಸಲುಗೆಂಪಾಗಿ ಕಾಣುತ್ತಿತ್ತು. ಚಂದಿರನೂ ಹುಟ್ಟಿದ್ದನು.

ನಾನು ಕಂಡ ಘೋರದೃಶ್ಯವು ಇನ್ನಾವುದಾದರೂ ಸಮಯದಲ್ಲಿಯಾಗಿದ್ದರೆ ಕಣ್ಣೀರನ್ನು ತರಿಸುತ್ತಲಿತ್ತು. ಆಗ ನಾನು ಅಲ್ಲಿಂದಿಲ್ಲಿಗೆ ನಿದ್ದೆಯಲ್ಲಿ ಓಡಾಡುವಂತೆ ಕೇಶರಲಾಲನನ್ನು ಹುಡುಕುತ್ತಾ ತಿರುಗುತ್ತಿದ್ದೆ. ಕೊನೆಗೆ ಮಧ್ಯರಾತ್ರಿಯ ಸಮಯದಲ್ಲಿ ಚಂದ್ರನ ಬೆಳಕು, ನದಿಯ ಪಕ್ಕದಲ್ಲಿದ್ದ ಮಾವಿನ ತೋಪಿನಲ್ಲಿ ಬಿದ್ದಿರುವ ಎರಡು ದೇಹಗಳನ್ನು ತೋರಿಸಿತು. ಒಂದು ಕೇಶರಲಾಲನದು; ಇನ್ನೊಂದು ಅವನ ಪರಮ ಭಕ್ತಳಾದ ದೇವಕಿಯದು. ವಿಶೇಷ ಘಾಯಹೊಂದಿ ಅವರಿಬ್ಬರೂ ಬಿದ್ದಿರಬಹುದು.

ಮೊದಲು ನಾನು ಸಫಲವಾಗಬಹುದಾಗಿದ್ದ ನನ್ನ ಆಶಾವಿಶೇಷವನ್ನು ತೀರಿಸಿಕೊಂಡೆ. ಕೇಶರಲಾಲನ ಚರಣಕ್ಕೆ ನನ್ನ ಶಿರಸ್ಸನ್ನು ಸೋಂಕಿಸಿದೆ. ತಣ್ಣನೆಯ ಅವನ ಚರಣಕಮಲವು ಬಿಸಿಏರಿದ ನನ್ನ ಹಣೆಗೆ ಅಮೃತಸಮಾನವಾಗಿ ಪರಿಣಮಿಸಿತು. ಕಣ್ಣಿನಿಂದ ಅವಿರಳವಾಗಿ ಅಶ್ರುಪ್ರವಹಿಸತೊಡಗಿತು. ಕೇಶರಲಾಲನ ದೇಹದಲ್ಲಿ ಜಲನೆ ತೋರಿಬಂದಿತು. ಕಣ್ಣು ತೆರೆಯಲಾರದೆ ಬಹು ಕಷ್ಟಪಟ್ಟು "ನೀರು" ಎಂದು ಹೇಳಿದ್ದನ್ನು ನಾನು ಕೇಳಿದೆ.

ನದಿಗೆ ಧಾವಿಸಿ, ನನ್ನ ವಸ್ತ್ರವೊಂದನ್ನು ನನೆಯಿಸಿ ತಂದೆ. ಅವನ ಘಾಯಗಳನ್ನು ಒರಸಿ ಆರಿವೆ ಕಟ್ಟಿದೆ. ಮತ್ತೊಮ್ಮೆ ನೀರನ್ನು ತಂದು ಅವನ ಮುಖವನ್ನು ತೊಳೆದೆ. ಕ್ರಮೇಣ ಕೇಶರಲಾಲನಿಗೆ ಎಚ್ಚರವಾಯಿತು.

"ಇನ್ನು ಸ್ವಲ್ಪ ನೀರು ಕರಲೆ?" ಎಂದು ನಾನು ಕೇಳಿದೆ. "ನೀನಾರು?" ಎಂದು ಅವನು ಕೇಳಿದ. "ನಿಮ್ಮ ಸೇವಕಿ; ನವಾಬ್ ಗುಲಾಮ್ ಕಾದರ್ ಖಾನರ ಮಗಳು!" ಎಂದು ಹೇಳಿದೆ. ಅಂತಿಮಾವಸ್ಥೆಯಲ್ಲಿದ್ದ ಕೇಶರಲಾಲನು ನನ್ನ ಈ ಸೇವೆಯನ್ನು ಮರೆಯನೆಂದು—ಅಷ್ಟೇ ನನಗೆ ಆಗ ಬೇಕಾದುದರಿಂದ—ನನ್ನ ಆಶೆಯಿತ್ತು.

ನೋವನ್ನೆಣಿಸದೆ ಕೇಶರಲಾಲ ಎದ್ದು ಕುಳಿತು 'ತೊಲಗು! ನಂಬಿಕೆಗೆ ಅನರ್ಹನಾದವನ ಮಗಳೆ! ಮರಣವು ಸನ್ನಿಹಿತವಾಗಿರುವಾಗ, ನನ್ನ ಜಾತಿಯನ್ನು ಕೆಡಿಸಬೇಕೆಂದು ಉದ್ಯೋಗಿಸಿ ಇರುವೆಯಾ?' ಎಂದು ಹೇಳುತ್ತ ನನ್ನನ್ನು ದೂರಕ್ಕೆ ದಬ್ಬಿದನು.

"ಪಶು" ಎಂದು ನಾನು ಹೇಳಿದೆ. ನನ್ನ ಸಿಗರೇಟು ಬೆರಳುಗಳ ಮಧ್ಯದಲ್ಲಿ ಇದ್ದಿತು. ಇನ್ನೂ ಹೊತ್ತಿಸಿರಲಿಲ್ಲ. ಅಷ್ಟೊಂದು ಅಸಕ್ತನಾಗಿದ್ದೆ ಕೇಳುವುದರಲ್ಲಿ.

"ಯಾರು ಪಶು?" ಎಂದು ಅವಳು ಮತ್ತೆ ಕೇಳಿದಳು: "ಪಶುವು ಮರಣಕಾಲದಲ್ಲಿ ನೀರನ್ನು ಬೇಡವೆನ್ನುತ್ತದೆಯೆ?"

ಉತ್ತರವನ್ನು ಕೊಡಲಿಕ್ಕಾಗಲಿಲ್ಲ ನನಗೆ.

"ಪಶುವಲ್ಲದೆ ದೇವತೆ ಆಗಿದ್ದರೆ ಭಕ್ತಳ ಪೂಜೆಯನ್ನು ತಿರಸ್ಕರಿಸುವುದು ಸಾಧ್ಯವೆ?" ಎಂದು ಆಕೆ ಇನ್ನೊಮ್ಮೆ ಪ್ರಶ್ನಿಸಿದಳು; ಕತೆಯನ್ನು ಮುಂದುವರಿಸಿದಳು:

"ನನ್ನ ಅಭಿಮಾನಕ್ಕೆ ಬಹಳ ಪೆಟ್ಟಾಯಿತು. ಪ್ರಪಂಚವೇ ನನ್ನ ಮೇಲೆ ಬಿದ್ದಂತೆ ಆಯಿತು. ಮರುಕ್ಷಣದಲ್ಲಿ ಶಾಂತಳಾಗಿ ದೂರದಿಂದಲೇ ಅವನಿಗೆ ನಮಸ್ಕರಿಸಿದೆ. ಬ್ರಹ್ಮತೇಜಸ್ಸೇ ಮೂರ್ತಿಗೊಂಡಂತಾಗಿ ಇರುವ ಕೇಶರಲಾಲನನ್ನು ನೋಡಿ, ಮನಸ್ಸಿನೊಳಗೆ "ಶುದ್ಧವಸ್ತುವೆ, ಹೊರಗಿನದೇನನ್ನೂ ನೀನು ಸ್ವೀಕರಿಸುವುದಿಲ್ಲ. ಎರಡನೆಯವರ ಸೇವೆಯಾಗಲಿ, ಅನ್ಯಜಾತಿಯ ಹೆಂಗುಸೊಬ್ಬಳ ಪ್ರೀತಿಯಾಗಲಿ ಇವೂ ನಿನಗೆ ರುಚಿಸವೇ?" ಎಂದುಕೊಂಡೆ.

"ಕೇಶರಲಾಲನು, ನವಾಬನಂದಿನಿಯಾದ ನಾನು ಸಾಷ್ಟಾಂಗ ಪ್ರಣಾಮ ಮಾಡಿದುದನ್ನು ನೋಡಿ, ಏನು ಬಗೆದನೊ ನನಗೆ ತಿಳಿಯದು; ಏಕೆಂದರೆ ಅವನ ಮುಖದಲ್ಲಿ ಯಾವ ಭಾವವೂ ವ್ಯಕ್ತವಾಗಲಿಲ್ಲ. ನಿರ್ದಯನಾಗಿ ನನ್ನೆಡೆಗೆ ಒಮ್ಮೆ ನೋಡಿದನು; ಏಳಲು ಯತ್ನಿಸಿದನು. ನಾನಾದರೋ ಅವನನ್ನು ಎಬ್ಬಿಸಲು ಸಹಾಯಮಾಡಬೇಕೆಂದು ಹೆಜ್ಜೆಯಿಟ್ಟೆ; ಆದರೆ ಅವನು ನನ್ನ ಸಹಾಯವನ್ನೇನೂ ಅಪೇಕ್ಷಿಸಲಿಲ್ಲ. ಸಹಾಯವಿಲ್ಲದೆ ಹೇಗೋ ಎದ್ದು, ನದಿಯ ಸೋಪಾನದ ಕಡೆಗೆ ನಡೆದನು. ಅಲ್ಲೊಂದು ಸಣ್ಣ ದೋಣಿಯು ಕಟ್ಟಲ್ಪಟ್ಟಿತ್ತು. ಕಟ್ಟನ್ನು ಬಿಚ್ಚಿ ಅವನು, ದೋಣಿಯನ್ನು ನೀರಿನ ಸೆಳೆತದಲ್ಲಿ ಬಿಟ್ಟನು. ನಿಧಾನವಾಗಿ ದೋಣಿಯು ಜಲಿಸತೊಡಗಿತು; ಕ್ರಮೇಣ ನನ್ನ ದೃಷ್ಟಿಯಿಂದ ದೂರವಾಯಿತು. ನನ್ನ ಸರ್ವಾಂಗವೂ ನನ್ನ ಹೃದಯದ ಹೊರೆಯನ್ನು, ಅವನಿಗೆ ಕೊನೆಯ ಒಂದು ನಮಸ್ಕಾರ ಮಾಡಿ ಇಳಿಸಲು ತವಕಿಸುತ್ತಿತ್ತು. ಆ ರಾತ್ರಿಯು ಗಾಢವೌನದಿಂದ ಕೂಡಿತ್ತು. ಆ ಕಾಲದಲ್ಲಿ ಕಾಂಡದಿಂದ ಕೀಳಲ್ಪಟ್ಟ ಕುಸುಮದಂತೆ ನಾನಾದೆ"

ಇಷ್ಟು ಹೇಳಿ ಅವಳು ಯೋಚನಾಪರಳಾದಳು. ಕ್ಷಣಗಳು ಕೆಲವು ಕಳೆದೊಡನೆ ನೀರವತೆಯನ್ನು ಬಿಟ್ಟು "ಈ ಕೆಲವು ದಿವಸಗಳಲ್ಲಿ ನಾನು 'ಮಾನವನಿಗೆ ಅಸಾಧ್ಯವಾದುದು ಯಾವುದೂ ಇಲ್ಲ' ಎಂಬುದನ್ನು ಕಂಡುಕೊಂಡು ಬಿಟ್ಟಿದ್ದೇನೆ." ಎಂದಳು.

"ಸೌಖ್ಯದ ನೆಲೆಬೀಡನ್ನು ಬಿಟ್ಟ ನನಗೆ—ಬಾಬೂಜಿ—ಹೊರಗಿನ ಪ್ರಪಂಚವು ತುಂಬಾಕಷ್ಟಮಯವಾಗಿ ಪರಿಣಮಿಸಿರಬಹುದೆಂದು ತಾವು ತಿಳಿದಿರಬಹುದಲ್ಲವೆ? ಹಾಗಿದ್ದರೆ ತಮ್ಮ ಊಹೆ ತಪ್ಪು. ಒಮ್ಮೆ ಹೊರಗೆ ಧುಮುಕಿದುದೇ ತಡರೆ, ಯಾವಾಗಲೂ ದಾರಿಯಿದ್ದೇ ಇರುವುದು. ಅದು ನವಾಬರಿಗೆ ಸುಗಮವಾದುದಾಗಿ ಇರದಿರಬಹುದು. ಸಾಧಾರಣ ಕಷ್ಟಸಹಿಷ್ಣುಗಳಿಗೆ ದಾರಿ ಇದ್ದೇ ಇದೆ. ನಾನು ಹೇಗೆ ಸುಖ-ದುಃಖಗಳನ್ನು ಅನುಭವಿಸಿದೆನು, ಹೇಗೆ ನನ್ನ ಅಂತಿಮಗುರಿಗೆ ಹೋರಾಡಿದೆನು, ಈ ಮಾತನ್ನೆಲ್ಲಾ ಹೇಳಿದರೆ ನಿಮಗೆ ಬೇಸರುಂಟಾಗಬಹುದು. ಅದನ್ನೆಲ್ಲಾ ಹೇಳಲೂ ನನಗೆ ಮನಸ್ಸಿಲ್ಲ.

"ನನ್ನ ಸತ್ತ್ವಪರೀಕ್ಷೆಯ ಕಾಲ ಅದು. ಹೆಚ್ಚು ಧೈರ್ಯಮಾಡಿದಷ್ಟೂ ನಾನು ಉತ್ತೀರ್ಣಳಾಗುತ್ತಿದ್ದೆ; ಮುಂದುವರಿಯುತ್ತಿದ್ದೆ. ಮುಂದುವರಿಯುವಾಗ ಕಷ್ಟಗಳ ಕಡೆಗೆ ನನ್ನ ಗಮನವಿರುತ್ತಿರಲಿಲ್ಲ. ಇಂದು ದುಃಖದ ಅಳವನ್ನು ಕಂಡೆ; ಸುಖದ ಶಿಖರವನ್ನೇರಿದೆ. ಆ ಎಲ್ಲಾ ಹೋರಾಟವು ಪೂರ್ತಿಗೊಂಡು ನನ್ನನ್ನು ನಿರುತ್ಸಾಹಿನಿ

ಯನ್ನಾಗಿ ಮಾಡಿ, ಈ ಮಾರ್ಗದ ಬದಿಯಲ್ಲಿ ಬಿಟ್ಟಿದೆ. ನನ್ನ ಪ್ರಯಾಣವು ಮುಗಿದಿದೆ; ಹಾಗೆಯೆ ನನ್ನ ಕತೆಯೂ ಸಹ! "

ಇಲ್ಲಿಗೆ ಮಾತನಾಡುವುದನ್ನು ಅವಳು ನಿಲ್ಲಿಸಿದಳು. 'ಇಲ್ಲ, ಈ ಕತೆಯು ಇಲ್ಲಿಗೆ ಮುಗಿದಿಲ್ಲ' ಎಂದು ನಾನು ಯೋಚಿಸಿದೆ; ಸ್ವಲ್ಪ ತಡೆದು " ದಯವಿಟ್ಟು ಕ್ಷಮಿಸಿ ಬೀಬೀಸಾಹೇಬ್, ಈ ಕತೆಯ ಕೊನೆಯ ಭಾಗವನ್ನು ಸವಿಸ್ತಾರವಾಗಿ ಹೇಳಿದರೆ ನಾನು ಕೃತಜ್ಞನಾಗಿರುವೆನು ! " ಎಂದು ಹೇಳಿದೆ.

ನವಾಬನಂದಿನಿಯಾದರೊ ನಕ್ಕಳು. ಬಹುಶಃ ನನ್ನ ಅಶುದ್ಧ ಹಿಂದೂಸ್ತಾನಿಯು ನಗೆಗೆ ಕಾರಣವಾಗಿರಬಹುದು. ಪುನಃ ಪ್ರಾರಂಭಿಸಿದಳು :

" ಆಗಾಗ ಕೇಶರಲಾಲನ ವೃತ್ತಾಂತವನ್ನು ಮಾತ್ರ ನಾನು ತಿಳಿದುಕೊಳ್ಳುತ್ತಿದ್ದೆ; ಆದರೆ ಅವನನ್ನು ಕಂಡಿರಲಿಲ್ಲ. ಅವನು ದಂಗೆಯಲ್ಲಿ ಸೇರಿ ಹೋರಾಡುತ್ತಿದ್ದನು; ಅಲ್ಲದೆ ಆಗಾಗ ದಂಗೆಯ ಸನ್ನಾಹಕ್ಕೆ– ಎಲ್ಲೆಲ್ಲಿಗೋ ತಿರಗುತ್ತಿದ್ದನು.

" ಕೊನೆಗೆ ಹಿಂದೂಸ್ತ್ರೀಗೆ ಒಪ್ಪುವ ಉಡುಪನ್ನು ತೊಟ್ಟು, ಕಾಶೀಕ್ಷೇತ್ರದ ಸ್ವಾಮಿಶಿವಾನಂದರಿಂದ ದೀಕ್ಷೆಯನ್ನು ಹೊಂದಿದೆನು. ಸಮಸ್ತ ಭಾರತದ ವೃತ್ತಾಂತವೂ ಅವರಿದ್ದಲ್ಲಿಗೆ ಬರುತ್ತಿತ್ತು. ಅವರ ಶಿಷ್ಯಳಾಗಿ ಹಿಂದೂಧರ್ಮವನ್ನು ಅರಿತೆನು; ಶಾಸ್ತ್ರಗಳನ್ನು ಕೇಳಿದೆನು. ಒಂದು ದಿನ, ಸಿಪಾಯಿದಂಗೆಯು ಆಂಗ್ಲೇಯರಿಂದ ನಿಲ್ಲಿಸಲ್ಪಟ್ಟಿತೆಂದು ನನಗೆ ಗೊತ್ತಾಯಿತು. ಸ್ವಾತಂತ್ರ್ಯಕ್ಕಾಗಿ ತ್ಯಾಗಮಾಡಿದ ವೀರರ ಸಮಾಚಾರವು ಮಾತ್ರ ಯಾವುದೂ ಕೇಳಿಬರಲಿಲ್ಲ.

ಅದನ್ನು ನನಗೆ ಸಹಿಸಲಿಕ್ಕಾಗಲಿಲ್ಲ. ಕಾಶಿಯನ್ನು ಬಿಟ್ಟು, ಮಾರ್ಗಾವಲಂಬಿನಿಯಾದೆ. ದೇಗುಲದಿಂದ ದೇಗುಲಕ್ಕೆ ಹೋದೆ. ಎಲ್ಲಿಯೂ ಕೇಶರಲಾಲನ ವಾರ್ತೆಯು ಇರಲಿಲ್ಲ. ಅವನ ಶೌರ್ಯ-ಸಾಹಸಗಳನ್ನು ಕೇಳಿದ ಕೆಲವು ಜನರು, ಅವನು ಪ್ರಾಯಶಃ ರಣರಂಗದಲ್ಲಿ ಕೊಲೆಗೊಂಡಿರಬೇಕೆಂದು ಅಭಿಪ್ರಾಯಪಟ್ಟರು. ನನ್ನ ಹೃದಯವಾದರೊ— " ಇಲ್ಲ, ಇಲ್ಲ, ಕೇಶರಲಾಲನು ಸತ್ತಿರಲಾರ. ಎಲ್ಲಿಯೋ ಅವನು ನನಗಾಗಿ—ನನ್ನ ಎದೆಯ ಬೇಗೆಯನ್ನು ಕಡಿನೆಮಾಡಲು—ಕಾದಿದ್ದಾನೆ" ಎಂದಿತು.

"ಹಿಂದೂ ಪುರಾಣಗಳಲ್ಲಿ ಶೂದ್ರರು ಬ್ರಾಹ್ಮಣರಾದ ಉಲ್ಲೇಖಗಳಿವೆ. ಆದರೆ ಮುಸಲ್ಮಾನರು ಬ್ರಾಹ್ಮಣರಾದರೆಂದು ಎಲ್ಲಿಯೂ ಹೇಳಲ್ಪಟ್ಟಿಲ್ಲ. ಅದು ಏಕೆಂದರೆ ಆ ಕಾಲದಲ್ಲಿ ಮುಸಲ್ಮಾನರಿರಲಿಲ್ಲ. ಕೇಶರಲಾಲನೊಂದಿಗೆ ನಾನು ಸೇರುವುದಕ್ಕೆ ಬಹುಕಾಲ ಹಿಡಿಯುವುದೆಂದು ನಾನರಿತಿದ್ದೆ. ಏಕೆಂದರೆ ಅದಕ್ಕೆ ಪೂರ್ವ ನಾನು ಬ್ರಾಹ್ಮಣತ್ವಕ್ಕೆ ಏರಿರಬೇಕು. ಆ ಸತತಪ್ರಯತ್ನದಲ್ಲಿ ಉರುಳಿದ ವರುಷಗಳು ಗಣನೆಗೆ ಬರಲಿಲ್ಲ. ಕೊನೆಗೆ ಅಂತರಂಗದಲ್ಲಿ, ಬಹಿರಂಗದಲ್ಲಿ, ಮಾತಿನಲ್ಲಿ, ಆಲೋಚನೆಯಲ್ಲಿ, ಕಾರ್ಯದಲ್ಲಿ ಎಲ್ಲದರಲ್ಲಿಯೂ ನಾನು ಬ್ರಾಹ್ಮಣಳಾದೆ. ಬ್ರಾಹ್ಮಣಳಾಗಿ ನಮ್ಮ ವಂಶದವರ ಧಮನಿಯಲ್ಲಿ ಹರಿದ ಬ್ರಾಹ್ಮಣರಕ್ತವನ್ನು ಸಾರ್ಥಕಗೊಳಿಸಿದೆ.

" ದಂಗೆಯ ಕಾಲದಲ್ಲಿ ತೋರಿಸಿದ ಕೇಶರಲಾಲನ ಅಪ್ರತಿಮ-ಸಾಹಸವನ್ನು ಕೇಳಿ ಹರ್ಷಿತಳಾದೆ. ನನ್ನ ಮನಸ್ಸಿನ ಮೇಲೆ ದೇರೂರಿದುದು ಅವನು ಆ ಜ್ಯೋತ್ಸ್ನಾಮಯ ನಿಶೆಯಲ್ಲಿ— ಯಮುನೆಯಲ್ಲಿ— ದೋಣಿಯ ಮೇಲೆ ಹೋದ ಚಿತ್ರ.

" ಕೆಲವು ಕಾಲದ ತರುವಾಯ, ಕೇಶರಲಾಲನು ವಿಜಯಿಗಳ ಕೈಗೆ ಸಿಕ್ಕದೆ ನೇಪಾಳದಲ್ಲಿರುವನೆಂದು ತಿಳಿಯಿತು. ನೇಪಾಳಕ್ಕೆ ನಾನು ಹೋದೆ; ಬಹಳ ಹುಡುಕಿದೆ. ಅವನು ಪೂರ್ವದಲ್ಲಿರುವ ಪರ್ವತಪ್ರಾಂತದ ಕಡೆಗೆ ಹೋದನೆಂದು ಗೊತ್ತಾಯಿತು.

" ಅಂದಿನಿಂದ ಹಿಮಾಚಲದ ಈ ಭಾಗದಲ್ಲಿ ನಾನಿದ್ದೇನೆ. ಇಲ್ಲಿಯ ನಿವಾಸಿಗಳೆಂದರೆ ಭೂತಿಯಾ ಮತ್ತು ಲೇಪ್ಚಾ (Lepcha) ಜನರು. ಅವರ ದೇವತೆಗಳು, ನಡೆನುಡಿಗಳು ಎಲ್ಲಾ ವಿಲಕ್ಷಣವಾಗಿವೆ. ಇಲ್ಲಿ ನನ್ನ ಬ್ರಾಹ್ಮಣ್ಯವನ್ನು ಕಾಪಾಡಲು ಅಧೈರ್ಯವೆನಿಸಿತು. ನನ್ನ ಬ್ರಾಹ್ಮಣ್ಯವು ಸ್ವಯಾರ್ಜಿತವಾದದ್ದು. ಆದಕ್ಕಾಗಿ ನಾನು ಪಟ್ಟ ಪಾಡು ಅಷ್ಟಿಷ್ಟಲ್ಲ. ಅದು ಕಿಂಚಿತ್ತಾದರೂ ಹಾಳಾಗಬಾರದು. ಎಂತಲೆ ಅಶುದ್ಧಳೂ, ಅಪವಿತ್ರಳೂ ಆಗದಂತೆ ಎಚ್ಚರತೆಗೆದುಕೊಂಡೆ. ನನ್ನ ಅಪೇಕ್ಷೆ—ಜೀವನದ ಧ್ಯೇಯವೆಂಬ ನೌಕೆಯು, ಕಡಲನ್ನು ದಾಟಿ ರೇವಿಗೆ ಬಂದಂತೆ ಭಾಸವಾಗುತ್ತಿತ್ತು. ನನ್ನ ಜೀವನದ ಆಶೆಯು ಕೈಗೂಡುವುದು ದೂರದಲ್ಲಿರಲಿಲ್ಲ.

" ಬಾಬೂಜಿ, ನಿಮಗೆ ಕೊನೆಯದಿನ್ನೇನು ಹೇಳುವುದುಳಿದಿದೆ ? ಕೊನೆಯ ಭಾಗವೆಂದರೆ ನನ್ನ ಈ ಕತೆಯ ಅತಿ ಚಿಕ್ಕ ಭಾಗವಾಗಿದೆ. ಪ್ರಕಾಶಮಾನವಾಗಿ ಬೆಳಗುತ್ತಿರುವ ದೀಪವನ್ನಾರಿಸಲು ಒಮ್ಮೆ ಊದಿದರೆ ಸಾಕು. ದೀರ್ಘವಾದ ಕತೆಯನ್ನೀಕೆ ಚಿಕ್ಕದನ್ನಾಗಿ ಮಾಡಬೇಕು ? ನನ್ನ ಜೀವನದ ಕೊನೆಯ ಭಾಗದಲ್ಲಿ, ಇಂದು ಈ ಬೆಳಿಗ್ಗೆ ದಾರ್ಜಿಲಿಂಗಿಗೆ ಬಂದೆನು; ಕೇಶರಲಾಲನನ್ನು ನೋಡಿದೆನು."

ಅವಳು ಹೇಳುವುದನ್ನು ನಿಲ್ಲಿಸಿದಳು.

ಅತೃಪ್ತಿಗೊಂಡ ನಾನು ಅತಿ ಉತ್ಸಾಹದಿಂದ " ಎಲ್ಲಿ ? ಹೇಗೆ ನೋಡಿದಿರಿ ? " ಎಂದು ಕೇಳಿದೆನು.

" ತನ್ನ ಭೂತಿಯಾ ಪತ್ನಿಯೊಂದಿಗೆ, ಒಂದು ಮನೆಯಲ್ಲಿ, ಅತ ಕೊಳಕಿನಿಂದ ತುಂಬಿರುವ ಮಕ್ಕಳೊಂದಿಗಿರುವುದನ್ನು ನೋಡಿದೆನು. " ನಿಶ್ಚಯವಾಗಿಯೂ ಅವಳ ಕತೆಯು ಮುಗಿದಿತ್ತು.

" ಹೀಗೂ ಆದೀತೆಂದು ನಾನು ಯೋಚಿಸಿದ್ದೆ. ಮನಸ್ಸಿಗೆ ಸ್ಥೈರ್ಯಬೇಕಲ್ಲ ! ನಾನೇನು ಅವನನ್ನು ದೂರುವುದಿಲ್ಲ. ಆದರೆ ನನ್ನ ವಿಷಯವಾಗಿ ನಾನು ಯೋಚಿಸುತ್ತಿರುವುದು. ಅರಿಯಲಾರದಂತಹ ಮಾಯೆ ನನ್ನನ್ನು ಹುಚ್ಚು ಹಿಡಿಸಿತ್ತು. ಬ್ರಾಹ್ಮಣತ್ವದ ತೇಜಸ್ಸು, ಸತ್ಯ, ನನ್ನ ಹೃದಯವನ್ನು ಜಯಿಸಿದ ಆ ಶಕ್ತಿಯು. ಕೇವಲ ಅಂಧತೆಯ ಅನುಕರಣವೆಂದು ನಾನು ಯೋಚಿಸಿದ್ದೇನೆ, ನನಗೆ ಅದು ಅಂದು ಆದಿ-ಮಧ್ಯಾಂತ ರಹಿತವಾದ ಧರ್ಮವಾಗಿ ಕಂಡುಬಂದಿತ್ತು. ನನ್ನ ನವಯೌವನದ ಹಾದಿಯಲ್ಲಿ ನಾನು

(ಮುಂದೇ ಪುಟ ನೋಡಿರಿ)

ಪುರೋಗತಿಯು ಪ್ರಗತಿಯೇ ?

(ಹರಟೆಯೊಂದು)

ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ. ಬನಾರಸ

★

ದಶಮಾನದಿಂದ ದಶಮಾನಕ್ಕೆ ಭಾರತದ ಜನಸಂಖ್ಯೆ ವೃದ್ಧಿಂಗತವಾಗುತ್ತಲಿದೆ. ಇದು ನಮ್ಮ ದೇಶದ ಪ್ರಗತಿಯ ಲಕ್ಷಣವೆಂದು ಉಪನ್ಯಾಸಹೊಡೆಯುವ ಸುಶಿಕ್ಷಿತ ಭಾರತೀಯರಿಗೇನೂ ಕೊರತೆಯಿಲ್ಲ. ನಿಜವಾಗಿ ನೋಡಿದರೆ ಇದು ದೇಶದ ಪ್ರಗತಿಯೊ, ಅಧೋಗತಿಯೊ ?

★

"ನಮ್ಮ ದಯಾಳು ಭಾರತಸರಕಾರದ ಆರೋಗ್ಯ ವಿಭಾಗದ ಪ್ರಮುಖರು (Health Commissioner of the Government), ಈಚೆಗೆ ಪ್ರಸಿದ್ಧಮಾಡಿದ ತಮ್ಮ ರಿಪೋರ್ಟಿನಲ್ಲಿ ಏನು ಬೇಳಿವ್ವಾರೆ ಗೊತ್ತೋ? ಹಿಂದುಸ್ಥಾನದ ಜನ ಸಂಖ್ಯೆಯು, ಮಾರ್ಚ್ ತಿಂಗಳಲ್ಲಿ ಸಲವತ್ತು ಕೋಟಿಯ ಮೆಟ್ಟಿಲನ್ನು ತುಳಿದು ಮುಂದಕ್ಕೆ ಮಾರ್ಚ್ ಮಾಡತೊಡಗುವುದಂತೆ!" ಇದೇ ವಿಷಯ ಮಾತನಾಡುತ್ತ ಕುಳಿತ ನಮ್ಮ ಮಿತ್ರರೊಬ್ಬರು, "ಇದಕ್ಕೇನಂತಾರ್ರೀ ನಿಮ್ಮ ದೇಶಭಕ್ತ ಮಂಡಳಿ? ಇನ್ನೂ ಸರಕಾರದ ವ್ಯಾಲ ಪ್ರತಿಟೀಕಾ ಮಾಡುತ್ತಾರೋ?" ಎಂದು ಕೇಳಿದರು. ನಮ್ಮ ಮಿತ್ರರು ಭಾರತದ ವಿಷಯದಲ್ಲಿ ಪ್ರಗತಿವಾದಿಗಳು, ಅರ್ಥಾತ್ ಮುಂದುವರಿವ ಮುಂದಾಳುಗಳು; ಆಂತೆಯೇ ಅವರು ಆಶಾವಾದಿಗಳು. ಮಾತು ಸಾಗಿದಂತೆ ಅವರು ಅನೇಕ ಉದಾಹರಣೆಗಳಿಂದ ತಮ್ಮ ಪ್ರಗತಿಯ ಸಮಸ್ಯೆಯನ್ನು ಸಮರ್ಥನ ಮಾಡಹತ್ತಿದರು. ಅವರ ವಿಚಾರಸರಣಿಯಲ್ಲಿ ಕೆಲವೊಂದು ನಂಬ ಲಾಯಿಪ ವಿಷಯಗಳಿದ್ದರೂ, ಅವರ ವಾಕ್ಚಾತುರ್ಯವು ಮಾತ್ರ ಮನೋರಂಜನೆ ಮಾಡುವಂತಿತ್ತು. ಸದ್ಯ ಅವರು ಹೇಳುತ್ತಿದ್ದುದು ಈ ರೀತಿಯಲ್ಲಿ:

"ಕಾಂಗ್ರೆಸಿನವರು ಬೇಕಾದ್ದನ್ನು ಅನ್ನಬಹುದು. ಪ್ರೊಫೆಸರ್, ನಮ್ಮ ದಯಾಳು ಭಾರತ ಸರಕಾರ ಮಾಡಿದ ಪ್ರಗತಿಗೆ ಈಗಿನ ನಮ್ಮ ಜನಸಂಖ್ಯೆಯ ಸಾಕ್ಷಿಯೆ ಸಾಕಲ್ಲವೇ? ನಮ್ಮ ಕವಿಯ ಕಪನವೊಂದಾವ **"ಮೂವತ್ತು ಮೂರು ಕೋಟಿ"** ಯನ್ನು ಸದ್ಯ ತಿದ್ದುವ ಹೊತ್ತು ಬಂದದ್ದು ಎತರಂದ? ಪ್ರತಿವರ್ಷ, ಪ್ರತಿದಿನವೂ ಸಾವಿರಾರು ಕಾರಣಗಳಿಂದ ಕ್ಷೀಣಹೊಂದಿ ನಾಶವಾಗ ಹತ್ತಿದ್ದ ನಮ್ಮ ಭಾರತದ ಜನಸಂಖ್ಯೆಯನ್ನು ನಿರಾಯಾಸವಾಗಿ ಬೆಳೆಯುವಂತೆ ಮಾಡಿದವರು ಯಾರು?" ಎಂಬ ಪ್ರಶ್ನೆ ಬರುತ್ತದೆ. ನಿಮಗೆ ಗೊತ್ತಿಲ್ಲದ ವಿಷಯವಲ್ಲ, ಪ್ರೊಫೆಸರ್! ಸನ್ ೧೮೭೦ ರಲ್ಲಿ ನಾವು ಎಲ್ಲಿದ್ದೆವು? ಸದ್ಯ ಎಲ್ಲಿಗೆ ಬಂದಿರುವುದು? ಮುಂದೆ ಯಾವ ಸ್ಥಾನಕ್ಕೆ ಹೊರಟಿದ್ದೇವೆ? ಅಂಕಿಯನ್ನು ಹೇಳಲಿಕ್ಕೆ ಹತ್ತಿದೆ ಎಂದರೆ ನೀವು 'ಪುನಃ ಗಣಿತ ಸುರುವು ಮಾಡಿದಿರಾ?' ಎನ್ನಬಾರದು. ಪ್ರಮಾಣ ಇಲ್ಲದೆ ಪ್ರಗತಿ ಆಗಲಾರದು! ಇದೋ ನೋಡಿರಿ, ಈ ಚಿಕ್ಕ ಯಾದಿಯನ್ನು; ಇದರಿಂದ ನಾವು ಎಷ್ಟು ಮುಂದೆ ಹೊರಟಿದ್ದೇವೆ ಎನ್ನುವುದು ನಿಮಗೆ ನಿಸ್ಸಂಶಯವಾಗಿ ಕಂಡುಬರುವುದು!"

ನಮ್ಮ ಮಿತ್ರರು ಗಣಿತಶಾಸ್ತ್ರ ನಿಪುಣರು. ಅವರು ತೋರಿಸಿದ ಅಂಕಿಗಳು ಹೀಗಿವೆ: —

"೧೮೭೨ ರಲ್ಲಿ ಭಾರತದ ಜನಸಂಖ್ಯೆ: ೨೦, ೬೧, ೬೨, ೩೬೦.
೧೮೮೧ ರಲ್ಲಿ ,, ,, ೨೫, ೩೮, ೯೬, ೩೩೦.
೧೮೯೧ ರಲ್ಲಿ ,, ,, ೨೮, ೭೩, ೧೪, ೬೭೧.
೧೯೦೧ ರಲ್ಲಿ ,, ,, ೨೯, ೪೪, ೬, ೦೫೬. ೧
೧೯೧೧ ರಲ್ಲಿ ,, ,, ೩೧, ೫೧, ೫೬, ೪೯೬.
೧೯೨೧ ರಲ್ಲಿ ,, ,, ೩೧, ೮೯, ೪೨, ೪೮೮.
೧೯೩೧ ರಲ್ಲಿ ,, ,, ೩೫, ೨೮, ೩೭, ೭೭೮.
೧೯೩೬ ರಲ್ಲಿ ,, ,, ೩೮, ೨೦, ೦೦, ೦೦೦."

"ಇನ್ನೂ ಪ್ರಮಾಣಗಳು ಬೇಕೋ, ಪ್ರೊಫೆಸರ್! ಹಾಗಾದರೆ ಕೇಳ್ರಿ! ಇನ್ನೊಂದೇ ತಿಂಗಳಲ್ಲಿ ಅದೂ ಬರುತ್ತದೆ. ಸದ್ಯ ಸಾಗಿದ ಪರಂಪರೆಯ ಪ್ರಗತಿಯಂತೆ ೪೦ ಕೋಟಿ ಎಮಾಲಿಕ್ಕೆ ಯಾವ ಸಂದೇಹವೂ ಇಲ್ಲ. ಅರ್ಥಾತ್, ನಾವು ಸುಮಾರು ೭೦ ವರ್ಷಗಳಲ್ಲಿ ಪ್ರಗತಿಯ ಮಾರ್ಗದ ೨೦ನೆಯ ಕಲ್ಲಿನಿಂದ ೪೦ ನೆಯ ಕಲ್ಲಿಗೆ ಬಂದಿದ್ದೇವೆ!.. .. .. "

"ಕಲ್ಲಿನಿಂದ ಕಲ್ಲಿಗೆ ಬರುತ್ತ ಸ್ವಲ್ಪ ನಮ್ಮ ವಿಚಾರಸರಣಿಯೂ ಶಿಥಿಲವಾಗಹತ್ತಿದೆ ಎಂದು ಎನಿಸುತ್ತದಲ್ಲವೇ, ಮುಂದಾಳುಗಳೇ?" ಎಂದು ನುಡಿದೆ.

"ಸರಿ, ಸರಿ! ನಿಮ್ಮ ಶಬ್ದ ಚಮತ್ಕೃತಿ ನಿಮ್ಮ ಸಾಹಿತ್ಯಸೇವೆಯಲ್ಲಿ ಮಾತ್ರ ಉಪಯೋಗ, ಪ್ರೊಫೆಸರ್! ವಿಜ್ಞಾನದಲ್ಲಿ ಶಬ್ದಕ್ಕೆ ಮಹತ್ತ್ವವಿಲ್ಲ. ಕೇವಲ ವಸ್ತುಗಳನ್ನು ಮಾತ್ರ ನಿರೀಕ್ಷಿಸಿ ನೋಡಿರಿ; ಒಂದರಿಂದೊಂದು ವಿಂಗಡಿಸಿ, ತುಲನೆಮಾಡಿ ನೋಡಿರಿ! ಆಗೆಲ್ಲಿ, ಈಗೆಲ್ಲಿ, ಇನ್ನು ಮುಂದೆಲ್ಲಿ? ಇದೆಲ್ಲ ಪ್ರಗತಿಗೆ ಕಾರಣ ಗೊತ್ತಿದೆಯೋ? ಮೇಲ್ನಾಣಿಸಿದ ಒಂದೇ ಒಂದು ಭಾಗದ ಸಾಕ್ಷಿ ತೆಗೆದುಕೊಳ್ಳಿರಿ. ೧೯೧೧ ಮತ್ತು ೧೯೩೧ ರ ಮಧ್ಯೆ ಏನಾಗಿದೆ? ಈ ಹತ್ತು ವರ್ಷಗಳಲ್ಲಿ ಮಾತ್ರ ನಮ್ಮ ಬೆಳೆವಣಿಗೆ ನಿಂತುಬಿಟ್ಟಿದೆಯಲ್ಲವೇ? ಕೋಟಿಗೆ, ಕೋಟಿ ಅಷ್ಟೇ ಉಳಿದು, ಕೇವಲ ೩೫ ಲಕ್ಷ ಸುಮಾರು ಮಾತ್ರ ಹೆಚ್ಚಾಗಿದೆ! ನಿಮಗೆ ನೆನಪಿರ ಬಹುದಲ್ಲ ಆಗಿನ ಭಾರತದ ಸ್ಥಿತಿ. ಇನ್‌ಫ್ಲೂಯೆಂಝಾ, ಮಹಾಯುದ್ಧ, ಕ್ಷಾಮಬಾಧೆ ಯಾವುದರಿಂದಲೂ ಕ್ಷೇಮ ವಿರಲಿಲ್ಲ ನೋಡಿರಿ! ಆಗ ತಗಲಿದ ಗುದ್ದಿನಿಂದ ಬಿದ್ದು ಬಿದ್ದು ಸತ್ತವರು ಸುದ್ದಿ ಕೂಡ ಹತ್ತದಷ್ಟು!"

"ತಾವೂ ಸುರುವು ಮಾಡಿದ್ದೀರಲ್ಲಾ ಶಬ್ದಚಮತ್ಕಾರ, ವಿಜ್ಞಾನಿಗಳೆ!"

"ಆದು ಕೇವಲ ಚಮತ್ಕಾರವಲ್ಲ, ಪ್ರೊಫೆಸರ್! ಅದೊಂದು ಸಂಭವಿಸಿದ, ಅನುಭವಿಸಿದ ಘಟನೆ...ದುರ್ಘಟನೆ! ಈ ಬೇನೆಯಲ್ಲಿ ಸತ್ತವರಿಂದಲೂ, ಮಹಾಯುದ್ಧದಲ್ಲಿ ಮರಣಹೊಂದಿದವರಿಂದಲೂ, ಇನ್ನಿತರ ಚಿಲ್ಲರೆವ್ಯಾಧಿ-ಪೀಡೆಗಳಿಂದಲೂ ನಮ್ಮ ಜನಸಂಖ್ಯೆ ಆ ಹತ್ತುವರ್ಷದಲ್ಲಿ ಪ್ರಗತಿಹೊಂದದೆ ಸ್ಥಾಯಿಯಾಗಿತ್ತು. ನಮ್ಮ ಸರಕಾರ ದಯಾಳುವೆಂದು ನಾನು ಕರೆದದ್ದು ವಸ್ತುಸ್ಥಿತಿಯ ವಿಷಯ. ಅಲಂಕಾರಿಕ— ಔಪಚಾರಿಕ ಮಾತಲ್ಲ. ಭಾರತೀಯರು ಎಷ್ಟೆಷ್ಟು ಪೀಡೆ-ಪಿಡುಗಿನಿಂದ ಮಾಯವಾಗ ಹತ್ತಿದ್ದಾರೆಂಬುದು ನಿಮಗೆ ತಿಳಿದ ಸಂಗತಿಯೇ ಇದೆ. ಅಕಾಲ-ಮೃತ್ಯು, ಶೈಶವಮರಣ, ಕ್ಷಯಕ್ಷೀಣತೆ ಇವಲ್ಲದೆ ಇನ್ನಿತರ ನಿರ್ದಿಷ್ಟಾನಿರ್ದಿಷ್ಟ ಕಾರಣಗಳಿಂದ ದಿನೇದಿನೇ ಕ್ಷೀಣವಾಗುತ್ತಿರುವ ನಮ್ಮ ಜನತೆಯನ್ನು ಕಾಲನ ವಶದಿಂದ ಮುಕ್ತಮಾಡಿದವರು ನಮ್ಮ ಆರೋಗ್ಯವಿಭಾಗದ ಪ್ರಮುಖರಲ್ಲವೇ? ನಮ್ಮ ಹಳ್ಳಿಗಳ ಜನನ-ಮರಣ ದಾಖಲೆಗಳನ್ನು ತೆರೆದು ನೋಡಿರಿ; ಅದೆಷ್ಟು ಮರಣಸಂಖ್ಯೆಯು ಕಡಿಮೆಯಾಗಹತ್ತಿದೆ, ಅದರೊಂದಿಗೆ ಜನನ ಸಂಖ್ಯೆಯು ವೃದ್ಧಿಯಾಗಹತ್ತಿದೆ! ಇದಕ್ಕೆಲ್ಲ ಕಾರಣ ನಮ್ಮ ಈಗಿನ ಶಿಶುಸಪ್ತಾಹಗಳು, ಪ್ರಸವವೈದ್ಯಶಾಲೆಗಳು, ಚಿಕಿತ್ಸಾಲಯಗಳು, ಬಾಲವಿವಾಹ ನಿಲ್ಲಿಸಿಬಿಟ್ಟ ಶಾರ್ದಾಬಿಲ್ಲು, ಪುನರ್ವಿವಾಹ ಸಮ್ಮತಿ, ... ಹೇಳಲಿಕ್ಕೆ ಅವಕಾಶವಿಲ್ಲ ದಷ್ಟಿದೆ ಪ್ರೊಫೆಸರ್, ನಮ್ಮ ಸರಕಾರದ ಪ್ರಗತಿಯ ಕಾರ್ಯಕ್ರಮ! ಆದರೂ ನಿಮಗೆ ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ, ಇಲ್ಲಿ ನೋಡಿರಿ....."

"ಅದೇನ್ರೀ, ಪುಸಃ ಅಂಕಿ ಬಂದುವೇ?.."

"ಅಂಕಿಗಳು ವಿಜ್ಞಾನಭಾಷೆಯ ಆದರ್ಶಚಿನ್ಹಗಳು, ಪ್ರೊಫೆಸರ್! ನಾಲ್ಕು ಪಾನು ತುಂಬಿಬರೆಯುವ ಮಾಹಿತಿಯನ್ನು ಒಂದೇ ಇಂಚು ಜಾಗೆಯಲ್ಲಿ ಮಿತವಾಗಿ ಅಂಕೆಗಳು ತಿಳಿಸುತ್ತವೆ. ಅಂತೆಯೇ ಇದನ್ನು ನಿಮಗೆ ಹೇಳುವುದು. ಇದರಲ್ಲಿ ಅನೇಕ-ದೇಶಗಳ ಜನನ ಮರಣದ ತುಲನಾತ್ಮಕ ಲೆಕ್ಕವಿದೆ.

ಈಜಿಪ್ತದಲ್ಲಿ ಪ್ರತಿಸಾವಿರಕ್ಕೆ ಜ. ೪೪.೮;	ಮ. ೨೬.೮	ಹೆಚ್ಚಾದದ್ದು	೧೮.೦.
ಜಪಾನದಲ್ಲಿ ,, ,, ,, ೩೨.೨;	,, ೧೯.೦;	,,	೧೩.೨
ಭಾರತದಲ್ಲಿ ,, ,, ,, ೪೪.೩;	,, ೨೪.೯;	,,	೯.೪.
ಅಮೇರಿಕಾದಲ್ಲಿ ,, ,, ೧೭.೮;	,, ೧೧.೧;	,,	೬.೭.
ಜರ್ಮನಿಯಲ್ಲಿ ,, ,, ೧೬.೦;	,, ೧೧.೨;	,,	೪.೮.
ಇಂಗ್ಲಂಡಿನಲ್ಲಿ ,, ,, ,, ೧೫.೮;	,, ೧೨.೩;	,,	೩.೫.
ಫ್ರಾನ್ಸ್‌ದಲ್ಲಿ ,, ,, ,, ೧೭.೪;	,, ೧೬.೭;	,,	೦.೭.

ನೋಡಿದಿರಾ, ಪ್ರೊಫೆಸರ್! ಭಾರತದ ಪ್ರಗತಿಯ ಸ್ಥಾನ, ಪ್ರಪಂಚದಲ್ಲಿ ಮೂರನೆಯದು! ಅಭೋಗತಿಗೆ ಹೊರಟ ಫ್ರಾನ್ಸ್—

(೬೭೬ ಪುಟದಿಂದ ಮುಂಪುಸರಿದುದು)

ಅನುಭವಿಸಿದ ಕಷ್ಟ-ನಷ್ಟಕ್ಕೆ ಆತ್ಮಸಮರ್ಪಣೆ ಮಾಡಿದ್ದಕ್ಕೆ, ಬ್ರಾಹ್ಮಣಳಾದದ್ದಕ್ಕೆ ಈ ತೆರನಾದ ಪುರಸ್ಕಾರವೆ?

"ಹಾಯ್! ಎಲೆ ಬ್ರಾಹ್ಮಣಾ; ಎಷ್ಟು ಸುಲಭವಾಗಿ ನೀನು ಒಂದು ಪದ್ಧತಿಯನ್ನು ಬಿಟ್ಟು ಇನ್ನೊಂದನ್ನು ಹಿಡಿದೆ? ಆದರೆ, ನಾನೊ? ನನ್ನ ಜೀವನ, ನನ್ನ ಯೌವನವನ್ನು ಹಾಳುಮಾಡಿ ಕೊಂಡೆನಲ್ಲಾ, ಇದಕ್ಕೆ ಗತಿ? ಇದಕ್ಕೆ ಪ್ರತಿಫಲ?"

ಆ ನವಾಬನಂದಿನಿಯು ಎದ್ದು "ನಮಸ್ಕಾರ ಬಾಬೂಜಿ" ಎಂದು, ಶುದ್ಧ ಭಾರತೀಯರ ರೀತಿಯಲ್ಲಿ ನನ್ನನ್ನು ಬೀಳ್ಕೊಳ್ಳಲು ಹೇಳಿದಳು; ಕೂಡಲೇ ತನ್ನ ತಪ್ಪನ್ನು ತಿದ್ದಿಕೊಳ್ಳಲಿಕ್ಕೆ "ಸಲಾಂ ಬಾಬೂಜಿ" ಎಂದು ಮುಸಲ್ಮಾನಳ ರೀತಿಯಲ್ಲಿ ಹೇಳಿದಳು. ಜೊತೆಗೆ ಆ ಬ್ರಾಹ್ಮಣ್ಯವನ್ನೂ ಆ ಮಾತಿನಿಂದ ಬೀಳ್ಕೊಟ್ಟಳು. ಹಿಮಾಲಯದ ಮಂಜಿನಲ್ಲಿ ಕಾಣದಾದಳು.

ಆಲೋಚನಾ ಪರನಾಗಿ ಕಣ್ಣುಮುಚ್ಚಿಕೊಂಡು ನಾನಲ್ಲಿಯೇ ಕುಳಿತಿದ್ದೆ. ಚಿತ್ರಗಳು ನನ್ನ ಮುಂದೆ ಕಾಣತೊಡಗಿದುವು. ಮೊದಲು, ಕಿಟಕಿಯೊಂದರ ಬಳಿಯಲ್ಲಿ ಮೆತ್ತನೆಯ ಆಸನ; ಕಿಟಕಿಯಿಂದ ಯಮುನಾ ನದಿಯು ಕಾಣುತ್ತಿದೆ; ಷೋಡಶವರುಷದ ನವಾಬನಂದಿನಿಯು ಆ ಆಸನದಲ್ಲಿ ಕುಳಿತಿರುವುದು; ಏಕಮನಸ್ಕಳಾಗಿ ಹೊರಗೆ ನೋಡುತ್ತಿರುವುದು; ಆಬೇಲೆ ನಿರಾಶಳಾದ ಮಧ್ಯವಯಸ್ಕಳಾದ ಸಂನ್ಯಾಸಿನಿಯೊಬ್ಬಳು ಮಂಜಿನಲ್ಲಿ ದಾರ್ಜಿಲಿಂಗಿನ 'ಕಲ್ಕತ್ತಾ ರಸ್ತೆ'ಯ ಬದಿಯಲ್ಲಿ ಭಗ್ನಮನೋರಥಳಾಗಿರುವುದು; ಬ್ರಾಹ್ಮಣ ಮತ್ತು ಮುಸಲ್ಮಾನ್ ರಕ್ತವು, ಚುರುಕಾದ ಆ ಹೆಂಗುಸಿನ ದೇಹದಲ್ಲಿ ಎದುರುಬದರಾಗಿ ಹರಿಯುವುದು. ಈ ಚಿತ್ರಗಳು ನನ್ನ ಮನಸ್ಸಿನ ಮೇಲೆ ಮಹತ್ತಾದ ಪರಿಣಾಮವನ್ನು ಮಾಡಿದುವು. ನನ್ನನ್ನು ಮುಗ್ಧನನ್ನಾಗಿ ಮಾಡಿದುವು.

ಇಂಗ್ಲೆಂಡ್-ಜರ್ಮನಿಗಳ ಮುಂದೆ ನಾವು ಮುಂದಾಳುಗಳಲ್ಲವೇ? ಇದೆಲ್ಲ ಪ್ರಗತಿಗಾಗಿ ನಮ್ಮ ದಯಾಳು ಸರಕಾರಕ್ಕೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಸಾಲದು! ವಸ್ತುಸ್ಥಿತಿ ಎಂದರೆ, ನಿಜವಾಗಿಯೂ ಬ್ರಿಟಿಶ್ ಸರಕಾರವು ಭಾರತದ ಪ್ರಗತಿಯ ಉತ್ಸಾಹದಲ್ಲಿ, ತನ್ನ ದೇಶದ ಜನತೆಯನ್ನೇ ಮರೆತುಬಿಟ್ಟಿದೆ. ನೋಡಿದಿರಾ ಬ್ರಿಟಿಶರ ಜನಸಂಖ್ಯೆ! ಇದಕ್ಕೆನ್ನಬೇಕು ನಿಃಸ್ವಾರ್ಥ ಪಂಥವೆಂದು! ಇದು ಅವರ ಆತ್ಮಯಜ್ಞ!..."

ದೈವವಶಾತ್ ಈ ಕ್ಷಣಕ್ಕೆ ನಮ್ಮ ಮಿತ್ರರ ಪಾಠಹೇಳುವ ಗಂಟೆಯಾಗಿ, ನಾವೆಲ್ಲ ಉಳಿದುಕೊಂಡೆವು! ಬ್ರಿಟಿಶ್ ಸರಕಾರದ ಧನ್ಯವಾದಗಾನವು ಅಲ್ಲಿಗೇ ನಿಂತಿತು. ನಾನು ತುಂಬಾ ಉತ್ಸುಕತೆಯಿಂದ ಈ ವಿಷಯವನ್ನು ಕುರಿತು ವಿಚಾರಿಸುತ್ತ ಕುಳಿತೆ. ಒಂದು ಮಾತು ನೆನಪಾಯಿತು: ನಮ್ಮ ಒಬ್ಬ ಆಪ್ತೇಷ್ಟಿಕೆಯಲ್ಲಿ ಕಲಿತು ಬಂದ ಮಿತ್ರರು, ತಮ್ಮಲ್ಲಿಯ ಸುಳ್ಳು ಹೇಳುವವರನ್ನು ಅಲ್ಲಿಯವರು ತುಂಬಾ ಮಾರ್ಮಿಕವಾಗಿ ಮೂರುಭಾಗವಾಗಿ ವರ್ಣಿಸುತ್ತಾರೆಂದು ನನಗೆ ಹೇಳಿದ್ದರು. ಅದೆಂದರೆ ನಿಸ್ಸೀಮ ಸುಳ್ಳಿನವರು (White liars); ತುಲನಾತ್ಮಕ ಸುಳ್ಳಿನವರು (Black liers) ಮತ್ತು ನಿಜ ಕಾಣುವಂತೆ ಸುಳ್ಳು ಹೇಳುವವರು (Superlative liars). ಈ ಕೊನೆಯ ಸುಳ್ಳಿನವರನ್ನು ಸಂಖ್ಯಾವಿಜ್ಞಾನಿಗಳಲ್ಲಿ (Satisticians) ಸೇರಿಸುತ್ತಾರಂತೆ! ನಮ್ಮ ಸರಕಾರದ ಅಥವಾ ಪ್ರಗತಿಪಕ್ಷದ ಮಿತ್ರರು ಈ ಕೊನೆಯ ವಿಜ್ಞಾನಿಗಳಲ್ಲಿ ಒಬ್ಬರು ಎಂದು ನನಗೆ ಕಂಡುಬಂದಿತು. ಇವರ ವಿಜ್ಞಾನವನು "ವಿಗತಂ ಜ್ಞಾನಂ ಯಸ್ಮಾತ್" ಎಂಬ ಸಮಾಸದಲ್ಲಿ ಸೇರಿಸಬೇಕಾಯಿತು! ಇಂಥ ಪ್ರಗತಿವಾದಿಗಳು ನಮ್ಮ ಹಳ್ಳಿ-ಪಳಿಗಳನ್ನು ಸಂಚರಿಸುತ್ತ ತಮ್ಮ ವಿಜ್ಞಾನವನ್ನು ಅಜ್ಞಾನಿಗಳ ಮುಂದೆ ಹೇಳುತ್ತ ಹೊರಟರೆ 'ಎಲ್ಲಿಗೆ ಬಂತು ಭಾರತದ ಪ್ರಗತಿ?' ಎಂಬ ಪ್ರಶ್ನೆ ಬರುತ್ತದೆ. 'ಕಲಿತವರಿಗೂ ಕೂಡ ಇಂದ್ರಜಾಲ ಬೀರಿದ ಈ ಪ್ರಗತಿವಾದವು ಅಪಾಯಕಾರಿಯಾಗಿದೆ' ಎಂಬುದು ಇನ್ನೊಂದು ಪ್ರಶ್ನೆ. ಇದೇ ರೀತಿಯಲ್ಲಿ ಪ್ರಗತಿಯ ಉಪನ್ಯಾಸ ತೊರುತ್ತ ಹೊರಟ ಒರ್ವ ವ್ಯಕ್ತಿಯ ಉದಾಹರಣೆಯನ್ನು, ನಾನು ಅನೇಕ ದಿನಗಳ ಹಿಂದೆ ನಮ್ಮೂರ ಬಾಲ್ಯಸ್ನೇಹಿತರೊಬ್ಬರಿಂದ ಕೇಳಿ, ನಕ್ಕು ಹೊಟ್ಟೆ ಹುಣ್ಣಾಗಿಸಿಕೊಂಡಿದ್ದೆ. ಅದಾವನೋ ಒರ್ವ ಮಹಾತ್ಮನು ಕರ್ನಾಟಕದಲ್ಲೆಲ್ಲ ಹೇಳುತ್ತ ಹೊರಟಿದ್ದನಂತೆ; "ತಾರ ಹೈ, ಗಿರಣೀ ಹೈ, ಪಂಪ್ ಹೈ, ಪೋಸ್ಟ್ ಹೈ, ಮಾ ಬಾಪ್ ಸರಕಾರ ಹೈ!!!" ಸರಿ, ಇದಕ್ಕೂ ಹೆಚ್ಚಿನ ದಯಾಳು ಸರಕಾರ ಬೇಕೆನ್ನುವುದು ಕೇವಲ ನಮ್ಮ ಕೃತಘ್ನತೆಯ ಕುರುಹು ಎಂದು ಹೇಳಬೇಕಾಯಿತು! ಮೇಲ್ಕಂಡ ಮಹಾತ್ಮನ ಗರ್ಜನೆಗೆ ಪ್ರತಿಯಾಗಿ "ಹೌದಪ್ಪಾ ಎಲ್ಲಾ ಇದೆ! ಫಾಶೀ ಹಾಕ್ಕೊಳ್ಳಿಕ್ಕೆ ತಂತಿ ಇದೆ; ಇದ್ದ ಭೂದ್ರವ್ಯವನ್ನೆಲ್ಲ ಹೀರಿಕೊಳ್ಳಲಿಕ್ಕೆ ಪಂಪ್ ಇದೆ; ಗಿರಣಿಯೂ ಇದೆ; ರೈಲೂ ಇದೆ, ಪೋಸ್ಟೂ ಇದೆ, ಮೇಲಾಗಿ ಇದನ್ನೆಲ್ಲಾ ಸುಸೂತ್ರ ಸಾಗಿಸಿಕೊಡಲಿಕ್ಕೆ ನಾವೂ ದಿನೇ ದಿನೇ ಬೆಳೆಯಲಿಕ್ಕೆ ಹತ್ತಿದ್ದೇವೆ" ಎಂದು ಹೇಳುವವರಿಗೆ ಕೃತಘ್ನರೆಂದು ಅಲ್ಲದೆ ಬೇರೆ ಏನೆನ್ನುವುದು?

ಇದನ್ನೆಲ್ಲ ನೋಡುತ್ತ ಹೋದಂತೆ, 'ಪ್ರಗತಿ ಎಂದರೇನು?' ಎಂಬ ಬಗೆಗೆ ಶಂಕೆ ಬಂತು. ನಮ್ಮ ಪ್ರಗತಿಯ ಸ್ನೇಹಿತರು ಹೇಳುವುದೆಲ್ಲ ನಿಜವಿದ್ದರೆ, ಪುರೋಗತಿಯು ಎಲ್ಲಾ (ಮುಂದಕ್ಕೆ ಸಾಗುವುದೆಲ್ಲ) ಪ್ರಗತಿಯೆಂದೇ ಹೇಳಬೇಕಾಯಿತು. ಸಾಧನೆಗಳನ್ನು ಸಾಧ್ಯವಸ್ತುವಿನ ಕೂಡ ಒಂದಾಗಿ ಮಾಡಿದ ತಪ್ಪು-ವಿಚಾರವೇ ಈ ಎಲ್ಲ ('ವಿಗತ ಜ್ಞಾನ') ವಿಜ್ಞಾನದ ಮೂಲ ಕಾರಣವೆಂದು ಕಂಡುಬಂದಿತು. ಮೇಲೆ ಕಾಣಿಸಿದ ಎರಡೂ ತರದ ಪ್ರಗತಿಯ ಪ್ರಮಾಣಗಳು ಈ ಬಗೆಯ ಸಾಧ್ಯಸಾಧನೆಯ ತಪ್ಪು ವಿವೇಚನೆಗೆ ಉದಾಹರಣೆಗಳಾಗಿವೆ. **'ತಾರ್, ಗಿರಣೀ ಪೋಸ್ಟ್, ಪಂಪ್'** ಎಗೈರೇ ವಸ್ತುಗಳು ಕೇವಲ ಸಾಧನೆಗಳು; ಇವು ದ್ವಿಧಾರೆಯುಳ್ಳ ಖಡ್ಗವಿದ್ದಂತೆ. ಇವುಗಳಿಂದ ಕ್ಷೇಮವೂ ಸಾಧ್ಯ, ಕ್ಷಯವೂ ಸಾಧ್ಯ. ಅದೇ ರೀತಿಯಲ್ಲಿ ಯಾವುದೇ ಜನಾಂಗದ ಜನಸಂಖ್ಯೆಯು ದಿದೇ ದಿನೇ ಬೆಳೆಯುತ್ತ ಹೋದಷ್ಟಕ್ಕೆ ಮಾತ್ರ ಈ ಬೆಳೆವಣಿಗೆಯನ್ನು **ಪ್ರಗತಿ**ಯೆಂದು ಕರೆಯಲು ಶಕ್ಯವಿಲ್ಲ. ನಿಜವಾದ ಪ್ರಶ್ನೆಯೆಂದರೆ ಜನತೆಯ ಗುಣ-ದೋಷಗಳ, ಆಹಾರ-ವಿಹಾರೇತ್ಯಾದಿ ವಿಷಯಗಳ ಪ್ರಗತಿಯದು. ಎಲ್ಲಿಯ ವರೆಗೆ ಈ ಗುಣ-ದೋಷಗಳ ಸಂಬಂಧವಾದ ಪ್ರಗತಿಯಾಗಿಲ್ಲವೋ ಅಲ್ಲಿಯ ವರೆಗೆ ಯಾವುದೇ ಜನಾಂಗಕ್ಕೆ ಕೇವಲ ಅದರ ಜನಸಂಖ್ಯೆಯ ಪ್ರಮಾಣದ ಮೇಲಿಂದ ವಿಮರ್ಶಿಸಬಹುವುದಕ್ಕೆ ಶಕ್ಯವಿಲ್ಲ. ನಮ್ಮ ಮಿತ್ರರು 'ದಯಾಳು' ಸರಕಾರದ ಧನ್ಯವಾದ ಮಾಡುವ ಉತ್ಸಾಹದಲ್ಲಿ, ವಸ್ತುಸ್ಥಿತಿಗೆ ವಿರುದ್ಧವಾಗಿ ಚಿತ್ರವನ್ನು ಅಂಕೆಗಳ ರೂಪದಲ್ಲಿ ತಂದುನಿಟ್ಟರು! ಫ್ರಾನ್ಸ್ ಮತ್ತು-ಇಂಗ್ಲೆಂಡ್ ದೇಶಗಳಲ್ಲಿ ಜನರ ಬೆಳೆವಣಿಗೆಯ ಪ್ರಮಾಣ ಕೇವಲ ಸಾವಿರಕ್ಕೆ ೩ ಅಥವಾ ೧ ರಂತೆ ಇದ್ದು, ಭಾರತದಲ್ಲಿ ಅದೇ ಬೆಳೆವಣಿಗೆ ಸಾವಿರಕ್ಕೆ ೯ ರಂತೆ ಇದ್ದುದರ ಮೇಲಿಂದ 'ಭಾರತೀಯರು ಮುಂದಾಳುಗಳು ಬ್ರೀಟಿಷ್‌ರು ಫೈಂಜರು ಹಿಂದುಳಿದವರು' ಎಂದು ಹೇಳಬಹುದೇ? ಹೇಳಿದರೆ ನಂಬಬಹುದೇ! ಈ ರೀತಿಯಲ್ಲಿ ನೋಡಿದರೆ 'ನಿಜವಾದ ಪ್ರಗತಿಯುಳ್ಳವರು ನಾವೂ ಅಲ್ಲ, ಬ್ರಿಟಿಷರೂ ಅಲ್ಲ, ಸಮುದ್ರದಲ್ಲಿ ಸಂಚರಿಸುವ ಒಂದು ಬಗೆಯ ಮೀನುಗಳು ಎಲ್ಲರಿಗೂ ಮುಂದಾಳುಗಳು' ಎಂದು ಹೇಳಬೇಕಾಗುವುದು. ಏಕೆಂದರೆ ಒಂದು ಜಾತಿಯ ಮೀನು ಒಮ್ಮೆ ೨೮ ಲಕ್ಷ ತತ್ತಿಗಳನ್ನು ರಕ್ಷಿಸುತ್ತದಂತೆ! ಆಧುನಿಕ ಭಾರತದ ಜನಸಂಖ್ಯೆಯ ಪ್ರಗತಿಗೆ ಕಾಲ್ಪನಿಕ ಕಾರಣ ಕೊಡುವವರು, ಮತ್ಸ್ಯಾವತಾರಿ ವಿಷ್ಣುವಿನ ಭಕ್ತರಾದವರು ಮಾತ್ರ ಈ ರೀತಿಯಲ್ಲಿ ಬೆಳೆಯಲಿಕ್ಕೆ ಸಾಧ್ಯವೆಂದೂ ಹೇಳಬಹುದು. ಇದು ಕಲ್ಪನಾಜಮತ್ಕೃತಿಯಾದರೂ ನಮ್ಮ ಮಿತ್ರರ 'ಪ್ರಗತಿ'ವಾದವು ಈ ರೀತಿಯಿಂದ ಹೆಚ್ಚಾಗಿ ಭಿನ್ನವಿಲ್ಲ. ಮಾನವನು ವಿಚಿತ್ರ ಪ್ರಾಣಿಯೆಂದು ಹೇಳುವ ರೂಢಿ ಇದೆ; ಸುಳ್ಳಲ್ಲ.

ಪ್ರಗತಿಯ ವಿಷಯ ಕೇವಲ ಜನಸಂಖ್ಯೆಯ ಪ್ರಶ್ನೆಯಲ್ಲಿ ಬರುವುದಲ್ಲ; ಅದು ವಿಶಾಲವಾದ ಸಮಸ್ಯೆಯಾಗಿ ಪ್ರಪಂಚದ ಸರ್ವಭಾಗದಲ್ಲಿಯೂ, ಸರ್ವವಿಷಯದಲ್ಲಿಯೂ ಸಮಂಜಸವಾಗಿದೆ. ಅಂತೆಯೇ ನಮ್ಮ 'ವಿಜ್ಞಾನ' ಮಿತ್ರರ ಪ್ರಶ್ನೆಯನ್ನು ಈ ರೀತಿಯಲ್ಲಿ ವಿವೇಚಿಸಬೇಕಾಯಿತು. ಕೇವಲ ಮುಂದೆ ನಡೆದು

ದಕ್ಕೆಲ್ಲ ಪ್ರಗತಿಯೆಂ..ಾ, ಸ್ಥಾಯಿಯಾಗಿದ್ದುದಕ್ಕೆಲ್ಲ ಹಿಂದುಳಿದ ದ್ದೆಂದೂ ಹೇಳಲಿಕ್ಕಾಗದು. – ವಸ್ತುಸ್ಥಿತಿಯಲ್ಲಿ ಇದಕ್ಕೆ ವಿರುದ್ಧವಾಗಿ ಇರುವ ಉದಾಹರಣೆಗಳನ್ನು ಕಾಣಬಹುದು. ಒಬ್ಬ ಆಂಗ್ಲ ಸಾಹಿತಿಗಳು ಹೇಳಿದಂತೆ 'ನಿಜವಾದ ಮುಂದಾಳುಗಳು ಹಿಂದುಳಿದವರು! ಎಂದರೆ ಹಿಂದಿನ ಕಾಲದವರಿದ್ದಂತೆ ಇರುವವರು,' ಎಂದೂ ಮತ್ತು "The only way to go forward is to go backward!" ಎಂದೂ ಹೇಳಿದ್ದಾರೆ. ಇದು ಸತ್ಯ. ಆದರೂ ಪ್ರಗತಿಯ ವ್ಯಾಖ್ಯೆಯು ಈ ತರದ ಅತ್ಯುಕ್ತಿಗಳಿಂದ ಬೆಳಕು ತೋರುವುದಾಗದು. ಯಾವುದೇ ವಿಷಯದಲ್ಲಿ ಪ್ರಗತಿಯಾಗುವಾಗ ನಾವು ಒಂದು ಪ್ರಶ್ನೆಯನ್ನು ನೆನಪಿನಲ್ಲಿಡುವುದು ಅತ್ಯವಶ್ಯ. ಅದೇನೆಂದರೆ, ಪ್ರಗತಿ ಹೊಂದುತ್ತ ನಡೆದದ್ದು ಯಾವ ದಿಕ್ಕಿನಲ್ಲಿ? ಮುಂದೆ ನಡೆದುದು ಯಾವ ಸ್ಥಾನಕ್ಕೆ? ಈ ಪ್ರಶ್ನೆಯ ಸರಿಯಾದ ಉತ್ತರದ ಮೇಲೆ ನಿಜವಾದ ಪ್ರಗತಿಯ ಅರ್ಥ ಹೊರಡುವುದು. ಏಕೆಂದರೆ ಪ್ರಗತಿಗೆಂದು ಹೊರಟ ದಾರಿಯು ಅನೇಕ ಅಡ್ಡದಾರಿ, ಸೀಳುದಾರಿ, ಕೈಗಂಬಗಳುಳ್ಳದ್ದು. ಆದರ ಮೇಲೆ ನಡೆಯುತ್ತ ಸಾಗಿದವರು ಸ್ವರ್ಗಸಮಪಟ್ಟಣಕ್ಕೂ ತಲ್ಪಬಹುದು, ನರಕಸಮಸ್ಥಾನಕ್ಕೂ ಮುಟ್ಟಬಹುದು; ಅರ್ಥಾತ್ ಪುರೋಗತಿಯ ಪ್ರಗತಿಯವರು ಅಧೋಗತಿಗೂ ಮುಟ್ಟಬಹುದು. ಇಲ್ಲಿಯವರೆಗೆ ನಮ್ಮ ಭಾರತದ ಜನಸಂಖ್ಯೆಯ ಪ್ರಗತಿಯು ಸರಿಯಾದ ರಸ್ತೆಯನ್ನು ತುಳಿಯಹತ್ತಿಲ್ಲ. ಕೂಸುಗಳು ಕುನ್ನಿಗಳಂತೆ ಹುಟ್ಟುತ್ತಿದ್ದರೂ, ಕುನ್ನಿಗಳಂತೆಯೇ ಬೆಳೆದು ಉಳಿಯ ಹತ್ತಿದುದು ಭಾರತದಲ್ಲಿ ಕಂಡು ಬರುವ ಚಿತ್ರ. ಇದಕ್ಕೆ ಅನೇಕ ಕಾರಣಗಳಿವೆ. ಅವು ಎಲ್ಲರಿಗೂ ಗೊತ್ತಿದ್ದುದರಿಂದ ವಿಂಗಡಿಸಿ ಹೇಳುವ ಕಾರಣವಿಲ್ಲ. ಆದರಲ್ಲಿ ದಯಾಳು ಸರಕಾರವೂ ಒಂದಾಗಿದೆಯೆಂದರೆ ನಾವು ಕೃತಘ್ನರೆಂದು ಹೇಳಲಾಗದು. ಭಾರತವು ಎಂದಾದರೂ ಕೃಷಿಕರ ಭೂಮಿ—ರೈತರ ದೇಶವೆಂದು ಹೇಳುವ ಅಳುವವರೇ, ಅದೆಷ್ಟು ಕೃಷಿಶಾಲೆಗಳನ್ನೂ, ಕಾಲೇಜುಗಳನ್ನೂ ಪ್ರಾರಂಭಿಸಿದ್ದಾರೆ.. ಕಾಣಬಹುದು; ಇಲ್ಲವೆ ಕಾಣಲಾಗದು! ನಮ್ಮ ಮಿತ್ರರಿಗೆ ಇನ್ನೊಂದು ಅವರೇ ತೋರಿಸಬಹುದಾಗಿದ್ದ ಅಂಕಿಯ ಕೋಷ್ಟಕವನ್ನು ತೋರಿಸುವೆನು. ಅದು ಹೀಗಿದೆ: ಪ್ರಪಂಚದಲ್ಲಿಯ ಸರಕಾರಗಳು ತಮ್ಮಲ್ಲಿಯ ಕೃಷಿವರ್ಗದವರಿಗೆ ಕೊಡುತ್ತಿರುವ ಉತ್ತೇಜನದ ವರ್ಣನೆ ಇದು:–

ಅಮೇರಿಕಾದಲ್ಲಿ ಪ್ರತಿ ಸಾವಿರ ಜನ ಕೃಷಿಕರ ಸಮೂಹಕ್ಕೆ ಸರಕಾರದಿಂದ ವೆಚ್ಚವಾಗುವ ಹಣ ರೂ. ೧೦೭೦
ಇಂಗ್ಲಂಡದಲ್ಲಿ ,, ,, ರೂ. ೯೭೦

ನಮ್ಮ ದಯಾಳು ಸರಕಾರ ಭಾರತದ ಕೃಷಿಕಸಹಸ್ರಕ್ಕೆ ದಯಪಾಲಿಸಿರುವುದು ೭೦—೦—೦ ರೂಪಾಯಿ! ಅಸ್ತು ಅನ್ನೋಣ; ಆದರೆ ಇನ್ನೊಂದು ವಿಷಯ: ಪ್ರಗತಿ ಹೊಂದುತ್ತಿದ್ದ ಭಾರತದ ಜನಸಂಖ್ಯೆಯ ಪರಿಣಾಮ ನಮ್ಮನ್ನು ಆರ್ಥಿಕಜೀವನದಲ್ಲಿ ನಾಸ್ತಿಕರನ್ನಾಗಿ ಮಾಡಹತ್ತಿದೆ. ಭಾರತದ 'ಪ್ರಗತಿ'ಯ ವಿಷಯವಾಗಿ ಬರೆದ ಒರ್ವ ಅರ್ವಾಚೀನ ಗ್ರಂಥಕಾರರು ಹೇಳುವಂತೆ, ನಮ್ಮಲ್ಲಿ ಹತ್ತುಕೋಟಿ ಜನ ಭೂಮಿ ಇಲ್ಲದವರಿದ್ದಾರಂತೆ! ಅಲ್ಲದೆ ಕೃಷಿಸಾಧ್ಯವಾದ ಭೂಮಿಯು ಪ್ರತಿ ಭಾರತೀಯನಿಗೆ ೧೯೦೧ ರಲ್ಲಿ ೧.೨೮ ಎಕರೆ ಇದ್ದು, ೧೯೩೧ ಪ್ರಗತಿಯಾಗಿ ತಲೆಗೆ ೧.೨೦ ಎಕರೆಗೆ ಬಂದಿರುತ್ತದಂತೆ. ೧೯೪೧ ಮಾರ್ಚದಲ್ಲಿ 'ಪ್ರಗತಿ' ಹೊಂದಿದ ೪೦ ಕೋಟಿ ಜನರಿಗೆ ತಲೆಗೆ ಎಷ್ಟು ಭೂಮಿ? ಇದೆಂತಹ.. ಗತಿ? — ಇದಕ್ಕೆ ಉತ್ತರವು ಪ್ರತಿಧ್ವನಿಯೇ?

ಸುದರ್ಶನ
(೨ನೆಯ ಆವೃತ್ತಿ)

ಬೆಲೆ
೦–೮೨–೦
೧– ೦.೦

ಬೇಗನೆ ಹೊರಕ್ಕೆ ಬರಲಿದೆ.
ಬೇಕಾದವರು ಕೂಡಲೆ ಬರೆದುಕೊಳ್ಳಿರಿ.

ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ಮೈಸೂರು ವಿದ್ಯಾಖಾತೆಯವರಿಂದ ಮಂಜೂರಾಗಿದೆ.
T.B.C. No. 162 of 39-40.

ವರ್ಧಾಯಾತ್ರೆ: ಲೇ. ಶ್ರೀ. ಎಸ್. ಕೃಷ್ಣಶರ್ಮ. ಬೆಲೆ: ೧–೦–೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರ ಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿ ನೋಡಬೇಕು.
—ವಿಶ್ವಕರ್ನಾಟಕ: ಶ್ರೀ. ತಿ. ತಾ. ಶರ್ಮನ್.

೨) **WARDHA YATRA** is a new departure in Kannada Literature. —*Indian P.E.N.*

ಇದೇ ಲೇಖಕರ ಪರ್ಣಕುಟಿ ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದ ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦–೮–೦
೨. ಅಸಾಮೀ ಕತೆಗಳು .. ೦–೮–೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವವು.

ದೊರೆಯುವ ಸ್ಥಳ:— **ಸಾಧನ ಮುದ್ರಣಾಲಯ, ಧಾರವಾಡ**

ಸ್ನೇಹಸಮ್ಮೇಲನವೊ, ★ ದ್ವೇಷಸಂವರ್ಧನವೊ ?

(ಉಪನ್ಯಾಸವೊಂದರ ವಿಮರ್ಶೆ)

' ವಿಹಂಗವು '

★

ಕನ್ನಡಿಗರೆಂದರೆ ಅದೂರದರ್ಶಿಗಳು, ಸ್ವಾರ್ಥಿಗಳು, ಹೇಡಿಗಳು, ಹುಂಬರು, ರಾಕ್ಷಸೀ ಮಹತ್ತ್ವಾಕಾಂಕ್ಷಿಗಳು, ಹೊಟ್ಟೆಕಿಚ್ಚಿನವರು. ಮಹಾರಾಷ್ಟ್ರೀಯರೆಂದರೆ ಸತ್ಯ-ಶೀಲರು, ಪ್ರಾಮಾಣಿಕರು, ನಿರ್ಮಲಹೃದಯಿಗಳು, ನಿರಾಲಸರು. ಕರ್ನಾಟಕದಲ್ಲಿಯೆ ಇದ್ದು ಬದುಕಿ ಬಾಳುವೆ ಮಾಡುತ್ತಿರುವ ಡಾಕ್ಟರೊಬ್ಬರ ವಿಮರ್ಶೆಯಿದು. ಅಹುದಾದರಹುದೆನ್ನಿ ; ಅಲ್ಲವಾದರೆ..... ?

★

ಕರ್ನಾಟಕದ ಮಹಾರಾಷ್ಟ್ರೀಯರ ' ಸ್ನೇಹಸಮ್ಮೇಲನ ' ಗಳು, ವರುಷ-ವರುಷವೂ ಉತ್ತರ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಸೇರುತ್ತಿದ್ದುದು, ಪತ್ರಿಕೆಗಳನ್ನೋದುವ ಕನ್ನಡಿಗರಿಗೆ ಪರಿಜಯದ ಸಂಗತಿಯೆ. ಈ ಸಲ ಅಂತಹ ಸಮ್ಮೇಳನವೊಂದು ಧಾರವಾಡ ಜಿಲ್ಲೆಯಲ್ಲಿರುವ,ಜಂಬುಕಂಡಿ ಸಂಸ್ಥಾನದ ತಾಲ್ಲೂಕಿನ ಸ್ಥಳವಾದ **ಕುಂದಗೋಳ**ದಲ್ಲಿ ನಡೆಯಿತು. ವರುಷ-ವರುಷವೂ ಸೇರಿದ ಈ ಸ್ನೇಹಸಮ್ಮೇಲನಗಳು ಮುಖ್ಯವಾಗಿ ಮಾಡುವ ಕೆಲಸವೆಂದರೆ, ಯಾರ ನೆರೆಹೊರೆಯಲ್ಲಿದ್ದು — ಯಾರ ಸಂಪೂರ್ಣ ಸಹಕಾರದಿಂದ — ಕರ್ನಾಟಕದಲ್ಲಿ ಮರಾಟಿಗರು ಬದುಕಿ ಬಾಳುತ್ತಿರುವರೊ, ಆ ಉದಾತ್ತಭಾವದ— ಉದಾಸೀನ ಸ್ವಭಾವದ— ಕನ್ನಡಿಗರನ್ನು ಸಾಕಷ್ಟು ಜೈದು ಜಾಯತಿಂಡಿಯನ್ನು ತೀರಿಸಿಕೊಳ್ಳುವುದು; ಕೃತಜ್ಞತೆಯ ಬದಲು ಕೃತಘ್ನತೆಯನ್ನು ಪ್ರದರ್ಶಿಸುವುದು. ಮೊನ್ನೆ ಕುಂದಗೋಳದಲ್ಲಿ ಸೇರಿದುದು ಮರಾಟಿಗರ ' ಕನ್ನಡೇತರ ಪ್ರಾಂತೀಯ ಮರಾಟಿ ಸಾಹಿತ್ಯ ಸಮ್ಮೇಲನ ' ದ ಅಧ್ಯಕ್ಷರಾದ ಕ. ನು. ಸ್ನೇಹ ಸಮ್ಮೇಳನದ ಐದನೆಯ ಅಧಿವೇಶನವು. ಧಾರವಾಡದಲ್ಲಿ ಹೆಸರುವೆತ್ತ ಡಾಕ್ಟರರಾದ ಶ್ರೀ. ಕಿರ್ಲೋಸ್ಕರ ಶ್ರೀಮತಿ **ರಾಯರ** ಅಧ್ಯಕ್ಷತೆಯಲ್ಲಿ ಅದು ನೆರವೇರಿತು.

ಈ ಅಧ್ಯಕ್ಷ ಡಾಕ್ಟರರ ಮೂಲಸ್ಥಳ ಸವದತ್ತಿ ತಾಲ್ಲೂಕಿನ ' **ಗುರ್ಲಹೊಸೂರು** ' ಎಂಬ ಹಳ್ಳಿ. ಬೆಳೆದು ಬಾಳಿದುದು ಧಾರವಾಡದಲ್ಲಿ. ಇವರ ತಂದೆಯವರೂ ಡಾಕ್ಟರರಾಗಿದ್ದುಕೊಂಡು, ಧಾರವಾಡದಲ್ಲಿಯೆ ಕೊನೆಯವರೆಗೂ ತಮ್ಮ ವ್ಯವಸಾಯ ನಡೆಯಿಸಿದರು. ಸದ್ಯ ಇವರೂ ಸುಮಾರು ೨೦-೨೫ ವರ್ಷಗಳಿಂದ ಇಲ್ಲಿಯೆ ತಮ್ಮ ವ್ಯವಸಾಯ ಸಾಗಿಸಿ ಸ್ವಂತದ ಮನೆಮಾಡಿ. ಕೊಂಡು ಇದ್ದಾರೆ. ಡಾಕ್ಟರರು ಹುಟ್ಟಿ ಬೆಳೆದುದು ಕರ್ನಾಟಕದಲ್ಲಿ; ಮೊದಲಿನಿಂದಲೂ ಅವರು ಹೆಚ್ಚಾಗಿ ಗೆಳೆತನ (!) ಬಳೆಯಿಸಿದ್ದುದು ಕನ್ನಡಿಗರೊಂದಿಗೆ; ಅವರಲ್ಲಿ ನಿರಾಕಿಗಳಾಗಿರುವವರು ೧೦೦ ಕ್ಕೆ ೯೦ ರಷ್ಟು ಜನ ಕನ್ನಡಿಗರೆ. ಕನ್ನಡಿಗರ ದುಡ್ಡಿನಿಂದಲೆ ಅವರ ಬದುಕು ಸಿರಿವಂತಿಕೆಯ ಸೌಧದಲ್ಲಿ ವಿಹರಿಸುತ್ತಲಿದೆ. ಇಷ್ಟಾದರೂ ಯಾವ ಕನ್ನಡ ಸಂಸ್ಥೆಗೂ ಇವರು ಕೈಯೆತ್ತಿ ಒಂದು ಕಾಸಿನ ದಾನವನ್ನೂ ಮಾಡಿಲ್ಲ; ಯಾವ ಕನ್ನಡ ಸಂಸ್ಕೃತಿಗೂ ಇವರಿಂದ ಮನ್ನಣೆ ಸಿಕ್ಕುತ್ತಿಲ್ಲ. ಇದನ್ನು ಅರಿತವರಾದರೂ ಧಾರವಾಡದ ಕನ್ನಡಿಗರು, ಡಾ. ಕಿರ್ಲೋಸ್ಕರರವರೆಂದರೆ ತುಂಬ ಆತ್ಮೀಯಭಾವದಿಂದ ನಡೆದುಕೊಳ್ಳುತ್ತಾರೆ. ಇಂತಹ ಕರ್ನಾಟಕದ ಮತ್ತು ಕನ್ನಡಿಗರ ಋಣದಿಂದ ಸಂಪೂರ್ಣ ಬದ್ಧರಾದ ಡಾಕ್ಟರ್ ಕಿರ್ಲೋಸ್ಕರರು, ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡಿಗರ ಉಪಕಾರವನ್ನು ಹೇಗೆ ಹೇಗೆ ತೀರಿಸಿದ್ದಾರೆಂಬುದನ್ನು ನೋಡುವಂತಿದೆ. ತಮ್ಮ ಭಾಷಣಕ್ಕೆ ಡಾಕ್ಟರರು **ಔಡಲಗಾಣ** (ಎರಂಡಾಜೇ ಗುರ್ಜಾಳ) ದ ಉಪಮೆಯನ್ನು ಕೊಟ್ಟುಕೊಂಡಿದ್ದಾರೆ. ಆದರೆ ಔಡಲಗಾಣದಿಂದ ಹೊರಟ ಎಣ್ಣೆ ಅರುಚಿಯಾದರೂ ಭೇದಿಯ ಔಷಧಿಗಾಗಿ ಉಪಯೋಗವಾಗುತ್ತಿರುವುದು. ನಿಜವಾಗಿಯೂ ಡಾಕ್ಟರರ ಹೃದಯದ ಗಾಣ ಕನ್ನಡಿಗರ ವಿಷಯಕವಾದ **ಕಾಲಕೂಟವನ್ನೆ** ಹೊರಕ್ಕೆ ಹಾಕಿದೆಯೆನ್ನಬಹುದು.

ಕಾಲವಶಾತ್ ಕರ್ನಾಟಕಕ್ಕೆ ಹೊಸ ಶಾಲದ ನಾಗರಿಕತೆಯು ಸಂಬಂಧ ಬೇಗನೆ ಬರಲಿಲ್ಲ; ಎಂತಲೆ ನೆರೆಯವರಾದ ಮರಾಟಿ

ಗರು ನಮ್ಮಲ್ಲಿ ಬಂದು, ಎಲ್ಲ ಕ್ಷೇತ್ರಗಳಲ್ಲಿಯೂ ಕಾರ್ಯಮಾಡಿ-ತೊಡಗಿದರು. ಕನ್ನಡಿಗರ ಅಜಾಗರೂಕತೆಯು ಉಪಯೋಗವನ್ನು ಅವರು ಚೆನ್ನಾಗಿ ಮಾಡಿಕೊಂಡರು. ಹೊಸಕಾಲದ ನಾಗರಿಕತೆಯ ಬಗೆಗಿರುವ ಕನ್ನಡಿಗರ ಅಜ್ಞಾನದಿಂದ ಅವರು ಧಾರಳವಾಗಿ ಲೌಕಿಕಲಾಭವನ್ನೂ ಪಡೆದುಕೊಂಡರು. ಸ್ವಾರ್ಥ-ಸಾಧಕರಿಗೆ ಅದು ಅನುಕೂಲಕಾಲವಾಗಿದ್ದಿತು. ಮುಂದೆ ಕನ್ನಡಿಗರು ಜಾಗೃತರಾಗಿ, ಹೊಸಕಾಲದಲ್ಲಿ ಬದುಕಲು ತಕ್ಕವರಾಗಿ ಕಾರ್ಯ ಮಾಡತೊಡಗಲು, ಸ್ವಾರ್ಥಸಾಧಕರ ಆಟ ನಡೆಯದಂತಾಯಿತು. ಆಗ ಅವರು ಕನ್ನಡಿಗರನ್ನು ವಿವಿಧರೀತಿಯಿಂದ ಶಪಿಸತೊಡಗಿದರು, ಬೈಯತೊಡಗಿದರು, ನಿಂದಿಸತೊಡಗಿದರು, ತಿರಸ್ಕರಿಸತೊಡಗಿದರು, ದ್ವೇಷಿಸತೊಡಗಿದರು. ಡಾ. ಕಿಲ್ಲೋಸ್ಕರರು ಆ ಜಾತಿಗೆ ಸೇರಿದವರಲ್ಲವೆಂದು ಇದುವರೆಗೆ ಧಾರವಾಡದಲ್ಲಿಯ ಕನ್ನಡಿಗರು ನಂಬಿದ್ದರು; ಆ ನಂಬಿಕೆಯಿಂದಲೆ ಅವರೊಂದಿಗೆ ತುಂಬ ಅಭಿಮಾನ-ಆದರಗಳಿಂದ ನಡೆದುಕೊಳ್ಳುತ್ತಿದ್ದರು. ಆದರೆ ಸ್ನೇಹ-ಸಮ್ಮೇಳನದ ಅಧ್ಯಕ್ಷೀಯ ಭಾಷಣವನ್ನು ಓದಿದ ಕೇಳಿದ ಕನ್ನಡಿಗರಿಗೆ, ತಮ್ಮ ಕಣ್ಣು-ಕಿವಿ-ಮನಸ್ಸುಗಳನ್ನೆ ನಂಬಬೇಕೋ ಬಾರದೋ ಎಂದು ಎನಿಸತೊಡಗಿದೆ. ಡಾಕ್ಟರರಲ್ಲಿದೆಯೆಂದು ತಿಳಿದು-ಕೊಂಡಿರುವ ಸಭ್ಯನೃತ್ತಿಯ ಬಗೆಗೂ ಸಂಶಯ ಬರತೊಡಗಿದೆ. ಕನ್ನಡಿಗರನ್ನು ಅವರು ಹೇಗೆ ಹೇಗೆ ವಿಪರೀತವಾಗಿ ತಿಳಿದು-ಕೊಂಡಿದ್ದಾರೆಂಬುದಕ್ಕೆ ಪ್ರತ್ಯಕ್ಷಪ್ರಮಾಣವಾಗಿ ಡಾ.ಕಿಲ್ಲೋಸ್ಕರರ ಅಧ್ಯಕ್ಷೀಯ ಭಾಷಣದಲ್ಲಿಯ ಕೆಲವೊಂದು ಅವತರಣಿಕೆಗಳನ್ನೆ ಇಲ್ಲಿ ಭಾಷಾಂತರಿಸಿ ಕೊಡಲಾಗಿದೆ; ಓದಿ ನೋಡಿ ಡಾಕ್ಟರರ ಹೃದಯ ಎಂತಹದಿದೆಯೆಂಬುದನ್ನು ಕನ್ನಡಿಗರೆ, ಕುರುಡು-ಬುದ್ಧಿಯ ಮುಗ್ಧ ಕನ್ನಡಿಗರೆ, ಅರಿತುಕೊಳ್ಳಿರಿ!

ಪ್ರಾಸ್ತಾವಿಕ ಮಾತುಗಳನ್ನೆಲ್ಲ ಮುಗಿಸಿ, '**ಭಾಷಾಭೇದದ ಜನ್ಮಸ್ಥಾನ**'ವನ್ನು ಹೇಳಲು ಹೊರಟು, ರಾಷ್ಟ್ರೀಯ ಮಹಾಸಭೆಗಷ್ಟು ಬೈಗುಳ ಉಡುಗರೆಯನ್ನು ಕೊಟ್ಟು, ಆ ಮೇಲೆ ಡಾಕ್ಟರರು ಹೀಗೆ ಹೇಳುತ್ತಾರೆ:

"'ಬಾಜಾರಾತ ತುರಿ ಭಟ ಭಟನೇಲಾ ಮಾರಿ' .. ಎಂಬಗಾದೆಯಂತೆ' ಭಾಷಾನುಗುಣ ಪ್ರಾಂತರಚನೆಯು ಗೊಪ್ಪುವಳಿ ಹಾಸಾಗುವುದಷ್ಟೇ ತಡ; ಕೂಡಲೆ ಕರ್ನಾಟಕದಲ್ಲಿ ಅದೂರೆದೃಷ್ಟಿಯ ಮತ್ತು ಸ್ವಾರ್ಥಿಗಳಾದ ಮುಂದಾಳುಗಳ ಹಗೆಯನ್ನೆ ತೆಗೆದುಬಿಟ್ಟಂತಾಯಿತು. ಅಲ್ಲಿಯವರೆಗೂ ಕನ್ನಡಿಗರೊಂದಿಗೆ ಬಂಧುಭಾವ (?) ದಿಂದಲೂ ಆನಂದದಿಂದಲೂ ನಡೆದುಕೊಳ್ಳುತ್ತಿದ್ದ ಮರಾಟೀ ಭಾಷಿಕರ ತೊಂದರೆಗೆ ಪ್ರಾರಂಭವಾಯಿತು. ಮರಾಟಿಗರು ತಮ್ಮ ಸತ್ಯವೃತ್ತಿ, ಪ್ರಾಮಾಣಿಕತನ, ನಿರಾಲಸ್ಯ ಜಿಗುಟುತನ, ಸ್ವಾರ್ಥತ್ಯಾಗ ಮೊದಲಾದ ಸದ್ಗುಣಸಮುಚ್ಚಯದ ಮೂಲಕ, ಕನ್ನಡನಾಡಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಗ್ರಭಾಗಿಗಳಾಗಿ ಮಿರುಗುತ್ತಿದ್ದರು. ನಾಗಪುರದ ಗೊಪ್ಪ-ವಳಿಯಿಂದ ಎಂದರೆ ಭಾಷಾನುಗುಣ ಪ್ರಾಂತರಚನೆಯ ಮೂಲಕ, ಹುತ್ತಿನಲ್ಲಿಯ ಇರುನೆಗಳಂತೆ ಹೊರಹೊರಟ ಎರಡನೆಯ ಮೂರನೆಯ ದರ್ಜೆಯ ಕನ್ನಡ ಮುಂದಾಳುಗಳಿಗೆ, ಮರಾಟಿ ಮುಂದಾಳುಗಳ ವಿಷಯದಲ್ಲಿ ಹೊಟ್ಟೆಕಿಚ್ಚು (ಅಸೂಯಾ) ಉಂಟಾಯಿತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಮುಂಚೂಣಿಯಲ್ಲಿ ಮಿಂಚುತ್ತ ನಿಂತಿರುವ ಕರ್ನಾಟಕಕ್ಕೆ ಮಹಾರಾಷ್ಟ್ರೀಯರು, ಸ್ವಾರ್ಥಿಗಳಾದ ಈ ಎರಡನೆಯ ಮೂರನೆಯ ದರ್ಜೆಯ ಕನ್ನಡ ಮುಂದಾಳುಗಳ ಕಣ್ಣುಗಳಲ್ಲಿ ಚುಚ್ಚತೊಡಗಿದರು. ಆದುದರಿಂದ ವ್ಯಕ್ತಿಗಳ ವಿರುದ್ಧವಾಗಿ ಚಳವಳಿಯನ್ನಾರಂಭಿಸಿದರೆ ಕೀಳಾಗಿ ಕಂಡೀತೆಂಬ ಹೆದರಿಕೆಯಿಂದ, ಸ್ವಭಾಷೆಯ ಸೇವೆಯ ನೆಪವನ್ನು ಮುಂದೆ ಮಾಡಿ, ಮರಾಟಿಗರ ಮೇಲೆ ದಾಳಿಯಿಡುವ ಕೆಲಸವನ್ನು ಈ ಮುತ್ಸೆರಗ್ರೆಸ್ಸ್ತರಾದ ನಿಂದಾಪ್ರಿಯ (ನಾವದೂಕ)ರು ಪ್ರಾರಂಭಿಸಿದರು. ಕನ್ನಡಭಾಷೆಯ ಉನ್ನತಿಗಾಗಿ, ಮರಾಟಿ ಮಾತನಾಡುವರೆಂಬ ಕಾರಣದಿಂದ ಅಲ್ಪಸಂಖ್ಯಾಕರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಕಾರಣವೇನೂ ಇರಲಿಲ್ಲ!"

ಇಲ್ಲಿ ಡಾಕ್ಟರರನ್ನು ನಾವು ಕೇಳುವೆವು: ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಗ್ರಭಾಗದಲ್ಲಿ ನಿಂತು ಸದ್ಗುಣಸಮುಚ್ಚಯಕ್ಕೆ ಆಧಾರಸ್ತಂಭರಾದ — ಮಹಾರಾಷ್ಟ್ರೀಯ ಮುಂದಾಳು ಚಂದ್ರ-ಸೂರ್ಯರನ್ನು, ಹುತ್ತಿನಿಂದ ಹೊರಟ ಇರುವೆಗಳು ಒಮ್ಮೆಲೆ ಓಡಿಸಿದುವು ಹೇಗೆ? ಕರ್ತೃತ್ವಶಕ್ತಿಯು ಮೂರ್ತಿಗಳೆ ಆದ ಅವರು, ಕಾರ್ಯಬಿಟ್ಟು ಒಮ್ಮೆಲೆ ಬದಿಗೆ ಸರಿದು ನಿಂತರೇಕೆ? ಇರಲಿ, ಮುಂದೆ ನೋಡಿ:

"ಈ ಕನ್ನಡಜನರು ಮಾತೃಭಾಷೆಯು ಉನ್ನತಿಗಾಗಿಯೆ ಮರಾಟಿಯಲ್ಲಿ ನಡೆಯುವ ಸಭೆಗಳನ್ನು ಹೊಡೆದೆಬ್ಬಿಸುತ್ತಾರೆಯೆ? ಅಹುದೆನ್ನಬೇಕೆಂದರೆ ಎಲ್ಲ ಭಾಷೆಯ ತಲೆಯ ಮೇಲೂ ಮೆಣಸನ್ನರೆಯುವ ಇಂಗ್ಲಿಷ್ ಭಾಷೆಯಲ್ಲಿಯ ವ್ಯಾಖ್ಯಾನಗಳನ್ನಿವರು 'ಹೌಸಿ'ನಿಂದಲೆ ಕೇಳುತ್ತಿರುವರು. ಅಲ್ಲದೆ ಅತ್ತ ಮುಸಲ್ಮಾನರು ನಡೆಯಿಸುತ್ತಿರುವ ಉರ್ದು ವ್ಯಾಖ್ಯಾನಗಳ ಕಾಲದಲ್ಲಿ ಬಾಯಿತೆರೆಯುವ ಧೈರ್ಯ ಕೂಡ ಈ ಹೇಡಿ (ಭೇಕಡ) ಗಳಿಗೆ ಇಲ್ಲ. ಈ ಮಾತುಗಳಿಂದ ಸ್ಪಷ್ಟವಾಗಿ ಕಂಡುಬರುವುದೇನೆಂದರೆ: ಸ್ವಧರ್ಮಿಯರೇ ಆದ ಮಹಾರಾಷ್ಟ್ರೀಯರ ತರ್ಕಶುದ್ಧ ವಿಚಾರಸರಣಿಯು ಇವರಿಗೆ ಒಪ್ಪಿಗೆಯಾಗದು; ಸಹಜವಾಗಿ ತಿಳಿಯುವ ಮರಾಟ ವ್ಯಾಖ್ಯಾನಗಳನ್ನು ಇವರು ಸಹಸೆ ಮಾಡಲಾರರು. ಆದರೆ ಇದೇ ಜನರು ಪರಧರ್ಮಿಯರ 'ಸೋಟೇಶಾಹೀ ಯಾವನೀ ಭಾಷೆಯ' ಎದುರು ಸುಮ್ಮಗಿದ್ದು ತಲೆಬಾಗಿಸುತ್ತಾರೆ."

ಡಾಕ್ಟರರ ಈ ಮಾತಿನ ಅಭಿಪ್ರಾಯವು ಹೀಗೆಯೆ ಇರಬಹುದಲ್ಲವೆ? 'ಮರ್ದ್ ಮರಾಟಿಗರೆ, ಕನ್ನಡಿಗರ ವಿಷಯದಲ್ಲಿ ನೀವು ಕೂಡ ಸೋಟೇಶಾಹಿಯನ್ನೇ ಅವಲಂಬಿಸಿರಿ!' ಎಂದು. ಕನ್ನಡಿಗರು ಹೇಗೂ ಗಾಂಧಿಯವರ ಅಹಿಂಸೆಯ ಅನುಯಾಯಿಗಳಾಗಿ ಇದ್ದಾರೆಂಬುದನ್ನು, ಅವರ ಹತ್ತಿರದಲ್ಲಿಯೆ ಇರುವ ಡಾಕ್ಟರರು ಚೆನ್ನಾಗಿ ಬಲ್ಲರು. ಮುಂದೆ ಡಾಕ್ಟರರು ಕೊಟ್ಟ ಕ್ವೆನೀನಿನ ರುಚಿ ನೋಡಿರಿ:

"ಸ್ವಭಾವತಃ ಮರಾಟ ಭಾಷಿಕರಿಗೆ 'ಅಡದಾಂಡ್‌ಪಣಾ' ಸೇರುವುದಿಲ್ಲ. ಆದರೆ ಯಾರಾದರೂ ಬೇಕಾಗಿಯೆ ಅವರ ಅಪಮಾನವನ್ನು ಮಾಡಿದರೆ, ಅದನ್ನು ಸುಮ್ಮನೆ ಕುಳಿತು ಸಹಿಸುವಂತಹ ಸ್ವಾಭಿಮಾನ ಶೂನ್ಯತೆಯೂ ಅವರಲ್ಲಿಲ್ಲ. ಕರ್ನಾಟಕದಲ್ಲಿಂದು ದಿನ-ದಿನಕ್ಕೆ ಹೆಚ್ಚುತ್ತಿರುವ ಮರಾಟಮಂಡಲಗಳೆಂದರೆ, ಮರಾಟೀ

ಭಾಷೆಗಳ ತಾಯ್ನುಡಿಯ ಜಾಜ್ವಲ್ಯ ಪ್ರೇಮವು— ಮುಂದಿನ ಸಂತಾನಕ್ಕೆ ಮಾರ್ಗದರ್ಶಕವಾಗಬಲ್ಲ— ದೈದೀಪ್ಯಮಾನವಾದ ದೀಪಸ್ತಂಭಗಳಾಗಿದ್ದು, ಈಗ ನಾಲ್ಕು ವರ್ಷಗಳಿಂದ ನೇರುತ್ತಿರುವ ಸ್ನೇಹ-ಸಮ್ಮೇಲನಗಳು ಅದರ ಮಧುರಪರಿಣಾಮಗಳೇ ಆಗಿವೆ."

ಮಹಾರಾಷ್ಟ್ರದಲ್ಲಿದ್ದ ಕನ್ನಡಿಗರು ಹೀಗೆ ಮಾಡಿದರೆ ಅಲ್ಲಿಯ ಜನರಿಗದು ಬಂಡುಗಾರಿಕೆಯಾಗಿ ತೋರುವುದು; ಅಧ್ಯಕ್ಷ ಡಾಕ್ಟರರೂ ಆ ಮಾತನ್ನು ಪುರಸ್ಕರಿಸುವರು. ಆದರೆ ಕರ್ನಾಟಕದಲ್ಲಿದ್ದ ಮಹಾರಾಷ್ಟ್ರೀಯರಿಗೆ ಮಾತ್ರ ಅಂತಹ ಬಂಡುಗಾರಿಕೆ ಮಾಡಲು ತಾವೇ ಪ್ರೇರೇಪಿಸುವರು. ಇನ್ನೊಬ್ಬರು ಮಾಡಿದರೆ ಬಂಡುಗಾರಿಕೆ; ತಾವು ಮಾಡುವುದು ಮಾತೃಭಾಷೆಯ ಜಾಜ್ವಲ್ಯ ಪ್ರೇಮದ ಕಾರ್ಯ. ಕನ್ನಡಿಗರಿಗಿಂತ ಮರಾಟಿಗರಿಗೆ ಮೊದಲೇ ಗೊತ್ತಾಗಿದೆಯಲ್ಲವೇ ಇಂಗ್ಲಿಷ್ ರಾಜನೀತಿ! ಹೋಗಲಿ, ಮುಂದಿನ ಕಷಾಯ ಕುಡಿದು ನೋಡಿರಿ:

"ಯಾವುದೇ ಒಂದು ಭಾಷೆ ಪ್ರಾಧಾನ್ಯವಾಗಿರುವ ಪ್ರಾಂತದಲ್ಲಿದ್ದು ಬೇರೆ ಭಾಷೆಯನ್ನಾಡುವ ಅಲ್ಪ ಸಂಖ್ಯಾಕರಿಗಿರುವ– ತಮ್ಮ ಮನೆಯಲ್ಲಿಯೂ ಇಷ್ಟಮಿತ್ರರೊಂದಿಗೂ ಮಾತೃಭಾಷೆಯಲ್ಲಿ ಮಾತನಾಡುವ-ಹಕ್ಕನ್ನು ಯಾರೂ ಎಂದೂ ಕಸಿದುಕೊಳ್ಳಲಾರರು. ಆದರೆ ಇಂದು ಸಾರ್ವಜನಿಕ ಪೀಠದ ಮೇಲೆ ನಿಂತು ಉಪನ್ಯಾಸ ಮಾಡಬಹುದಾಗಿದ್ದ ಮರಾಟಿಗರ ನಾಗರಿಕತ್ವದ ಮೂಲಭೂತ ಹಕ್ಕನ್ನು ಒತ್ತಾಯದಿಂದಲೂ 'ಜಬರ್ ದಸ್ತ್'ನಿಂದಲೂ ತುಂಟತನ (ಗುಂಡಗಿರಿ) ದಿಂದಲೂ ಕನ್ನಡಿಗರು ಕಸಿದುಕೊಂಡಿದ್ದಾರೆ. ಅದರ ವಿರುದ್ಧವಾಗಿಯೆ ನಮ್ಮ ಮುಖ್ಯ ತಕರಾರು ಇದೆ. ಉರ್ದು–ಇಂಗ್ಲಿಜಿಗಳಿಗೆ ಇಲ್ಲಿ ಯಾವ ಪ್ರತಿಬಂಧವೂ ಇಲ್ಲವೆಂಬುದು ಲಕ್ಷ್ಯದಲ್ಲಿಡತಕ್ಕಂತಹದಾಗಿದೆ. ಮರಾಟಿಗ ವಿರೋಧವಾಗಿ ಎದ್ದ ಚಳವಳಿಯು ಕೃತ್ರಿಮವಾದುದೂ ದ್ವೇಷಮೂಲಕವಾದುದೂ ಇದೆ."

ಇಂಗ್ಲಿಷ್–ಉರ್ದುಗಳನ್ನು ಕರ್ನಾಟಕದಲ್ಲಿ ಸಾರ್ವಜನಿಕ-ಭಾಷೆಯನ್ನಾಗಿ ಮಾಡಬೇಕೆಂಬ ಹಟವನ್ನು ಯಾರೂ ತೋರಿಸಿಲ್ಲ; ಎಂತಲೆ ಅದನ್ನು ವಿರೋಧಿಸುವ ಪ್ರಸಂಗವೂ ಬಂದಿಲ್ಲ. ಮರಾಟಿಗರು ತಮಗಾಗಿಯೆ ಇದ್ದ ಸಭೆಯಲ್ಲಿ ಮರಾಟಿಯಲ್ಲಿ ಮಾತನಾಡಿಕೊಂಡರೆ ಯಾವ ಕನ್ನಡಿಗನೂ ಅಡ್ಡಿಪಡಿಸಲಾರ. ಅದರಂತೆಯೇ ಮುಸಲ್ಮಾನರು ತಮಗಾಗಿಯೇ ನೆರೆಯಿಸಿಕೊಂಡ ಸಭೆಯಲ್ಲಿ ಉರ್ದು ಮಾತನಾಡಿಕೊಂಡರೆ, ಸಾರ್ವಜನಿಕರೀತಿಯಿಂದ ಪ್ರತಿಬಂಧಮಾಡಬೇಕಾದ ಸಂದರ್ಭವೂ ಇಲ್ಲ. ಇದರಲ್ಲಿ ಕನ್ನಡಿಗರು ಹೇಡಿಗಳು ಹೇಗೆ ಆಗುವರು? ಯಾವನೇ ಕರ್ನಾಟಕದಲ್ಲಿಯ ಮನುಷ್ಯನು, ಸಾರ್ವಜನಿಕ ಕಾರ್ಯವನ್ನು ಉರ್ದುವಿನಲ್ಲಿಯೇ ಅಥವಾ ಮರಾಟಿಯಲ್ಲಿಯೇ ಮಾಡುವೆನೆಂದು ಹಟ ತೊಟ್ಟರೆ, ಕನ್ನಡಿಗರು ಅದಕ್ಕೆ ತಡೆಯನ್ನು ಒಡ್ಡಲೇಬೇಕು! ಒಡ್ಡುವುದು ಅನಿವಾರ್ಯ ವಿಷಯವೆ ಆಗಿದೆ! ಡಾಕ್ಟರರು ಮುಂದೆ ಕೊಟ್ಟ ಗುಳಿಗೆಗಳನ್ನು ನೋಡಿ:

"'ಕರ್ನಾಟಕದಲ್ಲಿ ಹೆಚ್ಚಾಗಿ ಜನರಿಗೆ ಮರಾಟ ತಿಳಿಯುವುದಿಲ್ಲ. ಹೀಗಿರುವಾಗ ಇಲ್ಲಿ ಮರಾಟ ವ್ಯಾಖ್ಯಾನಗಳೇಕೆ?' ಎಂದು ಕೇಳಲಾಗುತ್ತದೆ. 'ಕರ್ನಾಟಕದಲ್ಲಿ ಮರಾಟಿಯಲ್ಲಿ ನಡೆಯುವ ನಾಟಕ-ಚಲಚ್ಚಿತ್ರಗಳನ್ನು ನೋಡಿ ಮರಳುವ ಜನರ ಜಾತ್ರೆಯಲ್ಲಿ ನಡೆಯುವ ಚರ್ಚೆಗಳನ್ನು ಕೇಳಿದರೆ, ಇಲ್ಲಿ ಮರಾಟ ತಿಳಿಯುವ ಸಮಾಜವು ಸಾಕಷ್ಟು ದೊಡ್ಡದಿದ್ದು, ಕನ್ನಡ ಮುಂದಾಳುಗಳು ನಡೆಯಿಸಿದ ಕೃತ್ರಿಮ ಚಳವಳಿಯು ಕೇವಲ ದ್ವೇಷಮೂಲಕವಾದುದಿದೆಯೆಂದು ಎನಿಸದಿರದು!"

ಈ ವಿಧಾನಕ್ಕೆ ನಾವು ಉತ್ತರ ಕೊಡುವುದು ಹೀಗೆ:

"ಡಾಕ್ಟರರೆ, ಈಗ ನೀವು ಕೊಡುವ ವಿಲಾಯತಿಯ ಔಷಧಿಗಳಿಂದ ರೋಗಿಗಳು ಸಾಕಷ್ಟು ಪ್ರಮಾಣದಿಂದ ಗುಣ ಹೊಂದುತ್ತಿದ್ದಾರೆ; ಹೀಗಿರುವಾಗ ಸ್ವದೇಶದಲ್ಲಿಯೆ ಔಷಧದ ಕಾರಖಾನೆಗಳನ್ನು ತೆಗೆದು, ಸ್ವದೇಶಿ ಔಷಧಿಗಳನ್ನೇ ಏತಕ್ಕಾಗಿ ಹೊರಡಿಸಬೇಕು ನಾವು? ಔಷಧಿಯಿಂದ ರೋಗಿಗಳಿಗೆ ಗುಣವಾದರೆ ತೀರಿತು; ಔಷಧಿ ಯಾವ ದೇಶದಿಂದ ಬಂದರೇನು?"

ಈ ನಮ್ಮ ಉತ್ತರವನ್ನು ಡಾಕ್ಟರರು ಒಪ್ಪುವರೇ? ತಮ್ಮ ಭಾಷಣ ಮುಂದೆ ಸಾಗಿಸಿ ಅವರು 'ಕನ್ನಡಿಗರೊಂದಿಗೆ ಸಮರಸರಾಗಿರುವುದು ಅವಶ್ಯಕ' ಎಂದು ಹೇಳುವ ಸಮಂಜಸ ಬುದ್ಧಿಯ ಮರಾಟಿಗರನ್ನಷ್ಟು ಬಾಯಿತುಂಬ ಬಯ್ದುಬಿಟ್ಟಿದ್ದಾರೆ. ಅಲ್ಲಿಯೆ:

"....ನಮ್ಮ ಸಲುವಾಗಿ ಕನ್ನಡಿಗರಲ್ಲಿ ಯಾವ ಒಳಿತು-ಕೆಟ್ಟ ಭಾವನೆಗಳಿರುವುವೋ ಇದ್ದುಕೊಳ್ಳಲಿ; ಆದರೆ ಮರಾಟಭಾಷಿಕರ ನಿರ್ಮಲ ಮನಸ್ಸಿಗೆ ಕನ್ನಡಿಗರ ಬಗೆಗೆ ದ್ವೇಷವೂ ಅವರ ಭಾಷೆಯ ಬಗ್ಗೆ ಅಸೂಯೆಯೂ ಎಂದೂ ಎನಿಸುವುದಿಲ್ಲ. ಸಂಖ್ಯಾಬಲವೇ ಸರ್ವಂಕಷ ಶಕ್ತಿಯೆಂದು ತಿಳಿದು, ಅದರ ನಿಶೆ (ಧುಂದೀ) ಯಲ್ಲಿ, ಮರಾಟಿಯಲ್ಲಿ ಜಾಹೀರ್‌ವ್ಯಾಖ್ಯಾನ ನಡೆಯಿಸಬಹುದಾದ ನಮ್ಮ ನ್ಯಾಯ ಹಕ್ಕನ್ನು, ಹೆಂಬತನೆ (ಗುಂಡಗಿರಿ) ತೋರಿಸಿ ಹಾಳುಮಾಡಬೇಕೆನ್ನುವ ಕನ್ನಡಿಗರ **ರಾಕ್ಷಸೀ ಮಹತ್ತ್ವಾಕಾಂಕ್ಷೆಯ** ಮೂಲಕವಾಗಿಯೆ, ಕರ್ನಾಟಕದಲ್ಲಿ ಇಂದು ಕನ್ನಡಿಗ-ಮರಾಟಿಗರ ನಡುವೆ ದ್ವೇಷಾಗ್ನಿ ಹೊತ್ತಿನಿಂತಿದೆ!"

ಬಂದವರಿಗೆ ಬನ್ನಿರೆಂದು ಮನೆಯಲ್ಲಿ ಸ್ಥಳಕೊಟ್ಟ ಕನ್ನಡಿಗರು 'ರಾಕ್ಷಸೀ ಮಹತ್ತ್ವಾಕಾಂಕ್ಷೆ'ಯುಳ್ಳವರೋ? ಇನ್ನೊಬ್ಬರ ಮನೆಯಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಬೇಕೆನ್ನುವ–ಅರಬನ ಒಂಟೆಯ ಜಾತಿಯ–ಮರಾಟಿಗರು 'ರಾಕ್ಷಸೀ ಮಹತ್ತ್ವಾಕಾಂಕ್ಷೆ'ಯುಳ್ಳವರೋ? ಮಹತ್ತ್ವಾಕಾಂಕ್ಷೆಯ ಪಾಠವನ್ನು ಕನ್ನಡಿಗರು ಇನ್ನೂ ಕಣ್ಣಿರೆದು ನೋಡಿಲ್ಲ ಕೂಡ; ಆದರೆ ಅವನ್ನವರು ಓದಿ, ಉಚಿತರೀತಿಯಿಂದ ಅದರ ಉಪಯೋಗ ಮಾಡಿಕೊಳ್ಳಬೇಕಾದುದು ತಂಬ ಅಗತ್ಯದ ಮಾತಾಗಿದೆ.

ಕರ್ನಾಟಕವೇ ತಮ್ಮ ಮಾತೃಭೂಮಿಯೆಂದು ತಿಳಿದು ಅದರ ಉನ್ನತಿಗಾಗಿ ಹೆಣಗುವ ಸಮಂಜಸಬುದ್ಧಿಯ ಮರಾಟಿಗರನ್ನು ಡಾಕ್ಟರರು ಬಾಯಿಗೆ ಬಂದಂತೆ ಬಯ್ದಿದ್ದಾರೆ. ರೊಚ್ಚಿನ ಭರದಲ್ಲಿ 'ಡೋಮಕಾವಳಾ (ಹೊಲೆಯರ ಕಾಗೆ)' ಎಂಬ ಶಬ್ದವನ್ನೂ ಅವರಿಗೆ ವಿಶೇಷಣವನ್ನಾಗಿ ಕೊಟ್ಟಿದ್ದಾರೆ. ಕೊನೆಗೆ, ತಮ್ಮ ಮರಾಟಿಬಂಧುಗಳಿಗೆ ಉಪದೇಶಮಾಡುವಾಗ ಡಾಕ್ಟರರು ಜುಜ್ಜುಮದ್ದನ್ನು ಕೊಟ್ಟಿದು ಹೀಗೆ:

" ಈ ಸ್ನೇಹಸಮ್ಮೇಳನದ ಸಂದರ್ಭವನ್ನು, ಕೇವಲ ಮರಾಟಿ ಭಾಷೆಯ ಸಂರಕ್ಷಣೆಮಾಡುವುದಕ್ಕಷ್ಟೇ ಉಪಯೋಗಿಸಿಕೊಳ್ಳದೆ, ಏನಾದರೂ ತುಂಬುಗೆಲಸ ಮಾಡಲಿಕ್ಕೆಂದು— ಅಯಾ ಗ್ರಾಮ-ನಗರ ಗಳವರು ಅಲ್ಲಲ್ಲಿಯ ಮರಾಟ ಭಾಷಿಕರಲ್ಲಿ ಸಂಘಟನೆಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಅಂತಹ ಪ್ರಸಂಗವಿಂದು ಖಚಿತವಾಗಿ ಬಂದೇ ನಿಂತಿದೆ. ಏಕೆಂದರೆ ಸದ್ಯ ದೇಶದಲ್ಲೆಲ್ಲ ಜಾತ್ಯಭಿಮಾನ, ದೇಶಾಭಿಮಾನ, ಪ್ರಾಂತಾಭಿಮಾನ, ಭಾಷಾಭಿಮಾನ ಇವುಗಳಿಗೆ ಉಕ್ಕುಬಂದಿದೆ .... ಇಲ್ಲಿಯ ಅಲ್ಪಸಂಖ್ಯಾಕರ ಮೇಲೆ ಆಪತ್ತಿ ಬಾರದೆ ಬಿಡದೆಂದು ಯಾರೂ ಹೇಳಬಹುದಾಗಿದೆ. ಆದುದರಿಂದ ಅವಶ್ಯಕವಿದ್ದ ಊರುಗಳಲ್ಲೆಲ್ಲ ಮರಾಠಿ ಸಂಘಗಳನ್ನು ಸ್ಥಾಪಿಸಬೇಕು. ಪರಸ್ಪರ ಸಹಾಯಕ ತತ್ತ್ವದ ಮೇಲೆ ಬ್ಯಾಂಕು, ಕಿರಾಣಿ ಅಂಗಡಿ, ಆಡತೀ ಅಂಗಡಿ ಮೊದಲಾದುವುಗಳನ್ನು ತೆರೆದು ಆತ್ಮಸಂರಕ್ಷಣೆ ಮಾಡಿಕೊಳ್ಳುವ ಅವಶ್ಯಕತೆ ಕುಂಬ ಇದೆ ..... "

ಈ ಮಾತಿನ ಅರ್ಥವನ್ನು ಕನ್ನಡಿಗರೇ ಆಗಲಿ, ಯಾರೇ ಆಗಲಿ, ಏನೆಂದು ಮಾಡಿಕೊಳ್ಳಬಹುದು ಡಾಕ್ಟರರೆ? ಕನ್ನಡಿಗರೊಂದಿಗೆ ಕರ್ನಾಟಕಸ್ವಮಹಾರಾಷ್ಟ್ರೀಯರು ಅಸಹಕಾರದ ಕಹಳೆಯನ್ನು ಊದಬೇಕೆಂದೇ ಅಲ್ಲವೆ? ಊದಿರಿ, ಬೇಗನೆ ಊದಿರಿ! ಆದರಿಂದ ನಿಜವಾಗಿಯೂ ಕನ್ನಡಿಗರಿಗೂ ಕನ್ನಡ ನಾಡಿಗೂ ಹೆಚ್ಚಾಗಿ ಹಿತವಿದೆ. ಕಾಡಿ ಕಾಡಿ ಕೂಡುವ ಬಂಧುಗಳಿಗಿಂತ ಕೂಡಿಕೂಡಿ ಕಾಡುವ ಬಂಧುಗಳಿಂದ ತೊಂದರೆ ಹೆಚ್ಚು. ಬೇಗನೆ ಅಸಹಕಾರದ ಪ್ರಚಾರ-ಕಾರ್ಯ ಕೈಕೊಳ್ಳಿರಿ! ಮರಾಟಿಗರಲ್ಲಿ ಸದ್ಗುಣವಾಗಿ ಕಂಡ ದೇಶಾಭಿಮಾನ ಭಾಷಾಭಿಮಾನಗಳು ಕನ್ನಡಿಗರಲ್ಲಿ ಕಂಡಾಗ ಡಾಕ್ಟರರಿಗವು ದುರ್ಗುಣವಾಗಿ ತೋರುವುವು. ಆಶ್ಚರ್ಯ!

ಸುಮಾರು ೧೫೫-೧೬ ಪುಟಗಳ ಈ ಉಪನ್ಯಾಸದಲ್ಲಿ, ಕನ್ನಡಿಗರ ಮೇಲೂ ಕನ್ನಡಿಗರೊಂದಿಗೆ ಸಹಕರಿಸಬೇಕೆನ್ನುವ ಮರಾಟಿಗರ ಮೇಲೂ ಸುರಿಸಿದ ಗ್ರಾಮ್ಯವ್ಯವೃತ್ತಿಯ ಬೈಗುಳ ಮಳೆಯಲ್ಲದೆ ಇನ್ನೇನೂ ವಿಧಾಯಕ ಸಂಗತಿ ಇಲ್ಲ. ಕನ್ನಡಿಗರೆಲ್ಲ 'ಉಡದಾಂಡ'ರು, 'ಗುಂಡಗಿರಿ'ಯವರು, 'ಭೇಕಡ'ರು, 'ರಾಕ್ಷಸಿ ಮಹತ್ತ್ವಾಕಾಂಕ್ಷೆ'ಗಳು, ಅಸೂಯಾಬುದ್ಧಿಯವರು, ಮತ್ಸರಿಗಳು, ಆದೂರದೃಷ್ಟಿಯವರು, ಸ್ವಾರ್ಥಿಗಳು, ಸಮಗಾರ ಗಾಗೆಗಳು. ಮಹಾರಾಷ್ಟ್ರೀಯರೆಂದರೆ 'ನಿರ್ಮಲ ಹೃದಯಿ'ಗಳು; 'ಸದ್ಗುಣ ಸಮುಚ್ಚಯ'ದ ಪುತ್ಥಳಿಗಳು; ಸ್ವಾರ್ಥ-ತ್ಯಾಗಿಗಳು; ಕರ್ತೃತ್ವಶಾಲಿಗಳು. ಕೇಳಿ ಕನ್ನಡಿಗರೇ! ಅಹಿಂಸೆಯ ಶರಣರಲ್ಲವೇ ನೀವು? ಕೇಳಿ ತಾಳಿಕೊಳ್ಳಿರಿ! 'ತಾಳಿದವ ಬಾಳ್ಯಾನು' ಎಂದು ನಮ್ಮ ಉಪಾಧ್ಯಾಯರು 'ಅ ಆ' ಕಲಿಸುವಾಗಲೇ ನಮಗೆ ಕಲಿಸಿದ್ದಾರಲ್ಲವೆ? ಆದುದರಿಂದಲೆ ತಾಳಿರಿ, ಯಾವಾಗಲೂ ಆಳುಗಳಾಗಿಯೆ ಬಾಳಿರಿ!

ಸಮ್ಮೇಲನದಲ್ಲಿ ಸ್ವೀಕೃತವಾದ ಗೊತ್ತುವಳಿಗಳೂ ಕನ್ನಡಿಗರಿಗೆ ತುಂಬ ಹಿತಕಾರಿಯಾದುವುಗಳೆ ಇವೆಯಂತೆ. ಕರ್ನಾಟಕದಲ್ಲಿ ಬರುವ ಎಲ್ಲ ಸರಕಾರೀ ಅಧಿಕಾರಿಗಳಿಗೂ ಮರಾಟಿ ಭಾಷೆ ಬಂದೇ ತೀರಬೇಕಂತೆ! ಎಲ್ಲ ಕೋರ್ಟು ಕಚೇರಿಗಳಲ್ಲಿಯೂ ಮರಾಟಿಗೆ ಸ್ಥಾನವಿದ್ದೇ ತೀರಬೇಕಂತೆ! ಮರಾಟಿಗರಿಗೆ ಕಳುಹುವ ಕೋರ್ಟಿನ ಸಮನ್ಸು-ನೋಟೀಸುಗಳು ಮರಾಟಿಯಲ್ಲಿಯೆ ಇರಬೇಕಂತೆ. ಇವೆಲ್ಲ ಗೊತ್ತುವಳಿಗಳು ಸರ್ವಾನುಮತದಿಂದ ಪಾಸಾಗಿವೆಯಂತೆ. ಕನ್ನಡಿಗರ ಭಾಷಾಭಿಮಾನ--ಪ್ರಾಂತಾಭಿಮಾನಗಳನ್ನು ಹಳಿಯುವ ಇದೇ ಅಧ್ಯಕ್ಷರ ನೇತೃತ್ವದಲ್ಲಿಯೆ ಈ ಮರಾಟಿಗರ ಗೊತ್ತುವಳಿಗಳು ಪಾಸಾಗಿವೆ. 'ಆದೂರದೃಷ್ಟಿ'ಯ ಕನ್ನಡಿಗರಿಗೆ ಬುದ್ಧಿಹೇಳಲು ಬಂದ ಡಾ. ಕೆಲ್ಕೋಸ್ಕ್ಕರರು, ಮರಾಟಿಗರಿಗೆ ಯಾವ ಬುದ್ಧಿಯನ್ನು ಹೇಳಿರುವರು? ಅವರ ಭಾಷಣದಲ್ಲಿ ಅದಕ್ಕಾಗಿ ಒಂದು ಮಾತೂ ಇಲ್ಲ. 'ಸದ್ಗುಣ ಸಮುಚ್ಚಯ'ದಿಂದ ಕೂಡಿದ ಮರಾಟಿಗರಿಗೆ ಹೊಸತಾಗಿ ಹೇಳಬೇಕಾಗಿದೆಯೇನು ಎಂದು ಬಿಟ್ಟಿರಬಹುದು. ಎಲ್ಲರೂ ಬುದ್ಧಿ ಕಲಿಸಬೇಕಾಗಿದೆ ಬುದ್ಧಿಗೇಡಿಗಳಾದ ಕನ್ನಡಿಗರಿಗೇ; ಗೊತ್ತಾಯಿತೆ 'ಕಾನಡೀ ಬಂಧು'ಗಳೆ? ಡಾಕ್ಟರರು ಹೇಳಿದಂತೆ ಹೇಡಿಗಳೇ ಆಹುದೇನು ನೀವು? ಆಹುದಾದರೆ ಕೈಮುಚ್ಚಿ ಕುಳಿತುಬಿಡಿರಿ!

ತಿದ್ದುಪಡಿ ★ ತಿದ್ದುಪಡಿ

ನಿಯೋಜಿತ ಅಧ್ಯಕ್ಷರ ಅನಾನುಕೂಲತೆಯ ಮೂಲಕ
ಅವರಿಗೆ ಬರಲು ಆಗದ್ದಕ್ಕೆ
ರಂಗ ಮಂಗ ಪ್ರಕಾಶನದ ಹುಟ್ಟುಹಬ್ಬವನ್ನು
ಮುಂದುವರಿಸಬೇಕಾಯಿತು.
ಹುಟ್ಟುಹಬ್ಬವು ೧೬—೩—೪೧ ಕ್ಕೆ
ಖಂಡಿತ ಜರುಗುವುದು. ಅಂದಿನ ದಿನವೆ

'ಶೀರಂಗ'

ಪ್ರಸಿದ್ಧವಾಗುವುದು.
ಪುಟಗಳು ಹೆಚ್ಚು! ★ ಚೆನ್ನಾದ ಪಡಿಯಚ್ಚು!!
ಅದಕ್ಕೇ ಬೆಲೆಯಲ್ಲಿ ಬದಲು!
ಸಾದಾ ಪ್ರತಿ ೧-೪-೦; ಒಳ್ಳೆಯ ಪ್ರತಿ ೧-೮-೦.
ನಮ್ಮ ಚಂದಾದಾರರಿಗೆ
ಸಾದಾ ಪ್ರತಿ ೧-೦-೦; ● ಒಳ್ಳೆಯ ಪ್ರತಿ ೧-೪-೦.
ಬೇಕಾದವರು ತಮಗೆ ಬೇಕಾದ ಪುಸ್ತಕ ವ್ಯಾಪಾರಿಗಳಿಂದ
ತರಿಸಿಕೊಳ್ಳಬಹುದು, ಇಲ್ಲವೆ ನಮ್ಮ ಮಾರಾಟ
ಗಾರರಿಂದ ಪಡೆಯಬಹುದು.
ಕರ್ನಾಟಕ ಬುಕ್ ಡಿಪೊ
ಗಾಂಧಿ ಚೌಕು, ಧಾರವಾಡ.

ಆಂ, ಆಂ, ನ್ಞಿಲ್ಲಿಗೆ..!

ಶ್ರೀ. 'ಶ್ರೀ. ಶ.' ಮೈಸೂರು

★

(ಒಂದು ಚೂರು ಅನುಭವ)

'ಈ ತಿಂಗಳೇನೋ ಪತ್ರಿಕೆಯ ಪ್ರತಿಯು ಕೈಸೇರಿತು; ಅದು ಕಳೆದ ತಿಂಗಳಲ್ಲಿ ಬಾರದೆ ಹೋದುದೇಕೆ?'

'ಬರದಿದ್ದರೆ ಆ ದರ ಏಜಂಟರಿಂದ ಕೊಂಡುಕೊಳ್ಳಬಾರದಾಗಿತ್ತೆ?'

'ಏಜಂಟರೀಗ ಎಲ್ಲಿದ್ದಾರೆ? ಅಂತಹ ಪತ್ರಿಕೆಗಳನ್ನೋದುವ (Gent)ರಿದ್ದರೆ ಏಜಂಟರಿಗೆ ಅಸ್ತಿತ್ವ!'

'ಏನು ಹಾಗೆಂದರೆ?'

'ಅಲ್ಲ, ಅಲ್ಲ; 'ಜಯಂತಿ' 'ಜಯಕರ್ನಾಟಕ' 'ಪ್ರಬುದ್ಧ ಕರ್ನಾಟಕ'ದಿ ದೊಡ್ಡ ಪತ್ರಿಕೆಗಳನ್ನೋದುವವರು—ಅಂದರೆ ಅತಿಶಯ ಸುಸಂಸ್ಕೃತರಿರಲೇ ಬೇಕು—ಅಂತಹ ರಸಿಕರು ತುಂಬಾ ಜನರಿರುವುದರಿಂದ, ಪ್ರತಿಗಳಲ್ಲಿ ಒಂದೂ ಪುಸ್ತಕದಂಗಡಿಗಳಲ್ಲಿ ಉಳಿಯುವುದಿಲ್ಲ!'

'ಉಳಿಯುವುದಿಲ್ಲ?'

'ಹೌದು, ಗೊತ್ತಿಲ್ಲವೆ.. ಆ ಸಲ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕದ 'ಮುದಿಸಿಂಹ' ಭಾಷಣ ಮಾಡಿದರಲ್ಲ..?'

'ಸರಿ!'

'ಆಗ ಈ 'ಕನ್ನಡದ ಕಣ್ಣು' ಎನಿಸಿದ ನಮ್ಮೂರಿನ ತರುಣ ಜನ, ಆ ಸಿಂಹದ ಕರುಳಿನ ಪಜನಗಳ ಸತ್ವವನ್ನು ಹೀರಿ ಆವೇಶದಿಂದ ಹರಿಹಾಯ್ದು..'

'ಆಮೇಲೆ....?'

'ಹರಿಹಾಯ್ದು 'ಈ ವೇಷ'ವನ್ನು ತಾಳಿತು!'

'ಅಂದರೆ ಉತ್ತಮ ಸಾಹಿತ್ಯ—ಸಂಸ್ಕೃತಿಗಳನ್ನೊದಗಿಸಿಕೊಡುವ ನವೀನ ಕನ್ನಡ ಪತ್ರಿಕೆಗಳನ್ನು ಆದರದಿಂದ ಓದತೊಡಗಿ, ಕನ್ನಡದ ಸೇವೆ ಮಾಡುತ್ತಿರುವುದೆಂದೋ?'

'ಹೌದು, ಕನ್ನಡದ ಹುಣ್ಣು, ಅಲ್ಲ—ಅಲ್ಲ, ಕಣ್ಣಾದ ನಮ್ಮೂರ ರಸಿಕರು, ಕಣ್ಣಿಲ್ಲದೆ ಅಂದರೆ ಕಣ್ಣು ತೆರೆಯದೆ ಕನ್ನಡವನ್ನು ಓದಕಲಿತುದರಿಂದ....'

'ಎಲ, ಎಲ!'

'ಹೌದೂ; ಕಣ್ಣಿಲ್ಲದೆ ಕನ್ನಡವನ್ನು ಓದಕಲಿತುದರ ಫಲವಾಗಿ, ಅಂಗಡಿಗಳಲ್ಲಿ ಕನ್ನಡ ಪತ್ರಿಕೆಗಳಿರಬೇಕಾದ ಪ್ರಮೇಯ ಬೀಳಲಿಲ್ಲ!'

'ಏನೆಂದೆ?'

'ಅಲ್ಲವಯ್ಯಾ, ಅಲ್ಲಿ ಇಲ್ಲಿ ಹೋಗಿ ನಿನ್ನಂತೆ ಕನ್ನಡದ ಅರ್ಭಟವನ್ನು ಮಾಡಿ ಆರುವ ಭಟರೇನು ನಮ್ಮವರು? ಎಂದಿಗೂ ಇಲ್ಲ! ಕನ್ನಡದ ಆದಕ್ಕಿಂತ ಹೆಚ್ಚಾಗಿ ನಮ್ಮೂರಿನ 'ತನ'ದಿಂದ ತುಂಬಿದ ವಿಶಾಲಹೃದಯರಾದ ನಮ್ಮವರು....'

'ಏನಾದರು?'

'ತಮ್ಮನ್ನೇ ಮರೆತರು!'

'ಎಲ್ಲಿಂದ ಎಲ್ಲಿಗಯ್ಯಾ?'

'ಎಲ್ಲೂ ಇಲ್ಲವಯ್ಯಾ; ಹೊಸ-ಹೊಸದಾದ ಉತ್ತಮ ತರಗತಿಯ ಅರ್ಧಾಣೆಯ ಇಲ್ಲವೆ ಒಂದಾಣೆಯ ಮಾಸಿಕಗಳನ್ನೋದುವುದರಲ್ಲಿ ಛೆ, ಅಲ್ಲ— ಇಂದಿನ ನವೋನವ ಸ್ಫೂರ್ತಿದಾಯಕ ಲೇಖನಗಳನ್ನೊಳಗೊಂಡ ಉದ್ದಾಮ ಪತ್ರಿಕೆಗಳನ್ನೋದುವುದರಲ್ಲಿ 'ಅಪ್ರಬುದ್ಧ' ರಾದರು!'

'ಆಂ..?'

'ಹೌದು, 'ಅಪ್ರಬುದ್ಧ' ರಾದರು ಎಂದರೆ ತಲ್ಲೀನರಾಗಿ ತಮ್ಮನ್ನು ತಾವು ಮರೆತರಿಂದರ್ಥ.'

'ಏನು? ನಮ್ಮೂರ ಕನ್ನಡದಚ್ಚಕೆಚ್ಚಿನ ತರುಣರೂ ಕನ್ನಡಕ್ಕೆ ಪ್ರೋತ್ಸಾಹ ಕೊಡುವುದಿಲ್ಲವೆಂತಲೋ?'

'ಹುಂ, ಏನೋ ಅಷ್ಟು-ಕನಿಕರದಿಂದ ಮಲತಾಯಿಗೆ ತೋರುವ ಆದರವನ್ನಾದರೂ ತೋರುವರಲ್ಲ—ಅಲ್ಲ, ಛೆ—ಮಲತಾಯಿಗೆ ತೋರುವಂತೆ ಆದರವನ್ನು, ತೋರದೆ ಅತಿಶಯ ಉಚ್ಚಭಾವನೆಯಿಂದ ಸೇವೆಮಾಡಲು..!'

'ಮುಗಿಸಯ್ಯ!'

'ಮಾಡಲು ಮನಸ್ಸುಮಾಡಿರುವುದನ್ನು ಕೇಳಿರುವೆನಂತೆ!'

'ಏನು ಅಸಂಬದ್ಧ?'

'ಇಲ್ಲ, ಇಲ್ಲ; ಎಂತಹ ಸಂಘಟನೆ, ಏನು ಕೆಲಸ—ಎಲ್ಲೆಲ್ಲೂ ಪೂರ್ತಿ ಸ್ಫೂರ್ತಿ! ನಮ್ಮೂರಿನ ಮಾದರಿ(?) ಮಾತನ್ನೇ ಕರ್ನಾಟಕದ ಪ್ರತಿಯೊಂದು ಭಾಗದವರಿಗೂ ಕಲಿಸಲು ನಮ್ಮ ಕೆಚ್ಚೆದೆಯ ತರುಣರು ಟೊಂಕ ಕಟ್ಟಿರುವರಂತೆ!'

'ಸರಿಯಾದ ಕೆಲಸ, ಭೇಷ್!'

'ಆದರೆ ಇತರ ಭಾಗದ ಕನ್ನಡಿಗರ ಮಾತು.....ಬರಿ..ಅಶುದ್ಧವಂತೆ!'

'ಸರಿ, ನ್ಯಾಯವಾದ ಮಾತು!'

'ಮಾತೊಂದೇ ಅಲ್ಲವಂತೆ—ಮಾತು-ಕತೆ, ನಡೆ-ನುಡಿ, ವೇಷ-ಭೂಷಣ ಎಲ್ಲವೂ ಅಷ್ಟಕ್ಕೆ ಅಷ್ಟೇ ಅಂತೆ!'

'ಹಾಗೋ?'

'ಹೌದು 'ಆಕ್ವರ್ಡ್' ಏ ಅಂತೆ!'

'ಆಕ್ಸ್‌ಫರ್ಡ್?'

(೬೪೭ ನೆಯ ಪುಟ ನೋಡಿರಿ.)

೪೧. ನವನೀತ ರಾಮಾಯಣ

ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು ಸರಳರಗಳೆಯಲ್ಲಿ ರಚಿಸಿದ ಕಾವ್ಯಗ್ರಂಥ; ಬೆಲೆ ೧·೦-೦.

ಪ್ರಕಾಶಕರು: ಕನ್ನಡ ಸೇವಾಸಂಘ, ಅಮ್ಮೆಂಬಳ

ನಮ್ಮ ನಾಡಿನ ಹಿರಿಯ ಕವಿಯೊಬ್ಬ, 'ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ' ಎಂದು ಈಗ ೫-೬ ಶತಮಾನಗಳಿಗೆ ಮೊದಲೆ ನಗೆಮಾತಿನಿಂದ ಹೇಳಿದ್ದರೂ, ನಮ್ಮಲ್ಲಿ 'ರಾಮಾಯಣದ ಕವಿಗಳು' ಈ ೨೦ನೆಯ ಶತಮಾನದಲ್ಲಿ ಕೂಡ ಒಬ್ಬೊಬ್ಬರಾಗಿ ಮುಂದೆ ಬರುತ್ತಲಿದ್ದಾರೆ. ರಾಮಾಯಣದ ಕಥಾವಸ್ತುವಿನಲ್ಲಿಯ ಯಾವುದಾದರೊಂದು ಭಾಗವನ್ನು ತನ್ನ ಕಾವ್ಯಕ್ಕೆ ವಸ್ತುವನ್ನಾಗಿಸಿಕೊಳ್ಳದ ಭಾರತೀಯ ಕವಿಯೆ ಇರಲಾರನೆಂದರೆ ಅತ್ಯುಕ್ತಿಯೆನಿಸದು. ಇದಕ್ಕೆ ಕಾರಣವೆಂದರೆ ರಾಮಾಯಣದ ಕಥೆಯಲ್ಲಿ ಕಂಡುಬರುವ ಸನ್ನಿವೇಶ ಚಮತ್ಕೃತಿ, ಪ್ರಕೃತಿವರ್ಣನೆ, ವಿವಿಧ ಪಾತ್ರನಿರ್ಮಾಣ, ಭಾವ-ರಸಗಳ ಪರಿಪುಷ್ಟಿ ಇವುಗಳ ಆಕರ್ಷಣೆ. ಅದೇ ಕತೆ ಅವೇ ಪಾತ್ರಗಳಾದರೂ, ಹೇಳುವವರ ವ್ಯಕ್ತಿತ್ವದ ಮೂಲಕ ಬಲುದಿನಗಳಹಿಂದೆಯೆ 'ಶತಕೋಟಿ ರಾಮಾಯಣ'ಗಳಾಗಿ ಹೋಗಿವೆ; ಇನ್ನೂ 'ಶತಕೋಟಿ' ಯ ನಿರ್ಮಿತಿಯೂ ಆಗಬಹುದಾಗಿದೆ. ಸಂಸ್ಕೃತದಲ್ಲಿಯ ವಾಲ್ಮೀಕಿರಾಮಾಯಣವನ್ನು ಕನ್ನಡಿಸಿದ **ತೊರವೆಯ ನರಹರಿಕವಿ**, ಆದರಲ್ಲಿ ತನ್ನದೊಂದು ವೈಶಿಷ್ಟ್ಯವನ್ನು ತಾರದೆ ಇಲ್ಲ. 'ಶೇಷರಾಮಾಯಣ'ವನ್ನು ಕನ್ನಡಿಸಿದ **ಮುದ್ದಣ** ಆದರಲ್ಲಿ ತನ್ನ ವ್ಯಕ್ತಿತ್ವ ತುಂಬುವುದನ್ನು ಬಿಟ್ಟಿಲ್ಲ. ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರ ಈ 'ನವನೀತ ರಾಮಾಯಣವು ಯಾವ ಸಂಸ್ಕೃತ ರಾಮಾಯಣದ ಭಾಷಾಂತರವಲ್ಲ. ಆದರೂ 'ರಾಮಾಯಣವನೋದುತಾದಿ. ಕವಿಯಾದ ವಾಲ್ಮೀಕಿಯೋದಿನ ತಿರುಳ್ನೇನ್ ಆರಿಯಲಾಪೆನೆ?' ಎಂದಿರುವುದನ್ನು ನೋಡಿದರೆ, ಶ್ರೀಯುತರು ತಮ್ಮ ಕೃತಿಗೆ ಬೇಕಾದ ವಸ್ತುವನ್ನು ವಾಲ್ಮೀಕಿ ರಾಮಾಯಣದಿಂದಲೆ ಆಯ್ದುಕೊಂಡಿದ್ದಾರೆಂದು ಹೇಳಬಹುದು. ಆದರೆ ಕಾಲದ ನವೀನತೆಯು ಈ 'ನವನೀತ' ರಾಮಾಯಣದಲ್ಲಿ, ವಾಲ್ಮೀಕಿಯ ಕೃತಿಯಲ್ಲಿ ಕಾಣದ ವಸ್ತು-ವಿನ್ಯಾಸದ ನವೀನತೆಯನ್ನು ಸಾಕಷ್ಟು ತುಂಬಿಬಿಟ್ಟಿದೆ.

ಈ ಕಾವ್ಯವು ಸಾಂಪ್ರದಾಯಿಕ ಕಾವ್ಯಗಳಂತೆ ಸಮುದ್ರ-ವನ-ದೇಶ-ನಗರಗಳ ಪಡಿಯಚ್ಚಿನ ವರ್ಣನೆಗಳಿಂದ ಪ್ರಾರಂಭವಾಗುವುದಿಲ್ಲ. ಕಥಾನಾಯಕನ ವಂಶ-ವಿನ್ಯಾಸದ ವರ್ಣನೆಯಿಂದಲೂ ಮೊದಲಾಗುವುದಿಲ್ಲ. ಕವಿ ರಸಿಕರಿಗೆ ಮೊದಲು ಪರಿಚಯ ಮಾಡಿಕೊಡುವುದು ತನ್ನ 'ಮನಂಬಿಡಿದ' ಬನವಸೆಯ ನಾಡನ್ನು. ರಾಮಾಯಣದ ಕತೆಗಳೆಲ್ಲ ಮಿಕ್ಕ ಉತ್ತರಭಾರತದ ಅಯೋಧ್ಯೆಯಲ್ಲಿ ಪ್ರಾರಂಭವಾಗಿದ್ದರೆ, ಈ 'ನವನೀತ ರಾಮಾಯಣ' ವು ದಕ್ಷಿಣಾಪಥದ – ಕನ್ನಡದ– ಬನವಸೆಯ ನಾಡಿನಲ್ಲಿ ಮೊದಲಾಗುವುದು.

ಕಾವ್ಯದ ಪ್ರಾರಂಭವು ನಾಟಕದ ರೀತಿಯನ್ನು ನೆನಪಿಗೆ ತಂದು ಕೊಡದಿರದು. ಬನವಸೆಯ ನಾಡಿನ ಮುನಿಗಳಾಶ್ರಮದ ವನಪ್ರದೇಶವೊಂದು; ಒಂದು ಸಂಜೆಯ ಸಮಯ; ಸುಂದರಿಯಾದ ಮುನಿಕನ್ಯೆ ಯೊಬ್ಬಳು ವನದಲ್ಲಿ ಆಲೆದಾಡುತ್ತಿರುವಳು. ಆಕೆ 'ಮುನಿಗಳಂತರದಲಿ ಸಮಾಧಿಗರ್ಭಾಲಯದಿ ಮೂಡಿ ತಲೆದೋರಿದಾ ಧರ್ಮ ಸಂಸ್ಕೃತಿ ದೇವಿ'ಯಂತಹಳು. ಆಕೆ ಒಂದೆಡೆಯಲ್ಲಿ ಕುಳಿತು ಸಂಜೆಯ ಸೌಂದರ್ಯಶಿವನ ಧ್ಯಾನ ಮಾಡುತ್ತಿರುವಾಗ, ಒಮ್ಮೆಲೆ ಪುಷ್ಪಕವಿಮಾನದಿಂದ ರಾವಣ ಅಲ್ಲಿಗೆ ಬರುವನು; ಆ ಮುನಿಕನ್ಯೆಯನ್ನು ತನ್ನ ವಳವಾಗೆಂದು ಪೀಡಿಸುವನು. ಎಷ್ಟೊಂದು ಧರ್ಮಸೂಕ್ಷ್ಮಗಳನ್ನು ಆಕೆ ಹೇಳಿದರೂ ರಾವಣನು ಕೇಳದೆ ದುಡುಕಲು, ಆ ಕನ್ಯೆ-ವೇದವತಿ-ಅವನಿಗೆ ಶಾಪವನ್ನಿತ್ತು, ಯೋಗಾಗ್ನಿಯಿಂದ ತನ್ನನ್ನು ತಾನೆ ಸುಟ್ಟುಕೊಳ್ಳುವಳು. ರಾವಣ ವಿಮಾನದಲ್ಲಿ ಕುಳಿತು ವೇಗದಿಂದ ಹೊರಟುಹೋಗುವನು.

ಈ ಯಜ್ಞ ಶಾಪಾಕ್ಷರಗಳ ಧ್ವನಿಯನ್ನು ಕೇಳಿ ಬಳಿಯ ಆಶ್ರಮದಲ್ಲಿಯೆ ಇದ್ದ ಅಗಸ್ತ್ಯ, ಪುಲಸ್ತ್ಯ, 'ಉತ್ತರಾಪಥದಿಂದ ಕಾರ್ಯಾಂತರಂಬಿಡಿದು ನಡೆತಂದ' ಕೌಶಿಕ, ವಾಲ್ಮೀಕಿ ಮೊದಲಾದವರು ಅಲ್ಲಿಗೆ ಬರುವರು. ನೀಚನಾದ ರಾವಣನನ್ನು ಯಾವ ಉಪಾಯದಿಂದ ಮಟ್ಟಕ್ಕೆ ಹಾಕಬೇಕೆಂಬುದನ್ನು ಕುರಿತು, ದಕ್ಷಿಣಾಪಥದ ಆರ್ಯವೃದ್ಧರೊಂದಿಗೆ ವಿಚಾರವಿನಿಮಯ ಮಾಡಲಿಕ್ಕೆಂದು ಕೌಶಿಕನು ಅಲ್ಲಿಗೆಬಂದಿದ್ದ. ರಾವಣನ ನೀಚತನದ ಪ್ರತ್ಯಕ್ಷ ಉದಾಹರಣೆಯೇ ಇಲ್ಲಿನೋಡಲು ಸಿಕ್ಕಿದುದರಿಂದ, ಋಷಿಗಳೆಲ್ಲರೂ ಸಂತಪ್ತರಾಗಿ, ಸಭೆಸೇರಿ, ಮುಂದೆ ಏನು ಮಾಡಬೇಕೆಂದು ಆಲೋಚಿಸುವರು. ರಾವಣನು ಹೋಗಿನವನೇ? ಪುಲಸ್ತ್ಯಋಷಿಯ ವಂಶಕ್ಕೆ ಸೇರಿದ 'ಬೊಮ್ಮರಕ್ಕಸ'ರಾಜ. ವೇದ-ವೇದಾಂಗಗಳನೋದಿದವನು. ಬಲವಂತನು. ಆದುದರಿಂದಲೆ ಆರ್ಯವೃದ್ಧರೆಲ್ಲ ಸೇರಿ ದಕ್ಷಿಣಾಪಥಕ್ಕೆ ಅವನನ್ನು ಪಟ್ಟಗಟ್ಟಿದ್ದರು. ಈಗ ತಾವು ಒಮ್ಮೆಲೆ ದುಡುಕದೆ ಸಾಮೋಪಾಯದಿಂದ ಕಾರ್ಯಮಾಡಬೇಕೆಂದು ಎಲ್ಲ ಋಷಿಗಳೂ ನಿರ್ಣಯಿಸಿ, ವಾಲ್ಮೀಕಿ-ಪುಲಸ್ತ್ಯರು ಸೇರಿ ರಾವಣನ ಕಡೆಗೆ ಹೋಗಿ ಮಾತನಾಡಿ ಬರಬೇಕೆಂದು ಗೊತ್ತುಮಾಡುವರು. ಆದರಂತೆಯೆ ಅವರು ಸಂಧಾನಕ್ಕೆಂದು ರಾಜಧಾನಿಗೆ ಹೋದರೆ ರಾವಣನು ನಗರದಲ್ಲಿರಲಿಲ್ಲ. ವಿಥಿಲೆಯಲ್ಲಿ ಜನಕರಾಜನ ಮಗಳ ಸ್ವಯಂವರವಿದೆಯೆಂದೂ ಅದಕ್ಕಾಗಿ ಹೋಗಿರುವನೆಂದೂ ವರ್ತಮಾನ ಗೊತ್ತಾಗುವುದು.

ರಾವಣನ ಉಪದ್ರವ ನಿಲ್ಲಿಸಬೇಕೆಂಬ ಉದ್ದೇಶದಿಂದ ಕೌಶಿಕನು ತನ್ನ ಕಡುಬಯಕೆಯಾದ ವಸಿಷ್ಠನೊಂದಿಗೆ ಕೆಳೆಬಳಸಿ, ಅತನ ಯಜಮಾನನಾದ ದಶರಥನ ಸ್ನೇಹಮಾಡಿಕೊಂಡನು. ದಶರಥನ ಹಿರಿಯ ಮಗನಾದ ವೀರರಾಮನಿಂದ ತನ್ನ ಕಾರ್ಯ ಸಾಧಿಸುವುದೆಂದು ಮಗಂಡ್ತಿಆ ಋಷಿ, ದಕ್ಷಿಣಾಪಥದಲ್ಲಿ 'ಪಂಚಮುಖ' ನಿರ್ಮಾಣ ಮಾಡಲು ಬಂದಿದ್ದ. ವೇದವತಿಯ ಮರಣದಿಂದ ಆತನ ಕಾರ್ಯ ಸಾಧಿಸಿತು. ದಕ್ಷಿಣದ ಆರ್ಯರೆಲ್ಲರೂ ರಾವಣನ ವಿಷಯದಲ್ಲಿ ದ್ವೇಷ-ಸಂತಾಪಗಳನ್ನು ತಾಳಿದರು. ಇಲ್ಲಿಗೆ ಸವನೀತ ರಾಮಾಯಣ ಕಾವ್ಯನಾಟಕದಲ್ಲಿಯ ಮೊದಲನೆಯ ಅಂಕವು ಮುಗಿಯುವುದು.

ಸೀತಾಸ್ವಯಂವರದ ಮಂಟಪದಿಂದ ಎಡನೆಯ ಅಂಕಕ್ಕೆ ಪ್ರಾರಂಭವಾಗುವುದು. ಇಲ್ಲಿಯ ಸನ್ನಿವೇಶದಲ್ಲಿ ಕೂಡ ಹೊಸತನವೇ ಇರುವುದು. ಬೇಹಿನವನು ಬಂದು ರಾವಣನಿಗೆ ಕೌಶಿಕ-ರಾಮ-ಲಕ್ಷ್ಮಣರು ಬರುವರೆಂದು ಬೆಸಗೊಂಡುದು; ಅದಕ್ಕೆ ರಾವಣನು ದಾರಿಯಲ್ಲಿ ಮಾಯಾ ಸ್ವಯಂವರ ಮಂಟಪ ನಿರ್ಮಿಸಲು ಹೇಳಿದುದು: ಅದನ್ನರಿತ ವಿಶ್ವಾಮಿತ್ರ (ಕೌಶಿಕ) ಆ ಮಾಯೆಯನ್ನೆಲ್ಲ ಹರಿದು ರಾವಣನ ಅನುಚರರನ್ನು ರಾಮನಿಂದ ಭಂಗಿಸಿದುದು; ಮತ್ಸ್ಯಯಂತ್ರವನ್ನು ಭೇದಿಸಬೇಕೆಂದಿದ್ದಾಗ ರಾಮನ ಕೈಯಲ್ಲಿ ಹರಧನುಸ್ಸು ಮುರಿದುಹೋದುದು; ಆದ ಕಾಲಕ್ಕಾಗಿ ರಾಮನು ಕಳವಳಿಸಿದುದು, ವಿಶ್ವಾಮಿತ್ರರು ಉಪದೇಶಿಸಿ ಸಂತವಿಟ್ಟುದು; ಸ್ವಯಂವರ ಮಂಟಪದಲ್ಲಿ ಸೋತುಹೋದ ರಾವಣನು, ದುರ್ಮಂತ್ರಿ ಪ್ರಹಸ್ತನ ಪ್ರೇರಣೆಯಂತೆ ಪರಶುರಾಮನ ಬಳಿಗೆ ಹೋಗುವುದು; ಅವನನ್ನು ಸುಳ್ಳು ಸುಳ್ಳು ಮಾತುಗಳಿಂದ ಸಿಟ್ಟಿಗೆಬ್ಬಿಸಿ ರಾಮನೊಂದಿಗೆ ಕಾದಾಡಲು ಕಳುಹಿದುದು ಮೊದಲಾದ ಎಲ್ಲ ಕತೆಯೂ ನಾವೀನ್ಯದಿಂದ ತುಂಬಿದೆ.

ಪರಶುರಾಮನನ್ನು ಪರಾಜಿತನನ್ನಾಗಿ ಮಾಡಿ ಅಯೋಧ್ಯೆಗೆ ಮರಳಿದಮೇಲೆ, ರಾಮ ಲಕ್ಷ್ಮಣರು ವನವಾಸಕ್ಕೆ ಹೋಗುವ ವರೆಗಿನ ಕತೆ ಈ ಕಾವ್ಯನಾಟಕದ ಮೂರನೆಯ ಅಂಕ. ಈ ಕತೆಯಲ್ಲಿ ಬರುವ ಮಂಥರೆ ದಶರಥನಿಂದ ಪರಾಜಿತನಾದ ಒಬ್ಬ ರಕ್ಕಸ. ರಾಯನ ಮಗಳು ಸೇಡನ್ನು ತೀರಿಸಿಕೊಳ್ಳಬೇಕೆಂದು ಸಂತಾಪದಿಂದ ತಿರುಗುತ್ತಿರುವ ಅಕೆ, ಪ್ರಹಸ್ತನ ಹಸ್ತಕಳಾಗಿ ಅಯೋಧ್ಯೆಯ ಅರಮನೆಯನ್ನು ಸೇರಿರುವಳು. ಕೈಕೇಯಿಯ ಮನಸ್ಸನ್ನು ಕೆಡಿಸಿ ರಾಮನನ್ನು ವನವಾಸದ ನೆಪದಿಂದ ದಕ್ಷಿಣಾಪಥಕ್ಕಟ್ಟಿಸಿ, ತಮ್ಮ ಅಳವಿನಲ್ಲಿ ಒಂದು ಅವನನ್ನೂ ಅವನ ಹೆಂಡತಿಯನ್ನೂ ಬಲೆಯಲ್ಲಿ ಹಿಡಿಯಬೇಕೆಂದು ಪ್ರಹಸ್ತನ ಹಂಚಿಕೆ. ಈ ಹಂಚಿಕೆ ಸಾಧಿಸಿತು. ರಾಮ-ಲಕ್ಷ್ಮಣರು ವನವಾಸಕ್ಕೆ ಹೊರಟರು. ಇಲ್ಲಿಗೆ ಈ ಪುಸ್ತಕವು, ಸವನೀತ ರಾಮಾಯಣದ ಪೃಥಮಭಾಂಡವಾಗಿ ಕೊನೆಗೊಳ್ಳುವುದು. ಈ ಕೊನೆ, ದ್ವಿತೀಯ ಭಾಂಡವು ಯಾವಾಗ ಬೊರೆತೀತೆಂಬ ಕುತೂಹಲವನ್ನು ರಸಿಕರಲ್ಲಿ ಕೆರಳಿಸಿಬಿಡದು.

ಭಾಷಾಬಂಧ ತುಂಬ ಬಿಗುಹಿನದಾದರೂ ಕತೆಗಾರಿಕೆ ಸರಸವಾಗಿ ಹರಿದಿರುವುದು. ಋಷಿಗಳ ಸಭೆಯಲ್ಲಿಯ ವಾಲ್ಮೀಕಿಯ ಮಾತು, ಪರಶುರಾಮ-ರಾಮರ ಯುದ್ಧ ಕಾಲದಲ್ಲಿಯ ಅವರಿಬ್ಬರ ಮಾತು, ಕೌಶಿಕನ ಸಿಡಿನುಡಿಗಳು ಇವೆಲ್ಲ ರಸಕೇಂದ್ರಗಳಾಗಿರುವವು. ವಾಚಕರನ್ನು ಕೆರಳಿಸಿ ಮೆಚ್ಚಿಸುವುವು, ಕಂಬನಿಗರೆಯಿಸಿ ಮೆಚ್ಚಿಸುವುವು, ಮೈಜುಮ್ಮೆನ್ನಿಸಿ ಮೆಚ್ಚಿಸುವುವು.

ಈ ಕತೆಯಲ್ಲಿಯ ರಾವಣ ರಾಕ್ಷಸನಲ್ಲ; ರಾಮಲಕ್ಷ್ಮಣರು ದೇವರಲ್ಲ; ಮುನಿಗಳು ಮನುಷ್ಯಾತೀತರಲ್ಲ. ಎಲ್ಲರೂ ಮಾನವರು. ಎಲ್ಲರೂ ತ್ರಿವಿಧ ಸುಖ-ದುಃಖಗಳ ಕೋಟಲೆಗೆ ಸಿಕ್ಕಿನಗುವವರು, ಅಳುವವರು. ಎಂತಲೆ ಎಲ್ಲ ಪಾತ್ರಗಳ ಜೀವನದಲ್ಲಿಯೂ ನಮ್ಮ ಜೀವನಭಾಗವನ್ನು ನಾವು ಕಂಡು, ಆನಂದ ಪಡುತ್ತೇವೆ, ಅಳುತ್ತೇವೆ, ನಗುತ್ತೇವೆ. ಕಾವ್ಯದಲ್ಲಿರಬೇಕಾದ ಮುಖ್ಯಗುಣಗಳಲ್ಲಿ ಇದೊಂದು. ಬಂಧದ ಬಿಗುಹು ಇನ್ನಿಷ್ಟು ಸಡಿಲುಗೊಂಡಿದ್ದರೆ ಜನಸಾಮಾನ್ಯರಿಗೂ ಈ ಕಾವ್ಯದ ಸ್ವಾರಸ್ಯ ಸುಲಭವಾಗಿ ತಿಳಿಯಬಹುದಾಗಿದ್ದಿತು. ಕನ್ನಡದಲ್ಲಿಯ ಹಳೆಯ ಕತೆಯನ್ನೊಳಗೊಂಡ ಹೊಸಮಾದರಿಯ ಹಳಗನ್ನಡ ಕೃತಿಯಿದೊಂದು. ಎಲ್ಲರೂ ಇದನ್ನೋದಲೆ ಬೇಕು. ಕೃತಿಯ ಮುಂದಣ ಭಾಗ ಬೇಗನೆ ಸಿಕ್ಕುವುದಕ್ಕೆ ನೆರವಾಗಬೇಕು.

೮೦. ರಾಗಿಣಿ

(ಕವನಸಂಗ್ರಹ)

ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟ ಎಂ. ಎ. ಇಂಟರ್‌ಮೀಡಿಯೆಟ್ ಕಾಲೇಜ್ ತುಮಕೂರು ಅವರಿಂದ ರಚಿತವಾದುದು.

ಇದರಲ್ಲಿ ಶ್ರೀ. ಪರಮೇಶ್ವರ ಭಟ್ಟರ ಬೇರೆ ಬೇರೆ ೩೦ ಕವನಗಳು ಸಂಗ್ರಹಿತವಾಗಿರುವುವು. ಇವುಗಳಲ್ಲಿ ಕೊನೆಯ ನಾಲ್ಕನ್ನು ಬಿಟ್ಟರೆ ಮಿಕ್ಕ ಕವನಗಳನ್ನೆಲ್ಲ ಭಾವಗೀತಗಳ ಗುಂಪಿಗೇ ಸೇರಿಸಬಹುದಾಗಿದೆ. ಕೊನೆಯ ನಾಲ್ಕರಲ್ಲಿಯ ಮೊದಲಿನ ಮೂರು, ಸನ್ನಿವೇಶದಿಂದ ಪ್ರೇರಿತವಾದ ನಿಡುಗವನಗಳು. ನಾಲ್ಕನೆಯದಾದ 'ಮಾಜಯ್ಯ' ಎಂಬುದು ಕಥನಕವನ; ಸರಳರಗಳೆಯಲ್ಲಿದೆ. ಸುಪ್ರಸಿದ್ಧ ಆಂಗ್ಲ ಕವಿಯಾದ ವರ್ಡ್ಸ್‌ವರ್ತ್‌ನ Michael ಕವನದ ಭಾವಾನುವಾದವಿದು. ಭಾವಗೀತ ಬಾಹುಲ್ಯವಿದ್ದುದರಿಂದಲೆ ಈ ಸಂಗ್ರಹದ ಆದಿಯಲ್ಲಿ ಕವಿಗಳು ಬರೆದ 'ಸನ್ನಿಸುಡಿ' ಯಲ್ಲಿ, 'ಭಾವಗೀತ' ಎಂದರೆ ಏನೆಂಬುದನ್ನು ತಿಳುಹುವ ಮಾತುಗಳೇ ಮುಖ್ಯವಾದುವುಗಳಾಗಿವೆ. ಇವರು ಭಾವಗೀತಗಳ ಉದ್ದೇಶ-ಪ್ರಯೋಜನಗಳನ್ನು ಕುರಿತು ಹೀಗೆ ಹೇಳಿದ್ದಾರೆ:

"ಚಿರಂತನ ಧ್ಯಾನಶೀಲನಾದ ಕವಿಯೊಬ್ಬನ ಪ್ರಬಲವಾದ ಅನುಭವಗಳ ಅನಿವಾರ್ಯವಾದ ಪ್ರಕಟನಸ್ವರೂಪವೇ ಉತ್ತಮವಾದ ಕಾವ್ಯವೆಂದು ಹೇಳುವುದಾದರೆ, ಅವುಗಳಲ್ಲಿ ಅತಿಮುಖ್ಯವಾದ ಒಂದು ಗುಂಪು ಈ ಭಾವಗೀತಗಳು. ಕವಿ ತನ್ನ ಹೃದಯದೊಳಗಣ ಅನುಭವವೇದ್ಯವಾದ ಕಾವ್ಯ-ನೋವುಗಳನ್ನು, ನೋಲುಗೆಲವುಗಳನ್ನು, ಏಳು-ಬೀಳುಗಳನ್ನು,

ಸುಖ ದುಃಖಗಳನ್ನು ನೇರವಾಗಿ ತೀವ್ರವಾಗಿ ಮತ್ತೊಂದು ಹೃದಯಕ್ಕೆ ಹರಿಯಿಸುವ ಸಾಧನಗಳೆಂಬಂತೆ ಈ ಭಾವಗೀತಗಳನ್ನು ರಚಿಸುತ್ತಾನೆ..''

ಪ್ರಸ್ತುತ ಸಂಗ್ರಹದಲ್ಲಿದ್ದ ಭಾವಗೀತಗಳಲ್ಲಿ 'ಪ್ರಕೃತಿಯ ಸೃಷ್ಟಿಸೌಂದರ್ಯಗಳನ್ನು ನೋಡಿ ಮನಸೋತಂದು ಬರುವ ಪ್ರಚೋದನೆ'ಯಿಂದ ಪ್ರೇರಿತವಾದುವು ಕೆಲವು ಇವೆ. 'ತಾನು ಬದುಕಿ ಬಾಳುವ ಸಮಾಜದಿಂದ, ಜೀವನದಿಂದ ಒದಗಿಬರುವ ಸಂಸ್ಕಾರರೂಪವಾದ ಪ್ರಚೋದನೆ'ಯಿಂದ ಪ್ರೇರಿತವಾದುವು ಇನ್ನು ಕೆಲವು ಇವೆ.

ವಿಧವಿಧದ ಭಾವಸಂವೇದನೆಯನ್ನು ಸ್ಪಷ್ಟವಾಗಿ ಚಿತ್ರಿಸುವ ಸುಂದರವಾದ ವಾಣಿಯು ಸರ್ತನದ ಒಂದೊಂದು ರೀತಿಯೆಂದರೆ ಒಂದೊಂದು ಭಾವಗೀತ. ಮನುಷ್ಯನಿದ್ದಲ್ಲಿ ಹೃದಯವಿರುವುದು, ಹೃದಯವಿರುವಲ್ಲಿ ಭಾವೋತ್ಪತ್ತಿಯಿರುವುದು, ಭಾವೋತ್ಪತ್ತಿಯಿರುವಲ್ಲಿ ರಸಸಂವೇದನೆ ಇರುವುದು ಸಹಜಸಿದ್ಧವಿಷಯವೆ ಸರಿ; ಆದರೆ ಈ ಸಂವೇದನೆಯ ಸತ್ಯಸ್ವರೂಪವನ್ನು ತಿಳಿದುಕೊಂಡು, ರಮಣೀಯಾರ್ಥದಿಂದ ಕೂಡಿದ ಉಚಿತಭಾಷೆಯಲ್ಲಿ ಅದನ್ನು ಮೂಡಿಸಿ ತೋರಿಸಲಿಕ್ಕೆ, ಮಾನವನಿಗೊಂದು ವಿಶಿಷ್ಟವಾದ ಸಂಸ್ಕಾರದ ಆವಶ್ಯಕತೆಯಿರುತ್ತದೆ. ಪ್ರಕ್ಷುಬ್ಧವಾದ ಸಾಗರದಲ್ಲಿ ಕಲ್ಲೊಂದನ್ನು ಬಿಗೆದರೆ, ಅದರ ಆಘಾತದಿಂದೆದ್ದ ತರಂಗಗಳನ್ನು ವಿಂಗಡಿಸಿ ತೋರಿಸುವುದು ಯಾರಿಂದ ಸಾಧ್ಯವಾದೀತು. ಅದೇ ಶಾಂತವಾದ ಸರೋವರವೊಂದರಲ್ಲಿ ಕಲ್ಲೊಂದನ್ನು ಜೆಲ್ಲಿದರೆ, ಆ ಕಲ್ಲು ಎಲ್ಲಿ ಬಿದ್ದಿತೆಂಬುದು ನಮಗೆ ಗೊತ್ತಾಗುವುದು; ಅದರಿಂದುಂಟಾದ ತರಂಗಾವರ್ತಮಾಲೆಯು ಚಿತ್ರ ನಮಗೆ ಗೋಚರವಾಗುವುದು. ಅದರ ಸೌಂದರ್ಯ ನಮ್ಮ ಮನಸ್ಸನ್ನು ರಂಜಿಸುವುದು. ಅದರಂತೆಯೆ ವಿಕ್ಷೇಪಕಶಕ್ತಿಯ ಮೂಲಕ ಯಾವಾಗಲೂ ಉಲ್ಲೋಲ ಕಲ್ಲೋಲವಾಗಿರುವ ಮನಸ್ಸಿನಲ್ಲಿ, ಭಾವಗೀತಗಳಿಗೆ ಪ್ರಚೋದಕವಾದ ಸೃಷ್ಟಿಸೌಂದರ್ಯ ವಿಷಯವೂ, ಸಾಮಾಜಿಕ ಸತ್ಯಾನುಭವದ ವಿಷಯವೂ ಹೆಚ್ಚಿನ ಭಾವತರಂಗಗಳನ್ನು ಹೇಗೆ ಎಬ್ಬಿಸಬಲ್ಲವು? ಹಾಗೆ ಎಬ್ಬಿಸಿದರೂ ಆ ತರಂಗದ ಮರ್ಮವನ್ನು ಅವನು ಅರಿತುಕೊಳ್ಳುವ ಬಗೆ ಹೇಗೆ? ಆದುದರಿಂದಲೆ ಭಾವಗೀತಗಳ ಉದ್ಗಮಕ್ಕೆ ಶಾಂತವಾದ ಹೃದಯದ ಆವಶ್ಯಕತೆಯುಂಟು. ಅಂತಹ ಹೃದಯಶಾಂತಿಗೆ ವಿಶಿಷ್ಟವಾದ ಸಂಸ್ಕೃತಿ-ಸನ್ನಿವೇಶಗಳ ಸಂಯೋಗದ ಅಗತ್ಯವುಂಟು. ಶಾಂತಹೃದಯದಲ್ಲೆದ್ದ ಅನುಭಾವದ ಅಲೆಗಳು ಸ್ಪಷ್ಟವಾದುವುಗಳಿರುವುವ. ಭಾಷಾಪ್ರಭುತ್ವ-ಪ್ರತಿಭಾಪ್ರಭುತ್ವ-ಕಲ್ಪಕತೆಗಳು ಸಾಕಷ್ಟಿರುವ ಕವಿ, ತನ್ನ ಕೃತಿಯ 'ರೆಕಾರ್ಡ್'



ನಲ್ಲಿ ಆ ಅಲೆಗಳನ್ನು ಚೆನ್ನಾಗಿ ಹಿಡಿದಿಡಲು ಶಕ್ತನಾಗುವನು. ಇವೆಲ್ಲ ಗುಣಗಳಿಲ್ಲದವನ ಭಾವಗೀತಗಳು ಕೇವಲ ಅನುಕರಣೆಯ ಆಭಾಸಗಳಾಗಿ ಪರಿಣಮಿಸುವುವು; ಇಲ್ಲವೆ ನೀರಸವಾದ ಮಾತಿನ ಮಾಲೆಗಳಾಗಿ ಪರಿಣಮಿಸುವುವ. ಈ ಒರೆಗಲ್ಲಿಗೆ ತಿಕ್ಕಿ ನೋಡಿದರೆ ಇದರಲ್ಲಿಯ 'ಹಾಡು' 'ಬೈಗಿನ ನಸುಗತ್ತಲೆ ಹೊತ್ತು' 'ಹಳೆಯಗೀತ' 'ರಾಗಿಣಿ' 'ಒಂದು ಹಾಡು' 'ರಂಜದ ಹೂವು' 'ಬಿದಿಗೆಯ ಸಂಜೆ' 'ದಿನಾವಸಾನ' 'ವ್ಯಾಕುಲದಲ್ಲಿ' 'ಮರುನುಡಿ' 'ಭಾವಗೀತೆ' ಎಂಬುವು ಒಳ್ಳೆಯ ಭಾವಗೀತಗಳೆಂದು ಯಾರೂ ಒಪ್ಪಿಕೊಳ್ಳಬಹುದು. ಭಾವಗೀತೆಯೆಂದರೇನೆಂಬುದನ್ನು ಚೆನ್ನಾಗಿ ಅರಿತ ಶ್ರೀ. ಪರಮೇಶ್ವರಭಟ್ಟರು, 'ನಾವು ನಲಿವ' 'ನಗುಮೊಗ ತೋರಮ್ಮ' 'ನೋಡು ಹುಣಿಮೆ ಜೆಂದಿರಂ' ಎಂಬ ಸಾಮಾನ್ಯ ಕವನಗಳನ್ನು ಈ ಕವನಸಂಗ್ರಹದಲ್ಲಿ ಏಕೆ ಪ್ರಕಟಿಸಿರುವರೋ ಕಾಣೆವು. ಇವರ ಒಳ್ಳೆಯ ಭಾವಗೀತಗಳಲ್ಲಿ ಕಾಣುತ್ತಿರುವ ಅನ್ಯೋಕ್ತಿ-ರೂಪಕಗಳ ನಿಲಾಸವು ಔಚಿತ್ಯಪೂರ್ಣವಾದುದಾಗಿದೆ. ಶಬ್ದದ ನಾದ-ನೃತ್ಯಗಳೂ ಸೊಗಸಾಗಿವೆ. ನಿಡುಗವಿತೆಗಳಾದ 'ದೇವರಾಯನ ದುರ್ಗ' 'ವಿಜಯನಗರದ ಗಿಣಿ' ಎಂಬುವುಗಳಲ್ಲಿ ದೇಶಾಭಿಮಾನ ಮೂಲಕವಾದ ಉತ್ಸಾಹ-ಕರುಣೆಗಳು ಮೊಗದೋರುತ್ತಲಿದ್ದಂತೆ 'ಕಾಜಾಣ' ಎಂಬುದರಲ್ಲಿ ಮಲೆನಾಡಿನ ಸೌಂದರ್ಯದರ್ಶನದ ಉತ್ಕಟತೆ ತಲೆಯಿಕ್ಕುತ್ತಿದೆ. 'ಮಾಚಯ್ಯ'ನ ಕತೆಯನ್ನು ಹೇಳುವ ಸರಳರಗಳೆಯ ಭಾಷೆ ಸೊಗಸಾಗಿದೆ. ಸರಳರಗಳೆಯಲ್ಲಿಯೆ ಮುನ್ನುಡಿ ಬರೆದ ಶ್ರೀ. ಕೆ. ಏ. ಪುಟ್ಟಪ್ಪನವರು 'ಸುಳಿದಳಿರೆಲೆಯ ಪೀಪಿ' ಎಂದು ಈ ಕವಿಯ ಕೃತಿಗೆ ಉಪಮೆಯನ್ನು ಕೊಟ್ಟು, ಮುಂದೆ ಹೀಗೆ ಬರೆದಿದ್ದಾರೆ:

'ಪೀಪೀಪಿ ಪೀಪೀಪಿ ಎಂದೆಲೆಯ ಪೀಪಿಯಂ
ಮನದಣಿಯೆ ಊದಿ, ಮಲೆಯಮ್ಮನಿಗೆ ತಾನೂ
ಅಕ್ಕರೆಯ ಮಗುವೆಂಬ ಹಕ್ಕನಾಸ್ವಾದಿಸುತ
ನಲಿದು ತೊಳಲುವನುಸಿರು ಸೋಲ್ವನ್ನೆಗಂ!'

ಈ 'ಸುಳಿದಳಿರೆಲೆಯ ಪೀಪಿ'ಯಲ್ಲಿ ಕೊಳಲಿನ ಇಂಚರವೂ ವೀಣೆಯ ನಿಕ್ವಣಿತವೂ ಆಗಾಗ ಅಲ್ಲಲ್ಲಿ ಕೇಳದೆ ಇರದು. ಶ್ರೀ. ಪರಮೇಶ್ವರಭಟ್ಟರು ತಮ್ಮ 'ಪೀಪಿ'ಯನ್ನು 'ಉಸಿರು ಸೋಲ್ವನ್ನೆಗಂ' ಹೀಗೆಯೆ ಊದುತ್ತಲಿರಲೆಂದು ನಾವು ಮನವಾರೆ ಹಾರೈಸುವೆವು. ಈ ಗೀತ ಸಂಗ್ರಹವನ್ನು ಎಲ್ಲರೂ ಓದಿನೋಡಬೇಕು.

—ಬಿ. ಪಾ. ಸಾ ರಾವ್.

ಸಾದರ ಸ್ವೀಕಾರ

೯೪. **ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಲಿಯ ೩೭ನೆಯ** (೧೯೩೯) ವಾರ್ಷಿಕ ವರದಿ. ಡೆ. ಅ. ೪೧ ಪುಟಗಳು.

ಈ ಸಂಸ್ಥೆ ಮೊಗವೀರ ಸಮಾಜದ ಉದ್ಧಾರಕ್ಕಾಗಿ ಹಲವು ವಿಧದಿಂದ ಕಾರ್ಯ ಮಾಡುತ್ತಿರುವುದಲ್ಲದೆ, ಮುಂಬಯಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳನ್ನೂ ಒಂದು ಹೈಸ್ಕೂಲನ್ನೂ ನಡೆಯಿಸಿ, ಕನ್ನಡ ಸಂಸ್ಕೃತಿಯ ಪ್ರಚಾರವನ್ನು ಮಾಡುತ್ತಿರುವುದು ಸಂತೋಷದ ಸಂಗತಿ. ತನ್ನ ಈ ವರದಿಯ ವರ್ಷದಲ್ಲಿ ಈ ಸಂಸ್ಥೆಯು ೨೩ ವಿದ್ಯಾರ್ಥಿಗಳಿಗೆ ೧೧೫೬-೦-೦ ಗಳನ್ನು ವಿದ್ಯಾರ್ಥಿ ವೇತನಕ್ಕಾಗಿ ಸಲ್ಲಿಸಿದೆ. ವರದಿಯ ವರ್ಷದ ಕೊನೆಯಲ್ಲಿ ರಿಜರ್ವ್‌ಫಂಡು ಮೂಲಧನ ಸೇರಿ ೨೬೫೯-೬-೫ ಗಳಷ್ಟು ಕೈಯಲ್ಲಿದೆ. ೧೯೨೧ರಲ್ಲಿ ಕೇವಲ ೨೦ ವಿದ್ಯಾರ್ಥಿಗಳು ಇದ್ದ ಇವರ ಸ್ಕೂಲಿನಲ್ಲಿ, ಈಗ ೪೦೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವರು. ಮೊಗವೀರ ವ್ಯವಸ್ಥಾಪಕ-ಮಂಡಲಿಯು ಸಂಸ್ಕೃತಿಪ್ರಚಾರದ ಬಗೆಗೆ ನಡೆಯಿಸಿದ ಬಗೆಬಗೆಯ ಕಾರ್ಯಗಳು ಮುಂಬಯಿಯಲ್ಲಿ ವಾಸಿಸುವ ಮಿಕ್ಕ ಕನ್ನಡಕುಲದವರಿಗೂ ಆದರ್ಶನೀಯವಾಗಿವೆ.

೯೫. **ಶರಣಸಂದೇಶ** (ವಾರಪತ್ರಿಕೆಯ ಹಿಂದೂ ಮಹಾಸಭೆಯ ವಿಶೇಷ-ಸಂಚಿಕೆ): ಸಂಪಾದಕರು ಶ್ರೀಮಾನ್ ಹರ್ಡೇಕರ ಮಂಜಪ್ಪಣ್ಣನವರು, ಆಲಪಾಟ್ಟಿ. ಡೆ. ೧೦೮ ಪುಟ. ಬೆಲೆ ೦-೨-೦.

ಹಿಂದೂಮಹಾಸಭೆಯ ರಾಜಕೀಯ ತತ್ತ್ವಜ್ಞಾನವನ್ನೂ ಸಾಮಾಜಿಕ ತತ್ತ್ವಜ್ಞಾನವನ್ನೂ ಕುರಿತು ಬರೆದ— ಹಿಂದೂ ಮಹಾಸಭೆಯ—ಧುರೀಣರನೇಕರ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಕರ್ನಾಟಕದಲ್ಲಿ ಹಿಂದೂಮಹಾಸಭೆಯ ವಿಚಾರಗಳನ್ನು ಎತ್ತಿ ಹಿಡಿಯುವ ಪತ್ರಿಕೆಯೆಂದರೆ 'ಶರಣಸಂದೇಶ' ಒಂದೇ ಒಂದು. ಮತಾಭಿಮಾನದ ಉಗ್ರತೆಯಿಂದ ನಾಡಿನಲ್ಲಿ ಒಂದು ಪಕ್ಷ ಅವಿವೇಕದಿಂದ ವರ್ತಿಸುತ್ತಿರುವಾಗ, ಅದನ್ನು ಎದುರಿಸಿ ಅವಿವೇಕ ಮೂಲವಾದ ದುರಭಿಮಾನವನ್ನು ತಗ್ಗಿಸಲು ಇನ್ನೊಂದು ಬಲಿಷ್ಠವಾದ ಪಕ್ಷದ ಅವಶ್ಯಕತೆಯಿದೆ. ಬಲಿಷ್ಠರು ಬಲಹೀನರಿದ್ದವರನ್ನು ತುಳಿದು ಬಿಡುತ್ತಾರೆ. ಎಲ್ಲರೂ ಬಲಿಷ್ಠರೆ ಆಗಿದ್ದರೆ, ಶತ್ರುತ್ವಕ್ಕಿಂತ ಮಿತ್ರತ್ವ ಕ್ಕೆಯೆ ಹೆಚ್ಚು ಅಪ್ಪದವಿರುವುದು. ಇಂದು ಮುಸಲ್ಮಾನರು ಕೇವಲ ಮತದ ಅಂಧಶ್ರದ್ಧೆಯಿಂದ ಸಂಘಟಿತರಾಗಿದ್ದಾರೇನೋ ಸರಿಯೆ! ಈ ಸಂಘಟನೆಯ ಬಲ ಅವರನ್ನು ದಿನದಿನಕ್ಕೂ ರಾಜಸವೃತ್ತಿಯತ್ತ ಒಯ್ಯುತ್ತಲಿದೆ. ರಾಜಸವೃತ್ತಿಯನ್ನು ರಾಜಸವೃತ್ತಿಯಿಂದಲೆ ಎದುರಿಸಬೇಕಾಗುವುದು. ಹಿಂದುಜನರನ್ನು ನೋಡಿದರೆ ಅವರಿಂದು ತಮ್ಮನ್ನು ಸಾತ್ತ್ವಿಕ ವೃತ್ತಿಯವರೆಂದು ಹೇಳಿಕೊಳ್ಳುತ್ತಲಿರುವರು; ಇದು ಶುದ್ಧ ಮೋಸ. ಹಿಂದುಗಳೆಲ್ಲ ಹೊರಳುತ್ತಲಿರುವುದು, ಇಂದು ತಮಃಕೂಪದಲ್ಲಿ, ನಿದ್ದೆಯ ನರಕದಲ್ಲಿ! ಇವರೀಗ ಎಚ್ಚತ್ತು ಕೈಕಾಲು ಆಲ್ಲಾಡಿಸಿ ರಜೋವೃತ್ತಿಯನ್ನು ಅವಲಂಬಿಸದಿದ್ದರೆ ಗತಿಯಿಲ್ಲ. ಸದ್ಯ ಹೊಡೆದಾಡುವ ಪ್ರಸಂಗವೇನೂ ಇಲ್ಲವಾದರೂ ಮುಸಲ್ಮಾನರಂತೆ ಗಟ್ಟಿಯಾಗಿ ಕೂಗಿಕೊಳ್ಳುವ ಗಂಡುತನವನ್ನಾದರೂ ಹಿಂದುಗಳು ಇಂದು ಸಂಪಾದಿಸಿಕೊಳ್ಳಬೇಕಾಗಿದೆ. ಕನ್ನಡ ಹಿಂದುಗಳಿಗೆ ಇದನ್ನು ಬಿತ್ತಿಬಿತ್ತಿ ಹೇಳಿ ಮನವರಿಕೆ ಮಾಡಿಕೊಡುವ ಕೆಲಸ ಮಾಡುತ್ತಲಿರುವ 'ಶರಣಸಂದೇಶ' ಅಭಿನಂದನೆಗೆ ತಕ್ಕುದಾಗಿದೆ.

೯೬. **ನವಯುಗ** (ವಾರಪತ್ರಿಕೆಯ ಸಂಕ್ರಮಣದ ವಿಶೇಷ ಸಂಚಿಕೆ), ಸಂಪಾದಕರು ಶ್ರೀಮಾನ್ ಕೆ. ಕೆ. ಸೆಟ್ಟಿ ಮತ್ತು ಶ್ರೀಮಾನ್ ಕೆ. ಎಚ್. ಸೆಟ್ಟಿ ಅವರು. ಉಡುಪಿ. ಕ್ರೌ. ೧೮೪ ಪುಟ. ಬೆಲೆ ೦-೪-೦.

ಕನ್ನಡನಾಡಿನ ಹಲವು ಸುಪ್ರಸಿದ್ಧ ಲೇಖಕ-ಲೇಖಿಕೆಯರ ಕಥೆ, ಕವನ, ಪ್ರಬಂಧ, ನಾಟಕ, ವಿನೋದಲೇಖನಗಳಿಂದ ಈ ಸಂಚಿಕೆಯು ತುಂಬಿದೆ. ಹಲವು ಚಿತ್ರಗಳು ಪ್ರಕಟವಾಗಿವೆ.

೯೭. **ನಾಡಹಾಡುಗಳು** (ಕವನ-ಸಂಗ್ರಹ) ಬೇರೆ ಬೇರೆ ಕವಿಗಳು ರಚಿಸಿದುವು. ಸಂಪಾದಕರು ಶ್ರೀ. ಬುಲ್ಲಿ ಬಿಂದುಮಾಧವರು. ಧಾರವಾಡದ ವಿಂಚಿನ ಬಳ್ಳಿಯ ೩ನೆಯ ವರ್ಷದ ೪ನೆಯ ಕುಡಿ. ಕ್ರೌ. ಅ. ೧೨೦+೧೬೮ ಪುಟಗಳು. ಬೆಲೆ ೧-೦-೦.

೯೮. **ರಾಯಚೂರ ವಿಜಯ** (ಪದ್ಯಮಯ ಐತಿಹಾಸಿಕ ಕಥೆ) ಲೇಖಕರು ಶ್ರೀ. ನಾ. ವ್ಯಾ. ಕುಲಕರ್ಣಿ ಬಿ. ಎ. ಮರಾಳ ಗುಡ್ಡ, ಧಾರವಾಡ ಅವರು. ಡೆ. ಅ. ೧೦ ಪುಟ. ಬೆಲೆ ೦-೧-೦. ಲೇಖಕರೇ ಪ್ರಕಾಶಕರು.

ವಿಜಯನಗರದ ವೀರನರಪತಿ ಕೃಷ್ಣರಾಜ, ರಾಯಚೂರು ಕೋಟೆಗೆ ಮುತ್ತಿಗೆ ಹಾಕಿ ವಿಜಯಹೊಂದಿದ ಕಥಾಭಾಗವನ್ನು, ಶ್ರೀ. ಕುಲಕರ್ಣಿಯವರು ವಾರ್ಧಿಕ ಷಟ್ಪದಿಯಲ್ಲಿ ಪವಣಿಸಿ ಹೇಳಿದ್ದಾರೆ. ಪದ್ಯದ ಭಾಷೆ ಸುಲಭವಾಗಿದೆ. ಪ್ರಾಸನಿಯಮದ್ಕೋಸ್ಕರ ವರ, ಪರಮ, ಉರೆ, ಏಗೆ, ಸಲ್ಲೆ ಮೊದಲಾದ ಪೂರಕಪದಗಳ ಉಪಯೋಗ ಸಾಕಷ್ಟಾಗಿದೆ. ೩ನೆಯ ಪದ್ಯದಲ್ಲಿ 'ಬೆರಾರ್' ಎಂಬ ಶಬ್ದವನ್ನು ಬಳಸಲಿಕ್ಕೆ ಹಿಂದೆ ಮುಂದೆ ನೋಡದಿದ್ದ ಲೇಖಕರು ಪ್ರಾಸಸಂರಕ್ಷಣೆಗಾಗಿ ಏತಕ್ಕೆ ತ್ರಾಸ ಪಟ್ಟದ್ದಾರೊ ಏನೊ!

೯೯. **ಆಹುತಿ ಇತ್ಯಾದಿ ಕಥೆಗಳು** (ಕಥಾಸಂಗ್ರಹ) ಶ್ರೀಮತಿ ಸರಸ್ವತೀ ಬಾಯಿ ರಾಜವಾಡೆಯವರು ಬರೆದು, ಉಡುಪಿಯಲ್ಲಿ ಪ್ರಕಟಿಸಿದ ಪುಸ್ತಕ. ಕ್ರೌ. ಆ. ೧೧೦ ಪುಟ; ಬೆಲೆ ೦-೧೦-೦.

೧೦೦. **ದರ್ಪಚೂರ್ಣ** (ಅನುವಾದಿತ ಕಥೆ) ಬಂಗಾಲದ ಸುಪ್ರಸಿದ್ಧ ಸಾಹಿತ್ಯಿಕ ಶ್ರೀ ಶರಚ್ಚಂದ್ರ ಚಟ್ಟೋಪಾಧ್ಯಾಯರವರ ನಿಡುಗತೆಯೊಂದರ ಅನುವಾದ. ಶ್ರೀ. ಸಿ. ಕೆ. ನಾಗರಾಜರಾವ್ ಬೆಂಗಳೂರು ಅವರು ಅನುವಾದಿಸಿದ್ದು, ಬೆಂಗಳೂರಿನ ಸತ್ಯಶೋಧನ ಪುಸ್ತಕಭಂಡಾರದವರು ಪ್ರಕಟಿಸಿದ್ದಾರೆ. ಕ್ರೌ. ಅ. ೮೮ ಪುಟ; ಬೆಲೆ ೦-೮-೦.

೧೯೧. **ಹುಬ್ಬಳ್ಳಿ ಗೆಜೆಟ್** (ಜನ್ಮದಿನದ ವಿಶೇಷಸಂಚಿಕೆ) ಸಂಪಾದಕರು ಡಾ. ಎನ್. ಎಸ್. ಹರಡೀಕರ, ಹುಬ್ಬಳ್ಳಿ. ಪ್ರಕಾಶಕರು ಶ್ರೀ. ಟಿ. ಕೆ. ನಾಡಕರ್ಣಿ, ಫ್ರೆಂಡ್ಸ್‌ಕಾಟೇಜ್ ಹುಬ್ಬಳ್ಳಿ. ಕ್ರೌ. ಫೋಲಿಯೊ ೬೦ ಪುಟ. ಬೆಲೆ ೦-೨-೦.

ಯಾವ ಕಾರ್ಯವನ್ನೇ ಕೈಕೊಳ್ಳಲಿ, ಡಾ. ಹರಡೀಕರರು ತುಂಬ ಉತ್ಕಟಭಾವದಿಂದ ಕೈಕೊಳ್ಳುವರು; ಕ್ರಮವರಿತು ಕಾರ್ಯ ಮಾಡುವರು. ಭಾಷೆ, ಪ್ರಾಂತ, ಮತ ಪಂಥ, ಜಾತಿ ಇವುಗಳ ಯಾವ ಮೈಲಿಗೆಯೂ ಡಾಕ್ಟರರ ಕರ್ತವ್ಯಬುದ್ಧಿಗೆ ಅಗಿಲ್ಲ. ಆದುದರಿಂದಲೆ ಅವರು ಎಲ್ಲಿದ್ದರೂ ತಮ್ಮ ನೆರೆ-ಹೊರೆ ನೆಮ್ಮದಿಯಿಂದಿರಬೇಕೆಂದು ಯಾವಾಗಲೂ ಹವಣಿಸುತ್ತಿರುವರು. 'ವಾಲೆಂಟಿಯರ್' ಎಂಬ ಇಂಗ್ಲಿಷ್ ಮಾಸಪತ್ರಿಕೆ, ಸೇವಾದಳ ಇವುಗಳ ಮೂಲಕ ಅಖಿಲಭಾರತದ ಸೇವಾಕಾರ್ಯ ಮಾಡಿದಷ್ಟು ಉತ್ಕಟತೆಯಿಂದಲೆ ಅವರಿಂದು 'ಹುಬ್ಬಳ್ಳಿ ಗಜೆಟ್'ನ ಮೂಲಕ ಹುಬ್ಬಳ್ಳಿಯ ಜನತೆಯ ಸೇವೆಯನ್ನು ಮಾಡುತ್ತಲಿದ್ದಾರೆ. ಡಾಕ್ಟರರ 'ಹುಬ್ಬಳ್ಳಿ ಗಜೆಟು' ಮ್ಯುನಿಸಿಪಾಲಿಟಿಗಳಿಗೆ ತಕ್ಕ ಅಂಕುಶದಂತಿದ್ದು ಕರ್ತವ್ಯದ ಬಗ್ಗೆ ಅವುಗಳಿಗೆ ಎಚ್ಚರನ್ನು ಕೊಡುತ್ತದೆ; ಜನತೆಗೆ ಸ್ಥಾನಿಕಸಂಸ್ಥೆಯಿಂದ ಪಡೆದುಕೊಳ್ಳಬಹುದಾದ ಅನುಕೂಲತೆಗಳ ವಿಷಯಕ ಹಕ್ಕುಗಳನ್ನೂ ನಾಗರಿಕರ ಧರ್ಮಗಳನ್ನೂ ತಿಳುಹುತ್ತದೆ. ಪ್ರಸ್ತುತ ವಿಶೇಷಸಂಚಿಕೆಯಲ್ಲಿ, ಮ್ಯುನಿಸಿಪಾಲಿಟಿಯ ವಿಚಾರವಾಗಿ ಅನೇಕ ಮಹನೀಯರು ಬರೆದ ಉಪಯುಕ್ತ ಲೇಖನಗಳು ಹಲವು ಇವೆ. ಎಲ್ಲರೂ ಓದಿಕೊಳ್ಳಬೇಕಾದುದು.

೧೯೨ **ಮುರುಘರಾಜೇಂದ್ರ ವಿಜಯ** (ಸಚಿತ್ರ ಜೀವನಚರಿತ್ರೆ) ಲೇಖಕರು ಕರ್ನಾಟಕ ವಿದ್ಯಾವಿನೋದಿ ಶ್ರೀ. ಜಿ. ಎಚ್. ಹೊಸೂರ. ಲೇಖಕರೆ ಪ್ರಕಾಶಕರು. ಕ್ರೌ. ಅ. ೧೪೮ ಪುಟ; ಬೆಲೆ ೧-೪-೦.

೧೯೩ **ಆಸಾಮಿಯಾ ಕಥೆಗಳು** (ಬೇರೆ ಬೇರೆ ಆಸಾಮಿಯಾ ಕತೆಗಾರರ ಕತೆಗಳ ಸಂಗ್ರಹ) ಧಾರವಾಡದ ಸಾಧನಮುದ್ರಣಾಲಯದ ಭಾರತೀಯ ಕಥಾವಳಿಯ ೨೨ನೆಯ ಪ್ರಕಟನೆಯಿದು. ಕ್ರೌ. ಅ. ೯೨ ಪುಟ. ಬೆಲೆ ೦-೮-೦.

೧೯೪ **ಪರ್ಣಕುಟಿ** (ಪರಿಚಯಾತ್ಮಕ ಗ್ರಂಥ) ಶ್ರೀಮಾನ್ ಸಿದ್ದವ್ವನ ಹಳ್ಳಿ ಕೃಷ್ಣಶರ್ಮರು ಬರೆದುದು. ಧಾರವಾಡದ ಸಾಧನ ಮುದ್ರಣಾಲಯದ ಪ್ರಕಟನೆ. ಕ್ರೌ. ಅ. ೬೦ಲ ಪುಟ; ಬೆಲೆ ೧-೮-೦.

೧೯೫ **ಕುಂಕುಮ** (ಕಥಾಸಂಗ್ರಹ) ಶ್ರೀ. ಎಸ್. ಎಂ. ಮುನಿವೆಂಕಟಪ್ಪ ಎಂ. ಎ. C/o ಅರಮನೆ ಹಣ್ಣಿನ ಕಂಟ್ರಾಕ್ಟರು, ೧೪ ತಿಗುಳರ ಪೇಟೆ ಬೆಂಗಳೂರು ಸಿಟಿ ಅವರು ಬರೆದು ತಾವೆ ಪ್ರಕಟಿಸಿದುದು. ಕ್ರೌ. ಅ. ೮೦ ಪುಟ; ಬೆಲೆ ೦-೬-೦.

೧೯೬ **ಶಿಶುವಿಹಾರಗಳು** (ಪರಿಚಯಾತ್ಮಕ ಗ್ರಂಥ) ಬರೆದವರು ಶ್ರೀಮಾನ್ ಸಿ. ರಂಗಾಚಾರ್ ಬಿ. ಎಸ್‌ಸಿ., ಎಂ. ಎಡ್. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಯ ೨೩ನೆಯ ಗ್ರಂಥ. ಫೂ. ಕ್ಯಾ. ಅ. ೬೪ ಪುಟ. ಬೆಲೆ ೦-೨-೦.

೧೯೭ **ಯುದ್ಧ ಸುದ್ದಿ ಪತ್ರಿಕೆ**. ಮುಧೋಳ ಪಬ್ಲಿಸಿಟಿ ಆಫೀಸಿನಿಂದ ಹೊರಡುವ (ಸೈಕ್ಲೊಸ್ಟೈಲ್) ವಾರಪತ್ರಿಕೆ. ಸಂಪಾದಕರು ಶ್ರೀ. ವ್ಹಿ. ಸಿ. ಗಾರವಾಡ ಎಂ. ಎ. ಎಲ್. ಎಲ್. ಬಿ., ಪಬ್ಲಿಸಿಟಿ ಆಫೀಸರ್ ಮುಧೋಳ. ಫೂಲ್‌ಸ್ಕ್ಯಾಪ್ ಫೊಲಿಯೊ ೨ ಪುಟಗಳು.

ಮುಧೋಳ ಸಂಸ್ಥಾನದಲ್ಲಿಯ ಜನಸಾಮಾನ್ಯರಿಗೆ, ಯುದ್ಧದ ಸುದ್ದಿಗಳನ್ನು ತಿಳುಹುವ ಉದ್ದೇಶದಿಂದ ಹೊರಟಿದೆ. ಧಾರವಾಡದ 'ಯುದ್ಧವಾರ್ತೆ' ಮುಂಬಯಿ ನಗರದ 'ಸಮಾಚಾರ' ಇವುಗಳ ಮಾದರಿಯಲ್ಲಿದೆ. ಪುಕ್ಕಟೆ ಸಿಕ್ಕುವುದು.

೧೯೮ **ಶ್ರೀಮಾನಸ ಸ್ಮೃತಿಗಳು** (ವೇದಾಂತ ಗ್ರಂಥ): ಶ್ರೀಮದ್ವೈಚಿ ವೆಂಕಟರಾಮಾರ್ಯ ಕೃತ ಸಂಸ್ಕೃತ ಗ್ರಂಥ; ಕನ್ನಡ ಭಾವಾನುವಾದ ಸಹಿತ. ಅನುವಾದಕರು ಶ್ರೀ ಆರ್. ಎಸ್ ಶೇಷಗಿರಿರಾವ್; ಪ್ರಕಾಶಕರು ಜೊಕ್ಕಾನ ಹಳ್ಳಿ ಜಹಗೀರ್‌ದಾರ್ ಶ್ರೀಮಾನ್ ಸಿ. ಕೃಷ್ಣರಾಯರು, ಆದವಾನಿ (ಎಂ. ಎಸ್. ೨೦).

೧೯೯ **ಡೋಂಗರೇ ಬಾಲಾಪ್ಯತದ ಕ್ಯಾಲೆಂಡರು**: ತಾಯಿ ಮತ್ತು ಮಗುವಿನ —ಮೂರು ಬಣ್ಣಗಳ—ಮುದ್ದಾದ ಚಿತ್ರದಿಂದ ಕೂಡಿದೆ.

೬೪ನೆಯ ಪುಟದಿಂದ ಮುಂದುವರಿದುದು.

'ಅಲ್ಲ, ಅಕುವರ್ಡ್—೮ ಕೊರ್ಡು—ಅಂದರೆ ಕೊರಡಿನಷ್ಟು ಕಠಿನ, ಕರ್ಕಶ ಎಂದರ್ಥ. ಕರ್ನಾಟಕದ ಗಡಿಯನ್ನೆಟ್ಟಿಂದು ಯಾವ ಭಾಗವನ್ನು ಅಂದುಕೊಳ್ಳುವರೋ ಅಲ್ಲಿಯದೆಲ್ಲವೂ ಗಂಡಿನಂತಿ ಒರಟು—ಇಲ್ಲಿಯ ಅಂದರೆ ಹೆಣ್ಣುಮೆಟ್ಟಿಸದೆಲ್ಲವೂ..'

'ಎಲ್ಲವೂ..?'

'ಗಜಗತಿ, ಮುಂದಮ..

'ಹಾಂ, ಹಾಂ!'

'ಅಂದರೆ ಈ ಚಿಕ್ಕಿಷ್ಟ ಸ್ವಪ್ನಪದ ಪರಿವುಷ್ಟವಾದ ನಮ್ಮ ಮಾತೇ ಮಾತು; ಉಳಿದ ಮಾತು-ಗೀತು ಒಡಕು ಮಡಕೆಯ ತೂತು!'

'ವೆರಿಗುಡ್!'

'ಅಂದರೆ ಈ ಉತ್ತಮ ಭಾಷಿಕೆಯಲ್ಲಿಲ್ಲದ ಪತ್ರಿಕೆಗಳ ಕಡೆಗೆ ಕಡೆಯ ನೋಟ—ಆದರಿಂದ ಕಡಮೆ ಮಾರಾಟ; ೮ ಮೇಲೆ ಸಂಪಾದಕರು ಕಳುಹಿಸದಿದ್ದರೆ ನನಗೆ ಪತ್ರಿಕೆಯ ಅಭಾವದ ನೋಟ!'

'ಆಂ, ಆಂ, ಇಲ್ಲಿಗೆ..!'

ಏ ಸೂ: ಇದೊಂದು ಸತ್ಯಾನುಭವದ ಸಂಗತಿ. ಕನ್ನಡ ಪತ್ರಿಕೆಗಳು ಅಖಿಲ ಕರ್ನಾಟಕದಲ್ಲಿ ಯಾಕೆ ಸರ್ವಜನಪ್ರಿಯವಾಗುವುದಿಲ್ಲವೆಂಬುದಕ್ಕೆ ಇದೊಂದು ಪ್ರತ್ಯಕ್ಷ ಪ್ರಮಾಣ.

—ಸಂಪಾದಕ.

ವಿಮೋದಾರರ ಹಿತಕ್ಕಾಗಿ:---

ಜೀವವಿಮೆಯು ಯಾರಿಗೆ ಸುಖಕರವು ?

ಶ್ರೀ. ಎಮ್. ಪಿ. ಭಾಗವತ, ಮುಂಬಯಿ

★

ಏಜಂಟರ ಉತ್ತೇಜನಕರವಾದ ಮಾತುಗಳನ್ನು ಕೇಳಿ, ತಮ್ಮ ಆರ್ಥಿಕಪರಿಸ್ಥಿತಿಯ ವಿಚಾರವನ್ನೇನೂ ಮನಸ್ಸಿನಲ್ಲಿ ತಾರದೆ, ಅನೇಕರು ಜೀವವಿಮೆ ಮಾಡಲು ಸಿದ್ಧರಾಗುವರು. ಪ್ರೀಮಿಯಂ ತುಂಬಬೇಕಾದ ಸಂದರ್ಭ ಬಂದಾಗ ಕೈ ಕೈ ಹಿಸುಕಿಕೊಳ್ಳುವರು. ಬಂದದ್ದು ಸಂಸಾರಕ್ಕೇ ಸಾಲದಿರುವಂತಹ ಪರಿಸ್ಥಿತಿ ಇದ್ದವರು, ಜೀವವಿಮೆ ಮಾಡುವ ಗೊಡವೆಗೆ ಎಂದೂ ಹೋಗಲಾಗದು!

★

ತಮ್ಮ ಆಯುಷ್ಯದ ವಿಮೆಯನ್ನಿಳಿಸುವುದು ಯಾರಿಗೇ ಆದರೂ ಹಿತಕರವೆಂಬುದು ನಿಜವಾದರೂ, ಅದರಲ್ಲಿ ತಾರತಮ್ಯವು ಇದ್ದೇ ಇದೆ. ಆದುದರಿಂದ ವಿಮೋಜ್ಟುಗಳು ಮೊದಲಿಗೇ ಸಂಪೂರ್ಣ ವಿಚಾರದಿಂದ ಮುಂದುವರಿದರೆ, ಆರ್ಥಿಕಸಮತೂಲಕವಾಗಿ ಮುಂದೆ ಬರಬಹುದಾದ ಅನಾವಶ್ಯಕ ತೊಂದರೆಗಳನ್ನು ತಪ್ಪಿಸಿಕೊಳ್ಳಲು ಬಲುಮಟ್ಟಿಗೆ ಸಾಧ್ಯವಾಗಬಹುದು.

" ಇತರ ದೇಶಗಳ ಮಾನದಮೇಲಿಂದ ನಮ್ಮ ಹಿಂದೂದೇಶದಲ್ಲಿ ವಿಮೆಯ ಪ್ರಚಾರವು ಬಹಳವಾಗಿ ಕಡಿಮೆ " ಎಂದು ಕೆಲವರು ಬಾರಿಬಾರಿಗೂ ಹೇಳುತ್ತಿರುವುದು ಕೇಳಿಬರುತ್ತಿರುತ್ತದೆ. ಆದರೆ ಇಂತಹ ಪರಿಸ್ಥಿತಿಯು ಬುಡದಲ್ಲಿ ಏನಿರಬಹುದೆಂಬುದರ ವಿಚಾರವಾಹುವ ಪ್ರೇರಣೆಯು ಅನೇಕರಿಗೆ ಆಗುವುದೇ ಇಲ್ಲ.

" ನಮ್ಮ ದೇಶದ ಜನರಿಗೆ ವಿಮೆಯ ಮಹತ್ತ್ವವೇ ತಿಳಿಯುವುದಿಲ್ಲ " ಎನ್ನುತ್ತಿರುವವರೂ ಅನೇಕರಿದ್ದಾರೆ. ಇಂತಹ ಜನರೂ ನಿಜವಾದ ಪರಿಸ್ಥಿತಿಯ ವಿಚಾರಮಾಡುವುದಿಲ್ಲ. " ಗತಾನುಗತಿಕೋ ಲೋಕಃ " ಎಂಬ ಉಕ್ತಿಯಂತೆ, ಇನ್ನೊಬ್ಬರಾಡಿದ್ದನ್ನು ತಿರುತಿರುಗಿ ಆಡುತ್ತಿರುವುದೇ ಇವರ ಕೆಲಸ.

" ಜನರಿಗೆ ವಿಮೆಯ ಮಹತ್ತ್ವವು ತಿಳಿಯುವುದಿಲ್ಲ " ಎನ್ನುವ ದಿನಗಳು ಈಗ ಉಳಿದಿಲ್ಲವೆಂದೇ ಹೇಳಬಹುದು. ಸರ್ವಸಾಧಾರಣವಾಗಿ ವಿಮೆಯನ್ನಿಳಿಸುವ ಶಕ್ತಿಯುಳ್ಳ ಜನರಿಗೆ, ಈಗಿನ ಕಾಲದಲ್ಲಿ ಅದರ ಮಹತ್ತ್ವವು ತಿಳಿದೇ ತಿಳಿಯುತ್ತದೆ. ಇದರ ಹೊರತು ಶಕ್ತಿಯಿಲ್ಲದವರಲ್ಲಿಯೂ ಅದನ್ನು ತಿಳಿಯುವವರು ಅನೇಕರಿದ್ದಾರೆ.

" ಒಂದುವೇಳೆ ದುರ್ದೈವವಶಾತ್ ನೀವು ನಾಳೆಗೇ ಕೈಲಾಸವಾಸಿಯಾದರೆ? " ಎಂಬ ಪದ್ಧತಿಯ ಪ್ರವಚನವನ್ನು ಆರಂಭಿಸುವ ಪ್ರಸಂಗವೇ ಈಗ ಬರುವುದು ಕಡಿಮೆ. ಎಂದರೆ, ಇಷ್ಟರ ಮಟ್ಟಿಗಾದರೂ ಬಹುಜನ ಸಮಾಜವು ಸುಧಾರಿಸಿಯಿದೆ. ಇನ್ನೂ ವಿಮೆಯ ಹೆಸರೇ ತಿಳಿಯದ ಕೆಲವು ಅಶಿಕ್ಷಿತರು ಸಮಾಜದಲ್ಲಿ ಇರುವುದೇನೂ ಆಶ್ಚರ್ಯವಲ್ಲದಿದ್ದರೂ, ಇಂತಹ ಜನರಿಗೆ ದೋಷವನ್ನು ಕೊಡುವುದರಲ್ಲಿ ಎನೂ ಅರ್ಥವಿಲ್ಲ.

" ನಮ್ಮ ದೇಶದ ಜನರು ಸಾಕಷ್ಟು ವಿಮೆ ಇಳಿಸುವುದಿಲ್ಲ " ಮತ್ತು " ನಮ್ಮ ದೇಶದಲ್ಲಿ ವಿಮೆಯ ಪ್ರಮಾಣವು ಬಹಳ ಕಡಿಮೆಯಿದೆ " ಈ ತರದ ಆಕ್ಷೇಪಣೆಗಳ ಬಗ್ಗೆ ವಿಚಾರಮಾಡಿದರೆ, ಇಂತಹ ಆಕ್ಷೇಪಗಳು ಬಹ್ವಂಶದಿಂದ ನಿರರ್ಥಕವೇ ಇರುವುವೆನ್ನಬಹುದು. ಯಾಕೆಂದರೆ, ನಮ್ಮ ದೇಶದ ಜನರ ಆರ್ಥಿಕ ಪರಿಸ್ಥಿತಿ ಮತ್ತು ವೈಯಕ್ತಿಕ ಉತ್ಪನ್ನದ ಪ್ರಮಾಣ ಇವುಗಳನ್ನು ಸರಿಯಾಗಿ ಲಕ್ಷ್ಯಕ್ಕೆ ತಂದರೆ, ಈ ಪ್ರಕಾರದ ಆಕ್ಷೇಪಣೆಗಳಿಗೆ ಅವಕಾಶವೇ ದೊರೆಯದು.

ಒಳ್ಳೆಯ ಸಮಾಧಾನಕರವಾದ ಸಾಂಪತ್ತಿಕ ಪರಿಸ್ಥಿತಿಯುಳ್ಳ ಜನರಿಗೆ, ತಮ್ಮ ಯೋಗ್ಯತೆಗನುಸಾರವಾಗಿ ಸಾಕಷ್ಟು ವಿಮೆ ಇಳಿಸಲು ಭಾರನಿಸಿಸಲಾರದೆಂಬುದು ಸ್ಪಷ್ಟವೇ ಇದೆ. ಇಂತಹ ಜನರ ವರ್ಗದಲ್ಲಿ ದೊಡ್ಡ ದೊಡ್ಡ ಶ್ರೇಷ್ಠಿಗಳು, ಸಾಹುಕಾರರು ಮೊದಲಾದವರು ಬರುತ್ತಾರೆ. ಈ ತರಗತಿಯ ಜನರು, ಬೇಡವೆಂದರೂ ತಮ್ಮ ಯೋಗ್ಯತೆಗನುಗುಣವಾಗಿ ದೊಡ್ಡ ದೊಡ್ಡ ರಕಮುಗಳ ವಿಮೆಯನ್ನಿಳಿಸುವವರೇ. ಇದರಂತೆ ಹೆಚ್ಚಾಗಿ ಇನ್‌ಕಮ್‌ಟ್ಯಾಕ್ಸ್ ಕೊಡುತ್ತಿರುವವರು ಸಹ ಆದಷ್ಟರ ಮಟ್ಟಿಗೆ ಹೆಚ್ಚು ರಕಮಿನ ವಿಮೆಯನ್ನಿಳಿಸಲು ಪ್ರಯತ್ನಮಾಡುವುದು ಸಹಜವಾಗಿದೆ. ಯಾಕೆಂದರೆ, ವಿಮೆಯ ಪ್ರೀಮಿಯಮ್ಮಿನ ರಕಮಿಗೆ ಟ್ಯಾಕ್ಸ್ ಬೀಳುವದಿಲ್ಲ. ಹೀಗಿರುವುದರಿಂದ ಈ ವರ್ಗದ

ಜನರ ವಿಷಯಕ್ಕೆ ಆಕ್ಷೇಪಿಸಲು ಕಾರಣವೇ ಇಲ್ಲ, ಮತ್ತು ಇವರಿಗೇ ಜೀವವಿಮೆಯು ಹೆಚ್ಚಿನ ಪ್ರಮಾಣದಿಂದ ಸುಖಕರವೂ ಹಿತಕರವೂ ಆಗುತ್ತದೆ.

ಇನ್ನು ದೊಡ್ಡ ದೊಡ್ಡ ಸಂಬಳ ದೊರೆಯುತ್ತಿರುವ ಸರಕಾರೀ ಮೊದಲಾದ ಖಾತರಿಯ ಮತ್ತು ಶಾಶ್ವತದ ನವುಕರಿಗಳನ್ನು ಮಾಡುವವರ ವಿಷಯವಾಗಿ ವಿಚಾರಮಾಡಿದ', ಅವರಿಗೂ ವಿಮೆಯು ಸುಖಕರವೂ ಹಿತಕರವೂ ಆಗುತ್ತದೆಯೆನ್ನಲು ಅಡ್ಡಿಯಿಲ್ಲ; ಯಾಕೆಂದರೆ, ಈ ತರಗತಿಯ ಜನರಿಗೆ ಕಾಲಕ್ಕೆ ಸರಿಯಾಗಿ ಪ್ರೀಮಿಯಮ್ಮುಗಳನ್ನು ತುಂಬಲು ಸುಲಭವಾಗುತ್ತದೆಯಲ್ಲದೆ, ವಿಮಾ ಕಂಪನಿಗಳ ನಿಷ್ಠುರವಾದ ನಿಯಮಗಳಿಂದಾಗುವ ಕಷ್ಟವೂ ಇವರಿಗೆ ಆಗುವ ಸಂಭವವು ತೀರ ಕಡಿಮೆ.

ಇನ್ನುಳಿದ ಕಡಿಮೆ ಉತ್ಪನ್ನದವರ ತರಗತಿಯ ವಿಷಯಕ್ಕೆ ವಿಚಾರಮಾಡಿದರೆ, ಈ ತರಗತಿಯಲ್ಲಿ ವಿಮೇದಾರರ ಸಂಖ್ಯೆಯು ಬಹಳ ದೊಡ್ಡದಿದೆ. ನಿಯಮಿತವಾದ ಉತ್ಪನ್ನವಿರುವವರು ಎಂದರೆ ಬಹುಶಃ ಸಾಮಾನ್ಯ ಸರಕಾರೀ ಮೊದಲಾದ ಖಾತ್ರಿಯ ನವುಕರಿಗಳನ್ನು ಮಾಡುತ್ತಿರುವವರು ಈ ತರಗತಿಯಲ್ಲಿ ಬರುತ್ತಾರೆ. ತಮ್ಮ ಯೋಗ್ಯತೆಗನುಸಾರವಾಗಿ ಸಣ್ಣ ಪ್ರಮಾಣದಲ್ಲಿ ವಿಮೆಗಳನ್ನು ಕೊಂಡುಕೊಳ್ಳುವವರೇ ಈ ತರಗತಿಯಲ್ಲಿ ಹೆಚ್ಚಿನ ಬಹುದು. ಇಂತಹ ಜನರಿಗೆ ಉತ್ಪನ್ನವು ಕಡಿಮೆಯಿದ್ದು ಇತರ ಕೊರತೆಗಳು ಹೆಚ್ಚಿರುವುದರಿಂದ, ಇವರಿಗೆ ವಿಮೆ ಇಳಿಸುವ ಕೆಲಸವು ಸ್ವಾಭಾವಿಕವಾಗಿಯೇ ಸ್ವಲ್ಪಮಟ್ಟಿಗೆ ಜಡವೆನಿಸಿದರೆ ಆಶ್ಚರ್ಯವೇನೂ ಅಲ್ಲ. ಇಂತಹರಲ್ಲನೇಕರು ಕೇವಲ ಕರ್ತವ್ಯಬುದ್ಧಿಯಿಂದಲೇ ಕಷ್ಟ ಸಹಿಸಿಯಾದರೂ ವಿಮೆಯನ್ನಿಳಿಸಿ ಇಡುತ್ತಾರೆ.

ಮೇಲೆ ಬರೆದ ತರಗತಿಗಳ ಜನರಿಗೆ, ವಿಮೆಯನ್ನಿಳಿಸಿದುದರ ಕಾರಣವಾಗಿ ಮುಂದೆ ಯಾವುದೊಂದು ತೊಂದರೆಯೂ ಬರುವ ಸಂಭವವೇ ಇಲ್ಲವೆಂದರೂ ತಪ್ಪೆನಿಸಲಿಕ್ಕಿಲ್ಲ. ವಿಮಾಕಂಪನಿಗಳ ಕಷ್ಟಕರವಾದ ನಿಯಮಗಳಿಂದಾಗಬಹುದಾದ ತೊಂದರೆಗಳನ್ನು ಅನುಭವಿಸುವ ಪ್ರಸಂಗವು ಬಹುಶಃ ಮುಂದೆ ವರ್ಣಿಸಿದ ಅತಿ ಕಡಿಮೆಯ ತರಗತಿಯ ಅಥವಾ ಸರಕಾರೀ ನವುಕರಿಗಳಲ್ಲಿಯೂ ಬಹಳ ಕಡಿಮೆ ಸಂಬಳಗಳನ್ನು ದುಡಿಯುತ್ತಿರುವ ಜನರ ಮೇಲೆಯೆ ಬರುತ್ತಿರುತ್ತದೆ.

ನಿಕೃಷ್ಟವಾದ ಆರ್ಥಿಕಪರಿಸ್ಥಿತಿಯೇ ಇದಕ್ಕೆ ಕಾರಣವಲ್ಲದೆ ಇನ್ನೇನೂ ಇಲ್ಲ. ವಿಮೆಯನ್ನಿಳಿಸುವುದರಿಂದ, ವಿಮೇದಾರರು ಮುಂದೆ ಕೈಲಾಸಕ್ಕೆ ಹೋದ ಮೇಲೆ, ಖಂಡಿತವಾಗಿಯೂ ವಾರಸದಾರರ ಕಲ್ಯಾಣವಾಗುವುದೆಂಬುದರಲ್ಲಿ ತಿಲಮಾತ್ರ ಸಂದೇಹವಿಲ್ಲವಾದರೂ, ಕಷ್ಟತರವಾದ ಆರ್ಥಿಕಪರಿಸ್ಥಿತಿಯ ಮೂಲಕವಾಗಿಯೂ, ವಿಮಾಕಂಪನಿಗಳ ನಿಷ್ಠುರವಾದ ನಡತೆಗಳ ಮೂಲಕವಾಗಿಯೂ ಸ್ವತಃ ವಿಮೆ ಇಳಿಸುವವರಿಗೆ ಯಾವ ತರದ ತೊಂದರೆಗಳನ್ನನುಭವಿಸಬೇಕಾಗುವುದೆಂಬುದರ ವಿಚಾರಮಾಡಿದರೆ, ವಿಮೆಯು ನಿಜವಾಗಿಯೂ ಯಾರಿಗೆ ಸುಖಕರವೆಂಬ ಪ್ರಶ್ನೆಗೆ ಉತ್ತರವು ತಾನಾಗಿಯೇ ಹೊಳೆಯದಿರದು.

ಈಗ ಇರುವುದು ಒಂದೇ ತರಗತಿ. ಸಾಂಪತ್ತಿಕದೃಷ್ಟಿಯಿಂದ ಅದು ಅತಿ ಕಡಿಮೆಯದೆಂದು ಹೇಳಬಹುದು. ಈ ತರಗತಿಯ ಜನರೆಂದರೆ ಅಶಾಶ್ವತವಾದ ಖಾಸಗೀ ನವುಕರಿಗಳನ್ನು ಮಾಡುವವರು. ಇವರು ವಿಮೆಯನ್ನಿಳಿಸುವ ಪೂರ್ವದಲ್ಲಿ ಜೆನ್ನಾಗಿ ವಿಚಾರಮಾಡತಕ್ಕದ್ದು. ಯಾಕೆಂದರೆ ಇವರಿಗೆ ವಿಮೆಯು ಸುಖಕರವಾಗುವ ಆಶೆಯೇ ಬಹಳ ಕಡಿಮೆ. ಇಂತಹ ಜನರು ವಿಮೆಯನ್ನಿಳಿಸಿ ಬೇಗನೇ ಸತ್ತುಹೋದರೆ ಮಾತ್ರ, ಅವರ ವಾರಸದಾರರಿಗೆ ಮುಂದೆ ಲಾಭವಾಗುವುದು. ಹಾಗಲ್ಲದೆ ವಿಮೆಯನ್ನಿಳಿಸಿ ಮುಂದೆ ಬಹುಕಾಲ ಬದುಕಿ ಉಳಿದು, ದುರ್ದೈವವಶಾತ್ ವಿಮಾಕಂಪನಿಗಳ ನಿಯಮದಂತೆ ಯೋಗ್ಯಕಾಲಕ್ಕೆ ಪ್ರೀಮಿಯಂ ಕೊಡುವ ಶಕ್ತಿಯುಳಿಯದಿದ್ದರೆ, ಎಂತಹ ಕಠಿಸವಾದ ಪ್ರಸಂಗವು ಬರಬಹುದೆಂಬುದರ ವಿಚಾರವನ್ನು ಮಾಡುವಂತೆ ಇದೆ. ಇಂತಹ ಪ್ರಸಂಗಗಳಲ್ಲಿ ವಿಮೇದಾರರಿಗೂ ಅವರ ವಾರಸದಾರರಿಗೂ ಅಪಾರವಾದ ನಷ್ಟವು ಸಂಭವಿಸುವುದಲ್ಲದೆ, ಜೀವಿಸಿರುವ ವಿಮೇದಾರರಿಗೆ ಮುಂದೆ ವಿಮೆಯ ಪೂರ್ಣ ರಕಮು ದೊರೆಯುವ ಆಶೆಯೂ ಅಳಿದು ಹೋಗಿ, ಅನರ್ಥವಾಗುವ ಸಂಭವವಿದೆ. ಆದುದರಿಂದ ಈ ತರಗತಿಯ ಜನರಿಗೆ ವಿಮೆಯು ಸುಖಕರವಾಗುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಇಂತಹ ಜನರು ವಿಮೆಯ ವಾಯಿದೆಯು ಪೂರ್ಣವಾಗುವವರೆಗೆ ತಾವು ಬದುಕಿ ಉಳಿದರೆ, ತಪ್ಪದೇ ಯೋಗ್ಯವೇಳೆಗೆ ಪ್ರೀಮಿಯಂ

ಅಚ್ಚಿನಲ್ಲಿದೆ! ● ಬೇಗನೆ ಬರಲಿದೆ!!

ಗೀತಾಗಾಂಭೀರ್ಯ

ಎಂಬ

ಶ್ರೀಕೃಷ್ಣನ ಸಮಾಜಧರ್ಮ

ಕ್ರೌನ್ ಅಷ್ಟಪತ್ರದ ಸುಮಾರು ೩೫೦-೪೦೦ ಪುಟ

★

.....ಬರೆದವರು : ಶ್ರೀರಂಗ'.....

[ಪ್ರೊ. ಆರ್. ವಿ. ಜಾಗಿರದಾರ, ಎಂ. ಎ. (ಲಂಡನ್)
ಕರ್ನಾಟಕ ಕಾಲೇಜ ಧಾರವಾಡ.]

ಏಪ್ರಿಲ್ ೩೦ರ ಒಳಗಾಗಿ ಒಂದು ರೂಪಾಯಿಯನ್ನು ಕೊಟ್ಟು ಹೆಸರನ್ನು ರಜಿಸ್ಟರ್ ಮಾಡುವವರಿಗೆ

ಸಾದಾ ಪ್ರತಿ ೨-೮-೦ (ಅಂಚೆ ವೆಚ್ಚ ಸೇರಿ)

ಕ್ಯಾಲಿಕೋ ಪ್ರತಿ ೩-೦-೦ (ಅಂಚೆ ವೆಚ್ಚ ಸೇರಿ)

ಹೀಗೆ ರಿಯಾಯತಿಯನ್ನು ತೋರಿಸಲಾಗುವುದು.

ನುಂಗಡ ಹಣವನ್ನೂ ಹೆಸರನ್ನೂ ಗ್ರಂಥಕರ್ತರ ಕಡೆಗೆ ಕಳುಹಿಸಬೇಕು.

ಕೊಡುತ್ತಿರುವ ಯೋಗ್ಯತೆಯು ತಮಗಿರುವುದರ ಖಾತ್ರಿಮಾಡಿ ಕೊಂಡವಿನಾ ವಿಮೆ ಇಳಿಸುವ ಹವ್ಯಾಸಕ್ಕೆ ಬೀಳುವುದು ಎಂದಿಗೂ ಉಚಿತವಲ್ಲ.

ಸಾಂಪತ್ತಿಕ ದೃಷ್ಟಿಯಿಂದ ತಮ್ಮ ಯೋಗ್ಯತೆಯನ್ನಳೆದು ನೋಡದೆ, ವಿಮೆ ಇಳಿಸುವ ಹವ್ಯಾಸಕ್ಕೆ ಬೀಳುವವರೂ ಅನೇಕರಿದ್ದಾರೆ. ಈ ಜನರು ಯಾವನೊಬ್ಬ ಅವಿವೇಕಿಯಾದ ಏಜಂಟನ ಮಾತಿಗೆ ಮರುಳಾಗಿ, ಮುಂದೆ ನಿಷ್ಕಾರಣವಾಗಿ ನಷ್ಟದಲ್ಲಿ ಬೀಳುತ್ತಾರೆ. ಯಾಕೆಂದರೆ, ವಿಮೆಯ ಉದ್ಯೋಗ ಮಾಡುತ್ತಿರುವುದರಲ್ಲಿ ಕೆಲವರು ವಿಮೆಯಿಂದಾಗುವ ಲಾಭಗಳ ವರ್ಣನೆಯೊಂದನ್ನೇ ಮಾಡುವರಲ್ಲದೆ, ವಿಮಾಕಂಪನಿಗಳ ಕಠಿನವಾದ ನಿಯಮಗಳ ಬಗ್ಗೆ ಸರಿಯಾಗಿ ತಿಳಿಸಿ ಹೇಳುವುದೇ ಇಲ್ಲ. ಅವರಿಗೆ ಹಾಗೆ ಮಾಡದಿದ್ದರೆ ಕೇಸುಗಳು ದೊರೆಯುವುದಕ್ಕೆ ಕಷ್ಟವಾಗುತ್ತದೆ. ಇಂತಹ ಜನರ ಉತ್ತೇಜಕ ವಾಖ್ಯಾನಗಳನ್ನು ಕೇಳಿ, ಎಂತಹವರಿಗೂ ಮೋಹವು ಉತ್ಪನ್ನವಾಗಿ, ಆ ಮೋಹಾವೇಶದಲ್ಲಿಯೇ ಜನರು ಡಾಕ್ಟರರ ಪರೀಕ್ಷೆಗೆ ಸಿದ್ಧರಾಗುತ್ತಾರೆ. ಅದಾಗಿ ವಿಮಾಪತ್ರವು ದೊರೆತ ಮೇಲೆ, ಮುಂದೆ ಮೊದಲನೆಯ ವರ್ಷದ ಸಂಪೂರ್ಣ ಪ್ರೀಮಿಯಮ್ಮನ್ನು ತೆರಲಿಕ್ಕಾಗದೆ, ವಿಮಾ ಪಾಲಿಸಿಯನ್ನು ಮುಳುಗಬಿಡುವವರೂ ಅನೇಕರಿದ್ದಾರೆ. ಕೆಲವರು ಮೊದಲನೆಯ ವರ್ಷದ ಪ್ರೀಮಿಯಂ ಮಾತ್ರ ಹೇಗಾದರೂ ತುಂಬಿ, ಮುಂದೆ ಬಟ್ಟುಬಿಡುತ್ತಾರೆ. ಯಾಕೆಂದರೆ ಆಗ ಅವರಿಗೆ **ತಮ್ಮ ಅವಿಚಾರದ ನೆನಪಾಗಿ, ಬ್ರಹ್ಮಸಾಕ್ಷಾತ್ಕಾರವಾಗುತ್ತದೆ !** ದುಡ್ಡಿನ ಕೊರತೆಯ ಮೂಲಕವಾಗಿ, ಈ ಜನರಿಗೆ ಹೊತ್ತಿಗೆ ಸರಿಯಾಗಿ ಪ್ರೀಮಿಯಂ ಕೊಡುವುದಕ್ಕೆ ಕಠಿನವಾಗುತ್ತದೆ. ಮತ್ತು ಹೀಗೆ ಹೊತ್ತು ತಪ್ಪಿ ಒಂದೇ ದಿನ ಕಳೆದರೂ ಕೂಡ ಕಂಪನಿಯವರು ತಡೆಯುವುದೇ ಇಲ್ಲ. "ನಿಮ್ಮ ಪಾಲಿಸಿಯು ರದ್ದಾಗಿದೆ; ಅದನ್ನು ಪುನಃ ಚಾಲೂ ಮಾಡುವುದಕ್ಕೆ ನೀವು ಒಳ್ಳೆಯ ಆರೋಗ್ಯದಲ್ಲಿದ್ದ ಬಗ್ಗೆ ಪುರಾವೆಯನ್ನು ಕಳಿಸಿ, ದಂಡವನ್ನು ತುಂಬಿರಿ" ಎಂದು ಕಂಪನಿಯವರ ನೋಟಿಸು ಬಂದೇ ಬರುತ್ತದೆ. ಮೊದಲೇ ದುಡ್ಡಿನ ಕೊರತೆಯಿಂದ ಪ್ರೀಮಿಯಮ್ಮಿನ ತಾರೀಖು ತಪ್ಪಿದ ಚಿಂತೆ; ಅನಂತರ ನೋಟಿಸು ಬಂದಿತೆಂಬ ಗಡಬಡಿ; ಇವುಗಳಿಂದ ವಿಮೇದಾರನು ಸ್ವಾಭಾವಿಕವಾಗಿಯೇ ಜರ್ಜರಿತನಾಗಿ ಹೋಗುವನು. ಮುಂದಾಗುವ ಲಾಭವೂ, ವೃದ್ಧಾಪ್ಯಕಾಲದ ದ್ರವ್ಯಸುಖವೂ, ಹಿಂದಿನಿಂದಾಗಬಹುದಾದ ವಾರಸದಾರರ ಹಿತವೂ ಎಲ್ಲವೂ ಸ್ವಪ್ನವತ್ತಾಗಿ; ಪರಿಣಮಿಸಿ, ವಿಮೇದಾರನು ದೊಡ್ಡ ಗೊಂದಲದಲ್ಲಿ ಬಿದ್ದುಹೋಗುತ್ತಾನೆ !

ವಿಮೆ ಇಳಿಸುವುದು ತಪ್ಪೆಂದು ಸಮಂಜಸ ವಿಚಾರದ ಮನುಷ್ಯರಾರೂ ಹೇಳುವಂತಿಲ್ಲ. ಆದರೆ ಅದು ಯಾರಿಗೆ ಸೌಖ್ಯಕರವೂ ಹಿತಕರವೂ ಆಗಬಹುದೆಂಬ ವಿಚಾರವು ಮಹತ್ತ್ವದ್ದಿದೆ. ಈ ಜಗತ್ತಿನಲ್ಲಿ ಕೊಂಡುಕೊಳ್ಳಬಹುದಾದಂತಹ ವಸ್ತುಗಳು ಅನೇಕ ಇವೆ. ಆದರೆ ಅವು ಯಾರಿಗೋಸುಗ ಮತ್ತು ಯಾರು ಅವುಗಳನ್ನು ಕೊಂಡುಕೊಳ್ಳಲು ಶಕ್ತರೆಂಬ ವಿಚಾರವನ್ನು ಮಾಡಲೇ ಬೇಕು. ಸುಖದಿಂದ ವಿಮೆ ಇಳಿಸಲು ಶಕ್ಯವಾಗದವರ ಬೆನ್ನು ಹತ್ತಿ, ಅವರನ್ನು ವಿಮೆ ಇಳಿಸುವಂತೆ ಮಾಡುವುದರಲ್ಲಿ ತಾವು ಎಷ್ಟು ದೊಡ್ಡ ತಪ್ಪು ಮಾಡುತ್ತೇವೆಂಬುದು ಅನೇಕ ಏಜಂಟರ ಲಕ್ಷ್ಯಕ್ಕೆ ಬರುವುದೇ ಇಲ್ಲ, ಮತ್ತು ಕಮಿಶನ್ ದೊರೆಕಿಸಿ ದುಡ್ಡು ಗಳಿಸುವ ಇತರ ಧಂದೆಗಳಂತೆಯೇ ಇದೂ ಒಂದೆಂಬ ವಿಚಾರದಲ್ಲಿಯೇ ಅವರು ಇರುತ್ತಾರೆ. ಆದರೆ ಈ ಧಂದೆಯು ಇತರ ಧಂದೆಗಳಿಗಿಂತ ಬೇರೆ ರೀತಿಯಾಗಿದ್ದು, ಇದರಲ್ಲಿ ತಮ್ಮ ಒಂದೇ ಒಂದು ಕಮಿಶನ್ ದೊರೆಕಿಸುವುದಕ್ಕಾಗಿ, ತಾವು ತಮ್ಮ ಗಿರಾಕಿಯನ್ನು ಹೆಚ್ಚಾಗಿ ಸಾಯುವ ತನಕ ಬಂಧಿಸುತ್ತೇವೆಂಬುದರ ವಿಚಾರವು ಏಜಂಟರಿಗೆ ಸ್ವಲ್ಪವಾದರೂ ಬೇಕೇಬೇಕು. ಕಂಪನಿಯವರು ಸಹ ಸಾಂಪತ್ತಿಕ ದೃಷ್ಟಿಯಿಂದ ಅಯೋಗ್ಯರಾದವರ ವಿಮೆಯನ್ನು ತಕ್ಕೊಳ್ಳದಂತೆ ಏಜಂಟರಿಗೆ ತಿಳಿಸಿಡುವುದು ಅತ್ಯಾವಶ್ಯಕವು. (ಕಂಪನಿಗಳು ಈ ವಿಷಯವನ್ನು ಏಜಂಟರಿಗೆ ಬಹುಶಃ ತಿಳಿಸಿಯೇ ಇರುತ್ತಾರೆ.)



ಜಪಾನಿಗಾಗಿ ಜೋಕೆ !

ಕಳೆದ ಕೆಲವು ವಾರಗಳಿಂದ ಯುದ್ಧದ ಗಾಳಿ ಪೂರ್ವಕ್ಕೆ ಬೀಸ ತೊಡಗಿದೆ. ಈ ಮೂಡಲಗಾಳಿಗಾಗಿ ಭಾರತೀಯರು ಯುದ್ಧ-ಸಂಗತಿಗಳನ್ನು ಪಥ್ಯದಂತೆ ಗ್ರಹಿಸಬೇಕಾಗಿದೆ. ಉತ್ತರ ಆಫ್ರಿಕೆಯಲ್ಲಿ ಮುಸೊಲಿನಿಗಾದ ಅಪಾರ ನಷ್ಟ ಮತ್ತು ಅಮೇರಿಕೆಯಿಂದ ಇಂಗ್ಲಂಡಕ್ಕೆ ಬರಬೇಕಾದ ಸಹಾಯದ ನಿಶ್ಚಿತತೆ—ಇವುಗಳಿಗಾಗಿ ಹಿಟ್ಲರನು ತನ್ನ ಧೋರಣವನ್ನೇ ಬದಲಾಯಿಸಬೇಕಾಯಿತು. ಮುಸೋಲಿನಿಯ ಜೀವವನ್ನು ಉಳಿಸುವುದು—ಇಂಗ್ಲಂಡದ ಜೀವವನ್ನು ಅಳಿಸುವುದು, ಇವುಗಳಲ್ಲಿ ಯಾವುದು ಮೊದಲು, ಯಾವುದಕ್ಕೆ ಹೆಚ್ಚು ಮಹತ್ತ್ವ ಎಂಬುದರ ನಿರ್ಣಯ ಹಿಟ್ಲರನಿಗೆ ತೀರ ಇತ್ತೀಚೆಗೆ ಆದಂತಿದೆ. ಎರಡನ್ನೂ ಒಂದೇ ಏಟಿಗೆ ಸಾಧಿಸಲು ಅವನೊಂದು ಯುಕ್ತಿಯನ್ನು ಹುಡುಕಿದ್ದಾನೆ. ಆ ಯುಕ್ತಿಯೆ ಜಪಾನು. ಇತ್ತೀಚೆಗೆ ಜಪಾನದ ರಾಜಕಾರಣಧುರೀಣರು ಮೇಲಿಂದ ಮೇಲೆ ತಮ್ಮ ಪರರಾಷ್ಟ್ರಧೋರಣವನ್ನು ಸಾರುತ್ತಿದ್ದಾರೆ. ಆಣೆ ಇಟ್ಟು ಅಸಂಬದ್ಧ ನುಡಿಯುತ್ತಿದ್ದಾರೆ. ಇದರ ಗೂಢವೇನು? ಸಿಂಗಾಪುರದ ಪೂರ್ವಕ್ಕೆ ಬ್ರಿಟಿಶರು ನೀರಮದ್ದು (Mine) ಗಳನ್ನು ತೋಡಿದ್ದಾರೆ; ಇದರ ಗೂಢವೇನು? ಆಸ್ಟ್ರೇಲಿಯಾದ ಮಂತ್ರಿಗಳು ಜಾಗರೂಕತೆಯನ್ನು ಪಸುತ್ತಿದ್ದಾರೆ, ಉಪದೇಶಿಸುತ್ತಿದ್ದಾರೆ; ಇದರ ಗೂಢವೇನು? ಕಲಕತ್ತೆಯ ಮೇಲೆ ದಾಳಿಯಾದರೆ ಎಲ್ಲ ಸಂರಕ್ಷಣೋಪಾಯಗಳನ್ನು ಕೈಕೊಳ್ಳಲಾಗಿದೆ ಎಂದು ಬಂಗಾಲದ ಮುಖ್ಯಮಂತ್ರಿಗಳು ಹೇಳಿದರು; ಇದರ ಸುಸಂಗತತೆ ಏನು? ಇವೆಲ್ಲ ಸಂಗತಿಗಳನ್ನು ಒಟ್ಟುಗೂಡಿಸಿ ವಿಚಾರಮಾಡಿದರೆ ತೀವ್ರದಲ್ಲಿಯೆ ಜಪಾನ ದೇಶವು ಯುದ್ಧದಲ್ಲಿ ಧುಮುಕಬಹುದು—ಎಂಬ ಸಿದ್ಧಾಂತ ಹೊರಡುವುದು.

ಬ್ರಿಟಿಶ್ ಬಲದ ಶಿಥಿಲೀಕರಣ?

ಇತ್ತೀಚೆಗೆ ಚೀನಾದೊಡನೆ ಒಪ್ಪಂದವನ್ನು ಮಾಡಿಕೊಳ್ಳಲು ಜಪಾನು ತೋರಿಸಿದ ಆತುರದಿಂದ ಮೇಲಿನ ಸಿದ್ಧಾಂತವು ಬಲಗೊಳ್ಳುವುದು. ಆದರೆ ಜಪಾನಕ್ಕೆ ಯುದ್ಧದಲ್ಲಿ ಧುಮುಕುವುದು ಅಗತ್ಯವಾಗಿದೆಯೆ—ಎಂದು ಅನೇಕರು ಸಂದೇಹ ಪಡಬಹುದು. ಅಗತ್ಯವು ಜಪಾನಿಗಿಲ್ಲ, ಜರ್ಮನಿಗಿದೆ. ಜಪಾನವು ಹಿಟ್ಲರನ ತಂತ್ರದಲ್ಲಿ ಸಿಕ್ಕಿಕೊಂಡಿದೆ, ಹಿಟ್ಲರನು ಹೇಳಿದಂತೆ ನಡೆಯಲೇ ಬೇಕಾಗುವುದು. ಸದ್ಯಕ್ಕೆ ಇಜಿಪ್ತ ಮತ್ತು ಉತ್ತರ ಆಫ್ರಿಕೆಯಲ್ಲಿ ಬ್ರಿಟಿಶ್ ಜಯವನ್ನು ಸಂಪಾದಿಸಲು ಸಾಮ್ರಾಜ್ಯಸೈನ್ಯ (Imperial forces) ವೆ ಮುಖ್ಯವಾಗಿ ಕಾರಣವಾಗಿದೆ. ಈ ಸೈನ್ಯದಲ್ಲಿ ಹೆಚ್ಚಾಗಿ ಆಸ್ಟ್ರೇಲಿಯಾ ಮತ್ತು ಹಿಂದುಸ್ತಾನದ ಸೈನಿಕದಳಗಳಿವೆ. ಉತ್ತರ ಆಫ್ರಿಕೆಯ ಭೂಮಧ್ಯಸಮುದ್ರದ ದಡವನ್ನು ಗೆದ್ದು ಅದರ ಉಪಯುಕ್ತತೆಯನ್ನು ಮಾಡಿಕೊಳ್ಳಬೇಕಾದರೆ ಈ ಸೈನ್ಯದಳಗಳು ಸಂರಕ್ಷಣೆಗಾಗಿ ಅಲ್ಲಿಯೆ ಉಳಿಯಬೇಕು. ಅವು ಹಾಗೆ ಉಳಿದುಕೊಂಡರೆ ಭೂಮಧ್ಯಸಮುದ್ರದಲ್ಲಿಯೇ ಮುಸೊಲಿನಿಯೊಡನೆ ಮುಳುಗಬೇಕಾಗುವುದು ಹಿಟ್ಲರನಿಗೆ. ಇದಕ್ಕೆ ಉಪಾಯವೆಂದರೆ ಉತ್ತರ ಆಫ್ರಿಕೆಯಲ್ಲಿ ಬ್ರಿಟಿಶ್ ಬಲವನ್ನು ಶಿಥಿಲೀಕರಿಸುವುದು. ಇತ್ತ ಜಪಾನದ ಪ್ರತಿಭಟನೆ ಹೆಚ್ಚಾದರೆ ಆಸ್ಟ್ರೇಲಿಯಾಕ್ಕೆ ಹೆಚ್ಚಿನ ಸಂರಕ್ಷಣೆ ಬೇಕಾಗಬಹುದಲ್ಲವೆ? ಆಸ್ಟ್ರೇಲಿಯಾದ ಸೈನ್ಯ, ವಿಶೇಷವಾಗಿ ಆಸ್ಟ್ರೇಲಿಯಾದ ಯುದ್ಧ-ಹಡಗಗಳು—ಇವುಗಳ ಹೆಚ್ಚು ಭಾಗ ಸ್ವದೇಶಕ್ಕೆ ಮರಳಬಹುದು. ಅದರಂತೆಯೆ ಹಿಂದುಸ್ತಾನಕ್ಕೂ ಜಪಾನದ ಹೆದರಿಕೆ ತೀರ ಸವಿಾಪವಾದುದರಿಂದ, ಹಿಂದೀ ಸೈನ್ಯವನ್ನೂ ಹೆಚ್ಚಾಗಿ ಹೊರಗೆ ಒಯ್ಯುವಂತಿಲ್ಲ. ಈ ರೀತಿ ಉತ್ತರ ಆಫ್ರಿಕೆಯಲ್ಲಿ ಕೇಂದ್ರೀಕೃತವಾದ ಸಾಮ್ರಾಜ್ಯಸೈನ್ಯದ ಬಿಗುವು, ಜಪಾನದ ಗರ್ಜನೆಗಳಿಂದ ಸಡಿಲಿಸುವಂತೆ ಮಾಡುವುದು ಹಿಟ್ಲರನ ಯುಕ್ತಿಯಾಗಿದೆ.

ಚರ್ಚಿಲ್‌ರ ಚಾತುರ್ಯ

ಆದರೆ ಇಂದು ಇಂಗ್ಲಂಡದ ನಾಯಕತ್ವವು ದೂರದರ್ಶಿತನದಲ್ಲಿ ಹೆಸರಾದ ವಿನ್‌ಸ್ಟನ್ ಚರ್ಚಿಲ್‌ರ ಕಡೆಗೆ ಇದೆ ಎಂಬುದನ್ನು ಹಿಟ್ಲರನು ಮರೆತಂತೆ ತೋರುವುದು. ಜಪಾನವು ಚೀನಾದೊಡನೆ ಅನೇಕ ವರ್ಷಗಳಿಂದ ನಡೆಯಿಸಿದ ಯುದ್ಧದ ಜೊತೆಗೆ ಯುರೋಪದ ಯುದ್ಧದಲ್ಲೂ ಬೀಳಬಹುದೆ—ಎಂಬುದು ಸಂದೇಹಾಸ್ಪದವೆ ಆಗಿದೆ. ಆದರೆ ಚರ್ಚಿಲ್‌ರು ಈ ಸಂದೇಹದ ಮೇಲೆ ವಿಶ್ವಾಸವನ್ನಿಟ್ಟಿಲ್ಲ. ಇದಕ್ಕೂ ಮುಂಚಿತವಾಗಿ ತಮ್ಮ ಧೋರಣೆಯನ್ನೂ ಧೈರ್ಯವನ್ನೂ ತೋರಿಸಲು ಸಿಂಗಾಪುರದ ಪೂರ್ವಕ್ಕೆ ನೀರಮದ್ದುಗಳನ್ನು ತೋಡಿ ಸನ್ನದ್ಧರಾಗಿದ್ದಾರೆ. ಆಸ್ಟ್ರೇಲಿಯವು ಉತ್ತರ ಆಫ್ರಿಕೆಯಿಂದ ಸೈನ್ಯವನ್ನು ಮರಳಿಸುವುದೆಂಬ ಕಲ್ಪನೆಯನ್ನು

ದೂರವಾಹಲು, ಆಸ್ಟ್ರೇಲಿಯಾದಿಂದಲೆ ಇನ್ನೂ ಸೈನಿಕರನ್ನು ಸಿಂಗಾಪೂರ—ಮಲಯಗಳಲ್ಲಿ ಸಂಗ್ರಹಿಸಿದ್ದಾರೆ. ಇದಲ್ಲದೆ ಉತ್ತರ ಆಫ್ರಿಕೆಯಲ್ಲಿ ಪೋಲಿಶ್ ಜನರ ಸೈನ್ಯವೊಂದು ಬ್ರಿಟಿಶರಿಗಾಗಿ ಹೋರಾಡಲು ಸಿದ್ಧವಾಗುತ್ತಲಿದೆ; ಜನರಲ್ ಡಿಗಾಲೆ ಇವರ 'ಸ್ವತಂತ್ರ ಫ್ರೆಂಚ್ ವೀರ' ರ ಸೈನಿಕರೂ ಸೇರುತ್ತಲಿದ್ದಾರೆ; ಅಬಿಸಿನಿಯಾದಲ್ಲಿ ಬ್ರಿಟಿಶರ ನೇತೃತ್ವದಲ್ಲಿ ಸ್ವದೇಶಿಯರ ಸೈನ್ಯ ಸಜ್ಜುಪಡೆ ನಡೆದಿದೆ. ಹೀಗಾಗಿ ಇಂಗ್ಲಂಡವು ಮುಂಚಿತವಾಗಿಯೆ ಪೂರ್ವದಲ್ಲಿಯ ಪುಂಡಾಟಿಕೆಗೆ ಇದಿರಾಗಿ ನಿಂತಿದೆ.

ಬಾಲ್ಕನದ ಬಿಕ್ಕಟ್ಟು

ಹಿಟ್ಲರನಿಗೆ ಯುರೋಪದಲ್ಲಿಯೆ ಪುಂಡಾಟಿಕೆಯನ್ನೆಬ್ಬಿಸಲು ಇನ್ನೊಂದು ಸ್ಥಾನವಿದೆ. ಅದೆಂದರೆ ಬಾಲ್ಕನದ ಭಾಗ. ಒಂದುಕಡೆ ಗ್ರೀಕರು ಇಟಲಿಯನ್ನು ಸೋಲಿಸುತ್ತಮುನ್ನುಗ್ಗುತ್ತಲಿದ್ದಾರೆ; ಇನ್ನೊಂದುಕಡೆ ತುರ್ಕಸ್ತಾನವು ದಾರಿಕಟ್ಟಿ ನಿಂತಿದೆ. ಇವೆರಡನ್ನೂ ದಾಟಲಿಕ್ಕೆ ಸಾಧ್ಯವಾದರೆ, ಮೇಲೆ ರಶಿಯಾದ ಹುಲ್ಲು ಹೊಂಚು ಹಾಕುತ್ತ ಮಾರಾಡುತ್ತಲಿದೆ. ಹಿಟ್ಲರನು ಮುಸೋಲಿನಿಗೆ ಯುರೋಪದಲ್ಲಿ ಸಹಾಯವಾಗದಿರುವುದಕ್ಕೆ ಈ ಪರಿಸ್ಥಿತಿ ಕಾರಣವಾಗಿದೆ. ಕಳೆದ ತಿಂಗಳ ಮಧ್ಯದಲ್ಲಿ ಒಂದು ಮಹತ್ತ್ವದ ಘಟನೆ ಸಂಭವಿಸಿತು. ಇದರಿಂದ ಹಿಟ್ಲರನ ಯುಕ್ತಿಗೆ ಜಯ ದೊರಕಿತು ಎಂದು ಒಂದು ತರ್ಕ; ಇಂಗ್ಲಂಡಕ್ಕೆಯೆ ಅನುಕೂಲವಾಯಿತು ಎಂಬುದಿನ್ನೊಂದು ತರ್ಕ. ಈ ಮಹತ್ತ್ವದ ಘಟನೆ ಎಂದರೆ ತುರ್ಕಸ್ತಾನ್–ಬಲ್ಗೇರಿಯಾಗಳ ಒಪ್ಪಂದ. ಈ ಒಪ್ಪಂದದ ಕರಾರುಗಳನ್ನು, ನೋಡಿದರೆ ತುರ್ಕಸ್ತಾನವು ಬ್ರಿಟಿಶರ ಸ್ನೇಹಭಾವವನ್ನು ಬಿಡಬಯಸುವುದಿಲ್ಲ ಎಂಬುದು ಸ್ಪಷ್ಟವಾಗುವುದು. ಆದರೆ ಬಾಲ್ಕನ್ ರಾಷ್ಟ್ರಗಳೆಲ್ಲ ನಾಝಿ ಆಕ್ರಮಣಕ್ಕೆ ತುತ್ತಾದರೆ. ತುರ್ಕಸ್ತಾನವು ಯಾವ ಧೋರಣವನ್ನು ಸ್ವೀಕರಿಸಬಹುದು ಎಂಬುದು ಸ್ಪಷ್ಟವಿಲ್ಲ. ಬ್ರಿಟಿಶರಿಗೆ ವಿರೋಧಕ ವೃತ್ತಿಯನ್ನು ತಳೆಯುವುದಿಲ್ಲ ಎಂಬುದು ನಿಶ್ಚಿತವಿದ್ದರೂ, ಹಿಟ್ಲರನ ಆಕ್ರಮಣ ವೃತ್ತಿಯನ್ನು ತಡೆಯಲು ಯುದ್ಧದಲ್ಲಿ ತುರ್ಕಸ್ತಾನವು ಬೀಳಬಹುದೆ– ಎಂಬುದೆ ಈಗ ಮಹತ್ತ್ವದ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾದರೆ, ರಶಿಯಾದ ಧೋರಣವನ್ನು ತಿಳಿದುಕೊಳ್ಳಬೇಕಾಗುವುದು. ಆದರೆ ಇಂದಿನ ರಶಿಯಾಕ್ಕೆ ಸ್ವಾರ್ಥಸಾಧನೆಯ ಹೊರತಾಗಿ ಬೇರೊಂದು ಧೋರಣವಿದ್ದಂತೆ ತೋರುವುದಿಲ್ಲ; ಇದ್ದರೆ ಅದನ್ನು ಕಾರ್ಯರಂಗಕ್ಕಿಳಿಸಲು ಇದೇ ಸಮಯ. ಅಲ್ಲಿಯವರೆಗೆ ಕಲ್ಪನವ್ಯರ್ಥ.

ಭಾರತದ ಬಿಕ್ಕಟ್ಟು

ಯುದ್ಧದ ಪರಿಸ್ಥಿತಿಯನ್ನು ನಿರೀಕ್ಷಿಸಿ, ಯುದ್ಧರಂಗವು ನಮ್ಮನ್ನು ಸವಿಾಪಿಸುತ್ತಲಿದೆ ಎಂದಾಗ, ನಾವು-ಭಾರತೀಯರು ಯಾವ ಧೋರಣೆಯನ್ನು ಕೈಕೊಂಡಿದ್ದೇವೆ ಎಂಬ ಪ್ರಶ್ನೆ ಸಹಜವಾಗಿಯೆ ನಮ್ಮ ಮುಂದೆ ನಿಲ್ಲುವುದು. ಭಾರತೀಯ ರಾಜಕಾರಣದ ಮುಂದಾಳುಗಳು, ಸ್ವಾತಂತ್ರ್ಯಪ್ರಿಯರು, ಸರ್ವಾಧಿಕಾರಿತ್ವದ ಶತ್ರುಗಳು, ಪ್ರಜಾಪ್ರಭುತ್ವದ ಭಕ್ತರು— ಇಂತಹ ನಮ್ಮವರು, ಜಗತ್ತಿನ ಸ್ಥಿತಿಯನ್ನೇ ಬದಲಾಯಿಸಬಹುದಾದ ಈ ಯುದ್ಧಕ್ಕಾಗಿ ಯಾವ ಧೋರಣವನ್ನು ಕೈಕೊಂಡಿದ್ದಾರೆ? ಮೊದಲನೆಯದಾಗಿ, ಮುಸ್ಲಿಂ ಲೀಗಕ್ಕೆ ದಿನದಿನಕ್ಕೆ ಜಗತ್ತಿನಲ್ಲಿ ಪಾಕಿಸ್ತಾನದ ಹೊರತು ಬೇರೆ ಯಾವುದೂ ಕಾಣದಂತಾಗಿದೆ. ಇನ್ನು ಹಿಂದು ಮಹಾಸಭೆಯವರು— ಇದಕ್ಕೆ ಇದಿರಾಗಿ–ತಮ್ಮ-

'ಸುಭದ್ರಾ' ಎಂಬ ಕನ್ನಡ ಚಲಚ್ಚಿತ್ರದ ಪ್ರಾರಂಭೋತ್ಸವ-ಕಾಲದಲ್ಲಿದ್ದ ಬೇರೆ ಬೇರೆ ಚಲಚ್ಚಿತ್ರತಾರೆಯರು.



ಬಲದಿಂದ ಎಡಕ್ಕೆ ಕ್ರಮವಾಗಿ:

ಶ್ರೀ. ಪಿ. ಪುಟ್ಟಯ್ಯ ಬಿ. ಎ. ಡೈರೆಕ್ಟರು; ಶ್ರೀ. ಕೆ. ವಿ ಆಚಾರ್ಯ ಚಿತ್ರನಿರ್ಮಾಣಕರು; ಶ್ರೀ. ವಿ. ಶಾಂತಾರಾಮ, ಪ್ರಭಾತ ಕಂಪನಿಯ ಡೈರೆಕ್ಟರು ಮತ್ತು ಪಾಲುಗಾರರು; ಶ್ರೀ. ಜಿ. ಎಚ್. ನೀರಣ್ಣನವರು; ಚಿತ್ರನಿರ್ಮಾಣಕರು; ಶ್ರೀ. ಭಾಲ ಜಿ. ಪೆಂಢಾರಕರ್ ಮಹಾರಾಷ್ಟ್ರ ಚಲಚ್ಚಿತ್ರ ಕಂಪನಿಯ ನಿರ್ದೇಶಕರು.

ದೊಂದು ಸತ್ಯಾಗ್ರಹವನ್ನು ಕೈಕೊಳ್ಳುವ ಹಂಚಿಕೆಯಲ್ಲಿದ್ದಾರೆ. ಯಾತಕ್ಕಾಗಿ? ಇತ್ತ ಕಾಂಗ್ರೆಸಿನ ಸರ್ವಾಂತರ್ಯಾಮಿಯಾದ ಮಹಾತ್ಮರು– ಜಗತ್ತಿನಲ್ಲಿ ಏನೇ ನಡೆಯಲಿ—ಅಹಿಂಸೆಯೆ ಶ್ರೇಷ್ಠ ಎಂದು ತೋರಿಸುವುದಕ್ಕಾಗಿ ಪಣತೊಟ್ಟಿದ್ದಾರೆ. ನಾಳೆ ಯುದ್ಧ ಮುಗಿದರೆ— 'ಮಾನವಸಂಸ್ಕೃತಿಯ ಈ ಘೋರ ಗಂಡಾಂತರದಲ್ಲಿ ಭಾರತೀಯರು ಮಾಡಿದ್ದೇನು'—ಎಂದು ಕೇಳಿದರೆ 'ಕೆಲವು ತಾತ್ತ್ವಿಕ ಪ್ರಯೋಗಗಳನ್ನು' ಎಂದು ನಾವು ಹೇಳಬೇಕು; ಇಷ್ಟೆ. ಆದರೆ ಒಂದು ಮಾತನ್ನು ಮಾತ್ರ ಇಲ್ಲಿ ನಿರ್ಧಾರವಾಗಿ ಹೇಳಬಹುದು: ಭಾರತೀಯ ರಾಜಕಾರಣದ ನೇತೃತ್ವಕ್ಕೆ ಮುಪ್ಪೇರಿದೆ; ಕಣ್ಣು ಕಾಣದಂತಾಗಿದೆ; ತಲೆ ನಡುಗುತ್ತಲಿದೆ; ಬಾಯಿ ಮಾತ್ರ ಎಂದಿನಂತೆ ಹಳೆಯ ಅನುಭವಗಳನ್ನು ಅಸಂಬದ್ಧವಾಗಿ ಪಟಪಟಿಸುತ್ತಲಿದೆ!

ಮಹಾತ್ಮರ ಸ್ಪಷ್ಟೀಕರಣ

ಮೇಲಿನ ಅಭಿಪ್ರಾಯ ಕುತ್ಸಿತವೆಂದಾಗಲಿ, ಕಠೋರವೆಂದಾಗಲಿ ತಿಳಿಯುವವರಿಗೆ ಮಹಾತ್ಮರ ಒಂದು ಮತಸ್ಪಷ್ಟೀಕರಣವನ್ನು ತೋರಿಸಬಹುದಾಗಿದೆ. ಒಂದು ಆಂಗ್ಲ ದಿನಪತ್ರಿಕೆಯ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಮಹಾತ್ಮರು ತಮ್ಮ (ಇತ ಏವ) ಕಾಂಗ್ರೆಸಿನ ಘೋರಣವನ್ನು ಸ್ಪಷ್ಟೀಕರಿಸಿದ್ದಾರೆ. ಆ ಸಂದರ್ಭದಲ್ಲಿ ಅವರು ಹೀಗೆ ಹೇಳುತ್ತಾರೆ: 'ಸಂಪೂರ್ಣ ಸ್ವಾತಂತ್ರ್ಯದ ಹೊರತಾಗಿ ಬೇರೆ ಯಾವ ಕರಾರಿಗಾಗಿಯೂ ಕಾಂಗ್ರೆಸಿಗೆ ಮತ್ತು ಸರಕಾರಕ್ಕೆ ಒಪ್ಪಂದವಾಗುವುದು ಶಕ್ಯವಿಲ್ಲ.' ಇದೇನೋ—ಎಲ್ಲ ಸ್ವಾಭಿಮಾನಿ ಭಾರತೀಯರು ಒಪ್ಪುವ ಮಾತು. ಆದರೆ ಸಂಪೂರ್ಣ ಸ್ವಾತಂತ್ರ್ಯವು ಈ ಯುದ್ಧದ ಕಾಲದಲ್ಲಿಯೆ ದೊರೆಕಿತು ಎನ್ನೋಣ. ಮುಂದಾದರೂ ಇಂದಿನ ಯುದ್ಧದ ಮಹತ್ತ್ವವು ಭಾರತಕ್ಕೆ ದೆಯೆ? ಭಾರತದ ವರೆಗೆ ಯುದ್ಧ ಬಾರದಿದ್ದರೆ 'ಯುದ್ಧದ ಗೊಡವೆ ನಮಗೇಕೆ?' ಎನ್ನಬಹುದು. ಆದರೆ ಭಾರತದ ಮೇಲೆಯೇ ದಾಳಿಯಾದರೆ? ಮಹಾತ್ಮರು ಈ ಪ್ರಶ್ನೆಗೆ ಅಭಿಪ್ರೇತವಾಗಿ ತಮ್ಮ ತತ್ತ್ವವನ್ನು ಹೀಗೆ ಸಾರಿದ್ದಾರೆ: '೨೦ ವರ್ಷಗಳ ವರೆಗೆ ನಡೆಯಿಸಿಕೊಂಡು ಬಂದ ಅಹಿಂಸಾ ತತ್ತ್ವವನ್ನು ಬಿಟ್ಟುಕೊಟ್ಟು, ಕಾಂಗ್ರೆಸ್ಸು ಜನ-ಧನ-ಸಾಮಗ್ರಿಗಳಿಂದ ಎಂದಿಗೂ (ಅಹಿಂಸಾತ್ಮಕ) ಯುದ್ಧದಲ್ಲಿ ಕೈಹಾಕದು!' ಹೀಗೆಂದರೆ, ಅಹಿಂಸೆಯಿಂದಲೇ ಭಾರತವು ಸ್ವಸಂರಕ್ಷಣೆಯ ಯುದ್ಧವನ್ನು ಸಾಗಿಸುವುದೆಂದಂತಾಗಲಿಲ್ಲವೆ? ಸಾಮಾನ್ಯ ಕಾಲದಲ್ಲಿ ಇಪ್ಪತ್ತು ವರುಷಗಳ ವಿಶ್ವಾಸದ ತರುವಾಯ, 'ಬ್ರಿಟಿಶರೆಮ್ಮರು ಸತ್ಯಾಗ್ರಹವನ್ನು ಹೂಡಲು ಸಾರ್ವಜನಿಕವಾಗಿ ಯೋಗ್ಯತೆ ಇಲ್ಲ' ಎಂದು ಮಹಾತ್ಮರೇ ಹೇಳುವಾಗ, ಇಂದಿನ ಕ್ರೂರಸರ್ವಾಧಿಕಾರಿತ್ವವನ್ನು ಭಾರತವು ಅಹಿಂಸೆಯಿಂದ ಹೇಗೆ ಎದುರಿಸುವುದು? ಇದು ಕೇವಲ ನಮ್ಮ ಪ್ರಶ್ನೆಯಲ್ಲ. ಇದೇ ಪ್ರಶ್ನೆಗೆ ನಿರುಪಾಯರಾದಂತೆ ರಾಷ್ಟ್ರಾಧ್ಯಕ್ಷರಾದ ಮೌಲಾನಾ ಆಝಾದರು 'ನಾನು ಶಸ್ತ್ರಗಳಿಂದ ಹೋರಾಡುವೆನು' ಎಂದಿದ್ದಾರೆ! ಹೊಣೆಗಾರಿಕೆಯ

ಕುಮಾರಿ ಪ್ರಮಿಳಾ ದೇಸಾಯಿ, ಹುಬ್ಬಳ್ಳಿ.

ಧಾರವಾಡ ಆರ್ಟ್ಸ್ ಸರ್ಕಲಿನ ವರವಾಗಿ, ಕಳೆದ ಜನವರಿ ತಿಂಗಳಲ್ಲಿ ಜರುಗಿದ ಸಂಗೀತ-ನೃತ್ಯನಗಳ ಮೇಲಾಟದಲ್ಲಿ ಈಕೆ ಭಾಗವಹಿಸಿ, ಹಾರ್ಮೋನಿಯಂ ವಾದನದಲ್ಲಿ ಮೊದಲನೆಯ ಸ್ಥಾನವನ್ನು ಪಡೆದು ಬಹುಮಾನ ದೊರೆಕಿಸಿದಳು. ಹುಬ್ಬಳ್ಳಿಯಲ್ಲಿ ಕಲಾಪ್ರಿಯರೆಂದು ಹೆಸರು ಪೆತ್ತ ಶ್ರೀಮಾನ್ ರಾಮರಾವ್ ದೇಸಾಯಿ, ಅಕಬರನ್-ವೀಸ್ ಆಪರ ಮಗಳು ಈಕೆ. ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಸ್ಕೂಲಿನ ವಿದ್ಯಾರ್ಥಿನಿ. ಈ ಕಲಾಭಿಜ್ಞ ಕನ್ನಡ ಕುಮಾರಿಗೆ ಜಯಂತಿಯ ಅಭಿನಂದನೆಗಳು.

ಮುಂದಾಳುಗಳಲ್ಲಿಯೆ ಈ ಅಭಿಪ್ರಾಯಗೊಂದಲವಿರುವಾಗ, ಕಾಂಗ್ರೆಸಿನ ಘೋರಣಕ್ಕಾಗಿ ಸಮರ್ಥನ ತಾಳುವುದು ಹೇಗೆ? ಸದ್ಯದ ಸತ್ಯಾಗ್ರಹದಿಂದ ಜನತೆಯ ಮೇಲೆ ಯಾವ ಪರಿಣಾಮವಾಗಿದೆ ಎಂದು ಕೇಳುವಂತಹ ಸಮಯ ಕೂಡ ಇಲ್ಲ.

ಪ್ರಾಮಾಣಿಕ ದೂರು

ಇಂದಿನ ನಮ್ಮ ಪರಿಸ್ಥಿತಿಗಾಗಿ ಸಾಮಾನ್ಯನಾಗರಿಕನು ಅತ್ಯಂತ ಪ್ರಾಮಾಣಿಕ ಬುದ್ಧಿಯಿಂದ ದೂರನ್ನು ಹೇಳಿಕೊಳ್ಳಬಹುದು. ದಿನದಿನಕ್ಕೆ ದೇಶದಲ್ಲಿ ಜಾತ್ಯಂಧತೆಯ ನಾತ ಹಬ್ಬುತ್ತಲಿದೆ! ಯಾಕೆ? ಇದರ ಕಾರಣವೇನು? ಇದಕ್ಕೆ ಉಪಾಯವನ್ನು ಹುಡುಕುವ ಹೊಣೆಗಾರಿಕೆ ಯಾರದು? ಪ್ರಾಂತಿಕ ಸ್ವಾಯತ್ತತೆ ಮಾಯವಾಗಿ, ಯುದ್ಧದ ಕಾಲದಲ್ಲಿ ಜಿಲ್ಲಾಧಿಕಾರಿ-

ಸ್ವಾಯುತ್ತತೆಯು ರಾಜ್ಯ ನಡೆದಿದೆ; ಈ ಪ್ರಗತಿವಿರೋಧಕ ಪರಿಸ್ಥಿತಿ ಅಪರಿಹಾರ್ಯವಾಗಿತ್ತೆ ? ಇಂದಿನ ಕಾಲದಲ್ಲಿ ಸಾಮಾನ್ಯ ಜನರಿಗೆ ರಾಜಕೀಯ ಜ್ಞಾನವನ್ನೂ, ಸ್ವಾಭಿಮಾನದ ಅರಿವನ್ನೂ ತಂದು ಕೊಡಬೇಕಾದ ಹಿರಿಯರು– ಅನುಭವಿಕರು–ಉತ್ಸಾಹಿ ತರುಣರು– ಜನಪ್ರಿಯ ಕಾರ್ಯಕರ್ತರು, ಯಾವ ಪರಿಣಾಮವನ್ನೂ ಉಂಟು ಮಾಡದೆ ಕಾರಾಗೃಹಗಳನ್ನು ತುಂಬುತ್ತಿರುವರಲ್ಲ; ಇದು ಸಮಂಜಸವೆ ? ಬಹುಮತವಿದ್ದಲ್ಲಿಸ್ಥಾನಿಕ ಸಂಸ್ಥೆಗಳಿಗೆ ಬಹಿಷ್ಕಾರ ವಿಲ್ಲ, ಅಲ್ಪಮತವಿದ್ದಲ್ಲೆಲ್ಲ ತ್ಯಾಗ, ಬಹುಮತವಿದ್ದರೂ ಶಾಸನ-ಸಭೆಗಳ ಬಹಿಷ್ಕಾರ; ಇದರ ಗೂಢವೇನು ? ಭಾಷಣ ಸ್ವಾತಂತ್ರ್ಯ ಕ್ಕಾಗಿ ಹೂಡಿದ ಸತ್ಯಾಗ್ರಹ ಒಂದು ಕಡೆ, ಆ ಸತ್ಯಾಗ್ರಹದ ಏಕ-ನಾಯಕನ ಅಭಿಪ್ರಾಯಗಳಿಗೆ ವಿರೋಧ ಪ್ರಕಟನಾಸ್ವಾತಂತ್ರ್ಯ ವಿಲ್ಲದ್ದು ಒಂದುಕಡೆ; ಇಂತಹ ಧೋರಣೆಯ ಮರ್ಮವೇನು ? ವಾರಕ್ಕೊಂದು ನೂರಾರು ಸತ್ಯಾಗ್ರಹಿಗಳ ಯಾದಿ; ಆದರೂ ತಿಂಗಳಲ್ಲಿ ೫-೬ ಜನರು ಸತ್ಯಾಗ್ರಹಮಾಡುತ್ತಿರುವಂತಹ ಅನುಭವ; ಈ ವ್ಯತ್ಯಾಸದ ವಿಚಿತ್ರವೇನು ? ಮುಂದಾಳುಗಳು ಕಾರಾಗೃಹ ತುಂಬಿದರೆ, ಹಿಂದಾಳುಗಳು ಯುದ್ಧನಿಧಿಯನ್ನು ತುಂಬುತ್ತಿದ್ದಾರೆ; ಇದಾವ ಗೌರವ ? ಕೊನೆಗೆ ' ಸಂಪೂರ್ಣ-ಸ್ವಾತಂತ್ರ್ಯವಿಲ್ಲದೆ ಒಪ್ಪಂದವಿಲ್ಲ ' ಎಂಬ ಮಹಾತ್ಮರೆ ಮುಂದಿನ ವಾಕ್ಯದಲ್ಲಿ ' ಅಹಿಂಸಾತತ್ತ್ವದಲ್ಲಿ ಬೆಳೆಯುವ ಸ್ವಾತಂತ್ರ್ಯ ಸಿಕ್ಕರೆ ಕಾಂಗ್ರೆಸಿಗೆ ಸಮಾಧಾನವಾಗುವುದು ' ಎನ್ನುವರು; ನಮ್ಮ ಧ್ಯೇಯವು ಅಹಿಂಸಾಸಾಕಾರ್ಪಾತ್ಯಾರವೊ, ರಾಜಕೀಯ ಸ್ವಾತಂತ್ರ್ಯವೊ ?..ಹೀಗೆ ಸಾಮಾನ್ಯ ಭಾರತೀಯನು ಗತಿಗಾಣದೆ ಸಂದೇಹಗೊಂದಲದಲ್ಲಿ ಸಿಕ್ಕು, ದೂರನ್ನು ಹೇಳಿಕೊಂಡರೆ ಆಶ್ಚರ್ಯವೇನು ?

ಸಾಹಿತ್ಯದಲ್ಲಿ ಚರ್ಚೆ

ಹೋದ ತಿಂಗಳು ೯ನೆಯ ತಾರೀಖಿಗೆ ಬೆಂಗಳೂರಿನ ಪರಿಷನ್ಮಂದಿರದಲ್ಲಿ ಕನ್ನಡ ಸಾಹಿತಿಗಳ ಒಂದು ಚರ್ಚೆ ನಡೆಯಿತು. ಆ ಚರ್ಚೆಯ ವಿಷಯ ' ಮತಸಾಹಿತ್ಯದ ಅತಿಪ್ರಾಬಲ್ಯದಿಂದ ಶುದ್ಧಸಾಹಿತ್ಯ ತಲೆ ಎತ್ತದಂತಾಗಿದೆ ' ಎಂದು. ಈ ವಿಷಯವು ಸದ್ಯಕ್ಕೆ ನಮ್ಮ ಪ್ರಾಂತದಲ್ಲಿ ತೀರ ಮಹತ್ತ್ವದ್ದಾಗಿದೆ. ಚರ್ಚೆಯ ತರುವಾಯ ಸಭಿಕರು ಬಹುಮತದಿಂದ ಮೇಲಿನ ಸೂಚನೆಯನ್ನು ಒಪ್ಪಿದರೆಂದು ನಾವು ಅವಸರದಿಂದ ಹೆಮ್ಮೆಪಡುವಂತಿಲ್ಲ. ಯಾಕೆಂದರೆ ಸಭೆಯನ್ನು ಕರೆದವರು ಮೊದಲೇ ಹೇಳಿದಂತೆ, ಚರ್ಚೆಯು ನಿರ್ಣಯಕ್ಕೆ ಯಾವತರದ್ದೂ ಅಧಿಕಾರವಿರಲಿಲ್ಲ. ಬಹುಮತದ ನಿರ್ಣಯವೆಂದು ಅಲ್ಲಿ ನೆರೆದವರು ಮತಸಾಹಿತ್ಯದ ಉಚ್ಚಾಟನೆಗೆ ಬದ್ಧರಾಗಿದ್ದಿಲ್ಲ. ಆದರೂ ಆ ಚರ್ಚೆಯಲ್ಲಿ ಕೆಲವು ಉಪಯುಕ್ತ ವಿಚಾರಗಳು ಕಂಡುಬಂದು, ಚರ್ಚೆಗೆ ಮಹತ್ತ್ವವನ್ನು ಒದವಿಸಿಕೊಟ್ಟುವು. ' ದೇವನು ಒಬ್ಬನೆ ಎಂದು ಹೇಳಿ, ಕೊನೆಗೆ ಕೂಡಲಸಂಗಮನೇ ದೇವ ಎಂಬ ಮುದ್ರಿಕೆಯನ್ನೊತ್ತಿದರೆ ಇಂದಿನವರಿಗೆ ಒಗ್ಗದು ' ಎಂದು, ಸೂಚಕರಾದ ಶ್ರೀ. ಬಸವನಾಳರವರು ಹೇಳಿದ್ದನ್ನು, ತರುಣರೆಲ್ಲರೂ ದಪ್ಪಕ್ಕರಗಳಿಂದ ಕಣ್ಣುಮುಂದೆ ಬರೆದಿಟ್ಟುಕೊಳ್ಳುವ ಮಾತಾಗಿದೆ. ಯಾಕೆಂದರೆ ಅನೇಕ ಜನ ಇಂದಿನವರಲ್ಲೇ ಶ್ರೀ. ಬಸವನಾಳರವರು ಕೋರಿದ ವಿಶಾಲದೃಷ್ಟಿ– ನಿರ್ಮಲ ಹೃದಯಗಳಿಲ್ಲವೆಂದು ವಿಷಾದದಿಂದ ಒಪ್ಪಬೇಕಾಗಿದೆ. ಯಾವುದೊಂದು ಕವನಸಂಗ್ರಹ, ಗ್ರಂಥಮಾಲೆ ಕೈಯಲ್ಲಿ ಬಿದ್ದಕೂಡಲೆ ' ಇದೇನು, ನಮ್ಮ ಜಾತಿಯವರ ಒಂದೂ ಕವನ ಇದರಲ್ಲಿಲ್ಲ ! ' ಎಂಬ ಜಾತಿಜಾಡ್ಯರು ಇನ್ನೂ ನಮ್ಮಲ್ಲಿದ್ದಾರೆ. ಅದರಂತೆಯೆ ಪೂರ್ವದ ಕವಿಗಳ ಹೆಸರನ್ನೆತ್ತಿದರೆ, ಅವನಿಗೆ ಹೆಣ್ಣುಕೊಡುವವರಂತೆ ಅವನ ಜಾತಿಯನ್ನೇ ಮುಂಚೆ ನೋಡುವ ಹಿರಿಯ ಸಾಹಿತಿಗಳೂ ನಮ್ಮಲ್ಲಿದ್ದಾರೆ!

ಸಾಹಿತ್ಯದಲ್ಲಿ ಜಾತಿದೃಷ್ಟಿ

ಇಂತಹ ಧೋರಣೆಗ ವ್ಯವಹಾರದ ಅನುಭವಗಳಲ್ಲದೆ ಶಿಕ್ಷಣದ ಸಾಮಗ್ರಿಯೂ ಕಾರಣವಾಗಿದೆ. ನಮ್ಮಲ್ಲಿ ಕನ್ನಡದ ಇತಿಹಾಸವನ್ನು ಬರೆವವರೆಲ್ಲ ಸಾಹಿತ್ಯದ ರೀತಿಗಳಿಂದ ವಿಮರ್ಶೆಮಾಡದೆ, ಸಾಹಿತಿಯ ಜಾತಿಯಿಂದ ಮಾಡಿದ್ದಾರೆ, ಮಾಡುತ್ತಲಿದ್ದಾರೆ. ಅದೇ ಇತಿಹಾಸಜ್ಞಾನವನ್ನು ವಿದ್ಯಾರ್ಥಿಗಳಿಗೆ ನೀಡುತ್ತಲಿದ್ದಾರೆ! ಆದೂ ಹೋಗಲಿ, ಪಠ್ಯಪುಸ್ತಕಗಳಲ್ಲಿಯ ಕಾವ್ಯಗಳ ಮಾದರಿ ಎಂತಹದು ! ಅದಕ್ಕಾಗಿ ವಿದ್ಯಾರ್ಥಿಗಳಲ್ಲಿ ಹುಟ್ಟಿಸುವ ಅಭಿಮಾನ ಎಂತಹದು ! ಈ ವಿಷಯವಾಗಿ ಗಣಿಪರಲ್ಲಿ ಜಮಖಂಡಿಯಲ್ಲಿ ಸೇರಿದ ಕವಿಗೋಷ್ಠಿಯ ಅಧ್ಯಕ್ಷರ(ಶ್ರೀ. ಕೃಷ್ಣಶರ್ಮ ಬೆಟಗೇರಿ) ಮಾತುಗಳನ್ನು ಅತ್ಯುಚಿತವಾಗಿ ಕಾಣಿಸಬಹುದಾಗಿದೆ: ' ನಮ್ಮ ಹಿಂದಣವರ ಪ್ರತಿಯೊಂದು ಕೃತಿಯೂ ಹಿರಿಯದೆ ಆಗಿದ್ದರೆ ಕನ್ನಡನಾಡು ಕಂಗೆಟ್ಟು ಕಾಲುಮುರಿದುಕೊಂಡು ಬೀಳುತ್ತಿದ್ದಿತೇಕೆ?.. ನಮ್ಮ ಪ್ರಾಚೀನ ಸಾಹಿತಿಗಳು ಹೆಚ್ಚಾಗಿ ಬೋಧಕರಾಗಿಯೇ ಸಾಹಿತ್ಯರಂಗಕ್ಕೆ ಇಳಿದಿದ್ದಾರೆ. ಇವರೆಲ್ಲರೂ (ಜೈನ ಕವಿಗಳು) ನಡೆದುಕೊಂಡು ಬಂದ ಒಂದು ಪಂಥದ ಪ್ರಚಾರಕರಾದುದರಿಂದ ಸತ್ಯದ ಅನಂತತೆಯ ದೃಷ್ಟಿಯನ್ನೆ ಕಳೆದುಕೊಂಡು ಬಿಟ್ಟವರು... (ಮೊದಲಿನ ವಚನಕಾರರ) ಬೆನ್ನು ಹಿಂದೆ ಬಂದ ವೀರಶೈವ ಪುರಾಣಸಾಹಿತಿಗಳು ಮಾತ್ರ ಶಿವಶರಣರ ಪವಾಡದ ಅದ್ಭುತ ಕತೆಗಳನ್ನು ಹೇಳುವುದಕ್ಕೆ ಹೊರಟರು...ಬ್ರಾಹ್ಮಣ ಕವಿಗಳು..ಎಲ್ಲರೂ ಸನಾತನ ಸಾಂಪ್ರದಾಯದ ಶರಣರು.. ಕೆಲವರು ಅದ್ವೈತಮತದ ಪ್ರಚಾರಕರಾದರು..ಹಲವರು ದ್ವೈತಮತದ ಪ್ರಚಾರಕರಾದರು..ಇಹಲೋಕದ ಜೀವನಕ್ಕೆ ಅವಶ್ಯವಾಗಿದ್ದ ಮಹತ್ತ್ವಾಕಾಂಕ್ಷೆಯನ್ನು ಮುಗ್ಗಿಸಿಬಿಟ್ಟರು..'.... ..... ಮೂರು ವರ್ಷಗಳ ಮುಂಚೆ ಸಾಹಿತ್ಯಸಮ್ಮೇಳನದ ಪೀಠದಿಂದ ಉಸಿರಿದ ಬಿಜ್ಜವಮಾತುಗಳು, ಕೇವಲ ಚರ್ಚೆಯು ಜನರಂಜನೆಯ ಕಾರ್ಯಕ್ರಮವಾಗಿ ಉಳಿಯಬಾರದು. ಪರಿಷತ್ತು ಅವಕಾಶವನ್ನೊದವಿಸಬಹುದು ; ಕಾರ್ಯದ ಕೊನೆ ' ಇಂದಿನವರದು.

ಕನ್ನಡದ ಪ್ರಥಮ ಪ್ರೇಮಮಯ ಚಲಚ್ಚಿತ್ರ!

ಪಾರ್ಥನ ಬಾಣಸಂಧಾನಕ್ಕೆ ಭಾರತದ ಅತಿರಥ ಮಹಾರಥರೆಲ್ಲರೂ ಗಡಗಡನೆ ನಡುಗಿದರು ..... ಆದರೆ ಅಂತಹ ಪಾರ್ಥನೂ ಪಂಚಶರನ ಪುಷ್ಪಬಾಣದ ಪಟ್ಟಿಗೆ ಸೋತು, ನಿಜವೇಷವನ್ನೆ ಮರೆಸಿಕೊಂಡು ಕಾಷಾಯಾಂಬರ್ಧಾರಿಯಾದನು.

ನಮ್ಮ ಪುರಾಣಗಳಲ್ಲಿ ಪ್ರೇಮ-ಶೃಂಗಾರಗಳಿಂದ ತುಂಬಿ ತುಳುಕಾಡುತ್ತಿರುವ ಪ್ರಕರಣಗಳ ಪೈಕಿ ಮಹಾಭಾರತದಲ್ಲಿಯ ಸುಭದ್ರಾರ್ಜುನರ ಪ್ರಣಯ-ವಿಲಾಸವು ಸರ್ವೋತ್ಕೃಷ್ಟವಾದುದು.

★ ಸು ಭ ದ್ರಾ ★

ನಾಟ್ಯಪ್ರದರ್ಶನ :

ಶ್ರೀನಿವಾಸ ಕುಲಕರ್ಣಿ, ಬಿ. ಎ.
ಮತ್ತು ಪಾರ್ಟಿಯವರಿಂದ

★

ಕಥಾ ಲೇಖಕರು :
ಬಿ. ಪುಟ್ಟಸ್ವಾಮ್ಯೆಯ್ಯ

ಸಂಗೀತ ಲೇಖಕರು :
ಕರ್ನಾಟಕ ಕವಿಕೇಸರಿ
ಬೆಳ್ಳಾವೆ ನರಹರಿಶಾಸ್ತ್ರಿ

ಸಂಗೀತ ನಿರ್ದೇಶಕರು
ಹೆಚ್. ಆರ್. ಪದ್ಮನಾಭಶಾಸ್ತ್ರಿ

ಆರ್ಕೆಸ್ಟ್ರಾ :
ಆಸ್ಥಾನ ಸಂಗೀತ ವಿದ್ವಾನ್
ಬಿ. ದೇವೇಂದ್ರಪ್ಪ ಮತ್ತು ಪಾರ್ಟಿ

ಚಲಚ್ಚಿತ್ರ ನಿರ್ದೇಶಕರು :
ಪಿ. ಪುಲ್ಲಯ್ಯ, ಬಿ. ಎ.
(ಬಾಳಾಜಿ ಚಲಚ್ಚಿತ್ರ ನಿರ್ದೇಶಕರು)

ಸ್ಟುಡಿಯೋ
ಫೇಮಸ್ ಅರುಣ್ ಸ್ಟುಡಿಯೋ
ಪೂನಾ

ಇದರಲ್ಲಿ—ಸಿನೇರ್ದ ರತ್ನಾಕರ, ಕರ್ನಾಟಕಾಂಧ್ರನಾಟಕ ಸಾರ್ವಭೌಮ, ಗಂಧರ್ವಶ್ರೀ ಕೆಮಿಡಿಯನ್
ಜಿ. ಎಚ್. ವೀರಣ್ಣನವರು, ಆಸ್ಥಾನ ಸಂಗೀತ ವಿದ್ವಾನ್ ಬಿ. ದೇವೇಂದ್ರಪ್ಪನವರು,
ಶ್ರೀ. ಹೊನ್ನಪ್ಪ ಭಾಗವತರು, ಮಿಸ್. ಬಿ. ಜಯಮ್ಮ, ನಾಗರತ್ನ, ರಾಜಮ್ಮ,
ರಮಾಬಾಯಿ, ನಾಗಮ್ಮ ಮುಂತಾದವರು ಪಾತ್ರವಹಿಸಿರುವರು.

FOR BOOKINGS

BALAJI & GUBBI FILM

179 GANDHI NAGAR ★ BANGALORE CITY

TRADE MARK

ಬ್ರೋಷಿಷ್ಟ

ಧೂತಪಾಪೇಶ್ವರ ★

★ ಅರವಿಂದಾಸವ



ಚಿಕ್ಕಮಕ್ಕಳ ನಿಕಾರಗಳ ಮೇಲೆ ರತ್ನದಂತಹ ಔಷಧ!

ಕಿಡಿಗೇಡಿ ಮಕ್ಕಳಿಂದ ತಾಯಿ-ತಂದೆಗಳ ಆನಂದ ಹೆಚ್ಚುವುದು.
ಮನೆಯಲ್ಲಿ ಸುಖ-ಶೃಂಗಾರ ನೆಲೆಗೊಳ್ಳುವುದು.
ಮಕ್ಕಳ ತುಂಟತನ ಅವರ ಆರೋಗ್ಯದ ಸ್ಪಷ್ಟ ಚಿಹ್ನೆ;
ಆದುದರಿಂದ
ನಿಮ್ಮ ಮಕ್ಕಳ ಆರೋಗ್ಯ ಚೆನ್ನಾಗಿರಬೇಕಾದಲ್ಲಿ
ಅರವಿಂದಾಸವವನ್ನು ಕೊಡಿರಿ!

ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್
ಪನವೇಲ--ಕುಲಾಬಾ.

ಎಲ್ಲಾ ಏಜಂಟರಲ್ಲಿಯೂ ಸ್ಟಾಕಿಸ್ಟರಲ್ಲಿಯೂ ದೊರೆಯುವುದು.

★

ತಲೆಗೂದಲು ಚೆನ್ನಾಗಿದ್ದರೆ ಜೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ಕರುಣ-ತರುಣಿಯರು ಬರಿಯೆ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಜೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.
ಉದಕ್ಕಾಗಿಯೆ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ, 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಜೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ
ಕರ್ನಾಟಕ ಶಾಖೆ: ಸ್ಟೇಶನ್‌ರೋಡು, ಹುಬ್ಬಳ್ಳಿ.

Printed by V. Y. Jathar, B. Sc. Karnatak Printing Works, Dwr. Edited and published by M. G. Patil at Jayanti Office Dharwar

ಪ್ರಜಾವಾಣಿ



ಎಪ್ರಿಲ್ ೧೯೪೧

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯಚ್ಚು ಸೇರಿ ೩—೦—೦ ..... ವ್ಹಿ. ಪಿ ಯಿಂದ ೩-೫-೦ ..... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಏಪ್ರಿಲ್ ೧೯೪೧	೧೨ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸುಪ್ತಶಿಶು (ಕವನ)	ಶ್ರೀ. ಬಿ. ಎನ್. ಶ್ರೀನಿವಾಸಮೂರ್ತಿ	೬೨೫
ಸಂಪಾದಕೀಯ	ಸಂಪಾದಕರು	೬೨೬
ಮುಂಗಸ ಮಲ್ಲಿನಾಥಪಸ	'ಮಲ್ಲಿನಾಥ'	೬೨೭
ಮಾವನಿಂದ ಬಂದ ಕಾಗದ (ಒಂದು ಪತ್ರ)	'ಧಾರತೀಪುತ' ಮೈನಾಡು	೬೩೯
ಬಡಿದವನು ಎಂದರೆ ಗಂಡ (ಕವನ)	ಮದರಾಸಿನ 'ಬೀಚಿ'	೬೬೧
ನೀರಮೇಲಣ ಗುಳ್ಳೆ (ಕಿರುಗತೆ)	'ಮರಿ' ಮೈಸೂರು	೬೬೨
ಮಹಾಪುರುಷ (ವಿನೋದಪ್ರಬಂಧ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ.	೬೬೩
ಮನಸ್ಸಿನ ಸ್ಥಿತಿಗಳು (ಮನೋವಿಜ್ಞಾನ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೬೬೭
ವೈಯಾಕರಣ ಭೀಮ (ಸಂಶೋಧನಾತ್ಮಕ)	ಪ್ರೊ. ಕೆ. ಜಿ. ಗುಂದಣಗಾರ, ಎಂ. ಎ.	೬೭೦
ಮುಂಜಾಗ್ರತೆ (ಏಕಾಂಕ ನಾಟಕ)	ಶ್ರೀ. ಎಚ್. ಎಸ್. ಪಾಟೀಲ ಎಂ. ಎ, ಬಿ. ಕಾಮ್.	೬೭೫
ಹಿಂಸಾಪ್ರಿಯ ಹಿಟ್ಲರನ ಹಾದಿಗಳು (ಪರಿಚಯ)	ಶ್ರೀ. ವಾಳವೇಕರ ಗುರುರಾಯರು ಎಲ್ಎಲ್. ಬಿ.	೬೭೬
ಹಾವು (ಸಣ್ಣಕತೆ)	'ಹೆಚ್ಚೆಸ್ಕೆ' ಕೃಷ್ಣರಾಜಸಾಗರ	೬೮೦
ಒಂದು ಬೆಳ್ದಿಂಗಳ ರಾತ್ರಿಯಲ್ಲಿ (ಕವನ)	'ಕಲಾಕುಮಾರ' ಸಾಗರ	೬೮೩
ಬೆಲುವು (ಕವನ)	ಶ್ರೀ. ಎಂ. ಪಿ. ಮಹಿಷಿ, ಧಾರವಾಡ	೬೮೩
ಪಕ್ಷಿಣ ಸಂಸ್ಥಾನಗಳಲ್ಲಿ (ಔಂಧದ ಪರಿಚಯ)	ಶ್ರೀ. ಸಿ. ಕೃಷ್ಣಶರ್ಮ, ಮುಂಬೈ	೬೮೪
ನಾನು ಪಾಪಿಯೆ? (ಸಣ್ಣಕತೆ)	ಶ್ರೀ. ವಿ. ಎಸ್. ಮುದಕವಿ, ವಿದ್ಯಾರ್ಥಿ	೬೮೭
ಹೊಗಳು-ತೆಗಳು (ಪ್ರಬಂಧ)	ಶ್ರೀ. ರಾ. ಭ. ಹಾಸಣಗಿ	೬೯೦
ಭಿಷಗ್‌ರತ್ನರ ಭ್ರಾಂತಿ (ಒಂದು ದೃಶ್ಯ)	ಶ್ರೀ. ಕುಲಕರ್ಣಿ ಶೇಷಗಿರಿರಾಯರು	೬೯೩
ಗೆಳೆಯ (ಕವನ)	ಶ್ರೀ. ಗೋಪಾಲಕೃಷ್ಣ ಆಡಿಗ	೬೯೭
ಜೀವನ ಸತ್ತ್ವ (ಆಹಾರ ಶಾಸ್ತ್ರ)	ಶ್ರೀ. ಬಿದರಕುಂದಿ ವೆಂಕಟರಾಯರು, ಗದಗ	೬೯೮
ಸಾದರಸ್ವೀಕಾರ	.. ..	೭೦೨
ಪುಸ್ತಕವಿಮರ್ಶೆ	ಬೇರೆಬೇರೆ ವಿಮರ್ಶಕರಿಂದ	೭೦೩



೩ನೆಯ ವರ್ಷ | ಏಪ್ರಿಲ್ ೧೯೪೧ | ೧೨ನೆಯ ಸಂಚಿಕೆ

ಸುಪ್ತಶಿಶು

ಲೇ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

★

೧

ಅದೋ ಅಲ್ಲ, ಹೊಟ್ಟಿಲಲ್ಲಿ,
ವರುಷವಿನ್ನು ತುಂಬದಿರುವ
ಮುದ್ದು ಶಿಶುವು ಪಟ್ಟಿದೆ;
ಪೋಹಪೆರೆದು ಪಟ್ಟಿದೆ!

೨

ಜೇನ ನೆಯ್ಯ ಹೊಗರ ಮೈಯ್ಯು;
ಮುಗಿದ ಅಲರ್ಮುಗುಳೊ ಕೈಯು!
ಪುಂಬುಹಾಲುಗಲ್ಲವು;
ಮುದ್ದ ನೆಳೆವ ಗಲ್ಲವು!

೩

ಚಂತೆಯು ಕಲೆಯೊತ್ತದ ಮುಖ,
ಆಶೆಯಾವರಿಸಿರದ ಮುಖ;—
ಮುಗ್ಧ ಸ್ನಿಗ್ಧವೆಲ್ಲವು;
ನಿಶ್ಚಿಂತವೆಲ್ಲವು!

೪

ಕಮಲದೆರಡು ತುಂಬುಮುಗುಳು,
ಮುಚ್ಚಿದೆರಡು ಲೋಚನಗಳು!
ನಿರು, ಚಾರು ಉಸಿರದು,—
ಗಾಂಭೀರ್ಯವೆಸೆತದು!

೫

ಏನು ಒಂದು ಮಂದಹಾಸ,
ಅವ್ಯಕ್ತಾನಂದ ಹರುಷ,—
ಮಿಂಚಿ, ಮೂಡಿ ಮಲರಿದೆ;
ಮೊಗದೊಳಾಡಿ ಮೆರೆದಿದೆ!

೬

ದೂರ ನಿಲ್ಲು; ಒಲುಮೆ ಮಿಗೆ,
ಅಕ್ಕರುಕ್ಕಿ ತಬ್ಬಿಕೊಳ್ಳೆ,—
ಸುಷುಪ್ತಿ ಭಂಗವಪ್ಪುದು:
ಜೊಲುವ ಕೊಲೆಯದಪ್ಪುದು!

೭

ದೂರ ನಿಲ್ಲು, ಭಕ್ತಿಯಲಿ;
ಮೂಕನಾಗು, ಜೊಲುವಿಗೊಲಿ!
ದೃಷ್ಟಿಮಾತ್ರನಾಗೆಲ್ಲೈ;
ಕ್ಷಣವಾದರು ಆಗೆಲ್ಲೈ!

೮

ಅದೋ ಅಲ್ಲ, ಹೊಟ್ಟಿಲಲ್ಲ,
ಕವಿಯ 'ಗರ್ಭ-ಕವಿತೆ' ಯಂತೆ,
ಹಾಲುಹಸುಳೆ ಮಲಗಿದೆ;
'ಜೊಲುವು-ಮುಗುಳ್' ಮಲಗಿದೆ!

ಜಯಂತಿಯು ಮೂರನೆಯ ವರ್ಷ

ಈ ಸಂಚಿಕೆಯೊಂದನ್ನು ಸಲ್ಲಿಸಿದರೆ ಜಯಂತಿಯು ಮೂರು ವರ್ಷದ ಸಂಪೂರ್ಣ ಸೇವೆ ಸಂದಂತಾಯಿತು. ಮೊದಲೆರಡು ವರ್ಷ ಉತ್ಸಾಹದಿಂದ ಮುಂದಡಿಯಿಟ್ಟ ಈ ಪತ್ರಿಕೆಗೆ ಮೂರನೆಯ ವರ್ಷ ಪೀಡಾಕಾರಕವಾಗಿ ಪರಿಣಮಿಸಿದೆ. ಜಗತ್ತಿಗೇ ಪೀಡಾಕಾರಿಯಾಗಿ ನಿಂತಿದ್ದ ಮಹಾಯುದ್ಧ, ಜಗತ್ತಿನಲ್ಲಿಯೆ ಬದುಕಿ ಬಾಳ ಬೇಕಾಗಿರುವ ಜಯಂತಿಯನ್ನು ಏಕೆ ಪೀಡಿಸದೆ ಇರಬೇಕು-ಕಾಗದವ ಬೆಲೆ ಒಂದಕ್ಕೆ ಎರಡರಷ್ಟಾಯಿತು. ಮುದ್ರಣ ಸಲಕರಣೆಗಳ ಬೆಲೆಯೂ ಹಾಗೆಯೆ ಬೆಳೆಯಿತು. ಪಡಿಯಚ್ಚಿಗೆ ಬೇಕಾಗುವ ಸಾಮಾನೂ ಇಮ್ಮಡಿ ಬೆಲೆಯನ್ನು ಹೊಂದಿತು. ಇದರ ಮೂಲಕ ಜಯಂತಿಯ ದೇಹ ಸೊರಗಬೇಕಾಯಿತು; ಬಹಿಸ್ಸೌಂದರ್ಯದ ಕಡೆಗೆ ಅನಿವಾರ್ಯವಾಗಿಯೆ ಆಸಡ್ಡೆ ತೋರಿಸ-ಬೇಕಾಗಿ ಬಂದಿತು. ಆದರೂ ಹೆಮ್ಮೆ ಪಡಿ ಳಿದ ಒಳತೆಯ ಸುಮಾರು ೭೫೦ ಪುಟಗಳನ್ನು ಈ ಸಲ ಮೊದಲಿನ ಬೆಲೆಯಲ್ಲಿಯೆ ಸಲ್ಲಿಸ ಲಾಗಿದೆ; ನೂರಾರು ಚಿತ್ರಗಳನ್ನೂ ಕೊಡಲಾಗಿದೆ.

ಜಯಂತಿ ಮಾಡಿದ ಕಾರ್ಯದ ಮಹತ್ವವನ್ನು ಒಪ್ಪುವ ಜನರು ಕನ್ನಡ ನಾಡಿನಲ್ಲಿ ಸಾಕಷ್ಟು ಇರುವರು; ಅದನ್ನು ಮೆಚ್ಚಿ ಕೊಂಡಾಡುವವರೂ ಮನವಾರೆ ಪ್ರೀತಿಸುವವರೂ ಬೇಕಾದಷ್ಟು ಜನರು. ಆದರೂ ಅದರ ಸಾಂಪತ್ತಿಕ ಪರಿಸ್ಥಿತಿಯನ್ನು ವಿಚಾರಿಸಿದರೆ, ಕೃಷ್ಣಪಕ್ಷದ ಚಂದ್ರನ ಉಪಮೆಯನ್ನು ಕೊಡಬೇಕಾಗುವುದು. ನಿತ್ಯನಿತ್ಯವೂ ದೇವತೆಗಳಿಗೆ ತನ್ನಲ್ಲಿರುವ ಅಮೃತವನ್ನು ಕೊಟ್ಟು ಕೊಟ್ಟು ತಾನು ಬಹವಾಗುತ್ತಿರುವುದು ಚಂದ್ರನ ರೀತಿಯಂತೆ. ಹಾಗೆಯೆ ಸಂಚಾಲಕವರ್ಗದವರು ಕೈಯಿಂದ ಹಣಕೊಟ್ಟು ಕೊಟ್ಟು, ಜಯಂತಿಯ ಸಂಚಿಕೆಗಳನ್ನು ಕಾಲಕ್ಕೆ ಸರಿಯಾಗಿ ಜನತೆಗೆ ಒಪ್ಪಿಸಿ, ತಮ್ಮ ಭಾಂಡಾರವನ್ನು ಬಡಕಲಾಗಿಸಿಕೊಂಡಿದ್ದಾರೆ. ಶುಕ್ಲಪಕ್ಷದಾರಾದೆ ಇದ್ದಲ್ಲಿ ಚಂದ್ರನಿಗೆ ಲೋಕದಲ್ಲಿ ಉಳಿಗಾಲವೆ ಇರುತ್ತಿರಲಿಲ್ಲ; ಆದರೆ ಎಲ್ಲ ಕರಗಿ ಹೋಗಿದ್ದರೂ ಉಳಿದು-ಕೊಂಡಿರುವ ಸಣ್ಣ ಸುಧಾಬೀಜ ಮತ್ತೆ ದಿನದಿನಕ್ಕೆ ಬಳೆಯ ತೊಡಗುತ್ತದೆ. ಚಂದ್ರನನ್ನು ಮತ್ತೆ 'ಸುಧಾಸೂತಿ'ಯನ್ನಾಗಿ ಮಾಡುತ್ತದೆ. ಸದ್ಯ ಜಯಂತಿಯ ಜೀವನಕ್ಕಿರುವ ಕೃಷ್ಣಪಕ್ಷ ಹೋಗಿ ಬೇಗನೆ ಶುಕ್ಲಪಕ್ಷ ಬರುವುದೆಂಬ ಆಶೆಯಿದೆ; ಆದರೆ ಆ ಶುಕ್ಲಪಕ್ಷವನ್ನು ಒದಗಿಸಿಕೊಡುವ ಸಾಮರ್ಥ್ಯ ಕನ್ನಡ ಜನತೆ ಯಲ್ಲಿ ಮಾತ್ರವಿದೆಯಲ್ಲದೆ ಇನ್ನಾರ ಕೈಯಲ್ಲಿಯೂ ಇಲ್ಲ. ಜಯಂತಿಯ ಅಮೃತಸೇವೆ ಅವಶ್ಯಕವೆಂದೇ ತೋರಿದಲ್ಲಿ, ಕನ್ನಡ-ಕುಲ ತನ್ನ ಸಾಮರ್ಥ್ಯದ ಉಪಯೋಗವನ್ನು ಮಾಡಿಯೆ ಮಾಡುವುದೆಂದು ನಮ್ಮ ನಿರೀಕ್ಷೆ.

ಜಯಂತಿಯ ಮುಖ್ಯವಾದ ಉದ್ದೇಶವೆಂದರೆ ಸದಭಿರುಚಿಯ ಮರ್ಯಾದೆಯನ್ನು ವಿಶಾದಂತಹಲಲಿತ ಲೇಖನಗಳ ಮುಖಾಂತರ ವಾಗಿಯೂ, ಹೊಸ-ಹಳೆಯ ಕಾಲಗಳ ಜಗತ್ತಿನ ಪರಿಚಯಾತ್ಮಕ ಲೇಖನಗಳ ಮುಖಾಂತರವಾಗಿಯೂ ಮಧ್ಯಮ ತರಗತಿಯ ಜನರಲ್ಲಿ ಸಂಸ್ಕೃತಿಯನ್ನು ಹರಡುವುದು; ಜೀವನದಲ್ಲಿ ಕಲೆಯನ್ನು ನಿರ್ಮಿಸಿಕೊಳ್ಳಬೇಕೆಂಬ ಹಂಬಲನ್ನು ಅವರಲ್ಲಿ ಹುಟ್ಟಿಸುವುದು; ಅದಕ್ಕಾಗಿ ಆಶಾವಾದದ ಪ್ರಚಾರವನ್ನು ಹೆಚ್ಚಾಗಿ ಮಾಡುವುದು. ಕಳೆದ ಮೂರು ವರ್ಷಗಳಿಂದಲೂ ಈ ಬಗೆಯ ಕಾರ್ಯವನ್ನು ಎಷ್ಟೊಂದು ವ್ಯವಸ್ಥಿತವಾಗಿ ಇದು ಮಾಡಿದೆಯೆಂಬುದು ನಮ್ಮ ವಾಚಕರೆಲ್ಲರಿಗೆ ಅವಗತವಿದ್ದ ವಿಷಯವಾಗಿದೆ!

ಈ ಮೂರನೆಯ ವರ್ಷದಲ್ಲಿ ಜಯಂತಿ ಸ್ವಾರಸ್ಯ ಪೂರ್ಣವಾದ ಹಲವು ಸಣ್ಣಕತೆಗಳನ್ನು ಒದಗಿಸಿಕೊಟ್ಟಿದೆ. ಹರಟೆ-ಏಕಾಂಕ ನಾಟಕಗಳನ್ನು ಕೊಡುವುದರಲ್ಲಂತೂ ಜಯಂತಿ ತನ್ನದೊಂದು ವೈಶಿಷ್ಟ್ಯವನ್ನೆ ನಿರ್ಮಿಸಿಕೊಂಡು ಬಿಟ್ಟಿದೆ. ವಿಜ್ಞಾನ ಪರಿಚಯ, ಪ್ರದೇಶಪರಿಚಯ, ಪ್ರವಾಸವೃತ್ತ ಮೊದಲಾದ ವಿಷಯಗಳನ್ನೊಳ ಗೊಂಡ ಲೇಖನಗಳಂತೂ ವಾಚಕರ ಜ್ಞಾನದ ಸೀಮೆಯನ್ನು ನಿಜವಾಗಿಯೂ ಹೆಚ್ಚಿಸುವಂತಹವಿವೆ. ಪುಸ್ತಕವಿಮರ್ಶೆಗಳ ಮೂಲಕ— ಗ್ರಂಥಗಳನ್ನೋದುವಾಗ ಇರಿಸಿಕೊಳಬೇಕಾದ-ಸಾವಧಾನದ ತೂಕವನ್ನು, ಜಯಂತಿ ತನ್ನ ವಾಚಕರಿಗೆ ಚೆನ್ನಾಗಿ ತೋರಿಸಿಕೊಟ್ಟಿದೆ. 'ನಕಲೀ ನಾರಾಯಣಚಾರಿ'ಯ ಕಡೆಯಿಂದ ಸಾಕಷ್ಟು ನಗೆನುಡಿಗಳನ್ನು ಅಡಿಸಿದೆ. ಕಂಡದ್ದನ್ನು ಕಂಡಂತೆ ಆಡುವ ಮಂಗಳಾಯನಿಂದ 'ಮಲ್ಲಿನಾಥತನ' ಬರೆಯಿಸಿ, ನಗಿಸುತ್ತ ಗಂಭೀರ ವಿಷಯ ತಿಳಿಸಿಕೊಟ್ಟಿದೆ. 'ನಿರೀಕ್ಷಕ'ನ ನಾಲ್ಕು ನಿಟ್ಟಿನ ನೋಟ'ದ ಮೂಲಕ ಜಗತ್ತಿನ ವರ್ತಮಾನ ಪರಿಸ್ಥಿತಿಯನ್ನು ವಿಶ್ಲೇಷಿಸಿ ತೋರಿಸಿ ಇದೆ. ಇವೆಲ್ಲ ಲೇಖನ ಗಳನ್ನೂ ಕಾಲಕ್ಕೆ ಸರಿಯಾಗಿ ಒದಗಿಸಿಕೊಟ್ಟ ಸನ್ಯಾಸ್ಯ ಲೇಖಕ ವರ್ಗಕ್ಕೆಲ್ಲ ತನ್ನ ಕೃತಜ್ಞತೆಯ ವಂದನೆಗಳನ್ನು ಈಗ ಅರ್ಪಿಸಬೇಕಾ ದುದು ಜಯಂತಿಯ ಮುಖ್ಯ ಕರ್ತವ್ಯವಾಗಿದೆ. ಅದರಂತೆಯೆ ಚಿತ್ರಕಾರರು, ಪಡಿಯಚ್ಚುಗಾರರು, ಮುದ್ರಣಕಾರರು, ಇವರೆಲ್ಲ ಕೊಟ್ಟ ಸಹಕಾರವೂ ಅಭಿನಂದನೀಯವಾದುದು. ಚಂದಾದಾರರು, ಏಜಂಟರು, ಜಾಹೀರಾತುಕೊಟ್ಟ ವ್ಯಾಪಾರ ಸ್ಥರು ಮೊದಲಾದ ಸಂಪತ್‌ಸಹಕಾರವನ್ನು ಕೊಟ್ಟ ಮಹಾ-ಶಯರ ಉಪಕಾರವೂ ಸ್ಮರಣೀಯವಾದುದಾಗಿದೆ. ಇವರೆಲ್ಲರಿಗೂ ಆದರಪೂರ್ವಕ ಅಭಿವಂದನೆಗಳು.

ಜಯಂತಿಯ ಮೂರನೆಯ ವರ್ಷದ ಚಂದಾಹಣವನ್ನು ಸಲ್ಲಿಸದೆ ಇಡ್ದ ಮಹನೀಯರು ದಯೆಯಿಟ್ಟು ಕೂಡಲೆ ಕಳುಹುವ ಉಪಕಾರವನ್ನು ಮಾಡಬೇಕು. ಏಜಂಟರು ತಾವು ಕೊಡಬೇಕಾ ಗಿರುವ ಬಾಕಿಯನ್ನೆಲ್ಲ ಬೇಗನೆ ತೀರಿಸಬೇಕು. ಈ ವಿನಂತಿಯನ್ನು ಎಲ್ಲರೂ ಮನ್ನಿಸಿದಲ್ಲಿ ಜಯಂತಿಯ ಲೆಕ್ಕಾಚಾರಕ್ಕೆ ಕುಂಬ ಅನುಕೂಲತೆಯನ್ನು ಉಂಟುಮಾಡಿಕೊಟ್ಟಂತಾಗುವುದು.

—ಸಂಪಾದಕರು

ಧಾರವಾಡದಲ್ಲಿ ನೀರು, ನೀರು!

ಧಾರವಾಡ ನಗರದಲ್ಲೀಗ ಹಾಲು ಉತ್ತಮ ವಾದುದು ಸಿಕ್ಕುತ್ತದೆ. ಏಕೆಂದರೆ ಎಮ್ಮೆಗಳು ಹೆಚ್ಚಾಗಿ ನೀರನ್ನು ಕುಡಿಯುವುದೇ ಇಲ್ಲ; ಗೌಳಿಗರು ಹಾಲಲ್ಲಿ ನೀರನ್ನು ಕೂಡಿಸುವುದಿಲ್ಲ. ಕಾರಣವೇನು ಗೊತ್ತೂ? ಧಾರವಾಡದಲ್ಲಿ ಎಮ್ಮೆಗಳಿಗೆ ಕುಡಿಯಲಿಕ್ಕೆ ನೀರಿಲ್ಲವಿಷ್ಟೇ ಅಲ್ಲ; ಗೌಳಿಗರಿಗೆ ಹಾಲಿನಲ್ಲಿ ಕೂಡಿಸಲಿಕ್ಕೆ ಕೂಡ ನೀರು ಸಿಕ್ಕುವುದಿಲ್ಲ. ವರ್ಷದುದ್ದಕ್ಕೂ ಧಾರವಾಡ ನಗರಸಭೆಯವರು ನೀರಿನ ಸುಂಕ 'ವಸೂಲ್' ಮಾಡಿಯೆ ಮಾಡುತ್ತಾರೆ. ಆದರೆ ನೀರಿನ ಬರವು ಮಾತ್ರ ಧಾರವಾಡಕ್ಕೆ ಒಂದು ವರ್ಷವೂ ತಪ್ಪಿಲ್ಲ. ಹೀಗೆ ಏಕೆಂದು ಹಲವು ಜನರು ಮುಂಗರಾಯನನ್ನು ಕೇಳಿಯೆ ಕೇಳುತ್ತಾರೆ. ಸ್ವಲ್ಪ ವಿಚಾರ ಮಾಡಿದರೆ ಇದರ ರಹಸ್ಯ ತಿಳಿಯಬಹುದಾದರೂ ನಮ್ಮ ಜನರು ಇದರ ವಿಚಾರವನ್ನೇ ಮಾಡಲಿಕ್ಕೆ ಒಲ್ಲರು. ನೋಡಿ, ಜನರೆಲ್ಲರಿಗೂ ಯುಕ್ತವಾದ ಶಿಕ್ಷಣ ಕೊಡುವುದು ನಗರಸಭೆಯವರ ಕರ್ತವ್ಯ. ನೀರು ಕೂಡಿಸಿದ ಹಾಲನ್ನೇ ಕೊಂಡು ಉಪಯೋಗಿಸುತ್ತಿರುವ ಧಾರವಾಡದ ಧಡ್ಡ ನಾಗರಿಕರಿಗೆ, ನಿಜವಾದ ಹಾಲು ಎಂದರೆ ಎಂತಹದಿರುತ್ತದೆಂಬುದನ್ನು ವರ್ಷವರ್ಷವೂ ನಗರಸಭೆಯು ಸಪ್ರಯೋಗ ಸಿದ್ಧಮಾಡಿ ತೋರಿಸಬೇಕಾಗುತ್ತದೆ. ಊರಲ್ಲಿ ಸಾಕಷ್ಟು ನೀರು ಇದ್ದರೆ ಎಮ್ಮೆಗಳು ಹೆಚ್ಚಾಗಿ ನೀರನ್ನು ಕುಡಿಯುತ್ತವೆ; ಗೌಳಿಗರು ಹಾಲಲ್ಲಿ ನೀರನ್ನು ಸೇರಿಸುತ್ತಾರೆ. ಆದುದರಿಂದ ಕೆಲವು ದಿನ ನೀರೇ ಊರಲ್ಲಿ ಸಿಕ್ಕದಿರುವಂತೆ ಧಾರವಾಡದ ನಗರಸಭೆ ನೋಡಿಕೊಳ್ಳುತ್ತಲಿದೆ. ಇದರ ಪರಿಣಾಮದ ಸತ್ಫಲವಾಗಿ ಧಾರವಾಡದ ನಾಗರಿಕರಿಗೆ ಅಚ್ಚಹಾಲು ಸಿಕ್ಕತೊಡಗುತ್ತದೆ. ಧನ್ಯಧನ್ಯ, ಧಾರವಾಡದ ನಗರಸಭೆಯೆ! ಇನ್ನು ಕೆಲವು ದಿನ ಮಳೆಬೀಳದಿದ್ದಲ್ಲಿ ಧಾರವಾಡದ ಎಮ್ಮೆಗಳೆಲ್ಲ ಹಾಲನ್ನು ಹಿಂಡದೆ ಬರಿ ಬೆಣ್ಣೆಯನ್ನೇ ಹಿಂಡಬಹುದೆಂದೂ ನಗರಸಭೆಯ ನಿರೀಕ್ಷೆಯಿದೆಯಂತೆ; ಅಲ್ಲಿಯ ವರೆಗೆ ಜನರೆಲ್ಲ ಹಾಲನ್ನು ಕುಡಿದೇ ಬದುಕಿಕೊಳ್ಳಬೇಕು! ನಗರಸಭೆಯವರ ಪ್ರಯೋಗಕ್ಕೆ ನೆರವನ್ನು ಕೊಟ್ಟು, ತಕ್ಕ ಪ್ರಯೋಜನವನ್ನು ಪಡೆಯಬೇಕು!

ನೀರಿಲ್ಲಾ ರಂಗಾ ನೀರಿಲ್ಲಾ!
ಧಾರವಾಡದಲ್ಲಿ ಯಾರ ಬಳಿಯಲೂ
ನೀರಿಲ್ಲಾ ರಂಗಾ ನೀರಿಲ್ಲಾ!

* * *

ಲಕ್ಷ್ಮೀಟಾಕೀಜಿನ 'ಗನಿಮಾಕಾವಾ'!

ಮುಂಗರಾಯನನ್ನು ಜನ ಏನೆಂದು ತಿಳಿದಿದ್ದಾರೋ ಏನೋ! ನಿಜವಾಗಿ ನೋಡಿದರೆ ಅವನ ಕೈಯಿಂದ ಏನೂ ಆಗುವಂತಿಲ್ಲ. ಫಸಾದಾದರೂ ವಿಚಾರ ಮಾಡಿ ಸಲಹೆ-ಸೂಚನೆಗಳನ್ನು ಕೊಡುವಂತಹ ಮೆದುಳಿನ ಸಂಪತ್ತಿ ಮಾತ್ರ ತಕ್ಕಷ್ಟಿಗೆ ಇದೆ. ಅದರೆ ಮೆದುಳಿನ ಸಂಪತ್ತಿಯ ಬರಿಗೈ ಮಾಡಬೇಕೇನು? ಸಂಪತ್ತು ಇರುವ ಬರದಲೆ ಮಾತ್ರ ಬೇಕಾದಂತಹ ಕಾರ್ಯ ಮಾಡಬಲ್ಲದೆಂಬುದರ ಅನುಭವ, ಈ ಕಲಿಯುಗದಲ್ಲಿ ಬದುಕಿ ಬಾಳುತ್ತಿರುವ ಹಲವು ಜನರಿಗೆ. ಬಂದಿರಬಹುದಾಗಿದೆ. ಅದರಂತೆಯೆ ಧಾರವಾಡದಲ್ಲಿ ಹೊಸತಾಗಿ ಹೊರಟು ತನ್ನ ಬೆಳಕನ್ನು ಬೆಳಗಿಸುತ್ತಿರುವ 'ಲಕ್ಷ್ಮೀ ಟಾಕೀಜೂ' ಮಹತ್ತ್ವದ ಕಾರ್ಯವೊಂದನ್ನು ಚೆನ್ನಾಗಿ ಕೈಕೊಂಡು ನೆರವೇರಿಸುತ್ತಿದೆಯೆಂಬುದು, ಮುಂಗರಾಯನಿಗೆ ಮನವರಿಕೆಯಾಗಿ ಹೋಗಿದೆ. ಅದೀಗ ಕೈಕೊಂಡಿರುವ ಮಹತ್ತ್ವದ ಕಾರ್ಯವಾವುದೆಂದು ವಾಚಕರು ಆಶ್ಚರ್ಯದಿಂದ ಕೇಳಬಹುದು. ಬೇಡ, ಅದಕ್ಕೇತಕ್ಕೆ ಇಷ್ಟೊಂದು ಆಶ್ಚರ್ಯ! ಸ್ವಲ್ಪ ಕಣ್ಣುತೆರೆದು ನೋಡಿದರೆ ಎಲ್ಲರಿಗೂ ಕಂಡುಬರುವಂತಹ ಕಾರ್ಯವದು. ಧಾರವಾಡದಲ್ಲಿಯ ಉಗ್ರಕನ್ನಡಿಗರು 'ಕಾವೇರಿಯಿಂದ ಗೋದಾವರಿಯ ವರೆಗೆ ಕರ್ನಾಟಕ' ಎಂದು ಕಣ್ಣುಮುಚ್ಚಿಕೊಂಡು ಕೂಗಿಯೆ ಕೂಗುತ್ತಾರೆ. ಲಕ್ಷ್ಮೀ ಟಾಕೀಜಿನ ಸಂಚಾಲಕರು 'ಧಾರವಾಡ ಕೂಡ ಕರ್ನಾಟಕವಲ್ಲ; ದಕ್ಷಿಣ ಮಹಾರಾಷ್ಟ್ರ' ಎಂದು ಸಿದ್ಧಮಾಡುವುದಕ್ಕಾಗಿ ಕೂಗದೆ ಕೆಲಸಮಾಡುತ್ತಿದ್ದಾರೆ. ಇದಕ್ಕೆ ಉದಾಹರಣೆ ಬೇಕಿದ್ದರೆ ಅವರು ದಿನದಿನವೂ ಪಂಚುವ ಪಸ್ತ ಪತ್ರಿಕೆಗಳಲ್ಲಿ ಕನ್ನಡಕ್ಕೆ ದೊರೆಯುವ ಸ್ಥಾನವನ್ನು ನೋಡಿರಿ! ಇಂಗ್ಲಿಷೂ—ಮುಖ್ಯವಾಗಿ—ಮರಾಟಿಯೂ ಕನ್ನಡವನ್ನು ಕಾಲುಕಸವಾಗಿ ಪೆಟ್ಟಿಬಿಟ್ಟಿರುತ್ತವೆ. ಸುಶಿಕ್ಷಿತ ಜನರಿರುವ ಬೀದಿಗಳಲ್ಲೆಲ್ಲ ಮರಾಟಿ ಭಾಷೆಯಲ್ಲಿ ಬರೆದ ಭಿತ್ತಿಪತ್ರಗಳು ಕಂಗೊಳಿಸುತ್ತಿರುತ್ತವೆ. ಬೀದಿಬೀದಿಯಲ್ಲಿಯೂ ಪ್ರಕಟನೆಗಾಗಿ ಕೂಗುತ್ತ ಹೊರಟಿರುವ ಧ್ವನಿಯಂತ್ರವು ಹೆಚ್ಚಾಗಿ, ಮರಾಟಿ—ಒಂದೆರಡು ಹಿಂದಿ—ಹಾಡುಗಳನ್ನೇ ಧಾರವಾಡದ ಕನ್ನಡಿಗರ ಕಿವಿಗಳಲ್ಲಿ ತುಂಬುತ್ತ ಹೊರಟಿರುತ್ತವೆ. ಧಾರವಾಡದಲ್ಲಿ 'ಲಕ್ಷ್ಮೀ ಟಾಕೀಜು' ಒಂದೇ ಇರುತ್ತಿದ್ದರೆ ಯಾರೂ ಅನ್ನಬಹುದಾಗಿತ್ತು: 'ಧಾರವಾಡ ದಕ್ಷಿಣನುಹಾಮಹಾರಾಷ್ಟ್ರವೆ!' ಎಂದು. ಆದರೆ ಅಲ್ಲಿ ಇನ್ನೂ ಎರಡು (ವಿಜಯ, ರೀಗಲ್) 'ಟಾಕೀಜು'ಗಳಿವೆ. ಅವು ತಮ್ಮ ಎಲ್ಲ ಪ್ರಚಾರದ ಕೆಲಸವನ್ನು ಕನ್ನಡದಲ್ಲಿಯೆ ನಡೆಯಿಸಿ ಕೆಲಸವನ್ನು ಕೆಡಿಸುತ್ತಿವೆ. ಆದುದರಿಂದ ಅವೆರಡೂ 'ಟಾಕೀಜು'ಗಳ ಕಡೆಗೆ ಜನ ಹೋಗದಿರುವಂತೆ ಲಕ್ಷ್ಮೀ ಟಾಕೀಜಿನವರು ತಮ್ಮಲ್ಲಿ ಅನೇಕ ಆಕರ್ಷಕ ಸಾಧನಗಳನ್ನು ಕಲ್ಪಿಸಲು ಹವಣಿಕೆ ಹಾಕುತ್ತಲಿದ್ದಾರಂತೆ. ಆ ಹವಣಿಕೆಗೆ ತಕ್ಕ ಪ್ರತಿಫಲ ಸಿಕ್ಕೇಸಿಕ್ಕುವುದೆಂದು ಮುಂಗರಾಯ ಆ ಸಂಚಾಲಕರಿಗೆ ಖಂಡಿತವಾದ ನಂಬುಗೆಯನ್ನು ಕೊಡುತ್ತಾನೆ. ಏಕೆಂದರೆ ಕನ್ನಡಿಗರ ಪರಿಸ್ಥಿತಿ ಮುಂಗರಾಯನಿಗೆ ಚೆನ್ನಾಗಿ ಗೊತ್ತು. ಅವರು ಲಕ್ಷ್ಮೀ ಟಾಕೀಜಿನ ಚಲಚ್ಚಿತ್ರ ನೋಡುವಾಗಷ್ಟು ಕಣ್ಣುತೆರೆದಿರುತ್ತಾರೆ; ಮಿಕ್ಕ ವೇಳೆಯಲ್ಲಿ ಮುಚ್ಚಿಯೆ ಬಿಟ್ಟಿರುತ್ತಾರೆ. ಆಗ ಯಾರೂ ಏನನ್ನೂ ಮಾಡಬಹುದು.

ಸೋಜಾ ಕನಡ ಕುಮಾರಾ,.. ಸೋಜಾ!
ಆ ಮೇಲೇ ನೋಡೋ ನಿನ್ನಾ.. ಸೋಜಾ!

* * *

ಬೆಂಕಿಪೆಟ್ಟಿಗೆಯೆ ಭೂತ

ಬೆಂಕಿಪೆಟ್ಟಿಗೆ ತುಟ್ಟಿಯಾದರೆ ತಾವೇನು ಮಾಡಬೇಕೆಂಬುದನ್ನು ಕುರಿತು, ಕನ್ನಡನಾಡಿನ ಮಾನ್ಯ

ಎಲ್ಲರೂ ಯಾಕೆ ಬಳಲುವದಿಲ್ಲ?

ಎಲ್ಲರ ಪ್ರಕೃತಿಯು ಒಂದೇ ನನನೆ ಇರದ್ದರಿಂದ. ಆದರೂ ಬಿಸಿಲಿನ ತಾಪ, ಅಂಗೈ ಅಂಗಾಲಿನ ಉರಿವು, ಉರಿಯುವ ಉಚ್ಚಿ, ಹುಳಿಡರಿಕೆ, ನೀಲಿವ ನೀಲೆ ನೀರಡಿಕೆ, ನಿರುತ್ಸಾಹ, ದಣಿವು ಮುಂತಾದ ತೊಂದರೆಗಳ್ಳು ಮೂಡಿದ ಕೂಡಲೇ ನೀವು ಸಾಕಷ್ಟು ನಿದ್ದೆ ಮಾಡುವದಿಲ್ಲ, ನೀವು ಬಹಳ ಶ್ರಮಪಡುನಿರಿ, ನಿಮ್ಮ ಆಹಾರವು ನಿಯಮ್ಮಿತವಿಲ್ಲ-ಈ ಕಾರಣಗಳಿಂದಲೂ ಹೊಟ್ಟೆಯಲ್ಲಿ ಉಷ್ಣ ಹವೆಯು ಹೋಗುವದರಿಂದಲೂ ನಿಮ್ಮ ನಚಚನೇಂದ್ರಿಯಗಳು ದಣಿದು ಮುಂದವಾಗಿವೆಯೆಂದು ತಿಳಿಯಿರಿ. ಅವಕ್ಕೆ ಮೊದಲಿನಂತೆಯೇ ಕಸುವು ಹೊಡಲಿಕ್ಕೆ **ಪರ್ಲ ಕಾಫ್ಲೆ**ಯನ್ನು ತೆಗೆದು ಕೊಳ್ಳಹತ್ತಿರಿ. ಮೈಯಲ್ಲಿಯ ಎಲ್ಲ ದಣಿವೂ ನಿರುತ್ಸಾಹವೂ ಕೂಡಲೇ ಬಿಟ್ಟುಹೋಗುವವು. ಶುದ್ಧ ಕಳೆಎದ್ದು ಕೆಂಪು ರಕ್ತ ಹರಿಯಹತ್ತುನದು. ಹೊಟ್ಟೆ ಹರಿಯುವಂತೆ ಹಸಿವೆ ಹತ್ತಿ ಉಂಡದ್ದೆಲ್ಲ ಕರಗಿ ಹೋಗುನದು. ಮೈಯಲ್ಲೆಲ್ಲ ಆನಂದ ಉತ್ಸಾಹ ತುಂಬಿ ಬಿಸಿಲು ಅಂದ ಕೂಡಲೇ ನಗೆ ಬರುವದು.

ಯಿಂದ ಬಿಸಿಲಿನ ಬಳಲಿಕೆ ಆಗದು

ಹಿರಿಯರೊಬ್ಬರು ಪತ್ರಿಕೆಗಳಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಅದನ್ನೋದಿದ ಮುಂಗರಾಯ ಹಿಗ್ಗಿನಿಂದ ಹೆಜ್ಜೆ ಹಿಡ್ಡು ಕುಣಿದಾಡಿದ. 'ಬೆಂಕಿಪೆಟ್ಟಿಗೆಯನ್ನು ಬಿಡಬೇಕಾದರೆ ನಾವು ಹಿಂದಿನ ಕಾಲದಲ್ಲಿ ಬದುಕಬೇಕು!' ಎಂಬುದು ಆ ಹಿಂದಿನ ಕಾಲದ ಹಿರಿಯರ ಅಭಿಪ್ರಾಯ. ಅದಕ್ಕಾಗಿ ನಾವಿಂದು ಗುಡಿಗಳಲ್ಲಿ ನಂದಾದೀಪ ಉರಿಸಬೇಕು; ಮನೆಗಳಲ್ಲಿ 'ಅಗ್ನಿಹೋತ್ರ' ಇರಿಸಬೇಕು; ಊರ ಚಾವಡಿಯ ಮುಂದೆ ಬೆಂಕಿಯ ಕುಂದಗಳನ್ನು ಏರ್ಪಡಿಸಬೇಕು; ಹೊಲಗಳಲ್ಲಿಯ ಒಕ್ಕಲಿಗರು ಹೊತ್ತಿಸಿದ ಒಲೆಯನ್ನು ಆರಗೊಡಿಸಬಾರದು; ಧೂಮ್ರಪಾನ ಮಾಡುವ ತಂಬಾಕಿನ ಸಂಗಾತಿಗಳೆಲ್ಲ ಜೇಬುಗಳ್ಳಲ್ಲಿ ಚಕಮಕಿಯ ಸಲಕರಣೆಗಳನ್ನು ಇರಿಸಿಕೊಳ್ಳಬೇಕು! ಅಬ್ಬಾ, ಇದೆಲ್ಲ ಇಂದಿನವರಿಗೆ ಹೇಗೆ ಸಾಧ್ಯವಾಗಬೇಕು? ಮನೆಯ ಮಕ್ಕಳ ನೆತ್ತಿ ಪನಿಯೆಣ್ಣೆಯನ್ನು ಕಾಣದಿರುವಾಗ, ಗುಡಿಯಲ್ಲಿಯ ನಂದಾದೀಪಗಳಿಗಾಗಿ ಎಣ್ಣೆಯ ಕೆರೆ ಎಲ್ಲಿಂದ ಸಿಕ್ಕಬೇಕು ನಮಗೆ? ಮನೆಗಳಲ್ಲಿ ಅಗ್ನಿಹೋತ್ರ ಇರಿಸಬೇಕಾದರೆ ಅದಕ್ಕೆ ಬೇಕಾಗುವ ಸೌದೆಯ ವೆಚ್ಚವನ್ನು ಯಾರು ಕೊಡುವವರು? ಇದ್ದ ಆರಣ್ಯಕ್ಕೆಲ್ಲ ಸರಕಾರದ ಬಂಧನ ವಿದೆ! ಸಭೆ-ಕಚೇರಿ-ಸಭ್ಯಜನಸಮೂಹಗಳಲ್ಲಿ ಉಸಿರಾಡುವಾಗ, ಚಕಮಕಿಯನ್ನು ಕಟೆಯುವ ಅಸಭ್ಯ ವೃತ್ತಿಗೆ ಯಾರು ಸಿದ್ಧರಾಗಬೇಕು? ಆದುದರಿಂದಲೆ ಮುಂಗರಾಯನೂ ಎಲ್ಲ ಸಾಧಕ ಬಾಧಕ ಪ್ರಮಾಣಗಳಿಂದ ವಿಚಾರಮಾಡಿ, ಕಡ್ಡಿಯ ಪೆಟ್ಟಿಗೆಯ ನಿಷಯದಲ್ಲಿ ಈ ಅಭಿಪ್ರಾಯಕ್ಕೆ ಬಂದು ನಿಂತುಕೊಂಡಿದ್ದಾನೆ: ಅದೇನೆಂದರೆ 'ಮನುಷ್ಯರೆಲ್ಲ ಮುಂಗರಾಯನಂತೆ ವರ್ತಿಸಬೇಕು!' ಎಂದು, ಎಂದರೆ ಮನೆಬಿಟ್ಟು ಮರಗಳಲ್ಲಿ ವಾಸಮಾಡಬೇಕು. ಇದರಿಂದ ದೀಪಹಚ್ಚಬೇಕಾದ ತೊಂದರೆಯೆ ತಪ್ಪಿಹೋಗುವುದು. ಮುಂಗರಾಯನಂತೆಯೆ ಮರದ ಎಲೆ-ಕಗ್ಗಾಯಿ-ಹುಲ್ಲು-ಹಣ್ಣುಗಳನ್ನು ತಿನ್ನಬೇಕು. ಇದರಿಂದ ಆಡಿಗೆಗಾಗಿ ಒಲೆಹೊತ್ತಿಸಬೇಕಾಗುವ ಕಷ್ಟವೆ ತಪ್ಪಿಹೋಗುವುದು. ಮುಂಗಗಳ ಜಾತಿ ಧೂಮ್ರಪಾನ ಮಾಡುವುದೇ ಇಲ್ಲ; ಮನುಷ್ಯರೂ ಮಾಡಬಾರದು. ಇದೆಷ್ಟು ಲಾಭಕರವಾದ ಉಪಾಯವೆಂದು ತಿಳಿದಿದ್ದೀರಿ, ಇದರಿಂದ ಕಡ್ಡಿಪೆಟ್ಟಿಗೆಯಷ್ಟೇ ಅಲ್ಲ, ಜಗತ್ತಿನಲ್ಲಿಯ 'ಅಗ್ನಿ' ಎಂಬ ಮಹಾಭೂತ ಸತ್ತು ಹೋದರೂ ಯಾರೂ ಯೋಚನೆ ಮಾಡಬೇಕಾಗಿಲ್ಲ. ಅವನ್ನು ಪೆನಿಸಿದವರು ಮುಂಗರಾಯನ ಈ ಅಭಿಪ್ರಾಯವನ್ನು ಕುರಿತು ವಿಚಾರಮಾಡಿ, ಇದನ್ನು ತಂತಮ್ಮ ಆಚರಣೆಯಲ್ಲಿ ತರಬಹುದೆಂದು ನಮ್ಮ ನಂಬುಗೆ-ಭರವಸೆ!

"ತೊಲಗುತೊಲಗಗ್ನಿಯೇ ಭರತಭುವಿ-
ಯಿಂದ!
ತೊಲಗಿದರು ಭಯವಿಲ್ಲ!" ಮುಂಗಣ್ಣ
ಎಂದ!

* * *

ಪದ್ಯಸಾಹಿತ್ಯಕ್ಕೆ ಸರಕಾರದ ಮನ್ನಣೆ!

ಮುಂಗರಾಯನಿಗೆ ಇದುವರೆಗೊಂದು ಬಗೆಹರಿಯದ ತೊಡಕು ಗಂಟುಬಿದ್ದಿದ್ದಿತು. ಅದೇನೆಂದರೆ ಸರಕಾರದ ಇದುವರೆಗಿನ ವ್ಯವಹಾರವನ್ನೆಲ್ಲ ನೋಡಿದರೆ ಎಲ್ಲವೂ ಗದ್ಯದಲ್ಲಿಯೆ ನಡೆಯುತ್ತಿದ್ದಿತು. ಮೇಲಿನ ಅಧಿಕಾರಿಗಳ ಹುಕುಮು, ಸೂಚನಾಪತ್ರ, ನೋಟೀಸು, ಸಮನ್ಸು, ಪೊದಲಾಗಿ ಯಾವುವು ಬಂದರೂ ಗದ್ಯದಲ್ಲಿಯೆ. ಕೆಳಗಿನವರು ಮೇಲಿನವರಿಗೆ ಬರೆದುಕೊಳ್ಳಬೇಕಾದ ಬಿನ್ನವತ್ತಳೆ, ಅರ್ಜಿ, ವರದಿ ಮುಂತಾದುವುಗಳೆಲ್ಲವೂ ಗದ್ಯದಲ್ಲಿಯೆ. ಕೋರ್ಟಿಗೆ ಸಾಕ್ಷಿಹೇಳಲು ಹೋದವರ ವ್ಯವಹಾರ ಗದ್ಯದಲ್ಲಿಯೆ; ವಕೀಲರ ಆರ್ಗ್ಯೂಮೆಂಟು ಗದ್ಯದಲ್ಲಿಯೆ, ನ್ಯಾಯಾಧೀಶರ ಜಜ್ಜ್‌ಮೆಂಟು ಗದ್ಯದಲ್ಲಿಯೆ. ಇದನ್ನೆಲ್ಲ ನೋಡಿದ ಮುಂಗರಾಯನಿಗೆ 'ಸರಕಾರ ಪದ್ಯವನ್ನು ಬಹಿಷ್ಕರಿಸಿಯೆ ಬಿಟ್ಟವೆಯೆ?' ಎಂಬ ತೊಡಕು ಆಗಾಗ ತೊಂದರೆ ಕೊಡುತ್ತಿತ್ತು. ಇದರ ಬಗ್ಗೆ ಇದು

(೬೬ನೆಯ ಪುಟ ನೋಡಿರಿ.)

ಮಾವನಿಂದ ಬಂದ ಕಾಗದ

(ಒಂದು ವಿಚಾರ ಪ್ರಚೋದಕ ಪತ್ರ)

ಲೇ. 'ಭಾರತೀಸುತ' ನೈನಾಡು

★

ಅಡ್ಡಹಾದಿಯನ್ನು ಹಿಡಿಯುವುದು ಮನುಷ್ಯನ ಸ್ವಭಾವವಿಶೇಷವೇನೂ ಅಲ್ಲ; ನಾವೀಗ ಅವನಲ್ಲಿ ಕಾಣುತ್ತಲಿರುವ ಮಾನಸಿಕ ಮತ್ತು ನೈತಿಕ ಕುಂದು-ಕೊರತೆಗಳು, ನಮ್ಮ ಸಮಾಜದ ಇಂದಿನ ಅನಾರೋಗ್ಯಸ್ಥಿತಿಯ ಮೂಲಕ ಹುಟ್ಟಿದುವುಗಳಾಗಿವೆ?

★

ನಳಿನಾ,

ನೀನು ಬರೆದ ಕಾಗದ ಕೈಸೇರಿತು. ಉತ್ತರಿಸೀಯಲು ತಡವಾದುದಕ್ಕೆ ಕ್ಷಮಿಸು. ಕೈತುಂಬ ಕೆಲಸಗಳು; ತಲೆತುಂಬ ವಿಚಾರಗಳು. ಬರೆಯಲು ಈ ತನಕ ಅನುವು ಸಿಕ್ಕಲಿಲ್ಲ.

ನೀನು ಚೆನ್ನಾಗಿರುವೆಯೆಂಬುದನ್ನು ಅರಿತು ಹರುಷವೆನಿಸಿತು. ರಾಜ (ನಿನ್ನಾತ) ನಿನ್ನ ಓದುಗಾರಿಕೆಗೆ— ಸ್ವತಂತ್ರಆಲೋಚನೆಗಳಿಗೆ—ಪ್ರೋತ್ಸಾಹವನ್ನು ನೀಡುತ್ತಲಿರುವನೆಂಬುದು ನನ್ನಲ್ಲಿ ಆನಂದವನ್ನು ಹುಟ್ಟಿಸಿತು. ಓದುಗಾರಿಕೆ, ಆಲೋಚನೆಗಳು ನಿನ್ನ ತಿಳುವಿನ ಸೀಮೆಯನ್ನು ಹಿರಿದಾಗಿಸಲಿ!

ಆ ಮೇಲೆ: ನಿನ್ನ ನೆರೆಮನೆಯ ಭಾಮೆಯನ್ನು ಅವರ ಮಾವ ಮನೆಯಿಂದ ಹೊರಕ್ಕೆ ಹಾಕಿದರೆಂಬುದು ನನ್ನನ್ನು ವ್ಯಥೆಗೆ ಈಡುಮಾಡಿತು. ಅಹುದು, ಅವಳ ನೆನಪು ನನ್ನ ಚಿತ್ತದಿಂದ ಅಳಿಸಿಲ್ಲ. ಕಳೆದ ಸಲ ನಿನ್ನ ಊರಿಗೆ ನಾನು ಬಂದಿದ್ದಾಗ ಅವಳನ್ನು ನೋಡಿದ್ದೆ; ಕಂಡುಮಾತನಾಡಿದ್ದೆ. ನೋಡು, ಭಾಮೆಯು ಒಳ್ಳೆಯ ಹೆಂಗುಸು; ಅಂದು ನನಗೆ ಹಾಗೆ ಎನಿಸಿತು. 'ಇಷ್ಟು ಎಳೆಯ ವಯಸ್ಸಿನಲ್ಲಿಯೆ ಆಕೆ ವಿಧವೆಯಾದಳಲ್ಲ; ಅವಳ ಬಾಳು ಬಂಜರುನೆಲದಂತಾಯಿತಲ್ಲ!' ಎಂಬೀ ವಿಚಾರಗಳು ಆ ಸಂದರ್ಭದಲ್ಲಿ ನನ್ನ ಎದೆಯನ್ನು ಚುಚ್ಚಿದುವು. ನಮ್ಮ ಸಮಾಜದಲ್ಲಿದ್ದ ಅನೀತಿಯನ್ನು ನೆನೆಯಲು ಅಂದು ನನ್ನೆದೆಯು ನಡುಗಿತು.

ನಳಿನಾ, ಅಹುದು—ನೀನು ಬರೆದಂತೆ ಭಾಮೆಯನ್ನು ಅವರ ಮಾವ ಮನೆಯಿಂದ ಹೊರಕ್ಕೆ ಹಾಕಿದರು. ಆಚಾರಪ್ರಿಯರು ಆ ಹೆಣ್ಣನ್ನು ಜಾತಿಯಿಂದ ಹೊರಗೂಡಿದರು. ಆಕೆ ಬೀದಿಯನ್ನು ಅವಲಂಬಿಸಬೇಕಾಗಿ ಬಂದಿತು. ಬಿಚ್ಚಿ ಮಡಗಿರುವ ಹೆಬ್ಬಾಗಿಲನ್ನು ದಾಟಿ, ಆಜೆಗಿನ ನರಕದಲ್ಲಿ ಸ್ವವೇತಿಸುವುದಲ್ಲದೆ ಆಕೆಗೆ ಬೇರಿನ್ನಾವ ದಾರಿಯಿದೆ!

'ಭಾಮೆಯ ಶೀಲದಲ್ಲಿ ಕುಂದಿದೆ; ಆಕೆ ವ್ಯಭಿಚಾರಿಣಿ, ಅವಳನ್ನು ಜಾತಿಯಿಂದ ಹೊರಹಾಕಿದುದು ಚೆನ್ನಾಯಿತು; ಅನಾಚಾರಗಳಿಂದ ಸಮಾಜವನ್ನು ಉದ್ಧರಿಸಿದಂತಾಯಿತು' ಹೀಗೆಲ್ಲ ಆಚಾರವಂತರು ಸಮಾಧಾನವನ್ನು ತಾಳುತ್ತಲಿರಬಹುದು. ಆದರೆ ನೋಡು, ಸಮಾಜದ ರೀತಿ-ನೀತಿಗಳಲ್ಲಿಯ ಕುಂದುಕೊರತೆಗಳನ್ನು ವಿಶ್ಲೇಷಿಸಿ ನೋಡಿ, ಅವುಗಳಿಗಿರುವ ಪರಿಹಾರವನ್ನು ನೋಡಬಯಸುವ ವಿಚಾರಶಾಲಿಯು, ಈ ರೀತಿ ಸಮಾಧಾನವನ್ನು ತಾಳಲಾರ; ತಾಳಲಿಕ್ಕೆ ಸಾಧ್ಯವೂ ಇಲ್ಲ. ಏಕೆಂದರೆ ಆಚಾರವಂತರ ಶುದ್ಧಿಪರಿಶ್ರಮಗಳು ಸಮಾಜದಲ್ಲಿಯ ಕುಂದು-ಕೊರತೆಗಳನ್ನು ಇಲ್ಲವಾಗಿಸುವುದರ ಬದಲು, ಕೊಳೆ-ಹೊಲಸುಗಳನ್ನು ತುಂಬಿಸುತ್ತಲಿವೆ. ನಡತೆಯು ಚೆನ್ನಾಗಿಲ್ಲವೆಂಬ ಕಾರಣದಿಂದ ಒಂದು ವ್ಯಕ್ತಿಯನ್ನು ನಾವು ಸಮಾಜದಿಂದ ದೂರವಿರಿಸುವುದಾದರೆ, ಅದು ಅವನನ್ನು ಅಡ್ಡಹಾದಿಹಿಡಿಯಲಿಕ್ಕೆ ಪ್ರೇರಿಸಿದಂತಾಗುತ್ತದೆ. ಒಂದು ವ್ಯಕ್ತಿಯು ನಮ್ಮ ಸಾಮಾಜಿಕ ರೀತಿ-ನೀತಿಗಳನ್ನು ವಿಚಾರಿಸಿ ನಡೆವುದಾದರೆ, ಆ ರೀತಿ ವರ್ತಿಸಲು ಅವನನ್ನು ಪ್ರೇರಿಸಿದುದು ಏನೆಂಬುದನ್ನು ಮೊಟ್ಟಮೊದಲು ಪರಿಶೀಲಿಸಬೇಕಾಗಿದೆ. ವ್ಯಕ್ತಿಯ ಆಶೆ-ಆಕಾಂಕ್ಷೆಗಳಿಗೆ ತಡೆಯನ್ನು ತಂದೊಡ್ಡುವ, ವ್ಯಕ್ತಿಯ ಸ್ವಾಭಾವಿಕಬೆಳವಣಿಗೆಗೆ ವಿಘಾತಕವೆನಿಸುವ ಲೋಪ-ದೋಷಗಳು ನಮ್ಮ ಸಾಮಾಜಿಕ ಕಟ್ಟಳೆಗಳಲ್ಲಿವೆಯೇ ಎಂಬುದನ್ನು ನಮ್ಮ ಸಮಾಜದ ಮುಂದಾಳುಗಳು ಪರಿಶೋಧಿಸಬೇಕಾಗಿದೆ. ಈ ರೀತಿ ಶೋಧಿಸಿ ನೋಡಿ, ಪ್ರಗತಿಗೆ ತಡೆಯೊಡ್ಡದಂತಕ್ಕ ರೀತಿ-ನೀತಿಗಳನ್ನು ಇಲ್ಲವಾಗಿಸುವ ಉದಾರದೃಷ್ಟಿಯನ್ನು ನಮ್ಮ ಆಚಾರವಂತರು ಕೈಕೊಳ್ಳುವುದಾದರೆ, ನಮ್ಮಲ್ಲಿಯ ಕುಂದು ಕೊರತೆಗಳು ತಾವಾಗಿಯೇ ಅಳಿಸುವುವು. ಹಾಗಲ್ಲದೆ ಸಾಮುದಾಯಿಕ ಕಟ್ಟಳೆಯನ್ನು ವಿಚಾರಿಸಿ ನಡೆದ ಒಂದು ವ್ಯಕ್ತಿಯನ್ನು ದೂರವಿರಿಸುವುದರಿಂದ, ನಮ್ಮ ಸಮಾಜದಲ್ಲಿ ತುಂಬಿರುವ ಕೊಳೆ-ಹೊಲಸುಗಳು ಇಲ್ಲವಾಗವು.

ನೋಡು ನಳಿನಾ, ನಾವು ಒಂದು ವ್ಯಕ್ತಿಯನ್ನು ಸಮಾಜದಿಂದ ವಿಂಗಡಿಸಿ ದೂರವಿರಿಸುವ ಮುನ್ನ, ಸಾಮುದಾಯಿಕ ಕಟ್ಟಳೆಯನ್ನು ವಿಚಾರಿಸಿ ನಡೆಯಲಾತನನ್ನು ಪ್ರೇರಿಸಿದುದೇನೆಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಕೇವಲ ಗೊಂದಲವನ್ನೆಬ್ಬಿಸ-

ಲೋಸುಗ ಕಾಯಿದೆ-ಕಟ್ಟಳೆಗಳನ್ನು ವಿಸ್ತಾರ ಸಡೆಯುವುದು ಮನುಷ್ಯಸ್ವಭಾವವೇನೂ ಅಲ್ಲ; ಅವನ ವೈಯಕ್ತಿಕ ಆಶೆ-ಆಕಾಂಕ್ಷೆಗಳಿಗೆ ಸಾಮುದಾಯಿಕ ಕಟ್ಟಳೆಗಳು ತಡೆಯಾದಾಗ, ಅವನು ಕಾಯಿದೆ-ಕಟ್ಟಳೆಗಳೊಡನೆ ಮತ್ಸರಿಸಬೇಕಾಗಿ ಬರುತ್ತದೆ. ಅವನ ಸ್ವಭಾವ-ಸಂಸ್ಕಾರಗಳು ಈ ಮತ್ಸರದ ಕಾವನ್ನು ಹೆಚ್ಚಿಸುತ್ತವೆ. ಕೊನೆಗೆ ಅವನು ಸಮಾಜದ ಕಾಯಿದೆ-ಕಟ್ಟಳೆಗಳನ್ನು ಮೆಟ್ಟಿ ನಿಲ್ಲುತ್ತಾನೆ. ಹಳೆಯ ರೀತಿ-ನೀತಿಗಳನ್ನು ವಿಸ್ತಾರಿದ ತಪ್ಪಿಗೆ ಸಮಾಜವನ್ನು ಆಳತಕ್ಕ ಆಚಾರವಂತರು ಅವನನ್ನು ಸಮಾಜದಿಂದ ಹೊರಹೊಡಿ, ಅವನನ್ನು ಆ ಮೂಲಕ ದಂಡಿಸಲು ಯತ್ನಿಸುತ್ತಾರೆ. ವ್ಯಕ್ತಿಯು ಸಮಾಜದ ನಿಷ್ಠುರತೆಯನ್ನು ಅನುಭವಿಸಬೇಕಾಗುತ್ತದೆ.

ನಮ್ಮ ಸಮಾಜದ ರೀತಿ-ನೀತಿಗಳನ್ನು ನಾವು ವಿಶ್ಲೇಷಿಸಿ ನೋಡುವುದಾದರೆ, ಅವುಗಳು ಇಂದಿನ ಪರಿಸ್ಥಿತಿಗೆ ಯಥಾಯೋಗ್ಯವಾದುವುಗಳಲ್ಲವೆಂಬುದು ನಮ್ಮ ಕಣ್ಣುಗಳಿಗೆ ಕಾಣದಿರದು. ಅವುಗಳಲ್ಲಿ ವಿಸ್ತಾರವು ಬಹಳ ಹಳೆಯವು; ಬಾದರಾಯಣನ ಕಾಲಕ್ಕೆ ಸೇರಿದುವು. ಅಂದಿನ ಸ್ಥಿತಿಯಲ್ಲಲ್ಲ..ನಮ್ಮ ಇಂದಿನ ಸಮಾಜವು ಇರುವುದು. ಕಾಲವು ಬದಲಾಯಿಸಿದಂತೆ ಸಮಾಜದ ಸ್ಥಿತಿ-ಗತಿಗಳು ಪಲ್ಲಟಿಸಿವೆ. ಹಿಂದಣ ಜನರು ಬಿಡಿಸಬೇಕಾಗಿದ್ದ ಸಮಸ್ಯೆಗಳೇ ಬೇರೆ; ಇಂದು ನಮ್ಮಮುಂದಿರುವ ಸಮಸ್ಯೆಗಳೇ ಬೇರೆ. ಹಳೆಯ ಉಪಾಯಗಳಿಂದ ಆಧುನಿಕ ಕಾಲದ ತೊಡಕನ್ನು ಬಿಡಿಸಲಾಗುವಂತಿಲ್ಲ. ಇಂದಿನ ತಡೆ-ತೊಡಕುಗಳನ್ನು ಬಗೆಹರಿಸಲು ಹೊಸ ಉಪಾಯಗಳನ್ನು ಆರಿಸಬೇಕಾಗಿ ಬಂದಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಹಳೆಯ ರೀತಿ-ನೀತಿಗಳು ಆಧುನಿಕ ಮನುಷ್ಯನಿಗೆ ಸುಖ-ಸಂತೃಪ್ತಿಗಳನ್ನು ಈಯುವಂತಿಲ್ಲ; ಅವನ ನೈತಿಕ ಮತ್ತು ಮಾನಸಿಕ ಬೆಳೆವಣಿಗೆಗಳಿಗೆ ಪೋಷಕವಾಗುವಂತಿಲ್ಲ. ಅವು ಅವನ ಅಭಿವೃದ್ಧಿಯನ್ನು ಹಲವು ವಿಧದಲ್ಲಿ ತಡೆಯುತ್ತಲಿವೆ. ಹೀಗೆ ಹಳೆಯ ಕಾಯಿದೆ-ಕಟ್ಟಳೆಗಳೂ ಸಮಾಜದ ನೀತಿ-ನಿಯಮಗಳೂ, ಮುಂದೆ ಅಡಿಯಿಡುತ್ತಿರುವ ಮನುಷ್ಯನನ್ನು ಕೈಹಿಡಿದು ನಿಲ್ಲಿಸುತ್ತಲಿವೆ. ಮನುಷ್ಯನ ಬೆಳೆವಣಿಗೆಗೆ ತಡೆಯನ್ನು ತಂದೊಡ್ಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ, ಹಳೆಯ ನೀತಿನಿಯಮಗಳನ್ನು ಬದಲಾಯಿಸಬೇಕಾದುದು ಅಗತ್ಯ. ಹಳೆಯವುಗಳ ಸ್ಥಾನದಲ್ಲಿ ಇಂದಿನ ಪರಿಸ್ಥಿತಿಗೊಪ್ಪುವ ನೀತಿ-ನಿಯಮಗಳನ್ನು ಏರ್ಪಡಿಸಬೇಕು. ಹಾಗಾದರೆ ಸಮಾಜವು ಆರೋಗ್ಯ ಸ್ಥಿತಿಯನ್ನು ಹೊಂದುವುದು. ಒಂದು ಸಂಗತಿಯನ್ನು ನಾವು ಯಾವಾಗಲೂ ನೆನೆಪಿನಲ್ಲಿಡಬೇಕಾಗಿದೆ. ಅಡ್ಡ ದಾರಿಯನ್ನು ಹಿಡಿಯುವುದು ಮನುಷ್ಯನ ಸ್ವಭಾವವಿಶೇಷವೇನೂ ಅಲ್ಲ. ನಾವು ಈಗ ಅವನಲ್ಲಿ ಕಾಣುತ್ತಲಿರುವ ಮಾನಸಿಕ ಮತ್ತು ನೈತಿಕ ಕುಂದುಕೊರತೆಗಳು, ಸಮಾಜದ ಇಂದಿನ ಅನಾರೋಗ್ಯ ಸ್ಥಿತಿಯ ಮೂಲಕ ಹುಟ್ಟಿದುವುಗಳಾಗಿವೆ. ಮನುಷ್ಯನಲ್ಲಿ ಹುದುಗಿರುವ ಕ್ರಿಯಾತ್ಮಕ ಚೇತನವನ್ನು ನಾವು ಒಂದು ಪುಟ್ಟ ತೋಡಿಗೆ ಹೋಲಿಸಬಹುದು. ತೋಡಿನ ಸ್ವಾಭಾವಿಕ ಗತಿಯನ್ನು ನಾವು ಒಡ್ಡುಹಾಕಿ ತಡೆದರೆ, ಮುಂದೆ ಸಾಗಲು ಅದು ಬೇರೊಂದು ಹಾದಿಯನ್ನು ಹಿಡಿಯುತ್ತದೆ. ಅದರಂತೆಯೆ ಮನುಷ್ಯನ ಕ್ರಿಯಾತ್ಮಕ ಚೇತನದ ಗತಿಗೆ ಸಾಮುದಾಯಿಕ ಕಾಯಿದೆ-ಕಟ್ಟಳೆಗಳು ವಿಘ್ನವನ್ನು ತಂದೊಡ್ಡುವಾಗ ಅದು ಬೇರೊಂದು ಮಾರ್ಗವನ್ನು ಅವಲಂಬಿಸಿ ವಕ್ರಾಕೃತಿಯನ್ನು ತಳೆಯುವುದು. ಭಾವೆಯ ಬದುಕನ್ನೇ ಉದಾಹರಣೆಯಾಗಿ ತೆಗೆದುಕೋ! ಅವಳಲ್ಲಿ ಕ್ರಿಯಾತ್ಮಕ ಚೇತನಕ್ಕೆ ಮುಂದೆ ಹರಿಯಲು ಎಡೆದೊರಕಲಿಲ್ಲ. ನಮ್ಮ ಸಮಾಜದ ಆಚಾರವಂತರು ಆ ಚೇತನದ ಸ್ವಾಭಾವಿಕ ಗತಿಯನ್ನು ತಡೆದುನಿಲ್ಲಿಸಿದರು. ಪರಿಣಾಮವಾಗಿ ಅದು ವಕ್ರಗತಿಯನ್ನು ಅವಲಂಬಿಸಿತು. ನನ್ನ ಅಭಿಪ್ರಾಯದಲ್ಲಿ ಭಾವೆಯಲ್ಲ ತಪ್ಪುಗಾರಳು; ಆಕೆಯ ಆಶೆ-ಆಕಾಂಕ್ಷೆಗಳಿಗೆ ತಡೆ-ತೊಡಕುಗಳನ್ನು ತಂದೊಡ್ಡಿದ; ಆಕೆಯ ಮಾವ—ನಮ್ಮ ಸಮಾಜದ ಆಚಾರವಂತರು—ಅಪರಾಧಿಗಳಾಗಿದ್ದಾರೆ. ಭಾವೆಯಂತೆ ಅಡ್ಡ ಹಾದಿಯನ್ನು ಹಿಡಿದ ಕೆಲವು ಮುಂದಿ ಹೆಂಗುಸರನ್ನು ಬೀದಿಗೆ ದೂಡುವುದರಿಂದ ನಮ್ಮ ಸಮಾಜದ ಕುಂದು-ಕೊರತೆಗಳು ಇಲ್ಲವಾಗವು; ನಮ್ಮ ಸಮಾಜದ ಬಾನು ತಿಳಿಯಾಗದು. ಮನುಷ್ಯನ ಸ್ವಾಭಾವಿಕ ಆಶೆ-ಆಕಾಂಕ್ಷೆಗಳಿಗೆ ವಿಘ್ನಗಳನ್ನು ತಂದೊಡ್ಡುತ್ತಿರುವ ಆಚಾರ-ವಿಚಾರಗಳು ಪರಿವರ್ತನೆಯನ್ನು ಹೊಂದುವ ನಕ, ನಮ್ಮ ಸಮಾಜವ, ಕೊಳೆ-ಹೊಲಸುಗಳು ತುಂಬಿದ ಜೇರಂಡಿಯಂತೆ ಇರುವುದು.

ಅಂತು ನಾವು ನಮ್ಮ ಬುದ್ಧಿ-ತಿಳಿವಳಿಕೆಗಳನ್ನು ಬಾದರಾಯಣನ ಕಾಲದ ಆಚಾರ-ವಿಚಾರಗಳಿಗೆ ಒಪ್ಪಿಸದೆ,— ಇಂದಿನ ವಿಷಮತೆಗಳಿಗಿರುವ ಪರಿಹಾರವೇನೆಂಬುದನ್ನು ಆಲೋಚಿಸಬೇಕಾಗಿದೆ; ನಮ್ಮ ಬುದ್ಧಿಗೆ ಉಚಿತವೆಂದು ತೋರಿದುದನ್ನು ಆಚರಣೆಯಲ್ಲಿ ತರಬೇಕಾಗಿದೆ. ಹಳೆಯ ರೀತಿ-ನೀತಿಗಳನ್ನು ಬದಲಾಯಿಸಿ, ಈಗಿನ ಕಾಲಕ್ಕೆ ಒಪ್ಪುವ, ಮನುಷ್ಯನ ಮಾನಸಿಕ ಮತ್ತು ನೈತಿಕ-ವಿಕಾಸಕ್ಕೆ ಪೋಷಕವೆನಿಸುವ ನೂತನ ರೀತಿ-ನೀತಿಗಳನ್ನು ಸೃಷ್ಟಿಸಬೇಕಾಗಿದೆ. ಈ ತಿಳಿವಳಿಕೆಯು ನಮ್ಮ ಜನರಲ್ಲಿ ಮೂಡುವನಕ ನಮ್ಮ ಸಮಾಜವು ಆರೋಗ್ಯವನ್ನು ಪಡೆಯದು; ನಮ್ಮ ಆಂತರಿಕ್ಷವು ತಿಳಿಯಾಗಲಾರದು.

ಮಿಕ್ಕುದೆಲ್ಲ ಜೆನ್ನು. ಹೆಚ್ಚಿನ ಸಂಗತಿಗಳನ್ನು ಆ ವೇಳೆ ಬರೆಯುತ್ತೇನೆ. ಆಗಾಗ ನೀನ್ನ ಕ್ಷೇಮ ವಾರ್ತೆಯನ್ನು ಅರುಹುತ್ತಲಿರು.

ನಿನ್ನ,
ಒಲವಿನ ಮಾವ.

ಬಡಿದವನು ಎಂದರೆ ಗಂಡಗೋಪಿ

ಮದರಾಸಿನ 'ಬೀಚಿ' ಬರೆದುದು

★

೧

ಪುಟ್ಟಗೋಪಿ, ಪುಟ್ಟರಾಜಿ,
ಮುಟ್ಟಸಾದ ಮನೆಯಲಿದ್ದು
ಆಟ-ಪಾಟ ಆಡಿ ನಕ್ಕು-ಕೆಲೆಯುತಿದ್ದರು.

೨

'ಅಲ್ಲಿ ನಿಂತೆಯೇಕೆ ನೀನು?'
'ಇಲ್ಲಿ ಕುಳಿತೆಯೇಕೆ ನೀನು?'
'ಕಲ್ಲು ಶುದ್ಧ' ಎನುವ ಅತ್ತೆ ರಾಜಿಗಿಲ್ಲವು.

೩

'ತಂದುದೆಲ್ಲ ತಿಂದು ಬಿಡುವೆ
ಮುಂದೆ ಮಕ್ಕಳೋದು ಹೇಗೆ?'
ಎಂದು ಜೀವತಿನುವರಾರು ಗೋಪಿಗಿಲ್ಲವು!

೪

ಕತ್ತಲಾಯ್ತು; ಇಂದು ಏಕೊ
ಹೊತ್ತುಏರಿ ಗೋಪಿ ಬರಲು,
'ಏಕೆ ತಡವು?' ಎನಲು, ಗೋಪಿ 'ಕತ್ತೆ' ಎಂದನು.

೫

ರಾಜಿಯ ಮನ ಸಣ್ಣಗಾಯ್ತು,
ಕೂಡಲೆ ಮೊಗ ಸಣ್ಣಗಾಯ್ತು;
ಸೋಜಿಗ-ಬಲುದುಃಖ-ಕೋಪ ಮನದಿ ಮೊಳೆತುವು.

೬

"ಪಲ್ಲೆ ಕಹಿ, ಸಾರು ಉಪ್ಪು,
ಒಲ್ಲೆ ಊಟ, ಅನ್ನ ಗಂಡು!"
ಎಂದು ಗೋಪಿ ಎಲೆಯ ಸರಿಸಿ ಎದ್ದುಬಿಟ್ಟನು.

೭

ಭೌಮವಾರ, ಗೌರಿಹಬ್ಬ,
ನಮತೆ ತಪ್ಪಿ ರಾತ್ರಿಯೂಟ.
ನೇಮ ಬಿಟ್ಟು ರಾಜಿ ನೆಲಕೆ ಬಿದ್ದುಬಿಟ್ಟಳು.

೮

ಕುಳಿತ ಕುರ್ಚಿಯಿಂದ ಗೋಪಿ
ಕೂಗೆ, ರಾಜಿ ಬಂದು ನಿಲಲು,
'ನಿಲುವುದೇಕೆ ಕತ್ತೆ; ದಿನದ ಹಾಲು?' ಎಂದನು.

೯

ಹಸಿವು, ಭಯವು, ದುಃಖ ತುಂಬಿ
ಹಿಸುಗಿದ ಮನ..ಹಾಲು ತರಲು,
ಬಿಸಿಯು ಕೈಗೆ ತಗುಲಿ ರಾಜಿ ಕೈಯ ಬಿಟ್ಟಳು.

೧೦

ಕಣ್ಣು ಕೆಂಪುಮಾಡಿ ಗೋಪಿ
ಕಣ್ಣರಳಿಸಿ ನೋಡಿ ನೋಡಿ,
ಸಣ್ಣ ಏಟನೊಂದು ಅವಳ ಕೆನ್ನೆಗಿಟ್ಟನು.

೧೧

ಬಳಿಕ ಮನೆಯ ಬಿಟ್ಟು ಹೊರಟ;
ಬೀದಿಯ ಕೊನೆದಾಟಿ ನಡೆದ;
ಬಗೆಯೊಳೊಂದು ಪುಳ್ಳು ಜುಚ್ಚಿ ಮುಂಕುಗೊಂಡನು.

೧೨

"ಹೊತ್ತು ಹೋಗಿ ಮನೆಗೆ ಬಂದೆ;
ಕತ್ತೆ ಎಂದು ಅವಳ ಬೈದೆ;
ಮತ್ತೆ ಅವಳ ಅಡಿಗೆ ಬೈದೆ; ಏಟು ಕೊಟ್ಟೆನು!

೧೩

"ಬಿಸಿಯೆ ಹಾಲು ಕೈಯ ಸುಡಲು,
ಎಸೆದುದವಳ ತಪ್ಪು ಏನು?
ಪೋಪಿ ನಾನು!" ಎನುತ ಗೋಪಿ ಮನೆಗೆ ಬಂದನು.

೧೪

ಕುರುಳು ಕೆದರ್ದ ಅತ್ತಕಣ್ಣ
ಮುಚುಳುರಾಜಿಯನ್ನು ನೋಡಿ,
ಮುಂಕುಗೊಂಡು ಗೋಪಿ ಅವಳ ಗಲ್ಲ ಪಿಡಿದನು.

೧೫

ಪಾಪ, ರಾಜಿ ಬೆಕ್ಕಿ ಅಳಲು,
ಗೋಪಿ ರುದ್ಧಕಂಠನಾಗಿ
'ತಪ್ಪುಗಾರ ನಾನು!' ಎನುತ ತಾನು ಅತ್ತನು.

೧೬

ಅಳುವಿನ ತೊರೆ ಬತ್ತಿ ಹೋಯ್ತು!
'ಏಳು, ಹಸಿವು!' ಎನಲು ಗೋಪಿ,
ಅಳುತ ನಗುತ ರಾಜಿ ಅವನ ಕೆನ್ನೆಗಿಟ್ಟಳು.

ನೀರ ಮೇಲಣ ಗುಳ್ಳೆ

ಶ್ರೀ "ಮುರಿ" ಮೈಸೂರು

ಸೂರ್ಯದೇವನ ತೀವ್ರವಾದ ಕಾಂತಿಯುತವಾದ ಕಿರಣಗಳನ್ನು ತನ್ನಲ್ಲಿ ಹಿಡಿದು ಸೆರೆಯಿಟ್ಟು, ಅವನ್ನು ಏಳು ಬಣ್ಣಗಳಾಗಿ ಒಡೆದು ಲೋಕಕ್ಕೆ ತೋರುತ್ತ, ವಿವಿಧ ವರ್ಣರಂಜಿತವಾಗಿ, ಸುಂದರವಾದ ದೊಡ್ಡ ನೀರ್ಗುಳ್ಳೆಯೊಂದು ಪ್ರಕಾಶಿಸುತ್ತಿತ್ತು—ಪ್ರಶಾಂತವಾದ ತಿಳಿನೀರ ಕೊಳದಮೇಲೆ. ಆದರೇನು? ಆ ಸೌಂದರ್ಯದಲ್ಲೂ ಒಂದು ಹುಳುಕಿತ್ತು; ಗುಳ್ಳೆಗೆ ನೀರೊಳಗೆ ಹೋಗಲು ಭಯ! ಅದು ನಡುಗುವುದನ್ನು ನೋಡಲಾರದೆ ವಾಯುದೇವನು ಅದನ್ನು ನೀರಿನಿಂದ ಸೆರೆಬಿಡಿಸಿ, ತನ್ನ ಅ-ದೃಶ್ಯ ಸೆರಗಿನ ಕೊನೆಯೊಂದಕ್ಕೆ ಗಂಟುಹಾಕಿಕೊಂಡು ಹೊಟಟು ಹೋದ. ಆವನಿಗೆ ಆ ಗುಳ್ಳೆಯ ವಿಷಯವೇ ಮರೆತುಹೋಯ್ತು.

ಮನದಣಿಯೆ ಸುತ್ತಾಡಿಯಾದಮೇಲೆ ವಾಯುದೇವ ಅದೇ ಕೊಳದ ಮಾರ್ಗವಾಗಿ ವಾಪಸು ಬಂದ. ಆಗ ಅವನ ಕಣ್ಣು ಕೊಳದ ಮೇಲೆ ಹಾಯಿತು; ಕೂಡಲೆ ಇನ್ನೆಲ್ಲಿಯೂ ಚಲಿಸದೆ, ಕೊಳದಮೇಲೇ ದಿಟ್ಟಿ ನೆಟ್ಟಿತು. ಅವನು ಅಲ್ಲಿಯೇ ನೋಡುತ್ತ ನಿಂತ.

ಕೊಳದ ತಡಿಯಲ್ಲಿ ಮತ್ತೊಂದು ನೀರ್ಗುಳ್ಳೆ ಯೋಚಿಸುತ್ತ ನಿಂತಿತ್ತು—ನೀರೊಳಗೆ ಸುಗ್ಗೀಜವೋ ಬೇಡವೊ?—ಎಂದು. ಎಷ್ಟು ಯೋಚಿಸಿದರೂ ಬಗೆಹರಿಯಲೊಲ್ಲದು ಅದಕ್ಕೆ! ವಾಯುದೇವನಿಗೂ ನೋಡುತ್ತ ನಿಂತು ನಿಂತು ಕಾಲು ಜೋಮು ಹಿಡಿಯಿತು; ಕಣ್ಣು ನೋಯಹತ್ತಿತು; ಮುಖದಲ್ಲಿ ಬೆವರು ಒಸರಿತು. ಅವನು ತನ್ನ ಅ-ದೃಶ್ಯ ಸೆರಗಿನಿಂದ ಬೆವರನ್ನೊರೆಸಿಕೊಂಡು, ಪುನಃ ನೋಡುತ್ತ ನಿಂತ.

ಪುಟ್ಟ ನೀರ್ಗುಳ್ಳೆಯು ಹಾಗೆಯೆ ಕೆಲಹೊತ್ತು ಯೋಚಿಸಿತು. ಕೊನೆಗೆ ಅದರ ಮುಖದ ಮೇಲೆ ಮಂದಹಾಸವೊಂದು ಮಿನುಗಿ ಮಾಯವಾಯ್ತು. ಮರುಚಣದಲ್ಲೇ ನೀರ್ಗುಳ್ಳೆಯು ಕೊಳದ ನೀರಿನಲ್ಲಿ ಮುಳುಗುಹಾಕಿತು. ಕೊಳದಡಿಗೆ ಹೋಗಿ, ಅಲ್ಲಿಯ ಕ್ರಿಮಿ-ಕೀಟ ಪ್ರಪಂಚವನ್ನು ಕಂಡು, ಪುನಃ ಮೇಲಕ್ಕೆ ಬರಲು ಪ್ರಯತ್ನಿಸುತ್ತಿತ್ತು.

ಇದನ್ನೆಲ್ಲ ನೋಡುತ್ತಿದ್ದ ವಾಯುದೇವನೆದೆ ಉಬ್ಬಿತು; ಮುಖದಲ್ಲಿ ಮಂದಹಾಸ ನಾಟ್ಯವಾಡಿತು. ಅವನು ಸರ್ರನೆ ಕೊಳದ ಸವಿಾಪಕ್ಕೆ ಬಂದು, ಕೊಳದ ಅಡಿಯಿಂದ ಮೇಲಕ್ಕೆ ಬರುತ್ತಿದ್ದ ಪುಟ್ಟ ನೀರ್ಗುಳ್ಳೆಯನ್ನು ತನ್ನ ಎರಡೂ ಕೈಗಳಿಂದ ಚಾಚಿ ಎತ್ತಿಕೊಂಡನು.....

* * *

ಈಗಲೂ ಅಷ್ಟೆ: ಪುಟ್ಟ ನೀರ್ಗುಳ್ಳೆಯು ವಾಯುದೇವನ ಮಣಿಖಚಿತ ಕಿರೀಟದ ಪ್ರಮುಖ ಮಣಿಯಾಗಿದೆ; ದೊಡ್ಡ ನೀರ್ಗುಳ್ಳೆಯು ಅವನ ಅ-ದೃಶ್ಯ ಸೆರಗಿನ ಯಾವುದೋ ಅವ್ಯಕ್ತ ಮೂಲೆಯಲ್ಲಡಗಿದೆ.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ವರೆಗೆ ಯಾರೂ ಪ್ರಯೋಗವನ್ನು ಮಾಡಿ ನೋಡಿರಲೂ ಇಲ್ಲ. ಹೊಸ್ತಿಲೊಸ್ತಿಲು ಪುಟಿಪುಟಿಯಲ್ಲಿ ಒಬ್ಬ ಸತ್ಯಾಗ್ರಹಿಗಳು, ಇದುವರೆಗೆ ಗತ್ತಿಲ್ಲದೆ ನಡೆದುಕೊಂಡು ಬಂದಿದ್ದ ಸತ್ಯಾಗ್ರಹ ಘೋಷಣೆಯನ್ನು ಪದ್ಯದಲ್ಲಿ ಮಾಡಿದರು. ಆ ಪದ್ಯ ಪೋಲೀಸರು ಅವರನ್ನು ಹಿಡಿದರು; ನ್ಯಾಯಾಧೀಶರು ಶಿಕ್ಷೆ ವಿಧಿಸಿದರು. ಇದನ್ನು ನೋಡಿದ ಮಂಗರಾಯನಿಗೆ ಒಂದು ದೊಡ್ಡ ತೊಡಕು ಬಿಟ್ಟಂತಾಯಿತು; ಏಕೆಂದರೆ ಪದ್ಯವನ್ನೂ ಸರಕಾರ ಮುನ್ನಿಸಿಬಿಡಂತಾಯಿತು. ಆದುದರಿಂದ ಪದ್ಯಾಭಿಮಾನಿಗಳಾದ ಕನ್ನಡಿಗರೆ, ನೀವಿನ್ನು ಸರಕಾರದೊಂದಿಗಿರುವ ವ್ಯವಹಾರವನ್ನು ಗದ್ಯದಲ್ಲಿಯೆ ಸಾಗಿಸಬೇಕೆಂಬ ಅನಿವಾರ್ಯತೆ ಎಲ್ಲಿ ಉಳಿದಂತಾಯಿತು? ವಕೀಲರೆ, ನಿಮ್ಮ ಅಸಲು ಅರ್ಜಿಗಳೆಲ್ಲ ಬರಲಿ ಇನ್ನು ಪದ್ಯದಲ್ಲಿಯೆ! ಆಫೀಸರುಗಳೆ, ಹೊರಡಲಿ ನಿಮ್ಮ ಹುಕುಮುಗಳೆಲ್ಲ ಪದ್ಯದಿಂ-ಚಾಪದಿಗಳಲ್ಲಿಯೆ! ಸಾಕ್ಷಿದಾರರೆ, ನೀವು ಸಾಕ್ಷಿ ಹೇಳಿರಿನ್ನು ಲಾವಣಿ-ಸಾಂಗತ್ಯಗಳಲ್ಲಿಯೆ! ಅರ್ಜಿದಾರರೆ, ನೀವು ಅರ್ಜಿ ಬರೆಯಿರಿನ್ನು ಗಜಲ್-ಷುಂಬರಿಗಳಲ್ಲಿಯೆ!

ಹುಯ್ ಹಾ ಹುಯ್!

ಪದ್ಯಕೆ ಜಯ-ಜಯ್!

* * *

ಮಂಗರಾಯನ ಯುಗಾದಿ!

ಯುಗಕ್ಕೆ ಎಷ್ಟೋ ಲಕ್ಷ ವರ್ಷಗಳಾದರೂ ಒಂದೂ ಜನರಿಗೆ ವರ್ಷಕ್ಕೊಮ್ಮೆ 'ಯುಗಾದಿ' ಬಂದೇ ಬರುತ್ತದೆ. ಏಕೆಂದರೆ ಒಂದು ವರ್ಷವನ್ನು ಕಳೆಯುವುದೆಂದರೆ ಹಿಂದೂ ಜನರಿಗೆ ಒಂದು ಯುಗವನ್ನೇ ಕಳೆದಂತಾಗುತ್ತಿದೆಯೊಗ. ಹಿಂದಿನವರು ಯುಗಾದಿಯನ್ನು ಏತಕ್ಕಾಗಿ ಮಾಡುತ್ತಿದ್ದರೋನೋ! ಇಂದಿನವರು ಹೊಸವರ್ಷ ಬಂದಿತೆಂಬ ಹಿಗ್ಗಿನಿಂದ ಈ ಹಬ್ಬವನ್ನೇನೂ ಆಚರಿಸುತ್ತಿಲ್ಲ. ನಮ್ಮ ಆಯುಷ್ಯದೊಳಗಿನ ಒಂದು ವರ್ಷವನ್ನು ಹೇಗೂ ಮಾಡಿ ಕಳೆದೆವಲ್ಲ.... ಎಂಬ ಸಮಾಧಾನ ಪ್ರಕಟಿಸಲು ಈ ಹಬ್ಬವನ್ನು ಆಚರಿಸುತ್ತಿದ್ದಾರೆ. ಮಂಗರಾಯನು ಯುಗಾದಿ ಹಬ್ಬ ಮಾಡುವುದಂತೂ ಇವೇ ಅರ್ಥದಿಂದಲೆ. ಈಗ ಹೊಸತಾಗಿ 'ವೃಷ' ವರ್ಷವು ತೀಕ್ಷ್ಣ-ಪಾಪ ಕೋಡುಗಳನ್ನು ಪುಸಿದುಕೊಂಡು, ಅಕ್ರಾಳ ವಿಕರಾಳವಾಗಿ ಮೆಲೆಯುತ್ತ ಮುಂದೆ ಬಂದು ನಿಂತು, ಕಾದಾಟಕ್ಕೆ ಕರೆಯುತ್ತಿದೆ. ಎಂತಲೆ ಹಬ್ಬದ ಹೋಳಿಗೆ ಮಂಗರಾಯನಿಗೆ ಕಹಿಯೆನಿಸಿ ಕುತ್ತಿಗೆಯ ಕೆಳಕ್ಕೆ ಇಳಿಯಲಿಲ್ಲ. ಆದುದರಿಂದಲೆ ಹಬ್ಬದ ಹಿಗ್ಗೇ ಬೇಡವೆಂದು ಅವನೀಗ ವನವಾಸಿಯಾಗಿವ್ವಾನೆ. ಹೋಳಿಗೆಯನ್ನು ಬಿಟ್ಟು ನಿರ್ಜಾಶನವ್ರತಧಾರಿಯಾಗಿದ್ದಾನೆ.

"ಹೊಸ ವರ್ಷವು ಹೊಸಹೊಸ ಸುಖ
ಎಲ್ಲರಿಗೂ ತರುತಿದೆ;
ನಮ್ಮನಷ್ಟೆ ಮರೆತಿದೆ

ಮಹಾ-ಪುರುಷ

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ.

ತನ್ನ ಆದರ್ಶಸಾಧನೆಯ ಹಿರಿಯ ಹೊಳೆಯಲ್ಲಿ ತಾಯಿಯೇ ಕೊಚ್ಚಿಕೊಂಡು ಹೋಗಬಹುದೆಂದು ರಾಮೂ ಕನಸು-ಮನಸಿನಲ್ಲಿಯೂ ನೆನಸಿರಲಿಲ್ಲ. ತನ್ನ ಆದರ್ಶಸಾಧನೆಗೆ ಇಂತಹ ಆಹುತಿಯನ್ನು ತೆರಬೇಕಾದ ಪ್ರಸಂಗಬರಬಹುದೆಂದು ಅವನಿಗೆ ತೋರಿರಲಿಲ್ಲ. ರಮಾಬಾಯಿಯವರು ತಮ್ಮ ಬೇನೆಗೆ ತುತ್ತಾದದ್ದೋ ರಾಮೂನ ಕ್ರಾಂತಿಗೆ ಬಲಿಯಾದರೋ ನಾವರಿಯೆವು. ರಾಮೂ ಮಾತ್ರ ಅವರ ಮರಣಕ್ಕೆ ಕಾರಣನು ತಾನೇ ಎಂದು ಗ್ರಹಿಸಿಬಿಟ್ಟ. ಈ ಭಾವನೆಯ ಸೂಕ್ಷ್ಮಕಿರಣವು ಕ್ರಮವಾಗಿ ಕಿಡಿಯಾಗಿ, ಉರಿಯಾಗಿ ಅವನ ದೇಹವನ್ನೇ ಸುಡಹತ್ತಿತು; ಅವನ ಅಂತರಾಳವನ್ನೇ ಭೇದಿಸಿತು. ಅವನು ತಿಳಿದುಕೊಂಡ ಆದರ್ಶದ ಬಂಡೆಗಲ್ಲು ಕೂಡ ತತ್ತರಿಸತೊಡಗಿತು. ರಾಮೂ ಕ್ರಾಂತಿಪುರುಷನಾದರೂ ಮಾತೃವತ್ಸಲನಾದ ಸುಕುಮಾರನೆಂಬುದನ್ನು ನೀವೆಲ್ಲ ಬಲ್ಲಿರಿ. ಎಂತಹ ಪ್ರಸಂಗದಲ್ಲಿಯೂ ಅವನು ತಾಯಿಯ ಸಲಹೆಯನ್ನು ಕೇಳದೆ ಬಿಡುತ್ತಿರಲಿಲ್ಲ. ಅವನು ಈಗ ಯಾರ ಸಲಹೆ ಕೇಳಬೇಕು? ತಂದೆಯಂತೂ ತಾಯಿಯ ಸಾವಿನಿಂದ ದಿಙ್ಮೂಢನಾಗಿ, ಅವಳ ಸಾವಿನಲ್ಲಿ ತನ್ನ ಆಧೋಗತಿಯನ್ನು ಕಂಡುಕೊಂಡು ನಿಸ್ತೇಜನಾಗಿ ಬಿಟ್ಟಿದ್ದನು. ಅಲ್ಲದೆ ರಮಾಬಾಯಿಯವರು ಸಾಯುವಾಗ 'ರಾಮೂ! ಅನಾಚಾರ! ಬೇಡ ಮಗೂ!' ಎಂದ ಮಾತಿನ ಸ್ಪಷ್ಟೀಕರಣಕ್ಕಾಗಿ ಹಂಬಲಿಸಿ, ಮಗನಿಂದ ಯೋಗ್ಯ ಉತ್ತರ ದೊರೆಯದೆ ಕಕ್ಕಾವಿಕ್ಕಿಯಾಗಿ ಮುಂಕುಹಿಡಿದುಬಿಟ್ಟರು. ಅಂದಿನಿಂದ ಅವರು ರಾಮೂನ ಹಾದಿಯನ್ನೇ ಬಿಟ್ಟು ಅಂತರ್ಮುಖಿಗಳಾದರು. ಇಂತಹ ತಪ್ತಹೃದಯದ ನಿಸ್ತೇಜವುಬಲದೆಡುರು ರಾಮೂ ಮಾತನಾಡಜೀಕೇನು? ಹೆಂಡತಿಯೋ ತುಂಬಿದ ಬಸುರಿ; ಮೇಲಾಗಿ ಕ್ರಾಂತಿಪುರುಷನ ವಿಲಕ್ಷಣ ಆಡಂಬರವನ್ನು ಹಿಡಿಯಲು ಅಸಮರ್ಥಳಾಗಿ, ಒಳಗೊಳಗೇ ಬೆಂದು ಬಸವಳಿಯುತ್ತಿರುವ ಗೃಹಿಣಿ. ಇತ್ತಿತ್ತಲಾಗಿ ಅವಳಿಗೆ ರಾಮೂನ ಮೇಲೆ ಒಂದುತೆರದ ತಿರಸ್ಕಾರವೇ ಹುಟ್ಟಿ, ಅವನನ್ನುಕಂಡ ಕೂಡಲೆ ಮೋರೆ ತಿರುಗಿಸುವಂತಾಗುತ್ತಿತ್ತು. ಮನೆಗೆಲಸವನ್ನು ಅವಳಲ್ಲದೆ ಇನ್ನೊಬ್ಬರು ಮಾಡುವವರಿಲ್ಲ. ಕ್ರಾಂತಿಪುರುಷನ ಹಿರಿಯ ಹೆಗ್ಗಳಿಕೆಗೆ ಮನೆಗೆಲಸಗಳು ಒಗ್ಗಬಹುದೆ? ರಾಮೂ ಆ ಅನ್ಯಾಯವನ್ನು ಎಂದಿಗೂ ಮಾಡದೆ, ತನ್ನ ಪಾಪವನ್ನು ತಾಯ್ತುಂಡಕೊಳ್ಳುವ ಮುಂಜಾಗ್ರತೆಯನ್ನು ವಹಿಸಿದ್ದ. ಹೆಂಡತಿಯ ದುಡಿತವು ಕ್ರಾಂತಿಪುರುಷನ ಮನ ಕರಗಿಸಲಿಲ್ಲ. ಬಲ್ಲಿದ ಬಂಡೆಯಿಂದ ಬಂದಂಥ ಪ್ರೇಮದ

ಆದರ್ಶವಾದಿಯಾದ ರಾಮುನಿಗೆ, ಹೆಂಡತಿಯೆಂದರೆ ಆದರ್ಶಸಾಧನೆಯಲ್ಲಿ ಒಂದು ದೊಡ್ಡ ಅಡಚಣೆಯಾಗಿ ಕುಳಿತಿದ್ದಳು. ಅದೇ ಹೆಂಡತಿ ಹೆರಿಗೆಗೆಂದು ತವರುಮನೆಗೆ ಹೋದರೆ, ಅವಳನ್ನು 'ಯಾವಾಗ ಕಂಡೇನು' ಎಂಬ ಯೋಚನೆಯೆ ರಾಮೂನ ಆದರ್ಶವಾಗಿಬಿಟ್ಟಿತು.

ಮಾತು ಕೊಡಾ ಇಲ್ಲ. ಹೀಗಾಗಿ ಅವಳು ಒಮ್ಮೆ ಹೇಗಾದರೂ ಈ ಲೋಕದಿಂದ ಪಾರಾಗುವುದೇ ಒಳಿತೆಂದು, ಆ ದಿನಗಳನ್ನು ದಯೆಪಾಲಿಸಲು ದೇವರಲ್ಲಿ ಹಗಲಿರುಳು ಮೊರೆ ಇಡಹತ್ತಿದಳು.

ರಾಮೂ ಇದೆಲ್ಲವನ್ನೂ ತಿಳಿಯದಷ್ಟು ಮುಂಕಾಗಿದ್ದನೆಂದು ದಯೆಯಿಟ್ಟು ಯಾರೂ ಭಾವಿಸಬಾರದು. ಅವನಿಗೆ ಎಲ್ಲವೂ ತಿಳಿಯುತ್ತಿತ್ತು. ಆದರೆ ತಿಳಿದದ್ದನ್ನು ತಿಳಿದಂತೆ ತೋರಿಸಿ ಆಚರಿಸುವುದು ಕ್ರಾಂತಿಪುರುಷರ ಸಾಮಾನ್ಯಲಕ್ಷಣದಲ್ಲಿ ಬರುವುದಿಲ್ಲವೆಂಬ ತತ್ತ್ವವನ್ನು ಪಾಲಿಸುವ ಹಟ ತೊಡಬೇಕಾಯಿತಷ್ಟೆ. ಆದರೆ ಈಗೀಗ ರಾಮೂನಲ್ಲಿ ಅದೇನೋ ಮಾಪರ್ಾಡಿನ ಸುಳುವು ತೋರತೊಡಗಿತು. ತಾನು ಹೀಗೆ ಮಾಡುವುದು ಯಾವ ತತ್ತ್ವವೆಂದು ತಿಳಿಯದೆ, ಹೃದಯದ ತಾಂಡವ ಮಾತ್ರ ರಂಗಿಗೇರತೊಡಗಿತು. ಅದಾವುದೋ ಒಂದು ಹೊಸ ಬೆಳಕು ಬೇಕಾಗಿದೆ.... ಎಂಬ ಕೂಗು ಒಳಗಿನ ಹೃದಯದಲ್ಲಿ ಕೂಗಾಟವೆಬ್ಬಿಸಹತ್ತಿತು. ತನ್ನ ಆಚರಣೆಯಲ್ಲಿ ಅದಾವುದೋ ಅನ್ಯಾಯವಾಗತೊಡಗಿದೆಯೆಂಬುದು, ಒಳಗೊಳಗೆ ಅವನಿಗೂ ಎನಿಸಿ ಕಾಡತೊಡಗಿತು. ಆದರೆ ಬಹಿರಂಗವಾಗಿ ಅದನ್ನು ಒಪ್ಪಿಬಿಟ್ಟರೆ ತನ್ನ ಇಷ್ಟು ದಿನದ ತಪಃಫಲವು ಮಣ್ಣುಗೂಡಿ ಯೋಗ್ಯತೆಯು ದುರ್ದಶೆಯಾಗುವುದೆಂದು, ಗಾಳಿ ದೂಡಿದತ್ತ ಸಾಗಿದರಾಯಿತೆಂಬವನಂತೆ ಮೌನವಾಗಿದ್ದ. ಅವನ ಪಾಲಿಗೆ ಪತ್ನಿಯು ಮಸಣ, ಹೆಂಡತಿ ಮರುಳು, ತಂದೆ ಪಿಶಾಚಿ. ಪಾಪ! ಕ್ರಾಂತಿಪುರುಷರ ಕ್ರಾಂತಿಯ ಕಣ್ಣಿಗೆ ಜಗದ ರೂಪವೂ ವಿಕ್ರಾಂತ ಹೊಂದಿ ಕಾಣುವುದಲ್ಲವೆ? ಅವನಿಗೆ ಎಲ್ಲವೂ ಬಗೆಹರಿಯದ ಪಕಗ್ಗಂಟಾಯಿತು.

ಹೀಗೆ ಕ್ರಾಂತಿಪುರುಷ ಒಳಗೊಳಗೇ ಕೊರಗುತ್ತಿರಲು, ಹೆಂಡತಿ ತವರುಮನೆಗೆ ಹೋಗುವ ದಿನಗಳು ಸವಿಾಪಿಸಿದುವು. ಅವಳಿಗೆ ಮುಂಬರುವ 'ಜೊಚ್ಚಿಲಸಂಭ್ರಮ'ವಿರಲಿಲ್ಲ. ಇಂತಹ ವಿಲಕ್ಷಣ ವಾತಾವರಣದಲ್ಲಿ ಹುಟ್ಟಿಬರುವುದಕ್ಕಿಂತ ಅಲ್ಲಿಯೇ ಕರಗಿ ಹೋಗುವುದೇ ಲೇಸೆಂದು, ಅವಳು ಒಮ್ಮೊಮ್ಮೆ ನಿಟ್ಟುಸಿರಿನ ನಿಳ್ದನಿಯಲ್ಲಿ ಎಂದುಕೊಂಡದ್ದೂ ಉಂಟು. ಗಂಡನ ಮನಸ್ಸನ್ನು ಪರಿವರ್ತನೆಗೊಳ್ಳದಿದ್ದರೆ ತನಗೆ ಸಾವೇ ಮೇಲೆಂದು ದೃಢವಾಗಿ ಎನ್ನಿಸತೊಡಗಿತು. ಕಡೆಗೆ ತವರುಮನೆಗೆ ಹೋಗುವ ಮುನ್ನಾದಿನ,

ತನ್ನ ಹೃದಯವನ್ನು ಬಿಚ್ಚಿಯಾದರೂ ಹೋಗಬೇಕೆಂದು, ರಾಮೂನ ಕೋಣೆಗೆ ಒಮ್ಮೆ ಬಂದುಬಿಟ್ಟಳು. ಅಲ್ಲಿ ಮಹಾಪುರುಷನು ತನ್ನ ಎರಡೂ ಕೈಗಳಿಂದ ತಲೆಯನ್ನು ಪಿಡಿದುಕೊಂಡು, ಭಯಂಕರ ಗಂಡಾಂತರಕ್ಕೊಳಪಟ್ಟ ಯುದ್ಧಮಂತ್ರಿಯಂತೆ ಕುಳಿತುಬಿಟ್ಟಿದ್ದ. ಅದಾವ ಗಹನವಿಷಯವನ್ನು ವಿಚಾರಿಸುತ್ತಿದ್ದನೊ! "ನಾಳೆ ಊರಿಗೆ ಹೋಗಬೇಕು," ಎಂದು ವಿಷಯ ತೆಗೆದಳು ರಾಮೂನ ಹೆಂಡತಿ. ಜಗತ್ತಿನ ಸೂತ್ರಚಾಲನೆಯನ್ನು ವಿಚಾರಿಸುತ್ತಿದ್ದ ರಾಮೂನಿಗೆ ಈ ಮಾತು ಕೇಳಿಸಬಹುದೆ? ಕೇಳಿಸಿದರೂ ಕ್ರಾಂತಿ-ಪುರುಷರು ಕಿವಿಗೊಡುವುದೇ! ತಾನು ಊರಿಗೆ ಹೋಗುವಾಗಲೂ ಇಷ್ಟು ತಿರಸ್ಕಾರವನ್ನು ತೋರಿಸುತ್ತಿರುವ ಯಜಮಾನನನ್ನು ಕಂಡು, ಹೆಂಡತಿ ಅವನ ಬಗ್ಗೆ ಅದೇನನ್ನೋ ಕಲ್ಪಿಸಿಕೊಂಡು ಬಿಟ್ಟಳು. ಅವಳು ತನ್ನ ನಿರ್ಧಾರವನ್ನು ನದಿಲುಬಿಡದೆ, ಗಟ್ಟಿಯಾಗಿ ಉಸಿರಿದಳು:

"ನನ್ನ ಮಾತು ಕೇಳಿಸಿತೇನು?"

ರಾಮೂ ಕಣ್ಣು ತೇಲಿಸಿ ಅವಳನ್ನೊಮ್ಮೆ ನೋಡಿ, ಮತ್ತೆ ಮುಖ ಕೆಳಕ್ಕೆ ಹಾಕಿದ.

"ಮುಖ ಕೆಳಕ್ಕೆ ಹಾಕುವಂತಹದು ನನ್ನ ಮುಖದಲ್ಲಿ ಇದೆಯಾದರೂ ಏನು? ನಿಮ್ಮ ವಿಲಕ್ಷಣ ಆಚರಣೆಯು ನನ್ನ ಜೀವವನ್ನೇ ಬಯ್ಯುಹತ್ತಿದೆ" ಎಂದಳು ಕಣ್ಣೀರು ತುಂಬಿ. ಹೆಂಡತಿಯ ಕಹಿಯ ವಾಕ್ಯವು ರಾಮೂನ ಕಣ್ಣುಗಳನ್ನು ತೆರೆಯಿಸಿತು. ತಾಯಿಯ ಚಿತ್ರವು ಒಮ್ಮೆಲೇ ಕಣ್ಣೆದುರು ಕುಣಿಯಿತು. ಅವನು ಮುಖವನ್ನು ಮೇಲೆ ಮಾಡಿ,

"ಇದಕ್ಕೆ ನನಗೇನು ಮಾಡಬೇಕೆನ್ನುತ್ತೀ?" ಎಂದುಸುರಿ ಕೈತಕಾಯ್ದನಾದ.

"ಯಾರೂ ಏನನೂ ಮಾಡಬೇಕಾಗಿಲ್ಲ. ನನ್ನ ದೈವ ನನ್ನ ಬೆನ್ನನ್ನು ಹತ್ತಿದೆ. ನಾನು ಸುಸೂತ್ರವಾಗಿ ತಿರುಗಿ ಬರಬೇಕೆಂಬ ಇಚ್ಛೆ ಇದ್ದರೆ...." ಅವಳಿಗೆ ಮುಂದೆ ಮಾತನಾಡಲಾಗಲಿಲ್ಲ.

"ತಿರುಗಿ ಬಾರದೆ ಇಸ್ಟೆಲ್ಲಿ ಹೋಗುತ್ತೀ? ನನ್ನ ಆದರ್ಶವನ್ನೆಲ್ಲ ಮಣ್ಣುಪಾಲುಮಾಡಿ...."

ರಾಮೂನ 'ಆದರ್ಶ' ಶಬ್ದವನ್ನು ಕೇಳಿ ಅವಳು ಕಿಡಿಕಿಡಿಯಾದಳು. ಈ ಆದರ್ಶದ ಪೆಸ್ಮುಹತ್ತಿ ತನ್ನ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವ ಪತಿಯ ವಿಷಯವಾಹನಶೈಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕೆಂದು ಹಾತೊರೆದಳು: "ನಿಮ್ಮ ಆದರ್ಶ ವಾದರೂ ಏನು? ದಯವಿಟ್ಟು ತಿಳುಹುತ್ತೀರಾ?" ಎಂದಳು ಕೆಂಗಣ್ಣುಗಳಿಂದ ಕಣ್ಣೀರು ಸುರಿಸುತ್ತ.

ಅವಳ ನೆಟ್ಟ ನೋಟಕ್ಕೆ ಎದುರಾದ ಕ್ರಾಂತಿಪುರುಷನಿಗೆ ಏನು ಹೇಳಬೇಕೆಂಬುದೇ ತಿಳಿಯದಂತಾಯಿತು. ಆದರ್ಶದ ಅರಿವು ಇದ್ದರೆ ಅಲ್ಲವೇ ಸ್ಪಷ್ಟೀಕರಣ? ಆದರೂ ಹೆಂಡತಿಯ ಪ್ರಶ್ನೆಗೆ ಸುಮ್ಮನೆ ಇರುವುದೂ ಅಸಾಧ್ಯವು. ಅವನು ತುಂಬ ಇರುಕಿನಲ್ಲಿ ಸಿಕ್ಕುವರಂತೆ "ನನ್ನ ಆದರ್ಶ...ಆದರ್ಶ...."

"ಹೌದು ನಿಮ್ಮ ಆದರ್ಶದ ಅರ್ಥವೇ ನನಗೆ ಬೇಕಾಗಿದ್ದು. ಸುಮ್ಮನೆ ಹುಚ್ಚು ಆಭಾಸವನ್ನು ಆದರ್ಶವೆಂದು ತಿಳಿದುಕೊಂಡು, ಪ್ರಪಂಚವನ್ನೆಲ್ಲ ಹಾಳುಮಾಡಹತ್ತಿರುವಿರಿ. ಹೇಳಿರಿ, ನಿಮ್ಮ ಆದರ್ಶವೆನ್ನಿಷ್ಟು; ಅದು ಅಷ್ಟು ಪವಿತ್ರವಾಗಿದ್ದರೆ, ನನ್ನ ಜೀವನವನ್ನೇ ಆಹುತಿಕೊಡಲು ಸಿದ್ಧಳಾಗುತ್ತೇನೆ!" ಎಂದು ಮೈಯೆಲ್ಲ ನಡುಗುತ್ತಿರುವಾಗ ಗಟ್ಟಿಗಟ್ಟಿಯಾಗಿ ನುಡಿದು, ಅವನ ಮೊಗ ನೋಡತೊಡಗಿದಳು. ರಾಮೂನಿಗೆ ಏನು ಹೇಳುವುದಕ್ಕೂ ತೋಚಲಿಲ್ಲ. ಎದುರಾಳಿಯ ಪ್ರತಿಭಟನೆಗೆ ದಿಕ್ಕುತೋಚದ ದುರಭಿಮಾನಿಯಂತೆ ಅವನ ಅವಸ್ಥೆಯಾಯಿತು. ಆದರೂ ರಾಮೂ ತನ್ನ 'ಆದರ್ಶ'ಕ್ಕೆ ಆದರ್ಶಪ್ರಾಯವಾದಂತಹ ಮಾತುಗಳನ್ನು ಆಡಿದ. "ನಿನ್ನಿಂದ ನನ್ನ ಜೀವನ ಹಾಳಾಯಿತು. ಆದರ್ಶ ಮಣ್ಣುಗೂಡಿತು. ಸಮಾಜದಲ್ಲಿಯ ನನ್ನ ಸ್ಥಾನ-ಮಾನಗಳನ್ನು ಕುಪ್ಪರಿಸಿ ನೆಲಕ್ಕಿಳಿಸಿದವಳು ನೀನು. ಇಷ್ಟೆಲ್ಲ ಅನರ್ಥಮಾಡಿ ಮತ್ತೆ ನನ್ನ ದಿವ್ಯಾದರ್ಶದ ಸ್ಪಷ್ಟೀಕರಣ ಕೇಳುವ ಎದೆಗಾರ್ತಿಯಾಗಿ ಬಂದಿರುತ್ತೀ. ನಿನಗೆ ನಾಚಿಕೆ ಬರಬೇಕು. ಜೀವನದಲ್ಲಿ ಗಂಡ-ಹೆಂಡಿರ ಸ್ಥಾನ-ಮಾನಗಳ ಅರಿವು ಇದೆಯೇ ನಿನಗೆ? ಹೆಂಡತಿಯೆಂದರೆ ಗಂಡನ ಜೀವನಸೌಕೆಯ ಚುಕ್ಕಾಣಿ. ಹಾಗೆ ಇದ್ದೀಯಾ ನೀನು? ಗಂಡನ ಆದರ್ಶವೇ ಹೆಂಡತಿಯ ಆದರ್ಶ. ಹೆಂಡತಿಯ ಆದರ್ಶವನ್ನು...." "ಗಂಡನು ಖಂಡಿತವಾಗಿ ಗಣಿಸಬಾರದು!" ಎಂದು ವಾಕ್ಯಪೂರ್ತಿ ಮಾಡಿದಳು ಆಕೆ— ಕಣ್ಣೀರ ಹೊನಲಿನೊಡನೆ ತುಟಿಗಳನ್ನು ನಡುಗಿಸುತ್ತ.

ರಾಮೂ ಮತ್ತೆ ದಿಙ್ಮೂಢನಾದ.

ಇದೇ ಸಮಯವೆಂದು ಅವಳು ಹೇಳತೊಡಗಿದಳು:

"ಹಾಗಾದರೆ ನಾನು ತಿರುಗಿ ಇಲ್ಲಿ ಬರುವುದೇ ಬೇಡ. ದೇವರು ನನ್ನ ಕಣ್ಣನ್ನಿಷ್ಟು ಮುಚ್ಚಿಬಿಡಲಿ! ನನ್ನ ಕೂಸಿನೊಂದಿಗೆ ನನ್ನ ಅಧಃಪತನವಾಗಿ ಹೋಗಲಿ. ನಿಮ್ಮ ತಾಯಿ ಸ್ವರ್ಗದಿಂದಿಳಿದು ನಮ್ಮನ್ನು ಎದುರುಗೊಳ್ಳಲಿ! ನಾನು ಹೋದಮೇಲೆ ನಿಮ್ಮ ಆದರ್ಶ ಸಾಧಿಸುವಂತಿದ್ದರೆ, ದೇವಾ! ನಾನು ಇದ್ದಾದರೂ ಫಲವೇನು? ನಾನು ಸತ್ತ ಬಳಿಕ ನಿಮ್ಮ ಆದರ್ಶವನ್ನು— ನಿಮ್ಮ ಸುಟ್ಟ ಹಸಗೆಟ್ಟ ಆದರ್ಶವನ್ನು— ಸಾಧಿಸಿಕೊಂಡು, ಸುಖದಿಂದ ಬಾಳಿರಿ...." ರಾಮೂನ ಹೆಂಡತಿ ಬಿಕ್ಕಿಬಿಕ್ಕಿ ಅಳಹತ್ತಿದಳು.... ರಾಮೂನಿಗೆ ಅವಳ ಒಂದೊಂದು ಮಾತುಗಳೂ ಹೃದಯದಲ್ಲಿ ನೇರವಾಗಿ ನೆಟ್ಟು ಗಾಯಗೊಳಿಸಹತ್ತಿದುವು. "ನಿಮ್ಮ ತಾಯಿ" ಎಂಬ ಶಬ್ದವು ಅವನ ಮೈಯನ್ನು ಜುಮ್ಮೆನಿಸಿತು. ಅವನು ಕಕ್ಕಾಬಿಕ್ಕಿಯಾಗಿ, ತಪ್ಪು ಮಾತನಾಡಿ ಸಂಕಟಪಡುವವನಂತೆ "ನಾನು ಹೇಳುವ ಮಾತು.... ಅದಲ್ಲ....." ಎನ್ನುತ್ತಿರುವಾಗಲೇ ಮುಂಕುಂದರಾಯರ ಹೆಜ್ಜೆಯ ಸಪ್ಪುಳಾದುದರಿಂದ, ಹೆಂಡತಿಯು ಲಗುಬಗೆಯಿಂದ ಕಣ್ಣೊರಸಿಕೊಂಡು ಒಳಕ್ಕೆ ನಡೆದಳು. ರಾಮೂ ಏನೇನನ್ನೋ ಹೇಳಬೇಕೆಂದಿದ್ದ. ಕ್ರಾಂತಿಪುರುಷರಿಗೆ ಬುದ್ಧಿ ಒಮ್ಮೊಮ್ಮೆ ಸ್ವಲ್ಪ ನಿದಾನವಾಗಿ ಹೊಳೆಯುವುದುಂಟು. ಇವನ ಬುದ್ಧಿ ಮಿನುಗುವ ಹೊತ್ತಿಗೆ ಹೆಂಡತಿ ಮುಂಜಿಹೋಗಿದ್ದಳು. ರಾಮೂ ಹತಾಶನಾದ. 'ಇದೇನೋ ಅನರ್ಥಕ್ಕೆಳೆಯಿತು' ಎನ್ನಿಸಿ ಇರಬೇಕು ಅವನಿಗೆ.

೨.

ಹೆಂಡತಿ ಹತ್ತಿರನಿದ್ದಾಗ ಸೊಟ್ಟ ಮುಖ ಮಾಡುತ್ತಿದ್ದ ರಾಮೂ, ಈಗ ಅವಳು ಹೋದಂದಿನಿಂದ ಹೀಗೇಕಾಗಿರುವನೋ ತಿಳಿಯದು. ಸಾನಿಧ್ಯದಲ್ಲಿದ್ದಾಗ ಅಪ್ರಿಯವಾಗಿರುವ ವಸ್ತುಗಳು ದೂರ ಹೋದ ಮೇಲೆ ಪ್ರಿಯವಾಗುವಂತೆ ಕಾಣುತ್ತದೆ ಕ್ರಾಂತಿ-ಪುರುಷರಿಗೆ. ರಾಮೂನ ಇಂದಿನ ಸ್ಥಿತಿಗೆ ಹೆಂಡತಿಯ ಅಂತರವು ಕಾರಣವಾಗಿದ್ದಿತೊ; ಅವನ ಆದರ್ಶದ ಅಂತರ್ನಿರೀಕ್ಷಣೆಯು ಕಾರಣವಾಗಿದ್ದಿತೋ ಹೇಳಲಿಕ್ಕಾಗದು. ಎರಡೂ ಕಾರಣಗಳಾಗಿದ್ದರೂ ಆಗಿರಬಹುದು. ಹೋಗುವಾಗ ಹೆಂಡತಿಯು ಕಣ್ಣೀರನ್ನು ತುಂಬಿ ನುಡಿದ 'ನಾನು ತಿರುಗಿಬರುವುದೇ ಬೇಡ' ಎಂಬ ವಾಕ್ಯವು ಆಗಾಗ ಅವನ ತಲೆಯಲ್ಲಿ ಸುತ್ತಿ ಸುತ್ತಿ ಸುಳಿಯತೊಡಗಿತು. ಅವಳ ಮೂರ್ತಿಯು ಕಣ್ಣೆದುರು ಕುಣಿಯತೊಡಗಿತು. 'ನಿಮ್ಮ ಆದರ್ಶವಾದರೂ ಯಾವುದು? ದಯವಿಟ್ಟು ಹೇಳುವಿರಾ?' ಎಂದು ಅವಳು ಕೇಳಿದ ಪ್ರಶ್ನೆಗೆ ಉತ್ತರವನ್ನು ರಾಮೂ ತನ್ನಲ್ಲಿ ಹುಡುಕತೊಡಗಿದ. ಹುಡುಕಿದಂತೆ ಕತ್ತಲೆಯೇ ಮುಸುಕಿತಲ್ಲದೆ ಉತ್ತರವು ಬಿಸಿಲುಗುದುರೆಯಾಯಿತು. 'ಹಾಗಾದರೆ ಇಷ್ಟು ದಿನ ನಾನು ಮಾಡಿದ ಆಚರಣೆಯ ಅರ್ಥವಾದರೂ ಏನು?' ರಾಮೂನಿಗೆ ದಿಕ್ಕು ತಪ್ಪಿದಂತಾಯಿತು. "ನಿಮ್ಮ ಆದರ್ಶವು ಅಷ್ಟು ಪವಿತ್ರವಾಗಿದ್ದರೆ ನನ್ನ ಜೀವನವನ್ನೇ ಆಹುತಿ ಕೊಡುವೆನು — ಎಂದಳಲ್ಲಾ ಅವಳು! ನನ್ನ ಆದರ್ಶದಲ್ಲಿ ಪವಿತ್ರತೆಯಿದೆಯೆ? ಆದರದೊಂದು ಕಣವಾದರೂ ಇದೆಯೆ? ಜಗತ್ತಿನ ರೂಢಿಗನುಸಾರವಾಗಿ ಸಾಗಿದ ಕೆಲವು ಮಾತುಗಳನ್ನು ನನ್ನ ಕೊಂಕುಆದರ್ಶವು ಹಡಗೆಡಿಸಿ-ಹವಣಿಸಿದುದು ಪವಿತ್ರವಾದುದೊ? ನನ್ನ ಆದರ್ಶ..ಆದರ್ಶವಾದರೂ ಏನು? ಹಾಗಾದರೆ, ಮೊದಲಿನಿಂದಲೂ ನಾನು ತಲೆಯಲ್ಲಿ ತುಂಬಿಕೊಂಡ ದಿವ್ಯಾದರ್ಶದ ಆಚರಣೆಯಾದರೂ ಏನು? ಮೊಗದ ಮೇಲಿನ ಮಾಳಿ ತೆಗೆದು ಕ್ರಾಂತಿಪುರುಷನಾದೆ. ಮದುವೆಗೆ ಮೊದಲು ಹೆಂಡತಿಯಾಗುವವಳನ್ನು ಮಾತನಾಡಿಸಿ ರೂಢಿ-ಸಂಪ್ರದಾಯವನ್ನು ಮುರಿದೆ. ಅಳಿಯದೇವರಾಗಿ ತಾಯಿಯನ್ನು ಪೋಸ-ಗೊಳಿಸಿದೆ. ದೀಪಾವಳಿಯ ಸಂಪ್ರದಾಯಗಳನ್ನು ತಿರಸ್ಕರಿಸಿ ಹಿರಿಯರನ್ನೆಲ್ಲ ಗಾಸಿಗೊಳಿಸಿದೆ. ನನ್ನ ಆಚರಣೆಗೆ ಹೊಣೆಯಾಗಿ ಹೆಂಡತಿ ಬಳಿರಾದಾಗ 'ಪ್ರಣಯ'ಕ್ಕೆ ಭಂಗಬಂದಿತೆಂದು ರೇಗಿದೆ. ಆ ಹುಚ್ಚಿನಲ್ಲಿ ಕೊಲೆಗಡುಕತನವನ್ನು ವೈರಿಯಿಸಿ ಹೆಂಡತಿಯ ಗರ್ಭ-ಪಾತ ಮಾಡುವ ಗಂಡುಗಲಿಯಾಗಬೇಕೆಂದಿದ್ದೆ. ಆ ಪಾತಕವು ಸಾಧಿಸದಿದ್ದರೂ ತಾಯಿಯ ಕರುಣಾಮಯ ಅಂತಃಕರಣದ ಹೃದಯವನ್ನು ಸೀಳಿ, ಅವಳನ್ನು ನುಂಗಿ ನೀರುಕುಡಿದೆ. ಈಗ ಹೆಂಡತಿಯು ತಿರುಗಿ ಬರುವುದಿಲ್ಲವೆಂಬ ಅಶಕ್ತಾಸನವನ್ನಿತ್ತು ಹೋಗುವಂತೆ ಪ್ರಿಯಕರನಾಗಿರುವೆ. ಅಯ್ಯೊ! ಇವೆಲ್ಲ ಆದರ್ಶಗಳೆ? ಸುಟ್ಟಿತು ನನ್ನ ಆದರ್ಶ! ಕೊಲೆಪಾತಕನ ಆದರ್ಶ! ನನ್ನ ಇಂತಹ ವಿಲಕ್ಷಣ ರೀತಿಯನ್ನು ಸಹಿಸಿಕೊಂಡು ಸಾಗಿರುವ ಹೆಂಡತಿಯ ಆದರ್ಶ ವಿಗಿಲೋ — ನನ್ನದೋ? ದಣಿಯುವವರೆಗೆ ಒದ್ದು ಕೆಡಪಿದರೂ ಅವಳು ಆ ದಿನ ವಿಸುಕಲಿಲ್ಲ, ಪಿಟ್ಟೆನ್ನಲಿಲ್ಲ. ಬಡಿದು ದಣಿದ ಮಹಾಪುರುಷನಾದ ನಾನು, ಮಲಗಿದಾಗ ಬೆಳ್ಳಂಬೆಳಕೂ ಗಾಳಿಪಾಕುತ್ತ ಎಚ್ಚರವಿದ್ದಳಲ್ಲ ಅವಳು! ಅಯ್ಯೊ! ಅವಳದೇ ಆದರ್ಶ! ನನ್ನದು.....ನನ್ನ....." ರಾಮೂ ಸಣ್ಣ ಹುಡುಗನಂತೆ ಅಳತೊಡಗಿದ. ಅವನ ಹೃದಯವೆಲ್ಲ ಕರಗಿ ನೀರಾಗಿ, ಕಣ್ಣೀರ ಹೊಳೆಯಾಗಿ ಹೊರಸೂಸತೊಡಗಿತು. ಅವನು ಈಗ ಎಷ್ಟು ಅತ್ತರೂ ಸಂತಯಿಸುವರಾರು? ಅತ್ತತ್ತು ಅರಾಮು ಖುರ್ಚಿಯ ಮೇಲೆ ಬಿದ್ದುಬಿಟ್ಟ. ಕಣ್ಣೆದುರು ಹೆಂಡತಿ! ಸಹನೆಯು ಸವಿಗೊಂಬೆಯಂತೆ ಪೆಲುನಗೆಯ ಅರಳುಗಳನ್ನು ಸೂಸುತ್ತ ಆಕೆ ನಿಂತಿದ್ದಾಳೆ. ರಾಮೂ ಅವಳೆದುರು ತನ್ನ ಗಂಡುಮುಖ ತೋರಲು ನಾಚಿದನೇನೊ! ಗಟ್ಟಿಯಾಗಿ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡ. ಮುಖ ಮುಚ್ಚಿಕೊಂಡರೂ, ಕಣ್ಣು ರೆಪ್ಪೆ ಕವಿಸಿಕೊಂಡರೂ, ಹೆಂಡತಿಯೆ ಕಣ್ಣೆದುರು! ಕಣ್ಣುಮುಚ್ಚಿದರೂ ಕಣ್ಣೆದುರು ಕುಣಿಯಹತ್ತಿದಳು ರಾಮೂನ ಹೆಂಡತಿ. ರಾಮೂ ಅಪ್ರತಿಭನಾದ; ತನ್ನ ತಪ್ಪುಗಳನ್ನೆಲ್ಲ ಒಮ್ಮೆ ಒಪ್ಪಿ ಬಿಡಬೇಕೆಂದು ಕ್ಷಣಾರ್ಧದಲ್ಲಿ ವಿಚಾರಿಸಿದ. ಕೂಡಲೇ ತನ್ನದೇನು ತಪ್ಪು..ಎಂಬ ದಂರಭಿಮಾನದ ಭಾವ ಮಿಂಚಿನಂತೆ ಹೊಳೆಯಿತು. ಅದೇ ಭರದಲ್ಲಿ ಕೂಗಿದ: 'ನನ್ನೆದುರು ನಿಲ್ಲಬೇಡ. ನನ್ನ ಆ-ದ-ರ್ಶ .....ದ-ರ್ಶ' ರಾಮೂ ಕುಸಿಬಿದ್ದ; ಜೋರೆಂದು ಬೆನತು ಒದ್ದೆಯಾದ. ತಿರುಗಿ ಕಣ್ಣುತೆರೆದು, ನೋಡುವ ಸಾಹಸ ಮಾಡಿದಾಗ, ಅಲ್ಲಿ ಹೆಂಡತಿಯೂ ಇಲ್ಲ; ಅವಳ ರೂಪವೂ ಇಲ್ಲ. ದುರ್ಬಲ ಹೃದಯದ ಕ್ರಾಂತಿಪುರುಷನೊಬ್ಬ ಹಡಗೆಟ್ಟ ಹೃದಯದೊಂದಿಗೆ ಅರಾಮಕುರ್ಚಿಯ ಮೇಲೆ—ಜೀವನವೇ ಮುದುಡಿಯಾದಂತೆ – ಬಿದ್ದುಕೊಂಡಿದ್ದಾನೆ.

೩.

ಮುಕುಂದರಾಯರು ಮನೆಗೆ ಬಂದು ರಾಮೂನ ಮೈ ಮುಟ್ಟಿದಾಗ ಅದು ಕಾಯ್ದು ಕೆಂಡವಾಗಿತ್ತು. ಮೊದಲೇ ಸಂತ್ರಸ್ತ ಹೃದಯರಾದ ಅವರು ರಾಮೂನ ಪರಿಸ್ಥಿತಿಯನ್ನು ನೋಡಿ ತೀರ ಗಾಬರಿಯಾದರು. 'ರಾಮೂ, ಹಾಸಿಗೆಯ ಮೇಲೆ ಮಲಗಿಕೊಳ್ಳಿ ಬಾರದೇನೊ! ಮೈ ಕಾಯ್ದು ಕೆಂಡವಾಗಿದೆ!' ಎಂದು ಅಲ್ಲಿಯೇ ಹಾಸಿಗೆಯನ್ನು ಸಿದ್ಧಪಡಿಸಿದರು. ರಾಮೂನಿಗೆ ಇದರ ಅರಿವೇ ಇಲ್ಲ. ಅವನು ಒನ್ಮೆಲೆ 'ನೀನು ತಿರುಗಿ ಬರಲೇ ಬೇಕು; ಸಂಸಾರವನ್ನು.....' ಎಂದೇನೋ ಕಿರಿಚಿದ. ತಂದೆ ಗಾಬರಿಯಾಗಿ 'ಹೀಗೇಕೋ ರಾಮೂ? ಜ್ವರ ಬಹಳವಾಗಿದೆಯಪ್ಪಾ! ಇಲ್ಲಿ ಸ್ವಲ್ಪ ಒರಗು! ನಾನು ಔಷಧ ತರುತ್ತೇನೆ!' ಎಂದು ರಾಮೂನನ್ನು ಹಾಸಿಗೆಯ ಮೇಲೆ ಮಲಗಿಸಿದರು.

ಹದಿನೈದು ದಿನೆಗಳಾದರೂ ರಾಮೂನ ಪ್ರಕೃತಿಯು ಹಿಡಿತದಲ್ಲಿ ಬರದಿರುವುದನ್ನು ಕಂಡು ಮುಕುಂದರಾಯರ ಚಿಂತೆ ಸೂರ್ಮಡಿಯಾಯಿತು. ಮನೆಯಲ್ಲಿ ಮಾಡುವವರಾರೂ ಇಲ್ಲ. ಸೊಸೆ ತುಂಬಿದ ಗರ್ಭಿಣಿ. ಈಗ ದಿನದಲ್ಲಿ ಕೂಡ ಬಿದ್ದಿದೆ. ಅವಳನ್ನಂತೂ ರಾಮೂನ ಸೇವೆಗೆ ಕರೆಯಿಸುವ ಹಾಗಿಲ್ಲ. ನನಿಯದ ಆಪ್ತರೆಂಬವರು ಕೂಡ ಯಾರೂ ಇರಲಿಲ್ಲ. ಹೀಗಾಗಿ ಎಲ್ಲ ಕೆಲಸದ ಭಾರವೂ ಅವರ ಮೇಲೆ ಬಿದ್ದಿತು. ಇದಕ್ಕೆ ಅವರೂ ಹೆದರಿರಲಿಲ್ಲ. ರಾಮೂನಿಗೆ ಗುಣಮುಖವಾದರೆ ಸಾಕು ಎನ್ನುವುದೇ

ಅವರ ದಿನದ ಪಲ್ಲವಿಯಾಗಿದ್ದಿತು. ಅವನ ಗುಣಮುಖದಲ್ಲಿ ಇವರ ಶ್ರಮವೆಲ್ಲ ಪರಿಹಾರವಾಗುವ ದಿವ್ಯೌಷಧವಿತ್ತು.

ಈ ಹೊತ್ತು ರಾಮೂನಿಗೆ ಜ್ವರ ಇನ್ನೂ ಏರಿದೆ. ಅರ್ಧ ಅರಿವು ಅರ್ಧ ಮರೆವು ಈ ಸ್ಥಿತಿಯಲ್ಲಿದ್ದಾನೆ ಅವನು. ಹಾಸಿಗೆಯ ಹತ್ತಿರ ಮುಕುಂದರಾಯರು ಸಪ್ಪೆಮುಖ ಮಾಡಿಕೊಂಡು ದಿಙ್ಮೂಢರಾಗಿ ಕುಳಿತಿದ್ದಾರೆ. ಮುಂದಣ ಪ್ರಕಾಶವು ವಾತಾವರಣದ ಗಂಭೀರತೆಯನ್ನು ಸೂಚಿಸುತ್ತ ಮುಂದವಾಗಿ ಉರಿಯುತ್ತಲಿದೆ. ಇಂತಹ ವೇಳೆಯಲ್ಲಿ ಮುಕುಂದರಾಯರ ಪರಿಸ್ಥಿತಿಯನ್ನು ಹೇಳುವುದೇ ಬೇಡ. ಆವರೊಮ್ಮೆ ಮಗನ ಮುಖದ ಕಡೆಗೆ ನೋಡಿದಾಗ,ಅವನು ಕ್ಷೀಣಸ್ವರದಲ್ಲಿ "ಅವಳು ಬಂದಳೆ?" ಎಂದುಸುರಿ ತೇಲುಗಣ್ಣಿನಿಂದ ಮುಕುಂದರಾಯರನ್ನು ನೋಡತೊಡಗಿದ. ಮುದುಕ ಕಣ್ಣೀರ ಹನಿಗಳನ್ನು ತಟಕ್ಕನೆ ಒರಸಿಕೊಂಡು'ಬರುವಳು ರಾಮೂ, ಹೀಗೇಕೆ ಮಾಡುತ್ತಿ?' ಎಂದು ಮೈ ಮೇಲೆ ಕೈಯಾಡಿಸಿದರು. ಆ ದಿವ್ಯ ಆಂತಃಕರಣಪೂರಿತ ಕಾತರದ ಕೈಯ ಸ್ಪರ್ಶದಿಂದ ರಾಮೂನಿಗೆ ಜೀವತಳೆ ಬಂದಿತೇನೊ! 'ಬರಲಾರಳು ಅಪ್ಪಾ! ಬರುವುದಿಲ್ಲವೆಂದು ಖಂಡಿತವಾಗಿ ಹೇಳಿರುವಳು' ಎಂದು ದೀರ್ಘವಾದ ನಿಟ್ಟುಸಿರಿನೊಂದಿಗೆ ನುಡಿದು ರಾಮೂ ಕಣ್ಣು ತುಂಬಿಕೊಂಡ. "ಹುಚ್ಚಾ, ಬರದೇನು ಮಾಡುವಳು? ಗಂಡು ಮಗುವಿನೊಂದಿಗೆ ಬರು.... ವಳು. ಹಾಗೆಲ್ಲ ಮಾತನಾಡಬೇಡ. ನಿನಗೆ ಸ್ವಲ್ಪ ಗುಣವಾಗಲಿ; ಅಮೇಲೆ ಕೂಡಲೇ ಕರೆಯಿಸುವೆ. ಸುಮ್ಮನೆ ಮಾತನಾಡಿ ಶ್ರಮ ಮಾಡಿಕೊಳ್ಳಬೇಡ!" ಎಂದೆನ್ನುತ್ತ ಔಷಧವನ್ನು ಬಟ್ಟಲಲ್ಲಿ ಹಾಕಿದರು.

ಜ್ವರದ ಕಾವು ರಾಮೂನ ವಿಚಾರಗಳನ್ನೆಲ್ಲ ಕೆಲವು ದಿನ ಹುದುಗಿಸಿ ಬಿಟ್ಟಿತ್ತು. ಈಗ ಅವನಿಗೆ ಮತ್ತೆ ಜೀತನೆ ಬರಲು ಅವನ ವಿಚಾರಗಳೂ ಜೀತವಿಸಿಕೊಂಡುವು. ಹಿಂದಿನ ಸನ್ನಿವೇಶಗಳೆಲ್ಲ ಒಂದೊಂದಾಗಿ ಮನದ ಮುಂದೆ ಮರುಕಳಿಸಿ ಬರತೊಡಗಿ, ಅವನ ಪ್ರಾಣವನ್ನೇ ಹಿಂಡತೊಡಗಿದುವು. ಈಗ ಅವನಿಗೆ ತನ್ನ ಆದರ್ಶಕ್ಕಿಂತಲೂ ಹೆಂಡತಿಯ ಬರುವಿಕೆಯ ವಿಚಾರವೇ ಪ್ರಬಲವಾಗಿ ಕಾಡತೊಡಗಿತು. 'ಅವಳು ಬಾರದಿದ್ದರೆ .....' ಎಂಬ ವಿಚಾರವು ಇವನ ವಿಚಾರಕಳಸವನ್ನೇ ಕುಪ್ಪರಿಸತೊಡಗಿತು. ಅದಾವುದೋ ಸುಟ್ಟ ದನಿಯಿಂದ ಇವನ ಹೃದಯವು ಕರಿಕಾಗತೊಡಗಿತು. ಒಮ್ಮೊಮ್ಮೆ—ಕೂಡಲೇ ಅವಳ ತವರುಮನೆಗೆ ಹೋಗಿ—ಅವಳ ಸಾನ್ನಿಧ್ಯದಲ್ಲಿ ಸುಖವಾಗಿರಬೇಕೆಂದೆನ್ನಿಸುವುದು ಮರುಕ್ಷಣದಲ್ಲಿ ಹಾಗೆ ಮಾಡುವುದು ತನ್ನ ಯೋಗ್ಯತಾಪ್ರದರ್ಶನದ ಪ್ರಶಸ್ತಿಪತ್ರವಾದಂತಾಗುವುದೆನ್ನಿಸುವುದು. ಎಡೆಸೆಯು ವಿಚಾರದಲ್ಲಿ ತನ್ನ ಮನಸ್ಸೇ ಒಪ್ಪದ ದುರಭಿಮಾನವಿದೆ ಎಂದು ಅವನಿಗೆ ಎನ್ನಿಸಿದರೂ ಒಪ್ಪುವುದು ಅವನ ಗಂಟುತನಕ್ಕೆ ಸೇರದಾಯಿತು. 'ಒಮ್ಮೆ ಹೇಗಾದರೂ ಅವಳು ಮನೆಗೆ ಬರಲಿ; ಆ ಮೇಲೆ ಎಲ್ಲವನ್ನೂ ಸರಿಪಡಿಸಲಾಗುವುದು' ಎನ್ನುವ ಸಮಾಧಾನವೂ ಹಣೆಯಿಕ್ಕುವುದು; ಇನ್ನೊಂದು ಕ್ಷಣದಲ್ಲಿ 'ಅವಳು ಆದರ್ಶಕ್ಕೆ ಆಹುತಿಯಾದರೆ ಗತಿಯೇನು?' ಎನ್ನಿಸಿ ತಳಮಳವಾಗುವುದು. ಈಗ ಆದರ್ಶದ ನೆನಪಾದೊಡನೆ ಅವನಿಗೆ ಮೈಸವಿರೇಳತೊಡಗುವುದು. ಅಭಿಮಾನದ ಮೊನೆಯು ಮೊಂಡಾಗಿ, ಆದರದಲ್ಲಿ ಬೀಸರು ಹುಟ್ಟಿದ ಭಾವವಾಗುವುದು. ತನ್ನ 'ಆದರ್ಶ'ವು ತನ್ನ ಯೋಗ್ಯತೆಯನ್ನು ವಿಚಾರಿ ತನ್ನ ಜೀವನವನ್ನೇ ಡೊಂಕುಮಾಡತೊಡಗಿದೆ ಎಂದೆನ್ನಿಸಿ, ಆದಕ್ಕೆ ತನ್ನಂತಹನು ಯೋಗ್ಯನಲ್ಲವೆನ್ನಿಸುವುದು. "ಆದರ್ಶದ ಸತ್ಯವು ಆದರ್ಶವಾದಿಯ ಜೀವಸತತ್ಪ್ರದಲ್ಲಿ ಅಡಕವಾಗಿದೆ" ಎಂಬುದು ನಿಚ್ಚಳವಾಗಿ ಕಾಣತೊಡಗಿತು. "ನನ್ನ ಜೀವನ ತತ್ಪ್ರವೇನು? ಆಚರಣೆಯೇನು? ನನ್ನ ಆಚರಣೆಯು ಪರಿಶುದ್ಧವಾಗಿದೆಯೇ? ನನ್ನ ಆದರ್ಶಕ್ಕೆ ತಳವೇನಾದರೂ ಇದೆಯೆ? ಹೋಗಲಿ, ಅಂತಹ ಮಹತ್ಪ್ರವಾದುದನ್ನೇನಾದರೂ ನಾನು ಆದರ್ಶವೆಂದಿಟ್ಟುಕೊಂಡಿದ್ದೇನೆಯೆ? ಸಾಹಿತ್ಯ-ವೇಶ-ಧರ್ಮ ಇವು ತಪ್ಪಿಯಾದರೂ ನನ್ನ ಆದರ್ಶದಲ್ಲಿ ಬಂದಿವೆಯೆ? ಸರಳಜೀವನದ ಸುಖಮಯ ಸಂದೇಶವನ್ನಾದರೂ ನಾನು ನನ್ನ ಆದರ್ಶದಲ್ಲಿ ಕಂಡುಕೊಂಡಿದ್ದೇನೆಯೆ? ಇಲ್ಲ.... ಇಲ್ಲ....ಇಲ್ಲ. ನನಗೆ ಆದರ್ಶವೆ ಇಲ್ಲ! ಇದ್ದ ಆದರ್ಶವು ಆದರ್ಶವೇ ಅಲ್ಲ! ಆದರ್ಶದ ಹೆಸರಿನಲ್ಲಿ ಅನರ್ಥವನ್ನು ಮಾತ್ರ ಸಾಧಿಸಿದ್ದೇನೆ. ಸಂಸಾರವನ್ನು ಸ್ಮಶಾನವಾಡಿ, ಮನೆಯನ್ನು ಮರಣಮಾಡಲು ನನ್ನ ಆದರ್ಶವು ತುಂಬಾ ಸಹಾಯಮಾಡಿದೆ. ಅಯ್ಯೋ, ನನ್ನ ಆದರ್ಶವೆ! ನನ್ನ ಆದರ್ಶಸಾಧನೆಯಲ್ಲಿ ಯಾರಿಗೆ ಸುಖವಿದೆ? ಸಂಸಾರದಲ್ಲಿ ಮುಗ್ಗರಿಸಹತ್ತಿದ್ದೇನೆ. ಹೆಂಡತಿಯನ್ನು ಗೋಳಾಡಿಸಹತ್ತಿದ್ದೇನೆ. ತಂದೆಯನ್ನು ದಿಙ್ಮೂಢಗೊಳಿಸಿದ್ದೇನೆ. ತಾಯಿಯನ್ನು .... ಅಯ್ಯೋ! ಅಯ್ಯೋ! ದರ್ಶನವಿಲ್ಲದ ನನ್ನ ಆದರ್ಶವೆ!" ರಾಮೂ ದಿಗ್ಗನೆದ್ದು ಜೋರಿನಿಂದ ಎಡೆಯಾಡತೊಡಗಿದ. ಅವನ ವಿಪರುಳು ಝುಂಝುಮವಾತಕ್ಕೆ ಸಿಕ್ಕ ತರಗೆಲೆಯಂತೆ ಸಿಕ್ಕತ್ತ ಹಾರತೊಡಗಿತು. "ನೀನು ಗಂಡುಮಗುವನ್ನು ಪಡೆದದನ್ನು ನೋಡಿ ನಾನು ಕಣ್ಣುಮುಚ್ಚಬೇಕಪ್ಪಾ ರಾಮೂ!' ಎಂದ ತಾಯಿಯ ಧ್ವನಿ ಅವನ ಹೃದಯದ ಬಂಡೆಗೆ ಅಪ್ಪಳಿಸಿ ಪ್ರತಿಧ್ವನಿಗೊಡತೊಡಗಿತು. ಅವನು ದಿಗ್ಭ್ರಾಂತನಾಗಿ 'ಅಪ್ಪಾ.... ಅಪ್ಪಾ' ಎಂದು ಒಳಗೆ ಓಡಿವಾಗ, ಮುಕುಂದರಾಯರು ತುಂಬಾ ಆವೇಶದಿಂದ ಕೂಗಿದರು: 'ರಾಮೂ! ರಾಮೂ! ಗಂಡುಮಗು!' ರಾಮೂ ತಿರುಗಿ ನೋಡಿದ; ಮುಕುಂದರಾಯರು ಕಣ್ಣೀರುತುಂಬಿ ಮುಗುಳುನಗೆಯಿಂದ ತಂತಿಯನ್ನು ಓದುತ್ತ ಒಳಗೆ ಧಾವಿಸಿ ಬರುತ್ತಿದ್ದರು. 'ಗಂಡುಮಗು' ಎಂಬ ದನಿಯನ್ನು ಕೇಳಿ ರಾಮೂನ ಹೃದಯವು ಕಲಕಿಬಿಟ್ಟಿತು. ಅವನ ಆವೇಗವು ಅಳತೆ ತಪ್ಪಿತು. ಅವನು ಭಾವಪೂರಿತನಾಗಿ "ಅಪ್ಪಾ....ಅಪ್ಪಾ.... ಏ ಅಪ್ಪಾ! ಗಂಡು ಮಗು!" ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನ ಅಳುವಿನ ಅರ್ಥವನ್ನು ಮುಕುಂದರಾಯರೂ ಗ್ರಹಿಸಿ ಧೋತರದ ಚುಂಗಿನಿಂದ ಕಣ್ಣೊರಸಿಕೊಂಡರು. ಕೆಲನಿಮಿಷಗಳು ಕಳೆದ ಮೇಲೆ, ರಾಮೂ ದೀನವಾಣಿಯಿಂದ ಮುಕುಂದರಾಯರ ಕಾಲುಮೇಲೆ ಬಿದ್ದು "ಅಪ್ಪಾ! ತಾಯಿಯನ್ನು ಕಳಕೊಂಡು.... ಗಂಡುಮಗನನ್ನು ಪಡೆದ ಮಹಾಪುರುಷ ನಾನು" ಎಂದು ಮತ್ತೆ ಬಿಕ್ಕತೊಡಗಿದ. ಹೃದಯದ ದುಃಖವೆಲ್ಲ ಮರುಕಳಿಸಿ ಒಬ್ಬುಳಿಗೊಡಿದಂತೆ ರಾಮೂನು ಅಳತೊಡಗಿದ. ತಂದೆ ಸಂತಯಿಸಿ 'ಅವಳದೇ ಪುಣ್ಯ' ಎಂದರು.

ಮನಸ್ಸಿನ ಸ್ಥಿತಿಗಳು

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

★

ಅಭಿವೃದ್ಧಿಯನ್ನು ಹೊಂದಬಯಸುವ ಪ್ರತಿಯೊಂದು ವ್ಯಕ್ತಿಯೂ ಮಾನವನ ಮನಸ್ಸಿನ ನಿತ್ಯೋಪಯೋಗದ ವಿಷಯುಗಳನ್ನೂ, ಮನಸ್ಸಿಗೂ ದೇಹಕ್ಕೂ ಇರುವ ನಿಕಟಸಂಬಂಧವನ್ನೂ ತಕ್ಕಮಟ್ಟಿಗಾದರೂ ತಿಳಿದುಕೊಳ್ಳುವುದು ಅನಿವಾರ್ಯವಾಗಿದೆ

ಮನಸ್ಸಿನ ಭಿನ್ನಭಿನ್ನ ವ್ಯಾಪಾರಗಳನ್ನೂ ಅದು ಆಗಾಗ ವ್ಯಕ್ತಗೊಳಿಸುವ ನೋಜಿಗದ ರಂಗತಿಗಳನ್ನೂ ಪರೀಕ್ಷಿಸಿ, ಮನಃಶಾಸ್ತ್ರಜ್ಞರು ಅದಕ್ಕೆ ಮುಖ್ಯವಾದ ಎರಡು ಅಂಗಗಳನ್ನು ಕಲ್ಪಿಸಿದ್ದಾರೆ. ಈ ಎರಡು ಅಂಗಗಳು ಒಂದರಿಂದೊಂದು ಬೇರೆಯಾದ ಭಾಗಗಳಾಗಿರದೆ, ಪದಕದ ಮೈಗಳಂತೆ ಒಂದೇ ಮನಸ್ಸಿನ ಎರಡು ಮೈಗಳು ಅಥವಾ ಸ್ವರೂಪಗಳಾಗಿವೆ. ಮನಸ್ಸು ಒಂದೊಂದು ಪ್ರಸಂಗದಲ್ಲಿ ಒಂದೊಂದು ತೆರನಾಗಿ ವರ್ತಿಸುವುದರಿಂದ, ಅದಕ್ಕೆ ಈ ಅಂಗಗಳನ್ನುಂಟುಮಾಡಿ, ಒಂದಕ್ಕೆ ಬಾಹ್ಯಮನಸ್ಸು, ಇನ್ನೊಂದಕ್ಕೆ ಅಂತರ್ಮನಸ್ಸು ಎಂದು ಹೆಸರನ್ನು ಇಟ್ಟಿರುತ್ತಾರೆ. ಹೀಗೆ ಎರಡು ಹೆಸರುಗಳನ್ನು ಇಟ್ಟಿದ್ದರೂ ಮನಸ್ಸು ಒಂದೇ ಎಂಬುದನ್ನು ಮರೆಯಬಾರದು.

ಸುತ್ತುಮುತ್ತಲಿನ ವಸ್ತುಗಳ ಹಾಗು ಸಂಗತಿಗಳ ಅರಿವನ್ನು ಮಾಡಿಕೊಡುತ್ತಿರುವುದು ಬಾಹ್ಯಮನಸ್ಸು. ನಮ್ಮ ಆವಶ್ಯಕತೆಗಳನ್ನು ಒದಗಿಸುವುದರಲ್ಲಿಯೂ ಪರಿಸ್ಥಿತಿಯನ್ನು ನಮಗೆ ಅನುಕೂಲವಾಡಿಕೊಡುವುದರಲ್ಲಿಯೂ ನೆರವಾಗುವುದು ಬಾಹ್ಯಮನಸ್ಸು. ಸಾರಾಸಾರತೆಯನ್ನೂ ಹಿತಾಹಿತವನ್ನೂ ವಿವೇಚಿಸುವುದು ಬಾಹ್ಯಮನಸ್ಸು. ಮಾತು-ಕತೆಯಾಡುವುದು, ಊಣ್ಣುವುದು, ತಿನ್ನುವುದು, ಆಟವಾಟವಾಡುವುದು ಮೊದಲಾದ ಕೆಲಸಗಳನ್ನು ನಾವು ಬಾಹ್ಯಮನಸ್ಸಿನ ನೆರವಿನಿಂದಲೆ ಮಾಡುತ್ತಿರುತ್ತೇವೆ.

ಆದರೆ ದೈನಂದಿನ ವ್ಯಾಪಾರಗಳಲ್ಲಿ ನಮಗೆ ತಿಳಿಯದಂತೆ ಎಷ್ಟೋ ಕ್ರಿಯೆಗಳು ನಡೆಯುತ್ತಿರುತ್ತವೆ. ಕೆಲಸಕ್ಕೆ ಹೊರಡುವ ಮುಂಚೆ ಆಂಗಿ-ಟೊಪ್ಪಿಗೆಗಳನ್ನು ನಾವು ಅಭ್ಯಾಸಬಲದಿಂದಲೇ ಹಾಕಿಕೊಳ್ಳುವೆವು. ಕೋಟು ಹಾಕಿಕೊಳ್ಳುವುದೇ ತನ, ನಮ್ಮ ಲಕ್ಷ್ಯವು ಬೇರೆಕಡೆಗಿದ್ದರೂ ಕೈಬೆರಳುಗಳು ಗುಂಡಿಗಳನ್ನು ಹಾಕಿಬಿಡುವುವು. ಶ್ವಾಸೋಚ್ಛ್ವಾಸ, ಪಚನಕ್ರಿಯೆ, ಸ್ವಪ್ನಚೇಷ್ಟೆ ಮುಂತಾದುವೆಲ್ಲ ನಮಗೆ ಗೊತ್ತಿಲ್ಲದಂತೆ ಸಾಗುತ್ತವೆ. ಹಗಲೆಲ್ಲ ಯಾವುದೊಂದು ಪ್ರಮೇಯವಾಗಲಿ, ತೊಡಕಿನ ಪ್ರಶ್ನೆಯಾಗಲಿ ಬಗೆಹರಿಯದೆ ಇದ್ದು, ಕೊನೆಗೆ ಅದನ್ನು ಮರೆತು, ನಿದ್ದೆಹೋಗಿ ಬೆಳಗ್ಗೆ ಹಾಸಿಗೆ ಬಿಟ್ಟು ಏಳುವಾಗ, ಥಕ್ಕನೆ ಅದರ ಉತ್ತರವು ಸುಲಭವಾಗಿ ಲಕ್ಷ್ಯಕ್ಕೆ ಬರುವುದು. ಒಮ್ಮೊಮ್ಮೆ ಒಂದು ಹೆಸರನ್ನೋ ಶಬ್ದವನ್ನೋ ನೆನಪುಮಾಡುವುದಕ್ಕೆ ಎಷ್ಟು ಹೆಣಗಾದಿದರೂ ಅದು ಜ್ಞಾಪಕವಾಗುವುದಿಲ್ಲ; ಕತ್ತಲೆಕೋಣೆಯಲ್ಲಿ ಸೂಜಿಯನ್ನು ಹುಡುಕಿದಂತಾಗುತ್ತದೆ! ಅದೇ ಕೆಲವು ತಾಸುಗಳನಂತರ ಇಲ್ಲವೆ ಕೆಲವು ದಿನಗಳ ತರುವಾಯ ಬೇರೊಂದು ಕೆಲಸ ಮಾಡುತ್ತಿರುವಾಗ ತಟ್ಟನೆ ನೆನಪಾಗುವುದು. ಮುಂದಾಗಲಿರುವ ಅನಾಹುತ ಅಥವಾ ಲಾಭವು ಕೆಲವರಿಗೆ ಮುಂಚಿತವಾಗಿಯೆ ತಿಳಿಯುತ್ತದೆ. ಇಂತಹ ಅನೇಕ ಕ್ರಿಯೆಗಳು ನಮ್ಮ ಅಂತರ್ಮನಸ್ಸಿಗೆ ಅಧಿನವಾಗಿವೆ. ವಿಲಿಯಮ್ ಜೇಮ್ಸ್ ಎಂಬ ಮನಃಶಾಸ್ತ್ರಜ್ಞನು ನಿರ್ಧರಿಸಿದಂತೆ, ನಮ್ಮ ಕ್ರಿಯೆಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ನಮಗೆ ತಿಳಿಯದಂತೆ ನಡೆಯುತ್ತವೆ.

ಬಾಹ್ಯಮನಸ್ಸು ಸಾಧಕ-ಬಾಧಕವನ್ನು ತೂಗಿ ನೋಡುವುದು. ಅಂತರ್ಮನಸ್ಸು ಹಾಗಲ್ಲ; ಅದು ಹೇಳಿದ್ದನ್ನು ಮಾಡುವ ಊಳಿಗದ

★

ಮನುಷ್ಯನ ಮನಸ್ಸಿಗೆ ಎರಡು ಮೈಗಳಿರುತ್ತವೆ. ಒಂದು ಜಾಗೃತಚಿತ್ತ ಎಂದರೆ ಬಾಹ್ಯಮನಸ್ಸು. ಇನ್ನೊಂದು ಸುಪ್ತಚಿತ್ತ ಎಂದರೆ ಅಂತರ್-ಮನಸ್ಸು. ಒಂದು ಮೈ ಕಾರ್ಯಮಾಡುವಾಗ ಇನ್ನೊಂದು ಮೈ ಕಾರ್ಯಮಾಡುವುದಿಲ್ಲವಾದರೂ, ಒಂದರ ಕಾರ್ಯಕ್ಕೆ ಇನ್ನೊಂದರ ಶಕ್ತಿಯೂ ಸಂಪೂರ್ಣ ಪ್ರಚೋದಕವಾಗಿರುತ್ತದೆ.

★

ಆಳಿಸಂತಿದೆ. ಬಾಹ್ಯಮನಸ್ಸು ಸೂಜನೆಗೆ (ಅಪ್ಪಣೆಗೆ) ಅಷ್ಟು ಒಳಪಟ್ಟಿಲ್ಲವಾದರೆ, ಅಂತರ್ಮನಸ್ಸು ಸೂಜನಾಸುಗಾಮಿಯು. ಬಾಹ್ಯಮನಸ್ಸಿನ ನೆನಪಿನ ಶಕ್ತಿಯು ಸದೋಷವಾಗಿದೆ; ಆದರೆ ಅಂತರ್ಮನಸ್ಸು ನೆನಪಿನ ನೆಬೆವೀಡು; ಅದು ಎಲ್ಲವನ್ನೂ ಸಂಗ್ರಹಿಸಿ, ಸಂಪೂರ್ಣವಾಗಿ, ನಿರ್ದೋಷವಾಗಿ ಕಾಪಿಡುವುದು. ಅಂತರ್-ಮನಸ್ಸು ವಿಶ್ವಚಿತ್ತದ ಅಂಶವೇ ಆದುದರಿಂದ, ಅದಕ್ಕೆ ಎಲ್ಲವೂ ಗೊತ್ತಿದೆ; ಸರ್ವಜ್ಞವದು. ಅದಕ್ಕೆ ವಿಶ್ರಾಂತಿಯೆಂಬುದಿಲ್ಲ; ಸದಾ ಜಾಗರೂಕವಾಗಿರುತ್ತದೆ. ಜ್ಞಾನವೃದ್ಧಿಗೆ ಅಂತರ್ಮನಸ್ಸು ಅತ್ಯಂತ ಸಹಾಯಕಾರಿಯು. ಒಂದು ರಂಗಸ್ಥಳದಲ್ಲಿದ್ದಾಗ ಇನ್ನೊಂದು ಅಡಗಿರುತ್ತದೆ. ಬಾಹ್ಯಮನಸ್ಸು ನಮ್ಮ ಜಾಗ್ರತಾವಸ್ಥೆಯಲ್ಲಿ ಪ್ರಕಟವಾದರೆ, ಅಂತರ್ಮನಸ್ಸಿನ ಸಾಮ್ರಾಜ್ಯವು ನಿದ್ರಿತಾವಸ್ಥೆಯಲ್ಲಿ ನೆಲೆಗೊಳ್ಳುತ್ತದೆ.

ಅಂತರ್ಮನಸ್ಸಿನ ಕಾರಭಾರವು ನಾವು ನಿದ್ರೆಯಲ್ಲಿರುವಾಗ

ಪ್ರಕಟವಾಗುವುದರಿಂದ,ಆ ವೇಳೆಯಲ್ಲಿ ಏನೇನು ನಡೆದರೂ, ಎಂತಹ ಸತ್ಯವಾಗಲಿ ಜ್ಞಾನಾಂಕವಾಗಲಿ ದೊರೆಯುವಂತಿದ್ದರೂ ಅದು ನಮಗೆ ತಿಳಿಯುವುದಿಲ್ಲ; ಏಕೆಂದರೆ ಬಾಹ್ಯಮನಸ್ಸು ಸುಷುಪ್ತಿಯಲ್ಲಿರುತ್ತದೆ. ಬಾಹ್ಯ ಮನಸ್ಸಿಗೆ ಮುಟ್ಟಿದ ಹೊರತು ಯಾವುದೂ ನನಗೆ ಗೊತ್ತಾಗುವುದಿಲ್ಲವಷ್ಟೆ ? ಹೀಗಾಗಿ ಅಂತರ್ಮನಸ್ಸಿನಿಂದ ಪಡೆಯಬಹುದಾದ ಎಷ್ಟೋ ಲಾಭವು ನಮ್ಮ ಪಾಲಿಗೆ ತಪ್ಪಿಹೋಗುವುದು. ಅಂತರ್ಮನಸ್ಸು, ಬಾಹ್ಯಮನಸ್ಸು, ಎರಡೂ ಪರಸ್ಪರ ಸಹಾಯವಿದ್ದಾಗ ಮಾತ್ರ ನಮಗೆ ಸಂದೇಶವನ್ನಾಗಲಿ, ಸೂಚನೆಯನ್ನಾಗಲಿ ಮುಟ್ಟಿಸಲಿಕ್ಕೆ ಅನುಕೂಲವಾದ ದೊರೆಯುತ್ತದೆ. ಎಂದರೆ ಇವೆರಡು ಮನಗಳ ಸಂಬಂಧವಾದಾಗ ಮಾತ್ರ, ಬುದ್ಧಿಯಿಂದ ಮತ್ತೊಂದಕ್ಕೆ ಯಾವುದೊಂದು ವಿಷಯವನ್ನು ಕಳುಹಿಸಲು ಯೋಗ್ಯವಾದ ಸಮಯವು. ಮಾನಸೋಪಚಾರಕರು ಇಂತಹ ವೇಳೆಯಲ್ಲಿಯೆ ಸೂಚನೆಗಳನ್ನು ಕೊಟ್ಟು, ದುಶ್ಚಟಗಳನ್ನೂ, ದೌರ್ಬಲ್ಯಗಳನ್ನೂ ಹೋಗಲಾಡಿಸುತ್ತಾರೆ. ಇಂತಹ ಸಂಬಂಧವಾಗುವ ಸಮಯವೆಂದರೆ ನಿದ್ದೆಬರುವ ಹೊತ್ತು; ಶರೀರದ ಸ್ನಾಯುಗಳೆಲ್ಲ ಸಡಿಲುಗೊಂಡು ಜಡವಾಗುವ ವೇಳೆ. ಅಥವಾ ಸ್ಫೂರ್ತಿದಾಯಕವಾದ ಭಾಷಣವನ್ನು ಕೇಳಿ, ಇಲ್ಲವೆ ಉತ್ತಮ ವಾಸ, ಭಾವಸಾಂದ್ರಘನವಾದ, ಸಂಗೀತ ಮುಂತಾದುವನ್ನು ಕೇಳಿ ರೋಮಾಂಚವಾದಾಗ. ಇಂತಹ ಸಮಯದಲ್ಲಿ ಕೊಟ್ಟ ಸೂಚನೆಯನ್ನು ಅಂತರ್ಮನಸ್ಸು ಕೂಡಲೆ ಸ್ವೀಕರಿಸಿ, ಅದರಂತೆ ನಡೆಯಲು ಯತ್ನಿಸುತ್ತದೆ. ಆದುದರಿಂದ ನಾವು ನಿದ್ದೆ ಹೋಗುವಾಗ ಚಿಂತೆ, ಸಿಟ್ಟು, ದುಃಖ, ಒಡಲುರಿ ಮುಂತಾದ ಭಾವೆಗಳನ್ನು ಕಟ್ಟಿಕೊಂಡಿರುವುದು ತರವಲ್ಲ. ಮನಸ್ಸು ಅಂತಹ ಸಂಧಿಸಮಯದಲ್ಲಿ ತೃಪ್ತವಾಗಿಯೂ ಶಾಂತವಾಗಿಯೂ, ಉಲ್ಲಸಿತವಾಗಿಯೂ ಇರಬೇಕು. ಸೂಚನೆಗಳನ್ನು ಕುರಿತು ಇನ್ನೊಂದೆಡೆಯಲ್ಲಿ ಬರೆಯುವೆನು. ಇಲ್ಲಿ ಮನಸ್ಸಿಗೂ ಶರೀರಕ್ಕೂ ಇರುವ ಸಂಬಂಧವನ್ನು ಕುರಿತು ಆಲೋಚಿಸೋಣ.

ಪರಿಸ್ಥಿತಿ ಮತ್ತು ಸಂಗದೋಷಗಳ ಮೂಲಕ ಮನಸ್ಸಿನ ಈ ಎರಡು ಅಂಗಗಳಲ್ಲಿ ಆಗಾಗ ಕಲಹವಾಗುತ್ತಿರುವುದು. ಒಂದು ಒಂದು ಕಡೆಗೆ ಎಳೆದರೆ, ಇನ್ನೊಂದು ಮತ್ತೊಂದು ಕಡೆಗೆ ಜಗ್ಗುವುದು. ಹೀಗಾಗುವುದರಿಂದ ನಮಗೆ ಸಮಾಧಾನವಿರುವುದಿಲ್ಲ ಎರಡೂ ಒಟ್ಟಾಗಿ, ಒಡನಾಡಿಗಳಂತೆ ಕೆಲಸ ಮಾಡುತ್ತಿದ್ದರೆಯೆ ನಮ್ಮ ಬೆಳೆವಣಿಗೆಯು ಭರದಿಂದ ಸಾಗುವುದು. ಈ ಎರಡು ಅಂಗಗಳ ಕ್ರಿಯೆಗಳು ಅವಿರೋಧವಾಗಿ ನಡೆದರೆ, ಮನಸ್ಸು ಕ್ಷೇಮದಿಂದ ಇರುವುದು ಮನಸ್ಸು ಕ್ಷೇಮವಾಗಿದ್ದರೆ ಶರೀರವೂ ಕ್ಷೇಮದಿಂದಿರುವುದು. ಮನಸ್ಸಿನ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳಬೇಕಾದರೆ ಪೋಷಕವಾದ ಮನಃಸ್ಥಿತಿಗಳು ಬೇಕು.

ಕಾಯಿಲೆ ಬಿದ್ದವರು ಆನಂದದ ಸುದ್ದಿಯನ್ನು ಕೇಳಿ ಬೇಗನೆ ವಾಸಿಯಾದುದನ್ನು ನೀವು ನೋಡಿರಬಹುದು. ನೀವು ಹತ್ತಂಟು ತಾಪು ದುಡಿದು, ದಣಿದು, ಕಡ್ಡಿಯ ಕೆಲಸವನ್ನೂ ಮಾಡಲಾರದೆ ಬಿರಿಗಿ ಕುಳಿತಾಗ, ನಿಮ್ಮ ಮಿತ್ರನೊಬ್ಬನು ಬಂದು, '' ಈಹೊತ್ತು ಇಂತಹ ಚಿತ್ರಪಟವಿದೆ; ಇಂಥಲ್ಲಿ ಇಂತಹ ಸಂಗೀತವಿದೆ '' ಎಂದು ಹೇಳಿದಾಗ, ಚಟುವಟಿಕೆಯಿಂದೆದ್ದು ಅಂಗಿ-ಟೊಪ್ಪಿಗೆ ಹಾಕಿ ಹುರುಪಿನಿಂದ ಹೊರಬಿದ್ದುದು ನಿಮಗೆ ನೆನಪಿರಬಹುದು. ಶೋಕದಿಂದ ತಲೆಗೂದಲು ನರೆತ ಸಂಗತಿಯನ್ನು ನೀವು ಕೇಳಿರಬಹುದು. ದುಃಖಾತಿಶಯದಿಂದ ಎಚ್ಚರು ತಪ್ಪಿದವರನ್ನೂ ನೋಡಿರಬಹುದು; ಅಥವಾ ಸಿಟ್ಟಿನಿಂದ ಉರಿಯುತ್ತ ಊಟಮಾಡಿದಾಗ ವಾಂತಿಯಾದುದನ್ನೂ ನೋಡಿರಬಹುದು. ಭಯದಿಂದ ನಡುಗಿ, ಬೆವತು, ದಿಕ್ಕುತೋರದೆ ಮೂಢರಾದವರನ್ನೂ ಕಂಡಿರಬಹುದು. ಹೀಗೆಯೇ ಮನಸ್ಸಿಗೂ ಶರೀರಕ್ಕೂ ಇರುವ ಜೀವಾಳದ ಸಂಬಂಧವನ್ನು ತೋರಿಸುವ ಸನ್ನಿವೇಶಗಳೆಷ್ಟೊ ನಿಮ್ಮ ದೃಷ್ಟಿಪಥದಲ್ಲಿ ಬರುವುವು ಇವುಗಳಿಂದಾಗಿ ತಿಳಿಯುವ ಸಂಗತಿಯೆಂದರೆ, ಮನಸ್ಸನ್ನು ಉಪಾಯದಿಂದ ಜೇತರಿಸಿ ಪುಸಲಾಯಿಸಿದರೆ ಬೇಸರವು ಇಲ್ಲದಂತಾಗುವುದು, ಆಯಾಸವು ಓಡಿ ಹೋಗುವುದು; ನೋವು ಮಾಯವಾಗುವುದು. ಮನಸ್ಸಿಗೆ ಬೇಸರವಾಗಿದ್ದರೆ ಶರೀರವೂ ನಿರುತ್ಸಾಹಿಯೂ, ಜೀವನ್ಮಾಗಿ ಕೆಲಸಮಾಡಲಾರದಂತಹದೂ ಆಗುವುದು. ಏಕೆಂದರೆ ಶರೀರವು ಚಿಕ್ಕಾಯತ್ತವಾಗಿದೆ. ಶರೀರದ ಆರೋಗ್ಯವನ್ನು ನಿರ್ಧರಿಸುವಲ್ಲಿ ಮನಸ್ಸು ಮುಖ್ಯಕಾರಣವು.

ಆದುದರಿಂದ ಸಿಟ್ಟು, ವಿತ್ಸರ, ಭೀತಿ, ತರಾತುರಿ, ಆತ್ಮಕನಿಕರ, ಚಿಂತೆ ಮೊದಲಾದ ಘಾತುಕವಾದ ಸ್ಥಿತಿಗಳಿಗೆ ಸ್ವಲ್ಪವೂ ಎಡೆಗೊಡದಿರುವುದು ಮಹತ್ವದ್ದಾಗಿದೆ. ಇವು ಮಾಡುವ ಅಪಾಯವು ಅಷ್ಟಿಷ್ಟಲ್ಲ. ವಿಷದ್ರವವನ್ನು ಸಂಚಯಿಸಿ ಶರೀರದ ವ್ಯಾಪಾರವನ್ನು ಕೆಡಿಸಿ, ಅನೇಕ ತೊಂದರೆಗಳಿಗೀಡುಮಾಡುವ ಶತ್ರುಗಳಿವು.

ಸಿಟ್ಟು ಬಾರದಂತೆ ಎಚ್ಚರದಿಂದಿರುವುದು ಉತ್ತಮ. ಒಮ್ಮೊಮ್ಮೆ ನಿಮ್ಮನ್ನು ವಿಪರೀತ ಸಿಟ್ಟು ಬಂದರೆ, ನಿಮ್ಮ ತೊಡೆಯನ್ನೋ ತೋಳಿನ್ನೋ ಗುದ್ದಿಕೊಳ್ಳಿ; ಇದ್ದಲ್ಲಿಂದ ಎಲ್ಲಾದರೂ ಓಡಿಹೋಗಿ, ಸಿಟ್ಟು ಹುಟ್ಟಿಸಿದ ವಿಷದ್ರವವು ಹೇಗಾದರೂ ಹೊರಬೀಳುವಂತೆ ಮಾಡಿರಿ. ಏನಾದರೂ ಜೋರಿನ ಕೆಲಸವನ್ನು ಮಾಡಿದರೆ ಅದು ಸುಟ್ಟುಹೋಗುವುದು. ಸಿಟ್ಟು ಬಂದಾಗ ಪಚನಕ್ರಿಯೆ ಚೆನ್ನಾಗಿ ನಡೆಯುವುದಿಲ್ಲ. ಬುದ್ಧಿ ಮಂದವಾಗುತ್ತದೆ. ಶಕ್ತಿಯು ದುರುಪಯೋಗವಾಗುತ್ತದೆ. ಸಿಟ್ಟಿನ ಮೂಲಕ ಪರರಿಗೆ ನೋವೂ ತೊಂದರೆಯೂ ಆಗುತ್ತದೆ. ಕೊನೆಗೆ ನಿಜಕ್ಕೆ ' ಹಾಗೆ ಮಾಡಬಾರದಿತ್ತು ' ಎಂದು ಪಶ್ಚಾತ್ತಾಪವಾಗುವುದು. ಅಷ್ಟೇಏನಾ ಹೆಚ್ಚಿನ ಪ್ರಯೋಜನವೇನೂ ಆದಂತಾಗುವುದಿಲ್ಲ. ' ಸಿಟ್ಟು ಬಂದಾಗ ಹತ್ತು ಅಂಕಿಗಳನ್ನು ಎಣಿಸಿರಿ, ' ಎನ್ನುತ್ತಾರೆ. ಹಾಗಾದರೂ ಮಾಡಿದರೆ ಅದೊಂದು ರೀತಿ.

ಹೊಟ್ಟೆಕಿಚ್ಚಿಗಿಂತ ಹೇಯವಾದ ದೌರ್ಬಲ್ಯವು ಇನ್ನೊಂದಿಲ್ಲ. ನಾನಾತರದ ದುಷ್ಪವಿಕಾರಗಳಿಗೆ ಕಾರಣವಿದು. ಆದ್ದರಿಂದ ಇದರಿಂದ ಆದಷ್ಟು ದೂರವಿರಬೇಕು.

'ಚಿಂತೆಯೇ ಮುಪ್ಪು' ಎಂಬುದು ನಿಮಗೆ ಗೊತ್ತಿದ್ದ ವಿಷಯ. ಸುಮ್ಮಸುಮ್ಮನೆ ಯೋಚನೆ ಮಾಡುವುದರಿಂದ ಯಾವ ಹಿತವೂ ಆಗುವುದಿಲ್ಲ. ಕಡ್ಡಿಯಷ್ಟು ಕಾರಣವು ಗುಡ್ಡದಷ್ಟಾಗಿ ತೋರುವುದು. ಚಿಂತೆಯು ಏತಕ್ಕೆ? ಅದನ್ನು ಹೋಗಲಾಡಿಸುವ ಉಪಾಯ ವೇನು? ...ಎಂಬುದೇ ಚಿಂತೆಯಾಗಿರಲಿ; ಅಲ್ಲದೆ, ಬರೀ ನಿಟ್ಟುಸಿರು

ಬಿಡುತ್ತ, ಹುಬ್ಬುಗಂಟುಹಾಕಿಕೊಂಡು ಚಿಂತಿಸುತ್ತ ಕುಳಿತರೆ ಶಕ್ತಿಯ ಹ್ರಾಸಕ್ಕೆ ಮಾತ್ರ ಕಾರಣವಾಗುವುದು. ಯಾವಾಗಲೂ ಚಿಂತಿಸುತ್ತಿರುವವನ ಸಂಗವೇ ಬೇಡವಾಗುವುದು. ಚಿಂತೆಗೊಳಗಾದಾಗ, ತಿರುಗಾಡಲಿಕ್ಕೆ ಹೋಗಿರಿ; ಅಥವಾ ಟೆನಿಸ್ ಮೊದಲಾದ ಆಟವನ್ನು ಮನಸ್ಸುಗೊಟ್ಟು ಆಡಿರಿ, ಇಲ್ಲವೆ ಹಾಡಿರಿ, ಬಾರಿಸಿರಿ. ಅದೂ ಆಗದಿದ್ದರೆ ಕಥೆ-ಕಾದಂಬರಿಗಳನ್ನು ಓದಿರಿ.

ಹೆದರಿಕೆಯಿಂದ ರುಧಿರಾಭಿಸರಣದ ಕೆಲಸವು ತಲೆಕೆಳಗಾಗುವುದು; ಮೆದುಳು ಮಂದವಾಗುವುದು. ಹೆದರಲಿಕ್ಕೆ ಕಾರಣವೇನು? ಯಾತಕ್ಕೆ ಹೆದರಬೇಕಾಗಿದೆ? – ಎಂಬುದನ್ನು ಯೋಚಿಸಿ ನೋಡಿರಿ. ಪರಿಸ್ಥಿತಿಯನ್ನು ಚಿಕಿತ್ಸಕ ಬುದ್ಧಿಯಿಂದ ನೋಡಿದರೆ, ಭೀತಿಯ ಕಾರಣವು ಕ್ಷುಲ್ಲಕವೆಂದು ಕಂಡುಬರುವುದು. ನಿಜವಾಗಿಯೂ ಹೆದರಲು ಕಾರಣವಿದ್ದರೆ ಅದರ ನಿವಾರಣೆಯ ಉಪಾಯವನ್ನು ಕಂಡುಹಿಡಿಯಬೇಕು. ಭೀತಿಯು ಬಹುರೂಪಿಯಾದ ಮಾರಿಯು. ಹಲವು ರೀತಿಯಲ್ಲಿ ಅದು ತಲೆಯೆತ್ತ ಬಲ್ಲದು; ಹಲವು ವಿಧದಲ್ಲಿ ಅದು ಹಾನಿಮಾಡಬಲ್ಲದು. ಕತ್ತಲೆಯ ಹೆದರಿಕೆ, ಸಾವಿನ ಹೆದರಿಕೆ, ಚಾಕರಿ ಹೋಗುವುದೆಂಬ ಹೆದರಿಕೆ, ಬಡವರಾದೇವು ಎಂಬ ಹೆದರಿಕೆ, ಅಪಘಾತವಾಗುವುದೆಂಬ ಹೆದರಿಕೆ, ಕಾಕವೋಕರ ಹೆದರಿಕೆ, ಭೂತ-ಪಿಶಾಚಿಗಳ ಹೆದರಿಕೆ.. ಎಂದು ಮುಂತಾಗಿ ಹರಹರದ ಹೆದರಿಕೆಗಳುಂಟು. ಅವುಗಳಿಗೆ ಎಡೆಗೊಟ್ಟರೆ ವಿಷದ ಬೀಜವನ್ನು ಬಿತ್ತಿದಂತಾಗುವುದು. ದಿನದಿನಕ್ಕೂ ಅವು ಬೆಳೆದು ನಿಷ್ಕಾರಣವಾಗಿ ಪೀಡಿಸುವುವು. ಹುಟ್ಟಿನಿಂದ ಬರುವ ಹೆದರಿಕೆಗಳೆಂದೇ ಎಂದು ಮನಃಶಾಸ್ತ್ರಜ್ಞರು ಹೇಳುವರು. ಒಂದು, ಕರ್ಕಶವಾಗಿ ಒಮ್ಮಿಂದೊಮ್ಮೆ ಕೇವಿಯುವೇಲೆ ಬೀಳುವ ದೊಡ್ಡ ಶಬ್ದ; ಇನ್ನೊಂದು, ನಮಗೆ ಆಧಾರವಾಗಿರುವ ನೆಲ ಅಥವಾ ವಸ್ತುವು ಇಲ್ಲದಂತಾಗಿ ಬೀಳುವ ಹೆದರಿಕೆ. ಉಳಿದುವುಗಳೆಲ್ಲ ನಾವು ಸಂಪಾದಿಸುವ ಹೆದರಿಕೆಗಳು. ಅವಕ್ಕೆ ನಿಜವಾದ ಕಾರಣವಿಲ್ಲವೆಂಬುದು ಸ್ಪಷ್ಟವಾಗುವುದಿಲ್ಲವೆ? ಹೆದರಿಕೆಯನ್ನು ಹೊಡೆದೋಡಿಸಿರಿ! ಅಂಜುಗುಳಿಗೆ ಜೀವನದಲ್ಲಿ ಸ್ಥಾನವಿಲ್ಲ. ಧೈರ್ಯಶಾಲಿಗೆ ಎಲ್ಲವೂ ಶರಣು ಹೋಗುವುದು. ಭೀತಿಯನ್ನು ಹೋಗಲಾಡಿಸುವುದು ಧೈರ್ಯದಿಂದ. ಧೈರ್ಯ ಬೇಕಾಗುವ ಕೆಲಸಗಳನ್ನು ಮಾಡುತ್ತ ಹೋಗಿರಿ; ಎದೆಗಾರಿಕೆಯನ್ನು ಕಾರ್ಯದಲ್ಲಿ ತೋರಿಸಿರಿ!

ಹೃದ್ರೋಗಕ್ಕೆ ಒಂದು ಕಾರಣವೆಂದರೆ ಗಡಿಬಿಡಿ, ತರಾತುರಿ. ಗಡಿಬಿಡಿಯಿಂದ ಕೆಲಸಗಳೆಷ್ಟೋ ಕೆಟ್ಟುಹೋಗುವುವು. ಅಪಘಾತಗಳೆಷ್ಟೋ ಇದರಿಂದಲೇ ಸಂಭವಿಸುವುವು. ಎಳೆಂಟು ನಿಮಿಷ ಮುಂಚಿತವಾಗಿಯೆ ಆಯಾ ಕೆಲಸಗಳನ್ನು ಮಾಡತೊಡಗಿದರೆ, ತೊಂದರೆಯಾಗುವುದು ಕಡಿಮೆ. ಅವಸರವಸರದಿಂದ ಕೆಲಸ ಮಾಡಿದರೆ ಹೃದಯಕ್ರಿಯೆಗೆ ತೊಂದರೆಕೊಟ್ಟಂತಾಗುವುದಲ್ಲದೆ ಎಷ್ಟೋ ಪ್ರಸಂಗಗಳಲ್ಲಿ ಅನಿಷ್ಟವಾದ ಪರಿಣಾಮವಾಗುವುದು.

ಆದುದರಿಂದ ಇಂತಹ ಘಾತುಕವಾದ ಸ್ಥಿತಿಗಳಿಗೆ ಸ್ವಲ್ಪವೂ ಇಂಬುಗೊಡದಿರುವುದು ತನ್ನ-ನಮ್ಮನಗಳ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವುದಕ್ಕೆ ಗುಟ್ಟು. ಪ್ರಖ್ಯಾತರಾದ ಡಾಕ್ಟರೊಬ್ಬರು "ಎಲ್ಲಕ್ಕಿಂತ ಹೆಚ್ಚು ದುಃಖದಾಯಕವಾದ ಬೇನೆಗಳೆಂದರೆ, ಚಿಂತೆ, ಹೆದರಿಕೆ, ಉದಾಸೀನತೆ. ಭಯಂಕರವೆಂದು ನಾವು ತಿಳಿಯುವ ಕಾಯಿಲೆಗಳಿಗಿಂತ ಇವೇ ಹೆಚ್ಚು ಜೀವನಗಳನ್ನು ಮಣ್ಣುಗೂಡಿಸುವುವು. ಸಹಸ್ರಗಟ್ಟಲೆ ಮನೆ-ಮಾರುಗಳನ್ನು ಮುರಿಯುವುವು. ಇವೇ ದಾರಿದ್ರ್ಯಕ್ಕೆ ಕಾರಣ. ಇವು ನಮಗೆ ಗೊತ್ತಿರುವ ರೋಗ-ಮರಣಗಳಿಗಿಂತ ಕನಿಷ್ಟವಾದ ಸ್ಥಿತಿಯನ್ನುಂಟು ಮಾಡುವುವು" ಎಂದು ಹೇಳಿದ್ದಾರೆ.

ವಸ್ತುಗಳ ಅಂತರಾಳದೊಳಗೆ ಅಡಲವಾದ ಶಾಂತಿಯು ಅಡಗಿರುವುದು. ಕಡಲು ಬಿರುಗಾಳಿಯ ಹೊಡೆತಕ್ಕೆ ಹೊಯ್ದಾಡಿದರೂ, ಉಕ್ಕಿ ಭೋರ್ಗರೆದು ಭಯವನ್ನುಂಟುಮಾಡಿದರೂ, ಆದರ ಒಡಲು ಶಾಂತಿಯ ಬೀಡಾಗಿದೆ. ಅದರಂತೆ ನಮ್ಮಲ್ಲಿಯೂ ಚಿಂತೆ, ಕ್ರೋಧ, ಮತ್ಸರ, ಲೋಭ, ತರಾತುರಿಗಳ ಮುಸುಕಿನೊಳಗೆ ಶಾಂತಿಯು ಮನೆಮಾಡಿಕೊಂಡಿದೆ. ಅದನ್ನು ಅನುಭವಿಸಬೇಕಾದರೆ ಆಪಾಯಕರವಾದ ಭಾವನೆಗಳನ್ನು ಬದಿಗೊತ್ತಬೇಕಲ್ಲವೆ? ಜೀವನ-ಸಂಗೀತದಲ್ಲಿ ಅಪಶ್ರುತಿಯೆಷ್ಟೋ ಕೇಳಬರುವುದು. ನಮ್ಮ ಸುತ್ತುಮುತ್ತಲಿನ ವಾತಾವರಣದಲ್ಲಿ ಮನಸ್ಸನ್ನು ಕೆಣಕುವ ಕಾರಣಗಳೆಷ್ಟೋ ಇವೆ. ಅವನ್ನು ಕಡೆಗಣಿಸಿ, ಮನಸ್ಸಿನ ಸಮತೋಲವನ್ನು ಕಾಯ್ದು, ಉಲ್ಲಾಸ, ತೃಪ್ತಿ, ಒಳ್ಳೆಯದಾಗುವುದೆಂಬ ತರಹ ಮುಂತಾದ ಸದ್ಭಾವಗಳನ್ನು ಬಲಗೊಳಿಸಿಕೊಂಡರೆ, ನಮ್ಮ ಸ್ವಾಸ್ಥ್ಯಕ್ಕೆ ಧಕ್ಕೆಯಿಲ್ಲ.

ಈ ಲೇಖನದ ಆರಂಭದಲ್ಲಿ ಬಂದ 'ಬಾಹ್ಯಮನಸ್ಸು,' 'ಅಂತರ್ಮನಸ್ಸು' 'ಸೂಚನೆ' ಇತ್ಯಾದಿ ಶಬ್ದಗಳು ಕೆಲವರಿಗೆ ತಲೆ ಕೆಡೆದುಕೊಳ್ಳುವಂತೆ ಮಾಡಬಹುದು. ಯಾರೂ ಎದೆಗುಂದಲು ಕಾರಣವಿಲ್ಲ. ಅಂತರ್ಮನಸ್ಸಿಗೆ ಯಾವುದೊಂದು ವಿಷಯವು ತಲ್ಪಬೇಕಾದರೆ ಅದು ನಮ್ಮ ಬಾಹ್ಯಮನಸ್ಸಿನ ದಾರಿಯಿಂದಲೇ ಹೋಗಬೇಕು. ಬಾಹ್ಯಮನಸ್ಸಿನ ಮೇಲೆ ಆಗುವ ಅನುಭವವು ಪುನಃ ಪುನಃ ಆಗುತ್ತಿದ್ದರೆ ಆ ಅನುಭವವು ಕ್ರಮೇಣ ಅಂತರ್ಮನಸ್ಸಿಗೆ ಇಳಿದು ಬರುವುದು; ಆದೊಂದು ಬಗೆಯ ಅಭ್ಯಾಸವಾಗಿ ಪರಿಣಮಿಸುವುದು. ನಮ್ಮ ವಿಹಾರ, ವಿಹಾರ ವಿಚಾರಸರಣಿಗಳಿಗೆ ಒಂದು ಕ್ರಮವನ್ನು ಅಥವಾ ಯೋಗ್ಯವಾದ ರೀತಿಯನ್ನು ಒದಗಿಸಿಕೊಟ್ಟರೆ, ಅದು ಕೆಲವು ಕಾಲದಲ್ಲಿಯೆ ಅಂತರ್ಮನಸ್ಸಿನ ಆಡಳಿತಕ್ಕೆ ಒಳಪಡುವುದು. ಬಾಹ್ಯಮನಸ್ಸನ್ನು ಚೆನ್ನಾಗಿಟ್ಟುಕೊಂಡರೆ ಅಂತರ್ಮನಸ್ಸು ಚೆನ್ನಾಗಿರುವುದು. 'ಅಂತರ್ಮನಸ್ಸು' ಎಂಬ ಶಬ್ದವನ್ನೋದಿ ದಿಗಿಲುಗೊಳ್ಳುವುದು ಸರಿಯಲ್ಲ. ಅದರ ಗೊಡವೆಗೆ ಹೋಗುವುದೇ ಅವಶ್ಯವಿರುವುದಿಲ್ಲ. ಬಾಹ್ಯಮನಸ್ಸನ್ನು ಆಗಾಗ ನಿರೀಕ್ಷಿಸಿ, ಅದಕ್ಕೆ ತಗಲುವ ಕಸರನ್ನೂ ಕೊಳೆಯನ್ನೂ ತೊಳೆದು ಒಳ್ಳೆಯ ಸ್ಥಿತಿಯಲ್ಲಿಟ್ಟರೆ, ಅಂತರ್ಮನಸ್ಸು ತನ್ನ ಯೋಗ-ಕ್ಷೇಮವನ್ನು ತಾನು ಮಾಡಿಕೊಳ್ಳುವುದು; ನಮಗೆ ನಮೂಧಾನವಿರುವುದು, ಅರ್ಥಾತ್ 'ಸಂಸಾರ ಸಾಗರ'ದಲ್ಲಿ ಹೇಲುವುದು ಸುಲಭವಾಗುವುದು; ಬಾಳುವೆಯು ಕಾಳಗವೆಂದೆನಿಸದೆ, ಅದೊಂದು ಸೊಗಸಿನ ಆಟಗವೆಂದು ಮನವರಿಕೆಯಾಗುವುದು.

ವೈಯಾಕರಣ ಭೀಮ ★ ಅಥವಾ ಭೀಮಸೇನ

ಪ್ರೊ. ಕೆ. ಜಿ. ಕುಂಪಣಗಾರ ಎಂ.ಎ. ಕೊಲ್ಹಾಪುರ

'ವೈಯಾಕರಣ ಭೀಮ' ಅಥವಾ 'ಭೀಮಸೇನ'ನು ಸಂಸ್ಕೃತದಲ್ಲಿ ಧಾತುಪಾಠವನ್ನು ರಚಿಸಿದ್ದಾನೆ. ಅವನು ಕ್ರಿ. ಶ. ೬೦೦ ವರ್ಷಗಳಿಗೆ ಸ್ವಲ್ಪ ಹಿಂದಿನ ಕಾಲದಲ್ಲಿ ಬದುಕಿದ್ದವನು. 'ಶಬ್ದಮಣಿದರ್ಪಣ' ಕಾರನಾದ ಕನ್ನಡಿಗ ಕೇತಿರಾಜನು ತನ್ನ ಧಾತುಕೋಶವನ್ನು ರಚಿಸುವಲ್ಲಿ ಅತನನ್ನು ಅನುಸರಿಸಿದ್ದಾನೆ.

★

ಕೇತಿರಾಜನು ತನ್ನ 'ಶಬ್ದಮಣಿದರ್ಪಣ'ದಲ್ಲಿ ಕನ್ನಡದ ಧಾತುಕೋಶವನ್ನು ರಚಿಸಲಾರಂಭಿಸುವಾಗ:

"ವೇದಸಮನಾಗಿ ಭೀಮನಿ-
ನಾದುದು ಸಂಸ್ಕೃತದ ಧಾತುವಾತಿರದಿಂದಂ ॥
ಯಾದವ ಕಟಕಾಚಾರ್ಯನಿ-
ನಾದುದು ಕರ್ಣಾಟಧಾತು ಕಣಿಕೇತವನಿಂ ॥"

ಎಂಬ ಪದ್ಯದಿಂದ, ಸರ್ವಸಮ್ಮತವಾದ ಭೀಮನ ಸಂಸ್ಕೃತದ ಧಾತುಕೋಶವನ್ನು ಅನುಸರಿಸಿ ತಾನು ಈ ಕೋಶವನ್ನು ರಚಿಸಿದಂತೆ ಹೇಳಿದ್ದಾನೆ. ಆದರೆ ಆ ಸಂಸ್ಕೃತ ಧಾತುಕೋಶವನ್ನು ರಚಿಸಿದ ಭೀಮನು ಯಾರೆಂಬುದನ್ನು ತನ್ನ ವೃತ್ತಿಯಲ್ಲಿ ಹೇಳಿಲ್ಲ. ಕನ್ನಡ ಪಂಡಿತರಾರೂ ಈತನ ಬಗ್ಗೆ ಬರೆದಂತೆ ತೋರಿದುಬರುವುದಿಲ್ಲ. ಆದುದರಿಂದ ಈ ಭೀಮನು ಯಾರೆಂಬುದನ್ನು ಇಲ್ಲಿಯ ವರೆಗೆ ನನಗೆ ಹೇಳಲು ಬರುತ್ತಿರಲಿಲ್ಲ. ಈಗ ಶ್ರೀನಾನಾ ಪಿ. ಕೆ. ಗೋಡೆ ಯವರು *New Indian Antiquary* ಎಂಬ ಮಾಸಿಕದ ಸಂಪುಟ ೨ ಸಂಚಿಕೆ ೩ ರಲ್ಲಿ ಈತನ ಬಗ್ಗೆ ಒಂದು ಪುಟ್ಟ ಲೇಖನವನ್ನು ಬರೆದಿದ್ದಾರೆ. ಆದರ ಆಧಾರದಿಂದ ಈ ಲೇಖನವನ್ನು ಬರೆಯಲಾಗಿದೆ.

ಡಾ. ಎಸ್. ಕೆ. ಬೆಳವಳಕರರವರು ತಮ್ಮ *Systems of Sanskrit Grammar* ಎಂಬ ಪುಸ್ತಕದ 'ಧಾತುಪಾಠ' ಎಂಬ ಪರಿಚ್ಛೇದದಲ್ಲಿ ಹೀಗೆಂದಿದ್ದಾರೆ: (ಆದರ ಭಾಷಾಂತರವನ್ನು ಇಲ್ಲಿ ಕೊಡಲಾಗಿದೆ.)

"ಮಾಧವೀಯ ಧಾತುವೃತ್ತಿಯು ಆದೇ ವಿಷಯವನ್ನು ವಿವೇಚಿಸುತ್ತಿದೆ. ಅದನ್ನು ಬರೆದವರು ಮಾಧವಾಚಾರ್ಯರಿರಬಹುದು ಅಥವಾ ವೇದಭಾಷ್ಯಕಾರರಾದ ಸಾಯಣಾಚಾರ್ಯರಿರಬಹುದು. ಅವರು (ಸಾಯಣಾಚಾರ್ಯರು) ತಮಗಿಂತ ಪೂರ್ವದಲ್ಲಿದ್ದ ವೈಯಾಕರಣರ ಪರಿಶ್ರಮದಿಂದುಂಟಾದ ನಿರ್ಣಯಗಳನ್ನು ಒಪ್ಪಿಕೊಂಡು ಅಲ್ಲಿ ಉಪಯೋಗಿಸಿಕೊಂಡಿದ್ದಾರೆ; ಮತ್ತು ಅವರೆಲ್ಲರ ಹೆಸರುಗಳನ್ನು ಹೇಳಿದ್ದಾರೆ. ಅವರಲ್ಲಿ **ಪಾಣಿನಿಯ ಮಾರ್ಗವನ್ನು ಅನುಸರಿಸಿದ ಭೀಮಸೇನ–ಮೈತ್ರೇಯರಕ್ಷಿತರ** ಹೆಸರುಗಳನ್ನು ಪ್ರಾಮುಖ್ಯವಾಗಿ ಹೇಳಬಹುದು."

ಸಾಯಣಾಚಾರ್ಯರು ಕ್ರಿ. ಶ. ಸುಮಾರು ೧೩೧೦ರಲ್ಲಿ ಇದ್ದವರು. ಅವರು ಆಧುನಿಕ ಸೌಕರ್ಯಗಳಿಲ್ಲದ ಆ ಕಾಲದಲ್ಲಿ **ಭೀಮಸೇನನ್ನ**ಹೆಸರನ್ನೆತ್ತಿ ಹೇಳಬೇಕಾದರೆ, ಆತನು ಸು. ೧೩೦೦ ಕ್ಕಿಂತ ಪೂರ್ವದಲ್ಲಿಯೇ ಪ್ರಸಿದ್ಧನಾದವನಿರಬೇಕು. ಆ ಕಾರಣ ಆತನ ಕಾಲನಿರ್ಣಯದಲ್ಲಿ ೧೩೦೦ ಈಚೆಯ ಮಟ್ಟು ಎಂದು ಭಾವಿಸಬಹುದು. ೧೩೦೦ ಕ್ಕಿಂತ ಈಚೆ ಆತನು ಇರಲಾರನು. ಇದ್ದಿದ್ದರೆ ಸಾಯಣಾಚಾರ್ಯರು ಆತನ ಹೆಸರನ್ನು ಎತ್ತುತ್ತಿರಲಿಲ್ಲ. ಇನ್ನು ಪೂರ್ವದ ಮಟ್ಟನ್ನು ಶೋಧಿಸುತ್ತಿರುವಾಗ ಈ ಮುಂದಿನ ಆಧಾರಗಳು ದೊರೆಯುತ್ತಿವೆ.

ಆಫ್ರೆಕ್ಟ್‌ನು **'ಕ್ಯಾಟಾಲೋಗೊಸ್ ಕ್ಯಾಟಾಲೋಗೊರಮ್'** ಎಂಬ ಗ್ರಂಥದಲ್ಲಿ, **ಭೀಮಸೇನನ ಧಾತುಪಾಠದ** ಕೆಲವು ಪ್ರತಿಗಳ ವಿವರವನ್ನು ಹೇಳಿದ್ದಾನೆ; ಮತ್ತು ಆತನು **ಜೈಮಿನ್ಯಾಕರಣದ** ಕರ್ತೃವೆಂದೂ, ರಾಮಮುಕುಟ ಮತ್ತು ಪದ್ಮನಾಭರು ಆ ಗ್ರಂಥದಿಂದ ಉದಾಹರಣೆ ತೆಗೆದುಕೊಂಡಿರುವರೆಂದೂ ಹೇಳುತ್ತಾನೆ (ಕ್ಯಾಟಾಲೋಗೊಸ್ ಕ್ಯಾಟಾಲೋಗೊರಮ್ ಭಾಗ ೧, ಪು.೪೧೩). ಭಾಂಡಾರಕರ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನ (ಭಾಂಡಾರಕರ-ಪೌರ್ವಾತ್ಯ-ಸಂಶೋಧಕ-ಸಂಸ್ಥೆಯ) ಲ್ಲಿಯ ಹಸ್ತಲಿಖಿತ ಗ್ರಂಥಸಂಗ್ರಹದಲ್ಲಿ. **ಭೀಮಸೇನನ** ಧಾತುಪಾಠದ ಮೂರು ಪ್ರತಿಗಳಿವೆ. ಇವುಗಳ ಬಗ್ಗೆ ಡಾ. ಬೆಳವಳಕರರವರು ಹೀಗೆ ಎಂದಿದ್ದಾರೆ:

"ಧಾತುಗಳ ಪಟ್ಟಿಯನ್ನು ಪಾಣಿನಿಯು ರಚಿಸಿದ್ದಾನೆ. ಭೀಮಸೇನನು ಆ ಧಾತುಗಳಿಗೆ ಅರ್ಥ ಬರೆದಿದ್ದಾನೆ. ಈ **ಭೀಮಸೇನನು** ಅಥವಾ ಭೀಮನು ಬಹಳ ಪ್ರಾಚೀನನು. ಈ ಧಾತುಪಾಠದ ಮೇಲೆ ಆತನು **ಪ್ರದೀಪವೆಂಬ** ಟೀಕೆಯನ್ನು ಬರೆದಿದ್ದಾನೆ."

ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಯವರು ಬಂಗಾಲ ರಾಯಲ್ ಏಶಿಯಾಟಿಕ್ ಸೊಸಾಯಿಟಿಯ ಗ್ರಂಥ-ಸಂಗ್ರಹಾಲಯದೊಳಗಿನ ಧಾತುಪಾಠಗಳ ಪ್ರತಿಗಳ ಬಗ್ಗೆ ಹೀಗೆ ಬರೆದಿರುವರು: "೪೩೫ನೆಯ ನಂಬರಿನ ಪ್ರತಿಯು ಮೈತ್ರೇಯ-ರಕ್ಷಿತನದು. ಆತನು ಬೌದ್ಧನು. ಪಾಣಿನಿಯ ಧಾತುಗಳ ಪಟ್ಟಿಗೆ ಟೀಕಾಕಾರನವನು. ಅವನು ಭೀಮನಿಗಿಂತ ಈಚೆಯವನು." ಶ್ರೀಶ ಬಾಬುವಿನ ಅಭಿಪ್ರಾಯದ ಮೇರೆಗೆ ಮೈತ್ರೇಯ-ರಕ್ಷಿತನ ಕಾಲ ಸು. ೧೧೦೦. ಭೀಮನು ಅಥವಾ ಭೀಮಸೇನನು ಇವನ ಪೂರ್ವದವನಾಗಿರುವುದರಿಂದ, ಈ ಆಧಾರದಿಂದ ಆತನು ೧೧೦೦ಕ್ಕಿಂತ ಪೂರ್ವದವನು ಎಂದಾಯಿತು. ಎಂದರೆ ಅವನ ಕಾಲ ೧೩೦೦ ರಿಂದ ೧೦೦ ವರ್ಷ ಹಿಂದೆ ಹೋದಂತಾಯಿತು.

ಭೀಮಸೇನನ ಕಾಲವನ್ನು ಇನ್ನೂ ಹಿಂದಕ್ಕೊಯ್ಯಲು ಮತ್ತೊಂದು ಬಲವಾದ ಆಧಾರವಿದೆ. ಉಮಾಸ್ವಾತ್ಯಾಚಾರ್ಯರು '**ತತ್ತ್ವಾರ್ಥಸೂತ್ರ**' ಎಂಬ ಆಗಮಗ್ರಂಥವನ್ನು ರಚಿಸಿರುವ ರಷ್ಟೇ? ಅವರ ಕಾಲ ಕ್ರಿ. ಶ. ದ ೧ನೆಯ ಮತ್ತು ೪ನೆಯ ಶತಮಾನಗಳ ಮಧ್ಯದಲ್ಲಿ ಎಲ್ಲಿಯೋ ಇರಬಹುದೆಂದು ಪ್ರೊ. ಎಚ್. ಆರ್. ಕಪಾಡಿಯಾರವರು ನಿರ್ಣಯಿಸುತ್ತಾರೆ (ತತ್ತ್ವಾರ್ಥಾಧಿಗಮಸೂತ್ರ-ಸಿದ್ಧಸೇನ ಗಣಿಯವರ ವ್ಯಾಖ್ಯಾನ ಸಹಿತ ೧೯೩೦. ಭಾಗ ೨ ಪರಿಚ್ಛೇದ ೬-೧೦ ಪು, ೪೨). ಸತೀಶಚಂದ್ರ ವಿದ್ಯಾಭೂಷಣ ಅವರು ಕ್ರಿ. ಶ. ೧ ರಿಂದ ೪ನೆಯ ಶತಮಾನದ ಮಧ್ಯದಲ್ಲಿ ಇದ್ದರೆಂದು ನಿರ್ಣಯಿಸುತ್ತಾರೆ (*History of Medieval School of Indian Logic, P. 8.*). ಅದು ಹೇಗೆಯೇ ಇದ್ದರೂ ಉಮಾಸ್ವಾತ್ಯಾಚಾರ್ಯರು ೪ನೆಯ ಶತಮಾನಕ್ಕೆ ಹಿಂದೆ ಇದ್ದವರೆಂಬ ಮಾತು ನಿರ್ವಿವಾದವಾಗಿದೆ. ಇನ್ನು ಸಿದ್ಧಸೇನ ಗಣಿಯವರು ಆಚಾರ್ಯರ ತತ್ತ್ವಾರ್ಥಸೂತ್ರ – ಭಾಷ್ಯಕ್ಕೆ ವಿಸ್ತಾರವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಸಿದ್ಧಸೇನ ಗಣಿಯವರು ಕ್ರಿ. ಶ. ೭ನೆಯ ಶತಮಾನಕ್ಕೆ ಈಚೆಯವರಲ್ಲವೆಂದು ಪ್ರೊ. ಕಪಾಡಿಯಾರವರು ತಮ್ಮ – ಮೇಲಿನ – ಪುಸ್ತಕದ ಮುನ್ನುಡಿಯಲ್ಲಿ ಹೇಳಿದ್ದಾರೆ. ಸತೀಶಚಂದ್ರ ವಿದ್ಯಾಭೂಷಣರಾದರೋ ತಮ್ಮ – ಮೇಲಿನ – ಪುಸ್ತಕದ ೧೫೨ನೆಯ ಪುಟದಲ್ಲಿ, ಸಿದ್ಧಸೇನ ಗಣಿಯವರು ಸು. ೬೦೦ ರಲ್ಲಿ ಇದ್ದವರೆಂದು ನಿರ್ಣಯಿಸಿದ್ದಾರೆ. ಈ ಸಿದ್ಧಸೇನ ಗಣಿಯವರ ವ್ಯಾಖ್ಯಾನದಲ್ಲಿ, ವೈಯಾಕರಣ **ಭೀಮಸೇನ**ನನ್ನು ಆಧರಿಸಿರುವುದರಿಂದ, ಆತನ ಕಾಲವನ್ನು ಕ್ರಿ. ಶ. ೬೦೦ಕ್ಕೆ ತುಸು ಹಿಂದೆ ಒಯ್ಯಲು ಆಧಾರದೊರೆತುದಾಗಿದೆ. ಇದೇ ಪೂರ್ವದ ಮಟ್ಟು ಎಂದು ಗ್ರಹಿಸಬಹುದು.

ಉಮಾಸ್ವಾತ್ಯಾಚಾರ್ಯರ ಭಾಷ್ಯವು ಹೀಗಿದೆ:

"ಚಿತೀ ಸಂಜ್ಞಾನವಿಶುದ್ಧಯೋಃ ಧಾತುಃ। ತಸ್ಯ ಚಿತ್ತಮಿತಿ ಭವತಿ ನಿಷ್ಠಾತ್ತಮೌ. ಣಾದಿಕೆ ಚ।"

ಇದರ ಮೇಲೆ ಸಿದ್ಧಸೇನಗಣಿಯವರ ವ್ಯಾಖ್ಯಾನವು:

"ಚಿತೀ ಸಂಜ್ಞಾನವಿಶುದ್ಧಯೋರಿತ್ಯಾದಿ। **ಭೀಮಸೇನಾತ್ಪರತೋ ವೈಯಾಕರಣೈರರ್ಥದ್ವಯೇ** ಪಠಿತೋ ಧಾತುಃ ಸಂಜ್ಞಾನೇ ವಿಶುದ್ಧೌಚ। ಇಹ ವಿಶುದ್ಧ್ಯರ್ಥಸ್ಯ ಸಹ ಸಂಜ್ಞಾನೇನ ಗ್ರಹಣಮ್। ಅಥವಾನೇಕಾರ್ಥಾ ಧಾತವಃ ಇತಿ ಸಂಜ್ಞಾನೇ ಪಠಿತೋ ವಿಶುದ್ಧಾವಪಿ ವರ್ತತೇ। **ಭಾಷ್ಯಕೃತಾ** ಚೋಪಯುಜ್ಯಮಾನಮನರ್ಥಮಭಿಸಂಧಾಯ ವಿಶುದ್ಧಿರಪಿ ಪಠಿತಾ ತಸ್ಯ ಚಿತ್ತಮಿತಿ ರೂಪಂ ಭವತಿ ನಿಷ್ಠಾತ್ತಮೌಣಾದಿಕೆ ಚ ಚೇತತೀತಿ ಚಿತ್ತಂ ವಿಶುದ್ಧಯತೀತ್ಯರ್ಥಃ।"

ಇಲ್ಲಿ **ಭೀಮಸೇನನನ್ನು** ಆಧರಿಸಿರುವುದು ಧಾತುಪಾಠದ **ಭೀಮಸೇನನೆಂಬುದು** ಸ್ಪಷ್ಟವಾಗಿದೆ. ಸಿದ್ಧಸೇನಗಣಿಯವರ ವ್ಯಾಖ್ಯಾನದಲ್ಲಿ, ಭೀಮಸೇನನ ಧಾತುಪಾಠದಿಂದ ತೆಗೆದುಕೊಂಡ ಬೇರೆ ಆಧಾರಗಳಿರಬಹುದು. ಸಂಶೋಧಕರು ಅವುಗಳನ್ನು ಶೋಧಿಸುವುದು ಅವಶ್ಯಕ. ಈತನ ವಿಷಯವಾಗಿ ಮತ್ತೆ ಯಾವ ಸಂಗತಿಗಳೂ ತಿಳಿಯುವುದಿಲ್ಲ.

ಮೇಲಿನ ವಿವೇಚನೆಯಿಂದ ಕೆಳಗಿನ ನಿರ್ಣಯಗಳನ್ನು ಕಂಡುಕೊಳ್ಳಬಹುದು.

೧. ವೈಯಾಕರಣ **ಭೀಮ** ಅಥವಾ **ಭೀಮಸೇನನು** ಧಾತುಪಾಠವನ್ನು ರಚಿಸಿದ್ದಾನೆ. ಅವನು ಕ್ರಿ. ಶ. ೬೦೦ ಕ್ಕೆ ತುಸು ಹಿಂದೆ ಇದ್ದವನು. ಕ್ಷೀರಸ್ವಾಮಿಯು ತನ್ನ ಧಾತುಕೋಶವನ್ನು ರಚಿಸುವಲ್ಲಿ ಈತನನ್ನು ಅನುಸರಿಸಿದ್ದಾನೆ.

೨. ಈತನು ಯಾವ ಮತದವನೆಂಬುದು ತಿಳಿದುಬಂದಿಲ್ಲ. ಒಂದು ವೇಳೆ ಜೈನನಲ್ಲವೆಂದು ಭಾವಿಸುವುದಾದರೆ, ೬ನೆಯ ಶತಮಾನದಲ್ಲಿ ತತ್ತ್ವಾರ್ಥ ಸೂತ್ರದಂತಹ ಜೈನಾಗಮ ಗ್ರಂಥದ ವ್ಯಾಖ್ಯಾನದಲ್ಲಿ, ಮತದ್ವೇಷವೇನೂ ಇಲ್ಲದೆ ಈತನ ಧಾತುಪಾಠದ ಆಧಾರವನ್ನು ಸ್ವೀಕರಿಸಿರುವುದು ಧರ್ಮಸಹಿಷ್ಣುತೆಗೊಂದು ಒಳ್ಳೆಯ ಉದಾಹರಣೆ. ಇದೆಲ್ಲ ಊಹೆ ಮಾತ್ರ.

೩. ಅದನ್ನು ಸರ್ವಸಮ್ಮತವೆಂದು ಕ್ಷೀರಸ್ವಾಮಿಯು ಒಪ್ಪಿಕೊಳ್ಳುವುದು ಆತನ ಗುಣಗ್ರಾಹಕತೆ.

೪. ಇದರಿಂದ ಕ್ಷೀರಸ್ವಾಮಿಯು ಸಂಸ್ಕೃತ ಪಂಡಿತನೆಂದೂ, ಆತನು ಸಿದ್ಧಸೇನನ ವ್ಯಾಖ್ಯಾನವನ್ನು ಓದಿದವನೆಂದೂ ಊಹಿಸಿದರೆ ತಪ್ಪಾಗದು.

ಎಲ್ಲಕ್ಕಿಂತ ಆಗ್ಗ! ಎಲ್ಲಕ್ಕಿಂತ ಉತ್ತಮ!
ನಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!

೫ ಆಣೆಗೆ ೧೦ ಬ್ಲೇಡು!

ಮುಂಜಾಗ್ರತೆ

ಡಿ. ಎಚ್. ಎಸ್. ಹಾಟೇಲ್,
ಎಂ. ಎ., ಬಿ. ಕಾಮ್.

(ಒಂದು ಬದುಕಿನಾಟ)

ಪಾತ್ರಗಳು (ಪ್ರವೇಶದ ಅನುಕ್ರಮದಲ್ಲಿ)

ಮೂರ್ತಿ:— ವಯಸ್ಸು ೩೫. ಒಂದು ಕುಟುಂಬಡೇರೆಯ ಆಧಾರಸ್ತಂಭ.
ಮುತ್ತಕ್ಕ:— ,, ೫೦. ,, ,, ನೆಳಲು.
ಮಾಲತಿ:— ,, ೨೮. ಮನೆಯವರನ್ನು ಅಕ್ಕರತೆಯಿಂದ ಬಿಗಿದ ಹಗ್ಗ; ಮೂರ್ತಿಯ ಅಕ್ಕ!
ಮಹಾರುದ್ರ:— ,, ೪೬. ಆಳು; ಆ ಡೇರೆಯೆ ಅವನಿರುವ ಸ್ಥಲ.
ಮಲ್ಲಾರಿ:— ,, ೩೨. ಮನೆತನದ ಚೊಚ್ಚಿಲ ಗಂಡುಸು ಮಗ!

[—ಇಂತು ಒಂದು ಡೇರೆಯಲ್ಲಿ ಒಂದು ಸಂಸಾರದ ಸರ್ಕಸು ನಡೆದಿದೆ. ಆದರೆ ಈಗ ಆದರಲ್ಲಿ ಹಣಿಯುಕ್ಕಿದ ಕೂಡಲೆ ಕಾಣುವುದು—ಕತ್ತಲೆ! ತುಸು-ನೇಳೆ ಹೀಗೆ ಕುತೂಹಲದಿಂದ ನೋಡಿದ ಕೂಡಲೆ, ಯಾರೋ ಒಳಗೆ ಬಂದ ಸಪ್ಪುಳು ಕೇಳಬರುವುದು. ಬರುತ್ತಲೆ ಕಾಲಿನಿಂದ ಏನನೋ ಎಡಹಿದ ಕಾರಣ ಆ 'ಯಾರೊ' 'ಅಯ್ಯೊ' ಎಂದು ಕಿರಿಚಿದುದೂ ಕೇಳಬರುವುದು. ಕೂಡಲೆ ಒಂದು ಕಡ್ಡಿಯನ್ನು ಕೊರೆದು, ಅಲ್ಲಿದೆ ಎದುರಿಗಿರುವ ಮೂಲೆಯಲ್ಲಿಯ ಒಂದು ಗೋಡೆಸೊಡರ (Wall lamp)ನ್ನು ಆ 'ಯಾರೊ' ಹಚ್ಚುವರು. ಆಗ ಆ ಡೇರೆಯಲ್ಲಿ ಎಲ್ಲೆಲ್ಲಿಯೂ ಮಿಣಮಿಣ ಬೆಳಕು ಬೀಳುವುದು. ಆದರೆ ಪರಿಣಾಮವಾಗಿ ಅಲ್ಲಿ ಎದುರಿಗಿನ ಮೂಲೆಯಲ್ಲಿ ಹಾಕಿದ ಒಂದು ಕಬ್ಬಣದ ಮಂಚವೂ, ಅದರ ತಲೆಯ ಕಡೆಗೆ ಹೊಂದಿಸಿ ಇಟ್ಟ ಒಂದು ಟಪಾಯಿಯೂ ಕಾಣುವುವು. ಆ ಮಂಚದ ಕಾಲುದೆಸೆಯಲ್ಲಿ ಒಳಗೆ ಹೋಗಲು ಒಂದು ಬಾಗಿಲಿದೆ. ಆದರೆ ಅದಕ್ಕೆ ಒಂದು ಪರದೆಯನ್ನು ಹಾಕಿದ ಕಾರಣ ಒಳಗಿನಿಂದ ಏನೂ ಕಾಣುವುದಿಲ್ಲ ಎಂಬುದೊಂದು ನೋಟಕರ ಸುವ್ಯವ! ಆದರೆ ಇದೇನು....?]

ಮುತ್ತಕ್ಕ:—(ಒಳಗಿನಿಂದ) ಯಾರವರು....? (ಎನ್ನುತ್ತ ಮುಂದೆ ಕಾಣುವ ಬಾಗಿಲಿನ ಪರದೆಯನ್ನು ಒಂದು ಕೈಯಿಂದ ಸರಿಸಿ, ಹೊರಗೆ ನೋಡುವರು. ಆದರೆ ಜನರಿಗೆ ತಾವು ಕಾಣುವೆವು ಎಂಬ ಎಚ್ಚರಿಕೆ ಅವರಿಗಿಲ್ಲ. ಅವರ ವೇಷ-ಭೂಷಣಗಳನ್ನು ವರ್ಣಿಸುವುದಕ್ಕಿಂತ, ಅವರೊಬ್ಬ ಹಳೆಯ ತರಗತಿಯ ಹಿರಿಯರು ಎಂದು ಹೇಳಿದರೆ ಸಾಕು. ಆದರೆ ಅವರು ಬಂದು, ಆ ಮೊದಲೇ ಬಂದು ತಲೆಯನ್ನು ಕೈಗಳಲ್ಲಿ ಹಿಡಿದುಕೊಂಡು ಮಂಚದ ಮೇಲೆ ಕುಳಿತ ವ್ಯಕ್ತಿಯನ್ನು ನೋಡಿ ಶಣ್ಣಗಾಗುವರು.)

ಮೂರ್ತಿ:— (ತುಸು ನೇಳೆಯಾದ ಮೇಲೆ ಪೆಲ್ಲನೆ ತಲೆಯನ್ನೆತ್ತಿ) ನಾನು..ದೀಪ ಹಚ್ಚಹತ್ತಿದ್ದೆ..!

ಮುತ್ತಕ್ಕ:— ಹೀಂಗ್ಯಾಕೊ ಮೂರ್ತಿ.. ಒಂಚೂರು ಒದರಬಾರದೇನೂ?..

ಮೂರ್ತಿ:—ಹೂಂ; ನೀಪೆಲ್ಲಾರೂ ಹೊರಗ ಕತ್ತಲಿ ಮಾಡಿ, ಬಾಗಿಲು ತೆರೆದೂ ಒಳಗೆ ಕೂಡಿರಿ; ಬಂದೆವರೆ ಕೂಗಿಕೋತಕ ಬರತಾರ!

ಮುತ್ತಕ್ಕ:— (ನೊಂದುಕೊಂಡು) ಇಲ್ಲೋ.. ಮೂರೂ ಸಂಜೇ ವ್ಯಾಳ್ಯಾ.. ಅದಕ್ಕ ಬಾಗಿಲಾ ಹಾಕಿದ್ದಿಲ್ಲಾ.. ಅದೂ ಅಲ್ಲದೆ, ಮಲ್ಲಾರಿ ಈಗ ಬರತೇನೀ ಅಂತ ಹೇಳಿ ಹೋಗಿದ್ದ.. ಅದಕ್ಕ ಇಷ್ಟೊತ್ತಸಕಾ ಇಲ್ಲೇ ಕೂತವರು.. ಇದೇ ಈಗ ಒಳಗೆ ಹೋಗಿದ್ದಿವಿ.

ಮೂರ್ತಿ:— (ನೋರೆಗೆ ಗಂಟಕ್ಕ) ಮೂರು ಸಂಜೆಗೆ ಬಾಗಿಲು ಹಾಕಬಾರದೂ ಅಂಬೋದಿಷ್ಟೇ ಗೊತ್ತು ನಿಮಗ..ಅದರಂತೆ ಮೂರೂಸಂಜೆಗೆ ದೀಪಹಚ್ಚಬೇಕೂ ಅಂಬೂದು ಮಾತ್ರ ಗೊತ್ತಿಲ್ಲ!

ಮುತ್ತಕ್ಕ:— (ಕನಲಿ) ಹೀಂಗ್ಯಾಕ ಸಿಟ್ಟಿಗೇಳತೀದ್ಯೋ ಮೂರ್ತಿ..? ಹೊರಗಿನ್ನೂ ಢಾಳಾಗಿ ಬೆಳಕು ಅದಽ ಕಾಣ್ಸೂದಿಲ್ಲೇನು?

ಮೂರ್ತಿ:— ಹೌದು ಹೊರಗ ಬೆಳಕದ..ಅದರ ನಮ್ಮ ಮನ್ಯಾಗಷ್ಟಽ ಎಲ್ಲಾ ಕಡೆಗೂ ಕತ್ತಲಿ ಮುಸುಕೇದ!

ಮುತ್ತಕ್ಕ:— (ತಾಳ್ಮೆಯಿಂದ) ಇರಲಿ ಬಿಡು; ನೀ ಬಂದು ಹಚ್ಚೆದಿಯಲ್ಲ ದೀಪಾ! ಮತ್ತಾ ಯಕ ಸುಮ್ಮನೇ ಒದರಾಡತೀದಿ?

ಮೂರ್ತಿ:— ಮತ್ತ ನನಗಽ ಒದರಾಡತೀದಿ ಅಂತೀರಿ.. (ಎಂದು ಕೈಗಳನ್ನು ಕೊಡಹಿ ಎದ್ದು, ತಲೆಯ ಮೇಲೆ ಕಂಗೊಳಿಸುವ ಬಿಳಿಯ ಟೊಪ್ಪಿಗೆಯನ್ನು ಮಂಚದ ಮೇಲೆ ಎಸೆಯುವನು; ಮತ್ತೆ ತನ್ನ ನಿಲುವಂಗಿಯನ್ನು ಸರಿಮಾಡಿಕೊಂಡು, ಮೊದಲಿನಂತೆ ಕುಳಿತುಕೊಂಡು) ಆ ಕನ್ಯಾದವರಿಗೆ ಬರಿಸಿದೇನು ಪತ್ರಾ— ಮಲ್ಲಾರೀ ಕಡಿಂದ?

ಮುತ್ತಕ್ಕ:— (ನೋರೆಯನ್ನು ಓರೆಮಾಡಿ) ಏನು ಮಾಡಿದನೋ ಏನೋ ಕಽಪಾ ಮಲ್ಲಾರಿ! ನೀನು ಹೋಗೂ ಮುಂದೇ ಹೇಳಿ ಹೋಗಿದ್ದೆಲ್ಲಾ;..ಹಾಕಿದ್ದರೂ ಹಾಕಿದ್ದಾನಽ!

ಮೂರ್ತಿ:— ಎಲ್ಲಿಗೆ ಹೋಗ್ಯಾನ ಈಗ ಮಲ್ಲಾರಿ?

ಮುತ್ತಕ್ಕ:— (ಮೊದಲಿನಂತೆಯೆ) ಎಲ್ಲಿಗೆ ಹೋದನೋ ಏನೋ ! (ಎನ್ನುವಷ್ಟರಲ್ಲಿ ಅವರು ಬಂದ ಬಾಗಿಲಿನಿಂದಲೇ, ಗಡಿಬಿಡಿಯುತ್ತ ಮಾಲತಿಯು ಬರುವಳು.)

ಮಾಲತಿ:— (ಮೂರ್ತಿಯನ್ನು ನೋಡದೆ) ಏನಾಯಿತೋ ಅಣ್ಣಾ— ಅದರದು ! (ಎಂದು ಮೂರ್ತಿಯನ್ನು ಮಲ್ಲಾರಿಯೆಂದೇ ತಿಳಿದು ಕೇಳಿದಳು. ಆದರೆ ಆತ ಮೂರ್ತಿ ಎಂಬುದು ಗೊತ್ತಾಗಿ ಒಮ್ಮೆಲೆ) ಆಯ್ಯಽ ನೀನೋ ! ನಾನು ಅಣ್ಣ..ಎಂದು ತಿಳಿದಿದ್ದೆ !

ಮೂರ್ತಿ:— (ದಂಗುಬಡಿದವನಾಗಿ) ಎಲ್ಲಿಗೆ ಹೋಗ್ಯಾನಕಿ ಅಕ್ಕಾ—ಮಲ್ಲಾರಿ?

ಮುತ್ತಕ್ಕ:— (ನಡುವೆ ಬಾಯಿಹಾಕಿ) ಎಲ್ಲಿಗೆ ಹೋದನೋ ಏನೊ ! (ಎಂದು ಮಾಲತಿಗೆ ಕಣ್ಣುಸನ್ನೆ ಮಾಡಿ) ನಿನಗೂ ಏನೂ ಹೇಳಲಿಲ್ಲ ಕಾಣಸ್ತ್ತದ—ಮಲ್ಲಾರಿ ಹೋಗೂ ಮುಂದ ?

ಮಾಲತಿ:— (ಮುಗುಳುನಗೆಯಿಂದ) ಆಯ್ಯಽ, ನನಗೇನು ಹೇಳತಾನ ! ಈಗೀಗ ಅವಗೂ ತಮ್ಮನ ಗಾಳಿ ಬಡಿದಕದ ಕಾಣಿಸತಕದ !

ಮೂರ್ತಿ:— .. ಹೂಂ ! (ಎಂದು ಉಸುರಿಳಿಯುವನು.)

ಮುತ್ತಕ್ಕ:— (ಇಳಿದನಿಯಲ್ಲಿ) ಮೂರ್ತಿ .. ನಿನ್ನೆ ನೋಡಿದ ಹುಡುಗಿನ್ನ ಯಾಕ ಒಲ್ಲೆ ಅಂತೀದ್ಯೊ ?....ನಮಗಂತೂ ಮನಸ್ಸಿಗೆ ಬಂತು....ನಿನಗ ಇನ್ನೂ ಎಷ್ಟು ಚೆಂದ ಕನ್ಯಾ ಬೇಕೂ ತಿಳೀದ್ಹಾಂಗಾಗೇದ ನನಗ !

ಮೂರ್ತಿ— ಇದಕ್ಕೂ ಚೆಲುವಿ ಹುಡುಗಿ ಇರಬೇಕೂ ಅಂತ ನಾ ಎಲ್ಲೆ ಹೇಳೀನಿ .. ಆ ಹುಡಿಗೀದೇನು ತಪ್ಪು .. ಪಾಪ !

ಮುತ್ತಕ್ಕ:— (ನೊಂದು ಕೊಂಡು) ಹಾಂಗಾದರ ಯಾಕ 'ಬ್ಯಾಡ' ಅಂತ ಪತ್ರಾ ಬರೀಲಿಕ್ಕೆ ಹೇಳಿದಿ ?

ಮೂರ್ತಿ:— (ಗಟ್ಟಿಯಾಗಿ) ನನಗ ಈಗ ಮದಿವಿ ಬ್ಯಾಡಾಗೇದ..ಅಂತ ಬರೀಲಿಕ್ಕೆ ಹೇಳಿದೆ !

ಮಾಲತಿ:— ನೋಡಿಟ್ಟಿದ್ದಾನೇಳೇ ಅವ್ವಾ..ಯಾರನ್ನಾದರೂ ದೇಶಸೇವಿಕೆಯನ್ನ ! ನಿನಗೊಂದು ಸೊಸೆ ಸಿಕ್ಕರಾಯಿತಿಲ್ಲೊ ಅವ್ವಾ ! ಸುಮ್ಮನಿರು; ನಿನಗೆ ' ಇಂಥಾಕೆಯೆ ಬೇಕು, ಈಗಲೇ ಬೇಕು ' ಎಂಬ ಹಟವಾದರೂ ಯಾಕೆ ?

ಮೂರ್ತಿ:— (ಆಕೆಯ ಮಾತಿನ ಕಡೆಗೆ ಲಕ್ಷವಿಲ್ಲದಂತೆ) ಈಗಿದ್ದ ತೊಳಲಾಟ ಸಾಕಾಗಿಲ್ಲ ..ಅದಕ್ಕೆ ಆ ಗುದ್ದಿಯೊಂದನ್ನು ಕಟ್ಟಿಕೋ ಅಂತಾರ !

ಮುತ್ತಕ್ಕ:— ನಿನಗೇನು ತ್ರಾಸ ಆಗಬೇಕಾಗೇದ ಅದರಿಂದ?

ಮೂರ್ತಿ:— (ಕಳವಳದ ದನಿಯಲ್ಲಿ) ಮತ್ತ ಯಾರಿಗೆ ಹೇಳು ಅದರ ಚಿಂತಿ ? ನನ್ನದು ಮೊದಲೇ ದಿನಕ್ಕೊಂದೂರು ಅಲೆದಾಡುವ ಕೆಲಸ. ಇದರಾಗ ಮದಿವೀ ಮಾಡಿಕೊಳ್ಳುದೂ ಅಂದರ ಒಂದು ಕಾಲ್ತೊಡಕು ಅಲ್ಲೇನು ಹೇಳು !

ಮಾಲತಿ:— ಹೌದಽ ಅವ್ವಾ, ನಿನಗೇನೂ ಗೊತ್ತೇ ಇಲ್ಲ ! ನೋಡು .. ಕಸ್ತೂರಬಾ ಅವರಿಂದ ಗಾಂಧೀಜಿಯವರ ಕೆಲಸಕ್ಕೆ ಎಷ್ಟು ಆಡ್ಡಿಯಾಗತ್ತ್ತದ ಗೊತ್ತ್ತದಽ ಏನು ?

ಮೂರ್ತಿ:— (ಕೈಗಳನ್ನು ಬದಿಗೆ ಚೆಲ್ಲಿ) ಅವರಿಗೆ ನನಗೆ ಎಲ್ಲಿಯ ಮಾತು ಬಿಡು ! ಅದರೂ ನಿನಗಽ ಗೊತ್ತಿಲ್ಲ .. ಗಾಂಧೀಜಿಯವರು ಸ್ವತಃ ಹೇಳಿದ್ದು : ' ನಾನು ಮದಿವಿಯಾಗಿರದಿದ್ದರೆ ಇದಕ್ಕೂ ಎಷ್ಟು ಹೆಚ್ಚು ದೇಶಸೇವೆಯನ್ನು ಮಾಡುತ್ತಿದ್ದೆನೊ ' .. ಅಂತ,

ಮಾಲತಿ:— (ಒಮ್ಮೆಲೆ) ಅದನ್ನು ಈಗ ನೀನು ತೋರಿಸಬೇಕೂ ಅಂತ ಮಾಡೀದೀ ಏನು ಮತ್ತೆ ? ನೋಡು, ಜೋಕೆ !

ಮೂರ್ತಿ :— ಹುಂ ! ನನಗೇನೂ ಅಂಜಿಕೆಯಿಲ್ಲ ಬಿಡು ! ಹಿಂದುಗಡೆ ಹಳಹಳಿಸುವುದು, ಮೊದಲು ಮದುವೀಮಾಡಿಕೊಂಡಽ ಹೌದಲ್ಲೊ ? ಅದಕ್ಕೆಂತಲೇ ಈಗ 'ಮದುವೀ ಒಲ್ಲೆ' ಎಂದು ನಾನು ಹೇಳಿದ್ದು ! ಮುಂಜಾಗ್ರತೆಯಿಂದ !

ಮಾಲತಿ :— (ಕಡಿಗೇಡಿನಗೆಯಿಂದ) ಈಗ ಒಲ್ಲೆ .. ಆಂದರೆ .. (ಎನ್ನುವಷ್ಟರಲ್ಲಿ ಈ ಎಡಗಡೆಯ ಬಾಗಿಲಿನಿಂದ ಪಡಿಯ



ದೋತರವನ್ನುಟ್ಟುಕೊಂಡ, ಬಣ್ಣದ ಪಾವುಡವನ್ನು ಪುತ್ತಿಕೊಂಡ ಮಹಾರುದ್ರನು ತಡವರಿಸುತ್ತ ಬರುವನು.)

ಮಹಾರುದ್ರ:— (ಏನು ಹೇಳಬೇಕೆಂಬುದು ತಿಳಿಯದೆ) ಹೌದರೀ, ಅವರ ಮನ್ಯಾಗ ಇದ್ದಾರರಿ!

ಮುತ್ತಕ್ಕ:— (ನಡುವೆ ಕಡೆದು) ಏನೋ, ಮಾರುದ್ಯಾ! ಬಾಳಂಭಟ್ಟರು ಇದ್ದರು ಮನ್ಯಾಗ? ಹುಂ, ನಾಳೆ ಬರತಾರಂತ ಹೌದಲ್ಲೋ ಪೂಜೆಗೆ-ಊಟಕ್ಕೆ!

ಮಹಾರುದ್ರ:— (ದಿಗಿಲುಗೊಂಡು) ಈಗ ಬರತಾರಂತ್ರಿ! ಅಂದರ ಕರೀಲಾಕ ಅಂತ ಹೋದ್ನಿರಿ..ಊಂ..ಹುಂ..ಹೇಳಲಾಕ ಅಂತ ಹೋದ್ನಿರಿ..ಆಟರಾಗs ನಮ್ಮ ಮಲ್ಲ್ಯಾನ ಮದಿವೀದsಟು ಈಗs ಕೇಳಿಬಿಟ್ಟರಾತು..ಹ್ಯಾಂಗಾದರೂ ಮನೀ ಮಟ ಬಂದೀನಿ.. ಅಂತ ಕೇಳಿದ್ನಿರಿ.. ಬಾಳಂಭಟ್ಟರೂ ಮತ್ತ ಎವ್ವಾ ಚಲೋ ಬಂಟರು ನೋಡಿರಿ! 'ಇದೇ ವೈಶಾಕದಾಗs ಆಗಾಕs ಬೇಕೂ' ಅಂತ ಒಡನುಡಿದೇ ಬಿಟ್ಟರ್ರಿ. 'ಬಟ್ಟರs ಏನು ಹೇಳತೀರೀ, ಕೈಯಾಗರs ನಾಕಾಣ್ಮಾನು ಇಲ್ಲಾ' ಅಂತ ಹೇಳತೀನಿ.. ಆದರೂ 'ಆದು ಆಗಾತಕs ಬೇಕು..ನೋಡೇರೇ ನೋಡು ಭಟ್ಟರ ಮಾತು' ಅಂತ ನಕ್ಕೊಂತs ಎದ್ದರಲ್ಲರೀ!.. ಇನ್ನೆನು, ಮೂರ್ತೆಪ್ಪನೋರ ಲಗ್ಗಣ ಕೂಟ ಆದರೊಂದು ಆಗಬೇಕೂ ಅಂತ ನಾನು ಅಂದು .. ಕ್ಕೊಂ..ಡ್ನಿ..ರಿ! ಹಃ!

ಮೂರ್ತಿ:— (ಕೊಚ್ಚಗೆದ್ದು) ಏ ಮಾರುದ್ಯಾ.. ಮಾರುದ್ದಾ ಮಾತನಾಡಬೇಡ, ತಡೀ ಒಂದಿಷ್ಟು! ಹೇಳು ಸುಮ್ಮನೆ, ಮಲ್ಲಾರಿ ಯಾವಾಗ ಬರತಾನೆ ಬಾಳಂಭಟ್ಟರ ಮನಿಂದ? .. ಯಾಕೊ? (ಎಂದು ಗದ್ದರಿಸುವನು)

ಮಾಲತಿ:— ಹೇಳಪಾ ಮಾರುದ್ಯಾ! ನೋಡು ಬಾಳಂಭಟ್ಟರ ಮನೀಗೆ ಹೋಗಿ ಬಂದದ್ದಕ್ಕೂ, ಭವಿಷ್ಯ ಹೇಳಿ ಸಾರ್ಥಕ ಅರಿ ಮಾಡಿಕೊ!

ಮುತ್ತಕ್ಕ:— (ಮಹಾರುದ್ರನು ಕೆಚ್ಚನಾಗಿ ಮುತ್ತಕ್ಕನವರ ಕಡೆಗೆ ನೋಡಿದಕಾರಣ) ಅಂವಗೇನು ಗೊತ್ತೋ..ಮಲ್ಲಾರಿ ಎಲ್ಲೆ ಹೋಗ್ಯಾನs ಅಂಬೋದು? .. ನಿನ್ನದೊಂದು ಮಾತೇ!

ಮಹಾರುದ್ರ:— (ಧೈರ್ಯಗೊಂಡು) ಹುಂ, ಆದs ಅಂತೇನ್ರಿ ಸಾನೂ! ನಾ ಹೋಗೇನಿ ಬಾಳಂಭಟ್ಟರ ಮನೀಗೆ.... ಅವರ್ನ ಕರೀಲಾಕ ಅಂತ! ..ಅಣ್ಣಾ ಅವರು ಎಲ್ಲೆ ಹೋಗ್ಯಾರಂಬೋದು ನನಗೇನು ಗೊಂತರೀ!....

ಮಾಲತಿ:— ಇರಲಿ, ಮಾರುದ್ಯಾ, ನಿನ್ನ ಮಗ ಮಲ್ಲಪ್ಪಗ ಎಲ್ಲಾ್ಯದರೂ ಹುಡಿಗೀನ್ನ ಈಗs ನೋಡಿ ಹುಡಿಕಿ ಇಟ್ಟೀದಿಯಾ..

ಮಹಾರುದ್ರ:— (ಉತ್ಸಾಹದಿಂದ) ಈಗs ಯಾಕ ಹುಡಿಕಿ ಇಡಾಕ ಬೇಕರೀ .. 'ಹಾಂ' ಹಾಂ, ಅನ್ನೋದರಾಗs ನಿಗತಾಪ ನಮ್ಮ ಮಂದ್ಯಾಗ! ಹಾಂಗ ಕೇಳಿದರ, ಎವ್ವಾ, ನನ್ನ ತಂಗಿ, ತನ್ನ ಮಗಳನ್ನs ತಗೋ ಅಂತ ಗಂಟುಬಿದ್ದು ಆಗಾಳೇ ಎಡ್ಡೊರಸಾತರೀ! .. ಆದರ ನಾನಕ್ಕ ಸುಮಾಕs ಬಿಟ್ಟೀನಿ.

ಮಾಲತಿ:— ಯಾಕ? ಮಲ್ಲಪ್ಪಗ ಆ ಹುಡಿಗಿನ್ನ ಒಲ್ಲೇ ಅಂತ ಅಂದ್ನೇನು?

ಮಹಾರುದ್ರ:—ಅದೇನು ಒಲ್ಲೆ ಅಂತೇನ್ರೀ! ಹಾಂಗ ಕೇಳಿದರ ಒಲ್ಲೆ ಅನ್ನಾಕ ತಿಳೀಬೇಕಲ್ಲ ಅದಕ್ಕ! ಮದಿವೀ ಅಂದರೇನು ಗೊಂತಿಲ್ಲಾ, ಹ್ಯಾಣತಿ ಅಂದರೇನು ಗೊಂತಿಲ್ಲಾ!

ಮೂರ್ತಿ:— (ಸಿಟ್ಟುಗೆದ್ದು) ಆಹಾ! ನಿನಗ ಬಹಾಳ ಗೊತ್ತದs, ನೋಡೊ! ಏ, ಇಷ್ಟು ವರುಷಗಳಾದವು ನಿನ್ನ ಮದಿವ್ಯಾಗಿ; ತಿರಿಗಿ ಮುದುಕ ಆದಿ!.. ಈಗ ಹೇಳು, ನಿನಗ ಗೊತ್ಯಾಗೇದೇನು; ಮದಿವೀ ಅಂದ್ರೇನು? ಹೆಂಡತಿ ಅಂತ ಯಾರಿಗೆ ಅನ್ನಬೇಕು? ತಿಳಿದsದೇನು ಹೇಳು? ಇದೆಲ್ಲಾದರ ಅರ್ಥ!

ಮುತ್ತಕ್ಕ:— (ಕಣಕರದಿಂದ) ಬಿಡೋ ಮೂರ್ತೀ! ಸುಮ್ಮನ ಅಂವನ್ನಾ್ಯಕ ಬೆದರಸತೀ? ಏನೋ ಉಬ್ಬಿನಾಗ ಸುದ್ದೀ ಹೇಳಲಿಕ್ಕೆ ಹತ್ಯಾ್ಯನ ಅಂವಾ.. ಪಾಪ!

ಮಹಾರುದ್ರ:—ಏಪ್ಪಾ, ನನಗೇನ್ಮಾಡೋದೈತ್ರಿ ಅವನ್ನೆಲ್ಲಾ ತಿಳಕೊಂಡು! ನಮಗ ತಿಳಿಯೂಕಿಂತಾ ಮುಂಜೇ ನಮ್ಮ ಹಿರೇರು ನಮ್ಮ ಲಗ್ಗಣಾ ಮಾಡಿದ್ದರ್ರಿ—ಅದs ಬೇಶಾತ್ರಿ! ಹಾಂಗs ನಮ್ಮ ಹುಡುಗೂರಿಗೂ ತಿಳಿಯಾಕಿಂತಾ ಮುಂಜೇ ನಾವೂ ಅವರ ಲಗ್ಗಣಾ ಮಾಡಿದ್ಯಾತು; ಈಟ ಮಾತ್ರ ಈಗ ತಿಳಿದೈತಿ ನೋಡಿರಿ!

ಮೂರ್ತಿ:— ಬಹಾಳ ಬುದ್ಧಿವಂತ! ತನಗೆ ತಿಳಿಯೂಕಿಂತ ಮುಂಚೆ ತನ್ನ ಮದಿವಿ ಆತೂ ಅಂತ, ಮಗನ ಮದಿವೀನೂ ಅವನಿಗೆ ತಿಳಿಯೂಕಿಂತಾ ಮುಂಜೇ ಮಾಡಿಬಿಡತಾನಂತ! ಅಲ್ಲೊ ಆಗ್ಗೇ, ಈಗ್ಗೆ ದಿವಸಾ ಕಾಲಾ ಎಷ್ಟು ಬದಲಾಗ್ಯಾವ ಅಂಬೋದು ಏನಾದರೂ ಗೊತ್ತದs ಏನು?

ಮಾಲತಿ:— (ಆಷ್ಟೇ ಆವೇಶದಿಂದ) ಹೌದು ನೋಡಪಾ, ಮಾರುದ್ಯಾ! ಇಷ್ಟು ಸುಧಾರಿಸಿದ ದಿವಸದಾಗ, ಹುಡುಗರು ಸಣ್ಣವ್ರಿದ್ದಾಗ ಮದಿವೀ ಮಾಡೋದಂದ್ರ ಅನ್ಯಾಯ! ಮತ್ತ ಅಲ್ಲಪಾ ಮಾರುದ್ಯಾ, ಒಂದು ವೇಳೆ ಮಲ್ಲಪ್ಪ ಈಗ ಮದಿವೀ ಒಲ್ಲೇ ಅಂದರ ಏನು ಮಾಡತೀ? (ಎಂದು ಓರೆನೋಟದಿಂದ ಮೂರ್ತಿಯನ್ನು ನೋಡುವಳು.)

ಮಹಾರುದ್ರ:— ಮಾಡೋದೇನ್ರಿ ಮತ್ತ ಮದಿವೀ ಹೊರತು! ಅವರು ಹಾಂಗs ಒಲ್ಲೇ ಅನ್ನೋದs, ಕಡೀಕ ಮದಿವೀನೂ ಆಗೋದs! (ಎಂದೊಡನೆ ಮಾಲತಿ, ಮುತ್ತಕ್ಕನವರು ನಗಹತ್ತುವರು. ಮೂರ್ತಿಗೆ ಮಾತ್ರ ಸಿಟ್ಟು ತಡೆಯದಂತಾಗಿ, ಅವನು ಒಮ್ಮೆಲೆ ಮಂಚದ ಮೇಲಿಂದ ಸಿಡಿದೇಳುವನು. ಎದ್ದು ನಿಲ್ಲುವಷ್ಟರಲ್ಲಿಯೆ, ಎಡಬಾಗಿಲಿನಿಂದ ಅವನಣ್ಣ ಮಲ್ಲಾರಿ ಬರುವನು. ಉದ್ದನೆಯ ಕೋಟು, ಕರಿಯ ಟೊಪ್ಪಿಗೆಗಳ ಅವನ ವೇಷ, ಅವನ ವರುಷಗಳನ್ನು ತಿಳಿದುಕೊಳ್ಳಲು ಎಷ್ಟೂ ಸಹಾಯಕವಾಗುವುದಿಲ್ಲ.)

ಮುಲ್ಲಾರಿ:—(ಟೊಪ್ಪಿಗೆಯನ್ನು ತೆಗೆದು, ಎಡಗೈಯಿಂದ ಹಣೆಯ ಮೇಲಿನ ಬೆವರನ್ನು ಒರಸಿಕೊಳ್ಳುತ್ತ) ಉಶ್ . . . . ! ಏನದೂ? ಇಷ್ಟೊಂದು ನಗತೀರಿ? (ಎಂದೊಡನೆ ಮಂಚದ ತುದಿಗೆ ಮತ್ತೆ ಮೆಲ್ಲನೆ ಕುಳಿತುಕೊಳ್ಳುವ ಮೂರ್ತಿಯನ್ನು ಕಂಡು ಮೆತ್ತಗಾಗುವನು.)

ಮೂರ್ತಿ:—(ಅವನ ಕಡೆಗೆ ನೋಡದೆ) ಹಾಕಿದೇನು ಅಣ್ಣಾ ಪತ್ರಾ—ಅವರಿಗೆ?

ಮುಲ್ಲಾರಿ:—(ಟೊಪ್ಪಿಗೆಯನ್ನು ನಿಂತಲ್ಲಿಂದಲೇ ಮಂಚದ ಮೇಲೆ ಎಸೆಯುವನು. ಅಷ್ಟರಲ್ಲಿ ಮುತ್ತಕ್ಕ ಎದುರಿಗಿನ ಬಾಗಿಲ ಬಳಿಯಲ್ಲಿ ಹೋಗಿ ನಿಲ್ಲುವರು.) ಹೂಂ! ಹಾಕತೇನಿ ಈಗ! ಮತ್ತ. . .ಯಾಕವಾ ಅವ್ವಾ, ಹಾಕಲಿ ಹೌದಲ್ಲೋ ಪತ್ರಾ?.. ಆಂ? ಎಲ್ಲಾ ಸರಿ-ಹೊಂದೇದ; ಮತ್ತ ಅವರಿಗೆ ಬರ್ರೀ ಅಂತ ಪತ್ರಾ ಹಾಕಿ ಬಿಡತೀನಿ!

ಮುತ್ತಕ್ಕ:—(ಅದಕ್ಕೆ ಮೂರ್ತಿ ಏನಾದರೂ ನುಡಿಯುವನೋ ಹೇಗೆ ಎಂದು ಕಲಹೊತ್ತು ತಡೆದು) ನನ್ನೇನು ಕೇಳತೀಯೋ! ಅಂವನ್ನs ಕೇಳು! ಮತ್ತ ಅಂವ ಏನು ಒಲ್ಲೇ ಅಂತ ಕಲ್ಲs ಹಿಡಿದಾನಲ್ಲಾ!

ಮುಲ್ಲಾರಿ:— (ಅದು ಕೇಳಿಸದಂತೆ) ಮತ್ತ ಬಾಳಂಭಟ್ಟರನ್ನ ಕೇಳಿದೆ. ಮನೆತನ ಚೆಲೋದೂ ಅಂತ ಹೇಳಿದರು. ಮತ್ತ ಅದೂ ಅಲ್ಲದೇ ೨೬ ಗುಣ ಕೂಡಿ ಬಂದುವು. ಏನೂ ಅಡ್ಡೀ ಇಲ್ಲಾಂತ ಬಾಳಂಭಟ್ಟರೂ ಹೇಳಿದರು.

ಮಾಲತಿ:—(ಮೂರ್ತಿಯು ಮಾತಾಡದಿರುವುದನ್ನು ಕಂಡು) ಮತ್ತ ಈಗ ಅಂವಗೆ ಮದಿವೀನೇ ಬ್ಯಾಡಂತ; ಸುಮ್ಮನೆ ಜುಲುಮೆ ಯನ್ನೇಕೆ ಮಾಡೋದು?

ಮುಲ್ಲಾರಿ:—(ಕೊನೆಯ ಅಸ್ತ್ರವೆಂದು) ಇನ್ನೇನು ಪ್ರಯೋಜನ? ನಾನು ಬರ್ರೀ ಅಂತ ಅವರಿಗೆ ಪತ್ರಾ ಹಾಕಿ ಸಹಿತ ಬಂದೆ. (ಎಂದು ನಗುವನು. ಕೋಟನ್ನು ತೆಗೆಯಲು ತೊಡಗುವನು. ಇತ್ತ ಮಾಲತಿ-ಮಹಾರುದ್ರರೂ ನಗಹತ್ತುವರು. ಮೂರ್ತಿಯು ರೊಚ್ಚಿಗೆದ್ದು)

ಮೂರ್ತಿ:—ಮಾಡರಿ ಹಾಂಗಾರs ಮದಿವೀ ಯಾರಿಗೆ ಬೇಕಾದವರಿಗೆ! ನಾನಂತೂ ಈ ಮನೀ ಬಿಟ್ಟೇ ಹೋಟಿ. (ಎಂದು ಹೊರಡುವನು. ಅಷ್ಟರಲ್ಲಿ ಬಾಗಿಲಿನಿಂದ ಜಿಗಿದು ಬಂದು ಮುತ್ತಕ್ಕ-ನವರು ಅವನ ಕೈ ಹಿಡಿದು ತಡೆಯುವರು.)

ಮುತ್ತಕ್ಕ:— ಹಿಂಗ್ಯಾಕೋ ಮೂರ್ತೀ? ಒಂಬತ್ತು ತಿಂಗಳು ಹೊತ್ತು ಹೆತ್ತಾಕೀ ಉಪಕಾರಾ ಹೆನ್ನಾಗಿ ತೀರಿಸ್ತಿದೀ ಅಲ್ಲs?

ಮಹಾರುದ್ರ:— ಏಪ್ಪಾ, ಹೊಟ್ಟೀಲೆ ಹುಟ್ಟಿದ ಮಗನ ಸಂಗಾಟ ಜ್ವಾಪಾನ ಮಾಡೀನಿ ನಿಮ್ಮನ್ನ; ನೀವ ಹೀಂಗ ಮಾಡೀರಿ ಅಂತ ಅನಿಸಿದ್ದಿಲ್ಲರೀ ನನಗ!

ಮೂರ್ತಿ:— (ತಾಯಿಯ ಕೈಯನ್ನು ಸರಿಸಿ, ಮುಂದೆ ಒಂದು ಹೆಜ್ಜೆಯನ್ನಿಟ್ಟು) ಹಡೆದ ತಾಯಿ; ಸಾಕುತಂದೆ; ಒಡಹುಟ್ಟಿದ ಬಾಂಧವರು! ಎಲ್ಲರೂ ಕೂಡಿಯೆ ಈ ಹಂಚಿಕೆಯನ್ನು ಮಾಡಿರುವಿರಲ್ಲವೆ? ಎಷ್ಟು ನಿಃಸ್ವಾರ್ಥಬುದ್ಧಿಯಿಂದ ನಾನು ಜನರ ಸೇವೆಯನ್ನು ಮಾಡಬೇಕೆಂದು ಮಾಡಿದರೂ, ಅದಕ್ಕಿಂತ ಹೆಚ್ಚು ಸ್ವಾರ್ಥವನ್ನು ಸಾಧಿಸಿಕೊಳ್ಳುವುದಲ್ಲವೆ ಈ ಜಗತ್ತು? ಮನೆಯ ಒಳಗೊಂದು, ಹೊರಗೊಂದು ಹೀಗೆ ಎರಡು ಸಂಸಾರಗಳನ್ನು ಹಿಡಿಯಲು ಸಮರ್ಥನಾಗದೆ ಮನೆಯನ್ನೇ ಬಿಟ್ಟು ಹೋದ ತಂದೆ; ಇಹಲೋಕದ ಭಜ್ಜಾಸ, ಪರಲೋಕದ ಸುಳ್ಳುಸೋಗು ಇವುಗಳ ನಡುವೆ ನೇತಾಡುವ ತಾಯಿ; ಎರಡು ವ್ಯಕ್ತಿಗಳಿಗೆ ಸಹ ಬೇಕಾಗದ ಅಣ್ಣ; ಹೆತ್ತಮನೆ–ಕೊಟ್ಟಮನೆ ಎರಡೂ ಮನೆಗಳಿಗೆ ಬೇಸರಾದ ಅಕ್ಕ; ಇಷ್ಟಿದ್ದರೂ ಈ ಮನೆಯನ್ನು ನಡೆಯಿಸುತ್ತ, ನಾನು ಏಕನಿಷ್ಠೆಯಿಂದ ದೇಶಸೇವೆಯನ್ನು ಮಾಡಬೇಕೆಂದು ಕಲ್ಪಿಸಿಕೊಂಡಿದ್ದರೆ, ನನಗೊಂದು ಮದುವೆಯನ್ನು ಮಾಡಿ, ಕಡೆತನಕ ಈ ಸಂಸಾರದಲ್ಲಿ ನನ್ನನ್ನು ಸಿಕ್ಕಿಸಬೇಕೆಂದು ನಿಮ್ಮೆಲ್ಲರ ಮುಂಜಾಗ್ರತೆಯ ಹವಣಿಕೆ, ಅಲ್ಲವೆ? ನನ್ನ ಮದುವೆಯಾಗುವುದರಿಂದ ನಿಮಗೆ ಆನಂದವಾಗುವುದಾದರೆ, ಆನಂದದ ಸುದ್ದಿಯನ್ನು ಹೇಳುವೆ ಕೇಳಿರಿ; ನನಗೆ ಮದುವೆಯಾಗಿದೆ! ನನಗೆ ಸಂಸಾರಸುಖವು ದೊರೆಯಬೇಕಾದರೆ,ನಾನು ಈ ಮನೆಯನ್ನು ಬಿಡಬೇಕಾಗುವುದು. ಅದಕ್ಕಾಗಿ ಇಕೋ ಹೊಟೆ! (ಎಂದು ಹೊರಹೊರಡುವನು.)

ಮುತ್ತಕ್ಕ:— ಏ ಮೂರ್ತೀ....ಎಲ್ಲಿಗೊ....! ಆಕೀನ್ನ ಕರಕೊಂಡು ಬಂದು ಇಲ್ಲೇ ಇರಲಿಕ್ಕೇನು ನಾವು ಬ್ಯಾಡಾ ಅನ್ನೊದಿಲ್ಲೋ!..ಮೂರ್ತೀ, ಯಾರೊ..?(ಎಂದು ಅವನ ಹಿಂದಿನಿಂದ ಹೊರಡುವರು.)

ಮಾಲತಿ:— ಯಾರೇನು? ಯಾವಾಕಿಯಾದರೂ ದೇಶಸೇವಕಿ ಇದ್ದಿದ್ದಾಳು....(ಎನ್ನುವಷ್ಟರಲ್ಲಿ ಮೂರ್ತಿಯು ಮತ್ತೆ ತಿರುಗಿ ನಿಂತು—)

ಮೂರ್ತಿ:— ದೇಶಸೇವಕಿಯಲ್ಲ.. ಆಕ್ಕಾ....ದೇಶಸೇವೆ! ಆಕೆಯನ್ನು ಕೂಡಲು ಹೋಗುವೆ.. ಆನಂದದಿಂದ! (ಎಂದು ಹೋಗುವ; ಮಿಕ್ಕವರು ಅವಾಕ್ಕಾಗಿ ನಿಲ್ಲುವರು. ತೆರೆ ಬೀಳುವುದು.)

ಹಿಂಸಾಪ್ರಿಯ ಹಿಟ್ಲರನ ಹಾದಿಗಳು

ಶ್ರೀ. ನಾಳವೇಕರ ಗುರುರಾಯರು ಬಿ. ಎ., ಎಲ್‌ಎಲ್. ಬಿ. ಹುಬ್ಬಳ್ಳಿ

★

ಧೂರ್ತನಾದ ಹಿಟ್ಲರನು ಯುದ್ಧವನ್ನು ಉದ್ದೇಶವಾಗಿಟ್ಟುಕೊಂಡೇ ಇರಬಹುದು; ಜರ್ಮನಿಯಲ್ಲಿ ರಾಜಮಾರ್ಗಗಳನ್ನು ಕಲ್ಪನೆಗೆ ಬಾರದಷ್ಟು ಹೆಚ್ಚಿಸಿದನು .... ಮೋಟಾರುಗಳ ಉದ್ಯಮಕ್ಕೆ ಸರಕಾರದಿಂದ ಪ್ರೋತ್ಸಾಹ ಕೊಡಿಸಿದನು. ಇಂದಿನ ಆತನ ರಾಕ್ಷಸಕೃತ್ಯಗಳಿಗೆ ಒಳದೇಶದಲ್ಲಿಯ ರಾಜಮಾರ್ಗಗಳಿಂದಲೂ, ಮೋಟಾರು-ಬಂಡಿಗಳಿಂದಲೂ ತುಂಬ ಸಹಾಯ ಸಿಕ್ಕುತ್ತಲಿದೆಯೆಂಬುದನ್ನು ಬೇರೆ ಹೇಳಬೇಕಿಲ್ಲ!

★

ಹಿಟ್ಲರನನ್ನು ಹರಸುವವರಿದ್ದಾರೆ, ಹೊಗಳುವವರಿದ್ದಾರೆ, ಹಳಿಯುವವರಿದ್ದಾರೆ. ಅವನನ್ನು ಹರಸದೆ, ಹಳಿಯದೆ, ಹೊಗಳದೆ, ಅವನ ಆಳಿಕೆಯಲ್ಲಿ ಜರ್ಮನಿಯಲ್ಲಿ ನಡೆದುದೊಂದು ಸಂಗತಿಯನ್ನು!— ಮುಖ್ಯವಾಗಿ ಆರ್ಥಿಕಸ್ಥಿತಿಯನ್ನು ಸಂಕ್ಷೇಪವಾಗಿ ಸ್ಥೂಲವಾನದಿಂದ ಈ ಲೇಖನದಲ್ಲಿ ನಿರೀಕ್ಷಿಸುವ:

೧೯೧೯ ರ ವ್ಹರ್ಸಾಯಿಯ ಒಪ್ಪಂದದಿಂದ, ಸಖರಾಷ್ಟ್ರಗಳು ಜರ್ಮನಿಯನ್ನು ಕೆಲವು ಶತಮಾನಗಳ ಪರೆಗೆ ತಲೆಯನ್ನು ಮೇಲಕ್ಕೆ ಎತ್ತದಂತೆ ಮಾಡಿದ್ದೇವೆಂದು ಸಂತೋಷಪಟ್ಟು, ಸುಖದಿಂದ ಇರಲು ತಮಗೆ ಜರ್ಮನರಿಂದ ಸಾಕಷ್ಟು ಸಾಧನ ಸಾಮಗ್ರಿ ಖಂಡಣೆಯ ರೂಪದಿಂದ ದೊರೆಯುವುದೆಂದು ತಿಳಿದುಕೊಂಡಿದ್ದರು. ವಿಶೇಷತಃ ಫ್ರೆಂಚರಿಗೆ ೧೮೭೧ರಲ್ಲಿ ತಮಗಾದ ಅಪಮಾನದ ಕಲಂಕವನ್ನು ತೊಳೆದುಬಿಟ್ಟೆವೆಂದು ಸಮಾಧಾನವೆನಿಸಿತು. ಕಳೆದ ಇಪ್ಪತ್ತು ವರ್ಷಗಳಲ್ಲಿ ಇದೆಲ್ಲ ಕನಸಿನಲ್ಲಿ ಅರಸನಾದ ಕುರುಡು ಭಿಕ್ಷುಕನ ಸ್ವಪ್ನವಾಗಿ ಪರಿಣಮಿಸಿತು. ಬಲ್ಲವರಿಗೆ ಇಪ್ಪತ್ತು ವರ್ಷಗಳ ಹಿಂದೆ ಸಹ ಇದು ಕೇವಲ ಸುಖಸ್ವಪ್ನವಿದೆಯೆಂದೂ, ಮತದಾರರ ಕಣ್ಣಲ್ಲಿ ಮಣ್ಣು ಜೆಲ್ಲುವ ಸಾಧನವೆಂದೂ ತಿಳಿದಿತ್ತು. ಮಿಸ್ಟರ್ ಆರ್ನೆಸ್ಟ್ ಜೆ. ಪಿ. ಬೆನ್ (Mr. Ernest J. P. Benn) ಅವರು ೧೯೩೮ ರಲ್ಲಿ ಹೀಗೆ ಬರೆದಿದ್ದಾರೆ: "The politicians of the time, sinking to the lowest levels ever known in the history of politics, allowed the electors to imagine that, thanks to Reperations, there was wealth available for all." ಜರ್ಮನಿಯು ೨೫೦,೦೦೦,೦೦೦,೦೦೦ ಪೌಂಡು ಖಂಡಣೆಯನ್ನು ಕೊಡಲಿಕ್ಕೆ ಸಮರ್ಥವಿದೆಯೆಂದು ಸರ್ ಸಿಡ್ನಿಲೋ (Sir Sidney Low) ಅವರ ಮತ. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಕಿನಿಸರು (Keynes) ಖಂಡಣೆಯ ಈ ರಕಮನ್ನು ೨೧೫,೦೦೦,೦೦೦ ಪೌಂಡಿಗೆ ಇಳಿಸಿದರು. ಹಿಂದುಗಡೆ ಮಿಸ್ಟರ್ ಕಿನಿಸರ ಈ ರಕಮು ಸಹ 'wild and impossible overstatement' ಎಂದು ಗೊತ್ತಾಯಿತು. ಮಿಸ್ಟರ್ ಬೆನ್ ಅವರು ಈಗ ಈ ಖಂಡಣೆ ಹೇಗಿದೆಯೆಂಬುದನ್ನು ಈ ರೀತಿ ವರ್ಣಿಸಿದ್ದಾರೆ:— "Nobody knows to this day what is the total amount of Reperations, and new agreements are still made with Germany patching up an undefined position, in the hope that a year later better wisdom may be found." ಈ ವರ್ಷ ಇಲ್ಲದಿದ್ದರೆ ಮುಂದಿನ ವರ್ಷವಾದರೂ ಬುದ್ಧಿ ಬಂದೀತೆಂಬ ಆಶೆ ಕಮರಿ ಹೋಗಿ, ಹಿಟ್ಲರನ ಆಳಿಕೆಯಲ್ಲಿ ಜರ್ಮನಿಯು ಸರ್ವ ಶಸ್ತ್ರಾಸ್ತ್ರಗಳಿಂದ ಸಜ್ಜುವಾಗಿ ಹಿಂದಣ ಮಹಾಯುದ್ಧದಲ್ಲಿ ಕಳೆಕೊಂಡದ್ದನ್ನೆಲ್ಲ ಗಳಿಸಿಕೊಂಡಿತು. ವಿಜಯಶ್ರೀಯಾದ ಫ್ರಾನ್ಸಸ ಪದರಿಸಲ್ಲಿ ಸೋಲನ್ನು ಕಟ್ಟಿ, ತನ್ನ ಹಿಂಸಾಪ್ರೀತಿಯ ಮೂಲಕ ಈಗಂತೂ ಯುರೋಪ ಖಂಡದಲ್ಲಿ ಏಕಮೇವಾದ್ವಿತೀಯ ರಾಷ್ಟ್ರವಾಗಿ ಮೆರೆಯಹತ್ತಿದೆ. ಮುಂದೇನಿದೆಯೊ ಇದೆ ಅದರ ಭವಿಷ್ಯ!

ರೇಲ್ವೆಗಳು ಹಿಂದಿನ ಕಾಲದುವು.

೧೮೭೧ ರಲ್ಲಿ ಜರ್ಮನರು ಫ್ರೆಂಚರನ್ನು ಸೋಲಿಸಿದಾಗ, ರೇಲ್ವೆಗಳ ಯುಗ ಪ್ರಾರಂಭವಾಗಿತ್ತು. ಉಗಿಯ ಪ್ರಭಾವ ಕಡಿಮೆಯಾಗಿದ್ದಿಲ್ಲ. ಆದ್ದರಿಂದ ಜರ್ಮನರು ರೇಲ್ವೆಗಳನ್ನು ಹೆಚ್ಚಿಸುವುದರಲ್ಲಿ ತೊಡಗಿದರು. ಆದರೆ ಎಣ್ಣೆಯ ಶೋಧವಾದಂತೆ ರೇಲ್ವೆಗಳು ಬಾಡಹತ್ತಿದುವು. ಕಟ್ಟುವುದಕ್ಕೆ ಕೆಡಿಸುವುದಕ್ಕೆ ಎಣ್ಣೆಯು ಮೇಲಾದ ಸಾಧಕವೆಂದು ಶಾಸ್ತ್ರಜ್ಞರು ಕಂಡು ಹಿಡಿದರು. ಮೋಟರುಗಳ, ಆಕಾಶಯಾನಗಳ ಉಪಯೋಗ ಯುದ್ಧದಲ್ಲಿ ಎಷ್ಟಾಗುತ್ತದೆಂಬುದನ್ನು ಹೇಳುವ ಕಾರಣವಿಲ್ಲ. ಇವುಗಳಿಗೆ

ಎಣ್ಣೆಯೇ ಉರುವಲು. ರೇಲ್ವೆರಸ್ತೆಗಳು ಬೇರೆ ಯಾವ ವಾಹನಕ್ಕೂ ಉಪಯೋಗವಿಲ್ಲದುವು. ಡಾಂಬರ್ ರಸ್ತೆಗಳಾಗಲಿ, ಸೀಮೆಂಟ್ ರಸ್ತೆಗಳಾಗಲಿ, ಬೇರೆ ತರದಿಂದ ತಯಾರಾದ ರಸ್ತೆಗಳಾಗಲಿ ಅನೇಕ ತರದ ವಾಹನಗಳ ಉಪಯೋಗಕ್ಕೆ ಬರುತ್ತವೆ. ಹೊಸ ಹಗುರಾದ, ಸಾವಿರಗಟ್ಟಲೆ ಸೈನಿಕರಿಗೆ ಸಾವನ್ನು ತಂದೊಡ್ಡುವ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಯಂತ್ರಗಳನ್ನು ಹೊತ್ತುಕೊಂಡು ಒತ್ತರದಿಂದ ಓಡುವ, ಎಣ್ಣೆಯಿಂದ ನಡೆಯುವ ವಾಹನಗಳೇ ಅತ್ಯಲ್ಪಕಾಲದಲ್ಲಿ ಫ್ರಾನ್ಸ್‌ದಂಥ ಬಲಾಢ್ಯ ರಾಷ್ಟ್ರವನ್ನು ಗೆದೆಯಲು ಹೆಚ್ಚಿನ ಸಹಾಯವಮಾಡಿದುವು. ೧೯೩೦ ರಿಂದ ೧೯೩೩ ರ ವರೆಗೆ ಜರ್ಮನಿಯಲ್ಲಿ ಬಹಳ ಕೆಟ್ಟಸ್ಥಿತಿ ಇತ್ತು. ಈ ಕಾಲಾವಧಿಯಲ್ಲಿ ಬೇರೆ ದೇಶಗಳಲ್ಲಿ ಎಂದರೆ ಗ್ರೇಟ್‌ಬ್ರಿಟನ್, ಫ್ರಾನ್ಸ್, ಅಮೇರಿಕಗಳಲ್ಲಿ ಮೋಟರುಗಳ ಕಾರಖಾನೆಗಳು ಚೆನ್ನಾಗಿ ನಡೆದಿದ್ದುವು. ಮೋಟರುಗಳಲ್ಲಿ ಸುಧಾರಣೆಯಾಗಿತ್ತು. ಮೋಟರಿನ ಜನ್ಮ ಜರ್ಮನಿಯಲ್ಲಿ ಆಗಿದೆಯೆಂದು ಜರ್ಮನರು ಹೆಮ್ಮೆಯಿಂದ ಹೇಳುತ್ತಾರೆ. ಜನ್ಮ ಸ್ಥಳದಲ್ಲಿಯೇ ಆದರ ಪ್ರಗತಿ ಕುಂಠಿತವಾದದ್ದು ಸ್ವಂತದ ವಿಷಯದ ದುರಭಿಮಾನದಿಂದ ಪೂರಿತರಾದ ಜರ್ಮನರಿಗೆ ಸಹಿಸಲು ಅಸಾಧ್ಯವಾಯಿತು. ಅವರು ರೇಲ್ವೆಗಳನ್ನು ಬಿಳಿಯಿಸುವ ಗೋಜಿಗೆ ಹೋಗದೆ, ಮೋಟರುಗಳ ಸಿದ್ಧತೆ ಮತ್ತು ಮೋಟರುಗಳಿಗೆ ಬೇಕಾದ ಹಾದಿಯನ್ನು ತಯಾರಿಸುವ ಕೆಲಸ ಇವ್ರಗಳಲ್ಲಿ ತೊಡಗಿದರು.

ಥೂರ್ತ ಹಿಟ್ಲರನ ಹುರುಪು.

೧೯೩೩ ರಲ್ಲಿ ಅಂತರ ರಾಷ್ಟ್ರೀಯ ಮೋಟರುಗಳ ಪ್ರದರ್ಶನವು ಬರ್ಲಿನ್‌ನಲ್ಲಿ ಆಯಿತು. ಆ ಕಾಲಕ್ಕೆ (ಎಂದರೆ ಹಿಟ್ಲರನು ರಾಜ್ಯಸೂತ್ರಗಳನ್ನುತಕ್ಕೊಂಡು ಹನ್ನೊಂದು ದಿವಸಗಳಾಗಿದ್ದುವು) ಹಿಟ್ಲರನು ಮೆಂಬರುಗಳ ಮೇಲಿನ ಕರದಲ್ಲಿ ತಿದ್ದುಪಡೆ ಮಾಡುವೆನೆಂದು ಜಾಹಿರ್ ಪಡಿಸಿದನು.

೧೯೩೩ ನೆಯ ಮೇ ತಿಂಗಳ ೧ನೆಯ ತಾರೀಖಿನ ಚಿರಸ್ಮರಣೀಯವಾದ ಭಾಷಣದಲ್ಲಿ ಅವನು Motor Road Law ಎಂಬ ಹೊಸ ಕಾನೂನಿನ ಬಗ್ಗೆ ಹೇಳಿದನು. ವಿರೋಧಕರಿದ್ದರೂ ಈ ಕಾನೂನು ೧೯೩೩ ರ ಜೂನ್ ೨೭ ಕ್ಕೆ ಪಾಸಾಯಿತು. ಈ ಕಾನೂನಿನಲ್ಲಿ Reich Motor Road ಮತ್ತು ರೀಚ್ ಮೇಲಿನ ರಸ್ತೆಗಳನ್ನು ಸಿದ್ಧಪಡಿಸುವ ವಿಷಯವಿದೆ. ಇದಕ್ಕೂ ಮೊದಲು ೭೦ Road Construction offices (ಹಾದಿ ತಯಾರಿಸುವ ಕಚೇರಿ) ಗಳು ಇದ್ದುವು. ಅವುಗಳು ಒನ್ನೊಮ್ಮೆ ಕೂಡಿ ಮತ್ತು ಕೆಲವು ಸಲ ಒಂದರ ವಿರುದ್ಧವಾಗಿ ಇನ್ನೊಂದು ಕೆಲಸ ಸಾಗಿಸಿ ಇದ್ದುವು. ಹಿಟ್ಲರನು ಒಬ್ಬನೇ ಒಬ್ಬ ಮುಖ್ಯ ಹೊಣೆಗಾರ ಅಧಿಕಾರಿಯನ್ನು ನೇಮಿಸಿದನು. ಅವನ ಅಧಿಕಾರ "Inspector General of the German Road System". ೧೯೩೩ ರ ಜೂನ್‌ನಿಂದ ಸಪ್ಟಂಬರ್ ವರೆಗೆ ಸಿದ್ಧತೆಯ ಕೆಲಸ ಒತ್ತರದಿಂದ ಸಾಗಿತು. ಜರ್ಮನಿಯಲ್ಲಿಯ ಔದ್ಯೋಗಿಕ, ವ್ಯಾಪಾರದ ರಾಜಕೀಯ, ಸಾಂಸ್ಕೃತಿಕ ಸ್ಥಳಗಳಿಗೆ ಹೋಗುವ ಹಾದಿಗಳನ್ನು ಸಿದ್ಧಪಡಿಸುವುದೆಂದು ಗೊತ್ತುಪಡಿಸುವುದರಲ್ಲಿ ಬಂತು. ಒಟ್ಟಿಗೆ ಏಳುಸಾವಿರ ಕಿಲೋಮಿಟರ್ ಹಾದಿಯಾಗಬೇಕೆಂದು ನಿಶ್ಚಯವಾಯಿತು. ಒಂದು ಕಿಲೋಮಿಟರ್ ಎಂದರೆ ೩೨೮೦ ಫೂಟು. ೧೯೩೩ ರ ಸಪ್ಟಂಬರ್ ೨೩ ಕ್ಕೆ ಹಿಟ್ಲರನು ಫ್ರಾಂಕ್‌ಫರ್ಟ್-ಆನ್-ಮೇನ್ (Frankfort-on-main) ಎಂಬಲ್ಲಿ ಉತ್ಸಾಹದಿಂದ ಕೆಲಸ ಮಾಡುವ ಕೆಲಸಗಾರರ ಕೂಡ ಗುದ್ದಲಿಯಿಂದ ಮೊದಲನೆಯ ಕಡಿತವನ್ನು ಹಾಕಿದನು.

ಕುಳಿತವರಿಗೆ ಕೂಳಿಲ್ಲ.

ಕುಳಿತುಕೊಂಡು ಉಂಡರೆ ಕುಡಿಕೆಹೊನ್ನೂ ಸಾಲದೆಂಬ ಗಾದೆಯು ಇಂಗಿತವನ್ನು ಥೂರ್ತ ಹಿಟ್ಲರನು ಅರಿತುಕೊಂಡಿದ್ದನು. ಅವನ ಕಾಲದ ಜರ್ಮನಿಯಲ್ಲಿ ಕೆಲಸವಿಲ್ಲದವರಿಗೆ, ಹೊಟ್ಟೆಗೆ ಹಾಕುವ (Unemployment doles) ಯೋಜನೆ ಇದ್ದಲ್ಲಿ—ಈ ಮಾತಿನ ಸಮರ್ಥನಾರ್ಥ—ಜರ್ಮನಿಯಲ್ಲಿ ಏನೂ ಕೆಲಸವಿಲ್ಲದಿದ್ದರೆ, ಕೆಲವರಿಗೆ ತಗ್ಗು ತೆಗೆಯುವ—ಇನ್ನು ಕೆಲವರಿಗೆ ಆ ತಗ್ಗನ್ನು ಕಡಿದು ಜೆಲ್ಲಿದ ಮಣ್ಣಿನಿಂದ ತುಂಬುವ ಕೆಲಸ ದೊರೆಯುತ್ತಿತ್ತಂತೆ. ಕೆಲಸ ಮಾಡದೆ ಊಟಮಾಡುವ ಕೆಟ್ಟ ಚಟದ ಜರ್ಮನ್ನನ ನಿರಚಾರದೆಂದು ಹಿಟ್ಲರನ ಹೇಳಿಕೆ. ಇಂಗ್ಲೆಂಡಿನಲ್ಲಿ ಹೇಗಿದೆಯೆಂಬುದನ್ನು ಬರ್ನಾರ್ಡ್‌ಶಾ ಅವರು ಹೀಗೆ ಹೇಳಿದ್ದಾರೆ:— "Now

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

small as the dole may be it must be sufficient to live on; and if two or three in one household put their doles together, they grew less keen on finding employment and develope a taste for living like gentlemen: That is amusing themselves at the expense of others instead of earning anything. We used to moralise over this sort of thing as part of the decline and fall of ancient Rome; but we have been heading straight for it ourselves for a long time past and the war has plunged us into its head over ears." (The Intelligent Woman's Guide to Socialism Vol. I P. 150. Pelican Series).

ಮೋಟಾರುಗಳ ಬಿಳಿವಣಿಗೆ

ಇನ್‌ಸ್ಪೆಕ್ಟರ್ ಜನರಲ್ ಆಫ್ ರೋಡ್ಸ್ ಇವನು, ಹಿಟ್ಲರನ ಕೈಕೆಳಗೆ ಕೆಲಸ ಮಾಡಬೇಕೆಂದು ಅವನಿಗೆ ಅಪ್ಪಣೆಯಾಯಿತು. ಹಿಟ್ಲರನು ಜರ್ಮನಿಯ ಎಲ್ಲ ಭಾಗಗಳಲ್ಲಿ ಪ್ರವಾಸ ಮಾಡಿದ್ದನು. ಅವನಿಗೆ ಬೇರೆ ಬೇರೆ ಭಾಗಗಳಲ್ಲಿಯ ಹಾದಿಗಳ ಪರಿಚಯ ಸಾಕಷ್ಟು ಇದ್ದಿತು. ಪೃಥ್ವಿಯ ಸುತ್ತಲೂ ಕನಿಷ್ಟ ಹತ್ತುಸಾರೆ ಜಲ-ಪರ್ಯಟನ ಮಾಡಿದಷ್ಟು, ಹಿಟ್ಲರನು ಕಳೆದ ೧೦ ವರುಷಗಳಲ್ಲಿ ಮೋಟಾರಿನಿಂದ ಜರ್ಮನಿಯಲ್ಲಿ ಪ್ರವಾಸಮಾಡಿದನು. 'ಮೋಟಾರಿನ ಹಾದಿಗಳನ್ನು ತಯಾರಿಸಿದರೆ ಸಾಕು' ಎಂದು ಅವನು ಎಂದೂ ತಿಳಿಯುಲಿಲ್ಲ. ಮೋಟಾರುಗಳು ಹೆಚ್ಚಾಗದಿದ್ದರೆ ಈ ಹಾದಿಯ ಉಪಯೋಗ ಸಾಕಷ್ಟು ಆಗುವುದಿಲ್ಲವೆಂದು ಅವನು ಅವುಗಳ ಬೆಳೆವಣಿಗೆಯ ವಿಚಾರವನ್ನು ಕೈಕೊಂಡನು. ಪ್ರವಾಸಿಕರ ಹೊಸ ಕಾರುಗಳಿಗೆ (newly manufactured passenger cars) ಮೋಟಾರಿನ ಕರ (Motor vehicle tax) ಇಲ್ಲವೆಂದೂ, ಹಳೆಯ ಮೋಟಾರುಗಳಿಗೆ ಕರ ಕಡಿಮೆ ಎಂದೂ, ಹಾಗೂ ಮುಂದಿನ ಹೊಸ ಭಾಗಗಳಿಗೆ ಟ್ಯಾಕ್ಸ್ ಇಲ್ಲವೆಂದೂ ಜಾಹೀರ್ ಪಡಿಸಿದನು. ಇದರಿಂದ ಮೋಟಾರ್ ಲಾಯಸೆನ್ಸುಗಳ ಸಂಖ್ಯೆ (೧೯೩೨ ರಲ್ಲಿ) ೧೯೪೦೦೦ರಿಂದ ೪೭೫೦೦೦ಕ್ಕೆ ಏರಿತು. ಹೊಸ ಮೋಟಾರುಗಳ (cars) ಸಂಖ್ಯೆ ೫೧೦೦೦ ದಿಂದ (೧೯೩೨ ರಲ್ಲಿ) ೨೯೩೦೦೦ ಕ್ಕೆ ತಲ್ಪಿತು. ಮೋಟಾರು ಉದ್ಯೋಗದಲ್ಲಿ ತೊಡಗಿದವರ ಸಂಖ್ಯೆ ೧೯೩೨ ರಲ್ಲಿ ೩೩೦೦೦ ಇತ್ತು; ಅದು ೧೯೩೭ರಲ್ಲಿ ಒಂದು ಲಕ್ಷಕ್ಕೆ ಏಕ್ಕಿತು. ೧೯೩೭ ರಲ್ಲಿ ೪ ಲಕ್ಷ ಪ್ರವಾಸಿಕರ ಮೋಟಾರು ಕಾರುಗಳು ಓಡಾಡುತ್ತಿದ್ದುವು. ೧೯೩೮ ರಲ್ಲಿ ಅವುಗಳ ಸಂಖ್ಯೆ ಹತ್ತುಲಕ್ಷ ಆಗಿದೆ. ೧೯೩೭ ರಲ್ಲಿ ೧೦೦ ಜನರಿಗೆ ಒಂದು ಕಾರು ಇತ್ತು. ೧೯೩೮ ರಲ್ಲಿ ೫೪ ಜನರಿಗೆ ಒಂದು ಕಾರು ಆಗಿದೆ. ಇದರಂತೆ ಮೋಟಾರ್ ಟ್ರಕ್ಕುಗಳ, ಮೋಟಾರ್ ಸಾಯಿಕಲ್ಲುಗಳ ಸಂಖ್ಯೆ ಕೂಡ ಬೆಳೆದಿದೆ. ಇದೆಲ್ಲ ಹಿಟ್ಲರನ ಯುದ್ಧಪ್ರಿಯವೃತ್ತಿಯ ಮುಂಜಾಗರೂಕತೆಯ ಪರಿಣಾಮ.

ಅನೇಕರಿಗೆ ಉದ್ಯೋಗ

ಹಾದಿಗಳನ್ನು ತಯಾರಿಸುವ ಕೆಲಸದಲ್ಲಿ ೨ ಲಕ್ಷ ೬೦ ಸಾವಿರ ಜನರು ತೊಡಗಿದ್ದಾರೆ. ಇದರಲ್ಲಿ ಅರ್ಧ ಜನರಿಗೆ ಪ್ರತ್ಯಕ್ಷ ರಸ್ತೆ ಕಟ್ಟುವ ಕೆಲಸವಿದೆ. ಉಳಿದವರು ಕಣಿಗಳಿಂದ ಕಲ್ಲುತರುವ, ಸೀಮೆಂಟ್ ತಯಾರಿಸುವ, ಸೇತುವೆ ಕಟ್ಟುವ, ಕಬ್ಬಿಣದ ಸಾಮಾನು ಸಿದ್ಧಪಡಿಸುವ ಕೆಲಸದಲ್ಲಿ ತೊಡಗಿದ್ದಾರೆ. ಇಷ್ಟೆಲ್ಲ ಜನರಿಗೆ ಕೂಲಿ ದೊರೆಯುಹತ್ತಿದ್ದರಿಂದ, ಅವರು ಆಹಾರಪದಾರ್ಥ-ಉರಿವೆ-ಅಂಚಡಿ ಗಳನ್ನು ಕೊಳ್ಳಹತ್ತಿದರು. ಆದರಿಂದ ಈ ಉದ್ಯೋಗಗಳಿಗೆ ಬಲ ಬಂತು. ಜರ್ಮನಿಯಲ್ಲಿ ಕೆಲವು ಕಾಲ ಹಿಮ ಬೀಳುತ್ತದೆ. ಚಳಿ-ಗಾಲದ ಅಂತಹ ಸಮಯದಲ್ಲಿ ಈ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ. ಅಂತಹ ಕಾಲದಲ್ಲಿ ಸಹ ೫೦ ಸಾವಿರ ಜನರಿಗೆ ಕೆಲಸ ದೊರೆಯುತ್ತದೆ. ಮೇಲೆ ಹೇಳಿದ ೨ ಸಾವಿರ ಕಿಲೋಮಿಟಾರ್ ಹೊಸ-ದಾರಿಗಳಲ್ಲದೆ, ಹಳೆಯ ೪೦ ಸಾವಿರ ಕಿಲೋಮಿಟಾರ್ ಹಾದಿಗಳನ್ನು ಸರಿಪಡಿಸುವುದರಲ್ಲಿ ಒಂದುವರೆ ಲಕ್ಷ ಜನರು ದುಡಿಯುತ್ತಾರೆ. ಕೆಲಸವಿಲ್ಲದೆ ಬಳಲುತ್ತಿರುವವರಿಗೆ ಉಪಜೀವನದ ಸಾಧನವನ್ನು ಕಲ್ಪಿಸಿ ಕೊಟ್ಟ ಅನೇಕ ಯೋಜನೆಗಳಲ್ಲಿ, ಮಾರ್ಗಗಳ ಸಿದ್ಧತೆಗೆ ಮೊದಲನೆಯ ಸ್ಥಾನವಿದೆ. ಇಷ್ಟೇ ಅಲ್ಲ, ಈ ಲಕ್ಷ್ಯವಧಿ ಕೆಲಸಗಾರರಲ್ಲಿ ಪ್ರತಿವರ್ಷ ೧೫೦೦೦ ಜನರಿಗೆ ಹಾದಿಯನ್ನು ತಯಾರಿಸುವ ಶಿಕ್ಷಣ ದೊರೆಯುತ್ತದೆ. ಕೆಲಸಗಾರರ ೧೪೦ ಗುಂಪುಗಳಿವೆ. ಕೆಲಸಮಾಡುವ ಸ್ಥಳದಿಂದ ವಾಸಸ್ಥಳವು ದೂರ ಇರುವ ಕೆಲಸಗಾರರಿಗಾಗಿ, ತಾತ್ಪುರ್ತಿಕ ವಾಸಸ್ಥಳಗಳು (Lodging Camps) ಉಂಟು. ಮಲಗಲಿಕ್ಕೆ (Sleeping barracks) ಇವೆ. ಊಟದ ಮನೆ ಇವೆ. ಬಿಸಿನೀರಿನ ಸ್ನಾನದ ವ್ಯವಸ್ಥೆ ಇದೆ. ಒಂದೊಂದು ಕಡೆಗೆ ೩೦೦ ಜನರಿರುತ್ತಾರೆ. ಸಿನೆಮಾ, ಗಾಯನ, ವೃತ್ತಪತ್ರಗಳು, ಪುಸ್ತಕಗಳು ಮೊದಲಾದುವುಗಳು ವಿರಾಮಕಾಲದಲ್ಲಿ ಕೆಲಸಗಾರರನ್ನು ಮನರಂಜಿಸುತ್ತವೆ. ಔಷಧೋಪಚಾರ ಬೇಕಾದವರನ್ನು ಸರಕಾರದ ದವಾಖಾನೆಗೆ ಕಳಿಸುವುದರಲ್ಲಿ ಬರುತ್ತದೆ. ಕೆಲಸಗಾರರನ್ನು ಸುಧಾರಿಸುವುದು ಸರಕಾರದ ಅಥವಾ ಸರಕಾರದಿಂದ ಕಾಂಟ್ರ್ಯಾಕ್ಟ್ ತಕ್ಕೊಂಡವರ ಕರ್ತವ್ಯವಿದೆಯೆಂಬ ಕಲ್ಪನೆಗೆ, ಜರ್ಮನ್ ಸರಕಾರ ಮತ್ತು ಜರ್ಮನ್ ಕಾಂಟ್ರ್ಯಾಕ್ಟರರು ಪರಿಕೀಯರಾಗಿಲ್ಲ. ಕಳಕೊಂಡದ್ದನ್ನು ಗೆಲಿಸಿ, ಮಹಾಯುದ್ಧಕ್ಕಿಂತ ಮುಂಚೆ ಇದ್ದಂತೆ ಜರ್ಮನಿಯನ್ನು ಮೊದಲನೆಯ ತರಗತಿಯ ರಾಷ್ಟ್ರವನ್ನಾಗಿ ಮಾಡುವುದು ತಮ್ಮ ಕರ್ತವ್ಯವೆಂದೂ ಈ ರಾಷ್ಟ್ರಕಾರ್ಯದಲ್ಲಿ ಮೈಗಳ್ಳತನ ಮಾಡುವುದು ಮಹಾಪಾತಕವೆಂದೂ ಜರ್ಮನರು ತಿಳಿಯುತ್ತಾರೆ. ಹೆಂಡಂದಿರಿದ್ದ ಕೆಲಸಗಾರರಿಗೆ -- ವಾರಕ್ಕೊಮ್ಮೆ ಮನೆಗೆ ಹೋಗಲಿಕ್ಕೆ -- ರೈಲ್ವೆ ಪಾಸು ದೊರೆಯುತ್ತದೆ. ತನ್ನ ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ಪೂರಯಿಸಿಕೊಳ್ಳುವುದಕ್ಕೆಂದು ಪಾಪ, ಜರ್ಮನ್ ಜನಸಾಮಾನ್ಯರ ಮೇಲೆ ಹಿಟ್ಲರನು ಯಾವಾಗಲೂ ಇಂತಹ ಉಪಕಾರದ ಹೊರೆ ಹೊರಿಸುತ್ತಿರುತ್ತಾನೆ.

ಅಳದ ವಿಸ್ತಾರ

ಈ ಕೆಲಸದಲ್ಲಿ ಹೊಸ ಯಂತ್ರಸಾಮಗ್ರಿಯನ್ನು ಉಪಯೋಗಿಸುವುದರಲ್ಲಿ ಬಂದಿದೆ. ಕೆಲಸವು ಬಹುದೊಡ್ಡ ಪ್ರಮಾಣದ ಮೇಲೆ ನಡೆದಿದೆಯೆಂದು ಬೇರೆ ಹೇಳುವ ಕಾರಣವಿಲ್ಲ. ೧೯೩೭ರ ಸಪ್ಟಂಬರಿನ ಕೊನೆಗೆ ೧೫೫೬ ಕಿಲೊಮೀಟರ್ ಹಾದಿ ಸಿದ್ಧವಾಗಿತ್ತು. ಈ ಕೆಲಸದಲ್ಲಿ ಸತತ ತೊಡಗಿರುವ ಯಂತ್ರಗಳು:—

50,000 tipping waggons.
3,000 building engines.
1,000 modern building machines.

ಪನಾಮಾ ಕಾಲುವೆಯನ್ನು ಕಟ್ಟಲಿಕ್ಕೆ ಕಡಿಯಬೇಕಾದಷ್ಟು ಮಣ್ಣನ್ನು, ಜರ್ಮನಿಯ ಮಾರ್ಗಗಳನ್ನು ನಿರ್ಮಾಣ ಮಾಡಲಿಕ್ಕೆ ಅಗಿದು ತೆಗೆಯಬೇಕಾಯಿತಂತೆ. ಪೂಲುಕಟ್ಟುವ ಕೆಲಸದಲ್ಲಿ ಕಬ್ಬಿಣದ ಹಾಗೂ ಉಕ್ಕಿನ ಉಪಯೋಗದಷ್ಟು ಕಲ್ಲಿನ ಉಪಯೋಗವಾಗುತ್ತದಂತೆ. ರೋಜೆನ್ಸ್ ಬರ್ಗದ (Rogensburg) ಪೂಲು ಒಂದು ಸಾವಿರ ವರ್ಷ ಜಾಳಿದೆ. ಅದು ಕಲ್ಲಿನಿಂದ ಕಟ್ಟಿದ್ದರೂ ಅದರ ಮೇಲೆ ಬೇಕಾದಷ್ಟು ಭಾರವಾದ ಸರಕುಗಳನ್ನು ತಕ್ಕೊಂಡು ಹೋದರೂ ಪೂಲಿಗೆ ದಕ್ಕೆಯಾಗುವುದಿಲ್ಲ. ಅನುಭವಸಿದ್ಧವಾದ ಈ ಸಂಗತಿಯ ಲಾಭತಕ್ಕೊಂಡು, ಜರ್ಮನರು ಅನೇಕ ಹೊಸಕಲ್ಲಿನ ಪೂಲುಗಳನ್ನು ಕಟ್ಟಿದ್ದಾರೆ. ಮೋಟಾರುಗಳು ಹೋಗುವ ಹಾದಿ ಬೇರೆ, ಬರುವ ಹಾದಿ ಬೇರೆ. ಹೋಗುವ ಹಾದಿ ೭-೫೦ ಮಿಟರ್ ಅಗಲು ಇದೆ; ಬರುವ ಹಾದಿಯೂ ಅಷ್ಟೇ ಅಗಲು ಇದೆ. ಈ ಎರಡೂ ಮಾರ್ಗಗಳ ಮಧ್ಯದಲ್ಲಿ ೫ ಮಿಟರ್ ಅಗಲುಳ್ಳ ಸ್ಥಳದಲ್ಲಿ ಗಿಡಗಳಿವೆ; ಹಚ್ಚನೆಯ ಹುಲ್ಲಿದೆ. ಮತ್ತು ಒಂದೊಂದೂ ೨ ಮಿಟರ್ ಅಗಲುಳ್ಳ ಎರಡು ಕಾಲುಮಾರ್ಗಗಳಿವೆ. ಇದರ ಮೇಲಿಂದ ಹಾದಿಗೆ ಒಟ್ಟು ೨೪ ಮಿಟರ್ ಅಗಲಾದ ಸ್ಥಳವನ್ನು ಉಪಯೋಗಿಸಿದಂತಾಯಿತು. ಹಾದಿ ಕಿರಿಯದಾದ್ದರಿಂದ ಅಪಘಾತವಾಯಿತೆಂದು ಹೇಳುವ ಪ್ರಸಂಗ ಅಲ್ಲಿ ಬಾರುವುದಿಲ್ಲ. ಜರ್ಮನಿಯಲ್ಲಿಯ ೫೦ ಸಾವಿರ ಪಟ್ಟಣ ಹಾಗು ಹಳ್ಳಿಗಳಲ್ಲಿ, ೧೫ ಸಾವಿರಗಳಿಗೆ ಮಾತ್ರ ರೇಲ್ವೆಯ ಪ್ರತ್ಯಕ್ಷಲಾಭ ದೊರೆಯುತ್ತದೆ. ಪರಕೀಯರ ಹಂಗಿನಲ್ಲಿ ಸಿಕ್ಕ ರೇಲ್ವೆಗಳಿಂದ ದೇಶದ ಆರ್ಥಿಕಜೀವನಕ್ಕೆ ಹೇಗೆ ಧಕ್ಕೆ ತಗಲುತ್ತದೆಂಬುದನ್ನು ಚೀನಾ ಹಾಗೂ ಹಿಂದುಸ್ಥಾನದ ರೇಲ್ವೆಗಳ ಇತಿಹಾಸದಿಂದ ತಿಳಿಯಬಹುದು. ವ್ಯವಹಾರಯದ ಒಪ್ಪಂದದಿಂದ ಜರ್ಮನ್ ರೇಲ್ವೆಗಳ ಕೊರಳಲ್ಲಿ ಗುದ್ದೀಕಟ್ಟಿ, ಅವುಗಳನ್ನು ಫೌರ್ವಾತ್ಯ ದೇಶಗಳಲ್ಲಿಯ ರೇಲ್ವೆಗಳ ಪಜ್ಜಿಗೆ ಕೂಡಿಸಬೇಕೆಂದು ಗೊತ್ತಾಗಿತ್ತು. ಆದರೆ ಹಿಟ್ಲರನು ವ್ಯವಹಾರಯದ ಈ ಗುದ್ದಿಯನ್ನು ಬಹುದಿವಸ ಇರಗೊಡದೆ ತೆಗೆದೊಗೆದು, ಜರ್ಮನ್ ರೇಲ್ವೆಗಳನ್ನು ಪರಕೀಯರ ನಿಯಂತ್ರಣದಿಂದ ಮುಕ್ತ ಮಾಡಿದನು. ಮುಂಬಯಿ ಪಟ್ಟಣದಲ್ಲಿ 'ಬ್ಯಾಕ್‌ಬೇದ 'ಗುಂಟ ಆದ ಹೊಸ ಹಾದಿಯನ್ನು ನೋಡಿದರೆ, ಜರ್ಮನಿಯ ಜೊಸೆ ರಸ್ತೆಗಳ ವಿಸಕಾದ ಕಲ್ಪನೆ ಬರಬಹುದು.

ಸ್ವರ್ಗದ ದಾರಿಯಂತಿದ್ದರೂ ನರಕದದಾರಿ !

ಈ ತರದ ಹಾದಿಗಳನ್ನು ಹಿಟ್ಲರನನ್ನು ಹಳಿಯುವವರು ಸಹ ಹೊಗಳದೆ ಇರರು. ಹಾದಿಗಳು ಒಳತಾಗಿರುವುದರಿಂದ, ಮೋಟರು ಗಳ ವೇಗವನ್ನು ಅಲ್ಪ ವೆಚ್ಚದಿಂದ ಅಲ್ಲಿ ಹೆಚ್ಚಿಸಲಾಗುತ್ತಿದೆ. ಮೋಟಾರಿನ ಟಾಯರುಗಳ ಸವಕಳಿ ಕಡಿಮೆಯಾಗುತ್ತಲಿದೆ. ವೇಳೆಯು ಉಳಿತಾಯವಾಗುತ್ತದೆ. ಆದರಿಂದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಕಾಯಿಪಲ್ಲೆ, ಹಣ್ಣು-ಹಂಪಲ, ಹಾಲು-ಹೈನ ಮೊದಲಾದ ಆಹಾರಪದಾರ್ಥಗಳನ್ನು ದೂರದವರೆಗೆ— ಸ್ವಲ್ಪ ವೇಳೆಯಲ್ಲಿ—ಅಲ್ಪ ವೆಚ್ಚದಿಂದ—ತಕ್ಕೊಂಡು ಹೋಗಲು ಅನುಕೂಲವಾಗುತ್ತದೆ. ಇದರ ಲಾಭ ಯುದ್ಧಕಾಲದಲ್ಲಿ ಹೆಚ್ಚಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ೧೯೩೫ರಲ್ಲಿ ಏಳನೆಯ ಇಂಟರ್ ನ್ಯಾಶನಲ್ ರೋಡ್ ಕಾಂಗ್ರೆಸ್ಸು, ಬರ್ಲಿನ್ ಮತ್ತು ಮ್ಯುನಿಕ್‌ನಲ್ಲಿ ಕಲೆತಿತ್ತು. ೧೯೩೭ರಲ್ಲಿ ಎರಡನೆಯ ಇಂಟರ್ ನ್ಯಾಶನಲ್ ಕಾಂಗ್ರೆಸ್ ಫಾರ್ ಬ್ರಿಜಿಸ್ ಮತ್ತು ಓವ್ಹರಗ್ರಾವುಂಡ್ ಸ್ಟ್ರಕ್ಚರ್ಸ್ ಕೂಡಿತ್ತು. ಆಗ ರೋಡ್ ಕಾಂಗ್ರೆಸಿನಲ್ಲಿ 'ಜರ್ಮನ್ ಹಾದಿಗಳು ಮಾದರಿಯವಿವೆ ' ಎಂಬ ಗೊತ್ತುವಳಿಯಾಯಿತು. ಕಾಂಗ್ರೆಸಿಗೆ ಬಂದ ಪತ್ರಿಕಾಪ್ರತಿನಿಧಿಗಳು ಈ ಹಾದಿಗಳು ಉತ್ತಮ ವಾದುವುಗಳಿವೆಯೆಂದು ಹೇಳಿದ್ದಾರೆ. ಈ ಹಾದಿಗಳನ್ನು ನೋಡುವುದಕ್ಕಾಗಿ ಪರದೇಶಗಳಿಂದ ಅನೇಕರು ಬರುತ್ತಾರೆ. ಜರ್ಮನಿಯೊಳಗೆ ಬರುವ ಪರದೇಶಗಳ ಮೋಟರುಗಳ ಸಂಖ್ಯೆ ಹೆಚ್ಚುತ್ತಿದೆ. ಕೆಳಗೆ ಬಿದ್ದ ಜರ್ಮನರು ಇಂತಹ ಅತ್ಯುಪಯುಕ್ತವಾದ ಅಂದವಾದ ಹಾದಿಗಳನ್ನು ಕೊಟ್ಟಿದ್ದನ್ನು ಕಂಡು ಅನೇಕರಿಗೆ ಸೋಜಿಗವಾಗಿದೆ. ೧೯೩೭ರ ಸಪ್ಟಂಬರ್ ತಿಂಗಳಲ್ಲಿ 'ಜರ್ಮನ್ ರೋಡ್ಸ್ ಡೆಲಿಗೇಶನ್ ' ಎಂಬ ಹೆಸರಿನ ಬ್ರಿಟಿಶ್‌ಮಂಡಳವು ಜರ್ಮನಿಯಲ್ಲಿಯ ಹಾದಿಗಳನ್ನು ನೋಡಲಿಕ್ಕೆ ಜರ್ಮನಿಗೆ ಹೋಗಿತ್ತು. ಈ ಡೆಲಿಗೇಶನಿನಲ್ಲಿ ಅನೇಕ ಜನ ಪಾರ್ಲಮೆಂಟಿನ ಸಭಾಸದರು, ಹಾದಿಯನ್ನು ತಯಾರಿಸುವ ಕೆಲಸದಲ್ಲಿ ತಜ್ಞರಾದ ಇಂಜಿನಿಯರು, ಮೋಟರ್ ಉದ್ಯೋಗದಲ್ಲಿ ತೊಡಗಿದವರ ಪ್ರತಿನಿಧಿಗಳು ಮೊದಲಾದವರಿದ್ದರು. ಈ ಡೆಲಿಗೇಶನಿನ ಮುಖ್ಯಸ್ಥರಾದ Lord Wolmer ರು " we recomend that the principle of the Motor-way system be adopted in Great Britain." ಎಂದು ಹೇಳಿದರು. ಬೇರೆ ದೇಶಗಳಲ್ಲಿ ಸಹ ಜರ್ಮನಿಯ ಅನುಕರಣಮಾಡಬೇಕೆಂಬ ವಿಚಾರವಿದೆ. ಆದರೆ ಸ್ವರ್ಗದ ದಾರಿಯೆಂಬ ಭ್ರಮೆಯನ್ನು ಹುಟ್ಟಿಸುವಂತಹ ಹಾದಿಗಳು, ಹಿಟ್ಲರನ ಹಿಂಸಾಪ್ರೀತಿಯ ನರಕನಿರ್ಮಿತಿಗಾಗಿ ಇವೆಯೆಂಬುದನ್ನು ಯಾರು ಅರಿತಿದ್ದರು ?

--- ಹಾವು ---

ಶ್ರೀ. 'ಹೆಚ್ಚೆಸ್ಕೆ,' ಕೃಷ್ಣರಾಜನಗರ

★

ಹಾವಿನ ಹೆದರಿಕೆಯಿಂದಲೆ ಮುಲಗಿದ ಮೇಸ್ಟರ ಕೋಣೆಯಲ್ಲಿ ಹಾವು ಬಂದೇಬಿಟ್ಟಿತು. ಅಜ್ಞಾನ ಮೂಲಕವಾಗಿದ್ದ ಹೆದರಿಕೆ, ಹಗ್ಗದಂತಹ ನಿರ್ಜೀವವಸ್ತುವನ್ನೂ ಹಾವೆಂದು ಕಾಣುವುದುಂಟು; ಮೇಸ್ಟರಿಗೆ ಕಂಡುದಂತೂ ಅತ್ತಿತ್ತ ಒಲೆದಾಡುತ್ತಿರುವ ಸಜೀವವಸ್ತು!

★

ಸಂಜೆ ಆರು ಘಂಟೆಯ ಸಮಯ. ಬೇಸಗೆಯ ಬಿಸಿಲಿನ ಬೇಗೆ ಆಗ ತಾನೇ ಇಳಯುತ್ತಿತ್ತು. ಹಗಲೆಲ್ಲಾ ಜಲಸದಿದ್ದ ಗಾಳಿ ಮೆಲ್ಲನೆಮೆಲ್ಲಗೆ ಸುಳಿದು ತಂಪನ್ನುಂಟುಮಾಡುತ್ತಿತ್ತು. ಸೆಕೆಯ ತಾಪಕ್ಕೆ ಬಳಲಿ ಬೆಂಡಾಗಿದ್ದ ನಾನು, ಹಾಗೆಯೇ ಸುತ್ತಾಡಿಕೊಂಡು ಬರೋಣವೆಂದು ಬಾಗಿಲಿಸ್ತನಕ ಬಂದೆ.

'ಓಹೋ. ಏನಯ್ಯ, ಹೊರಟೆ?' ಎಂದರು, ನಮ್ಮ ಮನೆಯ ಕಡೆಯೇ ಬರುತ್ತಿದ್ದ ಮೇಷ್ಟರು ರಾಜಾರಾಯರು.

ರಾಜಾರಾಯರಿಗೆ ನಮ್ಮೂರಿನಿಂದ ವರ್ಗವಾಗಿ ಅಂದಿಗೆ ಇನ್ನೂ ಮೂರೇ ಮೂರು ದಿನಗಳಾಗಿದ್ದುವು. ಹೆಂಡತಿ-ಮಕ್ಕಳನ್ನು ತವರೂರಿಗೆ ಕಳುಹಿಸಿ, ತಮಗೆ ವರ್ಗವಾಗಿದ್ದ ಊರಾದ ಹೊನ್ನೇಹಳ್ಳಿಗೆ ಮೊನ್ನೆ ತಾನೇ ಸಾಮಾನು ಸಮೇತ ಹೋಗಿದ್ದ ರಾಜಾರಾಯರು, ಇಷ್ಟು ಅಕಸ್ಮಾತ್ ಬಂದುದು ನನಗೆ ಆಶ್ಚರ್ಯವಾಯಿತು.

'ಅಯ್ಯೋ, ಏನು ಹೇಳಲಯ್ಯ!.... ಆದೇ ಒಂದು ದೊಡ್ಡ ಪುರಾಣ. ಯಾರ ಪತ್ತಿರವೂ ಬಾಯಿ ಬಿಡಬಾರದು. ಆದರೂ ಪರವಾ ಇಲ್ಲ—ನಿನಗೆ ಹೇಳುತ್ತೇನೆ' ಎಂದರು.

ರಾಜಾರಾಯರಿಗೆ ನಮ್ಮೂರಿಗೆ ವರ್ಗವಾಗಿ ಅಂದಿಗೆ ಸುಮಾರು ಹನ್ನೆರಡುವರೆ ವರ್ಷವಾಗಿತ್ತು. ನಾನು ಫ್ರೈವೆಂರಿ ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದಾಗ, ಅವರಿಗೆ ಈ ಊರಿಗೆ ವರ್ಗವಾಗಿತ್ತು. ನಾನು 'ಇಂಟರ್ಮೀಡಿಯೆಟ್' ತನಕ ಓದಿ, ಕೆಲಸ ಸಿಕ್ಕದೆ ಊರಿಗೆ ಹಿಂತಿರುಗಿ ಎರಡೂವರೆ ವರ್ಷವಾಗುವವರೆಗೂ, ಅವರಿಗೆ ನಮ್ಮೂರಿನಿಂದ ವರ್ಗವಾಗಲಿಲ್ಲ. ಈ ಹನ್ನೆರಡುವರೆ ವರ್ಷಗಳ ಕಾಲದಲ್ಲಿ ನನ್ನ-ಅವರ ಗುರು-ಶಿಷ್ಯಸಂಬಂಧವು ಮೊಳೆತು, ಬೆಳೆದು, ಚಿಗುರು ಮುಂದಿಯಾಗಿತ್ತು. ನಾನು ಮೈಸೂರಿನಲ್ಲಿ ಓದುತ್ತಾ ಇದ್ದಕಾಲದಲ್ಲಿ, ಊರಿಗೆ ರಜಕ್ಕೆ ಬಂದಾಗಲೆಲ್ಲಾ ಅವರ ಸ್ಕೂಲಿನಲ್ಲಿ 'ಎ' ಕ್ಲಾಸು ಹುಡುಗರಿಗೆ ಅಕ್ಷರ 'ತಿದ್ದಿಹಾಕಿ' ಕೊಡುತ್ತಿದ್ದೆ. ಮೇಷ್ಟರು ಸ್ಕೂಲಿಗೆ ಬರಲಾಗದಿದ್ದ ದಿನಗಳಲ್ಲಿ ನಾನೇ ಮೇಷ್ಟರ ಕೆಲಸವನ್ನು ನೋಡಿಕೊಳ್ಳುತ್ತಿದ್ದೆ. ನಾನು ಓದುವುದನ್ನು ಬಿಟ್ಟುಬಂದಮೇಲಂತೂ, ನನ್ನ-ಅವರ ಗುರು-ಶಿಷ್ಯ ಸಂಬಂಧ ಬಹಳ ದೂರ ಬೆಳೆದು, ನಾನು ಅವರ ಅಚ್ಚು-ಮೆಚ್ಚಾಗಿದ್ದೆ. ಇದರಿಂದ ರಾಜಾರಾಯರು ಯಾವುದನ್ನೂ ನನ್ನ ಹತ್ತಿರ ಮುಚ್ಚಿಡುತ್ತಿರಲಿಲ್ಲ.

'ಏನಯ್ಯ ಹೇಳಲಿ, ಆದನ್ನ;..ಅದೇ ಒಂದು ದೊಡ್ಡ ಪುರಾಣ! ಹೇಳದಿರೇನೇ ನೀನು ಸಕ್ಕು ಬಿಡುತ್ತೀಯೆ. ಆದರೂ ನನಗೆ ಅದೆಷ್ಟು ರೋಸ ಹೋಗಿದೆ, ಎನ್ನುತ್ತೀಯೆ?' ಮೊದಲು ಮಾಡಿದರು ರಾಜಾರಾಯರು.

ಇಷ್ಟು ಹೊತ್ತಿಗೆ ನಾವಿಬ್ಬರೂ ಜಗುಲಿಯ ಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತೆವು.

'ಮೊನ್ನೆ ಬೆಳಗ್ಗೆ ಇಲ್ಲಿಂದ ಹೊರಟೆ, ನೋಡು. ಗಾಡಿಯಲ್ಲಿ ಸಾಮಾನು ಹೇರಿಕೊಂಡು ಸ್ಟೇಷನ್ನಿಗೆ ಹೋಗುವ ಹೊತ್ತಿಗೆ ರೈಲು ತಪ್ಪಿಹೋದುದು ನಿನಗೂ ಗೊತ್ತಿದೆಯಲ್ಲ! ಮೈಸೂರಿಗೆ ಹೋಗುವ ಇನ್ನೊಂದು ರೈಲು ಸಾಯಂಕಾಲ ಆರು ಘಂಟೆಗೆ ಬರಬೇಕಾಗಿತ್ತು.

'ಆದರೆ, ಆದೇನು ಅವತ್ತು ರೈಲಿನ ಎಂಜಿನ್ನೇ ಕೆಟ್ಟು ಹೋಗಿತ್ತೋ, ಇಲ್ಲ..ನನಗೋಸ್ಕರವೇ ನಿರ್ಧಾಸವಾಗಿ ಬಂತೋ, ಏನೋ—ಅಂತೂ ಆದಿನ ರೈಲು ರಾತ್ರಿಯ ಹತ್ತುಘಂಟೆಗೆ ಬಂತು. ಮೈಸೂರು ತಲುಪಿದಾಗ ರಾತ್ರಿ ಹನ್ನೊಂದುವರೆ ಘಂಟೆಯಾಗಿತ್ತು.

'ರಾತ್ರಿ ಆವೇಳೆಯಲ್ಲಿ ಆ ಗುರುತಿಲ್ಲದ ಮೈಸೂರಿನಲ್ಲಿ ಎಲ್ಲಿ ಇರುವದಯ್ಯಾ? ನೀನೂ ಮೈಸೂರು ಬಿಟ್ಟು ಇಲ್ಲಿಗೆ ಬಂದು ಬಿಟ್ಟಿದ್ದೀಯೆ. ಸ್ಟೇಷನಿನಲ್ಲೇ ರಾತ್ರಿಯನ್ನು ಕಳೆದು, ಬೆಳಗ್ಗೆ ನೇರವಾಗಿ 'ಬಸ್‌ಸ್ಟ್ಯಾಂಡ್'ಗೆ ಹೋದೆ. ಹೊನ್ನೇಹಳ್ಳಿಯ ಕಡೆಗೆ ಬೇಗ್ಗೆ ಎಂಟು ಘಂಟೆಗೆ ಒಂದು ಬಸ್ಸು ಹೊರಡುವುದಿತ್ತು. ಅದರಲ್ಲಿ ಹೋಗಿ ಕುಳಿತೆ.

'ಆ ಬಸ್ಸು ಹೊನ್ನೇಹಳ್ಳಿಯ ವರೆಗೆ ಮಾತ್ರ ಹೋಗುವುದಲ್ಲ; ಇನ್ನೂ ಮುಂದಕ್ಕೆ ಹೋಗುತ್ತಿತ್ತು. ಬಸ್ಸು ಇನ್ನೇನು ಹೊರಡುವುದರಲ್ಲಿತ್ತು. ಅಷ್ಟರಲ್ಲಿಯೆ ಒಬ್ಬ ಪ್ರಯಾಣಿಕ ಬಂದ. ಅವನು ಹೊನ್ನೇಹಳ್ಳಿಯಿಂದ ಇನ್ನೂ ಇಪ್ಪತ್ತು ಮೈಲು ಆಚೆಗೆ ಇರುವ ಒಂದು ಊರಿಗೆ ಹೋಗಬೇಕಾಗಿತ್ತಂತೆ. ಕಂಡಕ್ಟರ್ ನೆಟ್ಟಗೆ ನನ್ನ ಹತ್ತಿರ ಬಂದು ''ಇಳಿಯಿರಿ, ಸ್ವಲ್ಪ'' ಎಂದ.

''ಅ್ಞಾ..'' ಎಂದೆ.

''ಸ್ವಲ್ಪ ಇಳಿಯಿರಿ!''

''ಏನೋ ಇರಬೇಕು'' ಎಂದುಕೊಂಡು ಬಸ್ಸಿನಿಂದ ಇಳಿದೆ. ''ಕಂಡಕ್ಟರ್'' ಆ ಪ್ರಯಾಣಿಕನನ್ನು ನನ್ನ ಜಾಗಾಡಲ್ಲಿ ಕುಳ್ಳಿರಿಸಿ, ನನ್ನ ಸಾಮಾನುಸ್ಸೆಲ್ಲಾ ಬಸ್ಸಿನಿಂದ ಇಳಿಯಿಸಿ ಬಿಟ್ಟ!

'ಇದೇನ್ರಿ, ಇದು?" ಎಂದೆ.

"ಇನ್ನೊಂದು ಬಸ್ಸು ಬರುತ್ತೆ; ಅದರಲ್ಲಿ ಬನ್ನಿ!" ಎಂದ.

"ಅರರೆ. ಅಷ್ಟುಹೊತ್ತಿನಿಂದ ಕೂ ...."

'ಟಿಕೆಟ್ ತೆಗೆದುಕೊಂಡಿದ್ದೀರಾ?"

"ಅಷ್ಟು ಹೊತ್ತಿನಿಂದ ಕೇಳುತ್ತಾ ಇದ್ದೇನೆ; ನೀವು ಕೊಡಲೇ ಇಲ್ಲವಲ್ರಿ!"

"ನಾನೇನು ಮಾಡಲಿ? ಬಸ್ ಲೋಡ್ ಆಯಿತು. ಇನ್ನೊಂದು ಬಸ್ಸಿನಲ್ಲಿ ಬನ್ನಿ" ಎಂದು ಹೇಳಿ 'ರೈಟ್' ಎಂದ. ಬಸ್ಸು ಹೊರಟೇ ಬಿಟ್ಟಿತು.

'ಇನ್ನೊಂದು ಬಸ್ಸು ಹತ್ತು ಘಂಟೆಗೆ ಹೊರಟಿತು. ದೇವರ ದಯದಿಂದ ದೂರದ ಪ್ರಯಾಣಿಕರು ಯಾರೂ ಕೊನೆಯ ಘಳಿಗೆಯಲ್ಲಿ ಬಾರದಿದ್ದುದರಿಂದ, ನನಗೆ "ದಗಲ್‌ಪಟ್ಟಿ" ಆಗಲಿಲ್ಲ. ಕೊನೆಗೂ ಸಂಜೆಯ ಐದು ಘಂಟೆಯ ಹೊತ್ತಿಗೆ ಹೊನ್ನೇಹಳ್ಳಿಯ ಊರಬಾಗಿಲನ್ನು ತಲುಪಿದೆ.

'ಸಾಮಾನನ್ನೆಲ್ಲಾ ಇಳಿಸಿಯಾಯಿತು. ಅಲ್ಲಿದ್ದ ಒಬ್ಬನನ್ನು ಕರೆದು, ಆ ಊರಿನ ಪಟೇಲರನ್ನು ಬರಹೇಳಿದೆ. ಪಟೇಲರು ಹೊಸ ಮೇಷ್ಟರು ಬಂದರೆಂಬ ಸಂಭ್ರಮದಿಂದ ಗಾಡಿಯನ್ನೂ ಕಟ್ಟಿಸಿಕೊಂಡು ಬಂದರು.

'ಹಿಂದಿನ ಮೇಷ್ಟರು ಇದ್ದ ಮನೆಯನ್ನೇ ನನಗೆ ಖಾಲಿಮಾಡಿಕೊಟ್ಟರು. ಅಲ್ಲಿ ಸಾಮಾನು ಸರಂಜಾಮನ್ನೆಲ್ಲಾ ಇಳಿಸಿ, ಯಾವುದು ಯಾವುದನ್ನು ಎಲ್ಲೆಲ್ಲಿ ಇಡಬೇಕೋ ಅಲ್ಲಲ್ಲಿ ಇಡುವ ವೇಳೆಗೆ ಹೊತ್ತುಮುಳುಗಿತು. ಕೆಲಸವೆಲ್ಲಾ ಮುಗಿಯಲು, ವಿಶ್ರಾಂತಿಪಡೆಯಲೆಂದು ಕುಳಿತೆ. ಸಾಮಾನು ಜೋಡಿಸುವ ಧಾವಂತದಲ್ಲಿ ನನಗೆ ನೆರವಾಗಿದ್ದ ಪಟೇಲರೂ ಬಂದು ಕುಳಿತರು. ಊರಿನ ಸಮಾಚಾರ, ಸ್ಕೂಲಿನ ವಿಷಯ—ಎಲ್ಲಾ ವಿಚಾರಿಸಿದೆ. ಯಾವುದೋ ಮಾತಿಗೆ ಹಾವಿನ ವಿಷಯ ಬಂತು; ಪಟೇಲರು:

"ಅಂದ ಹಾಗೆಯೇ ಇನ್ನೊಂದು ವಿಷಯ ಮರೆತಿದ್ದೆ. ಈ ಊರಿನಲ್ಲಿ ಹಾವು ವಿಪರೀತ. ಹಿಂದೆ ಇದ್ದ ಮೇಷ್ಟರ—ಒಬ್ಬನೇ ಒಬ್ಬ ಮಗ ಮೊನ್ನೆ ಮೊನ್ನೆಯೆ ಹಾವು ಕಡಿದೇ ನತ್ತ, ಪಾಪ!" ಎಂದರು.

'ಅಷ್ಟು ಹೊತ್ತಿಗೆ ಪಟೇಲರ ಮನೆಯಿಂದ ಹಣ್ಣು ಹಾಲು ಬಂತು. ಬೆಳಗಿನಿಂದ ಊಟ ಇಲ್ಲದೆ ಬೆಂಡಾಗಿದ್ದೇನೆ. ಈ ಹೊತ್ತಿನಲ್ಲಿ ಅಡಿಗೆಮಾಡಿಕೊಳ್ಳಲಾಗುತ್ತದೆಯೆ? ಹಣ್ಣು-ಹಾಲಿನಿಂದ ಹಸಿವಾರಿಸಿಕೊಂಡೆ.

'ಬರ್ತೀನೆ. ಬೆಳಗಿನಿಂದ ದಣಿದಿದ್ದೀರಿ. ಮಲಗಿಕೊಳ್ಳಿ! ನಾಳೆ ಕಾಣಿಸಿಕೊಳ್ಳುತ್ತೇನೆ!" ಎಂದು ಹೇಳಿ ಪಟೇಲರು ಹೊರಟು ಹೋದರು.

'ಹಾಸಿಗೆ ಹಾಸಿ, ಬಾಗಿಲನ್ನು "ಬಂದು" ಮಾಡಿ, ದೀಪ ಸಣ್ಣದು ಮಾಡಿ ಮಲಗಿದೆ. ಕಣ್ಣು ಮುಚ್ಚಿದೆ; ಅದರೆ ಪಟೇಲರು ಹೇಳಿದ "ಹಾವಿನ ಹಾವಳಿ" ತಲೆಯಲ್ಲಿ ಕೊರೆಯುತ್ತಾ ಇತ್ತು. ನಾನೆಂಥಾ ಪೆಚ್ಚು ಕೆಲಸ ಮಾಡಿದೆ! ಮುಂಚೆಯೇ ಈ ವಿಷಯ ತಿಳಿದಿದ್ದರೆ, ಅವಳು ಹೆತ್ತರೆ ಬಾಣಂತನಕ್ಕಿರಲಿ—ಎಂದು ಕಳುಹಿಸಿದ ಮಂಚವನ್ನು ಇಲ್ಲಿಗೇ ತಂದು ಬಿಡಬಹುದಾಗಿತ್ತಲ್ಲ! ಒಂದುಪಕ್ಷ ನನಗೆ ಏನಾದರೂ ಆದರೆ ಸಂಸಾರದ ಗತಿ ಏನು? ಹೋದ ತಿಂಗಳು ಆ 'ಇನ್ಶೂರೆನ್ಸ್' ಏಜೆಂಟನ ಮಾತುಕೇಳಿದ್ದರೆ, ಹದಿನೈದು ಸಾವಿರ ರೂಪಾಯಿಗೆ ಸಾವಿರ ರೂಪಾಯಿ ಬರುತ್ತಿತ್ತಲ್ಲಾ! ಅದರೆ ಯಾರಿಗೆ ಗೊತ್ತಿತ್ತು, ನಾನು ಸಾಯುವೆನೆಂತ—ಎಂದು ನಾನಾ ತರದ ಯೋಜನೆಗಳು ತಲೆಯನ್ನು ಒತ್ತಲು ಪ್ರಾರಂಭಿಸಿದುವು.

'ಹಾಗೂ ಹೀಗೂ ಹಾಸಿಗೆಯಲ್ಲಿ ಸ್ವಲ್ಪ ಹೊತ್ತು ಒದ್ದಾಡಿದೆ. ಬಗೆಹರಿಯಲಿಲ್ಲ. ಕೊನೆಗೆ ದೀಪ ದೊಡ್ಡದುಮಾಡಿ ಎದ್ದು, ಇದ್ದ ಒಂದೇ ಒಂದು ಸಣ್ಣ ಕಿಟಕಿಯ ಬಾಗಿಲನ್ನು ಹಾಕಿಬಿಟ್ಟು, ಆದದ್ದಾಗಲಿ—ಎಂದು ದೀಪ ಆರಿಸಿ ಮಲಗಿದೆ. ಹಾಗೆಯೆ ಮನಸ್ಸು ಸ್ವಲ್ಪ ಶಾಂತವಾಯಿತು. ಆಯಾಸಗೊಂಡಿದ್ದೆನಾದುದರಿಂದ ನಿದ್ರೆಯ ಜೋಂಪು ಹತ್ತಿತು.

'ರಾತ್ರಿ ಸುಮಾರು ಒಂದು ಘಂಟೆ ಇರಬಹುದು. ನಾನೂ ನಿದ್ರೆಯ ಒಳಕ್ಕೆ ಮೆಲ್ಲಮೆಲ್ಲಗೆ ಇಳಿಯುತ್ತಾ ಇದ್ದೆನು. ಅಷ್ಟು ಹೊತ್ತಿಗೆ ಅದೇನೋ ಸರಸರಗುಟ್ಟಿದಹಾಗಾಗಿ, ತಟಕ್ಕನೆ ಎಚ್ಚರವಾಯಿತು. ಅರ್ಧಕಣ್ಣು ತೆರೆದು ನೋಡಿದೆ. ಬೀದಿಯ ಸೀಮೆಯೆಣ್ಣೆ ದೀಪದ ನಸುಬೆಳಕಿನ ಸಣ್ಣ ಕಿರಣವೊಂದು, ಕಿಟಕಿಯ

ಮೇಲ್ತರಗತಿಯ

ಹಳುಕು(Concentrated) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು.

ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ

ಕ್ರಿಸಾಗ್ ಲಿಮಿಟೆಡ್,

ಪೋ. ಬಾ. ನಂ. ೨೧೧೦, ಬಾಂಬೆ.

ಒಂದು ಕಿಂಡಿಯ ಮೂಲಕ ಹರಿದುಬಂದು, ಹಾಸಿಗೆಯ ಪಕ್ಕದಲ್ಲಿ ಬಿದ್ದಿತ್ತು. ಆ ಕಿರಣದ ಸುತ್ತಲೂ ಸ್ವಲ್ಪ ದೂರ, ಕಂಡೂ ಕಾಣದಂತೆ ಮಂದವಾಗಿ ಬೆಳಕು ಹರಡಿತ್ತು. ಇಷ್ಟು ನೋಡುವ ಹೊತ್ತಿಗೆ ನಿದ್ರೆ ಪೂರ್ತಿಯಾಗಿ ಹರಿದುಹೋಯಿತು. ಕಣ್ಣುಗಳನ್ನು ಪೂರಾ ಅಗಲಿಸಿ, ಇನ್ನೂ ತೀಕ್ಷ್ಣವಾಗಿ ಆ ಮಂಕು-ಬೆಳಕಿನಲ್ಲಿ ದೃಷ್ಟಿಯನ್ನು ನೆಟ್ಟೆ....

'ಸ್ವಲ್ಪ ಹೊತ್ತಿನ ನಂತರ, ಆ ಮಂಕುಬೆಳಕಿನಲ್ಲಿ ಅದೇನೋ ನೆರಳು ಓಲಾಡಿದ ಹಾಗೆ ಕಾಣಿಸಿತು. ಆಮೇಲಾಮೇಲೆ ಸ್ಪಷ್ಟವಾಗಹತ್ತಿತು. ನೋಡುತ್ತೇನೆ—ಹಗ್ಗದ ಹಾಗಿರುವಯಾವುದೋ ಒಂದು, ಒಂಸೇ ಗತಿಯಲ್ಲಿ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಆಡುತ್ತಿದೆ....

'ನೋಡಿದೆ.... ನೋಡಿದೆ.... ಎಲ್ಲಾ ಗೊತ್ತಾಯಿತು. ಒಂದು ಹಾವು ಹೆಡೆಯನ್ನು ಎತ್ತಿಕೊಂಡು ಜಿಲ್ಲಾಟವಾಡುತ್ತಾ ಇದೆ! ಅದೇನು ಜಿಲ್ಲಾಟವೋ— ಇಲ್ಲ— ಇನ್ನೊಂದೇ ಒಂದು ಘಳಿಗೆಯಲ್ಲಿ ಬಂದು ನಂಪಾಣಿಯನ್ನು ಈ ಪ್ರಪಂಚದಲ್ಲಿ 'ಇಲ್ಲ' ಎನ್ನಿಸಿಬಿಡುತ್ತೇನೆ— ಎಂಬ ಅಹಂಭಾವದ ಕೂಗಾಟವೋ.... ಒಂದೂ ಗೊತ್ತಾಗಲಿಲ್ಲ.

'ಇನ್ನು ಬಹಳ ಹೊತ್ತು ಸುಮ್ಮನೆ ಇರಲಾಗುವುದಿಲ್ಲ. ಈ ಹಾವನ್ನು ಕೊಲ್ಲಬೇಕು. ಇಲ್ಲದಿದ್ದರೆ ಈ ಜಾಗೆ ಬಿಟ್ಟು ಓಡಿ-ಹೋಗಬೇಕು. ಇದರಲ್ಲಿ ಪೊದಲನೆಯದು ಅಸಾಧ್ಯ. ಏಕೆಂದರೆ, ನಾವು ನಾಗರಪ್ರತಿಷ್ಠೆ ಮಾಡಿಸಿದ್ದೆವಾದುದರಿಂದ, ಹಾವನ್ನು ಕೊಲ್ಲುವ ಹಾಗಿರಲಿಲ್ಲ. ಒಂದು ಪಕ್ಷ ಕೊಲ್ಲುವಹಾಗಿದ್ದರೂ ಆ ಧೈರ್ಯ ಇರಲಿಲ್ಲ—ಎಂದಿಟ್ಟುಕೊ!

ಕೊನೆಗೆ ಧೈರ್ಯ ಮಾಡಿ ಹಾಸಿಗೆಯಿಂದ ಮೆಲ್ಲನೆ ಎದ್ದು, ಸದ್ದುಮಾಡದೆ ಜಾಗಿಲ ಹತ್ತಿರ ಬಂದು, ನಡಗುವ ಕೈಗಳಿಂದ ಜಾಗಿಲನ್ನು ತೆರೆದು, ಹೊರಗೆ ಬಂದೆನೊ ಇಲ್ಲವೋ—ಅಲ್ಲಿಯೇ ಸುಮ್ಮನೆ ನಿಂತಿರಬಾರದಿತ್ತೆ—' ಒದುಕಿದೆಯಾ ' ಎಂದುಕೊಂಡು ನಡುಬೀದಿಗೆ ಓಡಿದೆ.

' ಹೊನ್ನೇಹಳ್ಳಿಯಲ್ಲಿಯೂ ಈ ಊರಿನಂತೆಯೇ ಪೋಲೀಸಿನವರಿಲ್ಲ. ಇಲ್ಲಿಯಂತೆಯೇ ಅಲ್ಲಿಯೂ ಹಳ್ಳಿಯವರೇ ರಾತ್ರಿಯ ಹೊತ್ತು ಊರು ಗಸ್ತು ಹೊಡೆಯುತ್ತಾರೆ. ಒಂದೊಂದು ದಿನಕ್ಕೆ ನಾಲ್ಕು ನಾಲ್ಕು ಜನರಂತೆ ಸರದಿಯ ಪ್ರಕಾರ ಊರಿನ ಗಂಡುಸರು ಗಸ್ತುಹೊಡೆಯಬೇಕು. ಆ ದಿನ ರಾತ್ರಿ ಅಲ್ಲಿಯ ಪಟೇಲರ ಮಕ್ಕು ಇನ್ನೂ ಮೂರು ಜನರ ಸರದಿ. ನಾನು ರೂಮಿನಿಂದ ನಡುಬೀದಿಗೆ ಓಡಿ ಬರುವುದಕ್ಕೂ, ಪಟೇಲರೂ ಇತರರೂ ಗಸ್ತು ಹೊಡೆಯುತ್ತಾ ಅಲ್ಲಿಗೆ ಬರುವುದಕ್ಕೂ ಸರಿಯಾಯಿತು. ನನ್ನನ್ನು ನೋಡಿ ಪಟೇಲರಿಗೆ ಆಶ್ಚರ್ಯವಾಯಿತು.

" ಇದೇನು ಮೇಷ್ಟರೆ ? " ಎಂದರು.

" ಹಾವು ! " ಎಂದೆ.

" ನಡೆಯಿರಿ " ಎಂದದ್ದೂ ಪಟೇಲರೂ ಅವರ ಅನುಯಾಯಿಗಳೂ ಹೆಗಲಿನ ಮೇಲೆ ದೊಣ್ಣೆ ಏರಿಸಿಕೊಂಡು, ರೂಮಿನ ಬಾಗಿಲಗೆ ಬಂದು ಮೆಲ್ಲಗೆ ಬಾಗಿಲನ್ನು ತೆಗೆದರು. ನಾನೂ ಇಣಿಕಿ ನೋಡಿದೆ. ಅದು ಹಾಗೆಯೆ ಇತ್ತು. ' ಅಲ್ಲಿ! ' ಎಂದು ಪಟೇಲರಿಗೆ ಅದನ್ನು ತೋರಿಸಿದೆ. ಪಟೇಲರು ಕೈಯಲ್ಲಿದ್ದ ಲಾಂದ್ರವನ್ನು ಹಿಡಿದು ನೋಡುತ್ತಾರೆ: ಒಂದು ಕರಿಯ ಬೆಕ್ಕು ತನ್ನ ಬಾಲವನ್ನು ಮೆಲ್ಲಗೆ ಓಲಾಡಿಸುತ್ತಾ ಆನಂದದಿಂದ ನಿಂತಿದೆ! ದೀಪದ ಬೆಳಕನ್ನು ಕಂಡೊಡನೆಯೇ ಜಂಗನೆ ಹಾರಿ, ಸೂರಿನ ಸಂದಿಯಲ್ಲಿ ದೂರಿ ಅದು ಹೊರಟುಹೋಯಿತು.

' ನೋಡಿ ಪಟೇಲರಿಗೆ ತುಂಬಾ ನಗುಬಂದುಬಿಟ್ಟಿತು. " ಇದೇನೇ ನಿನ್ಮ ಹಾವು ?" ಎಂದು ಬಿದ್ದುಬಿದ್ದು ನಕ್ಕುಬಿಟ್ಟರು.

' ನನಗೆ ವಿಪರೀತ ನಾಚಿಕೆಯಾಯಿತು. ಒಂದು ತಿಂಗಳ ರಜೆಗೆ ಬರೆದು ಹಾಕಿ, ಮರುದಿನವೆ ಆ ಊರನ್ನು ಬಿಟ್ಟುಬಿಟ್ಟೆ ಎಂದರು ಮೇಷ್ಟರು.

ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ನೈಸೂರು ವಿದ್ಯಾಪಾತೆಯವರಿಂದ ಮಂಜೂರಾಗಿದೆ.

T.B.C. No. 162 of 39-40.

ವರ್ಧಾಯಾತ್ರೆ: ಲೇ. ಶ್ರೀ. ಎಸ್. ಕೃಷ್ಣಶರ್ಮ. ಬೆಲೆ: ೧-೦-೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರ ಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿ ನೋಡಬೇಕು.

—ವಿಶ್ವಕರ್ನಾಟಕ: ಶ್ರೀ. ತಿ. ತಾ. ಶರ್ಮನ್.

೨) WARDHA YATRA is a new departure in Kannada Literature. —*Indian P.E.N.*

ಇದೇ ಲೇಖಕರ ಪರ್ಣಕುಟಿ ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದ ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦-೮-೦

೨. ಅಸಾಮೀ ಕತೆಗಳು .. ೦-೮-೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವುವು.

ದೊರೆಯುವ ಸ್ಥಳ:— **ಸಾಧನ ಮುದ್ರಣಾಲಯ, ಧಾರವಾಡ**

ಒಂದು ಬೆಳ್ದಿಂಗಳ ರಾತ್ರಿಯಲ್ಲಿ:

(ಜೋಗದ ಅರಸುಗಲ್ಲಿನ ಮೇಲೆ ಕುಳಿತಾಗ)

ಶ್ರೀ. ಕಲಾಕುಮಾರ, ಸಾಗರ

ತಿಳಿನೀಲಿಯಾಗಸದಿ ಮುಗಿಲ ತೆರೆಯೋಸರಿಸಿ
ಮುಗುಳುನಗೆ ಮಳೆಗರೆದು ಶಶಿಯು ಬೆಳಗಿದನು.
ಅಳಿವ ಕಾಣದ ಝರಿಯ ಸೊಬಗಿಂಗೆ ಪೆಮ್ಮೆಸೋತು,
ಬಾಗಿ ನೋಡುವನಿಂದು ಮೆಲುಮೆಲನೆ ಬಂದು! ॥೧॥

ಸಲ್ಲ ನಲ್ಲೆಯ ಸೇರಿ ಬಿಗಿದಪ್ಪುವಂದದಲಿ
ನೆಲವ ತಬ್ಬಿದೆ ತಿಳಿಯ ತಿಂಗಳಿನ ಬೆಳಕು;
ಸುಪ್ತಮಾನವ ಕೋಟಿ ಕಂಡ ಕನಸೆಂಬಂತೆ
ಪಸರಿಸಿದೆ ಚಂದ್ರಿಕೆಯ ಸ್ವರ್ಣವಲಯಗಳು ! ॥೨॥

ಬಾನ್ನೀರೆಯುಟ್ಟಿರುವ ಸೀರೆಯಂಚಿನ ರತ್ನ-
ಕುಸುಮ ಸಂಚಯವಿದೋ ! ತಾರೆ ತೊಳಗುತಿವೆ !
ಹೊಳೆವ ಕಣ್ಣೊಟದಲಿ ಬೀಟವನು ನೂಸುತ್ತ
ಸಾರುತಿವೆ ಚಂದಿರನ ಕೂಡೆ ಕೆಲವು! ॥೩॥

ಬಿಳಿಯ ಮುಗಿಲಿನ ಮೇಲೆ ಜೆಲುವುಕೆಳೆದಿಯ ಕೂಡಿ
ಇಳೆಯ ಕಾಂಬುವುವಿಣಿಕಿ ಸರಸವಾಡಿ—
ಜೊನ್ನವನು ಕುಡಿಕುಡಿದು ಬೀಗಿ ಮದಿಸಿನೆ ಚಿಕ್ಕೆ
ಮೌನದಲಿ ನಗುತಲೇಡಿಸುತಲೆನ್ನ ! ॥೪॥

ಇರುಳುರಕ್ಕಸಿಯು ಘೋರಾಂಧಕಾರದ ಪಡೆಯು
ಕಾಲ್ದೆಗೆದು ದಶದಿಶೆಯ ಗುಹೆಯ ಸಾರುತಿವೆ !
ಇರುಳ್ಪಕ್ಕಿಯುಂಡಲೆವ ಕಲಕಲಸ್ವನವಿಲ್ಲ;
ನುಳಿಗಾಳಿ ನುಳಿ-ನುಳಿದು ತೀಡುತಿಹುದಿಲ್ಲಿ ! ॥೫॥

ಸುತ್ತ ನೋಡಿದೊಡೆತ್ತ ಮಾತುಳಿದು ನಿಂದಿಹುವು,
ಚಿತ್ರಪ್ರತಿಮೆಗಳೇನೊ ಬನ-ಮಲೆಗಳೆಲ್ಲ !
ಬಿತ್ತರದ ಪಾತರದಿ ಬಿದ್ದು ನಿದ್ದಿಸುತಿಹುವು,
ಜಡದೊಳಗೆ ಜಡವಾಗಿ ಬಂಡೆಗಳು ಮಲಗಿ ! ॥೬॥

ಜೋಗದಲಿ ಕುಳಿತಾಗ ತಂಗದಿರ ನಗುವಾಗ
ಬಗೆಯ ನ್ಯೈದಿಲೆ ಮೆಲ್ಲನರಳಬಹುದು !
ಭಾವ ನಿಲುಕದು ನುಡಿಗೆ ! ಕುಳಿತಿರುವನೇಕಾಂಗಿ,
ಮೂಕವಿಸ್ಮಿತನಾಗಿ ತನ್ನ ತಾ ಮರೆದು ! ॥೭॥

ಚೆಲುವು

ಶ್ರೀ. ಎಂ. ಪಿ. ಮಹಿಷಿ

ಪರುಷದಿ ಹಾಡುವ ಹಕ್ಕಿಗಳುಲಿವನು
ಕೇಳುತ ಸಂತಸವುಕ್ಕುತಲಿರಲು;
ಸೊಂಪಿನ ಸಾಗರ ಕೋಡಿಯಸೊಡೆದು
ಹೊನ್ನಿನ ಹೊಳೆಯೇ ಹರಿಯಿತು ಎನಲು;

ಬಗೆಬಗೆ ಬಣ್ಣದಿ ಮಿನುಗುವ ಮೊಗ್ಗು
ಅರಳೆ, ಸುವಾಸನೆ ಸೂಸುತಲಲರು,
ಅರಳಿದ ಅಲರನು ಬಳಸುತ ಎಲರು—
ಸುತ್ತಲು ಕಂಪನು ಬೀರುತ ಬರಲು;

ನೋಡುತ ನಲಿಯುತ ಮೈಮರೆತಿರಲು
ಮೂಡಣ ದಿಶೆಯಲಿ ಮೂಡಿತು ಚೆಲುವು !

ದಕ್ಷಿಣ ಸಂಸ್ಥಾನಗಳಲ್ಲಿ ★

(ದೇಶಪರಿಚಯ)

ಶ್ರೀ. ಸಿ. ಕೃಷ್ಣಶರ್ಮ ಸಂಘಟನಮಂತ್ರಿ
ಅಖಿಲಭಾರತ ದೇಶೀರಾಜ್ಯ-
ಲೋಕಪರಿಷತ್ತು ಮುಂಬಯಿ.

★

ಒಟ್ಟು ಔಂಧ ಸಂಸ್ಥಾನದ ಜನಸಂಖ್ಯೆ ಒಂದು ಹುಬ್ಬಳ್ಳಿ ನಗರದಷ್ಟೂ ಆಗುವುದಿಲ್ಲ. ಆದರೂ ಅದೊಂದು ರಾಜ್ಯ; ಅದಕ್ಕೊಬ್ಬ ರಾಜ. ಮಂತ್ರಿ, ಅಧಿಕಾರಿವರ್ಗ, ಪೋಲಿಸರು, ನ್ಯಾಯಾಧೀಶರು ಎಲ್ಲರೂ ಈ ಗೊಂಬೆಯರಾಜ್ಯಗಳಿಗೆ ಬೇಕೇ ಬೇಕು; ಅದರ ಭಾರವನ್ನೆಲ್ಲ ಅಲ್ಲಲ್ಲಿಯ ಪ್ರಜಾಪಾಪಿಗಳು ಹೊರಬೇಕು !

★

೨

ದಕ್ಷಿಣ ಸಂಸ್ಥಾನಗಳೆಂದರೆ ಮೊದಲಿಗೆ ಔಂಧ್‌ಸಂಸ್ಥಾನ ನೆನಪಾಗುತ್ತದೆ. ವಿಸ್ತೀರ್ಣದಲ್ಲಿ ಸಣ್ಣದಿದ್ದರೂ ಇಡೀ ಗುಂಪಿನಲ್ಲಿ ಔಂಧ್ ಬಹಳ ಹೆಸರುವಾಸಿಯಾಗಿದೆ. 'ಆಕಾರದಲ್ಲಿ ಕಿರಿ, ಕೌಶಲ್ಯದಲ್ಲಿ ಹಿರಿ' ಎಂಬುದು ಒಂದು ವಾಡಿಕೆ. ಇದು ಜನರಿಗೆನ್ನಿಯಿಸಿದಂತೆ ಜನಪದಕ್ಕೂ ಅನ್ವಯಿಸುತ್ತಿರಬೇಕು. ಇಲ್ಲದಿದ್ದರೆ ಆಂಗ್ಲೈಯುಗಲದ ಇಂಗ್ಲಂಡ್ ಕಡಲರಾಣಿ, ಜಗತ್ಸಾಮ್ರಾಜ್ಞಿ ಅದುದು ಹೇಗೆ ? ಔಂಧ್ ಹಿಂದುಸ್ತಾನದ ಸಂಸ್ಥಾನಗಳಿಗೆಲ್ಲ ಮಾರ್ಗದರ್ಶಿ ಎನಿಸಿಕೊಂಡುದು ಹೇಗೆ !

ಔಂಧ್ ಚಿಕ್ಕದು. ೫೦೧ ಚದರ ಮೈಲಿ ವಿಸ್ತೀರ್ಣ; ೬೬,೫೦೭ ಜನವಸತಿ. ವಿಸ್ತೀರ್ಣದಲ್ಲಿ ಬ್ರಿಟಿಷ್ ಹಿಂದುಸ್ತಾನದ ಒಂದು ತಾಲ್ಲೂಕಿಗೆ ಸಮ. ಜನವಸತಿಯಲ್ಲಿ ಹುಬ್ಬಳ್ಳಿಗಿಂತಲೂ ಕಡಮೆ. ಇಡೀ ಔಂಧ ಸಂಸ್ಥಾನದ ಜನವಸತಿ ಹುಬ್ಬಳ್ಳಿಯ ವಸತಿಯಷ್ಟೂ ಇಲ್ಲ. ಆದರೂ ಆದಕ್ಕೊಬ್ಬ ರಾಜ; ಅದಕ್ಕೊಂದು ಕೋಶ; ಸ್ವತಂತ್ರ ಸಿಬ್ಬಂದಿ, ಅಡಳಿತ್ಕವೆಲ್ಲವೂ ಇವೆ. ೫೦೦ ಮೈಲಿಗೆ ಪ್ರತ್ಯೇಕವಾಗಿ ಪೋಲೀಸು ಬೇಕು; ಅದಕ್ಕಾಗಿಯೇ ಇಂಜನಿಯರರು ಬೇಕು. ೫೬ ಸಾವಿರ ಜನರಿಗೇ ಒಂದು ಹೈಕೋರ್ಟು ಬೇಕು; ಉಳಿದೆಲ್ಲ ಕಚೇರಿಗಳೂ ಬೇಕು. ದಿವಾನಬೇಕು, ಜವಾನ ಬೇಕು. ಇವರೆಲ್ಲರ ವೆಚ್ಚವನ್ನೂ ಆ ಜನ ತೆರಬೇಕು. ಸಾಲದು ಬಕ್ಕೆ ಮಹಾರಾಜರು-ಅರಮನೆ, ಯುವರಾಜ-ಯುವರಾಣಿಯರು, ಅರಸುಬಳಗ-ಎಲ್ಲವೂ ಅವರ ತೆರಿಗೆಯಿಂದಲೇ ನಡೆಯಬೇಕು.

ಸಣ್ಣಪುಟ್ಟ ಸಂಸ್ಥಾನಗಳ ವಿಷಯವೇ ಹೀಗೆ. ಔಂಧ್ ಒಂದರ ಮಾತಲ್ಲ. ಔಂಧ್‌ರಾಜರ ಹಾಗೆ ಎಲ್ಲರಾಜರೂ ಏನಿತವ್ಯಯಿಗಳೂ ನಿರ್ವ್ಯಸನಿಗಳೂ ಆದರೆ ಅದೂ ಒಂದು ರೀತಿ. ಸಂಸ್ಥಾನದ ರೈತರು ತೆತ್ತ ಹಣವನ್ನು ಪುಣೆಗೋ ಮುಂಬಯಿಗೋ ಒಯ್ದು, ಅಲ್ಲಿ ಕಲ್ಲು-ಮಣ್ಣಿಗೆ, ಇಟ್ಟಿಗೆ-ಗಾರೆಗೆ ಸುರಿದು ದಿವ್ಯಪ್ರಾಸಾದಗಳನ್ನು ಕಟ್ಟಿಸುತ್ತಾರೆಯಲ್ಲ.. ಇದಕ್ಕೇನೆನ್ನಬೇಕು ? ಕೊಲ್ಹಾಪುರದ ರಾಜರು ಜೂಜುಗುದುರೆಗಳಿಗಾಗಿ ಬೊಕ್ಕಸವನ್ನು ಹೇಗೆ ಬರಿದುಮಾಡಿದರೆಂಬುದು ಯಾರಿಗೆ ಗೊತ್ತಿಲ್ಲ ! ಆ ಅರಮನೆಯ ನಾಟಕದ ರುಚಿ ಎಷ್ಟು ತುಟ್ಟಿಯು ಸರಕಾಯಿತೋ ಅರಿಯೆವೆ ? ದೂರದ ಗುಜರಾತಿನ ಸಂಸ್ಥಾನವೊಂದರಲ್ಲಿ, ನಾಯಿ-ಚಪಲದ ನವಾಬನೊಬ್ಬ, ತನ್ನ ಮುದ್ದಿನ ನಾಯಿಗೆ ಶಾಸ್ತ್ರೋಕ್ತವಾಗಿ ಮದುವೆಮಾಡಿಸಿ, ಸಲವತ್ತು ಸಾವಿರ ವೆಚ್ಚಮಾಡಿ, ಆ ಶ್ವಾನದಂಪತಿಗಳ ವೈರವಣಿಗೆ ಮಾಡಿಸಿದನಂತೆ. ಬಡೋದೆಯ ಮಹಾರಾಜನದು ದೊಡ್ಡ ಕೈ. ೭೦ ಸಾವಿರಕ್ಕೆ ಒಂದು ಪುಟಾಣಿ ರೈಲೇ ಮಾಡಿಸಿ ಬಿಟ್ಟ.. ಮಕ್ಕಳು ಶಾಲೆಗೆ ಹೋಗಲಿಕ್ಕೆ. ಇವರು ದೂರದವರು, ಇವರ ಮಾತು ಇರಲಿ. ಮೈಸೂರು ಮಹಾರಾಜರ ರಸಿಕತನಕ್ಕೆ ರೈತರ ಹಣ ಎಷ್ಟು ಹೋಗಿದೆಯೋ ಯಾರು ಬಲ್ಲರು? ಅವರ ಕಲಾಕೋವಿದತೆಯ ಫಲವಾಗಿ, ಮೈಸೂರರಮನೆಗೆ ಎಷ್ಟೋ ಸಾಲವಾಗಿರಬೇಕು.

ನಮ್ಮ ಪ್ರಭುಗಣದ ಸ್ವಂತ ವೆಚ್ಚದ, ಜಾಳಿನ ರೀತಿ-ನೀತಿಯ ಮಾತು ಬಂದಾಗ, ಇದನ್ನು ವಿಮರ್ಶಿಸಿಕೊಂಡರಾಯಿತು. ಈಗ ಬಂದುದು ಆ ಪ್ರಸ್ತಾಪವಲ್ಲ. 'ಈ ಗೋಪ್ಪಾದ ಪ್ರದೇಶಗಳಿಗೇ ಒಂದೊಂದು ಪ್ರತ್ಯೇಕ ಆಡಳಿತವಾದರೆ, ದೇಶಕ್ಕೆ ಆಗುವ ಅರ್ಥಪಾನಿ ಎಷ್ಟು—' ಎಂದು ಮಾತು ಬಂತು. ಕೂಡಿ ಸಂಸಾರ ನಡೆಯಿಸುವ ಹಿಂದಿನ ಕಾಲದ ಸಮಷ್ಟಿಕುಟುಂಬದ ಪದ್ಧತಿ ನಮ್ಮ ನಿಮ್ಮ, ನನ್ನ ಹೆಂಡತಿಯ ನಿಮ್ಮ ಕುಟುಂಬದ ಮನಸಿಗೆ ರುಚಿಗೆ ಒಗ್ಗೀತೋ ಇಲ್ಲವೋ ಆಗಲಿ: ವ್ಯವಹಾರದಲ್ಲಿ ವ್ಯಾಪಾರದಲ್ಲಿ ಆಡಳಿತದಲ್ಲಿ ಮಾತ್ರ ಅದೇ ರೂಢಿಗೆ ಬರುತ್ತಿದೆ. ೫೦ ವರ್ಷದ ಕೆಳಗೆ ನಾರಾಯಣ ಸೆಟ್ಟಿಗೆ ನಾಲ್ಕುಜನ ಮಕ್ಕಳಾದರೆ, ನಾಲ್ಕು ಬೇರೆ ಬೇರೆ ಅಂಗಡಿ. ಕುಟುಂಬ ಒಂದೇ ಆದರೂ ವ್ಯಾಪಾರದ ಹಿಡಿತ ಬೇರೆ ಬೇರೆ. ಈಗ ಹಾಗಲ್ಲ; ನಾಲ್ಕು ಜನ ಸೆಟ್ಟರ ಮಕ್ಕಳು, ಅವರ ಜೊತೆಗೆ ಒಬ್ಬ ಆಚಾರ್ರು, ಇಬ್ಬರು ಅಯ್ಯನವರು ಎಲ್ಲರೂ ಸೇರಿ ಒಂದು ಕಂಪನಿ ಹೂಡುತ್ತಾರೆ. ದೊಡ್ಡ ದೊಡ್ಡ ವ್ಯಾಪಾರವೆಲ್ಲ ಹೀಗೆಯೆ. ರೂಸ್ ದೇಶದಲ್ಲಿ ಒಕ್ಕಲುತನ ಕೂಡಾ ಹೀಗೆ ಸಮಷ್ಟಿಪದ್ಧತಿಯಾಗಿದೆಯಂತೆ. ನಮ್ಮದೆಲ್ಲ ತಿರುವು ಮುರುವು. ಇಲ್ಲಿ ಹೀಗೆ ಒಟ್ಟುಗೂಡುತ್ತಿದ್ದರೆ, ನಮ್ಮಲ್ಲಿ

ಸಲಹ ಸಂಸ್ಥಾನಗಳಿಗೆ ಬೇರೆಬೇರೆ ಶ್ವೇತಚ್ಛತ್ರಗಳು, ಅಷ್ಟು ಧ್ವಜ— ತಮ್ಮ ಗಡಿಯ ಹೊರಗೆ ಅದನ್ನು ಹಾರಿಸುವ ಯೋಗ್ಯತೆಯಿಲ್ಲದಿದ್ದರೂ ಒಂದು ಧ್ವಜವಿರಬೇಕು— ಅಷ್ಟು ಸಿಂಹಾಸನ!

ಹೀಗಾಗಿ ಜನರಿಗೆ ಅವರು ಕೊಟ್ಟ ತೆರಿಗೆಗೆ ಸರಿಯಾಗಿ ಅನುಕೂಲತೆ ಒದಗುವುದು ಸಾಧ್ಯವಿಲ್ಲ. ೮ ಲಕ್ಷ ಜನವಸತಿಗೆ ೪ ಸಾವಿರ ಚದರ ಮೈಲಿಗೆ ಒಂದೊಂದು ಜಿಲ್ಲೆಯಾದ ಬ್ರಿಟಿಷ್ ಹಿಂದುಸ್ತಾನದಲ್ಲಿ, ಆಡಳಿತದ ವೆಚ್ಚ ಜನರ ಮೇಲೆ ಹಂಚಿ ಹೋದ ಹಾಗೆ ಈ ಸಣ್ಣ ಸಂಸ್ಥಾನಗಳಲ್ಲಿ ಹೇಗಾದೀತು? ಬ್ರಿಟಿಷ್-ಭಾರತಕ್ಕಿಂತ ಹೆಚ್ಚು ತೆರಿಗೆ ಹಾಕಿದರೆ ಅನ್ಯಾಯವಾಗುತ್ತದೆ; ಗಲಭೆಯೂ ಆಗುತ್ತದೆ. ಇದರ ಪರಿಣಾಮ ಹುಡುಗರಿಗೆ ಓದಿಲ್ಲ, ದನಕ್ಕೆ ಹೆದ್ದಾಣಿಯಿಲ್ಲ, ಬಡವರಿಗೆ ಕೂಲಿನಾಸ್ತಿ, ಜನಕ್ಕೆ ನಾಗರಿಕತೆ ಶೂನ್ಯ. ಇವೆಲ್ಲ ಸಂಸ್ಥಾನಗಳು ಸಮುಚ್ಚಿಕುಟುಂಬವಾಗಿ ಸೇರದೆ ಜನರಿಗೆ ಸುಖವಿಲ್ಲ, ಬೆಳವಣಿಗೆಯೂ ಇಲ್ಲ. ಎಲ್ಲರೂ ಸೇರಿ ಒಂದು ಆಡಳಿತ ಮಾಡಿಕೊಂಡರೆ ಸರಿ! ಈಗ ತಾನೆ ಇವರು ಮಾಡುವ ಆಡಳಿತವೇನು? ಯಾರೋ ಮಾಡುತ್ತಾರೆ; ಆಗುತ್ತದೆ. ಇವರ ವೆಚ್ಚಕ್ಕೆ ಹಣ ಒದಗಿಸುವುದಲ್ಲವೆ ನೂರಕ್ಕೆ ೯೯ ದಿವಾನರ ಕೆಲಸ? ಎಲ್ಲರೂ ಸೇರಿಕೊಂಡರೆ ಜನರಿಗೂ ಸುಖ, ದೇಶಕ್ಕೂ ಹಿತ, ರಾಜರಿಗೂ ನಿರಾಲೋಚನೆ. ಅಷ್ಟೇ ಅಲ್ಲ, ಅವರಿಗೊಂದು ದೊಡ್ಡ ಬಲಬಂದಂತೆ.

ಎರಡು ವರುಷದ ಕೆಳಗೆ ಪಂಜಾಬುಪ್ರಾಂತದ ಲೂಧಿಯಾನಾದಲ್ಲಿ, ಅಖಿಲಭಾರತ ದೇಶೀರಾಜ್ಯ ಲೋಕಪರಿಷತ್ತು ಸೇರಿತ್ತು. ಅದು ಎಂಟನೆಯ ಪರಿಷತ್ತು. ಅದಕ್ಕೆ ಪಂಡಿತ ಜವಾಹರಲಾಲರು ಅಧ್ಯಕ್ಷರಾಗಿದ್ದರು. ಆ ಪರಿಷತ್ತಿನಲ್ಲಿ ೬೦ ಸಣ್ಣ ಸಂಸ್ಥಾನಗಳ ತೊಡಕು ಚರ್ಚೆಗೆ ಬಂತು. "೨೦ ಲಕ್ಷ ಜನವಸತಿಯಾದರೂ ಇರಬೇಕು; ಇಲ್ಲವೆ ೫೦ ಲಕ್ಷ ವರಮಾನವಾದರೂ ಇರಬೇಕು. ಎರಡೂ ಇಲ್ಲದ ಸಂಸ್ಥಾನಗಳನ್ನು ಬ್ರಿಟಿಷು ಪ್ರಾಂತಕ್ಕೆ ಸೇರಿಸಬೇಕು!" ಎಂದು ಅಲ್ಲಿ ತೀರ್ಮಾನವಾಯಿತು. ಮುಂದೆ ಇದೇ ಮಾತನ್ನೇ ಪೈಸ್‌ರಾಯರು--'ಬ್ರಿಟಿಷ್ ಪ್ರಾಂತಗಳೊಂದಿಗೆ ಸೇರಬೇಕಾಗಿಲ್ಲ. ನೀವೇ ನಿಮ್ಮದೇ ಒಂದೊಂದು ಪ್ರಾಂತವನ್ನಾಗಿ ಮಾಡಿಕೊಳ್ಳಿ' ಎಂದು ಹೇಳಿದರು. 'ಹೈಕೋರ್ಟಿನ ಪೂರ್ತಿ ಕೂಡಿದರಾಯಿತು' 'ಪೋಲೀಸಿನ ಮಟ್ಟಿಗೆಸೇರಿದರೆ ಸರಿ-'ಹೀಗೆ ಬೇರೆ ಬೇರೆ ಅವತಾರ ಎತ್ತಿ ಅದೇ ಸೂಜಸನೆ ಬರುತಾ ಇದೆ. ನಾಳೆ ಮತ್ತೊಂದು ರೂಪ ತಳೆದೀತು.

ಔಂಧ್ ಸಂಸ್ಥಾನದ ವಿಸ್ತೀರ್ಣ ೫೦೦ ಮೈಲು ಮಾತ್ರ ಎಂದೆನಲ್ಲವೆ? ಅದರಿಂದಲೇ ಇಷ್ಟೆಲ್ಲ ಮಾತು ಹೊರಟದ್ದು. ಈ ೫೦೦ ಚದರ ಮೈಲಿಯಾದರೂ ಒಂದೇ ಪಟ್ಟಿಯಾಗಿ ಬ್ರಿಟಿಷು ಹಿಂದುಸ್ತಾನದ ಒಂದು ತಾಲೂಕಿನ ಹಾಗೆ ಇದೆಯೇ? ಅದೂ ಇಲ್ಲ. ಮುಗಿಲಿನಲ್ಲಿ ಚುಕ್ಕೆ ಹರಡಿದ ಹಾಗೆ, ಬಿಡಿಬಿಡಿಯಾಗಿ ಅಲ್ಲಿ ಕೆಲವು ಇಲ್ಲಿ ಕೆಲವು ಹಳ್ಳಿ ಚದರವೆ. ಈ ಸಂಸ್ಥಾನಕ್ಕೆ ಇರುವುದು ಒಟ್ಟು ೭೨ ಹಳ್ಳಿ. ಈ ೭೨ ಹಳ್ಳಿ ೨೨ ತಾಲೂಕುಗಳಾಗಿವೆ. 'ಕಿನ್ಹಾಯಿ' ಎಂಬ ಹಳ್ಳಿ ಎಲ್ಲಕ್ಕೂ ಬಡಗವಾಗಿ, ಸಾತಾರಾ ಜಿಲ್ಲೆಯ ಕೊರೇಗಾಂವಕ್ಕೂ ಆಚೆಗಿದೆ. ತೆಂಕಲಿಗೆ ಜಮಖಂಡಿ ಸಂಸ್ಥಾನದ ಹತ್ತಿರ ೧೧ ಹಳ್ಳಿಯ 'ಗುಣಧಾಳ' ತಾಲೂಕಿನ ಪಟ್ಟಿಯೊಂದಿದೆ. ಅದರ ಸಮೀಪದಲ್ಲಿ 'ಹಂಗರಗಿ'ಎಂಬ ಹಳ್ಳಿ ಏಕಾಕಿಯಾಗಿ ಇದೆ. ಮೂಡಲಿಗೆ ಬಿಜಾಪೂರದ ಬಳಿ ನಾಲ್ಕು ಹಳ್ಳಿ ಇವೆ. ಪಡುವಲಕ್ಕೆ ಕರಾಡ, ನಿಲುಮನೆಯ ಹತ್ತಿರ ಕೆಲವು ಹಳ್ಳಿ. ರಾಜಧಾನಿಯಾದ ಔಂಧ್ ಧ್ರುವ ನಕ್ಷತ್ರದಂತೆ ಒಂಟಿಯಾಗಿ ಬೆಳಗುವ ಒಂದೂರು. 'ಆಟಪಾಡಿ' ಎಂಬ ತಾಲೂಕಿನಲ್ಲಿ ೩೩ ಹಳ್ಳಿ, ಒಂದೇ ತಾಲೂಕಾಗಿವೆ. ೧೧ ಹಳ್ಳಿಯದು ಗುಣಧಾಳ. ಹುಬನೂರಿನ ನಾಲ್ಕು ಹಳ್ಳಿಯ ಪಟ್ಟಿಯೊಂದು. ಉಳಿದ ೩೪ ಹಳ್ಳಿಗೆ ೧೯ ತಂಡು.

ಈ ಚೆಲ್ಲಾಪಿಲ್ಲಿಯಾದ ಹಳ್ಳಿಗಳನ್ನು ನಾಲ್ಕು ತಾಲೂಕಾಗಿ ಮಾಡಿದ್ದಾರೆ; ಔಂಧ, ಆಟಪಾಡಿ, ಕುಂಡಲ, ಗುಣಧಾಳ. ಆಟಪಾಡಿಯೇ ದೊಡ್ಡದು. ಈ ೭೨ ರಲ್ಲಿ ಇನಾಮು ಹಳ್ಳಿ ಬೇರೆ.

ಈ ರೀತಿ ಅಲ್ಲಿಷ್ಟು ಇಲ್ಲಿಷ್ಟು ಮುತ್ತು ಚೆಲ್ಲಿದಂತೆ ಚದರಿ ಹೋಗಿರುವುದು ಔಂಧ್ ಒಂದೇ ಅಲ್ಲ. ಸಾಧಾರಣವಾಗಿ ದಕ್ಷಿಣ-ಸಂಸ್ಥಾನಗಳ ಹಣೆಯಬರಹವೆಲ್ಲ ಇಷ್ಟೇ. ಸಾಂಗಲಿಯಂತೂ ಉತ್ತರಕ್ಕೆ ಭೀಮಾ— ದಕ್ಷಿಣಕ್ಕೆ ತುಂಗಭದ್ರಾನದಿಗಳನ್ನು ಮುಟ್ಟಿದೆ. ಸೊಲ್ಲಾಪೂರ, ಧಾರವಾಡ, ಬೆಳಗಾಂವಿ—ಮೂರು ಜಿಲ್ಲೆಗಳಲ್ಲಿ ಹರಡಿದೆ. ಜಮಖಂಡಿಯಂತೂ ಭೀಮಾ, ಕೃಷ್ಣಾ,

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: ಮುಂಬಯಿ

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್' ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ಖಡಕವಾಡಿ, ಬೆಳಗಾಂವಿ.

ರಾಜಯೋಗಿ

ಆನಂದಕಂದರ ಐತಿಹಾಸಿಕ ಕಾದಂಬರಿ

ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮ ವಂಶದಲ್ಲಿಯ ಕೊನೆಯ ದೊರೆ ತಿನೆಯ ವಿರೂಪಾಕ್ಷನ ಕರ್ತವ್ಯ-ಚ್ಯುತಿಯ ದುಷ್ಪರಿಣಾಮ; ಅದನ್ನು ತವಿಸಲು ಹೆಣಗಿದ ರಾಜಶೇಖರ, ನರಸಿಂಹನಾಯಕ, ಹೇಮಾಂಬಿಕೆ ಇವರ ಸಾಮ್ರಾಜ್ಯನಿಷ್ಠೆಯ ಸುಪರಿಣಾಮ ಇವುಗಳ ಹೃದ-ಯಂಗಮ ಚಿತ್ರವಿದು. ಬೆಲೆ ೧-೦-೦. ಬೇಕಾದವರು ಜಯಂತಿ ಕಾರ್ಯಾಲಕ್ಕೆ ಬರೆಯಿರಿ.

ಘಟಪ್ರಭಾಗಳನ್ನು ಮುಟ್ಟಿ, ತುಂಗಭದ್ರೆಯ ಬಳಿ ಕಾಲು ಚಾಚಿದೆ. ಸಾಂಗಲಿಗೆ ಮೂರು ಜಿಲ್ಲೆಯಾದರೆ, ಜಮಖಂಡಿ ಪಂಚಪಾಂಡವರ ದ್ರೌಪದಿ; ಸಾತಾರಾ, ನಗರ್, ಸೊಲ್ಲಾಪುರ, ಬೆಳಗಾಂವಿ, ಧಾರವಾಡ ಐದು ಜಿಲ್ಲೆಗಳಲ್ಲಿ ಜಮಖಂಡಿಯ ಕಾರಭಾರ. ಮಿರಜಿ, ಕುರುಂದವಾಡ, ಕೊಲ್ಲಾಪುರ ಎಲ್ಲಾ ಹೀಗೆಯೇ.

ಮೊದಲೇ ಅಂಗೈಯಗಲ ಸಂಸ್ಥಾನಗಳು, ಹೀಗೆ ಚದರಿದ್ದರೆ ಆಡಳಿತ ಮತ್ತೂ ಬಿಗಿಯಲ್ಲವೆ? ಇವು ಪ್ರತ್ಯೇಕವಾಗಿರಲಿಕ್ಕೆ ಆಗುವ ಪೆಚ್ಚೇ ಜನರಿಗೆ ತಲೆಭಾರವಾಗಿರುವಾಗ, ಈ ಬಿಡಿ ಬಿಡಿ ಹಳ್ಳಿಗಳನ್ನು ಒಂದು ಸೂತ್ರಕ್ಕೆ ಪೋಣಿಸಿ ಆಳುವ ಪೆಚ್ಚ ಜನರ ಬೆನ್ನನ್ನೇ ಮುರಿಯುತ್ತಿದೆ. ಇಡೀ ಇಡೀಯಾಗಿ ಸಂಘಟಿತವಾದ ಪ್ರದೇಶವನ್ನು ಕೊಡದೆ, ಹೀಗೆ ಕತ್ತರಿಸಿ ಕತ್ತರಿಸಿ ಈ ದೊರೆಗಳಿಗೆ ರಾಜ್ಯ ಕೊಟ್ಟಾಗ, ಬ್ರಿಟಿಷರ ಉದ್ದೇಶವೇನಿತ್ತೋ ಗೊತ್ತಿಲ್ಲ. ಈಗಲೂ ಅವನ್ನು ಹಾಗೆಯೇ ಬಿಟ್ಟಿರುವುದರಲ್ಲಿ ಅವರ ಅಭಿಪ್ರಾಯ ವೇನೂ ಇಲ್ಲ; 'ದೇಶೀ ರಾಜ್ಯದ ಜನ ಎತ್ತಹಾಳಾದರೇನು' ಎಂಬ ಅಸಡ್ಡೆ, ನಿರ್ಲಕ್ಷ್ಯ.

ಪೊಂಧ್ ನಾಲ್ಕು ತಾಲೂಕಿನ ಆಡಳಿತ. ವರುಷಕ್ಕೆ ವರಮಾನ ೪,೩೬,೩೦೪ ರೂಪಾಯಿ. ರಾಜ್ಯ ಕೌಲು-ಕರಾರಿನದು. ಎಂದರೆ ಬ್ರಿಟಿಷರು ನಮ್ಮ ದೇಶಕ್ಕೆ ಬಂದು ಎಲ್ಲವನ್ನೂ ಆಕ್ರಮಿಸಿಕೊಳ್ಳುವ ಕಾಲಕ್ಕೆ ಪೂರ್ವದಿಂದಲೂ ಇದ್ದ ರಾಜ್ಯ. ಇಂಗ್ಲಿಷರು ತಿನಿಕ್ರಮಾಸಕಾರ ತಳೆದಾಗ, ಕೆಲವರು ರಾಜರನ್ನು ನಿರ್ನಾಮ ಮಾಡಿದರು. ಪಾಲ್ ಹೌಸಿ ಎಂಬ ವೈಸರಾಯ್ ಅದಕ್ಕಾಗಿ 'ನೀನಾದರೇನು, ನಿಮ್ಮಪ್ಪನಾದರೇನು?' ಎಂಬ ತೋಳದ ನ್ಯಾಯವನ್ನು ಸೃಷ್ಟಿಸಿ, ಅದಕ್ಕೆ Doctrine of lapse ಎಂದು ಹೆಸರಿಟ್ಟಿದ್ದ. ಕೆಲವರನ್ನು ನುಂಗಲು ಆಗಲಿಲ್ಲ. ಅಥವಾ ನುಂಗುವುದಕ್ಕಿಂತ ಬೋನಿನೊಳಗೆ ಕೂಡುವುದೇ ಲೇಸು ಎನಿಸಿರಬೇಕು. ಆ ಬೋನೇ ಕೌಲು- ಕರಾರುಗಳು—ಒಪ್ಪಂದ—ಸಂಧಿ. ಅನೇಕ ಜನ ರಾಜರು ಹಾಗೆ ಕರಾರು ಮಾಡಿಕೊಂಡು ಒಪ್ಪಂದದ ಪಂಜರದಲ್ಲಿ ಸೇರಿ-ಕೊಂಡರು. ಇದಲ್ಲದೆ ಹೊಸತಾಗಿಯೂ ಕೆಲವು ಜನ ರಾಜರು ಹುಟ್ಟಿದರು. ಬಲಿಷ್ಠರಾಗಿ ತಮಗೆ ತೊಂದರೆ ಕೊಡುತ್ತಿದ್ದವರಿಗೂ ಹಗೆಯನ್ನು ಗೆಲ್ಲಲು ನೆರವಾದವರಿಗೂ ರಾಜ್ಯವನ್ನು ಉಂಬಳಿ ಹಾಕಿ-ಕೊಟ್ಟರು. ಕೆಲವರಿಗೆ ಗೆದ್ದು ಮರಳಿ ಕೊಟ್ಟರು. ಅವಕ್ಕೆ ಸನದೀ ರಾಜ್ಯಗಳೆನ್ನುತ್ತಾರೆ. ಭೇದ ಇಷ್ಟೆ: ಕರಾರು ರಾಜ್ಯವೆಂದರೆ ಪೂರ್ವದುವು. ಸನದೀರಾಜ್ಯವೆಂದರೆ ಇವರೇ ಉಂಬಳಿ ಕೊಟ್ಟದ್ದು. ದಕ್ಷಿಣಸಂಸ್ಥಾನಗಳಲ್ಲಿ ಸೊಂಡೂರು ವಿನಾ ಸನದೀ ರಾಜ್ಯ ಯಾವುದೂ ಇಲ್ಲ. ಎಲ್ಲಾ ಕರಾರುರಾಜ್ಯಗಳೇ.

ಪೊಂಧ್ ಮೊದಲಿಗೆ ಸಾತಾರಾ ಸಂಸ್ಥಾನದ ಜಾಗೀರು. ಶಿವಾಜಿ ಮಹಾರಾಜರ ತಮ್ಮ ರಾಜಾರಾಮ ಭೋಸಲೆಯ ರಾಣಿ ತಾರಾ-ಬಾಯಿ, ತನ್ನ ಕಾಲದಲ್ಲಿ—ಸುಮಾರು ೧೭೦೦ ರಲ್ಲಿ, ಪರಶುರಾಮ ತ್ರ್ಯಂಬಕ್ ಪಂತಪ್ರತಿನಿಧಿಗೆ ಇದನ್ನು ಜಾಗೀರು ಹಾಕಿ-ಕೊಟ್ಟಳು. ಪಂತಪ್ರತಿನಿಧಿ ಎಂಬ ಬಿರುದೂ ಆಕೆ ಕೊಟ್ಟದ್ದೇ. ಆಗಿನ ದೇಶಮುಖಿ ರೀತಿಯ ರಾಜ್ಯಭಾರದಲ್ಲಿ ಪ್ರತಿನಿಧಿಗಳು ಸಹಜ ವಾಗಿದ್ದರು. ಪರಶುರಾಮ ಪಂತರೇ ಪೊಂಧ ಸಂಸ್ಥಾನದ ಮೂಲ-ಪುರುಷರು. ಪಂತರು ದೇಶಸ್ಥ ಯಜುರ್ವೇದಿ ಬ್ರಾಹ್ಮಣರು. ಈಗಿನ ರಾಜರು ಈ ವಂಶದ ಆರನೆಯ ತಲೆ.

ಈಗಿನ ದೊರೆ ೪-೧೧-೧೯೦೯ರಲ್ಲಿ ಗಾದಿಯೇರಿದರು. ಇವರದು ಜ್ಯೇಷ್ಠಸಂತತಿಯಲ್ಲ. ಇವರ ಅಣ್ಣನ ಮಗ ನಾನಾಸಾಹೇಬ ಪಂತರು ೧೯೦೫ರಲ್ಲಿ ದೊರೆಗಳಾದರು. ನಾಲ್ಕೇ ವರ್ಷದಲ್ಲಿ ಬ್ರಿಟಿಷ ಸರಕಾರ ಅವರನ್ನು ಪೀಠದಿಂದ ಸರಿಸಿ, ಇವರನ್ನು ಗದ್ದುಗೆಗೇರಿಸಿದರು. ಅಂದಿನಿಂದ ಇವರೇ ಆಳುತ್ತಿದ್ದಾರೆ. ಇವರ ಹೆಸರು ಭವಾನರಾವ ಅಥವಾ ಬಾಳಾಸಾಹೇಬ.

ಇವರಿಗೆ ಮೊನ್ನೆಮೊನ್ನೆಯವರಿಗೆ ಬರೀ 'ಮೆಹರ್ಬಾನ್' ಬಿರುದೇ ಇತ್ತು. ೧೯೩೬ರಲ್ಲಿ 'ರಾಜ' ಎಂಬ ಬಿರುದನ್ನು ಕೊಟ್ಟರು. ೧೯೩೬ರ ತನಕ ಪೊಂಧ್ ರಾಜರು ರಾಜರೇ ಆಗಿದ್ದರೂ, ಬ್ರಿಟಿಷ ಸರಕಾರದ ಕಣ್ಣಿಗೆ ಅವರು ರಾಜರಾಗಿರಲಿಲ್ಲ. ಸರಕಾರ ಅವರಿಗೆ ಬರೆಯಬೇಕಾದರೆ 'ರಾಜ' ಎಂದು ಬರೆಯುತ್ತಿರಲಿಲ್ಲ. ನಾಲ್ಕು ವರುಷದ ಕೆಳಗೆ ಇವರಿಗೇನು ಕೋಡು ಮೂಡಿತೋ, ಅವರ ಕಣ್ಣಿಗೂ ಇವರು ರಾಜರಾದರು. ಇನ್ನು ಶಾಶ್ವತ ರಾಜರೇ!

ಪೊಂಧ್ ರಾಜರು ಬ್ರಿಟಿಷ ಸರಕಾರಕ್ಕೆ ಕಪ್ಪ ಕೊಡರು. ಇವರಿಗೆ ತೋಪಿನ ಸಲಾಮೂ—ಮರ್ಯಾದಾರ್ಥವಾಗಿ ಗುಂಡು ಹಾರಿಸುವುದೂ—ಇಲ್ಲ. ಆದರೆ ಇವರಿಗೆ ವೈಸರಾಯ ದರ್ಶನದ ಹಕ್ಕುಂಟು. ಸ್ವಂತವಾಗಿ ವೈಸರಾಯರೇ ಇವರನ್ನು ಕಾಣುವ ಅನುಗ್ರಹ ಇವರ ಹಕ್ಕುಗಳಲ್ಲಿ ಒಂದು. ಅನೇಕ ರಾಜರಿಗೆ ಅದೂ ಇಲ್ಲ. ತಲೆಬಾಗಿಲ ಫಲಾಯಿತನೇ ಬಡವರ ಧಣಿ ಇದ್ದ ಹಾಗೆ, ನಮ್ಮ ರಾಜರಿಗೆಲ್ಲೋ ಜನರಿಗೆ ರೆಸಿಡೆಂಟನೇ ಪಂಚೇಶ್ವರ. ಮುಂದಿನ ಲೋಕಕ್ಕೆ ಇವರಿಗೆ ದಾರಿಯಿಲ್ಲ.

ನಾನು ಪಾಪಿಯೆ?

(ಒಂದು ಸಣ್ಣಕತೆ)

ಶ್ರೀ. ವಿ. ಎಸ್. ಮುದಕವಿ, ವಿದ್ಯಾರ್ಥಿ

★

ನನ್ನ ಗೆಳೆಯ ರಾಮು ನನ್ನ ಮೇಲಿನ ಪ್ರೀತಿಯ ಸಲುವಾಗಿ, ಒಂದು ಮೊಲವನ್ನು ತಂದುಕೊಟ್ಟದ್ದು ತಪ್ಪೊ, ಏನೋ!..ಎಂದು ಈಗಲೂ ಮನದಲ್ಲಿ ವಿಚಾರ ಮಿಂಚಿ ಮಾಯವಾಗುತ್ತಿದೆ. ಆದರೆ ನನ್ನ ಮೊದಲುಮಾತಿಗೆ ಅನುಮತಿ ಇತ್ತು, ಮೊಲವನ್ನು ತಾರದಿದ್ದರೆ ಚೆನ್ನಾಗಿತ್ತೋ ಏನೋ ಎಂದು ಮತ್ತೊಂದು ಪ್ರಶ್ನೆ ಏಳುತ್ತದೆ. ಇನ್ನೊಂದೆಂದರೆ....ಅದು..... ಬೇಡ, ಬೇಡ, ಹೇಳುವುದು ಬೇಡ !

ರಾಮು ಪ್ರಯಾಸಪಟ್ಟು ಆ ಮೊಲವನ್ನು ನನಗೆ ತಂದು ಕೊಟ್ಟದ್ದೆಂದರೆ ಒಂದು ಸಾಹಸದ ಕೆಲಸವೆಂದೇ ಹೇಳಬಹುದು. ಯಾಕೆಂದರೆ ರೈಲಿನಿಂದಾಗಲಿ, ಮೋಟಾರಿನಿಂದಾಗಲಿ ಅದನ್ನವನು ತಂದು ಒಪ್ಪಿಸಿರಲಿಲ್ಲ; ಲಗೇಜ್ ಕ್ಯಾರಿಯರ್ ಇಲ್ಲದ ಸಾಯಕಲ್ಲಿನ ಮೇಲೆ— ತನ್ನೂರಿಂದ ಇಪ್ಪತ್ತೂರು ಮೈಲುಗಳ ಮೇಲಿರುವ ನಮ್ಮೂರಿಗೆ— ಪಂಜರಸಹಿತ ತಂದು ಮುಟ್ಟಿಸಿದ್ದ; ಎಂದ ಮೇಲೆ ಇದೊಂದು ಸಾಹಸದ ಕಾರ್ಯವಾದಂತಾಗಲಿಲ್ಲವೇ?

ಮೊಲವನ್ನು ತಂದಾಕ್ಷಣವೆ ನನ್ನ ಆನಂದಕ್ಕೆ ನೆಲೆಯಿಲ್ಲದಾಯಿತು. ಆಗಲೆ ಅಮ್ಮನಿಂದ ಸ್ವಲ್ಪಚ್ಚಪಾತಿಯನ್ನು ಮಾಡಿಸಿ, ತುಪ್ಪದಲ್ಲಿ ನೆನೆಯಿಸಿ, ಒಂದು ಬಸಿಯಲ್ಲಿ ಹಾಕಿ ತಂದಿಟ್ಟೆ. ಆದರೆ ಸ್ಥಳಾಂತರಪಾದುದರಿಂದಲೊ, ಸಾಯಕಲ್ಲಿನ ಕುಣಿತದ ಆಯಾಸದಿಂದಲೊ, ಹೊಸ ಜನರ ಮಧ್ಯದಲ್ಲಿ ಬಂದುದರಿಂದಲೊ, ಮೊಲವು ಗಾಬರಿಗೊಂಡ ಚಿನ್ಹೆಗಳನ್ನು ಸೂಚಿಸುತ್ತ ಬಲೆಯ ಮೂಲೆಯಲ್ಲಿ, ಕದಲದೆ ಕಣ್ಣುಗಳನ್ನು ಬಿಳುಕಿಸದೆ ಕುಳಿತುಬಿಟ್ಟಿತು. 'ಎಷ್ಟೋ ಸಲ ಪರಿಚಯವಿಲ್ಲದ ಊರಿಗೆ ಹೋದಾಗ, ನಾನು ಕೂಡ ದಿಗಿಲುಗೊಂಡಿದ್ದೆನೆಂದಮೇಲೆ, ನಾಪ, ಆ ಮೂಕಪ್ರಾಣಿಯು ಹೀಗೆ ಮಾಡಿದ್ದು ಏನಾಶ್ಚರ್ಯ!'ಎಂದುಕೊಂಡೆ. ಆದರೂ ಚಪಾತಿಯನ್ನು ತಿನ್ನದ್ದನ್ನು ಕಂಡು ಅಸಮಾಧಾನವಾಗಿ, ಮೊಲದ ಮೇಲಿನ ಪ್ರೀತಿ ಅಳಿಸಿದಂತಾಯಿತು. ನಿಜವಾಗಿಯೂ ಅಲ್ಲ; ಆ ವೇಳೆಯಲ್ಲಷ್ಟೇ. ನಾನೂ ಚಿಕ್ಕಂದಿನಲ್ಲಿ ಪರಊರಿಗೆ ಹೋದಾಗ, ಹೀಗೆಯೆ ಆದೆಷ್ಟೋ ಸಾರೆ ಮಾಡಿದ್ದೆನೆಂಬುದು ನೆನಪಾಗಿ, ಮತ್ತೆ ಸಮಾಧಾನವನ್ನು ತಂದುಕೊಂಡೆ. ಮನೆಯ ಮುಂದಿನ ಹೂದೋಟದಲ್ಲಿರಿಸಿದರೆ ಮತ್ತಿಷ್ಟು ಭಯಗೊಳ್ಳಬಹುದೆಂದು ತಿಳಿದು, ಮನೆಯ ಹಿಂಸಿಯಲ್ಲಿಯೆ ಅದನ್ನು ಇರಿಸಿದೆ.

ಸಂಜೆಯ ವಾಯುಸೇವನೆಯನ್ನು ಮುಗಿಸಿಕೊಂಡು ಮರಳಿ ಬಂದಾಗ, ಮೊಲದ ಸಲುವಾಗಿ ತರತರದ ಹಣ್ಣುಗಳನ್ನು ತಂದಿದ್ದೆನು. ಬಲೆಯ ಬಳಿಯಲ್ಲಿ ಬಂದು, ಬಸಿಯಲ್ಲಿದ್ದ ಚಪಾತಿಯನ್ನು ನೋಡಿದೆ; ಮೊಲವು ಚಪಾತಿಯೆಲ್ಲವನ್ನೂ ತಿಂದುಬಿಟ್ಟಿತ್ತು. ಸಂಗಡ ತಂದಿದ್ದ ಹಣ್ಣುಗಳನ್ನು ಈಗ ತಿನ್ನಲಿಲ್ಲವಾದರೆ ಮತ್ತೆ ನನ್ನ ಗೆಳೆಯನ ಬಳಿಯಲ್ಲಿಯೆ ಅದನ್ನು ಕಳುಹಿಸಿ ಬಿಡಬೇಕೆಂದು ಮನದಲ್ಲಿ ಯೋಚಿಸಿದ್ದೆ; ಆದರೆ ಅದು ಹಾಗಾಗಲಿಲ್ಲ. ಹಣ್ಣುಗಳನ್ನು ಇಟ್ಟೆ, ಎಲ್ಲವನ್ನೂ ಮೊಲವು ತಿಂದಿತು. ನನ್ನ ಆನಂದವು ಮೊದಲಿಗಿಂತಲೂ ಇಮ್ಮಡಿಯಾಯಿತು.

* * * *

ನಾನು ಈಗ ದಿನಾಲು ಹಾಕುತ್ತಿರುವ ಇಷ್ಟು ತರದ ತಿನಿಸನ್ನು, ತನ್ನ ಹುಟ್ಟಿದೆಡೆಯಾದ ಅಡವಿಯಲ್ಲಾದರೂ ಮೊಲವು ತಿನ್ನುತ್ತಿದ್ದಿತೋ ಇಲ್ಲವೊ ಸಂಶಯ. ಮುಂಜಾನೆ ಎದ್ದೊಡನೆ ನೆನೆಗಡಲೆ; ಮುಂದೆ ತಾಸಿನ ಮೇಲೆ ಹಣ್ಣು; ಆ ಮೇಲೆ ಹಾಲು; ಊಟವಾಡುವ ವೇಳೆಗೆ ನಾನು ಊಟವಾಡುವ ಆಹಾರ; ಆ ಮೇಲೆ ಕರಿಕೆ. ಹೀಗೆ ತಾಸಿಗೊಂದು ತರದ ತಿನಿಸನ್ನು ತಿನಿಸು-

★

ಮೊಲವನ್ನು ಸಾಕಿದುದೊಂದು ದೊಡ್ಡ ಸಮಸ್ಯೆಯೊಗಿಯೆ ಪರಿಣಮಿಸಿತು. ಪಾರತಂತ್ರ್ಯದಲ್ಲಿ ಇರಿಸುವುದು ಒಳ್ಳೆಯದಲ್ಲವೆಂದು ಕಷ್ಟಪಟ್ಟು ಕಾಡಿಗೆ ತೆಗೆದುಕೊಂಡು ಹೋದರೆ, ಒಳ್ಳೆಯ ಕಾರ್ಯಕ್ಕೆ ಕಹಿಫಲ! ಕೆರೆ-ಬಾವಿಗಳೆರಡರ ನಡುವೆ ನಿಂತು ದಾರಿಯನ್ನು ಹುಡುಕ ತೊಡಗಿದಾಗ, ಎತ್ತ ಅಡಿಯಿಟ್ಟರೂ ಸೌಖ್ಯವೆ ಇರದು!

★

ತ್ತಿದ್ದೆ. ದಿನದ ಅರ್ಧಭಾಗಕ್ಕಿಂತಲೂ ಹೆಚ್ಚಿನ ಹೊತ್ತನ್ನು ಅದರೊಡನೆ ಆಟವಾಡಲು ಕಳೆಯುತ್ತಿದ್ದೆ. ಅದರ ಬಣ್ಣವು ಬಿಳಿಯದಾಗಿ ನೋಡುಗರಿಗೆ ಆನಂದದ ಮುದ್ದೆಯಂತೆ ಕಾಣುತ್ತಿತ್ತು. ಅದರ ಕಣ್ಣುಗಳು ಕೆಂಪಾಗಿ, ಹವಳದಂತೆ ಕಂಗೊಳಿಸುತ್ತಿದ್ದುವು. ಹಿಂಗಾಲುಗಳ ಮೇಲೆ ನಿಂತು, ಮುಂಬದಿಯಲ್ಲಿ ಅಲುಗಾಡಿಸುತ್ತಿದ್ದ ಅದರ ಮುಂಗಾಲುಗಳು, ನನ್ನನ್ನು ಚೆನ್ನಾಟಿಕೆಯನ್ನಾಡಲು ಕರೆಯುವಂತೆ ಕಾಣಿಸುತ್ತಿದ್ದುವು. 'ನೀನು ಊಟಮಾಡುವ ಕಾಲದಲ್ಲಿ ನನಗೊಂದು ತುತ್ತನ್ನಿಟ್ಟಾಗ, ನಾನು ನಿನ್ನ ಬೆರಳನ್ನು ಕಚ್ಚದರೂ ಕಣ್ಣು ಕೆಂಪಿಸದೆ ಸಹಿಸಿಗುತ್ತಿದ್ದು, ಈಗ ನೀನು ಒಂದು ಪ್ರೀತಿಯ ಪೆಟ್ಟನ್ನಿಕ್ಕಲು ನಾನೇಕೆ ಸಿಟ್ಟಿನಿಂದ ನಿಟ್ಟಿಸಬೇಕು?' ಎನ್ನುವಂತೆ, ಮುಖಜರ್ಯದಿಂದ ಗೆಳೆತನದ ಭಾವವನ್ನು ಸೂಚಿಸುತ್ತಿತ್ತು. ಈ ಪರಿಯಾಗಿ ಅದರ ಒಡನಾಟವು, ನನ್ನ ಮನಸ್ಸನ್ನು ಹೊಕ್ಕು ಕನ್ನವನ್ನು ಭದ್ರಪಡಿಸಿದಂತೆ ಮಾಡುತ್ತಿತ್ತು.

ಪ್ರತಿದಿನವೂ ಮೊಲದ ಮೇಲಿನ ನನ್ನ ಪ್ರೇಮವು ಹೆಚ್ಚುತ್ತಲೆ ಇತ್ತು. ನನ್ನ ಗೆಳೆಯನ ನೆನಪು ಅವನು ಪ್ರತ್ಯಕ್ಷ ಬೆಟ್ಟಿಯಾದಾಗಷ್ಟೇ ಆಗುತ್ತಿತ್ತು; ಆದರೆ ಈಗ ಪ್ರತಿನಿತ್ಯದಲ್ಲಿಯೂ ಅವನ ನೆನಪು ಆಗುವುದು; ಮೊಲವು ನನ್ನಲ್ಲಿ ಬಂದಂದಿನಿಂದ ರಾಮು ನನ್ನಲ್ಲಿಯೆ ಇದ್ದಂತೆ ಆಗಿದೆ.

ಒಂದು ಸಲ ನಮ್ಮ ಮನೆಗೆ ಬೇರೆಯೂರಿನ ಕೆಲವು ಜನರು ಬಂದಿದ್ದರು. ಅವರು ನಮ್ಮ ಸಂಬಂಧಿಕರೆ. ಮೊಲವನ್ನು ಕಂಡೊಡನೆ ಅದರ ಬಳಿ ಬಂದು ಕುಳಿತು "ಇದನ್ನು ಎಂದು ತಂದಿರಿ? ಎಷ್ಟು ಸುಂದರವಾಗಿದೆ! ಇನ್ನೂ ಎಳಕವಾಗಿದ್ದಂತೆ ಕಾಣುತ್ತದೆ...." ಎಂದು ಮಾತನಾಡತೊಡಗಿದರು. ಆದರೆ ಅದು ಧಡಪಡ ಬಲೆಯಲ್ಲಿ ಓಡಾಡಹತ್ತಿತು. ಏನೊಂದನ್ನೂ ಅರಿಯದವನಾದೆ. ಮುಂದೆ ಕೆಲವು ವೇಳೆಯ ತರುವಾಯ, ಮೊಲವು ಸುಮ್ಮನೆ ತೇಕುತ್ತ ನಟ್ಟ ನಡುವೆ ಕುಳಿತಿತು, ಸ್ಥಳ ಬಿಟ್ಟು ಕದಲಲಿಲ್ಲ. ಪಂಜರದ ಸಮೀಪಕ್ಕೆ ಕೈಯನ್ನು ಒಯ್ಯಲು ಮತ್ತೆ ಧಡಪಡಿಸಿ ಓಡಾಡತೊಡಗಿತು. ಅಪರಿಚಿತರು ಬಂದದ್ದರಿಂದ ಗಾಬರಿಯಾಗಿದೆಯೆಂದು ತಿಳಿದುಕೊಂಡೆ, ಅದು ನಿಜವಾಗಿಯೂ ಇತ್ತು. "ಮೊಲವು ಗಾಬರಿಗೊಂಡಿದೆ" ಎಂದು ಹೇಳಿ, ಅಲ್ಲಿ ನೆರೆದ ಜನರನ್ನು ಬೇರೆ ಸ್ಥಳಕ್ಕೆ ಕರೆದೊಯ್ದೆನು. ಆ ಮೇಲೆ ನಾನೊಬ್ಬನೆ ಅದರ ಬಳಿಯಲ್ಲಿ ಕುಳಿತೆನು. ಮತ್ತೆ ಅದೇ ಹಾಡೇ! ಹಾಗೆಯೆ ಕುಳಿತು ಬಿಟ್ಟೆ. ತನ್ನಷ್ಟಕ್ಕೆ ತಾನೇ ಸುಮ್ಮನಾಯಿತು. ಅದೇಕೋ ಕಣ್ಣುಗಳ ಬಳಿಯಲ್ಲಿ ಘಾಯವಾಗಿತ್ತು. ರಕ್ತವು ಹನಿಹನಿಯಾಗಿ ಬೀಳತೊಡಗಿತ್ತು. "ಪಾಪ! ಇಂದು ಇವರೇಕೆ ಬಂದರೊ!" ಎಂದು ಮನದಲ್ಲಿಯೇ ಎಂದುಕೊಂಡೆ.

* * *

ಅಂದು ನನಗೆ ಬಹಳ ವ್ಯೆಷೆಯಾಯಿತು. ಅದರ ಬಳಿಯಿಂದ ಕದಲಲೇ ಇಲ್ಲ. ಯಾವ ಕೆಲಸಕ್ಕೂ ಹೋಗಲು ಮನಸ್ಸಾಗಲೊಲ್ಲದು. ತಲೆಯಲ್ಲಿ ವಿಚಾರಗಳ ತರಂಗಗಳು ಒಂದರ ಮೇಲೆ ಒಂದು ಏಳಲುತೊಡಗಿದುವು. "ಈ ನಿರಪರಾಧಿ ಪ್ರಾಣಿಯನ್ನು ಪಂಜರದಲ್ಲಿಡುವುದು ಉಚಿತವೆ? ಸೃಷ್ಟಿನಿಯಾಮಕನು ಸುಂದರವಸ್ತುಗಳನ್ನು ಬಲೆಯಲ್ಲಿದ್ದು, ಸುಖವಾಗಿ ಬಂಧನದಲ್ಲಿ ಬಳಲಿ ಬಾಳಲೆಂದು ನಿರ್ಮಿಸಿರುವನೇ? ನವನಾಗರಿಕತೆಯನ್ನು ಅರಿತು ಬೆರೆತ ಜನರಿಗೆ, ಈ ರೀತಿ ಇವನ್ನು ದಾಸ್ಯದಲ್ಲಿ ಕೊರಗಿಸುವುದು ಯುಕ್ತವೇ? ಮಾನವನು ಈ ಪರಿಯಾಗಿ ಬಂಧನದಲ್ಲಿದ್ದು ಜೀವಿಸುವುದನ್ನು ಸಹಿಸುವನೇ? ಸ್ವಾತಂತ್ರ್ಯವು ಜನ್ಮಸಿದ್ಧವಾದ ಹಕ್ಕಲ್ಲವೇ?" ಹೀಗೆ ಪ್ರಶ್ನೆಗಳ ತರುವಾಯ ಪ್ರಶ್ನೆಗಳು ಗಾಳಿಯ ಹೊಡೆತಕ್ಕೆದ್ದ ತೆರೆಗಳಂತೆ ಮನದೆದುರು ಬರತೊಡಗಿದುವು. 'ಬೇಡ, ಬಂಧನದಲ್ಲಿ ಬಾಳಿಸುವುದು ಬೇಡ!' ಎಂದೆನಿಸಿತು. ಪಂಜರದಲ್ಲಿ ಇದ್ದದ್ದು ಬಾಹ್ಯದೃಷ್ಟಿಗೆ ಮಾತ್ರ ಮೊಲವಾಗಿದ್ದರೂ ನಿಜವಾಗಿಯೂ ಮೊಲದ ಸ್ಥಳದಲ್ಲಿ ನಾನೇ ಇದ್ದಂತಿದ್ದೆ. ಮೊಲವು ಅನುಭವಿಸಿದುದನ್ನು ನಾನೇ ಅನುಭವಿಸುತ್ತಲಿದ್ದೆ.

ಕಡೆಗೆ ಮೊಲವನ್ನು ನಿರ್ಜನವಾದ ಅರಣ್ಯದಲ್ಲಿ ಬಿಟ್ಟು ಬರೆ ಬೇಕೆಂದು ನಿರ್ಧರಿಸಿದೆನು. ಅದರಂತೆಯೆ ಅಮ್ಮನಿಗೂ ತಿಳಿಸಿದೆನು. ಅಮ್ಮನು ಕೋಪಿಸಿಕೊಂಡಂತೆ ಕಾಣಿಸಿತು; ಉಪಾಯವಿಲ್ಲ!

* * *

ಅಮ್ಮನು ಬೆಳಗುಮುಂಜಾನೆ ಐದು ಘಂಟೆಯ ಸಮಯಕ್ಕೆ ಎದ್ದಳು. ನಮ್ಮ ಅಮ್ಮನ ವಯಸ್ಸು ೭೫ ವರ್ಷಕ್ಕೆ ಏರಿಕ್ಕಿದ್ದರೂ, ಕೋಳಿ ಕೂಗುವ ಮುನ್ನ ಏಳುವುದನ್ನು ತಪ್ಪಿಸಿರಲಿಲ್ಲ. ನಾನು ಅನೇಕ ಸಾರೆ 'ಇಷ್ಟು ಬೇಗನೆ ಯಾಕೆ ಏಳುವದಮ್ಮಾ!' ಎಂದು ಕೇಳುತ್ತಿದ್ದೆ. ಅದಕ್ಕೆ ಆಕೆ "ಬೇಗನೆ ಏಳದಿದ್ದರೆ ಸೊಗಸೇ ಎನಿಸುವುದಿಲ್ಲ!" ಎಂದು ಉತ್ತರ ಕೊಡುತ್ತಿದ್ದಳು. ಅಂದು ನಾನೂ ಅಮ್ಮನು ಏಳುವ ಹೊತ್ತಿಗೆ ಎದ್ದು ಬಿಟ್ಟಿದ್ದೆ. ಯಾಕೆಂದರೆ ಬೇಗನೆ ಹೋಗಿ ಮೊಲವನ್ನು ಅಡವಿಯಲ್ಲಿ ಬಿಡಬೇಕೆಂಬ ವಿಚಾರ ಮನದಲ್ಲಿ ಕಟಿಯುತ್ತಿತ್ತು.

ಮನೆಯಲ್ಲಿ ಜನರು ಬಂದದ್ದರಿಂದಲೂ, ಅಮ್ಮನು 'ಮುಂಜಾನೆ ಚಳಿಯಲ್ಲಿ ಹೋಗಬೇಡ; ಇಳಿಹೊತ್ತಿನ ಸಮಯಕ್ಕೆ ಹೋಗಿ ಬಿಟ್ಟು ಬಾ ಮೆಯಂತೆ!' ಎಂದು ಒತ್ತಾಯ ಮಾಡಿದುದರಿಂದಲೂ ಮುಂಜಾನೆ ಬಿಟ್ಟುಬರುವುದು ತಪ್ಪಿದಂತಾಯಿತು. ಅಂದು ಮುಂಜಾನೆ ಅತಿ ಚಳಿಯೆಂದು ಎಲ್ಲರೂ ಕಂಬಳಿಯ ಮೇಲೆ ಕಂಬಳಿಯನ್ನು ಹೊತ್ತಿದ್ದರೂ ನನಗೆ ಚಳಿಯೇ ಆಗುತ್ತಿರಲಿಲ್ಲ. "ಅಮ್ಮಾ, ಚಳಿ ಇಲ್ಲ, ಹೋಗುತ್ತೇನೆ!" ಎಂದರೂ ಆಕೆ ಕೇಳಲಿಲ್ಲ. ಮೊಲವು ಮನೆಯಲ್ಲಿ ಪೆಚ್ಚು ವೇಳೆ ಇರುವುದು ಅಮ್ಮನಿಗೂ, ಬೇಗನೆ ಪಂಜರದಿಂದದನ್ನು ಮುಕ್ತಮಾಡಿಸುವುದು ನನಗೂ ಬೇಕಾಗಿತ್ತು. ಕಡೆಯಲ್ಲಿ, ನನ್ನ ಮನದ ಹೆಚ್ಚಿನ ಒಲವು ಅಮ್ಮನ ಇಚ್ಛೆಗೆ ವಿರುದ್ಧವಾಗಿದ್ದರೂ ಅದೇಕೋ ತಿಳಿಯೆ .... ಆಕೆಯಂತೆಯೆ ಸಮ್ಮತಿಯನ್ನಿತ್ತೆನು. ಒಂಬತ್ತು ಘಂಟೆಯ ಗಾಡಿಗೆ ಬಂದಿದ್ದ ಜನವೆಲ್ಲ ಹೊರಟುಹೋಯಿತು.

ಅಮ್ಮನು ನೆರೆಹೊರೆಯಲ್ಲಿದ್ದ ಜನರಿಗೆಲ್ಲ ಮೊಲದ ಸುದ್ದಿಯನ್ನು ಬಣ್ಣಹಚ್ಚಿ ಹೇಳಿಬಿಟ್ಟಿದ್ದಳು. 'ಇಂದು ಅದನ್ನು ಯಾಕೆ ಅಡವಿಯಲ್ಲಿ ಬಿಟ್ಟು ಬರುವುದು?' ಎಂದು ಜನರು ಕೇಳಿದಾಗ, ಏನೆಂದು ಉತ್ತರ ಕೊಟ್ಟಿದ್ದಳೋ ನಾನರಿಯೆ!

ನಾನು ಊಟ ಮಾಡಿ ಮೊಲದ ಬಳಿಯಲ್ಲಿಯೆ ಆಟವಾಡುತ್ತಾ ಕುಳಿತಿದ್ದೆ. ಎದುರಿನ ಮನೆಯ ಯೆಲ್ಲನು ನಮ್ಮ ಮನೆಗೆ ಬಂದು "ರಾಯರೆ! ಮೊಲಾ ಬಿಟ್ಟ ಬರತೀರಂತ ಹೌದ್ರಿ?" ಎಂದನು.

"ಹೌದು" ಎಂದೆ.

"ಮೊಲಾ ಬಿಟ್ಟ ಬರಬ್ಯಾಡ್ರಿ! ನನಗ ಕೊಡ್ರಿ, ನಾ ಸಾಕತೇನಿ!" ಎಂದ.

"ನೀನು ಸಾಕುವುದೂ ಬೇಡ, ನಾನು ಕೊಡುವುದೂ ಬೇಡ!" ಎಂದೆ.

"ನಿನಗೆ ಬೇಡವಾಗಿದ್ದರೆ ಅವ್ವನಿಗಾದರೂ ಕೊಡು; ಸುಮ್ಮನೆ ಯಾಕೆ ಅಡವಿಯಲ್ಲಿ ಬಿಟ್ಟುಬರುತ್ತೀ? ಅವನೇನು ಕೊಯ್ದುಕೊಂಡು ತಿನ್ನುವುದಿಲ್ಲ." ಎಂದು ಅಮ್ಮ ಹೇಳಿದಳು.

"ನನ್ನ ಆಣೆಂದ್ರೂ ತಿನ್ನೂದಿಲ್ಲ್ರಿ; ನೋಡೀರೇ ನೋಡ್ರಿ!" ಎಂದು ಯಲ್ಲನು ನುಡಿದನು.

"ನೋಡುವುದೂ ಬೇಡ, ಬಿಡುವುದೂ ಬೇಡ! ನಿನ್ನಲ್ಲಿಯಾದರೂ ಬಲೆಯಲ್ಲೇ ಇರುವುದು, ನನ್ನಲ್ಲಾದಲೂ ಬಲೆಯಲ್ಲೇ ಇರುವುದು. ಇಲ್ಲ ಇಲ್ಲ; ಕೊಡುವುದಿಲ್ಲ ಹೋಗು!" ಎಂದು ಹೇಳಿ ಕಳುಹಿದೆನು.

* * *

ಮಧ್ಯಾಹ್ನದ ೩॥ ಘಂಟೆಯಾಗಿರಬಹುದು. ಸೂರ್ಯನು ಇನ್ನೂ ತನ್ನ ಮಂದಕಿರಣಗಳನ್ನು ಬಿಡುತ್ತಿರಲಿಲ್ಲ. ಒಂದು ಕೈಚೀಲದಲ್ಲಿ ಮೊಲವನ್ನು ಹಾಕಿ ಬಾಯನ್ನು ಕಟ್ಟಿದೆನು. ಉಸುರಾಡಿಸಲು ಹವೆಯು ಸಲುವಾಗಿ ಕತ್ತರಿಯಿಂದ ಅಲ್ಲಲ್ಲಿ ಸಣ್ಣ ಸಣ್ಣ ತೂತುಗಳನ್ನು ಮಾಡಿದೆನು. ಅಮ್ಮನ ಕಣ್ಣುಗಳಲ್ಲಿ ನೀರುಗಳು ಧಾರೆಯಾಗಿ ಹರಿಯಹತ್ತಿದುವು. ತನ್ನಿಂದ ತಾನೇ ನನ್ನ-ಕಣ್ಣುಗಳಲ್ಲಿಯೂ — ಕಂಬನಿಯುದುರ ತೊಡಗಿತು. ಕಟುಹೃದಯದವನಂತೆ ನಿರ್ದಯಿಯಂತೆ, ಪಾಷಾಣಭೇದಿಯಂತೆ ನಾನು ಕಾಡಕಡೆಗೆ ಹೊರಟೆನು. ಅಮ್ಮನು ತಲಿಬಾಗಿಲಿಗೆ ಒಂದು ನಿಂತು, ಕಾಣದ ಹಾಗಾಗುವ ವರೆಗೂ ಮೂಕನೋಟವನ್ನಿಟ್ಟು, ನಾನು ಹೋಗುವುದನ್ನು ನಿಟ್ಟಿಸಿಯೇ ನಿಟ್ಟಿಸುತ್ತಿದ್ದಳು.

ರಾಜಮಾರ್ಗವನ್ನು ಬಿಟ್ಟು ಹೊಸ ಹಾದಿಯನ್ನು ಕಲ್ಪಿಸಿ ನಡೆದೆನು. ದಾರಿಯನ್ನು ತುಳಿದೇ ತುಳಿದೆನು. ಸೂರ್ಯನ ಮಂದಕಿರಣಗಳು ಬೀಳತೊಡಗಿದುವು. ಪಕ್ಷಿಗಳ ಕಿಲಕಿಲಾಟವು ಪ್ರಾರಂಭವಾಯಿತು. ಸುಳಿಗಾಳಿಯು ಎಲೆಗಳ ಬಳಿ ಸುಳಿದಾಡಹತ್ತಿತ್ತು. ಸೃಷ್ಟಿಯು ಸೌಂದರ್ಯದ ಉಡುಪನ್ನು ತೊಡುವಂತೆ ಕಾಣಿಸಿತು. ಹಾಗೆಯೆ ಮುಂದಕ್ಕೆ ಸಾಗಿದೆನು. ಮನೆಗೆ ತಿರುಗಿ ಬರುವ ಮಾರ್ಗದ ಪರಿವೆಯೆ ನನಗೆ ಇರಲಿಲ್ಲ. ಕಲ್ಲು-ಮುಳ್ಳುಗಳ ತೊಳಿತದ ಅರಿವೇ ಇರಲಿಲ್ಲ. ಹಾಗೆಯೇ ಉದ್ದಕ್ಕೆ ಸಾಗಿದೆನು. ಬಲವಾಗಿ ಬೆಳೆದ ಮರಗಳು, ದಟ್ಟವಾಗಿ ಹಬ್ಬಿದ ಕಂಟಿಗಳು, ಕೊರಕಲುಗಳು, ಅಲ್ಲಲ್ಲಿ ಬಿದ್ದ ಬಂಡೆಗಲ್ಲುಗಳು. ಗಿಡಗಳ ಮಧ್ಯದಿಂದ ಪಾರಾಗಿ ಬಾರದ ಹೊಂಬಿಸಿಲು, ತುದಿಯಲ್ಲಿ ಕುಳಿತು ಇಣುಕುತ್ತಿರುವುದು.

"ಇನ್ನು ಮುಂದುವರಿಯುವುದು ಸಾಕು; ಭಯಾನಕ ದೃಶ್ಯ! ಇದುನೆ ಇದಕ್ಕೆ ಯುಕ್ತ ವಸತಿಸ್ಥಾನ!" ಎಂದು ಚೀಲದ ಬಾಯನ್ನು ತೆರೆದು ನೆಲದ ಮೇಲಿಟ್ಟೆ; ಟಣ್ಣನೆ ಜಿಗಿದದ್ದೇ ಮೊಲವು ಕಂಟಿಯೊಡನ್ನು ಸೇರಿತು. ಕಂಟಿಯಲ್ಲಿ ಕುಳಿತು ನನ್ನನ್ನು ನೋಡಹತ್ತಿತು. ಅದನ್ನೇ ನೋಡುತ್ತಾ ನಾನು ಬದಿಗಿದ್ದ ಕಲ್ಲೊಂದರ ಮೇಲೆ ಕುಳಿತೆನು. ಸ್ವಲ್ಪ ಹೊತ್ತಾದ ಮೇಲೆ "ಗುಡ್ ಬಾಯ್" ಎಂದು ಹೊರಳಿ ನಿಂತೆ. ಎದೆಯೊಡೆದು ನೀರಾಯಿತು; ಕೈಕಾಲುಗಳು ಜಲಿಸಲು ಬಾರದಾದುವು; ಕಣ್ಣಿಗೆ ಕತ್ತಲು ಕವಿಯಿತು. ಇದಾವ ದೃಶ್ಯ! ಇಬ್ಬರು ಆ ತುದಿಯಲ್ಲಿ!.. ಎರಡು ಕೈಗಲ್ಲಳತೆಯಲ್ಲಿ!.. ಕೈಯಲ್ಲಿ ಉದ್ಯವಾದ ಗಂಟುಬಡಿಗೆ!— ಬೇಡರು ಧರಿಸುವ ಉಡುಪು! ಉಪಾಯಗಾಣದೆ, ನನ್ನನ್ನೇ ನೋಡುತ್ತ ಕುಳಿತ ಮೊಲಕ್ಕೆ ನಾನೇ ಒಂದು ಕಲ್ಲನ್ನು ಎಸೆದೆನು. ಒಳಕ್ಕೆ ಓಡಿ ಹೋಯಿತು. 'ಪಾರಾಯಿತು' ಎಂದುಕೊಂಡೆ. ನಾನು ನನ್ನ ಹಾದಿಯನ್ನು ಹಿಡಿದೆ. ಬೇಡರ ಬಳಿಗೆ ನಾನು ಬರುವುದರಲ್ಲಿಯೆ, ಮೊಲವು ನನ್ನ ಬಳಿಯಲ್ಲಿ ಬರಬೇಕೆಂಬ ಹಂಬಲದಿಂದ ಸುತ್ತುವರಿದು, ನಿಂತಿದ್ದ ಬೇಡನನ್ನು ನಾನೆಂದೇ ಭಾವಿಸಿ ಮುಂದೆ ಬಂದಿತು. ಬೇಡನು ತಡಮಾಡದೆ ಕೈಯಲ್ಲಿಯ ಕೋಲಿನಿಂದ ಬಲವಾಗಿ ಒಂದು ಏಟನ್ನು ಮೊಲದ ನೆತ್ತಿಗೆ ಇಕ್ಕಿದನು.

"ಹೊ! ಕೊಲ್ಲಬೇಡ!" ಎನ್ನುವುದರಲ್ಲಿಯೆ, ತಲೆಯನ್ನು ಒಡೆದುಕೊಂಡ ಮೊಲವು ಒದ್ದಾಡುತ್ತ ಬಿದ್ದುಬಿಟ್ಟಿತು. ಮೊಲಕ್ಕೆ ಇಕ್ಕಿದ ಏಟನ್ನು ನನಗೂ ಇಕ್ಕಿದಂತಾಯಿತು. ನಾನೂ ಬಿದ್ದುಬಿಟ್ಟೆ. ಬದಿಯಲ್ಲಿದ್ದ ಬಂಡೆಗೆ ತಲೆ ಅಪ್ಪಳಿಸಿತು; ಮತ್ತೆ ಹಾಗೆಯೆ ಎದ್ದೆನು. ಮೊಲವನ್ನು ನೋಡುವುದರಲ್ಲಿ ಮೊಲವೂ ಇರಲಿಲ್ಲ; ಬೇಡರೂ ಇರಲಿಲ್ಲ.

"ಮೊಲದ ರಕ್ಷಣೆಯ ಸಲುವಾಗಿ, ಅದರ ಸ್ವಾತಂತ್ರ್ಯದ ಸಲುವಾಗಿ ಇಷ್ಟು ಶ್ರಮ ವಹಿಸಿದ್ದು ವ್ಯರ್ಥವಾಯಿತು. ಅದರ ಪ್ರಾಣಕ್ಕೆ ಯಾರು ಮೂಲವಾದರು? ನಾನಲ್ಲವೆ? ಅದಕ್ಕಾಗಿ ನಾನು ಪಾಪಿಯಲ್ಲವೆ? ಅದಕ್ಕೆ ಈ ಸ್ಥಿತಿ ಬಂದೊದಗುವುದನ್ನು ಅರಿತಿದ್ದರೂ, ಮೊಲವನ್ನು ಬಲೆಯಲ್ಲಿ ಬಳಲಿಸಲು ನನ್ನ ಮನಸ್ಸು ಒಪ್ಪುತ್ತಿತ್ತೇ? ಇಲ್ಲ; ಇಲ್ಲ! ದಾಸ್ಯದಲ್ಲಿ ಬಳಲುವುದಕ್ಕಿಂತಲೂ ಸಾಯುವುದು ಲೇಸಂತೆ! ಹಾಗಾದರೆ ನಾನು ಪಾಪಿಯೆ?*

---

* ಹೈಸ್ಕೂಲ್ ವಿದ್ಯಾರ್ಥಿಯೊಬ್ಬನು ಬರೆದ ಒಳ್ಳೆಯ ಕತೆಯಿದೊಂದು ಕಥಾವಸ್ತು ವಿದ್ಯಾರ್ಥಿಗೆ ಸಹಜವಾದುದಾಗಿದ್ದು ರಸವತ್ತಾಗಿದೆ. ಮತ್ತೆ ಮತ್ತೆ ಆತ-ಅಕೆಯರ ಪ್ರೇಮದ ಕಥಾವಸ್ತು ವನ್ನೆ ಆಯ್ದುಕೊಳ್ಳುತ್ತಲಿರುವ ವಿದ್ಯಾರ್ಥಿಲೇಖಕರಿಗೆ ಈ ಕಥೆ ಮಾದರಿಯಾಗಿದೆ ಎನ್ನಬಹುದು.

ಸಂ. ಜ.

ಹೊಗಳು-ತೆಗಳು

ಶ್ರೀ. ರಾ. ಭ. ಹಾಸಣಗಿ

●

ಇಂದು ವಿಮರ್ಶಕರು ತಮಗೆ ಬೇಕಾದ ಕಬ್ಬಿಣವನ್ನು ಬಂಗಾರವನ್ನಾಗಿ ಮಾಡಿ ಹೊಗಳಿ ಬಣ್ಣಿಸುವರು; ಬೇಡವಾದ ಬೆಲ್ಲವನ್ನು ಬೇವಿಗಿಂತ ಕಹಿಯೆಂದು ಹೇಳಿ ತೆಗಳಲು ಸಿದ್ಧರಾಗುವರು. ಈ ಹೊಗಳಿಕೆ-ತೆಗಳಿಕೆಗಳ ಹಿಂದೆ ಅಡಗಿಕೊಂಡಿರುವ ಮನೋಭಾವಗಳೆಂತಹವು?

★

ಹೊಗಳು-ತೆಗಳುಗಳೆಂದರೆ ಹೊಗಳುವುದು, ಬೈ(ನಿಂದಿಸು)ವುದು ಎಂದರ್ಥ. ತಲೆಬರೆಹದಲ್ಲಿರುವ '**ಹೊಗಳು-ತೆಗಳು**' ಎಂಬುದನ್ನೋದಿದ ಕೂಡಲೆ, ಹೊಗಳು-ತೆಗಳುಗಳ ಉಪದೇಶವನ್ನಾಗಲಿ ಖಂಡನೆಯನ್ನಾಗಲಿ ಈ ಬರೆಹದಲ್ಲಿ ಹೇಳಿದೆಯೆಂದು, ಪ್ರಥಮತಃ ಯಾರಿಗಾದರೂ ಎನಿಸಬಹುದು. ಆದರೆ ಇದರಲ್ಲಿ ಅವುಗಳ ಉಪದೇಶವನ್ನಾಗಲಿ ನಿಂದೆಯನ್ನಾಗಲಿ ಮಾಡುವ ಹವ್ಯಾಸಕ್ಕೆ ಹೋಗಿಲ್ಲ. 'ಜಗತ್ತಿನಲ್ಲಿ ನಡೆಯುವ ಹೊಗಳು-ತೆಗಳುಗಳು ಯಾವ ಮೂಲಕವಾಗಿ ಹೊರಬೀಳುವುವೊ ಅದರ ನಿದಾನವೇನು?' ಎಂಬುದನ್ನು ವಿಚಾರಿಸಲು ಪ್ರವರ್ತಿಸಲಾಗಿದೆ. ಅದರ ಮೂಲಕಾರಣವನ್ನು ಹೇಳುವುದೇ— ಅದರ ತೊಡಕನ್ನು ಬಿಡಿಸುವುದೇ ಪ್ರಕೃತ ಲೇಖನದ ಪ್ರಥಮೋದ್ದೇಶ; ಮುಖ್ಯೋದ್ದೇಶ.

ಮಾನವ ಪ್ರಪಂಚದಲ್ಲಿ ಹೊಗಳು-ತೆಗಳುಗಳನ್ನು ಮಾಡದವರೂ ತಿಳಿಯದವರೂ ಅದೆಷ್ಟು ಜನರು ಇದ್ದಾರೆ? ಅಥವಾ ಯಾರಿದ್ದಾರೆ? ಪ್ರತಿಯೊಬ್ಬ ಮನುಷ್ಯನೂ ಯಾವುದಾದರೊಂದು ಕಾರಣದಿಂದ ಒಂದನ್ನು ಹೊಗಳುತ್ತಾನೆ; ಇನ್ನೊಂದನ್ನು ತೆಗಳುತ್ತಾನೆ. ಇದು ಎಲ್ಲೆಲ್ಲಿಯೂ ಕಾಣಬರುವ ವಿಷಯ. ಇದಕ್ಕೆ ಜಾತಿಭೇದವಿಲ್ಲ; ವರ್ಣಭೇದವಿಲ್ಲ; ಸ್ತ್ರೀ-ಪುರುಷರೆಂಬ ಭೇದವಿಲ್ಲ; ಬಾಲ-ವೃದ್ಧರೆಂಬ ತಾರತಮ್ಯವಿಲ್ಲ. ಅಖಿಲಬ್ರಹ್ಮಾಂಡದೊಳಗೆ ಅನಾದ್ಯನಂತವಾಗಿ—ವಿಶ್ವವ್ಯಾಪಿಯಾಗಿ—ಹಿಂದು ಮುಂದಿನ ಅರಿವಿಲ್ಲದೆ ಅವ್ಯಾಹತವಾಗಿ ಈ ಹೊಗಳು-ತೆಗಳುಗಳು ನಡೆದಿವೆ. ಇಂತಹ ಹೊಗಳು-ತೆಗಳುಗಳಿಗೆ ಮೂಲವಾವುದು?

ಈ ಹೊಗಳು-ತೆಗಳುಗಳಿಂದ ದೂರವಿರುವುದೆಂದರೆ ಎಂತೆಂತಹ ಪಂಡಿತರಿಂದಲೂ ಸಾಧ್ಯವಾಗಲಿಲ್ಲ. ಇದು ಎಂತಹ ಮೇಧಾವಿಗಳನ್ನೂ ಬಿಟ್ಟಿಲ್ಲ; ಜ್ಞಾನಿ-ತತ್ತ್ವಜ್ಞಾನಿಗಳನ್ನೂ ಉಳ್ಳಗೆಡಿಸಿಲ್ಲ. ಮಹಾಮಹಿಮರೆಂದು ಪ್ರಸಿದ್ಧರಾದವರನ್ನು ಕೂಡ ಎಡೆಬಿಡದೆ ತಬ್ಬಿಕೊಂಡಿದೆ; ಅಥವಾ ಅವರೆಲ್ಲರೂ ಇದನ್ನು—ಈ ಮಾಯಾವಿತಾನವನ್ನು ಹೊರಸೂಸುವ ಹೊಗಳು-ತೆಗಳುಗಳನ್ನು—ತಬ್ಬಿಕೊಂಡಿದ್ದಾರೆ; ಬಿಗಿಯಾಗಿ ಎಡೆಬಿಡದೆ ಅವಚಿಕೊಂಡಿದ್ದಾರೆ. ಯಾವ ಮತ, ಪಂಥ, ಸಿದ್ಧಾಂತ-ಕಾದ್ವಾಂತಗಳನ್ನು ನೋಡಿದರೂ ಎರಡನೆಯವರದನ್ನು ನಿಂದಿಸಿ, ತಮ್ಮದನ್ನು ಹೊಗಳಿಕೊಂಡದ್ದೇ ಕಾಣುತ್ತದೆ. ತಮ್ಮ ಸಿದ್ಧಾಂತವನ್ನು ಮಾತ್ರ ಹೇಳಿ ಸುಮ್ಮನಿದ್ದ ಪಂಥ-ಪಕ್ಷಗಳು ಇಲ್ಲವೇ ಇಲ್ಲ; ಇಷ್ಟೇ ಅಲ್ಲ, ಹಾಗೆ ಮಾಡುವುದು ಅವರ ನಿತ್ಯಜೀವನವಾಗಿದೆ, ಧರ್ಮವಾಗಿದೆ, ಅತಏವ ಅನಿವಾರ್ಯವಾಗಿದೆ. ಅದಕ್ಕಾಗಿಯೇ ಇವರೆಲ್ಲರೂ "ಪರಮತಖಂಡನಪೂರ್ವಕ ಸ್ವಮತವ್ಯಸ್ಥಾಪನಂ" ಪರೀಕ್ಷಾ ವಿಚಾರ ಎಂದು ಅಂಗೀಕರಿಸಿ, ಅದರಂತೆ ನಡೆದುಕೊಂಡು ಬಂದಿದ್ದಾರೆ; ಮುಂದೆಯೂ ನಡೆಯುವವರಾಗಿದ್ದಾರೆ. ಇದು ಕೇವಲ ನಮ್ಮ ಪ್ರಾಚೀನ ಸಂಪ್ರದಾಯವಾದಿಗಳಲ್ಲಿ ಮಾತ್ರವಲ್ಲ; ಜಗತ್ತಿನ ಪ್ರತಿಯೊಂದು ವಿಷಯದಲ್ಲಿ—ಜನಾಂಗದಲ್ಲಿ—ಈ ಶಬ್ದವನ್ನು ಹೇಳದಿದ್ದರೂ—ಇದರಂತೆಯೆ ನಡೆದಿರುವುದು ಕಾಣದಿರಲಾರದು.

ಈ ವಿಷಯವನ್ನು ಇಂದಿನ ವಿಮರ್ಶಕಧುರೀಣರಲ್ಲಿ ಸ್ವಲ್ಪ ತಿಳಿಯಾಗಿ ವಿಚಾರಿಸಿ ನೋಡುವ: ಇವರು ಹೇಳುವ ಮಾತುಗಳು ಯಾವಾಗಲೂ ತತ್ತ್ವಜ್ಞಾನಿ- ಬ್ರಹ್ಮಜ್ಞಾನಿಗಳ ಮಾತಿನಂತೆ; ಭಗವಾನ್ ಬುದ್ಧ, ಮಹಾತ್ಮಾ ಗಾಂಧಿಯವರಂತಹರು ಹೇಳುವ ನೀತಿಯಂತೆ ಇರುತ್ತವೆ. ಯಾವಾಗಲೂ ಸಮದರ್ಶಿತ್ವ, ಸಹನಶೀಲತೆ ಮುಂತಾದ ಮಹಾವಾಕ್ಯಪ್ರಯೋಗಗಳನ್ನು ಮಾಡುತ್ತಿರುತ್ತಾರೆ. ಆದರೆ ಇವರ ಆಚರಣೆಯು ಮಾತ್ರ ಅದಕ್ಕೆ ತೀರ ವಿರುದ್ಧವಾದದ್ದು— ಅದನ್ನೇ ಮುಂದಿನ ಸಾಲ್ಗು ಮಾತಿನಲ್ಲಿ ಹೇಳಬೇಕೆಂದಿದ್ದೇನೆ.

ಇಂದಿನ ಒಬ್ಬ ಸಾಹಿತ್ಯ ವಿಮರ್ಶಕನು ಒಂದು ಪುಸ್ತಕವನ್ನು ವಿಮರ್ಶೆಮಾಡುವುದಿದ್ದರೆ, ಅವನ ವಿಮರ್ಶೆಯ ಧಾಟಿಯು ಬಹಳ ವಿಚಿತ್ರವಾಗಿರುತ್ತದೆ. ಅವನು ಮಾಡಿದ ವಿಮರ್ಶೆಯನ್ನು ಸರಳಹೃದಯದ ಯಾವನಾದರೊಬ್ಬ ವಿಮರ್ಶಕನು ನೋಡಿದರೆ, ಅವನ ವಿಮರ್ಶೆಯನ್ನೂ ವಿಮರ್ಶೆಗೆ ವಿಷಯವಾಗಿದ್ದ ಮೂಲ ಪುಸ್ತಕವನ್ನೂ ಸಮದೃಷ್ಟಿಯಿಂದ ವಿಚಾರಿಸಿದರೆ, ಅಂತಹನಿಗೆ ಇದನ್ನು ನೋಡಿ ನಗಬೇಕೋ ಅಳಬೇಕೋ ಎಂದು ಬಹಳ ಸಲ ಎನಿಸದೆ ಇರಲಾರದು. ವಿಮರ್ಶಕನಿಗೆ ಆತ್ಮೀಯಭಾವನೆಯನ್ನು ಹೊಂದಿದ 'ತನ್ನದು' 'ತಮ್ಮವರದು' ಎಂದು ತಿಳಿದುಕೊಂಡು ತಾನೊಪ್ಪಿದ ಪುಸ್ತಕವಾಗಿದ್ದರೆ, ಅದರ ವಿಮರ್ಶೆಮಾಡಲು ಒಂದು ಹಾದಿ ಬೇರೆಯಿದ್ದುದು ದೃಗ್ಗೋಚರವಾಗುತ್ತದೆ; ಇದರ ಹೊರತಾದ ಗ್ರಂಥವಾಗಿದ್ದರೆ ಅದರ ವಿಮರ್ಶೆಗೆ ಹಾದಿಯೇ ಬೇರೆಯದು— ಹೊಸದು— ಕಣ್ಣಿಗೆ ಬೀಳುತ್ತದೆ.

ಈಗ ತನಗಭಿಮತವಲ್ಲದ, ತಾನೊಪ್ಪದ, ಆತ್ಮೀಯವಲ್ಲದ ಅಥವಾ ಆತ್ಮೀಯವೆಂದು ತೋರಿಸಿಕೊಂಡರೆ ಅದರಿಂದ ತನಗೆ ಎಲ್ಲಿಯಾದರೂ

ಏನಾದರೂ ಹೆಸರನ್ನು ಕೊಟ್ಟಾರೆಂಬ ಭಾವನೆಗೆ ವಿಷಯವಾದ ಒಂದು ಗ್ರಂಥವನ್ನು ಈ ವಿಮರ್ಶಕ ಚತುರನು ವಿಮರ್ಶಿಸುತ್ತಾನೆ. ಅದರ ಬಗೆಯು ಸಾಧಾರಣವಾಗಿ ಮುಂದೆ ಹೇಳಿದಂತಿರುತ್ತದೆಯೆಂಬುದು ಓದಿದರೆ ಸ್ಪಷ್ಟವಾಗುತ್ತದೆ:

ಒಂದು ಪ್ರಾಚೀನವಾದ ಸಂಸ್ಕೃತಗ್ರಂಥಕ್ಕೂ ಅದರ ಛಾಯಾನುವರ್ತಿಯೊ ಭಾವಾನುವರ್ತಿಯೊ ಆಥ್ರ್ಯಾನುವರ್ತಿಯೊ ಆದ ಇನ್ನೊಂದು ಗ್ರಂಥಕ್ಕೂ ತಾರತಮ್ಯವನ್ನು ಸೂಚಿಸಿ, ವಿಮರ್ಶೆಮಾಡುತ್ತಾನೆಂದು ಇಟ್ಟುಕೊಂಡರೆ, ಆ ವಿಮರ್ಶಕನು ಪ್ರತಿಬಿಂಬದ ಅಭಿಮಾನಿಯಾಗಿದ್ದರೆ ಅಂತಹನು "ಮೂಲಗ್ರಂಥದಲ್ಲಿ ಜಳ್ಳು-ಟೊಳ್ಳುಗಳು ಬಹಳ ತುಂಬಿವೆ. ಧೂಳು ಹೇರಳವಾಗಿದೆ. ಕಲ್ಲುಗಳು ಹೇಳಲಾರದಷ್ಟಿವೆ. ಈತ ಅವನ್ನೆಲ್ಲ ಸರಿಪಡಿಸಿದ್ದಾನೆ; ಜರಡಿಹಿಡಿದು ಸಾಣಿಸಿ ಶುದ್ಧಮಾಡಿದ್ದಾನೆ; ಪುಟಕ್ಕೆ ಹಾಕಿದ ಭಂಗಾರದಂತೆ ಸುಂದರವಾಗಿ ವಿನುಗುವಂತೆ ಮಾಡಿದ್ದಾನೆ...." ಮುಂತಾಗಿ ವಿಮರ್ಶೆಗೆ ಆರಂಭಿಸುವನು.

ಮೂಲಗ್ರಂಥದಲ್ಲಿ ಪ್ರಕೃತಿಯ ವರ್ಣನೆಯು ಸ್ವಲ್ಪ ಹೆಚ್ಚಾಗಿಯೆ ಇದ್ದರೆ ಆಗ, ಈ ವಿಮರ್ಶಕನಿಗೆ ಅವನ ವರ್ಣನೆಯು ರುಚಿಸುವುದಿಲ್ಲ. ಆದಕ್ಕಾಗಿ "ಮೂಲಗ್ರಂಥದಲ್ಲಿ ಪ್ರಕೃತಿಯ ವರ್ಣನೆಯು ಅತಿಯಾಗಿದೆ; ಬೇಜಾರು ಹುಟ್ಟಿಸುವಂತಿದೆ; ಮೂಲಕವಿಯು ವರ್ಣನೆಯನ್ನು ಸ್ವಲ್ಪ ಕಡಿಮೆಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈಗಿರುವ ವರ್ಣನೆಯು ಓದುಗರಿಗೆ ಬೇಜಾರುಹುಟ್ಟಿಸುವಂತಿದೆ; ಇನ್ನೂ ಏಕೆ ಮುಗಿಯಲಿಲ್ಲವೆಂದು ಎನ್ನಿಸುತ್ತದೆ. ಎಷ್ಟೋ ಸಮಯದಲ್ಲಿ ಬೇಜಾರಾಗಿ ಓದುವುದನ್ನು ಅಲ್ಲಿಯೆ ನಿಲ್ಲಿಸಬೇಕಾಗುತ್ತದೆ. ವರ್ಣನಾಭಾಗವನ್ನು ಬಿಟ್ಟು ಮುಂದೆ ಓದೋಣವೆಂದು ಹಲವು ಸಲ ಎನಿಸುತ್ತದೆ" ಎಂದು ಬರೆಯುತ್ತಾರೆ. ಅದೇ ವರ್ಣನೆಯು ಸ್ವಲ್ಪದರಲ್ಲಿಯೆ ಮುಗಿದಿದ್ದರೆ, ವಿಸ್ತಾರವಾಗಿ ಇಲ್ಲದಿದ್ದರೆ "ಈ ಕವಿಗೆ ಪ್ರಕೃತಿಯ ಸೊಬಗನ್ನು ಸರಿಯಾಗಿ ನೋಡುವ ಕಣ್ಣುಗಳೇ ಇದ್ದಂತಿಲ್ಲ. ತಾ ಕಂಡ ಸೊಬಗನ್ನು ಸರಿಯಾಗಿ ಚಿತ್ರಿಸಲು ಶಬ್ದಸಂಪತ್ತಿಕೂಡ ಇದ್ದಂತೆ ಇಲ್ಲ!" ಮುಂತಾಗಿ ಬರೆಯುತ್ತಾರೆ.

ಇನ್ನು ಒಂದು ತತ್ತ್ವವಿಚಾರವು ಪ್ರಾಸಂಗಿಕವಾಗಿ ಬಂದಿದ್ದರೆ, ನಾಲ್ಕು ಬಿಡಿಮಾತಿನಿಂದ ಸರಳವಾಗಿ ತಿಳಿಯುವಂತೆ ವಿವರಿಸಿದ್ದರೆ "ಈ ಕವಿಗೆ ತನ್ನ ಮತವನ್ನು ಪ್ರಚಾರಮಾಡಬೇಕೆಂಬ ಚಪಲವಿದೆ; ಅದೇ ಹಟದಿಂದ ಹೊರಟಂತೆ ಕಾಣುತ್ತದೆ. ತಾನು ತಿಳಿದುಕೊಂಡದ್ದನ್ನೆಲ್ಲ ಇದರಲ್ಲಿ ತುರುಕಲು ಪ್ರಯತ್ನಿಸಿದ್ದಾನೆ. ಇವನಿಗೆ ಎಲ್ಲಿ ಎಷ್ಟು ಹೇಳಿದರೆ ಜನರಿಗೆ ರುಚಿಸೀತೆಂಬ ಕಲ್ಪನೆಯೇ ಇಲ್ಲ. ಸಹೃದಯರ ತಲೆಯು ಎರಡಾಗುವಂತೆ ಸುಮ್ಮನೆ ಬರೆದು ಬಿಟ್ಟಿದ್ದಾನೆ," ಎಂದೂ; ಅದನ್ನೇ ಸ್ವಲ್ಪಕಡಿಮೆಮಾತಿನಿಂದ ಹೇಳಿದ್ದರೆ "ಕವಿಯು ತನ್ನ ತತ್ತ್ವವನ್ನು ಹೇಳಹೊರಟರೂ ಬಿಡಿಮಾತಿನಿಂದ ಸರಳವಾಗಿ ತಿಳಿಯುವಂತೆ ಹೇಳುವ ರೀತಿಯೇ ತಿಳಿಯದು; ಹೇಳುವ ಧೈರ್ಯವೇ ಇದ್ದಂತಿಲ್ಲ." ಎಂದೂ ಹೇಳುವರು—

ಇದರಂತೆಯೆ ಅಲಂಕಾರದ ವಿಷಯ: ಕವಿಯು ತನ್ನ ಗ್ರಂಥಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಕೆಲವು ಅಲಂಕಾರಗಳಲ್ಲದೆ ಇನ್ನೂ ಉಳಿದ ಕೆಲವು ಅಲಂಕಾರಗಳನ್ನು ಉಪಯೋಗಿಸಿದ್ದರೆ—ಸಮಯವರಿತು ಉಪಯೋಗಿಸಿದ್ದರೂ ಕೂಡ—"ಇವನು ಅಲಂಕಾರದ ಲಕ್ಷಣಸಮನ್ವಯಮಾಡಲು ಹೊರಟಂತಿದೆ. ಶರೀರಕ್ಕೆ ಅಲಂಕಾರದಿಂದ ಶೋಭೆ ಬೇಕಾದುದೇ ಹೊರತು, ಇರುವ ಶೋಭೆಯನ್ನು ಕಡಿಸಲು ಅಲಂಕಾರ ಧರಿಸುವುದಲ್ಲ. ಇದರಲ್ಲಿಯ ಅಲಂಕಾರದಿಂದ ಸೊಬಗು ಬರುವುದರ ಬದಲು 'ಜಾಮವ್ವ'ನಿಗೆ ಹೇರಿದ ಅಭರಣದಂತಾಗಿದೆ. ತಾನರಿತ ಅಲಂಕಾರಗಳನ್ನೆಲ್ಲ ಇದರಲ್ಲಿ ಪೋಣಿಸಿ ಕಾವ್ಯದ ಕಳಿಯನ್ನೇ ಕೆಡಿಸಿರುವನು," ಎಂದು ಹೇಳುವರು. ಇದರ ಬದಲಾಗಿ ಕೆಲವೇ ಅಲಂಕಾರಗಳನ್ನು ಉಪಯೋಗಿಸಿದ್ದರೆ. "ಈ ಕವಿಗೆ ಇಲ್ಲಿ ಹೇಳಿರುವ ನಾಲ್ಕು ಅಲಂಕಾರಗಳನ್ನು ಬಿಟ್ಟು ಬೇರೆ ಅಲಂಕಾರದ ಕಲ್ಪನೆಯೇ ಇದ್ದಂತಿಲ್ಲ; ಇನ್ನೂ ಕೆಲವು ಅಲಂಕಾರಗಳನ್ನು ಇಂತಿಂತಹ ಸ್ಥಳಗಳಲ್ಲಿ ಉಪಯೋಗಿಸಿದ್ದರೆ ಚೆನ್ನಾಗಿರುತ್ತಿತ್ತು," ಎಂದೂ ಬರೆಯುವರು. ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಯಾವುದಾದರೊಂದು ಕಾರಣದಿಂದ ತನಗೆ ಅಭಿಮತವಲ್ಲದ—ತನಗಭಿಮತವಲ್ಲವೆಂದು ತೋರಿಸಿಕೊಳ್ಳಲು ಇಚ್ಛಿಸುವ—ಕಾವ್ಯಗಳನ್ನೂ ಗ್ರಂಥಗಳನ್ನೂ ವಿಮರ್ಶಿಸುವಾಗ, ಇವರಿಗೆ ಕಾವ್ಯದಲ್ಲಿ ವಿಷಯಪ್ರತಿಪಾದನೆ, ಹೇಳುವ ರೀತಿ-ನೀತಿ ಮೊದಲಾದವುಗಳಲ್ಲಿ ನ್ಯೂನಾತಿರೇಕಗಳೇ ಕಾಣಬರುವುವು.

ಇದೇ ವಿಮರ್ಶಕರು ತಮಗೆ ಅಭಿಮತವಾದ—ತಮಗೊಪ್ಪಿದ—ತಮ್ಮದೆಂಬ ಭಾವನೆಯುಳ್ಳ ಗ್ರಂಥದ ವಿಮರ್ಶೆಯನ್ನು ಮಾಡುವ ಕ್ರಮವು ವಿಚಿತ್ರ; ಅಥವಾ ಮೇಲಿನ ಪದ್ಧತಿಗೆ ತೀರ ವಿರುದ್ಧವಾದದ್ದು. ಇವರು ಪ್ರತಿಬಿಂಬ ಕಾವ್ಯವನ್ನು ವಿಮರ್ಶಿಸುವಾಗ "ಈ ಕವಿಯು ಮೂಲಗ್ರಂಥವನ್ನು ಎಷ್ಟೋ ಕಡೆಗೆ ಬದಲಾಯಿಸಿದ್ದಾನೆ; ಸಮಯವರಿತು ರಸಭಾವಗಳಿಗೆ ತಕ್ಕಂತೆ ಅವಕ್ಕೆ ಪೋಷಣೆಯಾಗುವಂತೆ ಬಹಳ ಚತುರತೆಯಿಂದ ಮಾರ್ಪಡಿಸಿದ್ದಾನೆ. ಇದು ಕವಿಗಳಿಗಿರುವ ಸ್ವಾತಂತ್ರ್ಯ; ಅದನ್ನಿವರು ಬಹು ಚೆನ್ನಾಗಿ ವಿವೇಕದಿಂದ ಉಪಯೋಗಿಸಿಕೊಂಡಿದ್ದಾನೆ." ಮುಂತಾಗಿ ಆರಂಭಿಸುವರು. ಈ ಪ್ರತಿಕೃತಿಯ ಅಥವಾ ಭಾಷಾಂತರ ಮಾಡಿದ ಕವಿಯು, ಪ್ರಕೃತಿಯ ವರ್ಣನೆಯನ್ನು ಅತಿಯಾಗಿ ಮಾಡಿದ್ದರೆ "ಪ್ರಕೃತಿಯ ಸೊಬಗನ್ನು ಕಂಡ ಈ ನಮ್ಮ ಕವಿಗೆ ಎಷ್ಟುತರದಲ್ಲಿ ವರ್ಣನೆ ಮಾಡಿದರೂ ತೃಪ್ತಿಯೆ ಇಲ್ಲ; ವರ್ಣಿಸುವಾಗ ಕವಿಯು ಮೈಮರೆತು ವರ್ಣಿಸುತ್ತಾನೆ. ತಾನು ಕಂಡ ಸವಿಯನ್ನು ಸಹೃದಯರಿಗೆ ಸವಿಯಾಗಿ ಕೊಡಬೇಕೆಂಬ ಹಂಬಲದಿಂದ ಆದನ್ನೆ ತಿರುಗಿ ತಿರುಗಿ ವರ್ಣಿಸುತ್ತಾನೆ," ಎಂದೂ, ಆದನ್ನೇ ಸ್ವಲ್ಪ ಕಡಿಮೆಯಾಗಿ ವರ್ಣಿಸಿದ್ದರೆ "ಕವಿಯು ತಾ ಕಂಡ ಪ್ರಕೃತಿಯ ಸೊಬಗನ್ನು ಎರಡೇ ಮಾತಿನಿಂದ ರಸಿಕರ ಹೃದಯವು ಉಕ್ಕೇರಿಬರುವಂತೆ ಚಿತ್ರಿಸುವ ಚತುರತೆಯನ್ನು ಕಂಡಿದ್ದಾನೆ. ಅಲ್ಪ ಮಾತುಗಳಲ್ಲಿಯೆ ಪ್ರಕೃತಿಯು ಎದುರಿಗೆ ಬಂದು ನಿಲ್ಲುವಂತೆ ಚಿತ್ರಿಸುತ್ತಾನೆ," ಎಂದೂ ಹೇಳುವರು.

ಇನ್ನು ಮತದ ವಿಚಾರ: ಕವಿಯು ತನ್ನ ಮತಸಂಬಂಧವಾದ ವಿಚಾರವನ್ನು ಸ್ವಲ್ಪ ಹೆಚ್ಚಾಗಿ ಬರೆದಿದ್ದರೆ "ನಮ್ಮ.....ಈ ಕವಿಗೆ ತನ್ನ ಮತದಲ್ಲಿ ನಂಬಿಕೆ, ವಿಶ್ವಾಸ, ಭಕ್ತಿ ಇವು ಸಂಪೂರ್ಣವಾಗಿವೆ; ಅದನ್ನು ಹೇಳುವಾಗ ಭಕ್ತಿಪರವಶನಾಗಿ ಬಿಡುತ್ತಾನೆ. ಎಷ್ಟು ಹೇಳಿದರೂ ತೃಪ್ತಿಯೇ ಇಲ್ಲ." ಎಂದೂ, ಕಡಿಮೆ ಬರೆದಿದ್ದರೆ "ಸುಲಿದ ಬಾಳೆಯ ಹಣ್ಣಿನಂದದಿ, ಬಿಡಿಸಿ ಎರಡೇ ಮಾತಿನಿಂದ ಸಾಮಾನ್ಯ ಜನರಿಗೂ ಸುಲಭವಾಗಿ ಅರ್ಥವಾಗುವಂತೆ ತಿಳಿಯುವಂತೆ ಹೇಳುವನು; ಇದು ಇನ್ನೊಬ್ಬರಿಗೆ ಬರುವುದು ಕಷ್ಟ!" ಎಂದೂ ಬರೆಯುವರು.

ಹೀಗೆಯೇ ಅಲಂಕಾರದ ವಿಷಯ. ಈ ಕವಿಯು ಎಲ್ಲ ಅಲಂಕಾರಗಳನ್ನೂ ಕಾವ್ಯದಲ್ಲಿ ಪೋಣಿಸಿದ್ದರೆ "ನಮ್ಮ ಕವಿಯು ಸರಿಯಾದ ಅಲಂಕಾರಪಂಡಿತರು; ಎಲ್ಲ ಅಲಂಕಾರಗಳನ್ನೂ ಜೆನ್ನಾಗಿ ಅರೆದು ಕುಡಿದಿರುವರು. ಕುಡಿದದ್ದನ್ನು ಸಂಪೂರ್ಣ ಜೀರ್ಣಿಸಿಕೊಂಡಿರುವರು. ಅದಕ್ಕಾಗಿಯೇ ಮುತ್ತು ಪೋಣಿಸಿದಂತೆ ಸುಂದರವಾಗಿ ಎಲ್ಲ ಅಲಂಕಾರಗಳನ್ನೂ ಕಾವ್ಯದಲ್ಲಿ ಪವಣಿಸಿರುವರು. ಅದರಿಂದ ಕಾವ್ಯಕ್ಕೆ ಒಂದು ವಿಶೇಷ ಕಳೆಯು ಬಂದಿದೆ; ಕಾವ್ಯವು ಭವ್ಯವಾಗಿ ಕಾಣುತ್ತದೆ," ಎಂದೂ; ಕೆಲವೆ ಅಲಂಕಾರಗಳನ್ನು ಉಪಯೋಗಿಸಿದ್ದರೆ "ಕವಿಯು ಅಲಂಕಾರದ ಗಲಾಟೆಗೆ ಹೆಚ್ಚಾಗಿ ಹೋಗುವವನಲ್ಲ; ಕೆಲವೇ ಅಲಂಕಾರಗಳನ್ನು ಸಮಯೋಚಿತವಾಗಿ ಬಹು ಚೆನ್ನಾಗಿ ಉಪಯೋಗಿಸಿದ್ದಾನೆ. ಈ ಅಲಂಕಾರಗಳನ್ನು ಕಂಡರೆ ಕವಿಗೆ ಬಹಳ ಇಷ್ಟ. 'ಸುಂದರವಾದ ಪ್ರಕೃತಿಗೆ ಅಲಂಕಾರದ ಹೊರೆಯೇಕೊ' ಎಂಬ ತತ್ತ್ವದವನು ನಮ್ಮ ಕವಿಯು. ಅದನ್ನು ಮಾರ್ಗದರ್ಶಕನಾಗಿ ತೋರಿಸಿ ಬಿಟ್ಟಿದ್ದಾನೆ" ಎಂದೂ ಬರೆಯುವರು. ಹೀಗೆ ತನಗೊಪ್ಪಿದ ಕಾವ್ಯಗ್ರಂಥಗಳಲ್ಲಿ ಇರುವುದೆಲ್ಲವೂ ಗುಣವಾಗಿಯೇ ಕಾಣಬರುತ್ತದೆ. ಇರುವ ನ್ಯೂನಾತಿರೇಕಗಳನ್ನು ಸಹ "ಸೌಂದರ್ಯಕ್ಕಾಗಿಯೇ ಇದ್ದುವು; ಅವು ನ್ಯೂನವೂ ಅಲ್ಲ, ಅತಿರೇಕಗಳೂ ಅಲ್ಲ!" ಎಂದು ಬರೆಯುವರು.

ಇದರಂತೆಯೆ ಪ್ರತಿಯೊಂದು ವಿಷಯ. ಯಾವುದೆ ವಿಷಯವನ್ನು ತೆಗೆದುಕೊಂಡರೂ ಅಲ್ಲೆಲ್ಲ ಹೊಗಳು-ತೆಗಳುಗಳುಗಳು ಇದ್ದೇ ಇರುತ್ತವೆ. ರಾಜಕೀಯ ರಂಗದಲ್ಲಿ ನೋಡಲಿ, ಸಾಮಾಜಿಕ ರಂಗದಲ್ಲಿ ನೋಡಲಿ, ಧಾರ್ಮಿಕ ಭಾವನೆಯಲ್ಲಿ ನೋಡಲಿ, ಎಲ್ಲೆಡೆಯಲ್ಲಿಯೂ ಈ ಹೊಗಳು-ತೆಗಳುಗಳು ಸೇರಿಕೊಂಡಿವೆ. ಪ್ರತಿನಿತ್ಯದಲ್ಲಿ, ಪ್ರತಿಕ್ಷಣದಲ್ಲಿ, ಪ್ರತಿಯೊಂದು ಹಜ್ಜೆಯಲ್ಲಿ ಪ್ರತಿಮಾನವನಲ್ಲಿಯೂ ಈ ಹೊಗಳು-ತೆಗಳುಗಳು ಸೇರಿಕೊಂಡು ಕೆಲಸಮಾಡುತ್ತವೆ. ವಿಚಾರಿಸಿ ನೋಡಿದರೆ ಎಲ್ಲರಿಗೂ ತಿಳಿದುಬರುವ ವಿಷಯ. ಇದಕ್ಕೆ ಕಾರಣವಾವುದು?

ಇದರ ಮೂಲಕ್ಕಾಗಿ ಯಾರಲ್ಲಿಯೂ ಭಿಕ್ಷೆಬೇಡಲು ಹೋಗಬೇಕಾಗಿಲ್ಲ; ಕಾರಣವನ್ನು ಹುಡುಕಲು ಎಲ್ಲಿಗೂ ಹೋಗುವ ಅವಶ್ಯಕತೆಯಿಲ್ಲ. ದೀವಿಗೆ ಹಿಡಿದು ಸಂದು-ಮೂಲೆಗಳಲ್ಲಿ ಹುಡುಕಬೇಕಿಲ್ಲ. ಬ್ರಹ್ಮವಿದ್ಯೆಯ ವ್ಯಾಪ್ತಿಗಾಗಿ ಸದ್ಗುರುವನ್ನು ಹುಡುಕುವಂತೆ ಎರುವನ್ನು ಹುಡುಕಬೇಕಿಲ್ಲ. ಕನ್ನಡಕ ಧರಿಸಿ ಗ್ರಂಥರಾಶಿಯನ್ನು ಅಭ್ಯಸಿಸಿ ಸಂಶೋಧನೆ ಮಾಡಬೇಕಿಲ್ಲ. ಇದಕ್ಕೆ ಬೇಕಾದದ್ದು ಒಂದೇ. ಅದು ತನ್ನಲ್ಲಿರುವುದೇ—ಸುಲಭವಾದದ್ದು. ಅದೆಂದರೆ ತನ್ನನ್ನೇ ತಾನು ಕೇಳಿಕೊಳ್ಳುವುದು; ಆತ್ಮನಿರೀಕ್ಷೆ ಮಾಡಿಕೊಳ್ಳುವುದು. ನಾವು ಪ್ರತಿಯೊಬ್ಬರೂ ಪ್ರತಿನಿತ್ಯ ಬೆಳಗು ಆಯಿತೆಂದರೆ ಆವೆಷ್ಟೋ ವಿಷಯಗಳ ಮೇಲೆ—ಯಾರಾರ ಜೊತೆಗೋ—ಚರ್ಚೆಗಳನ್ನು ನಡೆಯಿಸುತ್ತೇವೆ. ಇದು ಎಲ್ಲರಿಗೂ ತಿಳಿದ ವಿಷಯ. ಆ ಚರ್ಚೆಯು ಕ್ರಮೇಣ ವಾದವಾಗಿ ಪರಿಣಮಿಸುತ್ತದೆ. ಅಲ್ಲಿ ಯಾವುದೋ ಕಾರಣದಿಂದ ಹೊಗಳು-ತೆಗಳುಗಳ ಬೀಜ ಬೀಳುತ್ತದೆ. ಅದು ಬೆಳೆಯುತ್ತ ಹೋಗಿ ವಾಗ್ಯುದ್ಧದಲ್ಲಿ ಮುಗುತಾಯವಾಗುವುದು ಹೆಚ್ಚು. ಇಂತಹ ಒಂದೆರಡು ಸನ್ನಿವೇಶಗಳನ್ನು ವಿಶೇಷ ಗಮನವಿಟ್ಟು ನಿರೀಕ್ಷಿಸಿದರೆ, ಪ್ರಶ್ನೆಗೆ ಸರಿಯಾದ ಉತ್ತರವು ದೊರೆಯುತ್ತದೆ. ಅದು ನಮ್ಮಲ್ಲಿಯೇ ಹೊರಬೀಳುತ್ತದೆ.

ಹೊಗಳು-ತೆಗಳುಗಳು ಪ್ರಧಾನವಾಗಿ ಮೂರು ನಾಲ್ಕು ಕಾರಣಗಳಿಂದ ಹೊರಬೀಳುವುವು. ಪ್ರೀತಿ, ಆದರ, ವಿಶ್ವಾಸ, ಗೌರವಗಳಿಂದ ಹೊಗಳೂ; ದ್ವೇಷ, ಅಸೂಯೆ, ಅವಿಶ್ವಾಸ, ಅಸಹನೆಗಳಿಂದ ತೆಗಳೂ ಪ್ರಧಾನವಾಗಿ ಹೊರಬೀಳುವುವೆಂದು ಹೇಳಬಹುದು. ಹೊಗಳು-ತೆಗಳುಗಳು ಇರುವ ಎಲ್ಲ ಸ್ಥಳಗಳಲ್ಲಿಯೂ ಸೂಕ್ಷ್ಮವಾಗಿ ಒಳತನಕ ಹೊಕ್ಕು—ನಿಷ್ಕಪಟ ಬುದ್ಧಿಯಿಂದ—ನೋಡಿದರೆ, ಮೇಲೆ ಹೇಳಿದುವುಗಳಲ್ಲಿ ಯಾವುದಾದರೊಂದು ಇದ್ದೇ ಇರುತ್ತದೆ. ಇದರ ದೃಷ್ಟಾಂತಕ್ಕೆ ಒಂದೆರಡು ಸ್ಥಳಗಳನ್ನು ಪರೀಕ್ಷಿಸಿ ನೋಡುವ:

ಪ್ರತಿನಿತ್ಯದಲ್ಲಿಯೂ ನಾವು ಎಷ್ಟೋ ವಿಷಯಗಳನ್ನು, ಆರಂಭದಲ್ಲಿ ಹರಟೆಯೆಂದು ಎತ್ತಿಕೊಳ್ಳುವೆವು. ಅದು ಕೆಲವು ಹೊತ್ತು ವಿನೋದವಾಗಿಯೆ ನಡೆಯುವುದು. ಅದೇ ವಿಷಯವು ಸ್ವಲ್ಪ ಹೊತ್ತಿನಲ್ಲಿ ಹರಟೆಯ ರಂಗದಿಂದ ಚರ್ಚೆ-ವಾದಗಳ ರಂಗಕ್ಕೆ ಇಳಿಯುವುದು. ಹಾಗಾದ ಕೂಡಲೇ ತನ್ನ ಪಕ್ಷದಲ್ಲಿರುವ ಗುಣಗಳನ್ನು ಮಾತ್ರ ಹೇಳಿ ಚೆನ್ನಾಗಿ ಪ್ರತಿಪಾದಿಸುವರು. ಅನಂತರ ಪರಮತದಲ್ಲಿರುವ ದೋಷವನ್ನು ಎತ್ತಿ ಹೊರಗೆ ತೋರಿಸುತ್ತ, ತಮ್ಮಲ್ಲಿ ದೋಷವೇ ಇಲ್ಲವೆಂದು ಹೇಳುವರು; ಎರಡನೆಯವರ ಪಕ್ಷದಲ್ಲಿ ಇರುವುದು ದೋಷವಲ್ಲದೆ ಗುಣಕ್ಕೆ ಎಡೆಯೇ ಇಲ್ಲವೆಂದು ವಾದಿಸುವರು. ಮತ್ತೂ ಸ್ವಲ್ಪ ಹದ ತಪ್ಪಿದರೆ, ಪಕ್ಷ-ಪ್ರತಿಪಕ್ಷಗಳನ್ನು ಹಿಡಿದು ಮಾತನಾಡುವ ವ್ಯಕ್ತಿಗಳಲ್ಲಿರುವ ದೋಷಗಳನ್ನೂ ಎತ್ತಿ ಬಯಲಿಗೆಳೆಯಲು ಹಿಂದು ಮುಂದು ನೋಡುವುದಿಲ್ಲ. ಅಂತೂ ಆರಂಭದಲ್ಲಿ ಹೇಗೆಹೇಗೋ ಪ್ರಾರಂಭವಾದದ್ದು ವಾದವಾಗಿ, ಎಲ್ಲಿಗೋ ಬಂದು ಮುಟ್ಟಿ, ಹೊಗಳು-ತೆಗಳುಗಳಲ್ಲಿ ಮುಗಿಯುತ್ತದೆ. ಇಲ್ಲಿ ವಿಷಯದ ಎತ್ತುಗಡೆಯು ತಮಾಷೆಗಾಗಿ; ವಿಷಯದಲ್ಲಿ ಸತ್ಯಶೋಧನೆಗಾಗಿ. ಅನಂತರ ಎರಡು ಪಕ್ಷದವರೂ ತಾವು ಹಿಡಿದ ಪಕ್ಷವೆ ಸರಿಯೆಂದು ಹೊಡೆದಾಡು

(೬೯ ನೆಯ ಪುಟ ನೋಡಿರಿ.)

ಭಿಷಗ್-ರತ್ನರ ಭ್ರಾಂತಿ (ಒಂದು ದೃಶ್ಯ)

ಶ್ರೀ. ಕುಲಕರ್ಣಿ ಶೇಷಗಿರಿರಾಯರು, ಧಾರವಾಡ

— ಪಾತ್ರಗಳು —

ತಾಯಿ:— ಭಾಗವ್ವ.
ತಂದೆ:— ಭಿಷಗ್ರತ್ನ ಭೀಮಾಚಾರ್ಯರು.
ಮಗಳು:— ಕಮಲಿ ಬಾಲವಿಧವೆ.

(ಭಿಷಗ್ರತ್ನ ಭೀಮಾಚಾರ್ಯರು ಸುಪ್ರಸಿದ್ಧರಾದ ವೈದ್ಯರು. ಅವರ ಮುತ್ತಜ್ಜನ ಕಾಲದಿಂದಲೂ ಒಳ್ಳೆಯ ಹೆಸರಾದ ಮನೆತನ. ಅದರಲ್ಲಿಯಂತೂ ಭೀಮಾಚಾರ್ಯರ ಅಜ್ಜಂದಿರು ಸ್ವಾಮಿಗಳಾದುದರಿಂದ, ಆ ಮನೆತನದ ಪ್ರಸಿದ್ಧಿ ಮುತ್ತಿಷ್ಟು ಹೆಚ್ಚಿತು. ಅಂತೆಯೆ ವ್ಯಾಕರಣ, ನ್ಯಾಯ, ವೇದಾಂತ ಮೊದಲಾದ ಸಕಲ ಶಾಸ್ತ್ರಗಳ ಅಧ್ಯಯನ ಮೊದಲಿನಿಂದಲೂ ನಡೆದುಕೊಂಡುಬಂದ ಮನೆತನ ಅವರದು. ಆಯುರ್ವೇದವು ಅವರ ವ್ಯವಸಾಯವಾದರೂ ಆಚಾರ್ಯರಿಗೆ ಸಾಕಷ್ಟು ಹೊಲಗಳೂ ಇದ್ದುವು. ಆದರೆ ಈಗ ಎರಡುತಲೆಗಳಿಂದ ವೈದ್ಯವೃತ್ತಿಯೇ ಪ್ರಮುಖವಾಗಿ, ಉಳಿದ ವ್ಯಾಸಂಗದ ಕಡೆಗೆ ಅಲಕ್ಷ್ಯವಾದದ್ದು ಕಂಡುಬರುತ್ತದೆ. ಅದರಲ್ಲಿಯಂತೂ ಭೀಮಾಚಾರ್ಯರು ಧನ್ವಂತರಿಯ ಅವತಾರವೆನ್ನುವಷ್ಟು ತೀರ ಚಿಕ್ಕವಯಸ್ಸಿನಲ್ಲಿಯೆ ಪ್ರಸಿದ್ಧಿಯನ್ನು ದೊರೆಕಿಸಿದ್ದರು.

ಆಚಾರ್ಯರ ಸ್ವಭಾವ ತೀರ ದಯಾಳುವಾದದ್ದು. ಯಾರಿಗೂ ಒಂದು ಕೆಡುಕನ್ನೂ ಆಡಿದವರಲ್ಲ. ಯಾರನ್ನೂ ಬೇಡಿದವರಲ್ಲ, ಕಾಡಿದವರಲ್ಲ. ತಾನಾಗಿಯೆ ಬಂದದ್ದನ್ನು ಸ್ವೀಕರಿಸುತ್ತಿದ್ದರು. ಅವರಿಗೆ ಸಾಕಷ್ಟು ಬರುತ್ತಿದ್ದರೂ ಅವರ ಪಾಂಡಿತ್ಯಕ್ಕೆ ಅದು ತೀರ ಕಡಿಮೆಯೆಂದೆ ಹೇಳಬಹುದು.

ವೈದ್ಯರು ರಸಿಕರೂ ಆಹುದು. ಮನೆಯಲ್ಲಿ ಎಲ್ಲರೊಡನೆ ನಗುತ್ತ ಕೆಲೆಯುತ್ತ ತುಂಬ ಆನಂದದಿಂದ ಇರುವುದೇ ಅವರ ಸ್ವಭಾವ. ಅವರಿಗೆ ಅನುರೂಪಳಾದ ಪತ್ನಿ ಭಾಗವ್ವ; ಮನೆತನದ ಎಲ್ಲ ಭಾರವನ್ನೂ ಆಕೆಯೆ ಹೊತ್ತು ಸಾಗಿದ್ದಳು.

ರಾತ್ರಿಯ ಹನ್ನೆರಡು ಗಂಟೆ. ಭೀಮಾಚಾರ್ಯರು ತಮ್ಮ ಔಷಧದ ಕೋಣೆಯಲ್ಲಿ ವೈದ್ಯಕ ಗ್ರಂಥಗಳನ್ನು ನೋಡುತ್ತ ಕುಳಿತಿದ್ದಾರೆ. ಒಂದು ಕಡೆಗೆ ದೊಡ್ಡ ದೊಡ್ಡ ಕಪಾಟಿನಲ್ಲಿ ಔಷಧಗಳನ್ನು ತುಂಬಿದ ಭರಣಿಗಳಿವೆ. ಅದಕ್ಕೆ ಹೊಂದಿ ದೊಡ್ಡ ದೊಡ್ಡ ಎರಡು ಕಿಟಕಿಗಳು. ಅದಕ್ಕೆ ಹೊಂದಿ ವೈದ್ಯರ ಮಂಚ. ಮಲಗುವ ಮನೆಯೂ, ಓದುವ ಕೋಣೆಯೂ, ಔಷಧದ ಸಂಗ್ರಹದ ಉಗ್ರಾಣವೂ, ವೈದ್ಯಕ ಗ್ರಂಥಗಳ ಗ್ರಂಥಾಲಯವೂ ಅಲ್ಲಿಯೆ. ಏಕೆಂದರೆ ವೈದ್ಯರಿಗೆ ಎಲ್ಲವೂ ತಮ್ಮ ಹತ್ತಿರವೆ ಇರಬೇಕೆಂದು ಎನಿಸುತ್ತಿತ್ತು.

ಮನೆಯ ಕೆಲಸವನ್ನು ಮುಗಿಸಿ ಭಾಗವ್ವ ಬರುವರು. ಆಚಾರ್ಯರು ಇನ್ನೂ ಮಲಗದಿರುವುದನ್ನು ನೋಡಿ ಅವರೊಂದಿಗೆ ಮಾತನ್ನು ಆರಂಭಿಸುವರು.)

ಭಾಗವ್ವ:— ಆರುತಾಸು ರಾತ್ರಿ ಆತು.. ಇನ್ನೂ ಮಲಗಿಲ್ಲಽ! ಎಷ್ಟರೇ ಓದೋದದು? ನಾ ಈ ಮನಿಗೆ ಬಂದು ಮೂವತ್ತು ವರ್ಷ ಆತು. ಅಲ್ಲಾ, ದೇಶದಾಗ ಇಷ್ಟೊಂದು ನಿಮ್ಮ ಹೆಸರು ಆಗಿದ್ದರೂ ಇನ್ನೂ ಆ ಸುಡುಗಾಡು ಓದು ಮುಗಿದಿಲ್ಲಲ್ಲಽ?

ವೈದ್ಯರು:— ಮುಗೀತು; ಮು ಗಿ ದೇ ಬಿ ಟ್ಟಿ ತು! ಇನ್ನ ಪುಸ್ತಕಾ ಹಿಡಿದರ ಕೇಳು. ನಿನ್ನ ಮುಂದ ಯಾವ ಪುಸ್ತಕ ಏನು ಮಾಡೀತು?

ಭಾಗವ್ವ:— ಏನು ಹೀಂಗ ನಿದ್ದೀ ಕಟ್ಟಿದರ? ಹೀಂಗs ಮುಗ್ಗಲು ಹಚ್ಚತೀರೋ ಇಲ್ಲೊ; ಮತ್ತ ಬುದಿಂಗನೆ ಎದ್ದು ಕೂಡತೀರಿ. ಉರಿಡರೇನೋ, ಪಾಯಸಾಗಿ ಬಾದು ಮಲಗಿದರೇನೊ ಎಲ್ಲಾರ್ತಾಂಗ!

ವೈದ್ಯರು:— ನೀ ಇಲ್ಲದೆ ಪ್ಯಾಂಗ ಮೆಲಗಲಿ? ನೀನು ಅತ್ಲಾಗ ಕೆಲಸಾ ಮಾಡಬೇಕು; ನಾ ಇತ್ಲಾಗ ನಿದ್ದೀಮಾಡ ಬೇಕು. ಅದು ನಸ್ನ ಕಡಿಂದಂತೂ ಸಾಧ್ಯ ಇಲ್ಲ ನೋಡು! ನೀ ಇಲ್ಲದೆ ನಾನು ಮಲಗೋದು ಸಾಧ್ಯವೇ ಇಲ್ಲ!

ಭಾಗವ್ವ:— ಸಾಕು ಸಾಕು! ಇನ್ನೂ ಮಾಮನಿಗೆ ಬಂದ ಮೊದಲುಗಿತ್ತೀಂತ ತಿಳಿದೀರಿ ಕಾಣಸತಽದ! ಎಂಟು ಮಕ್ಕಳ ತಾಯಿ

ಾನು; ಮೊಮ್ಮಕ್ಕಳನ್ನ ಕಾಣೋ ದಿನಾ ಸಮೀಪದಾಗಕ ಬಂದಾವ!

ವೈದ್ಯರು:— ನಿನ್ನ ಮಕ್ಕಳಿಗೆ ನೀ ತಾಯೀರೇ ಆಗು– ಅವ್ವರೇ ಆಗು! ನನಗ ಮಾತ್ರ– ನೀ ಮೊದಲಗೀತ್ತೀನಕ ನೋಡು (ಎಂದು ಕಿನ್ನೆಗೆ ತುಸು ಹೊಡೆಯುವರು).

ಭಾಗವ್ವ:— ಸಾಕು ಸಾಕು! ಇಲ್ಲದ್ದೊಂದು ನಿಮ್ಮದು! ನಾ ಬ್ಯಾಸತ್ತು ಬಂದೀನಿ; ನೆಲಾ ಎಂದಾರೇ ಕಂಡೀನೋ ಇಲ್ಲೋ ಅನ್ನೂ ಹಾಂಗ ಆಗೇದ!

ವೈದ್ಯರು:— ಅಲ್ಲಾ! ಇವತ್ತ ಇಷ್ಟ್ಯಾಕ ಹೊತ್ತಾತು ಬರಲಿಕ್ಕೆ?

ಭಾಗವ್ವ:— ಮರೆತಕ ಬಿಟ್ಟೆ. ಬಂದಗಳಿಗ್ಗೆ ಹೇಳಬೇಕೂ ಅಂದೆ. ಸುಡುಗಾಡು ಮರವೊಂದು ಅದಕ ಅಲ್ಲಾ! ಕಮಲಿ ಯಾಕೋ ತಲಿಖೂಲಿ ಅಂದಳು! ಏನು ಆಗೆದೋ ಹುಡಿಗಿಗೆ! ಈಗ ಎಂಟು ದಿನದತೊಟ್ಟು 'ಆಕೀ ಕೈ ಇಷ್ಟು ನೋಡಿ ಔಷಧಾ ಕೊಡಿರೀ' ಅಂದರ ನಿಮಗ ಆಗವ್ವೊಲ್ಲದು. ದಿನಾ ನೂರಾರು ಮಂದಿಗೆ ನಿಮ್ಮ ಕೈಯಿಂದ ಔಷಧ ಸಿಗತಕದಂತ; ಮನೀ ಮಕ್ಕಳಿಗೆ ಮಾತ್ರ ಸಿಗೋಹಾಂಗಿಲ್ಲ ಯಾಕ? ನಾಳೆ ಮುಂಜಾನೆ ಆಕೀ ಕೈ ನೋಡಿ ಇಷ್ಟು ಔಷಧಾ ಕೊಡಿರಿ. ಏನೂ ಆಗೂದಿಲ್ಲ; ಆದರ ನಾ ನೋಡತೀನಿ!

ವೈದ್ಯರು:— ಇವತ್ತ ಯಾವ ವಾರಾ?

ಭಾಗವ್ವ:— ವಾರಾಗೀರಾ ತೊಗೊಂಡು ಏನು ಮಾಡತೀರಿ! ಮನ್ಯಾಗಿನವರಿಗೆಲ್ಲಾ ಯಾಕ ಆ ವಾರಾ-ತಿಥಿ! ಎಲ್ಲಾ ಬರತಕದ!

ವೈದ್ಯರು:— ಇರಲಿ ಹೇಳಬಾರದಕ?

ಭಾಗವ್ವ:— ಇಂದ ಅಯಿತ್‌ವಾರ; ಹೌದಲ್ಲಂ! ಇವತ್ತ ಕೈ ನೋಡಿ ಔಷಧಾ ಕೊಟ್ಟಿದ್ದರ ನೆಟ್ಟಗಾಗತಿತ್ತು. ಇನ್ನ ಗುರುವಾರ ತನಕಾ ತಡೀಬೇಕೋ ಹ್ಯಾಂಗಕ ಅಂತೀನಿ. ಏನೂ ವಾರ ಬ್ಯಾಡಾ— ತಿಥೀಬ್ಯಾಡಾ! ಇಲ್ಲದಿದ್ದರ ಇವತ್ತ ಈಗಕ ತುಸು ಏನರೇ ಕೊಟ್ಟು ಮುಹೂರ್ತಾ ಮಾಡಿಬಿಡಿರಿ. (ವೈದ್ಯರು ಕಣ್ಣುಮುಚ್ಚಿ ಸುಮ್ಮನೇ ಕುಳಿತದ್ದನ್ನು ನೋಡಿ) ಯಾಕ ಕೂತಲ್ಲೇ ನಿದ್ದಿ ಬಂತೋ ಏನು? ಮನೀಸುದ್ದೀ ಅಂದರ ಬ್ಯಾಡ ನಿಮಗ! ಊರಸುದ್ದೀ ಬೇಕಾದಷ್ಟು ಕೇಳಿರಿ! ಬೆಳ್‌ಬೆಳಗೂ ಮುಗಿಯೋಹಾಂಗಿಲ್ಲ! ಅಲ್ಲಾ ಕಣ್ತಗೀರಿ; ಪಾಪ ಆ ಕೂಸಿಗಿಷ್ಟು ಏನಾದರೂ ಕೊಡಿರಿ. ಹಿಂಗ್ಯಾಕ ಮಾಡತೀರಿ?

ವೈದ್ಯರು:— ಕೊನೆಗೆ– ಯಾವ ಕೂಸದು? ಯಾರದು? ಕರಕೊಂಡುಬಾ; ನೋಡತೀನಿ!

ಭಾಗವ್ವ:— ಹುಚ್ಚರ್ಹಾಂಗ ಹಿಂಗ್ಯಾಕರೆ ಮಾಡತೀರಿ? ಕಮಲಿನ್ನ ನೋಡಿಲ್ಲೋ ಏನು?

ವೈದ್ಯರು:— ನಾ .. ಹೂಂ .. ಹೂಂ .. ಏನಾರೆ ಕೊಡೋಣಂತ ನಾಳೆ! ಈಗ ಹೊತ್ತಾತು, ಮಲಕೊಂಬೋಣ!

ಭಾಗವ್ವ:— ದಿನಾ ನಾ ಕೇಳತೀನಿ, ದಿನಾ ಹೀಂಗs! ಪಾಪ, ಆ ಹುಡಿಗಿನ್ನ ಕಂಡರ ನಿಮಗ ಆಗತಕದರೆ ಏನು?

ವೈದ್ಯರು:— ನಾ— ನಿನಗ ಹೇಳಿಲ್ಲಕ ಒಮ್ಮೆ; ಆಕೀ ಹೆಸರು ನನ್ನ ಇದಿರಿಗೆ ತಗೀಬ್ಯಾಡಾ ಅಂತ!

ಭಾಗವ್ವ:— ಯಾಕ? ಆಕೇಸು ನಿಮ್ಮ ಮಗಳು ಆಲ್ಲೋ ಏನು?

ವೈದ್ಯರು:— ನಾ ಮೊನ್ನೆ ಅದನ್ನೂ ಹೇಳೇ ಬಿಟ್ಟೀನಿ: 'ಆಕೆ ನನ್ನ ಮಗಳಲ್ಲಾ, ನಾ ಆಕೀ ತಂದೀ ಅಲ್ಲಾ' ಅಂತ. ಮತ್ತ ಇಪತ್ತೂ ಇನ್ನೊಮ್ಮೆ ಹೇಳತೀನಿ. ತಿಳಿತಿಲ್ಲೋ? ಆಕೀ ಹೆಸರು ತಗೀಬ್ಯಾಡ ಇನ್ನ ನನ್ನ ಮುಂಡ! ತಿಳೀತಕ?

ಭಾಗವ್ವ:— ಆಕೀ ಅಂದರ ಯಾಕ ಇಷ್ಟ ಸಿಟ್ಟು ನಿಮಗ? ಮೊದಲ ಆಕೀನ್ನ ಎಷ್ಟು ಪ್ರೀತಿಸತಿದ್ದಿರಿ! ಈಗ್ಯಾಕ ಹೀಂಗ ಒಮ್ಮಿಂದೊಮ್ಮೆ ಬದಲಾಗೇದ? ಹೇಳ್ಯಾರಕ ಹೇಳಿರಿ!

ವೈದ್ಯರು:— ಹೇಳೋದೇನು? ಜಗಲೇ ನೀನೇ ಹೇಳಿ-ದೆಲ್ಲಾ!

(೬೯ನೆಯ ಪುಟದಿಂದ ಮುಂಬರಿದುದು.)

ವರು. ಆ ಮೇಲೆ 'ಇದು ತನ್ನ ವಿಷಯ! ಇದು ತನ್ನ ಸ್ವತ್ತು!' ಎಂದು—ಮತ್ತೂ ಸ್ವಲ್ಪ ಮುಂದೆ ಹೋದರೆ 'ಇದೇ ತಾನು, ಇದಕ್ಕೆ ನೋಲಾದರೆ ತನಗೆ ನೋಲು! ಯಾವುದಾದರೊಂದು ರೀತಿಯಿಂದ ಎದುರುವಾದಿಯನ್ನು ಹಿಮ್ಮೆಟ್ಟಿಸಲೇ ಬೇಕು' ಎಂದು ಭಾವನೆ ಬಂದು, ಮೇಲೆ ಹೇಳಿದಂತೆ ಕೊನೆಯ ಅವಸ್ಥೆಯ ತನಕ ಬಂದುಮುಟ್ಟುತ್ತಾರೆ. ಇದು ಸಾಮಾನ್ಯವಿಷಯಗಳಲ್ಲಿಯೂ ಕಾಣಬರುವಂತಹದು.

ಇನ್ನು ಕೆಲವು ವಿಶೇಷವಿಷಯಗಳಲ್ಲಿ, ಮಾತನಾಡಲು ಆರಂಭಿಸುವುದಕ್ಕೆ ಮುಂಚಿತವಾಗಿಯೇ ಆ ವಿಷಯಗಳಲ್ಲಿ ಆತ್ಮೀಯತೆಯ ಭಾವನೆಯು ಸೇರಿಕೊಂಡಿರುತ್ತದೆ; ಬಂದಿರುತ್ತವೆ. ಕೆಲವು ಸ್ಥಳದಲ್ಲಿ ಮಾತನಾಡಲು ಪ್ರಾರಂಭಮಾಡಿದ ಕೂಡಲೆ ಮಾನಸಿಕ ದುರಭಿಮಾನಗಳಿಗೆ ಎಡೆಯಾಗಿ ವಾದಿಸುತ್ತಾರೆ. ಇಂತಹವು ಮತ, ಜಾತಿ, ಪ್ರಾಂತ, ಭಾಷೆ– ಮೊದಲಾದುವುಗಳಲ್ಲಿಯೂ ಬಂಧು, ಗುರು ಮೊದಲಾದ ಆತ್ಮೀಯರಿಗೆ ಸಂಬಂಧಪಟ್ಟ ವಿಷಯಗಳಲ್ಲಿಯೂ ಸುಲಭವಾಗಿ ಕಾಣಬರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ಹೊಗಳು-ತೆಗಳುಗಳು ಇದ್ದಲ್ಲೆಲ್ಲ ಅದರ ಹಿನ್ನೆಲೆಯಾಗಿ, ಹಿಂದೆ ಹೇಳಿದಂತೆ ಅಭಿಮಾನ-ತಿರಸ್ಕಾರಾದಿಗಳು ಇದ್ದೇ ಇರುತ್ತವೆ. ಎಂದಮೇಲೆ ಹೊಗಳಿಕೆಗೆ ಅಭಿಮಾನಾದಿಗಳೂ, ತೆಗಳಿಕೆಗೆ ಅಸಹನೆ ತಿರಸ್ಕಾರಾದಿಗಳೂ ಕಾರಣಗಳೆಂದು ಸಾಮಾನ್ಯವಾಗಿ ನಿರ್ಣಯಿಸಿ ಹೇಳಬಹುದು.

ಜಯಂತ

ಭಾಗವ್ವ:— ನಾ ಏನು ಅಂದೆ? ನನಗೇನು ತಿಳಿತಿದ! ನಾ ಏನು ನಿಮ್ಮ ಹಾಂಗ ಕೈನೋಡತೀನೇನು?

ವೈದ್ಯರು:— ಕೈಯಾಕ ನೋಡಬೇಕು? ಮಾರೀ ನೋಡಿದರ ತಿಳಿಯೂದಿಲ್ಲೇನು? ಎಂಟುಮಕ್ಕಳ ತಾಯಿಯಲ್ಲs ನೀನು!

ಭಾಗವ್ವ:— ನಿಮ್ಮ ಮಾತೇ ನನಗ ತೀಳಿವೊಲ್ಲದು. ಏನದು? ಸ್ಪಷ್ಟಾಗಿ ಹೇಳರೆಲ್ಲಾ; ಏನದು? ಏನಾಗೇದ ಕಮಲಿಗೆ?

ವೈದ್ಯರು:— ಆಗಳೇ ನೀನs ಅನ್ನಲಿಲ್ಲs.. ನಿನಗ ಮೊಮ್ಮಕ್ಕಳು ಬರೋ ದಿನಾ ಆತು— ಅಂತ! ಅದೇ ಆಗೇದ!

ಭಾಗವ್ವ:— (ಗಾಬರಿಯಾಗಿ) ಅಂದರ..ಅಂದರ..ಕಮಲಿಗೆ ಬಸರೋ ಏನು ಮಣ್ಣು?

ವೈದ್ಯರು:— ಹಾಂ— ಅದೇ ನೋಡು! ಅಂತೇ ಆಕೀ ಹೆಸರು ತಗೀಬ್ಯಾಡಾ ಅಂದೆ!

ಭಾಗವ್ವ:— ನಾ ಎರಡೇ ಎರಡು ತಿಂಗಳು ಊರಿಗೆ ಹೋಗಿ ಬರೋದರಾಗs ಏನು ಅನರ್ಥ ಆಗಿ ಬಿಟ್ಟsದಲ್ಲಾ ಇದು! ನನಗ ಮೊದಲs ಗೊತ್ತಾಗಲಿಲ್ಲ! ಅಲ್ಲಾ! ನಿಮಗ ಗೊತ್ತಿದ್ದೂ ನೀವು ಹಾಂಗs ಇದ್ದೀರಲ್ಲಾ! ಏನನಬೇಕು..? ನನಗೂ ಹೇಳಬಾರದೇನು ಇದನ್ನ?

ವೈದ್ಯರು:— ಯಾರಿಗೆ ಹೇಳಿ ಏನು ಮಾಡೋದದ! ನನಗ ಅದರ ಸಂಬಂಧಾನs ಇಲ್ಲ! ಭಿನ್ನಕರ್ಮ, ಭಿನ್ನಜೀವ! ನನಗೇನೂ ಗೊತ್ತಿಲ್ಲ! (ಎಂದು ತಂಬಿಯನ್ನು ಮುಚ್ಚಿಕೊಂಡು ಕೂಡುವರು.)

ಭಾಗವ್ವ:—ಹೀಂಗ ಒಳಗ ಹೊಲಸು ಇಟಕೊಂಡು, ಮ್ಯಾಲೆ ಮ್ಯಾಲೆ ಕಣ್ಣುಮುಚ್ಚಿದರ ಏನು ಮಾಡಿದ್ಹಾಂಗ ಆತು?, ಹೇಳರಿ; ಈಗ ಏನು ಮಾಡಬೇಕು? ಹೇಳರಿ! ಹಾಂಗ ಸುಮ್ಮನೆ ಕೂತರ ನಾಳೆ ನಾಲ್ಕು ಮಂದ್ಯಾಗ ಏನಾದೀತು ನಮ್ಮ ಅವಸ್ಥೆ? ಮಾನಾ-ಮರ್ಯಾದೀ ಒಂದೂ ಉಳೀಲಿಕ್ಕಿಲ್ಲ!

ವೈದ್ಯರು:— ನಾ ಆಗಳೇನs ಹೇಳಲಿಲ್ಲs! ನನಗೇನೂ ಗೊತ್ತಿಲ್ಲಾ ಅಂತ! ಆಗೋದೆಲ್ಲಾ ಆಗಲಿ, ಬ್ಯಾಡಾ ಅಂದರ ಎಲ್ಲಿ ಬಿಡತಿದ? ನೂರು ಜನ್ಮದ ಪಾಪ, ಹೊಟ್ಟೆಯ ಪಿಂಡವಾಗಿ ಬಂದು, ಪ್ರಾಯಶ್ಚಿತ್ತ ಕೊಡಸತಿದ!

ಭಾಗವ್ವ:— ಹಾಂಗಾರ ಆಕೀ ಬಾಣಂತಿತಾ ನಾ ಮಾಡಬೇಕಂತೀರೋ ಏನು ನೀವು ಅಂಬೋದು?

ವೈದ್ಯರು:— ಹೂಂ, ಆಕೀ ಬಾಣಂತನಾ ಮಾಡು; ಆ ಪುರಾಣದ ಆಚಾರಿನ್ನ ಕರಕೊಂಡು ಬಂದು ಅಳೀತನಾನೂ ಮಾಡು! ಸಾಗಲಿ, ಎಲ್ಲಾ ಸಾಗಲಿ!

ಭಾಗವ್ವ:— ಸುಡುಗಾಡು ಸುಂಗಲಿ; ಆ ಪುರಾಣದ ಆಚಾರಿ ಹಗಲೆಲ್ಲಾ ಹೀಂಗs! ಆದಕ್ಕs ನಾ ಅವರನ್ನ ಮನ್ಯಾಗs ಬರಗೊಟ್ಟಿದ್ದಿಲ್ಲ. ನಾ ಇದ್ದರೆ ಇದೆಲ್ಲಾ ಎಲ್ಲಿ ಆಗತಿತ್ತು? ನಾ ಹೋದದ್ದೇ ತಪ್ಪು! ಎಲ್ಲಾ ನನ್ನ ತಪ್ಪು! ಅಲ್ಲಾ, ನಿಮಗ ಮೊದಲs ತಿಳಿದಿದ್ದ! ತಿಳಿದು ಇಷ್ಟುದಿನಾ ಆದರೂ ಸುಮ್ಮನೇ ಕೂತೀರಲ್ಲಾ! ಕೂತೀರಾದರೂ ಹ್ಯಾಂಗ ನೀವು?

ವೈದ್ಯರು:— ಅಂದರ ನಾ ಏನುಮಾಡಲಿ? ಊರಾಗೆಲ್ಲಾ ಡಂಗುರಾ ಸಾರಲೇನು..ನನ್ನ ಮಗಳು ಹೀಂಗ ಆಗ್ಯಾಳ ಅಂತ?

ಭಾಗವ್ವ:— ನೀವು ಸಾರದಿದ್ದರೆ ಆದು ಬಿಡತಿದೇನು ಹೀಂಗs ಕೂತರ?

ವೈದ್ಯರು:— ಹಾಂಗಾದರ ನಾ ಏನು ಮಾಡಬೇಕಂತೀದಿ ಇದರಾಗ?

ಭಾಗವ್ವ:— ತಿಳೀದೇ ಇರೋರ್ಹಾಂಗ ಕೇಳತೀರಲ್ಲಾ ನನ್ನ! ನನಗ ಗೊತ್ತಿದನs ಔಷಧ? ನಾ ಕೊಡಲ್ಯಾ?

ವೈದ್ಯರು:— ಅಂದರ..! ಔಷಧಾ ಕೊಡೂಂತ ನನಗ ನೀ ಹೇಳತೀಯೋ ಏನು?

ಭಾಗವ್ವ:— ನಾಯಾಕ ಹೇಳಬೇಕು? ನಿಮಗ ತಿಳಿಯೋದಿಲ್ಲೇನು? ಔಷಧಾಕೊಟ್ಟು ಆ ಅರಿಷ್ಟನ್ನ ಹೊರಗ ಹಾಕಿಬಿಡಬೇಕು; ಇಲ್ಲದಿದ್ದರ ನಾಕು ಮಂದ್ಯಾಗ ಮಾರೀ ತೋರಸೋದು ಬಿಗೀ ಆದೀತು; ಮನ್ಯಾಗ ಮುದಿವೀ ಮುಂಜಿವೀ ಆಗೋದು ಬಂದಾದೀತು!

ವೈದ್ಯರು:— ಇದು ನನ್ನ ಕೈಯಿಂದ ಸಾಧ್ಯ ಇಲ್ಲ! ನಾ ಬೇಕಾದರ ಇನ್ನು ಮ್ಯಾಲೆ ಔಷಧಾ ಕೊಡೋದs ಬಿಡತೀನಿ! ಇದನ್ನ ಮಾತ್ರ ನಾ ಮಾಡಲಾರೆ. ಭ್ರೂಣಹತ್ಯಾ..ಭ್ರೂಣಹತ್ಯಾ ಮಹಾಪಾಪ!

ಭಾಗವ್ವ:—ಮನೀಮಾತಿನ್ಯಾಗ ಶಾಸ್ತ್ರಾಗೀಸ್ತ್ರಾ ತರಬ್ಯಾಡ್ರೀ ಅಂತ ನಾ ಹೇಳಿಲ್ಲs ನಿಮಗ?

ವೈದ್ಯರು:— ನಿನ್ನ ಮನೀ ಮಾತೂ ನನ್ನಿದಿರಿಗೆ ತರಬ್ಯಾಡಾ ಅಂತ ನಾ ಹೇಳಿಲ್ಲs? ಈಗ್ಯಾಕ ತಂದಿ? ಸನ್ಯಾತಕ್ಕ ಕೇಳತೀದಿ; ನಿನ್ನ ಮನಸಿಗೆ ಬಂದ್ಹಾಂಗ ಮಾಡು!

ಭಾಗವ್ವ:— ಇದು ಮನೀ ಮಾತಲ್ಲಿದು! ಇದು ನಿಮ್ಮ ಮಾತೂ ಆದ, ನನ್ನ ಮಾತೂ ಆದ, ನಾಲ್ಕು ಜನರ ಮಾತೂ ಆದ! ಇನ್ನೂ ಯಾರಿಗೂ ಗೊತ್ತಾಗೂದಕಿಂತಾ ಮೊದಲs ಇದನ್ನ ಗೊತ್ತಿಗೆ ಹಚ್ಚಿಬಿಡಬೇಕು. ಯಾರಿಗೂ ಗೊತ್ತಾಗಬಾರದು!

ವೈದ್ಯರು:— ನಾ ಆಗಳೇ ಹೇಳೀನಿ; ನನಗೇನೂ ಇದು ಸಂಬಂಧಪಟ್ಟಿಲ್ಲಾ ಅಂತ!

ಭಾಗವ್ವ:— ಅಧ್ಹ್ಯಾಂಗ ಅಂತೀರಿ ಹೀಂಗs— ಅಂತೀನಿ! ನಾಳೆ ಅವಕೀರ್ತಿ ಬಂದರ ನನಗೊಬ್ಬಾಕಿಗೇ ಬರತಿದ ಕಾಣಿಸತಿದ! ನಿಮಗೇನೂ ಬರೋದೇ ಇಲ್ಲ! ಪಾಪ, ನಿಮ್ಮ ಹೆಸರs ಗೊತ್ತಿಲ್ಲ ಯಾರಿಗೂ! ಹೀಂಗs ಬಿಡಿರಿ ಇದನ್ನ; ಮುಂದ ಗೊತ್ತು ಆಗತಿದ.. ನಾಕುಮಂದ್ಯಾಗ ಹ್ಯಾಂಗ ಮಾರೀ ತೋರಿಸತೀರಿ ಅಂಬೋದು! ಮನೀ ಮಾತಾ ಉಳಿಸರೀ ಅಂತೀನಿ!

ವೈದ್ಯರು:— ಮನೀ ಮಾನಾ ಉಳಸಲ್ಯಾ? ಮನೀ ಮಾನಾ..ಈ ಮನೀಬಿಟ್ಟು ಹೋಗಿಬಿಟ್ಟರ....!

ಭಾಗವ್ವ :— ಅದೆಲ್ಲಿಗೆ ಹೋಗತಿದ್ದೀರಾದೀತು? ಎಲ್ಲಿ ಹೋಗತೀರೋ ಅಲ್ಲಿಗೆ ನಿಮ್ಮ ಬೆನ್ನು ಹತ್ತಿ ಬರೋದಕ ಇದು! ಮನೀ ಮಾನಾ ಇಷ್ಟಕ ಅಲ್ಲ; ಔಷಧ ಕೊಟ್ಟು ನಿಮ್ಮ ಮಾನಾನೂ ಇಷ್ಟು ಕಾಯ್ದುಕೊಳ್ಳಿರಿ. ಸುಮ್ಮನಕ ಸಿಟ್ಟಿನ ಕೈಯಾಗ ಬುದ್ದೀ ಕೊಡಬ್ಯಾಡರಿ!

ವೈದ್ಯರು :— ನನ್ನ ಮಾನ! ನನ್ನ ಪವಿತ್ರವಾದ ವೃತ್ತಿಗೆ ಕಲಂಕಹಚ್ಚಿ, ನನ್ನ ಮಾನಾ ನಾ ಕಾಯ್ದುಕೊಳ್ಳಬೇಕಕ? ಸಾಧ್ಯವಿಲ್ಲ. ತಂದೆ-ಅಜ್ಜನವರ ಕಾಲದಿಂದಲೂ ಭಕ್ತಿವಿಶ್ವಾಸಗಳಿಂದ ಆರಾಧಿಸಿ ಪಡೆದ ಈ ನನ್ನ ಸಿದ್ಧಿಯನ್ನು, ನಾನು ನನ್ನ ಮಾನಕ್ಕಾಗಿ ಮಾರಿಕೊಳ್ಳಲಾರೆ! ಬೇಡ; ನನ್ನನ್ನು ಈ ಮೋಹಪಾಶದಲ್ಲಿ ಹಾಕಬೇಡ ಬಿಡು, ನನ್ನನ್ನು....!

ಭಾಗವ್ವ :— ಅಲ್ಲಾ, ಏನಿದು, ಏನು ರಂಭಾಟಾ? ಅಲ್ಲಾ ನೀವೆಲ್ಲಿಗೆ ಹೋದರೆ ಏನು? ಇದು ನಿಮ್ಮ ಮನಿ, ಇದು ನಿಮ್ಮ ಸಂಸಾರ, ನಿಮ್ಮ ಹೆಂಡತಿ, ನಿಮ್ಮ ಮಕ್ಕಳೂ ಅಂತ ಅಂಬೋದು ಎಲ್ಲಿ ಹೋದರೆ ತಪ್ಪೀತು? ವಿಚಾರಮಾಡ್ರಿ. ಕೈತಪ್ಪಿ ಹೋದ ವ್ಯಾಳೆ ಏನು ಕೊಟ್ಟರೂ ಸಿಗಲಿಕ್ಕಿಲ್ಲ. ನಿಮ್ಮ ಕೈಯಿಂದ ಆಗದಿದ್ದರೆ ನನ್ನ ಕೈಯಾಗ ಕೊಡ್ರಿ! ನಾ ಏನಾದರೂ ಯಾಕ ಮಾಡಿಕೋವಲ್ಯಾಕ! ಏನು ಇದ್ರೂ ಮನಶ್ಯಾನಕಿಂತಾ ಮನೆತನ ದೊಡ್ಡದು! ನಾಕು ಮುಂದಿನ್ನ ಬಿಟ್ಟು ಇರಲಿಕ್ಕೆ ಹ್ಯಾಂಗ ಬರತಕದ! ಹುಡುಗನು ಅವ; ಆವರ ಕಡೆಯರೆ ನೋಡಿ, ನಾ ಹೇಳೋ ಮಾತು ಕೇಳರಿ! ಇಲ್ದೇಹೋದರೆ ಭ್ರೂಣಹತ್ಯಾ ಒಂದು ತಪ್ಪಿಸಿಕೊಂಡು, ಈ ಕುಟುಂಬಹತ್ಯಾ ತಲೀಗೆ ಕಟ್ಟಿಕೊಳ್ಳಿ!.. .. ಅಂದರ ಛಂದ ಕಾಣಸತಕದ!

ವೈದ್ಯರು :— (ಎದ್ದುನಿಂತು) ನನ್ನ ಕೈಯಿಂದ ಸಾಧ್ಯವಿಲ್ಲ; ನಾ ಇಲ್ಲಿಂದ ಹೋಗಿಬಿಡತೀನಿ!

ಭಾಗವ್ವ :— (ಕಾಲುಹಿಡಿದುಕೊಂಡು) ಬ್ಯಾಡಾ,—ಬ್ಯಾಡೊ, ಹಾಂಗ ಹೋಗಬ್ಯಾಡರಿ! ನಿಮ್ಮ ಕೈಹಿಡಿದ ಅರ್ಧಾಂಗಿ ಕೇಳತಾಳಕ ಅಂತ ಭಿಕ್ಷಾಹಾಕರಿ! ನಿಮ್ಮ ಮಕ್ಕಳ ತಾಯಿ ಪ್ರಾರ್ಥಿಸತಾಳಕ ಅಂತ ಅನುಗ್ರಹಾ ಮಾಡಿರಿ! ಬರೋ ಪಾಪೆಲ್ಲಾ ನನಗೇ ಬರಲಿ? ನಾನು ದುರ್ದೈವಿ. ನಾನೇ ಪಾಪಿ! (ಎಂದು ಬಿಕ್ಕಿಬಿಕ್ಕಿ ಅಳುತ್ತ ಗಂಡನ ಕಾಲಮೇಲೆ ಬಿದ್ದುಬಿಡುವಳು).

ವೈದ್ಯರು:— (ಅವಳನ್ನು ಹಾಗೆಯೆ ಕಾಲಿನಿಂದ ನೂಕುತ್ತ ಮುಂದೆ ಬಂದು ಬಾಗಿಲವರೆಗೂ ಬರುವರು.)

(ಬಾಗಿಲನ್ನು ತೆಗೆಯಹೋಗಲು ಭಾಗವ್ವ ಎದ್ದು)

ಭಾಗವ್ವ:— (ಬಾಗಿಲಿಗೆ ಅಡ್ಡಕಟ್ಟಿ ನಿಂತು.) ಹಾಂ, ತಡೀರಿ. ನಾ ಇಷ್ಟು ಹೇಳಿಕೊಂಡರೂ ನಿಮಗ ದಯಾ ಬರಲೊಲ್ಲದು! ಹಂಗರಕ ಒಂದು ಮಾತು ಕೇಳರಿ! ಹೀಂಗ ಹೆದರಿ ಓಡಿಹೋಗು ವದಕ್ಕಿಂತಾ ನಮ್ಮನ್ನೆಲ್ಲಾ ಒಂದು ಗುಳಿಗೀ ಕೊಟ್ಟು ಇಲ್ಲದ್ಹಾಂಗ ಮಾಡಿ, ಮುಂದೆ ನೀವು ಏನು ಬೇಕಾದದ್ದು ಮಾಡ್ರಿ! ಹೇಡಿಯ ಹಾಂಗ ಓಡಿಹೋದರ ಏನು ದೊಡ್ಡ ಕೆಲಸಾ ಮಾಡಿದ್ಹಾಂಗ ಆತೇನು? ನಾಳೆ ಎಲ್ಲಾರಿಗೂ ಗೊತ್ತಾಗೇ ಆಗತಕದ. ಮತಕ್ಕೂ ಗೊತ್ತಾಗದೇ ಬಿಡತಕದೇನು? ಆವಾಗ ನಿಮ್ಮ ಅವಸ್ಥೇನೂ ಏನು ಆಗತಕದ.. ತಿಳಿದಿದ್ದೇ ಅದ!

ವೈದರು:— (ಸಂತಾಪದಿಂದ ಏನೂ ತೋಚದೆ). ಹಾಂಗಾರ ನಾ ಏನು ಮಾಡಬೇಕಂತೀದಿ..ಮ್ಹಾರಾಯಳಕ? ಹೇಳು! ಆಗಿ ಹೋಗ್ಲಿ!

ಭಾಗವ್ವ:— ಹೀಂಗ ಅನ್ನಿರಿ! ಶಾಂತರಾಗಿರಿ! ಮನೀದೂ ನಿಮ್ಮದೂ ಕೂಡೇ ಮಾನಾ ಕಾಯಿರಿ! ಹಾಂ! ತಗೀರಿ ಆ ಮಾತ್ರಿ! ಇಲ್ಲಿ ನನ್ನ ಕೈಯಾಗ ಕೊಡಿರಿ! ಇಷ್ಟಾದರೆ ಸಾಕು; ನಾ ಮುಂದೆಲ್ಲಾ ಮಾಡಿಕೋತೀನಿ!

ವೈದ್ಯರು:— (ಮೂಕರೂ ಮೂಢರೂ ಆಗಿ ಕಪಾಟನ್ನು ತೆರೆದು, ಮಾತ್ರೆಯನ್ನು ಹೆಂಡತಿಯ ಕೈಯಲ್ಲಿ ಕೊಟ್ಟು, ಇದ್ದಕ್ಕಿದ್ದಂತೆ ಬಿದ್ದುಬಿಡುವರು.)

ತೆರೆ ಬೀಳುವುದು.

ಹಿಂದುಸ್ಥಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆಪಿದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಜಸ್ಸಿ ಸುಪರಿಂಟಿಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಗೆಳೆಯನಿಗೆ

ಶ್ರೀ. ಎಂ. ಗೋಪಾಲಕೃಷ್ಣ ಅಡಿಗ

★

ನನ್ನ ಬಾಳ ಬೇಗೆ ನಿನ್ನ
ಬಗೆಯ ಮುಸುಕದಿರಲಿ, ಗೆಳೆಯ!
ನನ್ನ ಬನ್ನ ನಿನ್ನ ಅನ್ನ-
ದಲ್ಲಿ ವಿಷವ ಬೆರಸದಿರಲಿ;
ನನ್ನ ಕುಂದುಕೊರತೆ ನಿನ್ನ
ಜೀವದೊರತೆಯನ್ನು ಕಲಕು-
ಮಲಕುಗೊಳಿಸದಿರಲಿ; ನನ್ನ
ವಿಗಡಮನದ ಪಡುಗು ನಿನ್ನ
ಮನವ ಸೋಂಕದಿರಲಿ; ಗೆಳೆಯ!

ಗಾಳಿಗ್ಯೆಯ ಮುಗಿಲಿನಂತೆ!
ಹೊನಲ ಹೊಡೆಯ ತಳಿರಿನಂತೆ
ದಾರಹರಿದ ಗಾಳಿಪಟದ
ವಿಕಟನಾಟ್ಯದಂತೆ ನಾವು
ಸಾಗಬಹುದು ತಾನೆ, ಸೂತ್ರ-
ಧಾರನಿಚ್ಛೆ ತೋರಿದಂತೆ!

ಒಂದು ತೊರೆ ಹಿಮಾದ್ರಿಯಲ್ಲಿ
ಒಂದು ವಿಂಧ್ಯಗಿರಿಯೊಳಿಗೆದು
ಒಂದು ಹೊಂದುವಳಿಕೆಗಾಗಿ
ನೊಂದುಬೆಂಡಪೇನು ಫಲವು?
ಕೊಂದು ಕಳೆವ ಕಟುನಿರಾಶೆ!
ಮಂದಭಾಗ್ಯರಾವು ನಿಜವು!

ಪ್ರೀತಿರಸದ ಮೃದುಮರಂದ-
ದಿಂದ ಬೆಂದಬಗೆಯ ತಣಿಸ-
ದಾದೆವಣ್ಣ,— ಮಾಡಲೇನು?
ಬಂದ ಹಾದಿ ಬೇರೆ; ಬಂದು
ನಿಂದ ನೆಲೆಯು ಬೇರೆ, ಬೇರೆ!

ಒಂದು ಒಡಲ ಬಡಬದುರಿಗೆ
ಬೆಂದು ಮಿಡುಕುತಿರುವ ಕಡಲು;
ಒಂದು ಮೆಲ್ಲೆಲರ್ಗೆ ನಸುವೆ
ಹೊಳಕುತಿರುವ ಸರದ ಬೆಡಗು!
ಒಂದು ಶರದಚಂದ್ರನೆದೆಯ
ಹಾಲಸುಂಡ ಬೆಳ್ಳಿಮುಗಿಲು;
ಒಂದು ಸುರದ ಮಡಿಲ ಸುರೆಯ
ಕೆಂಪು ತಂಪು ತಳಿದ ತಳಿರು!
ಒಂದು ಹೃದಯಸಿಂಧುವಿನಲಿ
ಮುಳುಗಿ ತನ್ನತಾನೆ ಮರೆತ
ನಿಜಲಜೀವ; ಒಂದು ಬಾಳಿ-
ನಲ್ಲಿ ತನ್ನ ನೆಲೆಯ ಬೆಲೆಯ-
ನರಿತು ಸ್ಪಷ್ಟತುಷ್ಟಭಾವ-
ಗಳಲಿ ನೆಟ್ಟ ಬಗೆಯ ಜೀವ!

ಅಳಲ ಬಿತ್ತಿ ಅಳಲ ಬೆಳೆದು
ಅದನೆ ಲೋಕಕೀವುದೊಂದು;
ನೆಲವ ನಲವಿನೊರತೆಯಲ್ಲಿ
ಮಿಂದು ನಿಂದ ಜೀವವೊಂದು.
ಎರಡರೊಳಗೆ ಹೊಂದುವಳಿಕೆ—
ಅದುವೆ ಮುಗಿಲಹೂವಲಿ!
ಕರಗುತಿಹುದು ಹೃದಯ; ಮೂಕ-
ವಾಗುತಿಹುವು ಭಾವ, ಜೀವ.

ಆದರೇನು, ನನಗೆ-ನಿನಗೆ,
ತಾಳಬೇರೆ, ತಂತಿಬೇರೆ!
ಅದಕೆ ಪದನನಿಟ್ಟ ತಾಳ-
ಗತಿಗೆ ಕುಂದು ಬರದ ಹಾಗೆ,
ಕುಣಿಯಬೇಕು; ಮಣಿಯಬೇಕು;
ತಣಿಸಬೇಕು— ಬಾಳಬೇಗೆ!

ಜೀವನಸತ್ತ್ವ

ಶ್ರೀ. ಬಿದರಳುಂದಿ ವೆಂಕಟರಾಯರು, ಗದಗು

ಅನ್ನದಲ್ಲಿಯ ಪೌಷ್ಟಿಕ, ಸ್ನಿಗ್ಧ, ಪಿಷ್ಟಮಯ ಇತ್ಯಾದಿ ಘಟಕಗಳು ಶರೀರಪೋಷಣೆಗೆ ಮತ್ತು ಸಂವರ್ಧನಕ್ಕೆ ಆವಶ್ಯಕವಿರುವವು. ಆದರೆ ಜೀವನಸತ್ತ್ವದ ಅಭಾವದಿಂದ ಅವುಗಳ ಉಪಯೋಗ ಸಾಕಷ್ಟು ಆಗಲಾರದು. ನೈಸರ್ಗಿಕ ಖಾದ್ಯ-ಪೇಯಗಳಲ್ಲಿಯೆ ಜೀವನಸತ್ತ್ವವು ಸಂಪೂರ್ಣವಾಗಿ ದೊರೆಯುತ್ತದೆ.

ಮನುಷ್ಯನು ತನ್ನ ಜೀವನಯಾತ್ರೆಯನ್ನು ಸಾಗಿಸುತ್ತಿರುವಾಗ, ಸುತ್ತಲಿನ ವಸ್ತುಗಳನ್ನು ಸಂಗ್ರಹಿಸಿ ಶರೀರದ ಪೋಷಣೆಯನ್ನೂ ಸಂವರ್ಧನೆಯನ್ನೂ ಮಾಡಿಕೊಳ್ಳುತ್ತ ಬಂದಿರುವನು. ಜೀವನ ಮತ್ತು ಆರೋಗ್ಯ ಇವುಗಳಿಗೆ ನಿಕಟಸಂಬಂಧವಿರುತ್ತದೆ. ಮನುಷ್ಯನ ಆರೋಗ್ಯಕ್ಕೂ ಬೆಳವಣಿಗೆಗೂ ಬೇಕಾದ ದ್ರವ್ಯಗಳು ನೈಸರ್ಗಿಕಖಾದ್ಯ-ಪೇಯ ವಸ್ತುಗಳಲ್ಲಿಯೆ ಹೆಚ್ಚಾಗಿ ಇರುವುವು; ಅಂತೆಯೆ, ಋಷಿಗಳು ಗಡ್ಡೆ-ಗೆಣಸು, ಎಲೆ-ತೊಪ್ಪಲುಗಳನ್ನೇ ತಿಂದು ನೂರಾರು ವರುಷ ಬಾಳಿ, ಮುಪ್ಪಿನಲ್ಲಿಯೂ ಶೌರ್ಯ-ಸಾಹಸಗಳನ್ನು ತೋರಿಸಿದ ಇತಿಹಾಸವು ನಮ್ಮ ಕಣ್ಣೆದುರು ಇದೆ. ಅದೇ ಧಾಟಿಯನ್ನೇ ಹೊಸಸಂಶೋಧನವೆಂದು ಇಂದು ನಮ್ಮೆದುರು ಇಡಲು ಮುಂದೆ ಬಂದ ಪಾಶ್ಚಿಮಾತ್ಯರನ್ನು, ಶಾಸ್ತ್ರಜ್ಞರೆಂದು ನಾವು ಅವರನ್ನು ಹೊಗಳುತ್ತೇವೆ.

ಸುಧಾರಣೆಯು ಹೆಚ್ಚಾದಂತೆ ಆಹಾರದಲ್ಲಿಯೂ ಸುಧಾರಣೆಯಾಗಿದ್ದುದು ಮಹತ್ತ್ವದ್ದಲ್ಲ. ಆಹಾರವನ್ನು ಕುದಿಸಿ ತಿನ್ನುವುದರಿಂದ ಆದರಲ್ಲಿದ್ದ ಜೀವನಸತ್ತ್ವವು ಹೆಚ್ಚು-ಕಡಿವೆ ಪ್ರಮಾಣದಿಂದ ನಾಶವನ್ನೇ ಹೊಂದುತ್ತದೆಂಯೆದು ಈಗ ತಿಳಿದುಬಂದಿದೆ. ಆಹಾರದಲ್ಲಿ ಜೀವನಸತ್ತ್ವವೆಂಬ ಹೊಸ ಪದಾರ್ಥವನ್ನು ಶೋಧಿಸಿದ ಶ್ರೇಯವು— ೩೫-೩೦ ವರುಷಗಳಿಂದ— ಪಾಶ್ಚಿಮಾತ್ಯರಿಗೆ ಸಲ್ಲುತ್ತಿರುವುದು. ಸಾಮಾನ್ಯವಾಗಿ ಶರೀರಪೋಷಣೆಗೆ ಮುಖ್ಯವಾಗಿ ಐದು ಘಟಕಗಳ ಅವಶ್ಯಕತೆಯುಂಟೆಂದು ಆರೋಗ್ಯ-ಶಾಸ್ತ್ರವು ಹೇಳಿದರೂ, ರೋಗಗಳ ಉಪಟಳವು ಹೆಚ್ಚಾದುದರಿಂದ ಆಹಾರದಲ್ಲಿ ಏನೋ ಒಂದು ಪದಾರ್ಥವು ಕಡಿಮೆ ಇರುವುದೆಂದು ಸಂಶೋಧಕರು ಪ್ರಯತ್ನಿಸಿ, ಆರನೆಯ ಪದಾರ್ಥದ ಗೊತ್ತನ್ನು ಹಚ್ಚಿರುವರು. ಅದೇ ಈ ಜೀವನಸತ್ತ್ವವು (ವಿಟ್ಯಾಮಿನ್).

ಜೀವಿಸುವ ಮನುಷ್ಯನಿಗೆ (೧) ಪೌಷ್ಟಿಕ:— ಹಾಲು, ಬೇಳೆ, ತತ್ತಿ, ಮಾಂಸ ಇತ್ಯಾದಿ— (೨) ಪಿಷ್ಟಮಯ ಅಥವಾ ಹಿಟ್ಟು:— ಅಕ್ಕಿ, ಸಕ್ಕರೆ ಇತ್ಯಾದಿ (೩) ಸ್ನಿಗ್ಧ:— ಎಣ್ಣೆ, ತುಪ್ಪ, ಬೆಣ್ಣೆ, ನೆಣ ಇತ್ಯಾದಿ (೪) ಕ್ಷಾರ:—ಉಪ್ಪು (೫) ನೀರು ಇವುಗಳ ಆವಶ್ಯಕತೆಯುಂಟು. ಇವಲ್ಲದೆ ಆರನೆಯ ಪದಾರ್ಥವಾದ ಜೀವನಸತ್ತ್ವವು ಅನ್ನದಿಂದ ಸಾಕಷ್ಟು ಸಿಕ್ಕದಿದ್ದರೆ, ಮನುಷ್ಯನ ಬೆಳೆವಣಿಗೆಯೂ ಪ್ರಜೋತ್ಪಾದನಶಕ್ತಿಯೂ ಕುಗ್ಗಿ, ರೋಗಪ್ರತಿಬಂಧಕ ಶಕ್ತಿಯೂ ಇಲ್ಲದಂತಾಗುವುದು. ಮತ್ತು ಹಸಿವೆಯಾಗದೆ ಅನ್ನ ಸಹನವಾಗದೆ ಪ್ರಕೃತಿಯು ಕ್ಷೀಣವಾಗ ಹತ್ತುವುದು.

ಖಾದ್ಯ-ಪೇಯಗಳನ್ನು ಮುಚ್ಚದೆ ಹಾಗೆಯೆ ಬಯಲಿಗೆ ತೆರೆದು ಇಡುವುದರಿಂದ, ಅದರಲ್ಲಿದ್ದ ಜೀವನಸತ್ತ್ವವು ಮೆಲ್ಲಮೆಲ್ಲಗೆ ಕಡಿಮೆಯಾಗುತ್ತ ಹೋಗುವುದು.

ಶರೀರ ಪೋಷಣೆಗೆ ಸಾಕಷ್ಟು ಜೀವನಸತ್ತ್ವವು ಸಿಕ್ಕದಿದ್ದರೆ ನೆಗಡಿ, ಕೆಮ್ಮು ಇತ್ಯಾದಿ ಸಾಧ್ಯರೋಗಗಳ ಜಾಡ್ಯವು ಕೂಡ ಹವೆ-ನೀರುಗಳ ಬದಲಾವಣೆಯಿಂದ ಆಗುವುದು. ಮತ್ತು ಶಾರೀರಿಕ, ಬೌದ್ಧಿಕಕಷ್ಟಗಳನ್ನು ಎದುರಿಸುವ ಶಕ್ತಿಯು ಇಲ್ಲದಂತಾಗುವುದು. ಎಂದರೆ ಮನುಷ್ಯನ ಪ್ರಕೃತಿಗೆ ೫ ಘಟಕಗಳ ಪೂರಯಿಕೆಯಾದರೂ ಜೀವನಸತ್ತ್ವದ ಅಭಾವದಿಂದ ಈ ಎಲ್ಲ ಪೋಷಣೆಗಳೂ ಅಸಮರ್ಥವಾಗುವುವು.

ಜೀವನಸತ್ತ್ವವು ಆಹಾರಪದಾರ್ಥಗಳಲ್ಲಿ ಧಾನ್ಯ, ಎಲೆ, ತೊಪ್ಪಲುಪಲ್ಲೆ, ಹಣ್ಣು, ತತ್ತಿ, ಗ್ರಂಥಿ ಮತ್ತು ಯಕೃತ್ತು ಇವುಗಳಲ್ಲಿ ವಿಶೇಷ ಪ್ರಮಾಣದಿಂದ ಇರುತ್ತದೆ. ಮಾಂಸ, ಹಿಟ್ಟು, ಬಟಾಟಿ, ಎಣ್ಣೆ, ಸಕ್ಕರಿಗಳಲ್ಲಿ ಮಾತ್ರ ಅತಿ ಸ್ವಲ್ಪ ಪ್ರಮಾಣದಿಂದ ಸಿಕ್ಕುವುದು.

ಜೀವನಸತ್ತ್ವದಲ್ಲಿ ಈ ವರೆಗೆ **ಅ, ಬ, ಕ, ಡ, ಈ** ಎಂಬುವುಗಳ ಗುಣಧರ್ಮಗಳನ್ನು ಶಾಸ್ತ್ರಜ್ಞರು ಪರಿಶೀಲಿಸಿ, ಪ್ರಪಂಚದ ಅನುಭವಕ್ಕೆ ತಂದುಕೊಟ್ಟಿರುವರು. **ಬ,** ಜೀವನಸತ್ತ್ವವೇ ಮೊದಲು ಸಂಶೋಧಿತವಾಯಿತು. ಅದರಲ್ಲಿ **ಬ೧, ಬ೨** ಹೀಗೆ ಎರಡು ಭಾಗಗಳನ್ನು ಬೇರೆಬೇರೆಯಾಗಿ ಎಂಗಡಿಸಿರುವರು; ಅಲ್ಲದೆ '**ಬ**' ಜೀವನಸತ್ತ್ವದಲ್ಲಿ ೮-೧೦ ಭಾಗಗಳ ಸಂಶೋಧನೆಯೂ ಆಗಿರುವುದು. ಮತ್ತು ಫ, ಗ, ಹ, ಜ, ಕ ಗಳ ವರೆಗಿನ ಜೀವನಸತ್ತ್ವದ ಸಂಶೋಧನೆಯು ನಡೆಯ ಹತ್ತಿ, ಯಶಸ್ವಿಯಾಗಹತ್ತಿದ ಅನುಭವದ ಲೇಖನಗಳೂ ಬರತೊಡಗಿವೆ.

ಶಾಸ್ತ್ರಸಮ್ಮತವಾದ. **ಅ, ಬ್ಯ, ಬ್ಬ, ಮತ್ತು ಡ** ಇವು ನಾಲ್ಕು ಸತ್ತ್ವಗಳು, ಉಷ್ಣತೆಯಿಂದ ಬಹಳವಾಗಿ ನಾಶಹೊಂದುವುದಿಲ್ಲ. ಈ ಸತ್ತ್ವಗಳಲ್ಲಿ ಉಪ್ಪಿನಂತಹ ಕ್ಷಾರಪದಾರ್ಥಗಳನ್ನು ಕೂಡಿಸಕೂಡದು. ತೊಪ್ಪಲು, ಎಲೆಪಲ್ಲೆಗಳಲ್ಲಿ ಉಪ್ಪು ಹಾಕಿ ಕುದಿಸಿದರೆ, ಅವುಗಳಲ್ಲಿದ್ದ ಜೀವಸಸತ್ತ್ವವು ಸಂಪೂರ್ಣವಾಗಿ ನಾಶಹೊಂದುತ್ತದೆ. ಅದುದರಿಂದ ಈ ಮಾತು ನಮ್ಮ ಸ್ತ್ರೀಯರು ಅವಶ್ಯವಾಗಿ ನೆನಪಿನಲ್ಲಿ ಇಡತಕ್ಕಂತಹದಾಗಿದೆ. ಯಾವುದೇ ಎಲೆ, ತೊಪ್ಪಲುಪಲ್ಲೆಗಳನ್ನು ನಾಕಷ್ಟು ವೇಳೆಗಿಂತ ಹೆಚ್ಚು ಜೀರ್ಣವಾಗಿ ಕುದಿಸಿದರೂ ಅದರಲ್ಲಿದ್ದ 'ಕ' ಸತ್ತ್ವವು ಇಲ್ಲದಂತಾಗುವುದು.

'ಅ' 'ಡ' 'ಇ' ಸತ್ತ್ವಗಳು ಎಣ್ಣೆ, ತುಪ್ಪ ಇತ್ಯಾದಿ ಸ್ನಿಗ್ಧ-ಪದಾರ್ಥಗಳಲ್ಲಿ ಕರಗುತ್ತವೆ; ಮತ್ತು ಬ್ಯ, ಬ್ಬ, ಮತ್ತು ಕ ಸತ್ತ್ವಗಳು ನೀರಿನಲ್ಲಿ ಕರಗುತ್ತವೆ.

'ಅ' ಜೀವನಸತ್ತ್ವ

'ಅ' ಜೀವನ ಸತ್ತ್ವವು ಹಸುರೆಲೆಗಳಲ್ಲಿ ವಿಶೇಷ ಪ್ರಮಾಣದಿಂದ ಸಿಕ್ಕುತ್ತದೆ. ಹಸುರೆಲೆಗಳ ಮೇಲೆ ಸೂರ್ಯಪ್ರಕಾಶ ಬೀಳುವುದರಿಂದ 'ಕ್ಲೋರೋಫಿಲ್' ಎಂಬ ಹೆಸರಿನ ಪದಾರ್ಥವು ಉಂಟಾಗುತ್ತದೆ. ಹಸುರಿರದ ಎಲೆಗಳಲ್ಲಿ ಈ ಸತ್ತ್ವವು ಸಿಕ್ಕುವುದಿಲ್ಲ. ಇದರಂತೆಯೆ ಮೊಳಕೆಯೊಡೆದರೂ ಅದರಲ್ಲಿ ಹಸುರೆಲೆಗಳು ಆಗದ ವಿನಾ 'ಅ' ಸತ್ತ್ವವು ಅದರಲ್ಲಿ ಕಂಡುಬರುವುದಿಲ್ಲ. ಪ್ರಾಣಿಗಳ ಹೊಟ್ಟೆಯಲ್ಲಿ ವನಸ್ಪತಿ ಹೋದನಂತರ 'ಅ' ಸತ್ತ್ವವು **ಲಿವ್ಹರ್** (ಯಕೃತು) ಮತ್ತು **ನೆಣ** ಇವುಗಳಲ್ಲಿ ಕೂಡುತ್ತದೆ ಆದರಿಂದ ಪ್ರಾಣಿಕೋಟಿಗಳಿಂದ ಉಪಲಬ್ಧವಾದ ಪದಾರ್ಥಗಳಲ್ಲಿಯೂ 'ಅ' ಸತ್ತ್ವವು ಸಂಪೂರ್ಣವಾಗಿ ಸಿಕ್ಕುತ್ತದೆ.

ಪ್ರಾಣಿಜನ್ಯ ಪದಾರ್ಥಗಳೆಂದರೆ— **ಬೆಣ್ಣೆ**, ತುಪ್ಪ, ಕೆನೆ. ಹಸಿ-ಹಾಲು, ತತ್ತಿ (ಹಳದಿರಸ), ಕಾಡ್ಲಿವ್ಹರ್ ಆಯಿಲ್, ಹಾಲ್-ಬಟ್‌ಲಿವ್ಹರ್ ಆಯಿಲ್ ಮತ್ತು ಎಲ್ಲ ವಿಾನುಗಳ ಎಣ್ಣೆ ಇವುಗಳಲ್ಲಿಯೂ 'ಅ' ಸತ್ತ್ವವು ಬಹಳವಾಗಿ ಇರುತ್ತದೆ.

ವನಸ್ಪತಿಗಳಲ್ಲಿ ಕ್ಯಾರೀಜ್, ಟೊಮ್ಯಾಟೋ (ಛಪ್ಪರಬದನೀ ಹಣ್ಣು) ಹುಣಿಚಿಕ್ಕು, ಹಸಿಸೇಂಗಾ, ತೊಗಟಿ, ಮೂಲಂಗಿಯ ತೊಪ್ಪಲು, ಕೆಂಪುಕುಂಬಳಕಾಯಿ, ಹಸಿಬಟಗಡ್ಡಿ, ಗೆಣಸು, ಮೋಸಂಬಿ, ಕಿತ್ತಳೆ ಅನಾನಸ, ಡಾಳಿಂಬ ಮತ್ತು ಪೇರಲ ಇವುಗಳಲ್ಲಿ. 'ಅ' ಸತ್ತ್ವವು ಸಿಕ್ಕುತ್ತದೆ. ಧಾನ್ಯಗಳಲ್ಲಿ ಗೋದಿಯ ತೌಡು, ಕುಟ್ಟಿದ ಅಕ್ಕಿ, ಇವುಗಳಲ್ಲಿ ಕೆಲವು ಪ್ರಮಾಣದಿಂದ ಸಿಕ್ಕುತ್ತದೆ.

ಹಾಲಿನಲ್ಲಿಯು 'ಅ' ಸತ್ತ್ವವು ಎಮ್ಮೆ ಆಕಳುಗಳ ತಿನಿಸಿನಮೇಲೆ ಅವಲಂಬಿಸಿರುತ್ತದೆ. 'ಕ್ಯಾರೋಟಿನ್' ಎಂಬ ಪದಾರ್ಥವಿದ್ದ ಹಸಿಯ ಹುಲ್ಲನ್ನು ತಿನ್ನುವ ದನಗಳ ಹೈನದಲ್ಲಿ 'ಅ' ಸತ್ತ್ವವು ನಾಕಷ್ಟು ಸಿಕ್ಕುತ್ತದೆ. 'ಕ್ಯಾರೋಟಿನ್' ಎಂಬ ಪದಾರ್ಥವು ಗಜ್ಜರಿ, ಸೀ ಬಟಾಟಿಗಳಲ್ಲಿ ಇರುತ್ತದೆ.

ಶಾಸ್ತ್ರಜ್ಞರ ಪ್ರಯೋಗದಿಂದ 'ಗಜ್ಜರಿ' ಯಲ್ಲಿದ್ದ 'ಕಾರೋ-ಟಿನ್' ಪದಾರ್ಥವನ್ನು ತೆಗೆದು 'ಅ' ಸತ್ತ್ವವನ್ನು ತಯಾರಿಸಿ, ಔಷಧದ ರೂಪದಿಂದ ಪೇಟೆಯಲ್ಲಿಡಲು ಸಾಧ್ಯವಾಗಿದೆ.

ಗಜ್ಜರಿಯು ಈಪದಾರ್ಥವೆಂದು ತಿಳಿದರೂ 'ಅ' ಸತ್ತ್ವದ ದೃಷ್ಟಿಯಿಂದ ಅದರ ಮಹತ್ತ್ವವು ಬಹಳವಿರುತ್ತದೆ. ಹಿಂಡುವ ದನಗಳಿಗೆ ಗಜ್ಜರಿಯನ್ನು ತಿನ್ನಲು ಹಾಕಿದರೆ ಅವುಗಳ ಹಾಲಿನಲ್ಲಿ 'ಅ' ಸತ್ತ್ವವು ಸಂಪೂರ್ಣವಾಗಿ ಸಿಕ್ಕುತ್ತದೆ.

ಬೆಣ್ಣೆಯನ್ನು ಕರಗಿಸಿ ತುಪ್ಪವಾದ ಮೇಲೆ ಹೆಚ್ಚು ವೇಳೆ ಬೆಂಕಿಯ ಮೇಲೆ ಇಟ್ಟರೆ ಅದರಲ್ಲಿದ್ದ 'ಅ' ಸತ್ತ್ವವು ನಾಶವಾಗುತ್ತದೆ.

ಕಿತ್ತಳೆ ಹಣ್ಣಿನಲ್ಲಿದ್ದ 'ಅ' ಸತ್ತ್ವದ ಹತ್ತುಪಟ್ಟು ಸತ್ತ್ವವು ತಾಜಾ ಟೊಮ್ಯಾಟೋ—ಕೆಂಪುಹಣ್ಣುಗಳಲ್ಲಿ ಸಿಕ್ಕುತ್ತದೆ.

ಖಾದ್ಯಪೇಯ ಪದಾರ್ಥಗಳನ್ನು ದೀರ್ಘಕಾಲ ಇಡುವುದರಿಂದಲೂ, ಉಷ್ಣತೆಯಿಂದಲೂ, ಜೀವನಸತ್ತ್ವ ನಾಶವಾಗುತ್ತದೆ. ಖಾದ್ಯಪೇಯಗಳನ್ನು ಮುಚ್ಚದೆ ಹಾಗೆಯೆ ಬಯಲಿಗೆ ಇಟ್ಟರೆ, ಅದರಲ್ಲಿದ್ದ ಜೀವನಸತ್ತ್ವವೂ ಸಾವಕಾಶವಾಗಿ ನಾಶಹೊಂದುತ್ತದೆ.

'ಅ' ಸತ್ತ್ವವು ರೋಗಪ್ರತಿಬಂಧಕವಿರುವುದರಿಂದ, ಇದು ಪ್ರತಿಯೊಬ್ಬ ಮಾನವಜೀವಿಗೂ ಅತ್ಯಾವಶ್ಯಕವಾದದ್ದು. ಇದು ನಾಕಷ್ಟು ಇರದಿರುವುದರಿಂದ ನೆಗಡಿ, ಕೆಮ್ಮು, ತ್ವಚರೋಗಗಳು ಮೇಲಿಂದ ಮೇಲೆ ಆಗಹತ್ತುತ್ತವೆ. ವಿಶೇಷವಾಗಿ 'ಅ' ಸತ್ತ್ವವನ್ನು ಸಂಪೂರ್ಣವಾಗಿ ಯಾರು ಉಪಯೋಗಿಸಿಕೊಳ್ಳುವರೋ ಅವರಿಗೆ ಕಣ್ಣಿನ ವಿಕಾರಗಳ ಬಾಧೆಯು ಎಂದೂ ಆಗಲಾರದು. ಇಲ್ಲದಿದ್ದರೆ ಕಣ್ಣುಬೇನೆ, ದೃಷ್ಟಿವಾಂದ್ಯ, ಇರುಳುಗಣ್ಣು, ಹೂ-ಜೀಳುವುದು, ಕಣ್ಣುಚಿಪ್ಪಿ, ಅಲಿ ಮೊದಲಾದ ಕಣ್ಣುರೋಗಗಳು ಆಗುವ ಸಂಭವ ಹೆಚ್ಚುಂಟು.

ಬ, ಜೀವನಸತ್ತ್ವ

ಜೀವನಸತ್ತ್ವವನ್ನು ಹುಡುಕುವ ಸಂಶೋಧಕರಿಗೆ ಮೊದಲು 'ಬ' ಸತ್ತ್ವವೇ ಕಂಡಿತು. ಎಲ್ಲ ಸತ್ತ್ವಗಳ ಗುಣಧರ್ಮಗಳ ದೃಷ್ಟಿಯಿಂದಲೂ ಆರೋಗ್ಯದ ದೃಷ್ಟಿಯಿಂದಲೂ ನೋಡಿದರೆ, 'ಬ' ಸತ್ತ್ವಕ್ಕೆ ಸರಿಯಾದುದು ಮತ್ತೊಂದಿಲ್ಲ.

ಹಡಗುಗಳಲ್ಲಿ ಒಂದೇಸವನೆ ೩-೪ ತಿಂಗಳು ಪ್ರವಾಸಮಾಡುವ ಜನರಿಗೆ ಅನ್ನ (ಅಕ್ಕಿ) ದಂತಹ ಒಂದೇ ಆಹಾರವನ್ನು ತಿನ್ನುವ ಪ್ರಸಂಗ ಬಂದಾಗ, ಅವರಿಗೆ 'ಬೆರಿಬೆರಿ' ಎಂಬ ರೋಗವು ಬಹಳ ದೊಡ್ಡ ಪ್ರಮಾಣದಿಂದ ಉಂಟಾಗುತ್ತಿತ್ತು. ಇದರ ನಿವಾರಣೆಯ

ಸಲುವಾಗಿ ಜೀವನಸತ್ತ್ವದ ಶೋಧವನ್ನು ಶಾಸ್ತ್ರಜ್ಞರು ಮಾಡತೊಡಗಿದರು. ಆಗ 'ಬ' ಜೀವನಸತ್ತ್ವವೇ ಇವರಿಗೆ ಬೇಕಾದುದೆಂದು ಗೊತ್ತಾಯಿತು. ಈ 'ಬ' ಸತ್ತ್ವದಲ್ಲಿ ಇತ್ತೀಚಿಗೆ ೮-೧೦ ಒಳಜಾತಿಯ ಸತ್ತ್ವಗಳನ್ನು ಗೊತ್ತುಹಚ್ಚಿರುವರು, ಅದರೂ 'ಬ ೧' 'ಬ ೨' ಇವು ಎರಡೇ ಭೇದಗಳು ಮುಖ್ಯವಾದವುಗಳು. ಈ ಎರಡೂ ಸತ್ತ್ವಗಳು ನೀರಿನಲ್ಲಿ ಕರಗುತ್ತವೆ.

ಜೀವನಸತ್ತ್ವ 'ಬ ೧'

'ಬ ೧' ಸತ್ತ್ವವು ವನಸ್ಪತಿಗಳಲ್ಲಿಯೆಂದರೆ ಹುಣಚಿಕ್ಕು, ಪಾಲಕನ ಪಲ್ಲೆ, ಕಾಲಿಫ್ಲಾವರ್, ಕ್ಯಾಬೇಜ ಮೊದಲಾದುವುಗಳಲ್ಲಿ ಹೆಚ್ಚಾಗಿ ಇರುವುದು. ಕಾಯಿಪಲ್ಲೆಗಳಲ್ಲಿಯೆಂದರೆ ಚವಳೀಕಾಯಿ, ತೆಂಗಿನಕಾಯಿಗಳಲ್ಲಿಯೂ; ಹಣ್ಣುಗಳಲ್ಲಿ ಟೋಮ್ಯಾಟೋ, ಅನಾನಸು, ಕಿತ್ತಳೆ, ಬಾಳೇಹಣ್ಣು, ಮೋಸಂಬಿ, ದ್ರಾಕ್ಷೆ, ಲಿಂಬೆಹಣ್ಣು, ಸೇಬು, ಪಪಯಿಗಳಲ್ಲಿಯೂ; ಧಾನ್ಯಗಳಲ್ಲಿ ಕುಟ್ಟಿದ ಅಕ್ಕಿ, ಗೋದಿಯ ತೌಡು, ಬೇಳೆ, ಸೋಯಾಬೀನ್, ಗೋವಿನಜೋಳ, ಬಟಗಡಲೆ, ಜೋಳ, ನೆಲಗಡಲೆಗಳಲ್ಲಿಯೂ; ಬದಾಮು, ಆಕ್ರೋಡ, ಬಟಾಟೆ, ಉರುಳೇಗಡ್ಡಿ ಮೊದಲಾದುವುಗಳಲ್ಲಿಯೂ ಈ ಸತ್ತ್ವವು ಸಾಕಷ್ಟು ಸಿಕ್ಕುತ್ತದೆ. ಪ್ರಾಣಿಜನ್ಯಪದಾರ್ಥಗಳಲ್ಲಿ ಧಾರೋಷ್ಣಹಾಲು, ಕಾಸಿದ ಹಾಲು, ಕೆನೆ, ಬೆಣ್ಣೆ, ಖವಾಗಳಲ್ಲಿಯೂ 'ಬ ೧' ಸತ್ತ್ವವು ಬಹಳವಿರುತ್ತದೆ.

ಜೀವನಸತ್ತ್ವ 'ಬ ೨'

'ಬ ೨' ಸತ್ತ್ವವು ಮನುಷ್ಯನ ಪ್ರಕೃತಿಗೆ ಯೋಗ್ಯ ಪ್ರಮಾಣದಿಂದ ಸಿಕ್ಕದಿದ್ದರೆ 'ಪೆಲಾಗ್ರಾ' ಎಂಬ ಹೆಸರಿನ ರೋಗವಾಗುತ್ತದೆ. ಇದರಿಂದ ಮೈಮೇಲೆ ಕುರುವು ಆಗೋಣ, ಶೌಚದ್ವಾರದಿಂದ ರಕ್ತಬೀಳೋಣ, ಅತಿಸಾರ, ನಾಲಗೆಯ ಮೇಲೆ ಬೊಕ್ಕೆಗಳು ಏಳೋಣ ಇತ್ಯಾದಿ ಲಕ್ಷಣಗಳು ಕಂಡು ಬರುತ್ತವೆ. 'ಬ ೨' ಸತ್ತ್ವವು ಹಸಿರುಎಲೆ, ತೊಪ್ಪಲುಪಲ್ಲೆ, ಉಳ್ಳೇಗಡ್ಡಿ, ಗೆಣಸು, ಬಟಾಟೆಗಳಲ್ಲಿಯೂ, ಬಾಳೇಹಣ್ಣಿನಲ್ಲಿಯೂ, ಸೋಯಾಬೀನ್, ಬಟಗಡಲೆಗಳಲ್ಲಿಯೂ, ಹಾಲು, ಮೊಸರು, ಮಜ್ಜಿಗೆಗಳಲ್ಲಿಯೂ ವಿಶೇಷವಾಗಿರುತ್ತದೆ.

'ಕ' ಜೀವನಸತ್ತ್ವ

'ಕ' ಸತ್ತ್ವವು ಉಷ್ಣತೆಯಿಂದ ಅತಿ ತೀವ್ರ ನಾಶಹೊಂದುತ್ತದೆ. ಎಲ್ಲ ಬಗೆಯ ತಾಜಾ ಎಲೆ, ತೊಪ್ಪಲುಪಲ್ಲೆಗಳಲ್ಲಿ 'ಕ' ಸತ್ತ್ವವು ಹೆಚ್ಚಾಗಿ ಇರುತ್ತದೆ. ಅದನ್ನು ಕುದಿಸಿ ತಿನ್ನುವುದರಿಂದ ಅದರಲ್ಲಿದ್ದ ಸತ್ತ್ವವು ನಾಶವಾಗುತ್ತದೆ. ಆಂತೆಯೆ ಊಟದ ಕಾಲಕ್ಕೆ ನಮ್ಮ ಪೂರ್ವಜರು ಚಟ್ನಿ, ಬೇರೆ ಬೇರೆ ಪ್ರಕಾರದ ಕೋಸಂಬರಿಗಳನ್ನು ದಿನಾಲು ತಿನ್ನುವ ಪದ್ಧತಿಯನ್ನು ಹಾಕಿರುವರು. ಅದೇ ಇಂದು 'ರಾ ವೆಜಿಟೇಬಲ್ಸ್' ಎಂಬ ಇಂಗ್ಲಿಷ್ ಶಬ್ದದಿಂದ ನಮ್ಮವರನ್ನು ಮೂರ್ಖರನ್ನಾಗಿ ಮಾಡಿಬಿಟ್ಟಿದೆ.

'ಕ' ಸತ್ತ್ವವನ್ನು ನಮ್ಮ ಶರೀರದಲ್ಲಿ ಸಂಚಯಿಸಿ ಇಡಲು ಸಾಧ್ಯವಿಲ್ಲ. ಅದರಿಂದ ದಿನಾಲು ನಾವು ತೊಪ್ಪಲುಪಲ್ಲೆ-ಹಣ್ಣುಗಳನ್ನು ತಿಂದು, ಅದನ್ನು ಪೂರಯಿಸಿಕೊಳ್ಳಬೇಕು. ನಮ್ಮ ಊಟವಾದ ನಂತರ ಮುಖಶುದ್ಧಿ ಎಂದು ಹಣ್ಣು-ಕಾಯಿಗಳನ್ನು ತಿನ್ನುವ ಪದ್ಧತಿಯು ಪೂರ್ವಜರಿಂದ ಬಂದಿರುವುದು (ಇದು ಅವರಿಗೆ ಗೊತ್ತಿತ್ತೊ?).

ಜೀವನಸತ್ತ್ವವು ಎಲ್ಲ ರೋಗಗಳ ಪ್ರತಿಬಂಧಕ್ಕೆ ಅತಿ ಮಹತ್ತ್ವದ ಉಪಯೋಗವಾಗಿರುತ್ತದೆ.

'ಕ' ಸತ್ತ್ವವು ಎಲ್ಲ ಎಲೆ, ತೊಪ್ಪಲುಪಲ್ಲೆಗಳಲ್ಲಿಯೂ, ಎಲ್ಲ ಹಣ್ಣುಗಳಲ್ಲಿಯೂ ಹೆಚ್ಚಾಗಿ ಸಿಕ್ಕುತ್ತದೆ; ಆದರೆ ಅವು ಬಾಡಿದುವು ಒಣಗಿದುವು ಆಗಿದ್ದರೆ, ಅದರಲ್ಲಿದ್ದ ಸತ್ತ್ವವು ಕಡಿಮೆಯಾಗುತ್ತದೆ. ಒಣಗಿದ ಧಾನ್ಯಗಳಲ್ಲಿ ಈ ಸತ್ತ್ವವು ಇರದಿದ್ದರೂ ಕಡಲೆ, ಮಟಿಕೆ, ಅಲಸಂದಿ, ಹೆಸರು ಇತ್ಯಾದಿ ಧಾನ್ಯಗಳನ್ನು ನೆನೆಹಾಕಿ, ಮೊಳಕೆಯೊಡೆಯಿಸಿದ ನಂತರ ಅದರಲ್ಲಿ 'ಕ' ಜೀವನಸತ್ತ್ವವು ಪ್ರಾಪ್ತವಾಗುತ್ತದೆ.

ಉಳ್ಳೇಗಡ್ಡಿ, ಹಸಿ ಬಟಗಡಲೆ, ಟೊಮ್ಯಾಟೊ, (ಕೆಂಪು) ಹುಣಚಿಕ್ಕು, ಬಸಳೇಸೊಪ್ಪು, ಮೋಸಂಬಿ, ಕಿತ್ತಳೆ, ಲಿಂಬೀಹಣ್ಣು, ಅನಾನಸು, ಬಾಳೇಕಾಯಿ, ಡಾಳಿಂಬರ, ಹಸೀಹಾಲು,

ರೋಗ ಬಂದ ಮೇಲೆ ಮದ್ದುತಿಂದು ನಾಸಿಮಾಡಿಕೊಳ್ಳುವುದಕ್ಕಿಂತಲೂ ರೋಗದ ಸೋಂಕು ತಗಲದಂತೆ ಕಾಪಾಡಿಕೊಳ್ಳುವುದು ಉತ್ತಮ!

ಬೆಣ್ಣೆ, ಮಜ್ಜಿಗೆ, ಬೆಲ್ಲ ಇವುಗಳಲ್ಲಿ 'ಕ' ಸತ್ತ್ವವು ವಿಶೇಷ ಪ್ರಮಾಣದಿಂದ ಸಿಕ್ಕುತ್ತದೆ.

ನಾಲಗೆಯ ರುಚಿಗಾಗಿ ತೊಪ್ಪಲುಪಲ್ಲೆಯನ್ನು ಕುದಿಸಿ ತಿನ್ನುವ ಚಟವನ್ನು ಬಿಡಲು ಸಾಧ್ಯವಿಲ್ಲ. ಆದರೂ ಉಪ್ಪು ಹಾಕದೆ, ಬೇಕಾಗುವಷ್ಟೇ ವೇಳೆ ಮಂದಾಗ್ನಿಯ ಮೇಲೆ ಕುದಿಸಿದರೆ, ಸ್ವಲ್ಪ ಪ್ರಮಾಣದಿಂದ ಉಳಿಯಬಹುದು. ನಮ್ಮ ಕಡೆಗೆ ಹಸಿ ತೊಪ್ಪಲು, ಎಲೆಪಲ್ಲೆಗಳನ್ನು ತಿನ್ನುವ ಪದ್ಧತಿ ವಿಶೇಷವಾಗಿ ಉಂಟು. ಪೇಟೆಯಲ್ಲಿ ಮಾರಲು ಸಿಕ್ಕದಿದ್ದರೂ ಕಾಲುಕಸವಾಗಿ ಬೆಳೆದಿರುವ ಹತ್ತಾರಕೆಯ ಪಲ್ಲೆಯಲ್ಲಿ ಎಲ್ಲ ಸತ್ತ್ವಗಳೂ ಇರುವುವು. ಒಕ್ಕಲಿಗರು ಇದನ್ನು ಬಹಳವಾಗಿ ತಿನ್ನುವುದರಿಂದ- ಹಣ್ಣು-ಹಂಪಲು

ಪಲ್ಲೆಗಳ ಮಾರ್ಕೀಟುಗಳನ್ನು ನೋಡದಿದ್ದರೂ ನಿರೋಗಿಗಳಾಗಿರುವರು. ಅಲ್ಲದೆ, ಮೆಂತ್ಯದ ಪಲ್ಲೆ, ಮೂಲಂಗಿ, ಉಳ್ಳೇಗಡ್ಡಿ, ಕ್ಯಾಬೀಜಗಳ ತೊಪ್ಪಲುಗಳು, ಹಾಗೆಯೆ ತಿನ್ನಲು ಕೂಡ ರುಚಿಕರವಾಗಿರುವುವು. ತಾಜಾ ಹಣ್ಣು, ಎಲೆ, ತೊಪ್ಪಲುಪಲ್ಲೆಯನ್ನು ತಿನ್ನಲು ಸಾಧ್ಯವಾಗದಿದ್ದರೆ, ಧಾನ್ಯಗಳನ್ನು ನೆನೆಹಾಕಿ ಮೊಳಕೆಯೊಡೆದ ನಂತರ ತಿಂದರೆ '**ಕ**' ಸತ್ತ್ವವು ಸಿಕ್ಕುತ್ತದೆ. ಈ ಪದ್ಧತಿಯೂ ನಮಗೆ ಹೊಸದಲ್ಲ.

ಹಾಲಿನಲ್ಲಿ ಈ ಸತ್ತ್ವವು ಬಹಳವಿರುವುದಿಲ್ಲ; ಆದರಿಂದ ಸಣ್ಣ ಹುಡುಗರಿಗೆ ಮೋಸಂಬಿ ಅಥವಾ ಟೋಮ್ಯಾಟೋದ ರಸವನ್ನು-ಹುಡುಗರ ಹಯೋಮಾನ ಪ್ರಕೃತಿಮಾನದಂತೆ—ಒಂದೆರಡು ಚಮಚೆ ದಿನಾಲು ಹಾಕಬೇಕು.

ಮನುಷ್ಯನ ಪ್ರಕೃತಿಗೆ '**ಕ**' ಸತ್ತ್ವವು ಸಾಕಷ್ಟು ಸಿಕ್ಕದಿದ್ದರೆ 'ಸ್ಕ್ಯಾವ್ಹಿ' ಎಂಬ ಹೆಸರಿನ ರೋಗವಾಗುತ್ತದೆ. ಇದರಿಂದ ಒಸಡಿಯಲ್ಲಿ ರಕ್ತಸ್ರಾವ, ಅತಿಸಾರ, ಬಾವು, ರಕ್ತಸ್ರಾವ, ರಕ್ತದ ಒತ್ತಡವು ಕಡಿಮೆ ಅಥವಾ ಹೆಚ್ಚು ಇವೆಲ್ಲ ಉಂಟಾಗಿ ಅಶಕ್ತತನ ತಲೆದೋರುತ್ತದೆ.

'**ಕ**,' ಜೀವನಸತ್ತ್ವದ ಅಭಾವದಿಂದ ನಾಡಿಗಳು ತೀವ್ರವಾಗಿ ನಡೆಯೋಣ, ರಕ್ತಕ್ಷಯ, ರಕ್ತವಾಹಿನಿಯ ವಿಕಾರಗಳು ಇವೆಲ್ಲ ಆಗುತ್ತವೆ.

ನಮ್ಮ ಕಡೆಗೆ ಸಣ್ಣಮಕ್ಕಳಿಗೆ 'ಸ್ಕ್ಯಾವ್ಹಿ' ರೋಗ ವಿಶೇಷವಾಗಿರುವುದು ಇದರ ಪ್ರತಿಬಂಧಕೋಪಾಯವೇದು ಮೋಸಂಬಿಯ ಮತ್ತು ಟೋಮ್ಯಾಟೋ ಹಣ್ಣುಗಳ ರಸವನ್ನು ದಿನಾಲು ಕೊಡುತ್ತಿರಬೇಕು.

'**ಡ**' ಜೀವನಸತ್ತ್ವ

ಅನ್ನದಿಂದ '**ಕ್ಯಾಲ್ಸಿಯಮ್**' '**ಫಾಸ್‌ಫರಸ್**' ದ್ರವ್ಯಗಳು ಹೊಟ್ಟೆಯಲ್ಲಿ ಹೋದರೂ, '**ಡ**' ಜೀವನಸತ್ತ್ವವು ತಕ್ಕ ಪ್ರಮಾಣದಿಂದ ಸಿಕ್ಕದಿದ್ದರೆ ಅದು ರಕ್ತದಲ್ಲಿ ಹರಿದು ಕೂಡುವುದಿಲ್ಲ.

ಈ ಸತ್ತ್ವವು ಹಾಲು, ಕಾಡ್‌ಲಿವ್ವರ್ ಆಯಿಲ್, ಉಳಿದ ವಿಾನುಗಳ ಎಣ್ಣೆ, ಮತ್ತು ತತ್ತಿಗಳಲ್ಲಿ ವಿಶೇಷವಾಗಿರುತ್ತದೆ.

ಸೂರ್ಯಕಿರಣಗಳಲ್ಲಿ '**ಡ**' ಸತ್ತ್ವವು ಸಂಪೂರ್ಣವಾಗಿ ಇರುತ್ತದೆ. ಸೂರ್ಯಕಿರಣಗಳು ಮೈದೊಗಲಿಗೆ ಒಡಿದರೆ ತಂತಾನೇ ಈ ಸತ್ತ್ವವು ಉದ್ಭವಿಸುವುದು. ಆತಪಸ್ನಾನದ ಕೀರ್ತಿಯು '**ಡ**' ಜೀವನಸತ್ತ್ವದ ಪ್ರಭಾವದಿಂದಲೆ ಬೆಳಗಿರುವುದು. ಧರಿಸಲು ಬಟ್ಟೆಬರೆಗಳಿಲ್ಲದ ಬಡಬಗ್ಗರಿಗೆ '**ಡ**' ಸತ್ತ್ವವು ಸೂರ್ಯನ ಕೃಪಾದೃಷ್ಟಿಯಿಂದ ಸಾಕಷ್ಟು ಸಿಕ್ಕುತ್ತದೆ.

ಸಣ್ಣ ಹುಡುಗರಿಗೆ '**ಮುಟ್ಟುದೋಷ (ರಿಕೇಟ್ಸ್)**' ಎಂಬ ರೋಗವು '**ಡ**' ಜೀವನಸತ್ತ್ವದ ಅಭಾವದಿಂದಲೇ ಉಂಟಾಗುತ್ತದೆ. ಇದು ಆತಪಸ್ನಾನದಿಂದ ಕಡಿಮೆಯಾಗುತ್ತದೆ. ಈ ಪದ್ಧತಿಯೂ ನಮಗೆ ಹೊಸದಲ್ಲ.

ಹೆಣ್ಣುಮಕ್ಕಳಿಗೆ ಕ್ಯಾಲ್ಸಿಯಮ್ ಕಡಿಮೆಯಾಗಿ ಸೊಂಟದ ನೋವು, ಅಶಕ್ತತನ, ಕಾಲಲ್ಲಿ ಗಂಟು ವಿರುವಿಕೆ, ಎಲುವು ಮೆತ್ತಗಾಗಿ ಮಣಿಯೋಣ ಇತ್ಯಾದಿ ಲಕ್ಷಣಗಳು '**ಡ**' ಸತ್ತ್ವದ ಅಭಾವದಿಂದಲೇ ಉಂಟಾಗುತ್ತವೆ. ವಿಶೇಷವಾಗಿ ಪರದಾ ಪದ್ಧತಿಯ ಸ್ತ್ರೀಯರಿಗೂ, ಗರ್ಭಿಣಿಯಾದ ಸ್ತ್ರೀಯರಿಗೂ ಈ ರೋಗಗಳು ಉಂಟಾಗುತ್ತವೆ. ಎಲುವು ಮೆತ್ತಗಾಗಿ ಬೆನ್ನೆಲುವು, ಟೊಂಕದ ಎಲುವುಗಳ ಮಣಿಯುವಿಕೆಯಿಂದ ಪ್ರಸೂತಿಕಾಲದಲ್ಲಿ ಸ್ತ್ರೀಯರಿಗೆ ಬಹಳ ತೊಂದರೆಯಾಗುತ್ತದೆ. ಹುಡುಗರಿಗೆ ಸಾಧಾರಣವಾಗಿ '**ಡ**' ಸತ್ತ್ವ ಕಡಿಮೆಯಾಗುವುದರಿಂದಲೇ ಮುಟ್ಟುದೋಷ, ಬಾಲಗ್ರಹ, ಹಲ್ಲುಗಳಿಗೆ ಹುಳುಹತ್ತೋಣ ಇತ್ಯಾದಿ ರೋಗಗಳು ತಗಲುತ್ತವೆ. '**ಡ**' ಸತ್ತ್ವದಲ್ಲಿ ಕ್ಷಯರೋಗ ಪ್ರತಿಬಂಧಕಶಕ್ತಿಯೂ ಇರುತ್ತದೆ.

'**ಇ**' ಜೀವನಸತ್ತ್ವ

ಇದು ಧಾನ್ಯ, ಎಲೆ, ತೊಪ್ಪಲುಪಲ್ಲೆ, ಹಸಿತೊಗಟೆ, ಮೊಳಕೆ ಬಂದ ಗೋದಿ ಇವುಗಳಲ್ಲಿ ವಿಶೇಷವಾಗಿರುತ್ತದೆ. ಇದು ನೆಣದಲ್ಲಿ ಕರಗುವುದು. ಉಷ್ಣತೆಯಿಂದ ಇದು ನಾಶಹೊಂದುವುದಿಲ್ಲ, ಮತ್ತು ಹವೆಯಲ್ಲಿ 'ಪ್ರಾಣವಾಯು'ವಿನ ಸಂಬಂಧ ಬಂದರೂ ಕಡಿಮೆಯಾಗುವುದಿಲ್ಲ. ಈ ಸತ್ತ್ವವನ್ನು ಶರೀರದಲ್ಲಿ ಕಾಯ್ದಿಡಲಿಕ್ಕೆ ಸಾಧ್ಯವಿದೆ, ಆದುದರಿಂದ ಅನ್ನದಲ್ಲಿ ಒಂದುವೇಳೆ ಈ ಸತ್ತ್ವವು ಸಿಕ್ಕದಿದ್ದರೂ ದುಷ್ಪರಿಣಾಮವಾಗುವುದಿಲ್ಲ.

ಸಾಧಾರಣವಾಗಿ '**ಇ**' ಜೀವನಸತ್ತ್ವವು ಕಡಿಮೆಯಾದಲ್ಲಿ ಹೆಣ್ಣುಮಕ್ಕಳಿಗೆ ಬಂಜೆತನವು ಪ್ರಾಪ್ತವಾಗುತ್ತದೆ. ಏಕೆಂದರೆ ಜನನೇಂದ್ರಿಯದ ಕಾರ್ಯಗಳು ಯೋಗ್ಯರೀತಿಯಿಂದ ನಡೆಯುವುದಿಲ್ಲ.

'**ಇ**' ಜೀವನಸತ್ತ್ವವು ಇನ್ನೂ ಪ್ರಯೋಗಾವಸ್ಥೆಯಲ್ಲಿ ಇರುವುದರಿಂದ, ಇದರ ನಿಶ್ಚಿತ ಗುಣಧರ್ಮಗಳನ್ನು ಜೀವಶಾಸ್ತ್ರದಲ್ಲಿ ಆಧಾರವಿರುವುದಿಲ್ಲ.

* * * *

ಈ ಎಲ್ಲ ಜೀವನಸತ್ತ್ವಗಳ ವಿಷಯವಾಗಿ ಮೇಲಿಂದಮೇಲೆ ಅನುಭವಕ್ಕೆ ಬಂದ, ಶಾಸ್ತ್ರಸಮ್ಮತವಾದ, ಪ್ರಯೋಗದಿಂದ ಸಿದ್ಧವಾಗಿರುವ ಗುಣಧರ್ಮಗಳು ತಜ್ಞರಾದ ಲೇಖಕರಿಂದ ಅಲ್ಲಲ್ಲಿ ಪ್ರಕಟವಾಗಿಹತ್ತಿವೆ. ಅವುಗಳ ಕಡೆಗೆ ಲಕ್ಷ್ಯಕೊಡುವುದು ಒಳಿತು :

೧. ಕೇವಲ ಜೀವನಸತ್ತ್ವದಿಂದಲೇ ಶರೀರಪೋಷಣೆಯಾಗಲಾರದು; ಬೇರೆ ಘಟಕಗಳೂ ಅವಶ್ಯವಾಗಿವೆ.

೨. ಜೀವನಸತ್ತ್ವದ ಪ್ರಮಾಣವು ಅತಿ ಸೂಕ್ಷ್ಮವಿರುತ್ತದೆ.

೩. ಜೀವನಸತ್ತ್ವಗಳಿಂದ ಎಲ್ಲ ರೋಗಗಳ ಪ್ರತಿಬಂಧಕ್ಕೆ ಅತಿ ಮಹತ್ತ್ವದ ಉಪಯೋಗವಾಗುತ್ತದೆ.

೪. ಹಸುರೆಲೆ, ತೊಪ್ಪಲುಪಲ್ಲೆ (ತಾಜಾ ಕುದಿಸದೆ) ಗಳಲ್ಲಿ ಸಾಧಾರಣವಾಗಿ ಎಲ್ಲ ವಿಟಾಮಿನುಗಳೂ ಸಿಕ್ಕುವುವು. ಆದುದರಿಂದ ದಿನಾಲು ತೊಪ್ಪಲುಪಲ್ಲೆಯನ್ನು ತಿನ್ನುವುದು ಹಿತಕರವು.

ಸಾ ದ ರ ಸ್ವೀ ಕಾ ರ

೧೧೦. **ಪರಮಾಣು** (ವೈಜ್ಞಾನಿಕ ಗ್ರಂಥ) ಶ್ರೀಮಾನ್ ಜಿ. ಆರ್. ರಂಗಸ್ವಾಮಿ ಎಂ. ಎ. ಅವರು ಬರೆದುದು. ತಿವಮೊಗ್ಗೆಯ ಕಾವ್ಯಾಲಯದಿಂದ ಪ್ರಸಿದ್ಧವಾಗಿದೆ. ಕ್ರೌ. ಅ. ೧೬+೨೧೨ ಪುಟಗಳು. ಬೆಲೆ ಕ್ಯಾಲಿಕೋ ಪ್ರತಿಗೆ ೨-೪-೦; ಸಾದಾ ಪ್ರತಿಗೆ ೨-೦-೦.

೧೧೧. **ತು ಣು ಕು -- ಮಿ ಣು ಕು** (ಶಿಶುಗೀತ ಸಂಗ್ರಹ) ಶ್ರೀಮಾನ್ ಮುಚ್ಚಿಮಲೆ ಶಂಕರನಾರಾಯಣರಾಯರು ಬರೆದುದು. ಮೇ. ಯು. ಆರ್. ಪೈ ಎಂಡ್ ಸನ್ಸ್, ರಥಬೀದಿ, ಮಂಗಳೂರು ಅವರು ಪ್ರಕಾಶಕರು. ಕ್ರೌ. ಅ. ೩೬ ಪುಟಗಳು. ಬೆಲೆ ೦-೩-೦.

ಇದರಲ್ಲಿ ಚಿಕ್ಕವು ದೊಡ್ಡವುಗಳೆಲ್ಲ ಸೇರಿ ೨೬ ಶಿಶುಗೀತೆಗಳು ಉಂಟು. ಮಕ್ಕಳಿಗೆ ಬೇಕಾಗುವಂತಹ ಚಮತ್ಕೃತಿಯಿಂದ ಕೂಡಿದ ಪದ್ಯಗಳ ಸಂಖ್ಯೆ ತೀರ ಕಡಿಮೆ. ಮಕ್ಕಳಿಗೆ ಪ್ರಾಸಾನುಪ್ರಾಸಗಳು ಮೆಚ್ಚಿಕೆಯಾಗಬಹುದಾದರೂ ಅರ್ಥಹೀನವಾದ ಬುಡುಬುಡುಕೆಯು ಕಿಡಿಬಿಡಿಯು ಅವರ ಮನಸ್ಸನ್ನು ಆಕರ್ಷಿಸದು. ಅನುಕರಣಗೀತಗಳು ಕೂಡ ಕೇವಲ ಅನುಕರಣವಾಚಕ ಪದಗಳಿಂದ ತುಂಬಿದೆ ಕತೆಯೊಂದನ್ನು ಕೂಡಿಸಿ ಹೇಳಿದುವುಗಳಿರಬೇಕು. ಬಾಯಿಗೆ ಬಂದ ಪ್ರಾತುಗಳನ್ನೆಲ್ಲ ಸೇರಿಸಿ ಜೋಡಿಸಿದರೆ ಮಕ್ಕಳ ಕವಿತೆಗಳೆನಿಸವು. ಮಕ್ಕಳ ಮನಸ್ಸನ್ನು ಅರಿತುಕೊಳ್ಳಬೇಕು; ಅವರ ಅಶಾ-ಆಕಾಂಕ್ಷೆಗಳನ್ನು ತಿಳಿದುಕೊಳ್ಳಬೇಕು. ಅವರ ಬಳಿತು-ಕೆಡುಕುಗಳನ್ನು ಪರಿಚಯಮಾಡಿಕೊಳ್ಳಬೇಕು. ಇದೆಲ್ಲ ಇಲ್ಲದ ಕವನಗಳು ಜೊಳ್ಳು ಪ್ರಾತಿನ ಸರಕುಗಳಂತಾಗಿ ಬೇಸರವನ್ನು ಹುಟ್ಟಿಸುವುವು. ಇದರಲ್ಲಿ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರ ಶಿಶುಗೀತೆಗಳ ಅನುಕರಣ ಕಾಣುವುದಾದರೂ ಅವುಗಳ ಸೊಗಸು ಕಾಣುವುದಿಲ್ಲ. ಗುಲಾಬಿ ಹೂವಿನಂತೆಯೆ ಕಂಡರೂ ಕಾಗದದ ಗುಲಾಬಿ ಹೂವು ನೀರಸವೆ; ನಿರ್ಗಂಧವೆ! ಆದರೂ ಕನ್ನಡದಲ್ಲಿ ತೀರ ಕಡಿಮೆಯಾಗಿರುವ ಶಿಶುಸಾಹಿತ್ಯವನ್ನು ಬೆಳೆಯಿಸುವುದಕ್ಕಾಗಿ ಕೈಕೊಂಡಿರುವ ಲೇಖಕರ ಕಾರ್ಯವು ಪ್ರಶಂಸನೀಯವಾದುದೆಂದೇ ಹೇಳಬಹುದು.

೧೧೨. **ನವಾ ಪರಿಚಯ.** ಕಿರ್ಲೋಸ್ಕರ್ ಕಂಪನಿಯವರು ಹೊರಡಿಸಿದ ಹೊಸ ಮಾದರಿಯ ದೇವನಾಗರಿಯ ಮುದ್ರಣಾಕ್ಷರಗಳ ಪರಿಚಯ ಪತ್ರಿಕೆಯಿದು.

ನಮಗೆ ಗೊತ್ತಿದ್ದ ಮಟ್ಟಿಗೆ ಸದ್ಯ ಪ್ರಚಾರದಲ್ಲಿರುವ ದೇವನಾಗರಿ ಮುದ್ರಣಾಕ್ಷರದ ಮೊಳೆಗಳು ಜೋಡಿಸಲಿಕ್ಕೆ ತುಂಬ ಕಷ್ಟಕರವಾದುವುಗಳಾಗಿವೆ. ಹಿಂದುಸ್ತಾನದ ಏಳ್ಕೆಯಾವ ಲಿಪಿಯು ಮುದ್ರಣಾಕ್ಷರಗಳನ್ನು ಜೋಡಿಸಲಿಕ್ಕೂ ದೇವನಾಗರಿಯಷ್ಟು ಶ್ರಮವೂ ಕಾಲವೂ ಬೇಕಾಗುತ್ತಿರಲಿಲ್ಲ. ಈ ಕೊಂದರೆಯನ್ನರಿತ ಕಿರ್ಲೋಸ್ಕರವಾಡಿಯ ಮು. ಶಾಲೆಯಲ್ಲಿ ಮೇಲ್ವಿಚಾರಿಕರಾಗಿ ಕೆಲಸಮಾಡುತ್ತಿರುವ ಶ್ರೀಮಾನ್ ವಿಜಾಪುರೆಯವರು, ಪರಿಶ್ರಮ ಪೂರ್ವಕ ಕಾರ್ಯಮಾಡಿ ಹೊಸಮಾದರಿಯ ಮುದ್ರಣಾಕ್ಷರಗಳನ್ನು ಕಂಡು ಹಿಡಿದು ಈಗ ಪ್ರಚಾರದಲ್ಲಿ ಕೂಡ ತಂದು ಬಿಟ್ಟಿದ್ದಾರೆ. ಇವು ಕನ್ನಡ ಮುದ್ರಣಾಕ್ಷರಗಳಂತೆ ಅಖಂಡವಾಗಿದ್ದು, ಮೊದಲಿಗಿಂತ ಕಡಿಮೆ ಸಂಖ್ಯೆಯಲ್ಲಿರುವುವು. ಈ ಅಕ್ಷರಗಳ ಉಪಯೋಗದಿಂದ ದೇವನಾಗರಿ ಲಿಪಿಯನ್ನು ಬಳಸುವ ಭಾಷೆಗಳವರು ಖಂಡಿತ ಪ್ರಯೋಜನ ಪಡೆಯಬಹುದು.

೧೧೩. **ಸೊಗಸಿನ ಓದು** (ಮಕ್ಕಳ ಪುಸ್ತಕ ರೊ. ಅ. ೫೨ ಪುಟ, ಬೆಲೆ ೦-೨-೬.

೧೧೪ ,, (೧ನೆಯ ಪುಸ್ತಕ) ಡೆ. ಅ. ೯೦ ಪುಟ, ಬೆಲೆ ೦-೩-೦.

೧೧೫ ,, (೨ನೆಯ ಪುಸ್ತಕ) ಕ್ರೌ. ಅ. ೧೩೦ ಪುಟ, ಬೆಲೆ ೦-೪-೬.

೧೧೬ ,, (೩ನೆಯ ಪುಸ್ತಕ) ಕ್ರೌ. ಅ. ೧೫೨ ಪುಟ, ಬೆಲೆ ೦-೫-೬.

ಈ ಪಠ್ಯಪುಸ್ತಕಗಳ ವಿಮರ್ಶೆಯನ್ನು ವಿಶದವಾಗಿ ಇನ್ನೊಮ್ಮೆ ಮಾಡಲಿರುವೆವಾದರೂ ಇಲ್ಲಿ ಇಷ್ಟೊಂದನ್ನು ಮಾತ್ರ ಹೇಳುತ್ತೇವೆ: ಇವುಗಳನ್ನು ಸಂಪಾದನೆ ಮಾಡಿದ ರಾ. ಸಾ. ಮಂಗದಳ ವೆಂಕಟರಾಯರು, ಪ್ರೊ. ವಿಾಮಾಂಸೆಯವರು, ಪ್ರೊ. ಮೂಳವಾಡ ಅವರು, ಶ್ರೀ. ಸಾಲಿಯವರು, ಶ್ರೀ. ಮುಧೋಳಕರರು, ಪಂಡಿತ ಪೂಜಾರರು ಇವರೆಲ್ಲ ಪಠ್ಯಪುಸ್ತಕ ಬರೆಯಲು ಅಧಿಕಾರಸಂಪನ್ನರಿದ್ದು, ಪುಸ್ತಕ-ಸಂಪಾದನೆಯ ಕಾರ್ಯದಲ್ಲಿ ಆದನ್ನು ಚೆನ್ನಾಗಿ ವ್ಯಕ್ತಗೊಳಿಸಿದ್ದಾರೆ. ಈ ಪುಸ್ತಕಗಳನ್ನು ಹುಡುಗರು ನಿಜವಾಗಿಯೂ ಪ್ರೀತಿಯಿಂದ ಓದಬಹುದು. ವಿಷಯ, ಭಾಷೆ, ಚಿತ್ರ, ಮುದ್ರಣ, ಹಾಳೆ, ಅಚ್ಚುಕಟ್ಟು ಎಲ್ಲ ದೃಷ್ಟಿಯಿಂದಲೂ ಈ ಪುಸ್ತಕಗಳು ಚೆನ್ನಾಗಿವೆ. ಇಂತಹ ಒಳ್ಳೆಯ ಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸುವಂತಹ ಸಾಹಸದ ಕಾರ್ಯದಲ್ಲಿ ಯಶಸ್ವಿಗಳಾದುದಕ್ಕಾಗಿ ಸಂಪಾದಕ ವರ್ಗವನ್ನೂ ಪ್ರಕಾಶಕರಾದ ಧಾರವಾಡದ ಸ್ಟೂಡಂಟ್ಸ್ ಓನ್ ಬುಕ್‌ಡಿಪೊ, ಸಂಚಾಲಕರನ್ನೂ ಮನಸಾರೆ ಅಭಿನಂದಿಸುವೆವು.

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ,

೬ ಆಣೆಗೆ ಒಂದು ಸೆಟ್ಟು.



6

೧ ಬ್ಲೇಡಿಗೆ ೬ ಉತ್ತಮ ಕ್ಷೌರ!

೫ ಬ್ಲೇಡಿಗೆ ೬ ಆಣೆಗಳು.



೬೫. ಮದುವೆ

ಶ್ರೀಮಾನ್ ನೆಗಳೂರ ರಂಗನಾಥ ಬಿ. ಎ. ಅವರು ಬರೆದುದು. ಧಾರವಾಡದ ಮಿಂಚಿನ ಬಳ್ಳಿಯ ೩ನೆಯ ವರ್ಷದ ೨ನೆಯ ಕುಡಿ.

ಮಾನವಜೀವನದಲ್ಲಿ ಮದುವೆಗೆ ಇರುವ ಸ್ಥಾನ ತೀರ ಮಹತ್ವದುದು; ಆದರೆ ಮದುವೆಯೆಂದರೇನೆಂಬುದನ್ನು ಕೂಲಂಕಷ ವಿಚಾರ ಮಾಡುವವರೂ, ತಿಳಿದುಕೊಳ್ಳ ಬೇಕೆಂಬ ಆತುರವುಳ್ಳವರೂ ಎಲ್ಲಿಯೊ ಲಕ್ಷ್ಯಕ್ಕೊಬ್ಬರೊ, ಕೋಟಿಗೊಬ್ಬರೊ! ಮನುಷ್ಯನಾಗಿ ಹುಟ್ಟಿದ ಪ್ರತಿಯೊಂದು ಹೆಣ್ಣುಜೀವಕ್ಕೂ ಗಂಡುಜೀವಕ್ಕೂ ಮದುವೆಯ ಆವಶ್ಯಕತೆ ಎನಿಸಿಯೆ ಎನಿಸುವುದು: ಆದರೆ ತಾವು ಅಪೇಕ್ಷಿಸುವ ಮದುವೆ ಎಂತಹದಿರಬೇಕೆಂಬುದು ಇಂದು, ಎಂತೆಂತಹ ವಿಚಾರವಿದರಿಗೂ ಒಂದು ಬಿಡಿಸಲಾರದ ಸಮಸ್ಯೆಯಾಗಿ ಕುಳಿತಿದೆ. ಎಂತಲೆ ಬಾಲವಿವಾಹದ ಪಕ್ಷದವರು ಕೆಲವರು; ಪ್ರೌಢವಿವಾಹದ ಪಕ್ಷದವರು ಕೆಲವರು. ಪುನರ್ವಿವಾಹ ಬೇಕೆನ್ನುವವರು ಕೆಲವರು; ಬೇಡವೇ ಬೇಡವೆಂದು ಹೇಳುವವರು ಕೆಲವರು. ಘಟಸ್ಫೋಟ ಎಂದರೆ ಬಿಡುಗಡೆ ಇರಬೇಕೆನ್ನುವವರು ಕೆಲವರು; ಅದರ ಬಂಧನ ಆವಶ್ಯಕವಿಲ್ಲವೆಂದು ಹೇಳುವವರು ಕೆಲವರು. 'ವಿವಾಹವು ಒಂದು ಪವಿತ್ರವಾದ ಧಾರ್ಮಿಕ ಸಂಸ್ಕಾರ'ಎಂದು ಕೆಲವರು ಹೇಳಿದರೆ, 'ಅದೊಂದು ಕೇವಲ ಕರಾರಿನ ವ್ಯಾಪಾರ' ಎಂದು ಇನ್ನು ಕೆಲವರು ಹೇಳುವರು. ಮತ್ತೆ ಕೆಲವು ಬುದ್ಧಿವಾದಿಗಳು ವಿವಾಹಸಂಸ್ಥೆಯ ಆವಶ್ಯಕತೆಯೆ ಇಲ್ಲವೆಂದು ಹೇಳುವವರೂ ಇದ್ದಾರೆ. ಇಷ್ಟೊಂದು ಭಿನ್ನ ಭಿನ್ನ ಮತಗಳನ್ನುಂಟು ಮಾಡಿ, ಎಡೆಬಿಡದೆ ಬಡಿದಾಟ ಹಚ್ಚಿದ ಈ ಮದುವೆಯ ಬಗೆಗೆ ವಿಚಾರಮಾಡಿ ತಿಳಿದುಕೊಂಡವರು ನಮ್ಮಲ್ಲಿ ಎಷ್ಟು ಜನರು?

ಎಲ್ಲ ಹೊರೆಯನ್ನೂ ದೈವ–ಪ್ರಾರಬ್ಧಗಳ ಮೇಲೆ ಹಾಕಿ ತಮ್ಮ ಹೊಣೆಗಾರಿಕೆಯನ್ನು ಕಡಿಮೆ ಮಾಡಿಕೊಳ್ಳುತ್ತಿರುವ ನಮ್ಮ ಜನರು ಮದುವೆಯ ಬಗ್ಗೆ ತಿಳಿದುಕೊಂಡುದೆಂದರೆ: ಒಂದು ಗಂಡು ಒಂದು ಹೆಣ್ಣು ಇವುಗಳಲ್ಲಿ ಯಾವುದೋ ಒಂದು ಧಾರ್ಮಿಕ ಭಾವನೆಯ ಸಂಬಂಧವನ್ನು ಕಲ್ಪಿಸಿ, ಅವರಿಬ್ಬರ ಜೀವನವನ್ನು ದೇವರು ಸುಖದಲ್ಲಿ ಇರಿಸಲೆಂದೂ ಅವರು ಬಳ್ಳಿಯ ಸಂತಾನವನ್ನು ಪಡೆಯಲೆಂದೂ ಹಾರಯಿಸುವುದು; ಇದರಲ್ಲಿ ಏನಾದರು ವ್ಯತ್ಯಯ ಬಂದು ಆ ಗಂಡು–ಹೆಣ್ಣುಗಳ ವಿಚಾರವೈಷಮ್ಯದ ಮೂಲಕ ಪರಸ್ಪರರಲ್ಲಿ ಕೂಡಿ ನಡೆಯದಿದ್ದರೂ, ಸರಿಯಾದ ಸಂತಾನವಾಗದಿದ್ದರೂ, ದಂಪತಿಗಳಲ್ಲಿ ಯಾರಾದರೂ ಸತ್ತರೂ ಆದಕ್ಕೆ ಕಾರಣ ಆ ದಂಪತಿಗಳ ಪ್ರಾರಬ್ಧಫಲವಾಗಿರಬಹುದು; ಇಲ್ಲವೆ ದೈವದ ವಕ್ರದೃಷ್ಟಿಯಾಗಿರಬಹುದು. ಒಳ್ಳೆಯ ರೀತಿಯಿಂದ ನಡೆದ ದಾಂಪತ್ಯಗಳೆಂದರೆ ದೈವಶಾಲಿಗಳಾದ ದಾಂಪತ್ಯಗಳು. ಈ ದಾಂಪತ್ಯ ಬಂಧನದಲ್ಲಿ ಮನುಷ್ಯನು ಯಾವ ರೀತಿಯಲ್ಲಿಯೂ ಏನನ್ನೂ ಮಾಡಲಾರ.. ಇದೇ ನಮ್ಮ ಮದುವೆಯ ತಿಳಿವಳಿಕೆ. ಒಂದುಕಾಲದ ಸಾಮಾಜಿಕ ಪರಿಸ್ಥಿತಿಯ ದೃಷ್ಟಿಯಿಂದಲೂ ವ್ಯಕ್ತಿಗಳ ತಿಳಿವಳಿಕೆಯ ಮಟ್ಟದೃಷ್ಟಿಯಿಂದಲೂ ಮದುವೆಯ ಸಂಬಂಧದ ನಮ್ಮ ಜನರ ಈ ಕಲ್ಪನೆಯಿಂದಲೂ ಕೆಲವು ಕಾಲದ ವರೆಗೆ ವಿವಾಹಸಂಸ್ಥೆ ಸುಯಂತ್ರಿತವಾಗಿ ಸಾಗಿರಬಹುದು. ಆದರೂ 'ಧಾರ್ಮಿಕ ಪವಿತ್ರ ಸಂಸ್ಕಾರ' ಎಂಬ ಭಾವನೆ ಜಾಗೃತವಾಗಿದ್ದ ಕಾಲದಲ್ಲಿ ಕೂಡ ವಿವಾಹನಿಯಮದ ಬಗೆಗೆ ಮತಭಿನ್ನತೆಗಳಿದ್ದುವೆಂಬ ಸಂಗತಿ, ಬೇರೆ ಬೇರೆ ಸ್ಮೃತಿಗಳನ್ನು ನೋಡಿದರೆ ಸ್ಪಷ್ಟವಾಗಿ ಕಂಡುಬರುವುದು. ಪೂರ್ವಪರಂಪರೆಯನ್ನೇ ಕಣ್ಣುಮುಚ್ಚಿಕೊಂಡು ಅನುಸರಿಸುತ್ತ ನಡೆಯಬೇಕೆಂದು ಹೇಳುವ ಪುರೋಹಿತರ ಕೈಯಲ್ಲಿ ನಮ್ಮ ಸಮಾಜವು ಸಿಕ್ಕ ಮೇಲಂತೂ ಮದುವೆಯ ಬಗೆಗೆ ನಮ್ಮಲ್ಲಿ ಸ್ವತಂತ್ರವಾಗಿ ವಿಚಾರ ಮಾಡುವವರೇ ಇಲ್ಲದಂತಾಯಿತು. ಆದುದರಿಂದಲೇ ನಾವಿಂದು—ಅದರ ಬಗೆಗೆ ವಿಚಾರ ಮಾಡಿ ಬರೆದ—ಆಧುನಿಕ ಗ್ರಂಥಗಳನ್ನು ನೋಡಬೇಕಾದರೆ, ಪರದೇಶಿಯ ಭಾಷೆಗಳಲ್ಲಿಯ ಗ್ರಂಥಗಳಿಗೇ ಶರಣುಹೋಗಬೇಕಾಗುವುದು. ಈಗ ಶ್ರೀಮಾನ್ ರಂಗನಾಥ ನೆಗಳೂರ ಅವರು, ಮದುವೆಯ ವಿಷಯಕ್ಕೆ ಸಂಬಂಧಿಸಿದ ಹತ್ತೆಂಟು ಸುಪ್ರಸಿದ್ಧ ಇಂಗ್ಲಿಷ್ ಗ್ರಂಥಗಳನ್ನೋದಿ ಅಭ್ಯಸಿಸಿ ಆರಗಿಸಿಕೊಂಡು, ನಮ್ಮಲ್ಲಿಯ ಮದುವೆಯ ಸಂಪ್ರದಾಯಗಳನ್ನೂ ಪೂರ್ವಾಚಾರ್ಯರ ಕಲ್ಪನೆಗಳನ್ನೂ ಜೊತ್ತಾಗಿ ಅರಿತುಕೊಂಡು, ಮದುವೆಯ ಬಗೆಗಿರುವ ತಮ್ಮದೊಂದು ಆದರ್ಶದ ಅಳಿಗೋಲನ್ನೂ ಅಲ್ಲಲ್ಲಿ ಉಪಯೋಗಿಸುತ್ತ ಈ ಗ್ರಂಥವನ್ನು ಬರೆದು ಕನ್ನಡಿಗರ ಕೈಗೆ ಒಪ್ಪಿಸಿರುವರು. ಕನ್ನಡಿಗರು ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕು.

ಪ್ರಸ್ತುತ ಗ್ರಂಥದಲ್ಲಿ, ಮದುವೆಗೆ ಸಂಬಂಧಿಸಿದ ಬೇರೆ ಬೇರೆ ೧೧ 'ಪ್ರಮೇಯ'ಗಳನ್ನು ಕುರಿತು ಚರ್ಚಿಸಿದ ೧೧ ಪ್ರಕರಣಗಳಿವೆ. ಇವುಗಳಲ್ಲಿ ಮೊದಲನೆಯದು 'ಮದುವೆ ಏತಕ್ಕೆ?'ಎಂಬ ವಿಚಾರವನ್ನೊಳಗೊಂಡುದಾಗಿದೆ. ಇದರಲ್ಲಿ ಜೀವದ ಉತ್ಪತ್ತಿಯಾದಿಯಿಂದ ಸೃಷ್ಟಿಯ ಇತಿಹಾಸವನ್ನು ಸಂಕ್ಷೇಪವಾಗಿ ವಿವರಿಸುತ್ತ, ಹೆಣ್ಣು–ಗಂಡು ಲಿಂಗಗಳ ಉತ್ಪತ್ತಿಯ ವಿಚಾರವನ್ನೂ ಅವುಗಳ ಪರಸ್ಪರ ಸಂಯೋಗಾಪೇಕ್ಷೆಯೆ ವಿವಾಹಸಂಸ್ಥೆಯ ನಿರ್ಮಿತಿಗೆ ಹೇಗೆ ನೈಸರ್ಗಿಕ ಕಾರಣವಾಯಿತೆಂಬುದನ್ನೂ ಸಪ್ರಮಾಣವಾಗಿ ಹೇಳಿರುವರು. ಮದುವೆ ಏತಕ್ಕೆಂಬುದರ ಸಿದ್ಧಾಂತವನ್ನು

ಲೇಖಕರು— ಪ್ರಕರಣದ ಕೊನೆಯಲ್ಲಿ— ಹೀಗೆಂದು ಸ್ಥಾಪಿಸಿರುವರು.

"ಮಾನವನು ತನ್ನ ಜನಾಂಗವನ್ನು ಬೆಳೆಯಿಸಬೇಕಾದರೆ– ಸಲಿಂಗಜೀವಿಯಾದುದರಿಂದ– ಸಂಯೋಗದ ಅವಶ್ಯಕತೆ ಎನಿಸುವುದು. ಸಂಯೋಗಕಾಲವು ಬಾಳಬೇಕೆಂಬುದಕ್ಕೆ ಕಟ್ಟಳೆ ಬಂತು. ಸಮಾಜಸ್ಥೀತಿಗೆ ಬಾಹ್ಯವಾಗಬಾರದೆಂದು ಮುದುವೆಯು ಬಂತು. ಮಾನವಶಿಶುವು ದುರ್ಬಲವೂ ಅಸಹಾಯವೂ ಆಗಿರುವುದೆಂದು, ಅದರ ಪಾಲನೆ-ಪೋಷಣೆ ಅವಶ್ಯಕತೆ ಎನಿಸಿದುದರಿಂದ, ನುತ್ತು ಅ ಸಂರಕ್ಷಣೆಯ ಭಾರವನ್ನು ಕೇವಲ ತಂದೆ-ತಾಯಿಗಳೇ ಹೆಚ್ಚು ಜಾಗರೂಕತೆಯಿಂದ ಪೂಡುವರೆಂದು ಮುದುವೆಯ ಕಟ್ಟನ್ನು ಬಿಗಿಯಬೇಕಾಯಿತು. ಇದಕ್ಕಾಗಿ ಮದುವೆ.."

ತಿನೆಯ ಪ್ರಕರಣದಿಂದ ಕ್ರಮವಾಗಿ 'ಮದುವೆಯ ಇತಿಹಾಸ' 'ಮದುವೆಯ ಮುಖ್ಯಾಂಗಗಳು' 'ಮದುವೆಯಕಾಲಕ್ಕೆ ವಯಸ್ಸು' 'ಘಟಸ್ಫೋಟ' 'ವ್ಯಭಿಚಾರ' 'ಪುನರ್ವಿವಾಹ' 'ಪ್ರಯೋಗಗಳು' 'ನಮ್ಮ ಸಮಸ್ಯೆಗಳು' 'ಆದರ್ಶ' ಎಂಬ ವಿಷಯಗಳನ್ನು ಸ್ವತಂತ್ರರೀತಿಯಲ್ಲಿ ಚರ್ಚಿಸಲಾಗಿದೆ. ಇವುಗಳನ್ನೊದುವಾಗ ಸಾಂಪ್ರದಾಯಿಕ ಬುದ್ಧಿಯವರು ಅಲ್ಲಲ್ಲಿ ಮುಖವನ್ನು ಮುರಿಯಬಹುದಾದರೂ, ಅನೇಕ ತಮಗೆ ಗೊತ್ತಿಲ್ಲದ ವಿಷಯಗಳು ಗೊತ್ತಾದುವೆಂದು ಸಮಾಧಾನ ತಳೆಯದೆ ಇರರು. ಹೊಸ ವಿಚಾರದಿಂದ ಜಗತ್ತನ್ನು ಕಾಣಬೇಕೆನ್ನುವವರ ಕಣ್ಣೆದುರಂತೂ ಈ ಪುಸ್ತಕ, ಬಿಡಿಸಿದ ಬಿಡಿಸಲಾರದ ಹಲವು ವಿಚಾರಗಳ ತೊಡಕುಗಳನ್ನು ಇರಿಸುತ್ತದೆ. ಇದರಲ್ಲಿ ತೋರಿಸಲಾದ ಮದುವೆಯು ಬಂಧಿಸಿದ ವಿಷಯಕ ಸಗ್ನ ಸತ್ಯವನ್ನು ಕಂಡು ಸನಾತನ ಸಂಪ್ರದಾಯಿಗಳು ಗಾಬರಿಗೊಳ್ಳಲೂ ಬಹುದು; ಸಂತಪ್ತರಾಗಲೂ ಬಹುದು. ಆದರೆ ವಿಜ್ಞಾನವು ಹಿಂಜಿ ಹಿಂಜಿ ತೋರಿಸುವುದು ಪ್ರಕೃತಿಯ ಭೀಕರಸತ್ಯವನ್ನಲ್ಲದೆ, ವಿಕೃತಿಯ ಭಾವನಾತ್ಮಕ ಸೌಂದರ್ಯವನ್ನಲ್ಲವೆಂಬುದನ್ನು ಯಾರೂ ಮರೆಯಲಾಗದು. ಈ 'ಮದುವೆ' ಗ್ರಂಥವು, ವಿಜ್ಞಾನವನ್ನು ವಿವರಿಸಲು ಹೊರಟುದು.

ಭಾಷೆಯಲ್ಲಿ ಬಿಗುಹು–ಗಾಂಭೀರ್ಯದ ನಡಿಗೆ ಇದೆಯಾದರೂ ವಾಕ್ಯರಚನೆ ಶಬ್ದರಚನೆಗಳ ಪರಿಶುದ್ಧತೆಯಕಡೆಗೆ ಅಷ್ಟೊಂದು ಲಕ್ಷ್ಯ ಕೊಟ್ಟಂತೆ ತೋರುವುದಿಲ್ಲ. ಇಂಗ್ಲಿಷ್ ಭಾಷಾಸಂಪ್ರದಾಯದ ಪ್ರಭಾವವನ್ನು ಪುನ್ಕದುದ್ದಕ್ಕೂ ವಾಚಕರು ಕಾಣಬಹುದಾಗಿದೆ. ಮುದ್ರಣದೋಷಗಳೂ ಹಲವುಸಲ ವಾಚಕರನ್ನು ತಡೆತಡೆದು ನಿಲ್ಲಿಸುವುವು. 'ಇವೆಲ್ಲ ಅಷ್ಟೊಂದು ಮಹತ್ವ್ವದುವಲ್ಲ; ಇಂತಹ ಗ್ರಂಥಗಳಲ್ಲಿ



ವಿಷಯ ವಿವೇಚನೆ ಮುಖ್ಯ ....' ಎಂಬ ಸಮಾಧಾನವನ್ನೂ ಸಾವು ಹೇಳಬಹುದು. ಆದರೆ ವಿಷಯವನ್ನು ಹೊತ್ತುನಿಲ್ಲುವಂತಹ ವಾಹಕಸಾಮರ್ಥ್ಯ ಭಾಷೆಗೆ ಇದ್ದಾಗಲ್ಲವೆ ವಿಷಯಸ್ಪುಟವಾಗಿ ತಿಳೆಯಬೇಕು! ಮುಂದಿನ ಮುದ್ರಣದಲ್ಲಿ ಈ ಕೊರತೆಯನ್ನೂ ಕಡಿಮೆ ಮಾಡಿದರೆ, ಕನ್ನಡಿಗರ ಗ್ರಂಥಭಾಂಡಾರದಲ್ಲಿ ಒಂದು ವಿಚಾರ ಪ್ರವರ್ತಕವಾದ ಒಳ್ಳೆಯ ಗ್ರಂಥ ಸೇರಿದಂತಾಗುವುದು.

ಬಿ. ಪಿ. ಎಸ್. ರಾವ್.

೬೮. ಸೆರೆಯಮರೆಯಲ್ಲಿ

ಶ್ರೀಮಾನ್ ರಂಗನಾಥ ರಾಮಚಂದ್ರ ದಿವಾಕರ ಅವರು ಬರೆದುದು. ಹುಬ್ಬಳ್ಳಿಯ ಅಧ್ಯಾತ್ಮಕಾರ್ಯಾಲಯದ ಪ್ರಕಟನೆ.

ಜಗತ್ತಿನಲ್ಲಿ ಹುಟ್ಟಿಬಂದ ಪ್ರತಿಯೊಂದು ಮಾನವಜೀವಿಯ ಜೀವನದ ಅನುಭವಗಳು, ಒಂದೊಂದೂ ಒಂದೊಂದು ಮಹಾಭಾರತವನ್ನು ನಿರ್ಮಿಸಬಲ್ಲುವು; ಒಂದೊಂದೂ ಒಂದೊಂದು ರಾಮಾಯಣವನ್ನು ಸೃಷ್ಟಿಸಬಲ್ಲುವು. ಪ್ರತಿಜೀವಿಯ ಬದುಕಿನ ಕಥಾಪಳಿಯಲ್ಲಿ ಸಣ್ಣ ಕಥೆಗಳು ಎಷ್ಟೆಷ್ಟೋ ಸಿಕ್ಕಬಹುದು; ಏಕಾಂಕನಾಟಕಗಳೆಷ್ಟೋ ದೊರೆಯಬಹುದು. ಒಂದೊಂದು ಜೀವಿಯ ಚರಿತ್ರವೂ ಒಂದು ಆದ್ಭುತರಮ್ಯ ಕಾದಂಬರಿಯಾಗಬಲ್ಲದು; ರಮಣೀಯವಾದ ನಾಟಕವಾಗಬಲ್ಲದು. ಈ ಸತ್ಯಕಥಾಪ್ರಪಂಚವು ಸರಿಯಾದ ಬರೆವಣಿಗೆಯಲ್ಲಿ ರೂಪುಗೊಂಡು ಮುಂದೆ ಬರುತ್ತ ಹೋದರೆ, ಕನ್ನಡ ಸಾಹಿತ್ಯ ಹಲವು ಕುಸುರುಗಳನ್ನು ಪಡೆದು ಕಂಗೊಳಿಸಬಹುದಾಗಿದೆ; ಆದರೆ ಇಂದಿನ ನಮ್ಮ ಲೇಖಕರಲ್ಲಿಯ ಬಹುಜನರು ತಮ್ಮ ಜೀವನವನ್ನೂ ತಮ್ಮ ಸಮಾಜದ ಜೀವನವನ್ನೂ ಅಳೆದು ಅಭ್ಯಸಿಸಿ ನೋಡದೆ, ಅದರ ಮೂಲಕವಾಗಿ ದೊರೆತ ಸತ್ಯಾನುಭವಗಳನ್ನೂ ಸೌಂದರ್ಯಾನುಭೂತಿಯನ್ನೂ ತಮ್ಮ ಸಾಹಿತ್ಯದಲ್ಲಿ ಮೂಡಿಸಿ ತೋರಿಸದೆ, ಕೇವಲ ಅನುಕರಣಬುದ್ಧಿಗೆ ಅಧೀನರಾಗಿ ಇನ್ನಾರದೋ ಜೀವನವನ್ನೂ ಮತ್ತಾರವೋ ಅನುಭವಗಳನ್ನೂ ಅದರಲ್ಲಿ ಮೂಡಿಸಿಕೊಡುತ್ತಿರುವರು. ಇಂತಹ ಸಾಹಿತ್ಯದಿಂದ ನಮ್ಮ ಗ್ರಂಥಭಾಂಡಾರ ದೊಡ್ಡದಾಗಿ ತೋರಬಹುದೇ ಹೊರತು, ಸಮಾಜದ ಹೃದಯಸಂಸ್ಕಾರದ ಕಾರ್ಯ ಅಷ್ಟೊಂದು ಯೋಗ್ಯರೀತಿಯಿಂದ ಆದೀತೆಂದು ನಮಗಂತೂ ಅನಿಸುವುದಿಲ್ಲ. ಆದುದರಿಂದಲೆ ನಮ್ಮ ಸಾಹಿತ್ಯದಲ್ಲಿಂದು ಕನ್ನಡಿಗರ ಜೀವನ ವೈವಿಧ್ಯ ಪ್ರತಿಬಿಂಬಿತವಾಗಬೇಕು; ಅವರ ಆದರ್ಶ, ಆಶೆ, ಆಕಾಂಕ್ಷೆ, ಅವುಗಳನ್ನು ಪೂರೈಸಿಸಿಕೊಳ್ಳುವುದಕ್ಕೆ ನಡೆಯಿಸಿದ ಅವರ ಮನಸ್ಸು–ಹೃದಯಗಳ

ಓಡಾಟ—ಹಾರಾಟ ಇವೆಲ್ಲ ಸ್ಪಷ್ಟವಾಗಿ ಕಾಣುತ್ತಿರಬೇಕು .. ಎಂದು ನಮ್ಮ ಹಾರಯಿಕೆ. ಇಂತಹ ಸಾಹಿತ್ಯಗುಣಗಳು-ಜೀವನಚರಿತ್ರೆ, ಆತ್ಮಚರಿತ್ರೆ, ಭಾವಪ್ರಬಂಧ, ಭಾವಗೀತ ಇವುಗಳಲ್ಲಿ ಬಹಳವಾಗಿ ಇರುತ್ತವೆ. ಸಾಹಿತ್ಯದ ಉಪಯೋಗ ನಿಜವಾಗಿಯೂ ಸಮಾಜಕ್ಕೆ ಆಗಬೇಕೆಂದು ಅಪೇಕ್ಷೆ ಪಡುವವರು, ಇಲ್ಲಿ ಹೇಳಿದ ಸಾಹಿತ್ಯಜಾತಿಯನ್ನು ಹೆಚ್ಚಾಗಿ ನಿರ್ಮಿಸುತ್ತಿರುವರು. ಲೌಕಿಕಜೀವನವೆ ಪ್ರಧಾನವಾಗಿ ಉಳ್ಳ ಪಶ್ಚಿಮದೇಶಗಳಲ್ಲೆಲ್ಲ ಇಂತಹ ಸತ್ಯಸಾಹಿತ್ಯಸೃಷ್ಟಿಯೆ ಹೆಚ್ಚಾಗಿ ಆಗುತ್ತಿರುವುದು. ಆಧ್ಯಾತ್ಮಿಕ ಜೀವನಪ್ರಧಾನವಾದ ನಮ್ಮ ಸಮಾಜದಲ್ಲಿ, ವ್ಯಕ್ತಿಗಳ ಬಾಳಿಗೆ ಬೆಲೆಯೇ ಇರಲಿಲ್ಲ; ಅಂತೆಯೆ ಎಷ್ಟೋ ಪ್ರಾಚೀನ ಸಾಹಿತ್ಯಿಕರ ಗ್ರಂಥಗಳು ನಮಗೆ ನೋಡಲು ಸಿಕ್ಕುವುವಾದರೂ, ಅವರ ಜೀವನವೆಂತಹದು–ಅವರುಯಾರು–ಅವರು ನಿಜವಾಗಿಯೂ ಪಡೆದ ಅನುಭವಗಳೇನು— ಇವೊಂದೂ ಗೊತ್ತಾಗುವುದೆ ಇಲ್ಲ. ಇತ್ತೀಚೆಗೆ ಬೀಸಿದ ಪಶ್ಚಿಮದೇಶದ ಗಾಳಿ,ನಮಗೆ ಈ 'ಸತ್ಯಾನುಭವಸಾಹಿತ್ಯ'ದ ಸವಿಯನ್ನು ಸ್ವಲ್ಪಮಟ್ಟಿಗೆ ತೋರಿಸಿಕೊಟ್ಟಿದೆ. ಅದರ ಪರಿಣಾಮವಾಗಿ 'ಸೆರೆಯ ಮರೆಯಲ್ಲಿ' ಯಂತಹ ಗ್ರಂಥಗಳು ಕನ್ನಡದಲ್ಲಿಯೂ ಒಂದೊಂದಾಗಿ ಕಾಲಿಕ್ಕತೊಡಗಿವೆ.

ಸಾಮಾನ್ಯ ಮನುಷ್ಯನ ಜೀವನಕಥೆಯೂ ಕಾದಂಬರಿಯಷ್ಟು ರಂಜಕವಾಗಿರುವಾಗ, ಮಹಾಭಾರತ ರಾಮಾಯಣಗಳಷ್ಟೇ ಬೋಧಕವಾಗಿರುವಾಗ, ಕನ್ನಡನಾಡಿನ ಹಿರಿಯ ಮುಂದಾಳುಗಳೂ 'ಕರ್ಮವೀರ'ರೂ ಆಗಿರುವ ಶ್ರೀಮಾನ್ ದಿವಾಕರರ ಜೀವನಕಥೆಯು ಎಷ್ಟೊಂದು ರಂಜಕವೆನಿಸಬೇಡ; ಎಷ್ಟೊಂದು ಬೋಧಕವಾಗಿ ಇರಬೇಡ! ಪ್ರಸ್ತುತ ಪುಸ್ತಕವು ದಿವಾಕರರ ಸಂಪೂರ್ಣ ಜೀವನ ಕಥೆಯಲ್ಲ; ಅದರಲ್ಲಿಯದೊಂದು ಮಹತ್ವದ ಸನ್ನಿವೇಶವನ್ನೊಳಗೊಂಡ ಭಾಗವಿಷ್ಟೆ. ೧೯೧೧ ರಲ್ಲಾದ ಸೆರೆಮನೆಯ 'ಪ್ರಥಮಪರಿಚಯ'ದಿಂದ ಪ್ರಾರಂಭವಾಗಿ, ಧಾರವಾಡ ಗೋಳೀಬಾರ್ ಪ್ರಕರಣದಲ್ಲಿ 'ಅಂಡರ್ ಟ್ರಯಲ್' ಆಗಿದ್ದಾಗಿನ ಸಂಗತಿಯನ್ನೆಲ್ಲ ಒಳಗೊಂಡು, ಅಸಹಕಾರ ಯುದ್ಧದಲ್ಲಿ ೨-೩ ಸಲ ಸೆರೆಯಾಳಾಗಿ ಹೋದಾಗಿನ ವಿಶದ ವರ್ತಮಾನವನ್ನೆಲ್ಲ ವಿವರಿಸಿ ಈ ಪುಸ್ತಕವು ಕೊನೆಗೊಳ್ಳುತ್ತದೆ. ಜೇಲನ್ನು ಕಂಡರಿಯದ ಜನರಿಗೆ ನಿಜವಾಗಿಯೂ ಇದರಲ್ಲಿಯ ಸಂಗತಿಗಳು ಕುತೂಹಲಕಾರಿಯಾಗಿವೆ. ಹೊರಗಿದ್ದಾಗ ಎಂತೆಂತಹ ಆಂತಸ್ತಿನಲ್ಲಿರುವ ಜನರೂ, ಜೇಲಿಗೆ ಹೋದಾಗ ಅಲ್ಲಿಯ ಯಮಶಾಸನದ ಒತ್ತಾಯಕ್ಕೆ ಗುರಿಯಾಗುತ್ತಿರುವುದರ— ಜೇಲಿನ ಅಧಿಕಾರಿಗಳು ಮನುಷ್ಯತ್ವವನ್ನೇ ಮರೆತು ಹೃದಯವಿಹೀನರಂತೆ ಸೆರೆಯಾಳುಗಳೊಂದಿಗೆ ವರ್ತಿಸುತ್ತಿರುವುದರ— ಕತೆ ಸಹೃದಯ ವಾಚಕರ ಭಾವನೆಗಳನ್ನು ಕೆರಳಿಸುವುದು. ಜೇಲಿನಲ್ಲಿ ಸತ್ಯಾಗ್ರಹ

ದಿಂದ ಪಡೆದ ನಮ್ಮ ಜನರ ಜಯದ ಕತೆಗಳನ್ನೋದಿದಾಗ, ಉತ್ಸಾಹದಿಂದ ಮೈಯ್ಯು ನವಿರೇಳುವುದು. ಕಾರವಾರ ಜಿಲ್ಲೆಯ ಸವಿನಯಶಾಸನಭಂಗದ ಕಾಲದ ಇತಿಹಾಸವನ್ನು ಓದಿದಾಗ ನಮ್ಮ ಮನಸ್ಸು ವಿಸ್ಮಯಾಶ್ಚರ್ಯಗಳಿಂದ ಜೇತರಿಸಿಕೊಳ್ಳುವುದು. ಒಂದೆ ಮಾತಿನಲ್ಲಿಯೆ ಹೇಳಬೇಕೆಂದರೆ,ಕೈಯಲ್ಲಿ ಒಮ್ಮೆ ಹಿಡಿದ ಪುಸ್ತಕವನ್ನು ಕೊನೆಯವರೆಗೂ ಓದಿಬಿಡಲೇ ಬೇಕೆನ್ನುವಂತಹ ಸನ್ನಿವೇಶಗಳ ವೈವಿಧ್ಯದಿಂದಿದು ಕೂಡಿರುವುದು.

ಇದರ ಬರೆವಣಿಗೆಯ ವಿಚಾರದಲ್ಲಿ ಹೇಳಬೇಕೆಂದರೆ ಶ್ರೀಮಾನ್ ದಿವಾಕರರೇ ತಮ್ಮ ಮುನ್ನುಡಿಯಲ್ಲಿ ಹೀಗೆಂದು ಬರೆದುಕೊಂಡಿದ್ದಾರೆ:

"ಈಗ ಕೈಕೊಂಡ ವಿಷಯ ನನಗೆ ಪೂರ್ಣ ಪರಿಚಿತ; ಅದನ್ನು ಕ್ರಮಬದ್ಧವಾಗಿ ಬರೆಯುವ ರೀತಿ ತೀರ ಅಪರಿಚಿತ. ಆದರೂ ಧೈರ್ಯಗೊಂಡು ಬರೆಯಲಾರಂಭಿಸಿದೆನು."

ಉತ್ತರ ಕರ್ನಾಟಕದವರು— ಜನಸಾಮಾನ್ಯರು ಕೂಡ—ಈ ಪುಸ್ತಕವನ್ನು ಓದಿ ಅರ್ಥಮಾಡಿಕೊಳ್ಳಬಲ್ಲರು. ಮೈಸೂರು-ಮಂಗಳೂರು ಕಡೆಯವರಿಗೆ ಇದರಲ್ಲಿಯ ಕೆಲವು ಶಬ್ದಗಳೂ ಭಾಷಾಸಂಪ್ರದಾಯಗಳೂ ಒಮ್ಮೆಲೆ ಅರ್ಥವಾಗವು. ಆದರೂ ವಿಷಯದ ಓಟವು ಅವರನ್ನು ತಡೆದು ನಿಲ್ಲಿಸದೆ ಮುಂದುಮುಂದಕ್ಕೆ ಕರೆದೊಯ್ಯಬಲ್ಲದು. ಎಲ್ಲರೂ ಓದಿನೋಡಬೇಕು; ಕತೆಯನ್ನೋದಿದ ಫಲ ಪ್ರಬಂಧವನ್ನೋದಿದ ಫಲ, ಎರಡನ್ನೂ ಈ ಸತ್ಯಕಥಾವಾಚನದಿಂದ ಪಡೆದುಕೊಳಬೇಕು!

—ಸಂ.....ಕ

೧೦೦ ದರ್ಪಚೂರ್ಣ

(ಚಿಕ್ಕ ಕಾದಂಬರಿ)

ಬಂಗಾಲದ ಸುಪ್ರಸಿದ್ಧ ಸಾಹಿತ್ಯಿಕರಾದ ದಿವಂಗತ ಡಾ. ಶರಚ್ಚಂದ್ರ ಚಟ್ಟೋಪಾಧ್ಯಾಯರ ಇದೇ ಹೆಸರಿನ ಗ್ರಂಥದ ಅನುವಾದ. ಅನುವಾದಕರು ಶ್ರೀ. ಸಿ. ಕೆ. ನಾಗರಾಜರಾವ್ ಬೆಂಗಳೂರು.

ಶ್ರೀಶರಚ್ಚಂದ್ರರೀಗ ಭಾರತದ ಪ್ರತಿಯೊಂದು ಪ್ರಾಂತ್ಯಕ್ಕೂ ಸುಪರಿಚಿತರಾಗಿದ್ದಾರೆ. ಅವರ 'ದೇವದಾಸ' 'ಬಡೀದೀದೀ' 'ಮಂಝ್ಲೀಲ್' ಮೊದಲಾದ ಕತೆಗಳು ಚಲಚ್ಚಿತ್ರಗಳಾಗಿ ತಮ್ಮ ಸ್ವಾರಸ್ಯದಿಂದಲೂ ನಟವರ್ಗದ ಅಭಿನಯ ಚಾತುರಿಯಿಂದಲೂ ಅಂತರರಾಷ್ಟ್ರೀಯ ಕೀರ್ತಿಯನ್ನೇ ಸಂಪಾದಿಸಿಬಿಟ್ಟಿವೆ. ಹಲವು ಕಥೆ-ಕಾದಂಬರಿಗಳು ಮಿಕ್ಕ ಭಾಷೆಗಳಂತೆ ಕನ್ನಡದಲ್ಲಿಯೂ ಅನುವಾದಿತವಾಗಿ,ಈಗಾಗಲೆ ಹಲವರ ಹೃದಯವನ್ನವು ಸೆಳೆದುಕೊಂಡಿವೆ. ಈ 'ದರ್ಪಚೂರ್ಣ'ವೂ ಶ್ರೀಶರಚ್ಚಂದ್ರರ ದಿವ್ಯಲೇಖನಿಯಿಂದಿಳಿದ ಒಂದು ರಸವತ್ತಾದ ಕಥೆ. ಅನುವಾದಕರು ಆದಷ್ಟು ಪ್ರಯತ್ನಮಾಡಿ, ಮೂಲದ ಸ್ವಾರಸ್ಯವನ್ನು ಇದರಲ್ಲಿ ಇಳಿಸಿದ್ದಾರೆ.

ಈ ಕಥೆಯಲ್ಲಿ ವಿಶೇಷವಾಗಿ ಸನ್ನಿವೇಶಗಳ ತೊಡಕು ಏನೂ ಇಲ್ಲ. ಎರಡು

ದಾಂಪತ್ಯಗಳ ಜೀವನದ ಸೂಕ್ಷ್ಮವಾದ ಭಾವನೆಯ ಕುಸುರನ್ನೊಳಗೊಂಡ ಎರಡು ಚಿತ್ರಗಳು ಮಾತ್ರ ಇವೆ. ಮೊದಲನೆಯ ಚಿತ್ರ ವೆಂದರೆ ನರೇಂದ್ರ– ಇಂದುಮತಿಯರದು. ಎರಡನೆಯ ಚಿತ್ರ ನರೇಂದ್ರನ ಚಿಕ್ಕಮ್ಮನ ಮಗಳು ವಿಮಲಳ ಮತ್ತು ಗಗನಬಾಬು ಅವರದು. ಗಗನಬಾಬು ಹೆಸ್ಸೆಲೆಯಲ್ಲಿ ಎಲ್ಲಿಯೂ ಕಾಣದ ಹಾಗೆ ಇರುವನಾದರೂ, ವಿಮಲೆಯ ಜೊತೆಯ ಮೂಲಕ ಆತನಿಗೆ ಸಿಕ್ಕುವ ಸಂತೃಪ್ತಿ, ಪ್ರೇಮ, ಸಂತೋಷ ಎಲ್ಲವೂ ವಾಚಕರಿಗೆ ಗೊತ್ತಾಗುವುವು.

ಇದರಲ್ಲಿ ಸ್ಪಷ್ಟವಾಗಿ ಮೂಡಿನಿಂತ ಸ್ವಭಾವಗಳು ಮೂರು. ಕವಿಹೃದಯದ ನರೇಂದ್ರ; ಅಹಂಕಾರವೆ ಮೂರ್ತಿವೆತ್ತಂತಿರುವ ಇಂದುಮತಿ; ಪ್ರೇಮ-ತ್ಯಾಗಗಳಿಂದ ಜಗತ್ತನ್ನೇ ಗೆಲ್ಲಬಹುದಾದ ವಿಮಲಾ. ಹೆಂಡತಿಯ ಕರ್ತವ್ಯ, ಗಂಡನ ಕರ್ತವ್ಯ, ದಾಂಪತ್ಯಪ್ರೇಮದ ಬಗೆ ಇವನ್ನೆಲ್ಲ ನರೇಂದ್ರ ಜೀವನಾಗಿ ಅರಿತವನಾದರೂ, ಯಾರ ಮೇಲೂ ಒತ್ತಾಯ ಮಾಡದಂತಹ ಮೆಲುಮನಸ್ಸು ಆತನದು. ಎಲ್ಲರೂ ತಂತಮ್ಮ ಕರ್ತವ್ಯಗಳನ್ನು ತಾವೆ ಮಾಡಬೇಕೆಂದೂ ಇನ್ನೊಬ್ಬರು ಅಧಿಕಾರದಿಂದ ಮಾಡಹಜ್ಜಲಾಗದೆಂದೂ ಅವನ ಪಾಕ್ಷಿಣ್ಯಬುದ್ಧಿಯ ತಿಳಿವಳಿಕೆ. ಇಂದುಮತಿ ತನ್ನ ಕರ್ತವ್ಯವನ್ನರಿತು ತಾನಾಗಿಯೆ ತನ್ನ ಹೃದಯವನ್ನು ತನಗೆ ಒಪ್ಪಿಸಬೇಕೆಂದು ಅವನ ಆಶೆ. ಸೂಕ್ಷ್ಮಬುದ್ಧಿಯು—ಕಾಯಿದೆ-ಕಾನೂನುಗಳ ವ್ಯವಹಾರದ ಆಳಗೋಲಿನಿಂದಲೆ ದಾಂಪತ್ಯಪ್ರೇಮವನ್ನೂ ಅಳೆಯುವ — ಇಂದುಮತಿಯಿಂದ ಅದು ಸಿಕ್ಕಷ್ಟಾಗಲು, ನರೇಂದ್ರ ಒಳಗೊಳಗೇ ನಿಟ್ಟುಸಿರನ್ನು ಇಡುವನು. ತನ್ನ ಕರುಳು ಗಳನ್ನು ತಾನೇ ಬೇಯಿಸಿಕೊಳ್ಳುವನು. ಇದಾವುದನ್ನೂ ತಿಳಿದುಕೊಳ್ಳದ ಇಂದುಮತಿ ಗಂಡನ ಮನಸ್ಸನ್ನು ಮಾತು-ಮಾತಿಗೂ ಕೆಣಕಿ ನೋಯಿಸುತ್ತಿರುವಳು.

ವಿಮಲೆ ಬೆಲ್ಲದಚ್ಚಿನಂತಹ ಹೆಣ್ಣು. ತಾನು ದಾಸಿಯೆಂಬ ತ್ಯಾಗಬುದ್ಧಿಯನ್ನು ಹೃತ್‌ಪೂರ್ವಕವಾಗಿ ತೋರಿಸಿ, ಗಂಡನ ಪ್ರೇಮಸರ್ವಸ್ವವನ್ನೂ ಲೂಟಿ ಮಾಡಿ, ದಾಂಪತ್ಯರಾಜ್ಯದಲ್ಲಿ ಮಹಾರಾಣಿಯಾಗಿ ಆಳುವ ಶಕ್ತಿಯುಳ್ಳವಳು. ಇಂದುಮತಿಯ ವಿಚಿತ್ರಸ್ವಭಾವವನ್ನು ತಿದ್ದಲು ಹಲವು ರೀತಿಯಿಂದವಳು ಯತ್ನಿಸುವಳು. ಆದರೂ ಆ ಅಹಂಕಾರ ಕರಗಲಿಲ್ಲ. ಗಂಡ ರುಗ್ಣಶಯ್ಯೆಯಲ್ಲಿ ಮರಣದ ಕರೆಯನ್ನು ಕೇಳುತ್ತ ಮಲಗಿರುವಾಗ, ಇಂದುಮತಿ ತವರು ಮನೆಯಲ್ಲಿ. ವಿಮಲೆಯ ಆರೈಕ್ಯೆಯ ಅಮೃತ ಅಣ್ಣನನ್ನು ಉಳಿಸುತ್ತದೆ. ಇದೇ ಸನ್ನಿವೇಶ ಇಂದುಮತಿಯ ಕಣ್ಣಕುರುಡಿಗೆ ಅಂಜನವಾಗಿ ಪರಿಣಮಿಸುವೆ ; ತ್ಯಾಗ-ಸಹಾನುಭೂತಿಗಳ ಬೆಲೆಯನ್ನು ಸಲ್ಲಿಸದಿದ್ದರೆ ಸಂಸಾರದಲ್ಲಿ ನಿಜವಾದ ಪ್ರೇಮ, ಪ್ರೇಮದಿಂದ ಸಿಕ್ಕಬಹುದಾದ ಆನಂದ ಇವು ಸಿಕ್ಕಲಾರವೆಂಬ ಜ್ಞಾನದ ಸಾಕ್ಷಾತ್ಕಾರವಾಗುತ್ತದೆ. ಅಹಂಕಾರ—ಮಹತ್ತ್ವಾಕಾಂಕ್ಷೆ — ಸ್ವಾಭಿಮಾನ — ಅಲಂಕಾರದ ಆಶೆ ಎಲ್ಲವನ್ನೂ ಹೋಳಿ ಮಾಡಿದ ಇಂದುಮತಿ, ವಿಮಲೆಯ ಹಠಕೆ ಪಡೆದುಕೊಂಡು ಗಂಡನನ್ನು ಬೆರೆಯಲು ಹೊರಡುವಳು. ನರೇಂದ್ರ ಅತ್ಯವಸ್ಥನಾಗಿ ಮಲಗಿರುವುದು ಈ ಮೊದಲೆ ವಾಚಕರಿಗೆ ತಿಳಿದಿರುವುದರಿಂದ, ಇಂದುಮತಿ ಅವನೊಂದಿಗೆ ಬೆರೆಯಲು ಹೋದರೂ ಅವಳ್ಬಾಳುದು ರಂತವಾಯಿ ತೋ ಸುಖಾಂತವಾಯಿತೋ ಎಂಬುದರ ಬಗೆಗೆ ಓದುಗರನ್ನು ಸಂದೇಹ – ಕಾತರಗಳಲ್ಲರಿಸಿಯೆ ಕತೆ ಕೊನೆಗೊಳ್ಳುವುದು. ಓದಿ ಮುಗಿಸಿದ ಮೇಲೂ ಕೆಲವು ವೇಳೆಯವರೆಗೆ ವಾಚಕರ ಹೃದಯತಂತ್ರಿಯನ್ನು ಅದು ಹಾಗೆಯೆ ಮಿಡಿಯುತ್ತಿರುವುದು.

ಶ್ರೀಶರಚ್ಚಂದ್ರರ ಸಾಹಿತ್ಯವನ್ನೆಲ್ಲ ಕನ್ನಡಕ್ಕೆ ಅನುವಾದಿಸಿಕೊಡಬೇಕೆಂಬ ಶ್ರೀ. ಸಿ. ಕೆ. ನಾಗರಾಜರಾಯರ ಸಂಕಲ್ಪ ನೆರವೇರಬೇಕಾದರೆ, ವಾಚಕರು ಈ ಪುಸ್ತಕವನ್ನು ಹಣಕೊಟ್ಟು ಕೊಂಡು ಓದಬೇಕು.

—ಬೆ. ಕೃ. ರ.

೮೪. ಆಹಾರ

ಸರ್ ರಾಬರ್ಟ್ ಮೆಕ್ಕಾರಿಸನ್ ಅವರು ಬರೆದ ಇಂಗ್ಲಿಷ್ ಗ್ರಂಥವನ್ನು ಶ್ರೀಮಾನ್ ಬಿ. ನಾರಾಯಣಸ್ವಾಮಿರಾವ್ ಬಿ. ಎ. ಅವರು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಇದೊಂದು ಆಹಾರಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕ. ವಿಜ್ಞಾನಶಾಸ್ತ್ರದಲ್ಲಿ ಈಗ ಅನೇಕ ಸಂಶೋಧನೆಗಳು ನಡೆದು, ಮನುಷ್ಯನ ದೇಹಕ್ಕೆ ಹಿತವಾದ ಅವಶ್ಯಕವಾದ ಆಹಾರ ಎಂತಹದಿರಬೇಕೆಂಬುದನ್ನು ಅವು ಕಟ್ಟುನಿಟ್ಟಾಗಿ ಗೊತ್ತುಪಡಿಸಿವೆ. ಅಂತಹ ಗೊತ್ತುಪಾಡನ್ನು ಜನಸಾಮಾನ್ಯರಿಗೆ ತಿಳುಹಿಸಿಕೊಟ್ಟು, ಅವರನ್ನು ಆರೋಗ್ಯಶಾಲಿಗಳನ್ನಾಗಿ ಮಾಡಬೇಕೆಂಬ ಸದುದ್ದೇಶದಿಂದ ಈ ಪುಸ್ತಕ ಮುಂದೆಬಂದಿದೆ. ಆದರೆ 'ಉರಿಯುವ ಬರಿಹೊಟ್ಟೆಗೆ ಏನಾದರೂ ಸಿಕ್ಕಿದರೆ ಸಾಕು' ಎಂದು ಕಂಡುದನ್ನೆಲ್ಲ ತುಂಬಿಕೊಳ್ಳುವ ಜನಸಾಮಾನ್ಯರಿಗೆ ಇಂತಹ ಪುಸ್ತಕಗಳು ಯಾವ ಉಪದೇಶವನ್ನು ಮಾಡಬಲ್ಲುವು? ಮಾಡಿದರೂ ಆದರಿಂದ ಪ್ರಯೋಜನವೇನಾಗಬೇಕಾಗಿದೆ? ನಾಲ್ಕು ಹೊತ್ತೂ ಉಣ್ಣಲಿಕ್ಕೆ ತಿನ್ನಲಿಕ್ಕೆ ಇದ್ದ ಶ್ರೀಮಂತರು ನಿಜವಾಗಿಯೂ ಈ ಪುಸ್ತಕದಿಂದ ಪ್ರಯೋಜನ ಪಡೆಯಬಹುದು. ಕೇವಲ ನಾಲಗೆಯ ರುಚಿಗೆ ಕಟ್ಟುಬಿದ್ದು, ದೇಹದ ಆರೋಗ್ಯದ ಕಡೆಗೆ ಲಕ್ಷ್ಯವನ್ನೆ ಕೊಡದೆ, ದೇಹ-ದೇಶ-ಕಾಲಗಳ ಪರಿಸ್ಥಿತಿಯನ್ನರಿಯದೆ ಕಣ್ಣುಮುಚ್ಚಿ ಉಣ್ಣುತ್ತಲಿರುವ ಅನ್ನವಂತರಿಗಿದು ಆವಶ್ಯಕ ಪುಸ್ತಕ.

ನಮ್ಮ ಆಯುರ್ವೇದ ಗ್ರಂಥಗಳ ದಿನಚರ್ಯಾ ವಿಭಾಗದಲ್ಲಿಯೂ ಬೇರೆ ಬೇರೆ ದೇಹಪ್ರಾಸ ಋತುಪ್ರಾಸಗಳನ್ನನುಸರಿಸಿ ನಿರ್ಣಯಿಸಿದ ಆರೋಗ್ಯಕಾರಕ ಆಹಾರಗಳ ಕಟ್ಟಳೆಗಳು ಬೇಕಾದಷ್ಟು ಇವೆ. ಪರಿಭಾಷೆಗಳನ್ನೂ ಮೂಲಘಟಕದ ವಿಷಯವನ್ನು ಬಿಟ್ಟರೆ, ನಮ್ಮ ಹಿಂದಣಕಾಲದ ವಿಜ್ಞಾನಿಗಳು ಎಂದೋ ಒಪ್ಪಿದ ಆಹಾರನಿಯಮಗಳನ್ನೇ ಇಂದಿನಕಾಲದ ವಿಜ್ಞಾನಿಗಳು ಹೊಸಮಾತಿಂದು ಹೇಳಲು ಬರುತ್ತಾರೆ. ಹೊಸದೇ ಇರಲಿ, ಹಳೆಯದೇ ಇರಲಿ, ಅನ್ನಸಿಕ್ಕುವವರು ತಮ್ಮ ಆಹಾರವೆಂತಹದಿರಬೇಕೆಂಬುದನ್ನು ಅರಿತು ಅಭ್ಯಸಿಸಿ ಉಣ್ಣಬೇಕಾದುದು ಆವಶ್ಯಕ ವಿಷಯ. ಅಂತಹರಿಗಾಗಿ ಈ ಪುಸ್ತಕ ಖಂಡಿತ ಉಪಕಾರಿಯಾಗಿದೆ.

—'ವಿಜ್ಞಾನಿ'









‘ಜಯಂತಿ’ ಸಣ್ಣಕತೆಗಳ ಮೇಲಾಟ

೨ ಬಹುಮಾನಗಳು!

ಗನೆಯುಮ ೧೦ ರೂಪಾಯಿ. ೨ನೆಯುದು ೫ ರೂಪಾಯಿ.

ಮೇಲಾಟಕ್ಕೆ ಕತೆಗಳನ್ನು ಕಳುಹುವವರು

ಆಗಸ್ಟ್ ೧೫ ತಾರೀಖಿನೊಳಗಾಗಿ

ಕಳುಹಬೇಕು.

ವಿಶೇಷ ಸಂಗತಿಗಳಿಗಾಗಿ ಮೇಲೋಲೆಯ ೩ನೆಯ ಪುಟ ನೋಡಿರಿ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣೆ ಅಂಚೆವೆಚ್ಚ ಸೇರಿ ೩—೦—೦ ..... ವ್ಹಿ. ಪಿ. ಯಿಂದ ೩–೫–೦ ..... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು **ಪಾಟೀಲ ಮಾಧವರಾಯರು**

೪ನೆಯ ವರ್ಷ	ಜೂನ್ ೧೯೪೧	೧೦ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸಂಪಾದಕೀಯ	ಸಂಪಾದಕರು	೧
ಮಂಗಸ ಮಲ್ಲಿನಾಥತಸ	'ಮಲ್ಲಿನಾಥ'	೩
ಕರ್ನಾಟಕದ ಇಂದಿನ ಸ್ಥಿತಿ, ಮುಂದಿನ ಗತಿ (ಲೋಕವಿಮರ್ಶೆ)	ಶ್ರೀ. ಆಲೂರ ವೆಂಕಟರಾಯರು, ಬಿ. ಎ., ಎಲ್‌ಎಲ್. ಬಿ.	೪
ಸಮರಶಾಂತಿ (ಕವನ)	'ಇಂದುತನಯ' ಸೇಡಬಾಳ	೮
ಗಸ್ಪಾರಿ ನಜರೇತರ ಪತ್ತೇದಾರಿ (ಸಣ್ಣಕತೆ)	ಶ್ರೀ. ತಲಜೇರಿ ರಂಗರಾಯರು, ಬಿ. ಎ., ಎಲ್‌ಎಲ್. ಬಿ.	೯
ವ್ಯಕ್ತಿವೈಶಿಷ್ಟ್ಯ (ಜೀವನಕಲಾ ಪ್ರಬಂಧ)..	ಶ್ರೀ. ಕೆ. ವಿಶ್ವನಾಥ ಹೆಗಡೆ, ಮುಂಬಯಿ	೧೪
ಎರಡಾನೆಯ ಫಜೀತಿ (ವಿನೋದಪ್ರಬಂಧ)	ಶ್ರೀ. ಎನ್. ಕೆ. ಕುಲಕರ್ಣಿ, ಎಮ್. ಎ , ಬಿ. ಟಿ.	೧೭
ಎಲೆ ಮುಗಿಲೆ (ಕವನ)	ಶ್ರೀ. ಶ್ರೀಧರಶರ್ಮ, ಮೈಸೂರು	೨೦
ಮುಂದಿಗಿಂತಲೂ ಮುಂದೆ ಗಟ್ಟಿಯಲ್ಲವೆ? (ಒಂದು ವಿಚಾರ) ..	ಪಂಡಿತ ತಾರಾನಾಥರಾಯರು	೨೧
ಸಿಡುಬು ಆಥವಾ ಮೈಲಿ (.ಪರಿಚಯಾತ್ಮಕ)	ಡಾಕ್ಟರ್ ಎಚ್. ಪಿ. ಕುಲಕರ್ಣಿ, ಎಂ. ಬಿ. ಬಿ. ಎಸ್.	೨೨
ದ್ವೇಷವೇ ಧರ್ಮದ ಮರ್ಮವಯ್ಯಾ! (ಸಣ್ಣಕತೆ)	ಶ್ರೀ. ಬಿ. ಪಾರ್ಥಸಾರಥಿರಾಯರು	೨೫
ಬೌಂಧ್ ಚಿತ್ರಸಂಗ್ರಹಾಲಯ (ಪರಿಚಯಾತ್ಮಕ)	ಶ್ರೀ. ಸಿದ್ದವ್ವನಹಳ್ಳಿ ಕೃಷ್ಣಶರ್ಮರು	೩೨
ಅಧ್ಯಕ್ಷೀಯ ಭಾಷಣವೊಂದು	ಪ್ರೊ. ಆರ್. ವಿ. ಜಾಗೀರದಾರ್, ಎಂ. ಎ. (ಲಂಡನ್)	೩೬
ಪುಸ್ತಕ ವಿಮರ್ಶೆ	ಬೇರೆಬೇರೆ ವಿಮರ್ಶಕರು	೪೨
ಸಾದರಸ್ವೀಕಾರ	.. ..	೪೩
ನಗೀಗೆ ನೇವಿದ್ಯ	'ಸಕಲಿಯ ನಾರಾಯಣಾಚಾರ್ಯ'	೪೪
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೪೫
ಜಯಂತಿಯ ಏಜಂಟರಿಗಾಗಿ	.. ..	೪೮
'ಜಯಂತಿ' ಸಣ್ಣಕತೆಗಳ ಮೇಲಾಟ	.. .. .. ಮೇಲೋಲೆಯ ೩ನೆಯ ಪುಟದಲ್ಲಿ	

ಜಯಂತಿ

ಜೂನ್
೧೯೪೧

ವರ್ಷ ೪

ಸಂಚಿಕೆ ೧

ಸಂಪಾದಕೀಯ

★

ಪತ್ರಿಕೆಗಳಿಗೆ ಪ್ರತಿಕೂಲ ಪರಿಸ್ಥಿತಿ ಬಂಡವಾಳಬೇಕು, ಇಲ್ಲವೆ ತಾಳ್ಮೆ ಬೇಕು!

ಬಂದು ತಿಂಗಳು ಮಾತ್ರ ವಿಶ್ರಾಂತಿ ತೆಗೆದುಕೊಂಡ ಜಯಂತಿ, ಮತ್ತೆ ಚೇತರಿಸಿಕೊಂಡೆದ್ದು ಕಾರ್ಯೋನ್ಮುಖವಾಗಿ ಹೊರಟಿದೆಯೆಂಬುದನ್ನು ತಿಳುಹಲುಸುಂಬ ಸಂತೋಷವೆನಿಸುತ್ತಿದೆ. ಪದ್ಯದ ವಾತಾವರಣದಲ್ಲಿ ಇಂತಹ ವಿಧಾಯಕ ಕಾರ್ಯಗಳಿಗೆ ಅನುಕೂಲವಾದ ಗಾಳಿ ಬೀಸುತ್ತಿಲ್ಲ. ಎಲ್ಲೆಲ್ಲಿಯೂ ಪ್ರತಿಕೂಲ ಪರಿಸ್ಥಿತಿ. ಲೋಕದಲ್ಲೆಲ್ಲ ಗಾಬರಿ ತಲೆಯೆತ್ತಿ ನಿಂತಿದೆ. ಕಳೆದ ವರ್ಷದ ಈ ದಿನಗಳಲ್ಲಿ ಮಹಾಯುದ್ಧ ನಮ್ಮಿಂದ ಎಷ್ಟೊ ದೂರದಲ್ಲಿದ್ದಿತು; ಈಗ ನೋಡಿದರೆ ಅದು ಭಾರತದಿಂದ ಕೂಗಳತೆಯಂತರದ ಮೇಲೆ ನಿಂತಿದೆಯೆಂದು ಹೇಳಬಹುದಾಗಿದೆ. ಯುದ್ಧಮಾನ ದೇಶಗಳಲ್ಲಿ ನಡೆದ ನಡೆಯುತ್ತಿರುವ ಜನನಾಶವನ್ನೂ ಧನನಾಶವನ್ನೂ ಅಪಶ್ರುತಿ-ವಿಪತ್ತುಗಳನ್ನೂ ನಿತ್ಯ-ನಿತ್ಯವೂ ಕಿವಿಯಿಂದ ಕೇಳುತ್ತಲಿರುವ ನಮ್ಮ ಜನತೆಯ ಜೀವಗಳು, ಕ್ಷಣಕ್ಷಣಕ್ಕೂ ಹಾರಿ ಹಾರಿ ಬೀಳುವುದರಲ್ಲಿವೆ. ವರ್ತಮಾನಕಾಲವೊಂದರ ಕಡೆಗೇ ನೋಡುತ್ತ ತುಳಿತವರ ಸಂಖ್ಯೆ ಹೆಚ್ಚಾಗಿದೆ–ಇಂದಿನ ಈ ಬಿಕ್ಕಟ್ಟಿನ ಸಂದರ್ಭದಲ್ಲಿ. ಸಾಹಿತ್ಯ-ಸಂಸ್ಕೃತಿಗಳ ಪ್ರಚಾರದ ಕಾರ್ಯವು ಹೆಚ್ಚಾಗಿ ಕಾಲತ್ರಯದ ಕಡೆಗೆ ದೃಷ್ಟಿಯಿರುವ ಜನಸಮಾಜವನ್ನೇ ಹೆಚ್ಚಾಗಿ ಅವಲಂಬಿಸಿರುತ್ತದೆ. ಇಂತಹ ದೃಷ್ಟಿ—ನಮ್ಮಲ್ಲಿಯೆ ಯುದ್ಧವಿಲ್ಲದಿದ್ದರೂ—ಪದ್ಯ ನಮ್ಮ ನಾಡಿನಲ್ಲಿ ಇಲ್ಲವಾಗಿದೆ. ಇಂತಹ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತ ಈಗ ಜಯಂತಿಗೆ ಕಾರ್ಯಮಾಡಬೇಕಾಗಿದೆ. ಜಯಂತಿಯೊಂದರದೇ ಈ ಗತಿಯೆಂದಲ್ಲ; ಎಲ್ಲ ಕನ್ನಡ ಪತ್ರಿಕೆಗಳ ಹಾಡು-ಹಣೆಬರೆಹಗಳೂ ಹೀಗೆಯೆ ಇವೆ.

'ಕನ್ನಡನಾಡಿನ ಪತ್ರಿಕೆಗಳಿಗಷ್ಟೇ ಈ ದುಸ್ಥಿತಿಯೇಕೆ? ಮಿಕ್ಕ ಪ್ರಾಂತಗಳ ಪತ್ರಿಕೆ ಸುಯಂತ್ರಿತವಾಗಿ ಸಾಗಿಲ್ಲವೆ?' ಎಂದೂ ಕೆಲವರು ಕೇಳಲು ಮುಂದುವರಿಯಬಹುದು. ಹಿಂದೆ ಜಯಂತಿಯಲ್ಲಿ ಹಲವುಸಲ ವಿವರಿಸಿದ ಕಾರಣಗಳನ್ನೆಇಲ್ಲಿ ಮತ್ತೆ ಹೇಳಬೇಕಾದ ಕಾರಣವೇನೂ ಇಲ್ಲ. 'ಒಳ್ಳೆಯ ಪತ್ರಿಕೆಗಳೆ ಇಲ್ಲ!' ಎಂದು ಓದುವವರ ದೂರು. 'ಎಂತಪ ಪತ್ರಿಕೆ ಹೊರಟರೂ ಕೊಂಡು ಓದುವ ಜನರೇ ನಮ್ಮಲ್ಲಿ ಹೆಚ್ಚಾಗಿ ಸಿಕ್ಕುವುದಿಲ್ಲ!' ಎಂದು ಪತ್ರಿಕಾಸಂಚಾಲಕರ ಕೂಗು. ಸ್ವಲ್ಪ ತಾಳ್ಮೆಯಿಂದ ನಡೆದುಕೊಂಡರೆ ವಾಚಕರಿಗೆ ಒಳ್ಳೆಯ ಪತ್ರಿಕೆಗಳು ಓದಲು ಸಿಕ್ಕಬಹುದು, ಪತ್ರಿಕೆಗಳಿಗೆ ಕೊಂಡು ಓದುವ ವಾಚಕರೂ ಸಿಕ್ಕಬಹುದು; ಆದರೇನು, ಅವಶ್ಯಕವಾದ ಆ ತಾಳ್ಮೆ ಎಲ್ಲಿಯೂ ಕಂಡುಬರುತ್ತಿಲ್ಲ.

ಸಾಕಷ್ಟು ಬಂಡವಾಳವಿದ್ದವರು ಪತ್ರಿಕೆಗಳನ್ನು ನಡೆಯಿಸತೊಡಗಿದರೆ ಅವರಿಗೆ ತಾಳ್ಮೆಯಿಂದ ತಮ್ಮ ಕೆಲಸ ಸಾಗಿಸಲು ಶಕ್ಯವಾಗುವುದು. ಅದರಿಂದ ವಾಚಕರು ಅಪೇಕ್ಷಿಸುವಂತಹ ಪತ್ರಿಕೆಗಳನ್ನು ಒದಗಿಸಿಕೊಡಲಿಕ್ಕೂ ಸಾಧ್ಯವಾಗುವುದು. ಆದರೆ ನಮ್ಮಲ್ಲಿಯ ಬಂಡವಾಳಗಾರರು ಪತ್ರಿಕಾಪ್ರಕಾಶನದ ಉದ್ಯಮದ ಕಡೆಗೆ ಇದುವರೆಗೆ ಕಣ್ಣುಬಿಟ್ಟು ನೋಡಿಲ್ಲ ಕೂಡ. ಇಲ್ಲಿಯವರೆಗೂ ನಮ್ಮ ದೇಶದಲ್ಲಿ ಪತ್ರಿಕಾವ್ಯವಸಾಯವನ್ನು ಸಾಗಿಸಿಕೊಂಡು ಬಂದವರೆಂದರೆ, ಬರೆಯುವ ಚಟವಿರುವ ನಿರ್ಧನರಾದ ಸಾಹಿತ್ಯಕರು; ಇಲ್ಲವೆ—ಮಿಕ್ಕ ಪ್ರಾಂತದವರು ಪತ್ರಿಕಾಪ್ರಕಾಶನದಿಂದ ಆರ್ಥಿಕಲಾಭ ಪಡೆಯುತ್ತಿರುವುದನ್ನು ಕಂಡು ತಾವೂ ಹಾಗೆ ಮಾಡಬೇಕೆಂದು ಹೊರಟ—

ಕೆಲವುಜನ ಆಶಾವಾದಿಗಳಾದ ಅಲ್ಪಬಂಡವಾಳಿಗರು. ಈ ಬಂಡವಾಳಿಗರು, 'ಅಶ್ವತ್ಥ ಪ್ರದಕ್ಷಿಣೆ ಹಾಕಿ ಹೊಕ್ಕುಳಲ್ಲಿ ಬೆರಳಿಟ್ಟು ನೋಡಿದರು' ಎನ್ನುವ ಮಾತಿನಂತೆ, ಹಾಕಿದ ಬಂಡವಾಳ ಮರುದಿನವೆ ಕೈತುಂಬ ಲಾಭ ತಂದುಕೊಡಬೇಕೆಂದು ಅಪೇಕ್ಷಿಸುವರು. ಅದು ಸಿಕ್ಕದಾಗಲು ಉತ್ಸಾಹಹೀನರಾಗಿ ಹಿಡಿದ ವ್ಯವಸಾಯದ ಕ್ಷೇಯನ್ನೆ ಬಿಟ್ಟುಬಿಡುವರು. ನಿರ್ಧನರಾದ ಸಾಹಿತ್ಯಿಕರು ನಡೆಯಿಸುವ ಪತ್ರಿಕಾವ್ಯವಸಾಯವನ್ನಂತೂ ಬೇರೆಯಾಗಿ ಹೇಳಲೆಬೇಕಾಗಿಲ್ಲ. ಹೀಗಾಗಿ ನಮ್ಮ ನಾಡಿನಲ್ಲಿ ಯಶಸ್ವೀರೀತಿಯಿಂದ—ಸದಭಿರುಚಿಗೆ ಒಗ್ಗುವಂತಹ—ಪತ್ರಿಕೆ ನಡೆಯಿಸಿಕೊಂಡು ಹೋಗುವವರ ಸಂಖ್ಯೆ ತೀರ್ಮನೆ ಎಂದು ಹೇಳಬಹುದು. ಆದುದರಿಂದಲೆ ಒಳ್ಳೆಯ ಪತ್ರಿಕೆಗಳು ನಡೆಯಬೇಕಾದಲ್ಲಿ ನಮ್ಮಲ್ಲಿಯೂ ಪಣವಂತರು ತಮ್ಮ ಬಂಡವಾಳವನ್ನು ಪತ್ರಿಕಾವಲಂಬಾಲನೋದ್ಯೋಗದಲ್ಲಿ ತೊಡಗಿಸಬೇಕು ಒಂದು; ಇಲ್ಲದಿದ್ದರೆ ಕನ್ನಡಿಗರು ಅಭಿಮಾನದಿಂದ ಇದ್ದ ಪತ್ರಿಕೆಗಳಿಗೇ ಪೋಷಕರಾಗಿ—ಸಹಾಯಕರಾಗಿ—ಚಂದಾದಾರರಾಗಿ ಸಹಕರಿಸಬೇಕು ಒಂದು. ಪರದೇಶ-ಪರಪ್ರಾಂತಗಳ ಪತ್ರಿಕೆಗಳೊಂದಿಗೆ ತೂಕಮಾಡುತ್ತ 'ಅಂತಹ ಪತ್ರಿಕೆ ಹೊರಟಾಗಲೆ ನಾನು ಚಂದಾದಾರನಾಗುವೆನು!' ಎಂದು ಎಲ್ಲರೂ ಹೇಳುತ್ತ ಹೋದಲ್ಲಿ, ಒಳ್ಳೆಯ ಪತ್ರಿಕೆ ನಮ್ಮಲ್ಲಿ ಹೊರಡುವುದೆಂದರೆ ಕನಸಿನ ಮಾತೇ ಸರಿ. ಹಾಗೆ ಹೇಳುವವರು ತಾವು ಸಾಕ್ಷಿಕೊಟ್ಟು ಹೇಳುತ್ತಿರುವ ಪರಭಾಷೆಯ ಪತ್ರಿಕೆಗಳು, ಯಾವ ಸ್ವರೂಪದಲ್ಲಿ ಪ್ರಾರಂಭವಾಗಿದ್ದುವೆಂಬುದನ್ನು ವಿಚಾರಿಸಿ ಕಂಡುಕೊಳ್ಳಬೇಕು. ಅಲ್ಲದೆ ಇನ್ನೂ ಒಂದು ಮಾತು: ಪರಭಾಷೆಗಳಲ್ಲಿ ಒಳ್ಳೆಯ ರೀತಿಯಿಂದ ನಡೆಯುತ್ತಿರುವ ಪತ್ರಿಕೆಗಳು ಬಂಡವಾಳಗಾರರಿಂದಲೆ ನಡೆಯುತ್ತಿವೆ ಯೆಂಬುದನ್ನು ನಾವೆಲ್ಲ ನೆನಸಿಗೆ ತಂದುಕೊಳ್ಳಬೇಕು.

ಜಯಂತಿಯ ಬೇಡಿಕೆ

ಜಯಂತಿಯನ್ನು ಒಳ್ಳೆಯ ಪತ್ರಿಕೆಯನ್ನಾಗಿ ಮಾಡಬೇಕೆಂಬ ಕಲ್ಪನೆ-ಕನಸು-ಹಂಬಲು ನಮಗೆ ಬೇಕಾದಷ್ಟು ಇದ್ದರೂ, ಅದಕ್ಕಾಗಿ ಬೇಕಾಗಿರುವ ಬಂಡವಾಳ ಇಲ್ಲವಾಗಿದೆ. ಒಳ್ಳೆಯ ಪತ್ರಿಕೆಯು ಹೊರಟಾಗಲೆ ಕೊಂಡು ಓದಬೇಕೆಂದು 'ಸಂಕಲ್ಪ' ವಿರುವ ಬಹುಜನ ಕನ್ನಡಿಗರಿಂದ ಕೂಡಲೆ ಆರ್ಥಿಕ ಸಹಕಾರ ಸಿಕ್ಕುವಂತಿಲ್ಲ; ಈಗ ಅಭಿಮಾನದಿಂದ ಆರ್ಥಿಕ ಸಹಕಾರ ಕೊಡುತ್ತಿರುವವರ ಅರ್ಥವು ಜಯಂತಿಯನ್ನು ಅತ್ಯುತ್ತಮವಾಗಿ ಮಾಡಿತೋರಿಸಲಿಕ್ಕೆ ಸಾಲುವಂತಿಲ್ಲ. ಆದುದರಿಂದಲೆ ಕಲಿತ ಕನ್ನಡಿಗರಲ್ಲಿ ಜಯಂತಿಯ ಬೇಡಿಕೆಯಿಷ್ಟು:

'ದಯೆಯಿಟ್ಟು ಎಲ್ಲರೂ ತಮ್ಮದಾಗಿಯೆ ಒಂದು ಜಯಂತಿಯ ಪ್ರತಿ ಕೊಳ್ಳುತ್ತಿರಿ! ಮೂರೇ ಮೂರು ರೂಪಾಯಿಕೊಟ್ಟು ತಾವು ಚಂದಾದಾರರಾಗಿ! ತಮ್ಮ ಆಪ್ತಮಿತ್ರರುಗಳಿಗೆ ಚಂದಾದಾರಾಗುವಂತೆ ಬಿನ್ನವಿಸಿಕೊಳ್ಳಿ!'

ಜಯಂತಿಯ ಸಂಚಾಲಕವರ್ಗಕ್ಕೆ ಪತ್ರಿಕೆಯಿಂದ ಲಾಭಪಡೆಯುವೇಕೆಂಬ ಆಶೆಯಿಲ್ಲ; ಕನ್ನಡದ ಜನಸಾಮಾನ್ಯರ ಮನಸ್ಸನ್ನು ರಂಜಿಸುತ್ತ ಹೃದಯವನ್ನು ತಿದ್ದುವಂತಹ ಒಳ್ಳೆಯ ಪತ್ರಿಕೆಯೊಂದನ್ನಾಗಿ ಜಯಂತಿಯನ್ನು ಮಾಡಬೇಕೆಂಬ ಆಕಾಂಕ್ಷೆಯಿದೆ-ಇಷ್ಟೆ! ಕನ್ನಡವಾಚಕ ವರ್ಗವು ತಾಳ್ಮೆಯಿಂದ ಸಹಕರಿಸಿ ನಮ್ಮಿಂದ ಕೆಲಸ ತೆಗೆದುಕೊಳ್ಳುತ್ತ ಹೋದರೆ, ಒಂದೆರಡು ವರ್ಷಗಳಲ್ಲಿಯೆ ಸರಭಾಷೆಯ ಪತ್ರಿಕೆಗಳ ಹೆಗಲಿಗೆ ಹೆಗಲು ಹಚ್ಚಿ ನಿಲ್ಲುವಂತಹ ಯೋಗ್ಯತೆ ಜಯಂತಿಗೂ ಬಾರದಿರದೆಂದು ನಮ್ಮ ಖಂಡಿತವಾದ ವಿಶ್ವಾಸ.

ಜಯಂತಿಯ ಪುಟಸಂಖ್ಯೆ

ಪದ್ಯ ಕಾಗದದ ಬೆಲೆ ಒಂದಕ್ಕೆ ನಾಲ್ಕರಷ್ಟಾಗಿದೆ. ಈ ಸಂಚಿಕೆಗೆ ಉಪಯೋಗಿಸಿದ ಕಾಗದದ ಲೆಕ್ಕಹಾಕಿ ನೋಡಿದರೆ, ಒಂದೊಂದು ಸಚಿತ್ರಕೆಯ ಬರಿ ಕಾಗದದ ಬೆಲೆಯೆ ೨ ಆಣೆಗಳಷ್ಟಾಗುವುದು. ಕಾಗದದ ಪ್ರವಾಣದಲ್ಲಿಯೆ ಮುದ್ರಣದ ಇತರ ಸಲಕರಣೆಗಳಿಗೂ ಪಡಿಯಚ್ಚಿನ (ಬ್ಲಾಕ್) ಸಾಮಗ್ರಿಗಳಿಗೂ ಬೆಲೆಯೇರಿದೆ. ಅದುದರಿಂದಲೆ 'ಕಿಲೋಸ್ಕರ್' 'ಸ್ವೀ' ಅಂತಹ—ಸಾಕಷ್ಟು ಚಂದಾದಾರರೂ ಪ್ರಸಾರವೂ ಇರುವ—ಪತ್ರಿಕೆಗಳೂ ಪುಟಗಳನ್ನು ಕಡಿಮೆ

ಮಾಡಿಕೊಂಡಿರುವುದಲ್ಲದೆ ೪ ಆಣೆಯ ಬೆಲೆಯನ್ನು ೫ ಆಣೆಗೆ ಏರಿಸಿರುವುವು. 'ಪ್ರಜಾಮತ' 'ಸಂಯುಕ್ತಕರ್ನಾಟಕ' ದಂತಹ ವಾರಪತ್ರಿಕೆ-ದಿನಪತ್ರಿಕೆಗಳೂ ಗಾತ್ರವನ್ನು ಕಡಿಮೆ ಮಾಡಿರುವುದಲ್ಲದೆ ಬೆಲೆಯನ್ನು ಹೆಚ್ಚಿಸಿರುವುವು. ಜಯಂತಿಗೂ ಹಾಗೆ ಮಾಡದಿದ್ದರೆ ಬೇರೆ ಗತಿಯೆ ಇರಲಿಲ್ಲ. ಅದುದರಿಂದಲೆ ಮೊದಲಿಗಿಂತ ಎಂಟು ಪುಟಗಳನ್ನು ಕಡಿಮೆಮಾಡಲಾಗಿದೆ. ಪುಟಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದರೂ ಮೊದಲಿಗಿಂತ ಒಳ್ಳೆಯ ಕಾಗದಗಳನ್ನು ಉಪಯೋಗಿಸಬೇಕೆಂದು ನಿರ್ಣಯಿಸಲಾಗಿದೆ. ಅದರೂ ಬೆಲೆ ಮಾತ್ರ ಮೊದಲಿನಷ್ಟೆ ಇದೆ. ಒಂದು ಅಂತರಂಗದ ಮಾತನ್ನು ಇಲ್ಲಿ ಹೇಳಿಯೆ ಬಿಡಬೇಕು ಎನಿಸುತ್ತಿದೆ. ಅದೇನೆಂದರೆ: ಜಯಂತಿಯ ಆರ್ಥಿಕ ಅನುಕೂಲತೆಯನ್ನು ನೋಡಿಕೊಂಡು, ಇಷ್ಟೇ ಬೆಲೆಯಲ್ಲಿ ಬೇಗನೆ ಮೊದಲಿನಷ್ಟೆ ಪುಟಗಳನ್ನು ಕೊಡಬೇಕೆಂಬ ವಿಚಾರವೂ ಇದೆ. ಈ ವಿಚಾರವು ಫಲಿಸಬೇಕಾದರೆ ಜಯಂತಿಯ ಅಭಿಮಾನಿವರ್ಗವೆಲ್ಲ ಮನಸ್ಸುಮಾಡಿ, ಅದರ ಪ್ರಸಾರ ಹೆಚ್ಚುವಂತೆ ಮಾಡಬೇಕು.

ವಿಶ್ರಾಂತಿಯ ಬಳಿಕಿಟ್ಟ ಮುಂದಡಿ

'ಜಯಂತಿ ಒಂದು ತಿಂಗಳ ವಿಶ್ರಾಂತಿಯನ್ನೇಕೆ ತೆಗೆದು ಕೊಂಡಿತ್ತು?' ಎಂಬ ಪ್ರಶ್ನೆಯನ್ನು ಅನೇಕರು ಕುತೂಹಲದಿಂದ ಕೇಳುತ್ತಲಿರುವರು. ಮೇಲಿನ ನಮ್ಮ ರಗಳೆಯಿಂದ ಆ ಪ್ರಶ್ನೆಗೆ ತಕ್ಕ ಉತ್ತರ ಸಿಕ್ಕೇ ಸಿಕ್ಕಿರಬಹುದೆಂದು ನನ್ನ ಭಾವನೆ. ಆದರೂ ಒಂದೆ ಮಾತಿನಲ್ಲಿ ಅದರ ಕಾರಣ ಹೇಳಬೇಕೆಂದರೆ 'ಆರ್ಥಿಕ ಗಂಡಾಂತರದ ಪೆಡರಿಕೆ—ಜನತೆಯ ಸಹಕಾರದ ವಿಷಯದಲ್ಲಿ ಉಂಟಾದ ಸಂದೇಹ!' ಎಂದು ಹೇಳಬಹುದು. ಈಗ ಕೆಲವು ಜನ ಸ್ನೇಹಿತರು ಸೇರಿ ಜಯಂತಿಯ ನಷ್ಟದ ಹೊಣೆಯಲ್ಲಿ ಕೆಲವೊಂದಂಶವನ್ನು ತಾವೂ ಪೊರುವೆನೆಂದಾಗಿ ಭರವಸೆ ಕೊಟ್ಟರು. ಆ ಭರವಸೆಯ ಕೈಗೋಲಿನಾಧಾರದಿಂದಲೆ ಜಯಂತಿ ಮತ್ತೆ ಮುಂದಡಿಯಿಟ್ಟಿದೆ. ಈ ಮುಂದಡಿ ಅದು ತನ್ನ ಧ್ಯೇಯವನ್ನು ಸಾಧಿಸುವವರೆಗೂ ಮುಂದುವರಿಯುತ್ತಿರುವಂತೆ ಕನ್ನಡ ಭಾಗ್ಯವಿಧಾತೆ ಸ್ಫೂರಿಸುತ್ತಿರಲಿ, ಕನ್ನಡಜನತೆ ಸಹಕಾರವೀಯುತ್ತಿರಲಿ!

* * *

ಸಣ್ಣಕತೆಗಳ ಮೇಲಾಟ

ಈ ಸಂಚಿಕೆಯಲ್ಲಿ ಕೊಟ್ಟ ಸ್ಪರ್ಧೆಯ ಪ್ರಕಟನೆಯ ಕಡೆಗೆ ಎಲ್ಲರೂ ಗಮನಕೊಡಬೇಕು. ಕನ್ನಡ ಕತೆಗಾರರು ಇದರಲ್ಲಿ ಉತ್ಸಾಹದಿಂದ ಭಾಗವಹಿಸಬೇಕು. ವರ್ಷದಲ್ಲಿ ಕನಿಷ್ಠ ಐದು ಸಲವಾದರೂ ಈ ಸಣ್ಣಕತೆಗಳ ಮೇಲಾಟ ನಡೆಯಿಸಬೇಕೆಂಬ ವಿಚಾರವಿದೆ. ಈ ಸ್ಪರ್ಧೆಯಿಂದ ತರುಣಲೇಖಕರಲ್ಲಿ ಲೇಖನಕಲೆಯು ಹದಗೊಳ್ಳಬಹುದಲ್ಲದೆ, ಕೆಲವಾದರೂ ಒಳ್ಳೆಯಕತೆಗಳು ಸ್ವತಂತ್ರವಾಗಿ ಬರೆದುವು—ವಾಚಕರಿಗೆ ಓದಲು ಸಿಕ್ಕಬಹುದೆಂಬ ನಿರೀಕ್ಷೆ ನಮಗುಂಟು. ಎಲ್ಲ ಕತೆಗಾರರೂ ಈ ಸ್ಪರ್ಧೆಯಲ್ಲಿ ಭಾಗವಹಿಸಿ, ನಮ್ಮ ನಿರೀಕ್ಷೆಯನ್ನು ಸಾರ್ಥಕಗೊಳಿಸಬೇಕು.

ಏಜಂಟರುಗಳಲ್ಲಿ ಬಿನ್ನಹ

ಈ ಸಂಚಿಕೆಯ ಕೊನೆಯ ಪುಟದಲ್ಲಿ ಪ್ರಕಟಿಸಿದ ನಿಯಮಗಳನ್ನು ತಾವೆಲ್ಲ ಲಕ್ಷ್ಯಗೊಟ್ಟು ಓದಿಕೊಳ್ಳಬೇಕು. ಈಗ ಮೂರು ವರ್ಷದ ಅನುಭವದಿಂದಲೂ, ಮಹಾಯುದ್ಧದ ಮೂಲಕ ಉಂಟಾದ ಆರ್ಥಿಕ ಪರಿಸ್ಥಿತಿಯ ಕಾರಣದಿಂದಲೂ ಅನಿವಾರ್ಯವಾಗಿ ಈ ನಿಯಮಗಳನ್ನು ಪ್ರಚಾರದಲ್ಲಿ ತರಬೇಕಾಗಿದೆ. ಯಾರೂ ವಿಪರೀತವನ್ನೇನೂ ಭಾವಿಸದೆ, ಮೊದಲನಂತೆಯೆ ಪ್ರೀತಿಯಿಂದ ಜಯಂತಿಯ ಪ್ರಸಾರದ ಕಾರ್ಯದಲ್ಲಿ ಸಹಕರಿಸಿ ಉಪಕಾರಮಾಡಬೇಕು.

ಜಯಂತಿಯ ಮುಂದಿನ ಸಂಚಿಕೆಯು ಜೂಲೈ ಮೊದಲನೆಯ ವಾರದಲ್ಲಿ ಖಂಡಿತ ವಾಚಕರಿಗೆ ಓದಲು ಸಿಕ್ಕುವುದು. ಅದಕ್ಕೆ ಮುಂದಿನ ಸಂಚಿಕೆ-ಆ ಆ ತಿಂಗಳುಳಗ ಗಿನೆಯ ತಾರೀಖಿಗೆ ತಪ್ಪದೆ ವಾಚಕರ ಕೈಸೇರುವುವು. ಚಂದಾದಾರರಾಗವವರು ಬೇಗನೆ ಹೆಸರುಗಳನ್ನು ಕೊಡಬೇಕು.

ಯೆಂದೂ ದೋಷವೂ ಇದೆಯೆಂದೂ ತೋರುತ್ತದೆ. ನಾವು ನೈರಾಶ್ಯವಾದಿಗಳೂ ಆಗೋಣಬೇಡ, ಕೇವಲ ಆಶಾವಾದಿಗಳೂ ಆಗೋಣ ಬೇಡ. ಸತ್ಯವಾದಿಗಳು ಆಗೋಣ, ಮತ್ತು ಯಾವ ಯಾವ ವಿಷಯಗಳಲ್ಲಿ ಪ್ರಗತಿಯಾಗಿದೆ ಮತ್ತು ಪರಾಗತಿಯಾಗಿದೆ ಯೆಂಬುದನ್ನು ತಿಳಿದುಕೊಳ್ಳೋಣ! ಇದೇ ನಿಜವಾದ ಪದ್ಧತಿ.

ಈ ವಿಷಯದ ವಿಚಾರವನ್ನು ಮಾಡುವಾಗ ನಾವು ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು. ಅದಾವುದೆಂದರೆ, ಇಂಥ ಇಂಥ ವಿಷಯದಲ್ಲಿ ನಾವು ೨೫ ವರ್ಷದ ಹಿಂದೆ ಇದ್ದ ಸ್ಥಿತಿಗಿಂತ ಉತ್ತಮ ಸ್ಥಿತಿಗೆ ಬಂದಿರುವೆವು ಎಂದು ಹೇಳಿದ ಮಾತ್ರಕ್ಕೆ ನಮ್ಮ ಕಾರ್ಯವಾಗಲಿಲ್ಲ. ನಮ್ಮ ಪ್ರಗತಿಯನ್ನು ನಿರ್ಣಯಿಸುವುದಕ್ಕೆ ಅದು ನಿಜವಾದ ಅಳತೆಗೋಲು ಅಲ್ಲ. ಏಕೆಂದರೆ, ದೇಶದಲ್ಲಿ ಒಟ್ಟಿಗೆ ಜಾಗ್ರತಿಗೆ ಪ್ರಾರಂಭವಾಯಿತೆಂದರೆ, ಅದು ಕೆಲವು ವರ್ಷಗಳಲ್ಲಿ ಮುಂದುಮುಂದಕ್ಕೆ ಸರಿಯುತ್ತ ಹೋಗುವುದು ಸ್ವಾಭಾವಿಕವೇ ಆಗಿದೆ. ಆ ಅವಧಿಯಲ್ಲಿ, ಅದು ಎಷ್ಟು ಪ್ರಮಾಣದಿಂದ ಮುಂದೆ ಹೋಗಿದೆ, ಅದೇ ಅವಧಿಯಲ್ಲಿ ಮಿಕ್ಕ ಪ್ರಾಂತಗಳು ಎಷ್ಟು ಮುಂದಕ್ಕೆ ಹೋಗಿವೆಯೋ ಅಷ್ಟು ನಮ್ಮ ಪ್ರಾಂತವು ಮುಂದಕ್ಕೆ ಹೋಗಿದೆಯೋ ಇಲ್ಲವೋ, ಹೋಗದಿದ್ದರೆ ಏಕೆ ಹೋಗಿಲ್ಲ—ಇವೇ ಮುಂತಾದ ಸಂಗತಿಗಳನ್ನೂ ವಿಚಾರ ಮಾಡಬೇಕಾಗುತ್ತದೆ. ಈ ತರದ ಎಚ್ಚರಿಕೆಯನ್ನು ಕನ್ನಡಿಗರಿಗೆ ಕೊಡುವುದು, ಅವಶ್ಯವಾಗಿ ತೋರುತ್ತದೆ. ಏಕೆಂದರೆ, 'ನಾವು ಮಹಾರಾಷ್ಟ್ರದವರಿಗಿಂತ ಮುಂದೆ ಹೋಗಿರುವೆವು'ಎಂಬ ತಪ್ಪು ಭಾವನೆಯು ಕೆಲವು ಕನ್ನಡಿಗರಲ್ಲಿ ಈಗ ಕಾಣಬರುತ್ತಲಿದೆ. ಆ ತರದ ಭ್ರಮೆಯು ದೂರಾಗುವುದು ಅವಶ್ಯವಿದೆ. ಇದಕ್ಕೆ ವಿರುದ್ಧವಾಗಿ ಕೆಲವರಿಗೆ ಮಹಾರಾಷ್ಟ್ರದ ಮೋಹ ಇನ್ನೂ ಮುಸುಕಿರುತ್ತದೆ. ಅವರ ನೋಟ ಇನ್ನೂ ಮಹಾರಾಷ್ಟ್ರದ ಕಡೆಗಿದೆ. ಮಹಾರಾಷ್ಟ್ರದಲ್ಲಿಯ ಅಥವಾ ತೆಲುಗು-ತಮಿಳು ದೇಶಗಳಲ್ಲಿಯ ದೊಡ್ಡ ದೊಡ್ಡ ಮುಖಂಡರನ್ನೂ ವೃತ್ತಪತ್ರ ಗಳನ್ನೂ ಸಂಸ್ಥೆಗಳನ್ನೂ ಅವರು ನೋಡುತ್ತಾರೆ; ಅವಕ್ಕೂ ನಮ್ಮಲ್ಲಿಯ ಬಡಕ ಮುಖಂಡರಿಗೂ ಪತ್ರಗಳಿಗೂ ಸಂಸ್ಥೆಗಳಿಗೂ ಹೋಲಿಸುತ್ತಾರೆ. ಮತ್ತು ಕರ್ನಾಟಕದ ಬಗ್ಗೆ ತಿರಸ್ಕಾರಬುದ್ಧಿ ತಾಳುತ್ತಾರೆ. ಇದೂ ಸರಿಯಲ್ಲ; ಈ ತರದ ಭಾವನೆ ಅನೇಕ ವರುಷಗಳ ಜಳವಳಿಯಿಂದ ಕಡಿಮೆಯಾಗುತ್ತ ನಡೆದಿತ್ತು; ಪುನಃ ಅದು ತಲೆಯೆತ್ತ ಹತ್ತಿದೆ. ಅದರ ತಲೆ ಕುಕ್ಕರಿಸುವುದು ಅವಶ್ಯ.

ಇರಲಿ, ಈಗ ನಾವು ಈ ವಿಷಯವನ್ನು ಯಾವ ದೃಷ್ಟಿಯಿಂದ ವಿಚಾರಮಾಡಬೇಕೆಂಬುದನ್ನು ಸೂಚಿಸಿದೆವು. ಇದೇ ಮಹತ್ತ್ವದ ವಿಷಯ. ಇನ್ನು ಈ ಅಳತೆಗೋಲನ್ನು ಪಚ್ಚಿ ನೋಡಿದರೆ ನಾವು ಇಂದಿನ ಸ್ಥಿತಿಯ ಬಗ್ಗೆ ಎಷ್ಟರ ಮಟ್ಟಿಗೆ ಆನಂದಪಡಬೇಕು.... ಮುಂದೆ ಯಾವ ಮಾರ್ಗ ಹಿಡಿಯಬೇಕು....ಎಂಬುದು ತಾನೇ ಗೊತ್ತಾಗುವುದು. ಅರ್ಥಾತ್, ಕೆಲವು ವಿಷಯಗಳಲ್ಲಿ ಮತಭೇದವಾಗಬಹುದು. ಆದರೆ, ಒಟ್ಟಿನಲ್ಲಿ ನಾವು ಕೆಳಗೆ ಬರೆದಂತೆ ನಿರ್ಣಯಕೊಡಬಹುದೆಂದು ನಮಗೆ ತೋರುತ್ತದೆ. ಅದೇನೆಂದರೆ: ರಾಜಕಾರಣ ಮತ್ತು ವಾಙ್ಮಯ ಈ ವಿಷಯಗಳಲ್ಲಿ ಕೆಲಮಟ್ಟಿಗೆ ಪ್ರಗತಿಯಾಗಿದೆ. ರಾಜಕಾರಣದಲ್ಲಿ ಆದ ಪ್ರಗತಿ ಪರಾವಲಂಬಿ; ಅದು ಮಹಾತ್ಮಾ ಗಾಂಧಿಯವರ ಸ್ಫೂರ್ತಿಫಲ. ಕರ್ನಾಟಕದ ರಾಜಕಾರಣದಲ್ಲಿ, ಅನೇಕ ಸ್ವಾರ್ಥತ್ಯಾಗಿಗಳು ಹೊರಬಿರುನರು. ಲಿಂಗಾಯತರೂ ಮಿಕ್ಕ ಬ್ರಾಹ್ಮಣೇತರರೂ ರಾಜಕಾರಣದಲ್ಲಿ ಪ್ರವೇಶಮಾಡಿದ್ದೊಂದು ಈ ಯುಗದ ವಿಶೇಷ. ಬ್ರಾಹ್ಮಣರಂತೆಯೇ ನಾವೂ ಸ್ವಾರ್ಥತ್ಯಾಗಮಾಡಬಲ್ಲೆವೆಂಬುದನ್ನು ಬ್ರಾಹ್ಮಣೇತರರು ತೋರಿಸಿಕೊಟ್ಟಿರುವರು. ರಾಜಕಾರಣದ ಮುಖಂಡತ್ವದಲ್ಲಿ ಮಾತ್ರ ಇನ್ನೂ ಏನೂ ಪ್ರಗತಿ ಯಾಗಿಲ್ಲವೆಂದು ನಮ್ಮ ಮತ. ಕರ್ನಾಟಕತ್ವದ ದೃಷ್ಟಿಯು ಸಾಕಷ್ಟು ಇಲ್ಲದಿರುವ ಮುಖಂಡರ ಕೈಯಲ್ಲಿ ಸೂತ್ರಗಳಿರುವ ವರೆಗೆ ಕರ್ನಾಟಕದ ಏಳ್ಗೆಯಾಗಲಾರದು. ಕೇವಲ ಕರ್ನಾಟಕಕ್ಕೆ ಸಂಬಂಧಿಸಿದ ರಾಜಕಾರಣದಲ್ಲಿ ಮಾತ್ರ ಪರಾಗತಿಯೇ ಆಗಿದೆ ಯೆಂಬುದು ನಮ್ಮ ಮತ. ಇಷ್ಟೇ ಅಲ್ಲ, ರಾಜಕಾರಣದಲ್ಲಿ ಕೆಲಸಮಾಡುವ ಅನೇಕರು, 'ಸ್ವಾತಂತ್ರ್ಯಸಿಕ್ಕಬಳಿಕ ಕರ್ನಾಟಕ ಏಕೀಕರಣದ ವಿಚಾರಮಾಡುವಾ' ಎಂದು ಅನ್ನಹತ್ತಿರುವರು. ಇದು ಅತ್ಯಂತ ಆತ್ಮಘಾತಕ ಕಲ್ಪನೆಯೆಂಬುದು ನಮ್ಮ ಅಭಿಪ್ರಾಯ. ಆತ್ತ ಪಶ್ಚಿಮದಿಕ್ಕಿನಿಂದ ಹಿಂದುಸ್ಥಾನಕ್ಕೆ ತೀವ್ರವೇ ಬೇಗೆಪತ್ತುವ ಚಿಹ್ನ ತೋರುತ್ತಲಿವೆ. ಇತ್ತ, ಪೂರ್ವ ದಿಕ್ಕಿನಲ್ಲಿ ನಮಗೂ ಜಪಾನರಿಗೂ ನಡುವೆ ಒಂದೇ ಅಡ್ಡಗೋಡೆ ಉಳಿದಿದೆ. ಹೀಗೆ ಎರಡೂ ದಿಕ್ಕಿನಿಂದ ನಮ್ಮ ದೇಶವು ಇಕ್ಕಟ್ಟಿನಲ್ಲಿ ಸಿಲ್ಕಿರುವುದರಿಂದ, ತೀವ್ರವೇ ಒಂದಿಲ್ಲೊಂದು ರೀತಿಯಲ್ಲಿ ಹಿಂದುಸ್ಥಾನದ ಭವಿತವ್ಯವು ನಿರ್ಣಯವಾಗುವುದು ನಿಶ್ಚಯ ಮತ್ತು ಸ್ವಾತಂತ್ರ್ಯಸಿಕ್ಕುವುದು ಖಂಡಿತ. ಅದು ಕೇವಲ ಪರಮಾತ್ಮನ ಕೃಪೆಯಿಂದ. ಸತ್ಯಾಗ್ರಹಿಗಳು ತಾವು ಸ್ವಾತಂತ್ರ್ಯಗಳಿಸಿದೆವೆಂದು ಹೇಳಿಕೊಳ್ಳಬಹುದು, ಹಿಂದೂ ಸಭೆಯವರು ತಮ್ಮ ಪ್ರಯತ್ನದಿಂದ ಅದು ಸಿಕ್ಕಿತೆಂದು ಹೇಳ-ಬಹುದು. ಅದು ನಮಗೆ ಕರ್ತವ್ಯವಲ್ಲ. 'ಹೀಗೆ ಸ್ವಾತಂತ್ರ್ಯ-ಸಿಕ್ಕುವವರೆಗೆ ನಾವೇನು ಮಾಡಬೇಕು, ಸಿಕ್ಕಾಗ ನಮ್ಮ ಗತಿಯೇನು?'ಎಂಬುದನ್ನು ವಿಚಾರಮಾಡುವುದು ರಾಜಕಾರಣಿಗಳ ಕರ್ತವ್ಯವಲ್ಲವೇ? ಹಾಗೆ ಈಗಿನವರು ಮಾಡುವುದಿಲ್ಲವೆಂದು ನಾವು ಅವರಮೇಲೆ ಸ್ಪಷ್ಟವಾದ ಆರೋಪವನ್ನು ಹೊರಿಸುತ್ತೇವೆ. ಎಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ತನ್ನ ಕರ್ತವ್ಯವನ್ನು ಬ್ರಿಟನ್ ದೇಶವು ಯಥಾಸಾಂಗವಾಗಿ ಸಾಗಿಸಿರುವುದೆಂಬುದನ್ನು ನಾವು ನೋಡುವುದಿಲ್ಲವೆ? ಇಂಗ್ಲಿಷ ಜನರ ಈ ಧೈರ್ಯ, ಈ ಕರ್ತವ್ಯಬುದ್ಧಿ ಇವನ್ನು ನಾವು ಅನುಕರಿಸಬೇಡವೆ? ಅಷ್ಟೇಕೆ, ಕಾಂಗ್ರೆಸ್ಸಿನ ವಿಧಾಯಕ ಕಾರ್ಯವು ಯಥಾಸಾಂಗವಾಗಿ ಸಾಗಿಲ್ಲವೋ? ಹಾಗೆ ನೋಡಿದರೆ ಖಾದಿಯೇ ಆಗಲಿ, ಮತ್ತಾವ ಜಳವಳಿಯೇ ಆಗಲಿ, ಅದು ಪೂರ್ಣವಾಗಿ ಯಶಸ್ವಿಯಾಗಲಿಕ್ಕೆ ಸ್ವತಂತ್ರ ವಾತಾವರಣವೇ ಬೇಕು. ಅವನ್ನು ಮಾಡುವುದನ್ನು ರಾಜಕಾರಣಿಗಳು ಬಿಟ್ಟಿಲ್ಲವೆಂದಬಳಿಕ, ಇದನ್ನೂ ಬಿಡಲಿಕ್ಕೆ ಕಾರಣವಿಲ್ಲ.

ವಾಜ್ಮಯದಲ್ಲಿಯೂ ಅಲ್ಪಮಟ್ಟಿಗೆ ಪ್ರಗತಿಯಾಗಿದೆಯೆಂಬು ದನ್ನು ಒಪ್ಪಲೇಬೇಕು. ಕರ್ನಾಟಕ ಪರಿಷತ್ತು ಕೆಲಮಟ್ಟಿಗೆ ಜನ್ನಾ ಗಿಯೇ ಕಾರ್ಯಮಾಡುತ್ತಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ಸಾಲದ ಹೊರೆಯನ್ನು ಪೂರ್ಣ ಇಳಿಸಿಕೊಂಡ ಬಳಿಕ ಕಾರ್ಯ ಮಾಡಹತ್ತುವುದಂತೆ! ಇದು ನಮಗೆ ಅಷ್ಟು ಪ್ರಶಸ್ತ ತೋರುವು ದಿಲ್ಲ. ಇರಲಿ, ಸಾಲದ ಹೊರೆ ಇಳಿದ ಬಳಿಕಲಾದರೂ ಅದು ಯಾವ ವಿಶಿಷ್ಟಕಾರ್ಯವನ್ನು ಕೈಕೊಳ್ಳುತ್ತದೆಂಬುದರ ವಿಚಾರ ವನ್ನಾದು ಈಗಿನಿಂದಲೇ ಮಾಡಬೇಕಲ್ಲವೆ? ಒಗ್ಗಿ ಆದ ಹೊರತು ಹುಚ್ಚು ಹೋಗುವುದಿಲ್ಲ, ಹುಚ್ಚು ಹೋದಹೊರತು ಲಗ್ನವಾಗುವು ದಿಲ್ಲ. ಪ್ರತ್ಯಕ್ಷ ಕಾರ್ಯ ಕೈಕೊಳ್ಳದೆ ಹಣ ತೀವ್ರ ಕೂಡುವುದಿಲ್ಲ; ಹಣ ಕೂಡದೆ ಪ್ರತ್ಯಕ್ಷ ಕಾರ್ಯ ಕೈಕೊಳ್ಳುವಂತಿಲ್ಲ. ಆದಕಾ ರಣ, ಅದಷ್ಟು ಮಟ್ಟಿಗೆ ಎರಡೂ ಕೆಲಸ ಗಳನ್ನು ನಡಿಸುವುದೇ ಒಳಿತು. ಇರಲಿ, ಈಗಂತೂ ಅದು ವಾಜ್ಮಯದ ಕೆಲಸವನ್ನು ಏನೂ ನಡಿಸಿಲ್ಲವೆಂಬುದು ಸ್ಪಷ್ಟವೇ ಆದೆ.

ಮಿಕ್ಕ ಯಾವ ನಿತ್ಯಸಂಸ್ಥೆಗಳೂ ಅಷ್ಟೊಂದು ಕಾರ್ಯಮುಖವಾಗಿಲ್ಲ ವೆಂದು ವಿಷಾದದಿಂದ ಹೇಳಬೇಕಾಗು ತ್ತದೆ. ಅದಕ್ಕೆ ನಮಗೆ ತೋರುವ ಮುಖ್ಯ ಕಾರಣವೆಂದರೆ, ಸಮಗ್ರ ಕರ್ನಾಟಕದ ದೃಷ್ಟಿಯಿಂದ ವಿಚಾರಮಾಡುವವರ ಕೊರತೆ. ಅದಕ್ಕಾಗಿ ಎಷ್ಟು ವಿಷಯಗಳು ಅನಾಥವಾಗಿ ಉಳಿದಿವೆಯೆಂಬುದನ್ನು ನಾವು ಸಂಕ್ಷೇಪವಾಗಿ—ಮೊನ್ನೆ ಮೊನ್ನೆ ಪ್ರಸಿದ್ಧಿಸಿದ—"ನನ್ನ ಜೀವನಸ್ಮೃತಿ" ಯಲ್ಲಿ ಸೂಚಿಸಿರುವೆವು. ಅದನ್ನು ಪುನಃ ಇಲ್ಲಿ ಹೇಳುವವು:

"ಆದಕಾರಣ, ಕರ್ನಾಟಕಕ್ಕೆ ಬೇಕಾದ ನೀರಕಾಲುವೆ, ಬಂದರ, ಹಾಯ್ ಕೋರ್ಟು, ವಿಶ್ವವಿದ್ಯಾಲಯ, ರೇಲ್ವೆಗಳು, ಪೋಸ್ಟಿನ ಅನಾನುಕೂಲತೆಗಳು, ಮೋಟಾರಿನ ಅನಾನುಕೂಲತೆಗಳು, ರಸ್ತೆಗಳು, ಸೇತುವೆಗಳು, ರಾಜಧಾನಿ ಪಟ್ಟಣ, ಆಂಧ್ರ-ಮರಾಟಿಗರ ಆಕ್ರಮಣ, ಕನ್ನಡ ಶಾಲೆಗಳು, ವಿವಿಧ ಕಾಲೇಜುಗಳು, ಗಡಿನಾಡಿನ ಜಾಗೃತಿ, ಸಂಗೀತ-ನಾಟಕ-ಸಿನೆಮಾ ಮುಂತಾದುವುಗಳ ಪ್ರಶ್ನೆ, ವಾಚನಾಲಯಗಳು, ಒಳನುಡಿಗಳ ಪ್ರಶ್ನೆ, ಹಿಂದೀ ಸಂಸ್ಕೃತ ಮುಂತಾದುವುಗಳ ಪ್ರಶ್ನೆ, ಕನ್ನಡಿಗರ ಸಂಘಗಳು (ಕನ್ನಡ-ಸಂಘಗಳು ಅಲ್ಲ), ಪಟ್ಟಣ-ಹಳ್ಳಿಗಳ ರಜನೆ ಇವೇ ಮುಂತಾದ ಅಖಿಲ ಕರ್ನಾಟಕದ ದೃಷ್ಟಿಯಿಂದ ಬಿಡಿಸತಕ್ಕ ನೂರಾರು ಪ್ರಶ್ನೆಗಳು ಕೇಳುವವರು ದಿಕ್ಕಿಲ್ಲದೆ ಕೊಳೆಯುತ್ತ ಬಿದ್ದಿವೆ."

ಇದರಿಂದ ಕರ್ನಾಟಕತ್ವದ ಜಳವಳಿಯು ಈಗ ಏನೂ ನಡೆದಿರುವುದಿಲ್ಲವೆಂಬುದು ಪುನರುಕ್ತಿಯಾಗಲಾರದೊ? ಕರ್ನಾಟಕತ್ವದ ಸಾಮಾನ್ಯ ಅಭಿಮಾನದ ಜಾಗ್ರತಿ ಎಲ್ಲಿಯ ವರೆಗೆ ನಡೆದಿಲ್ಲವೋ ಅಲ್ಲಿಯ ವರೆಗೆ ಮಿಕ್ಕ ಜಳವಳಿಗಳೆಲ್ಲವೂ ಕುಂಟಜಳವಳಿಗಳು. ಕರ್ನಾಟಕತ್ವದ ರಸವು ಸರ್ವತ್ರ ಸದಾ ಆಡುತ್ತಿರುವಂತೆ ಮಾಡುವುದೇ ನಮ್ಮ ಮುಂದಿನ ಪ್ರಗತಿಯ ನಿಜವಾದ ಮಾರ್ಗ. ಹಾಗೆಯೇ ಪ್ರತಿಯೊಂದು ವಿಷಯದಲ್ಲಿ, ಆ ವಿಷಯವನ್ನೇ ತನ್ನ ಜೀವಿತದ ಧ್ಯೇಯವನ್ನಾಗಿ ಇಟ್ಟು-



ಎಲ್ಲರೂ ಯಾಕೆ ಬಳಲುವದಿಲ್ಲ?

ಎಲ್ಲರ ಪ್ರಕೃತಿಯು ಒಂದೇ ಸವನೆ ಇರದ್ದರಿಂದ. ಆದರೂ ಬಿಸಿಲಿನ ತಾಪ, ಅಂಗೈ ಅಂಗಾಲಿನ ಉರಿವು, ಉರಿಯುವ ಉಚ್ಚಿ, ಹುಳಿಡರಿಕೆ, ಮೇಲಿಂದ ಮೇಲೆ ನೀರಡಿಕೆ, ನಿರುತ್ಸಾಹ, ದಣಿವು ಮುಂತಾದ ತೊಂದರೆಗಳು ಮೂಡಿದ ಕೂಡಲೇ ನೀವು ಸಾಕಷ್ಟು ಸಿದ್ದೆ ಮಾಡುವದಿಲ್ಲ, ನೀವು ಬಹಳ ಶ್ರಮಪಡುವಿರಿ, ನಿಮ್ಮ ಆಹಾರವು ನಿಯಮಿತವಿಲ್ಲ-ಈ ಕಾರಣಗಳಿಂದಲೂ ಹೊಟ್ಟೆಯಲ್ಲಿ ಉಷ್ಣ ಹವೆಯು ಹೋಗುವದರಿಂದಲೂ ನಿಮ್ಮ ಪಚನೇಂದ್ರಿಯಗಳು ದಣಿದು ಮಂದವಾಗಿವೆಯೆಂದು ತಿಳಿಯಿರಿ. ಅವಕ್ಕೆ ಮೊದಲಿನಂತೆಯೇ ಕಸುವು ಕೊಡಲಿಕ್ಕೆ **ಪರ್ಲ ಕಾಡ್ಲೆ**ಯನ್ನು ತೆಗೆದು ಕೊಳ್ಳಹತ್ತಿರಿ. ಮೈಯಲ್ಲಿಯ ಎಲ್ಲ ದಣಿವೂ ನಿರುತ್ಸಾಹವೂ ಕೂಡಲೇ ಬಿಟ್ಟುಹೋಗುವವು. ಶುದ್ಧ ಕಳೆಎದ್ದು ಮೈ ಪುರಕ್ತ ಹರಿಯಹತ್ತುವದು. ಹೊಟ್ಟೆ ಹರಿಯುವಂತೆ ಹಸಿವೆ ಹತ್ತಿ ಉಂಡದ್ದೆಲ್ಲ ಕರಗಿ ಹೋಗುವದು. ಮೈಯಲ್ಲೆಲ್ಲ ಆನಂದ ಉತ್ಸಾಹ ತುಂಬಿ ಬಿಸಿಲು ಅಂದ ಕೂಡಲೇ ನಗೆ ಬರುವದು.



ಯಿಂದ ಬಿಸಿಲಿನ ಬಳಲಿಕೆ ಆಗದು

ಕೊಂಡ ಹಲವು ಸ್ವಾರ್ಥತ್ಯಾಗಗಳಿಗೆರಬೇಕಾಗುತ್ತದೆ. ಹಾಗೆ, ನಮ್ಮ ಸಂಸ್ಥೆಗಳಿಗೆ ಅಜೀವ ಕಾರ್ಯಕರ್ತರು ಎಷ್ಟು ಜನರಿದ್ದಾರೆ. ಹಿಂದಕ್ಕೆ ಜನರೂ ಇದ್ದಿಲ್ಲ, ಹಣವೂ ಇದ್ದಿಲ್ಲ. ಈಗ ಜನರು ದೊರೆಯುವ ಸಂಭವವಿದೆ, ಹಣ ಕೂಡಿಸುವವರಿಲ್ಲ. ಹಿಂದಕ್ಕೆ ನಾನು ಒಬ್ಬ ತರುಣನಿಗೆ 'ದೇಶಸೇವೆಗೆ ಆಯುಷ್ಯವನ್ನು ಕೊಡು' ಎಂದು ಹೇಳಿದಾಗ, ಆತನು ಕೊಟ್ಟ ಉತ್ತರವು ಮಾರ್ಮಿಕವಾಗಿದೆ. "ವೆಂಕಟರಾಯರೇ, ನಿಮ್ಮ ಸ್ಥಿತಿಯನ್ನೆ ಪ್ರತ್ಯಕ್ಷನೋಡುತ್ತಿದ್ದೇನೆ. ಕರ್ನಾಟಕದಲ್ಲಿ ಮುಂದಿಯ ಮಕ್ಕಳನ್ನು ಬಾವಿಯಲ್ಲಿ ನುಗಿಸಿ ಆಳ ನೋಡುವವರೇ ಎಲ್ಲರೂ" ಎಂದು ಆತನು ಅಂದ. ಇದರಲ್ಲಿ ಸಂಪೂರ್ಣ ಸತ್ಯವಿರದಿದ್ದರೂ, ಮುಖಂಡರು ವಿಚಾರಮಾಡತಕ್ಕ ಸಂಗತಿಯಾಗಿದೆ. ಏಕೆಂದರೆ, ಇದರಿಂದ, ತರುಣರು ಮುಂದೆ ಬರಲಿಕ್ಕೆ ಏಕೆ ಹಿಂಜರಿಯುತ್ತಾರೆಂಬುದು ಗೊತ್ತಾಗುತ್ತದೆ. ಪರಿಸ್ಥಿತಿ ಮಾರಿದವರ ಸಂಬಂಧವಾಗಿ ಪ್ರಶ್ನೆಯೇ ಇಲ್ಲ. ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿಕೊಡುವುದೂ ನಮ್ಮ ಕರ್ತವ್ಯವಲ್ಲವೆ? ದೇಶದ ಭವಿತವ್ಯತೆಯು ಮುಖ್ಯವಾಗಿ ಹೀಗೆ ಇಡೀ ಆಯುಷ್ಯವನ್ನು ದೇಶಸೇವೆಗೆ ಹಾಕುವವರ ಸಂಖ್ಯೆಯ ಮೇಲೆ ಇದೆ. ಜನತೆಯ ಬೆಂಬಲವಿಲ್ಲದ ಕಾರಣ, ಯೋಗ್ಯತೆ ಮತ್ತು ಇಚ್ಛೆ ಇದ್ದ ಎಷ್ಟು ಕರ್ನಾಟಕಾಭಿಮಾನಿಗಳು ದೇಶಸೇವೆಯ ಕ್ಷೇತ್ರಬಿಟ್ಟು ಸರಿದು ಹೋಗುವುದಿಲ್ಲ! ಹಾಗೆ ಆಯುಷ್ಯದನ್ನು ಅರ್ಪಿಸಲು ಸಿದ್ಧರಾಗುವಂತೆ ಪ್ರೇರಿಸುವುದು ಮತ್ತು ಅವರ ಹೊಟ್ಟೆಯ ಪ್ರಶ್ನೆಯನ್ನು ಅವರಿಗೆ ಬಿಡಿಸಲಿಕ್ಕೆ ಹಚ್ಚಬೆ, ಅದನ್ನು ತಾವು ಬಿಡಿಸುವುದು ನಮ್ಮ ಮುಖಂಡರ ಆದ್ಯಕರ್ತವ್ಯವೆಂದು ನನಗೆ ತೋರುತ್ತದೆ.

ಕನ್ನಡಿಗರು ಮೇಲ್ಕಾಣಿಸಿದ ದೃಷ್ಟಿಯಿಂದ ವಿಚಾರ ಮಾಡಿ, ಮುಂದಿನ ಮಾರ್ಗ ನಿಶ್ಚಯಿಸಬೇಕೆಂದು ನಮ್ಮ ಪ್ರಾರ್ಥನೆ.

ಸಮರ-ಶಾಂತಿ

★

'ಇಂದುತನಯ' ಸೇಡಬಾಳ

ಬೀಸುತಿದೆ ಬೀಸುತಿದೆ ಬಿರುಗಾಳಿ!
ಸೀಳುತಿದೆ ಕಿವಿದೆರೆಯ ರಣಗಾಳಿ!

೧

ಕ್ರೂರ ಹಿಂಸೆಯಂ ಕಂಡು ಕಡುಮುಳಿದ
ಭೂದೇವಿ ಕಾರುವಾ ಕೆಂಗಿಡಿಯೊ!—
ವಿಲಯ ಭೈರವನು ಎದ್ದು ತಿರುಗುತಾ
ರುಧಿರಾಂಬುಧಿಯೊಳೆಬ್ಬಿಸಿದ ತೆರೆಯೊ!—
ಎಂಬವೊಲು ಏಳುತಿದೆ ಕೆಂಧೂಳಿ!
ಬೀಸುತಿದೆ ಬೀಸುತಿದೆ ಬಿರುಗಾಳಿ!

೨

ನಗರ-ಕೋಟೆ-ಜನಪದಗಳನುರುಳಿಸಿ,
ಕೆರೆ-ತೊರೆ-ಸಾಗರಗಳನೇ ಕದಡಿಸಿ,
ಜನಮನದಲಿ ಬೇಗುದಿಯನು ಬೆಳಸಿ,
ಜನಪತಿಗಳನುರೆ ಜರ್ಜರಗೊಳಿಸಿದೆ
ರಣಗಾಳಿ! ಲಯಕಾಳಿ! ಬಿರುಗಾಳಿ!
ಬೀಸುತಿದೆ ಬೀಸುತಿದೆ ಬಿರುಗಾಳಿ!

೩

ಏಳು-ಬೀಳು-ಏರಿಳಿತವನಳಿದು
ಆಳು-ಅರಸರೆಂಬಾ ಬಗೆಯುಳಿದು
ಕೂಳು ಕಸಿದುಂಬುವುನುರೆ ಮರೆದು
ಬಾಳಲು ಬಲುಹಿಗಳಾಶಿಸುವುದೆ
ತಂಗಾಳಿ! ಹೊಂದೂಳಿ! ಶಾಂತಿಕಾಳಿ!
ಬೀಸಲಿ, ಬೀಸಲಿ, ಆ ತಂಗಾಳಿ!

ಗಸ್ಪಾರಿ ನಜರೇತರ ಪತ್ತೇದಾರಿ

(ಸಣ್ಣಕತೆಯೊಂದು)

ಡಿ. ರಂಗರಾವ ತಲಚೇರಿಕರ ಬಿ.ಎ., ಎಲ್‌ಎಲ್.ಬಿ. ಮಂಗಳೂರು

★

ನಜರೇತರಂತೆ ಸಾರ್ವಜನಿಕರ ಬಗೆಗೆ ನಿಜವಾದ ಹಿತದೃಷ್ಟಿ ಎಲ್ಲ ಪೋಲೀಸರಲ್ಲಿದ್ದರೆ ನಾಡಿನಲ್ಲಿ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಕಡಿಮೆಯಾಗಬಹುದಾಗಿತ್ತಲ್ಲವೆ? ಆದರೆ ಒಂದು ಅಪರಾಧದ ಸಲುವಾಗಿ ಇನ್ನೊಂದು ಅಪರಾಧ ಮಾಡಿದವನನ್ನು ತಂದು ಶಿಕ್ಷೆಗೆ ಗುರಿಪಡಿಸುವ ನಜರೇತರ ಪದ್ಧತಿ ನಾಯಸಮ್ಮತವೆನಿಸೀತೆ?

★

ಮಂಗಳೂರು ಜಿಲ್ಲೆಯ ಪೋಲೀಸ್ ಖಾತೆಯಲ್ಲಿ ಕಂಡು ಬರುವಷ್ಟು ಕಿರಿಸ್ತಾನರು ಕರ್ನಾಟಕದ ಬೇರೆ ಯಾವ ಜಿಲ್ಲೆಯಲ್ಲಿಯೂ ಇರಲಾರರು. ಬೇರೆ ಜಿಲ್ಲೆಗಳಲ್ಲಿ ಕೆಳತರಗತಿಗಳಲ್ಲಿ ಒಬ್ಬಿಬ್ಬರು ಇರಬಹುದು; ಆದರೆ ಮಂಗಳೂರು ಜಿಲ್ಲೆಯಲ್ಲಿ ಜವಾನ ಹಾಗೂ ಹೆಡ್‌ಕೊನ್ಸ್‌ಟೆಬಲರಲ್ಲಿ ನೂರರಲ್ಲಿ ಮೂವತ್ತಾ ದರೂ ಕಿರಿಸ್ತಾನರು, ಈ ಪರಿಸ್ಥಿತಿಯು ಕುಂಪಣಿ ಸರಕಾರದ ಕಾಲದಿಂದಲೂ ಇದೆ. ಇಂಗ್ಲೀಷ್ ಪದ್ಧತಿಯ ಪ್ರಭಾವದಿಂದ ಈಗೀಗ ಕಿರಿಸ್ತಾನರಲ್ಲಿ ಬಲವಾಗಿರುವ ಯುರೋಪಿಯನರ ಅಂಧಾ ನುಕರಣವು ಕಡಿಮೆ ಇದ್ದ ಹಿಂದಿನ ಶಕಮಾನದಲ್ಲಿ, ಕಾಯಿದೆ-ಕಾನೂನುಗಳ ಜ್ಞಾನವು ಸ್ವಲ್ಪವೇ ಆಗಿದ್ದರೂ, ಜನರೊಡನೆ ಸಮರಸವಾಗಿ ಬೆರೆತು, ಹಗಲಿರುಳು ದುಡಿದು ತಕ್ಷೀರುಗಳನ್ನು ಪತ್ತೆ ಹಚ್ಚಿದ ಕಿರಿಸ್ತಾನ್ ಹೆಡ್‌ಕೊನ್ಸ್‌ಟೆಬಲರು ನಮ್ಮಲ್ಲಿ ಎಷ್ಟೋ ಆಗಿಹೋದರು.

ಅಂಥವರಲ್ಲಿ ಗಸ್ಪಾರಿ ನಜರೇತರೆಂಬವರು ಒಬ್ಬರು. ಅವರಿಗೆ 'Right Sir,' 'Yes Sir,' ಅನ್ನುವಷ್ಟು ಮಾತ್ರ ಇಂಗ್ಲೀಷ್ ಬರುತ್ತಿತ್ತು. ಕನ್ನಡ ಒಂದೆರಡು ಪುಸ್ತಕ ಕಲಿತು ಪೋಲೀಸ್ ಖಾತೆಯಲ್ಲಿ ಜವಾನರಾಗಿ ಸೇರಿ, ಅನಂತರ ಹೆಡ್‌ಕೊನ್ಸ್‌ಟೇಬಲರಾಗಿ ಪೋಲೀಸ್ ಸ್ಟೇಷನಿನ ಅಧಿಕಾರಿಯ ಸ್ಥಾನ ಪಡೆದಿದ್ದರು. ಕೆಲಸದಲ್ಲಿದ್ದಾಗ ಅವರಿಗೆ ಪರಿಚಯವಿಲ್ಲದ ಜನರೇ ಇಲ್ಲ. ದಸ-ಕಾಯುವ ಹೊಲಿಯರ ಹುಡುಗನಿಂದ ಮೊದಲುಗೊಂಡು, ಧನಿಕ ಜಮೀನುದಾರ ವರೆಗೆ ಎಲ್ಲರೊಡನೆಯೂ ಆತ್ಮೀಯತೆಯಿಂದ ನಡಕೊಳ್ಳುತ್ತಿದ್ದರು. ಅವರಿಗೆ ಗೊತ್ತಾಗದ ವಿಷಯವಿದ್ದಿಲ್ಲ. ಊರಲ್ಲಿ ನಡೆದ ಯಾವ ಗಟ್ಟಿನ ಸಂಗತಿಯೂ, ಅವರು ಕೈಹಾಕ ದೊಡನೆ ರಟ್ಟಾಗುತ್ತಿತ್ತು.

ಗಸ್ಪಾರಿ ನಜರೇತರ ಅರಡಿ ಉದ್ದದ ದೇಹ, ಹಿಡಿದಾದ ಗಲ್ಲ-ಮಿಸೆ, ಗುಡುಗಿನ ಧ್ವನಿ, ಇವು ಯಾರ ಹೃದಯವನ್ನೂ ಕಂಪಿಸು ತ್ತಿದ್ದುವು. ಅವರೆದುರಿಗೆ ತಂದು ನಿಲ್ಲಿಸಿದ ಕಳ್ಳರು ಬರಿ ಅಂಜಿಕೆಯಿಂದಲೇ ತಪ್ಪನ್ನು ಒಪ್ಪುತ್ತಿದ್ದರು. ಅವರ ಠಾಣೆಯ ಸರಹದ್ದಿನೊಳಗೆ ನಡೆದ ಯಾವ ತಕ್ಷೀರನ್ನೂ ಅವರು ಪತ್ತೆ ಮಾಡದೆ ಬಿಟ್ಟದ್ದಿಲ್ಲ. ತುಳುನಾಡಿನ ಹಳ್ಳಿಗಳಲ್ಲಿ ಈಗಲೂ ಗಸ್ಪಾರಿ ನಜರೇತರ ಚಾತುರ್ಯದ ಕಥೆಗಳನ್ನು ಹಳೆಯ ಮುದುಕ ರಿಂದ ಕೇಳಬಹುದು. ತಕ್ಷೀರು ನಡೆದ ಸುದ್ದಿ ಸಿಕ್ಕಿತೆಂದರೆ ನಜರೇತರು ಊಟದ ಮಣೆಯಿಂದ ಕೂಡಾ ಎದ್ದು, ಸಂಭವಿಸಿದ ಸ್ಥಳಕ್ಕೆ ಓಡುತ್ತಿದ್ದರು. ಅಲ್ಲಿ ಹಳ್ಳಿಯೆಲ್ಲಾ ಸುತ್ತಾಡಿ, ಎಲ್ಲ ರೊಡನೆಯೂ ಬೆರೆತು ಸಹಾನುಭೂತಿಯ ಮಾತನ್ನಾಡಿ, ಎಲ್ಲವನ್ನೂ ತಿಳಿದುಕೊಂಡು ಅನಂತರ ತನ್ನ ಕಾರ್ಯವನ್ನು ಸಾಧಿಸುತ್ತಿದ್ದರು ಅಪರಾಧಿಯು ಯಾರೆಂದು ಗೊತ್ತಾದರೂ ರುಜುವಾತು ಇಲ್ಲ ವೆಂದು ಅವನನ್ನು ಬಿಟ್ಟುಬಿಡುವ ನ್ಯಾಯತತ್ತ್ವದ ಕಡೆಗೆ ಅವರಿಗೆ ಸಂಪೂರ್ಣ ತಿರಸ್ಕಾರವಿತ್ತು.

ಗಸ್ಪಾರಿ ನಜರೇತರು ತೀರಿಹೋಗಿ ಒಂದು ವರ್ಷವೂ ಆಗಿಲ್ಲ. ಸಾಯುವಾಗ ಅವರ ವಯಸ್ಸು ತೊಂಬತ್ತೈದಕ್ಕೆ ಮಿಗಿರಿತ್ತು. ಸಾಯುವ ಒಂದು ವಾರದ ಮೊದಲಿನ ವರೆಗೆ ಅವರು ಸರಿಯಾಗಿ ನಡೆಯುತ್ತಿದ್ದರು. ಮಂಗಳೂರು ಕಡೆಯ ಕಿರಿಸ್ತಾನರ ಜಪ್ಪಟಿ ರುಮಾಲು ಮತ್ತು ಉದ್ದದ ನಿಲುವಂಗಿಯನ್ನು ಧರಿಸಿ, ಕವ್ರೆಯ ಸೇಂದಿ ಅಂಗಡಿಯಲ್ಲಿ ನಿಯಮಿತ ಒಂದು ಬಾಟಲಿ ಸೇಂದಿ ಕುಡಿದು, ಚವ್ರೆಗುಡ್ಡದ ಮೇಲೆ ಅಡ್ಡಾಡುವ ಕ್ರಮವಿತ್ತು. ಕವ್ರೆಗುಡ್ಡ ದಲ್ಲಿ ನನಗೆ ಎಷ್ಟೋ ಸಾರಿ ಅವರು ಸಿಕ್ಕಿದುದುಂಟು. ತನ್ನ ಕಾಲದ ಪೋಲೀಸ್ ಖಾತೆಯ ಕ್ರಮ, ತನ್ನ ಅನುಭವದ ಪ್ರಸಿದ್ಧ ತಕ್ಷೀರುಗಳು, ಇವುಗಳ ವಿಷಯ ಒಮ್ಮೆ ನನ್ನೊಡನೆ ದೀರ್ಘ ಕಾಲ ಮಾತಾಡಿದರು. ಈಗಿನವರನ್ನು ಕುರಿತು ಅವರಿಗೆ ತೀರ ತಿರಸ್ಕಾರದ ಮತವಿತ್ತು. ಒಮ್ಮೆ ನಜರೇತರು ಹೇಳಿದರು:

" ಈಗ ಪರಿಸ್ಥಿತಿಯೇ ಕೆಟ್ಟು ಹೋಗಿದೆ, ರಾಯರೇ. ಈಗಿನ ಪೋಲೀಸ್ ಸಬ್-ಇನ್ಸ್‌ಪೆಕ್ಟರರೆಲ್ಲಾ ಬಿ. ಎ. ಪ್ಯಾಸುಮಾಡಿ ದವರು. ಅವರಲ್ಲಿ ಸಾಹಸವಿಲ್ಲ, ಕಷ್ಟ ಸಹಿಷ್ಣುತೆಯಿಲ್ಲ. ಹಳ್ಳಿಯವ

ರೊಡನೆ ಆತ್ಮೀಯತೆಯಿಂದ ವರ್ತಿಸುವುದು ಅವರಿಂದ ಆಗದ ಕೆಲಸ. ಅಂದಬಳಿಕ ತಕ್ಷೀರು ಪತ್ತೆಯಾಗುವುದು ಹೇಗೆ? ಅಂದವಾದ ಶೈಲಿಯಲ್ಲಿ ಡೈರಿ ಬರೆದರೆ ತಕ್ಷೀರು ಪತ್ತೆಮಾಡಿದಂತಾಯಿತೇ? ಈ ಬಿ. ಎ. ಸಬ್-ಇನ್ಸ್‌ಪೆಕ್ಟರು ಬಂದ ವರ್ಷವೇ ನಾನು ಕೆಲಸದಿಂದ ನಿವೃತ್ತನಾದೆ. ನಮ್ಮ ಜಾತಿಯ ಗೌರವದ ದಿನಗಳು ಅಲ್ಲಿಗೆ ಅಂತ್ಯವಾದುವೆಂದು ನನಗೆ ಆಗಲೇ ಗೊತ್ತಾಗಿತ್ತು. ನೋಡಿರಿ, ಗೂಢವಾದ ತಕ್ಷೀರು ಈಗೀಗ ಪತ್ತೆಯಾಗುತ್ತದೆಯೇ? ಬೆಳಿಗಿನ ಕಾಫಿ ಮುಗಿದ ನಂತರವೇ ಹಳ್ಳಿಗೆ ಹೊರಟು, ಸಂಜೆಯೊಳಗೆ ಹಿಂದಿರುಗುವ ಈಗಿನ ಸಬ್-ಇನ್ಸ್‌ಪೆಕ್ಟರು ತಕ್ಷೀರನ್ನು ಪತ್ತೆಮಾಡುವುದಾದರೂ ಹೇಗೆ? ಇವರಿಗೆ ರುಜುವಾತು ಕೂತಲ್ಲಿ ಸಿಕ್ಕಬೇಕು. ಕೂತಲ್ಲಿ ತಾನಾಗಿ ರುಜುವಾತು ಕೈಗೆ ಸಿಕ್ಕಿದರೆ ಮಾತ್ರ ಖಟ್ಲೆ ಹೂಡುವುದಾದರೆ, ಪೋಲೀಸ್ ಖಾತೆಯಾಕೆ ಸ್ವಾಮಿ! ಆ ಕೆಲಸ ಬರೇ ಒಬ್ಬ ಗುಮಾಸ್ತನಿಂದ ಸಾಧಿಸೀತಲ್ಲಾ!

ಪೋಲೀಸ್ ಕೆಲಸವೆಂದರೆ ಅಪರಾಧಿ ಯಾರಾಗಿರಬಹುದೆಂದು ಗೊತ್ತುಮಾಡಬೇಕು. ಆ ಮೇಲೆ ಬೇಕಾದ ರುಜುವಾತನ್ನು ಹುಡುಕಬೇಕು. ಸಿಕ್ಕದಿದ್ದರೆ, ಅದನ್ನು ರಚಿಸಬೇಕು!..."

"ಅದು ಸರಿ, ನಜರೇತರೇ, ಆದರೆ ರಚಿಸಿದ ರುಜುವಾತು ಕೋರ್ಟುಗಳಲ್ಲಿ ನಿಂತೀತೇ? ಅಡ್ಡ ಸವಾಲಿನ ರಭಸಕ್ಕೆ ಕುಸಿದು ಬಿದ್ದರೆ ನಿಮ್ಮ ಗತಿ ಏನು?" ಎಂದು ನಾನು ಕೇಳಿದೆ.

"ನಿಲ್ಲದೆ ಏನು ರಾಯರೇ? ನ್ಯಾಯ ರಕ್ಷಣೆಗಾಗಿ ಮಾಡುವುದೆಂದು ಮನೋಧೈರ್ಯವಿದ್ದು, ಮನುಷ್ಯಸ್ವಭಾವದ ಪೂರ್ಣ ಅರಿವಿನಿಂದ ನಿರ್ಮಿತವಾದ ರುಜುವಾತನ್ನು ಯಾವ ವಕೀಲರಿಂದಲೂ ಮುರಿಯಲು ಸಾಧ್ಯವಿಲ್ಲ. ನಮ್ಮ ಕಾಲದಲ್ಲಿ ವಕೀಲರಿರಲಿಲ್ಲವೇ? ಈಗಿನವರಷ್ಟೇ ಬುದ್ಧಿಶಾಲಿಗಳಿದ್ದರು. ಆದರೆ ಸತ್ಯಕ್ಕಾಗಿ ನಾನು ಮಾಡಿದ ಸುಳ್ಳುಖಟ್ಲೆಯು ಒಂದಾದರೂ ಅಪೀಲು ಕೋರ್ಟು ತನಕವೂ ನಿಲ್ಲದೆ ಇದ್ದದ್ದಿಲ್ಲ. ಮುಖ್ಯವಾಗಿ ಇಂಡೇಜ ನ್ಯಾಯದ್ದಿರಬೇಕು, ಹಾಗಿದ್ದರೆ ಸೋಲಿಲ್ಲ." ನಜರೇತರು ಹೇಳಿದರು.

"ಆದರೆ, ನಜರೇತರೇ, ನೀವು ಅಪರಾಧಿಗಳೆಂದು ಊಹಿಸಿದವರಲ್ಲಿ ಕೆಲವರಾದರೂ ನಿರಪರಾಧಿಗಳಿರಲಿಲ್ಲವೆಂದು ನೀವು ಧೈರ್ಯದಿಂದ ಹೇಳಬಹುದೇ? ನಿಮಗೆ ಆಧುನಿಕ ಬ್ರಿಟಿಷ್ ನ್ಯಾಯತತ್ತ್ವ ಗೊತ್ತಿದೆಯಲ್ಲಾ! ನೂರು ಅಪರಾಧಿಗಳು ಬಿಡಲ್ಪಟ್ಟರೂ ಚಿಂತೆಯಿಲ್ಲ! ನಿರಪರಾಧಿಗೊಬ್ಬನಿಗಾದರೂ ಶಿಕ್ಷೆಯಾಗಬಾರದು; ಈ ತತ್ತ್ವಕ್ಕಾಗಿಯೇ ಬ್ರಿಟಿಷರು ನ್ಯಾಯಪದ್ಧತಿಗೆ ಎಲ್ಲರೂ ತಲೆದೂಗುತ್ತಾರೆ!" ನಾನು ಹೇಳಿದೆ.

"ಗೊತ್ತಿದೆ ರಾಯರೇ, ಆ ತತ್ತ್ವವೆಲ್ಲಾ! ಇಂಗ್ಲೆಂಡಿನ ಪರಿಸ್ಥಿತಿ ನನಗೆ ಗೊತ್ತಿಲ್ಲ. ಆದರೆ, ನಮ್ಮ ಸಮಾಜದಲ್ಲಿ ಈ ತತ್ತ್ವದ ಆಚರಣೆಯಿಂದಲೇ ತಕ್ಷೀರುಗಳು ಹೆಚ್ಚುತ್ತಿವೆ. ತಕ್ಷೀರು ಮಾಡಿಯೂ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಸುಲಭಸಾಧ್ಯವಾದರೆ, ಅಪರಾಧ ಗೈಯಲು ಜನರು ಅಂಜುವರೇ? ಇದರಿಂದಾಗಿಯೇ ಎಷ್ಟೋ ಜನರು ಅಪರಾಧಿಗಳ ಅತ್ಯಾಚಾರಗಳಿಗೆ ಬಲಿ ಬೀಳಬೇಕಾಗುತ್ತದೆ. ಈ ನ್ಯಾಯ ತತ್ತ್ವವು ಸಮಾಜದ ನೆಮ್ಮದಿಗೆ ಎಂದೂ ಅನುಕೂಲವಲ್ಲ. ಒಂದೆರಡು ನಿರಪರಾಧಿಗಳು ಶಿಕ್ಷೆ ಸಲ್ಪಟ್ಟರೂ ಚಿಂತೆಯಿಲ್ಲ, ಅಪರಾಧಿಗಳು ಯಾರೂ ಶಿಕ್ಷೆಯ ಬಾಯಿಯಿಂದ ತಪ್ಪಬಾರದು. ಹಾಗಿದ್ದರೇನೇ ಸಮಾಜದಲ್ಲಿ ಶಾಂತಿಯು ನೆಲೆಗೊಳ್ಳುವುದು. ನಿರಪರಾಧಿಗಳಿಗೆ ಶಿಕ್ಷೆಯಾಗುವುದು ನಿಮಗೆ ಭಯಂಕರವೆಂದು ತೋರಬಹುದು. ಆದರೆ, ಅದರಿಂದ ಶಿಕ್ಷೆಯಾಗುವ ನಿರಪರಾಧಿಗಳಿಗಿಂತ ಎಷ್ಟೋ ಅಧಿಕ ಸಂಖ್ಯೆಯ ಜನರು ಅತ್ಯಾಚಾರಗಳಿಗೆ ಬಲಿ ಬೀಳುವುದನ್ನು ನಾವು ಉಳಿಸಬಹುದು. ಸಮಾಜ ಹಿತದೃಷ್ಟಿಯಿಂದ ಇದೇ ಸರಿಯಾದುದಲ್ಲವೇ? ವ್ಯಕ್ತಿಹಿತಕ್ಕಿಂತ ಸಮಾಜಹಿತವು ಮೇಲಲ್ಲವೇ?" ಇಷ್ಟು ಹೇಳಿ, ನಜರೇತರು ರಭಸದಿಂದ ತಾವೇ ಮಾತನ್ನು ಮುಂದುವರಿಸಿದರು: "ನಾನು ಕೆಲಸದಲ್ಲಿದ್ದಾಗ ಆಚರಿಸಿದ ತತ್ತ್ವವೆಂದರೆ, ತಕ್ಷೀರು ನಡೆದರೆ ಅದಕ್ಕಾಗಿ ಒಬ್ಬನಿಗಾದರೂ ಶಿಕ್ಷೆಯಾಗಲೇಬೇಕು. ತಕ್ಷೀರು ಮಾಡಿದವನು ಪತ್ತೆಯಾದರೆ ಸರಿ, ಇಲ್ಲವಾದರೆ ಊರಲ್ಲಿ ಅನ್ಯಾಯಗಾರರೆಂದು ಹೆಸರನ್ನು ಪಡೆದವರಲ್ಲಿ ಒಬ್ಬನ ಮೇಲೆ ಖಟ್ಲೆ ಹೂಡುವುದು. ನಾನು ಕೆಲಸ ಮಾಡಿದ ಊರುಗಳಲ್ಲಿ ತಕ್ಷೀರುಗಳು ಒಮ್ಮೆಯೇ ಕಡಿಮೆಯಾಗುತ್ತಿದ್ದುವು."

ಕೋರ್ಟು-ಕಚೇರಿಗಳ ಕೃತಕವಾತಾವರಣದಲ್ಲಿ ಸಮಾಜ-ಪರಿಸ್ಥಿತಿಗೆ ಅನುಕೂಲವಲ್ಲದ ಬ್ರಿಟಿಷ್ ನ್ಯಾಯಪದ್ಧತಿಯು ಆಚರಣೆಯಿಂದ ಬಿಡುಗಡೆ ಹೊಂದುವ ಅಪರಾಧಿಗಳನ್ನೂ, ಧನ-ಜನ-ಬಲದಿಂದ ಊರಲ್ಲಿ ನಡೆಯುವ ಅತ್ಯಾಚಾರಗಳು ದಕ್ಕಿ ಹೋಗುವುದನ್ನೂ ನೋಡುವಾಗ, ಗಸ್ಪಾರಿ ನಜರೇತರು ಪ್ರತಿಪಾದಿಸಿದ ತತ್ತ್ವಗಳಲ್ಲಿ ಹುರುಳಿಲ್ಲವೆಂದು ಹೇಳಲು ಸಾಧ್ಯವಿಲ್ಲ.

* * *

ಪುತ್ತೊಮ್ಮೆ ಕದ್ರೆಗುಡ್ಡೆಯಲ್ಲಿ ಭೆಟ್ಟಿಯಾದಾಗ, ನಜರೇತರು ತನ್ನ ಪತ್ತೇದಾರಿಯ ಮಾದರಿಯಾದ ಒಂದು ವಿದ್ಯಮಾನ (incident) ವನ್ನು ಹೇಳಿದರು:

"ಈ ಸಂಗತಿ ನಡೆದು ಮೂವತ್ತು ವರ್ಷಗಳ ಮೇಲೆ ಆಯಿತು, ರಾಯರೇ. ನೀವು ಆಗ ಹುಟ್ಟಿರಲಿಕ್ಕಿಲ್ಲ. ಮಂಗಳೂರಲ್ಲಿ ಹಾಗೂ ನಮ್ಮ ಜಿಲ್ಲೆಯ ಇತರ ಊರುಗಳಲ್ಲಿ ಟಪಾಲ್ ಆಫೀಸುಗಳಲ್ಲೂ ಬ್ಯಾಂಕುಗಳಲ್ಲೂ ಕಳವು ವಿಪರೀತವಾದುವು. ಮನಿಯಾರ್ಡರ್ ಹಾಗೂ ಹಣ ಇನ್ಶೂರ್ ಮಾಡಿ ಕಳಿಸಲು ಬಂದಾಗ, ಅಥವಾ ಬ್ಯಾಂಕುಗಳಿಂದ ಹಣ ಪಡಕೊಳ್ಳಲು ಬಂದಾಗ, ಬಂದವರ ಲಕ್ಷ್ಯವನ್ನು ಫಕ್ಕನೆ ಬೇರೆ ಕಡೆಗೆ ತಿರುಗಿಸಿ, ಅಕ್ಷಣದಲ್ಲಿ ಹಣದ ಲಕೋಟೆಯನ್ನಾಗಲಿ ಚೀಲವನ್ನಾಗಲಿ ಕಳವು ಮಾಡಿಕೊಂಡು ಹೋಗುವ ಕ್ರಮವನ್ನು ಕೆಲವು ಹೊರನಾಡಿನ ಕಳ್ಳರು ಚಾಲಿಗೆ ತಂದಿದ್ದರು. ಅವರು ಯಾವಾಗಲೂ ಮೂರು ನಾಲ್ಕು ಜನರು ಒಟ್ಟಿಗೆ ಸೇರಿ ಕೆಲಸ ಮಾಡುತ್ತಿದ್ದುದರಿಂದ, ಪತ್ತೆಯಾಗುವುದೇ ಅಸಾಧ್ಯವಾಯಿತು. ಯಾಕೆಂದರೆ, ಹಣ ತೆಗೆದವನು ಹಣ ಹೋದದ್ದು ಗೊತ್ತಾಗುವ ಮೊದಲೇ ಅದನ್ನು ಬೇರೊಬ್ಬನ ಕೈಗೆ ಕೊಡುತ್ತಿದ್ದ.

ಹೀಗೆಯೆ ನಿಮಿಷಾರ್ಧದಲ್ಲಿ ಅದು ನಾಲ್ಕೈದು ಕೈ ದಾಟಿ ಹೋಗುತ್ತಿತ್ತು. ಕಳವಾದ ಕಾಲಕ್ಕೆ ಅಲ್ಲಿದ್ದವರನ್ನು ಸಂಶಯದ ಮೇಲೆ ಹಿಡಿದರೂ ಅವರ ಕೈಯಲ್ಲಿ ಹಣವೇನೂ ಸಿಕ್ಕದುದರಿಂದ, ಏನೂ ಉಪಯೋಗವಾಗುತ್ತಿರಲಿಲ್ಲ. ಒಬ್ಬಿಬ್ಬರು—ಅವರ ಕೂಡ ಹಣ ಸಿಕ್ಕಿದ್ದರಿಂದ—ಅನುಮಾನಕರವೆಂದು ಬಂಧಿಸಲ್ಪಟ್ಟರೂ, ಕಳವಾದ ಹಣವೆಂದು ರುಜುವಾತಿಲ್ಲದ್ದರಿಂದ ಅವರನ್ನು ಬಿಡಬೇಕಾಯಿತು. ಸಂಶಯದ ಫಲ ನಿಮ್ಮ ಕಾನೂನು ಪ್ರಕಾರ ಆರೋಪಿಗಲ್ಲವೇ?..

"..ನಾನು ಆಗ ಬಂಟವಾಳದಲ್ಲಿ ಹೆಡ್ ಕೊನ್ಸ್‌ಟೇಬಲನಾಗಿ ಇದ್ದೆನು. ಬಂಟವಾಳದ ಪ್ರಸಿದ್ಧ ಸಾಹುಕಾರ ರಾಮಕಾಮತರು ಪರವೂರಿಗೆ ಕಳಿಸಲಿರುವ ಏನೂರು ರೂಪಾಯಿಯ ನೋಟು ಗಳನ್ನು, ಒಬ್ಬ ನಂಬಿಗಸ್ತ ಆಳಿನೊಡನೆ ಇನ್ನೂರು ಮಾಡಲು ಟಪಾಲುಆಫೀಸಿಗೆ ಕಳಿಸಿದರು. ಆ ಆಳು ಅಂಚೆಯ ಚೀಟು ತಕ್ಕೊಂಡು, ಲಕ್ಕೋಟೆಗೆ ಹಚ್ಚಲು ಅಂಟುಮುಟ್ಟಿಸುವಾಗ ಒಬ್ಬನು ಬಂದು "ಅಗೊ ನೋಡು, ನಿನ್ನ ದೇನೋ ಅದು, ಒಂದು ಚೀಟಿ? ಬಿದ್ದದೆ" ಎಂದು ನೆಲದ ಮೇಲೆ ಬಿದ್ದಿದ್ದ ಒಂದು ಚೀಟಿಯನ್ನು ತೋರಿಸಿದನು. ಈ ಆಳು—ಚೀಟಿ ತನ್ನ ದಾಗಿರಬಹುದೆಂದು ಎಣಿಸಿ—ಅದನ್ನು ಹೆಕ್ಕುವಷ್ಟರಲ್ಲಿ, ಮೇಜಿನ ಮೇಲಿದ್ದ ಏನೂರು ರೂಪಾಯಿಯ ಲಕ್ಕೋಟೆಯನ್ನು ಯಾರೊ ತಕ್ಕೊಂಡು ಓಡಿದರು. ಆಳು ಬೊಬ್ಬೆ ಮಾಡಿದನು. ನೆಲದ ಮೇಲಿನ ಅಂಚೆ ಚೀಟಿ ತೋರಿಸಿದ ಮನುಷ್ಯನು ಅಲ್ಲೇ ಇದ್ದನು. ಹಾಗಾಗಿ ಕಳ್ಳನು ಅವನಲ್ಲವೆಂದಾಯಿತು. ಯಾರೆಂದು ಗೊತ್ತಾಗದೆ ಹಾಹಾಕಾರ ವೆದ್ದಿತು..

"..ಗಸ್ಪಾರಿ ನಜರೇತರು ಈ ತಕ್ಸೀರನ್ನು ಹೇಗೆ ಪತ್ತೆಮಾಡುತ್ತಾರೊ ನೋಡಬೇಕು—ಎಂದು ಜನರು ಹೇಳಲು ಸುರುಮಾಡಿದರು. ರಾಮಕಾಮತರು ಬಂದು ರುಪಾಯಿ ಹೋಯಿತೆಂದು ಗೋಳಿಟ್ಟರು. ಟಪ್ಪಾಲ್ ಆಫೀಸಿನಲ್ಲಿಯೂ ನೆರೆಕರೆಯಲ್ಲೂ ತನಖಿ ನಡೆಯಿಸಿದೆ; ಏನೊಂದು ಕುರುಹೂ ದೊರೆಯಲಿಲ್ಲ. ಹಣ ಹೋಯಿತೆಂದು ರಾಮಕಾಮತರ ಆಳು ಬೊಬ್ಬೆಮಾಡುವ ಸಮಯದಲ್ಲಿ, ಸ್ಥೂಲ ದೇಹಿಯಾದ ಬಿಳಿ ಮನುಷ್ಯನೊಬ್ಬನು ಲಕೋಟೆಯಂತೆ ತೋರುವ ಒಂದು ಕಾಗದವನ್ನು ಹಿಡಕೊಂಡು ರಸ್ತೆಯಲ್ಲಿ ಹೋಗುವುದನ್ನು ಒಬ್ಬ ಹುಡುಗಿಯು ನೋಡಿದ್ದಳಂತೆ. ಆ ಹುಡುಗಿಯನ್ನು ವಿಚಾರಿಸಲಾಗಿ, ಅದಕ್ಕಿಂತಲೂ ಹೆಚ್ಚಿನ ವಿವರ ವೇನೂ ಸಿಗಲಿಲ್ಲ. ಆ ದಿನದ ಡೈರಿಯಲ್ಲಿ ಹೀಗೆ ಬರೆದೆನು: 'ರುಕ್ಮಿಣಿಯೆಂಬ ಚಿಕ್ಕ ಹುಡುಗಿಯು, ತಾನು ಟಪ್ಪಾಲ್‌ಆಫೀಸಿಗೆ ಹೋಗುವಾಗ, ಗೇಟಿನ ಬಳಿ ದೊಡ್ಡ ಲಕ್ಕೋಟೆಯೊಂದನ್ನು ಹಿಡಕೊಂಡು ಒಬ್ಬನು ಹೋಗುತ್ತಿದ್ದುದನ್ನು ಕಂಡೆನೆಂದೂ ಅದರ ಅವಕ್ಷಣದಲ್ಲಿ ರೂಪಾಯಿ ಇದ್ದ ಲಕ್ಕೋಟೆಯು ಕಳವಾಯಿತೆಂದು ರಾಮಕಾಮತರ ಆಳಿನ ಬೊಬ್ಬೆ ಕೇಳಿದೆನೆಂದೂ ಹೇಳುತ್ತಾಳೆ. ಅವನನ್ನು ನೋಡಿದರೆ ಗುರುತಿಸಬಹುದೆಂದು ಹೇಳುತ್ತಾಳೆ.'.."

"ಅವಳು ಹೇಳಿದ ಚಹರೆ ಮುಖ್ಯವಲ್ಲವೇ? ಅದನ್ನು ಯಾಕೆ ಬರೆದುಕೊಳ್ಳಲಿಲ್ಲ?" ಎಂದು ನಾನು ಮಧ್ಯದಲ್ಲಿದೆ ಕೇಳಿದೆ.

"ನಿಮ್ಮದು ವಕೀಲಿ ಸವಾಲು!" ಎಂದರು ನಜರೇತರು. "ನೀವು ಹೀಗೆ ಕೇಳಿದ್ದು ಆಶ್ಚರ್ಯವಲ್ಲ. ನಮಗೆ ಆಗ ಹೊಸ ಮರ್ಜಿಯ ತರುಣ ಇನ್ಸ್‌ಪೆಕ್ಟರು ನೇಮಕವಾಗಿದ್ದರು. ಅವರು ಕೂಡ ಅವಳೊಡನೆ ನೋಡಿದ ಮನುಷ್ಯನ ಜರ್ಸಿ, ಕೇಳಿ ಬರಕೊಳ್ಳಿದುದಕ್ಕಾಗಿ ನನ್ನನ್ನು ಬಲವಾಗಿ ಟೀಕಿಸಿ, 'ಈ ಎಲೆ-ಅಡಿಕೆ ಜಗಿಯುವ ಹಳೆ ಹೆಡ್ ಕಾನ್‌ಸ್ಟೇಬಲ್‌ರಿಗೆ ತಲೆ ಇಲ್ಲ' ಎಂದು ಸಿಗರೇಟಿನ ಹೊಗೆಯೊಂದಿಗೆ ಹೇಳಿದರು."

"ಮುಂದೆ ಎಲ್ಲಾದರೂ ಆ ಮನುಷ್ಯನ ಪತ್ತೆಯಾದರೆ, ಅವಳ ಮೊದಲನೆಯ ಹೇಳಿಕೆಯಲ್ಲಿ ಅವನ ಚಹರೆಯ ಉಲ್ಲೇಖ ಕೂಡಾ ಇಲ್ಲದಿರುವುದು ಖಟ್ಲೆಗೆ ಘಾತಕವಲ್ಲವೇ?" ಎಂದು ನಾನು ವಕೀಲಿಯ ಅನುಭವದಿಂದ ಕೇಳಿದೆ.

"ಘಾತಕವಾಗಲಿಲ್ಲ ಮಾತ್ರವಲ್ಲ, ಅವಳು ಹೇಳಿದ ಚಹರೆ ಒರೆದಿದ್ದರೆ, ಖಟ್ಲೆಯೇ ನಿಲ್ಲುತ್ತಿರಲಿಲ್ಲ. ಅದು ಹೇಗೆಂಬುದು ಮುಂದೆ ಗೊತ್ತಾಗುವುದು" ಎಂದರು ನಜರೇತರು.

"ಇದಾದನಂತರ ಒಂದು ತಿಂಗಳ ವರೆಗೆ ಏನೊಂದೂ ಸುದ್ದಿ ಇರಲಿಲ್ಲ. ಆದರೆ ಈ ಗಸ್ಪಾರಿ ನಜರೇತನು ನೋತದ್ದುಂಟೇ?" ಎಂದು ಹಳೆಯ ನೆನಪಿನ ಆನಂದದಿಂದ ನಜರೇತರು ಮುಂದುವರಿದರು: "ಮಲಬಾರ್ ಜಿಲ್ಲೆಯ ಒಂದು ಊರಲ್ಲಿ ಇದೇ ರೀತಿಯ ಕಳವಾಯಿತೆಂದೂ ಆದೇ ದಿನ ಅಲ್ಲಿ ಒಬ್ಬನನ್ನು ಸಂಶಯದ ಮೇಲೆ ಹಿಡಿದಾಗ ಅವನ ಕೂಡ ೧೪೦೦ ರೂಪಾಯಿಯ ನೋಟುಗಳು ಸಿಕ್ಕಿದುವೆಂದೂ ನಮಗೆ ವರ್ತಮಾನ ಬಂತು. ಅಲ್ಲಿ ಕಳವಾದ ನೋಟುಗಳ ನಂಬರು ಗೊತ್ತಿಲ್ಲದ್ದರಿಂದ, ಹಾಗೂ ಅವನ ಹತ್ತರ ಸಿಕ್ಕಿದ ನೋಟುಗಳು ಆವೇ ಎನ್ನಲು ಯಾವ ರುಜುವಾತೂ ಇಲ್ಲದ್ದರಿಂದ ಅಲ್ಲಿಯ ಪೋಲಿಸರು ನಿರಾಶರಾಗಿದ್ದರು.

ನಮ್ಮಲ್ಲಿ ನೋಟುಗಳ ನಂಬರು ಬರೆದಿಡುವ ಕ್ರಮವಿಲ್ಲದ್ದರಿಂದ ಈ ತರದ ಕಳವು ಪತ್ತೆಮಾಡಲು ಸಾಧ್ಯವೇ ಇಲ್ಲವೆಂದು ನಮ್ಮ ತರುಣ ಸಾಹೇಬರ ಅಭಿಪ್ರಾಯವಿತ್ತು. ಆದರೂ, ನನಗೆ ಒಂದು ವಿಚಾರ ತಲೆಯಲ್ಲಿ ಬಂತು. ಯತ್ನಮಾಡಿ ನೋಡೋಣವೆಂದು ಮಲಬಾರಿಗೆ ಹೋಗಿ, ಅಲ್ಲಿ ಕೋರ್ಟಿನಲ್ಲಿದ್ದ ಆ ನೋಟುಗಳನ್ನು ಸೂಕ್ಷ್ಮವಾಗಿ ನೋಡಿದೆ. ಹತ್ತು ರೂಪಾಯಿಯ ಒಂದು ನೋಟಿನಲ್ಲಿ

'೨	೩—೦—೦
೪	೦—೪—೦
೫	೦—೫—೦
	———
	೪—೦—೦'

ಈ ಸಂಖ್ಯೆ ಬರೆದಿತ್ತು. ಬೇರೆ ಯಾವ ನೋಟಿನ ಮೇಲೂ ಏನೂ ಗುರುತು ಇರಲಿಲ್ಲ....

"....ಈ ನೋಟುಗಳು ಇದ್ದ ಮನುಷ್ಯನ ಜರ್ಸಿಯಿಂದ ಅವನು ಕಳ್ಳನೆಂಬುದು ನಿಸ್ಸಂಶಯವಿತ್ತು. ರಾಮಕಾಮತರ ಹಣದ ಕಳವನ್ನು ಇವನ ಮೇಲೆ ಹೊರಿಸುವುದೆಂದು ನಿರ್ಧರಿಸಿದೆ. ನಮ್ಮ ಕೆಲಸ ಕೈಗೂಡಲು ಎರಡು ಸಂಗತಿ ಬೇಕಿತ್ತು. ಮೊದಲನೆ

ಯದು ಆ ಹುಡುಗಿಯಿಂದ ಈ ಮನುಷ್ಯನನ್ನು ಗುರುತಿಸುವುದು. ಎರಡನೆಯದಾಗಿ ಅಂಕೆಗಳಿದ್ದ ನೋಟು ರಾಮಕಾಮತರ ಇನ್ಯಾರು ಲಕೋಟೆಯಲ್ಲಿ ಹಾತಿದ ನೋಟುಗಳ ಪೈಕಿ ಒಂದು ಎಂಬುದನ್ನು ಸಿದ್ಧಪಡಿಸುವುದು.

"ಹುಡುಗಿಯು ತಾನು ನೋಡಿದ ಮನುಷ್ಯನು ಸಡ್ಡಿಲ-ದೇಹಿಯೂ ಬಿಳಿಯ ಬಣ್ಣದವನೂ ಎಂದು ಹೇಳಿದ್ದಳಲ್ಲವೇ? ಈ ಮನುಷ್ಯನೂ ಹಾಗೆಯೇ ಇದ್ದನೇ?" ಎಂದು ನಾನು ಕುತೂಹಲದಿಂದ ಕೇಳಿದೆ.

"ಇಲ್ಲವಪ್ಪಾ, ಇವನದು ತೆಳ್ಳಗಿನ ಶರೀರ, ಕರಿಯ ಚರ್ಮ. ಈಗಲಾದರೂ ಗೊತ್ತಾಯಿತೇ ರಾಯರೇ? ಇನ್ಸ್‌ಪೆಕ್ಟರ ಸಾಹೇಬರು ಹೇಳಿದಂತೆ, ಅವಳು ಹೇಳಿದ ಚಹರೆಯನ್ನು ಬರೆದಿದ್ದರೆ, ಟಪ್ಪಾಲು ಆಫೀಸಿನ ಗೇಟಿನ ಬಳಿ ಅವಳು ನೋಡಿದ ಮನುಷ್ಯನು ಇವನೇ ಎನ್ನಲು ಮಾರ್ಗವೇ ಇರುತ್ತಿದ್ದಿಲ್ಲ. ಖಟ್ಲೆಯೇ ಕುಸಿದು ಬೀಳುತ್ತಿತ್ತು. ಸದ್ಯಕ್ಕೆ ಉಪಯೋಗವಿಲ್ಲದಿದ್ದರೂ ನಾಳೆ ಎಂದಾದರೂ ಪತ್ತೆಯಾಗುವ ಸಂಭವವಿದ್ದಾಗ ತೊಂದರೆಯಾದರೂ ಆಗಬಾರದೆಂದು ನಾನು, ಹುಡುಗಿಯ ಹೇಳಿಕೆಯಲ್ಲಿ 'ನೋಡಿದರೆ ಗುರುತಿಸಬಹುದು' ಎಂದಷ್ಟೇ ಬರೆದೆ. ಅದರಿಂದಲೇ ನಮ್ಮ ಖಟ್ಲೆ ಉಳಿಯಿತು; ತಕ್ಷೀರು ಪತ್ತೆಯಾಯಿತು."

"ನೋಡಿದ ಅಪರಿಚಿತರನ್ನು ಗುರುತುಹಿಡಿಯಬೇಕಾದರೆ ಹತ್ತು ಹನ್ನೆರಡು ಜನರ ನಡುವೆ ನಿಲ್ಲಿಸಿ ಗುರುತಿಸುವ ಪಹರೆ (identification parade) ಮಾಡಿಸುತ್ತಾರಲ್ಲಾ...ಅದನ್ನು ಮಾಡಿಸಿದಿರೇ?" ಎಂದು ನಾನು ಕೇಳಿದೆ.

"ಮಾಡಿಸದೆ ಮತ್ತೆ! ಮಾಡಿಸದಿದ್ದರೆ ಗುರುತು ಹಿಡಿದದ್ದಕ್ಕೆ ಬೆಲೆ ಇದೆಯೆ?" ಎಂದರು ನಜರೇತರು

"ಅದರಲ್ಲಿ ಹೇಗೆ ಎಂದೂ ನೋಡದವನನ್ನು ಗುರುತಿಸಿದಳಪ್ಪಾ?" ಎಂದು ಆಶ್ಚರ್ಯಪಟ್ಟು ಕೇಳಿದೆ.

"ಆಗಿನ ಕಾಲದಲ್ಲಿ ಸಾರ್ವಜನಿಕರಿಗೂ ಪೋಲೀಸರಿಗೂ ತುಂಬಾ ಸಹಾನುಭೂತಿ, ಆದರಗಳಿದ್ದುವು, ರಾಯರೇ! ಈಗಿನಂತೆ ಪರಸ್ಪರ ದ್ವೇಷ, ವಿರೋಧಗಳಿರಲಿಲ್ಲ. ನಮಗೆ ಜನರ ಸಹಾಯ ಬೇಕಾದಷ್ಟು ಬೇಕಾದ ರೀತಿಯಲ್ಲಿ ಸಿಕ್ಕುತ್ತಿತ್ತು. ಹುಡುಗಿಯು ಲಕೋಟೆ ಕೈಯಲ್ಲಿ ಹಿಡಿದುಕೊಂಡ ಮನುಷ್ಯನನ್ನು ನೋಡಿದ್ದು ಟಪಾಲ್ ಆಫೀಸಿನಿಂದ ಸ್ವಲ್ಪ ದೂರದಲ್ಲಿ. ಆದರೂ, ಗೇಟಿನ ಬಳಿ ನೋಡಿದ್ದೆಂದು ಹೇಳಲು, ಹಾಗೂ ಮಲಬಾರಿನಲ್ಲಿ ನೋಟು ಸಮೇತ ಹಿಡಿಯಲ್ಪಟ್ಟ ಮನುಷ್ಯನೆಂದು ಗುರುತಿಸಲು ಅವಳ ತಾಯಿಯಿಂದ ಒಪ್ಪಿಗೆ ತಕ್ಕೊಂಡೆವು. ಆ ಮನುಷ್ಯನು ಆಗ ಮಲಬಾರಿನಲ್ಲಿ ಒಂದು ಜೇಲಿನಲ್ಲಿದ್ದನು!"

"ಜೇಲಿನಲ್ಲಿದ್ದವನ ಗುರುತು ಹೇಗೆ ಹಿಡಿದಿಳು?" ಎಂದು ನಾನು ಆತುರದಿಂದ ಕೇಳಿದೆ.

"ಅದೇ ಹೇಳುತ್ತೇನೆ. ಈ ಗುರುತಿಸುವ ಪಹರೆ (identification parade) ಗಳಿಗೆ ಕೋರ್ಟುಗಳಲ್ಲಿ ಬಹಳ ಮಹತ್ವ ಕೊಡುತ್ತಾರೆ. ಆದರೆ ಸಾಧಾರಣವಾಗಿ ಪ್ರತಿಯೊಂದು ಪಹರೆಯಲ್ಲಿ ಬೇಕಾದವನನ್ನು ಸುಲಭವಾಗಿ ಗುರುತಿಸುವಂತೆ ನಾವು ಹಂಚಿಕೆ ಮಾಡುತ್ತೇವೆ. ಅದನ್ನು ಕಂಡು ಹಿಡಿಯುವುದು ನಿಮ್ಮಿಂದ ಸಾಧ್ಯವಿಲ್ಲ; ಅದು ಪೋಲಿಸರ ಯುಕ್ತಿ. ನಾನು ಹುಡುಗಿಯನ್ನು ಮಲಬಾರಿಗೆ ಕರೆದುಕೊಂಡುಹೋದೆ. ಆ ಮನುಷ್ಯನನ್ನು ಕೋರ್ಟಿಗೆ ತರುವ ದಿನ ನೋಡಿ ಅವಳಿನ್ನು ಮರೆಯಲ್ಲಿ ನಿಲ್ಲಿಸಿ, ಅವನನ್ನು ಸರಿಯಾಗಿ ನೋಡುವ ಏರ್ಪಾಡು ಮಾಡಿದೆ. ಮರುದಿನ ಜೇಲಿನಲ್ಲಿ ಮೇಜಿಸ್ಟ್ರೇಟರ ಎದುರು ಗುರುತಿಸುವ ಪಹರೆಯಾಯಿತು. ಹಿಂದಿನ ದಿನ ಜೆನ್ನಾಗಿ ದೀರ್ಘಕಾಲ ನೋಡಿದವನನ್ನು ಮರುದಿನ ಗುರುತಿಸುವುದು ಕಠಿನವೇ? ಗುರುತಿಸುವ ಪಹರೆ ಯಶಸ್ವಿಯಾಯಿತು....."

"..ಒಂದು ಕೆಲಸವಾಯಿತು. ಇನ್ನು ಆ ಮನುಷ್ಯನ ಹತ್ತಿರ ಸಿಕ್ಕಿದ ನೋಟುಗಳಿಗೂ ರಾಮಕಾಮತರ ನೋಟುಗಳಿಗೂ ಸಂಬಂಧ ಕಲ್ಪಿಸುವುದು. ಅದನ್ನು ಹೇಗೆ ತಯಾರಿಸಿದೆ ಗೊತ್ತೇ? ಒಂದು ನೋಟಿನಲ್ಲಿ ಕೆಲವು ಅಂಕೆಗಳಿದ್ದುವೆಂದು ಹೇಳಿದ್ದಿನಲ್ಲಾ" ಅವು ತಾನು ಬರೆದುವೆಂದು ಒಬ್ಬನಿಂದ ಹೇಳಿಸುವುದೆಂದು ನಿರ್ಧರಿಸಿದೆ.

"ಅದನ್ನು ರಾಮಕಾಮತರಿಂದ ಹೇಳಿಸಿದರಾಯಿತಲ್ಲಾ! ಬೇರೊಬ್ಬನಿಂದ ಹೇಳಿಸಿದರೆ ಆ ನೋಟು ರಾಮಕಾಮತರ ಹತ್ತಿರ ಹ್ಯಾಗೆ, ಯಾವಾಗ ಬಂತೆಂಬ ಪ್ರಶ್ನೆ ಬರುವುದಲ್ಲವೇ?" ಎಂದು ನಾನು ಕೇಳಿದೆ.

"ರಾಯರೇ, ಪಕ್ಷಪಾತನಿರ್ವಹಣೆಯ ಸಾಕ್ಷಿಗೆ ಕೋರ್ಟುಗಳಲ್ಲಿ ಬೆಲೆ ಇಲ್ಲವಷ್ಟೆ? ರಾಮಕಾಮತರು ತಾನು ಬರೆದದ್ದೆಂದು ಹೇಳಿದರೆ ಹಣ ಸಿಕ್ಕುವ ಆಶೆಯಿಂದ ಹಾಗೆ ಹೇಳುತ್ತಾರೆಂದು ವಕೀಲರು ವಾದಿಸಬಹುದು. ಅದಕ್ಕಾಗಿ ಮೂರನೆಯವನನ್ನು ಹುಡುಕಬೇಕಾಯಿತು. ಪ್ರಯತ್ನಪಟ್ಟು ಒಬ್ಬ ಜೀನಸಿನ ಅಂಗಡಿಯ ಕೆಲಸದವನನ್ನು ಗೊತ್ತು ಮಾಡಿದೆವು. ತಾನೊಬ್ಬನೇ ಅಂಗಡಿಯಲ್ಲಿದ್ದಾಗ, ಒಬ್ಬ ಚಿಕ್ಕ ಹುಡುಗನು ೨ ಮಣ ಬೆಲ್ಲ, ೪ ಸೇರು ಅಕ್ಕಿ, ೫ ತೆಂಗಿನಕಾಯಿ ತಕ್ಕೊಳ್ಳಲು ಬಂದನೆಂದೂ ಬೇರೆ ಕಾಗದ ಪಕ್ಕನೆ ಸಿಕ್ಕದುದರಿಂದ, ಕೈಯಲ್ಲಿದ್ದ ಹತ್ತು ರೂಪಾಯಿ ನೋಟಿನ ಮೇಲೆ ಲೆಕ್ಕ ಬರೆದನೆಂದೂ ಜುಮಲಾ ರೂ. ೩—೧೩—೦ ಆದರೂ, ಬಂದ ಹುಡುಗನು ಸ್ವಲ್ಪ ಹೆಡ್ಡನಾದುದರಿಂದ ನಾಲ್ಕು ರೂಪಾಯಿ ಆಗುತ್ತದೆಂದು ಹೇಳಿದೆನೆಂದೂ, ಅದು ಸರಿಯೆಂದು ಅವನನ್ನು ನಂಬಿಸಲು ಜುಮಲಾ ಮಾಡಿ ಕೆಳಗೆ ೩—೧೩—೦ ರ ಬದಲು ರೂ. ೪—೦—೦ ಎಂದು ಬರೆದೆನೆಂದೂ ಅವನಿಂದ ಹೇಳಿಸಿದೆ. ಆ ನೋಟಿನಲ್ಲಿ

'೨	೩-೦-೦
೪	೦-೪-೦
೫	೦-೫-೦
	———
	೪-೦-೦'

ಎಂಬುದಾಗಿ ಬರೆದಿತ್ತು. ಈ ಅರ್ಥವಿಲ್ಲದ ಲೆಕ್ಕಕ್ಕೆ ಅರ್ಥವನ್ನು ಕಲ್ಪಿಸಬೇಕಾಯಿತು. ಅದನ್ನು ಹೇಳಲು ಒಬ್ಬನನ್ನು ತಯಾರು ಮಾಡಬೇಕಾಯಿತು.

"ಆ ನೋಟನ್ನು ರಾಮಕಾಮತರಲ್ಲಿ ಹೇಗೆ ತಂದಿರಿ?" ಎಂದು ಕೇಳಿದೆ.

"ಜೀವೇಸು ದೊಡ್ಡ ಮಾತು! ಇಷ್ಟೆಲ್ಲಾ ಮಾಡಿದ ನುತರ, ಅದರಿಂದಾಗಿ ಕೆಲಸ ಕೆಟ್ಟೀತೇ? 'ಆ ಅಂಗಡಿಯವನು ತನ್ನಿಂದ ಹತ್ತು ರೂಪಾಯಿ ಕೈಗಡ ತಕ್ಕೊಂಡಿದ್ದ. ಅದನ್ನು ವಾಪಸು ಕೊಡಬೇಕೆಂದು ಜನ ಕಳಿಸಿದೆ. ಅವನು ಹತ್ತು ರೂಪಾಯಿ ನೋಟು ಕೊಟ್ಟ, ಇನ್ನೂರು ಲಕೋಟೆಯಲ್ಲಿ ಹಾಕಿದ ನೋಟುಗಳ ಪೈಕಿ ಅದೂ ಒಂದು' ಎಂದು ರಾಮಕಾಮತರ ಹೇಳಿಕೆ ಬರೆದೆ. ತಾನು ನೋಟಿನಲ್ಲಿ ಲೆಕ್ಕ ಬರೆದ ಕ್ಷಣದಲ್ಲೇ ರಾಮಕಾಮತರ ಆಳು ಬಂದನೆಂದೂ ಅದೇ ನೋಟನ್ನು ಅವನಿಗೆ ಕೊಟ್ಟನೆಂದೂ ಆ ಬೇರೆ ಅಂಗಡಿಯ ಕೆಲಸದವನಿಂದ ಹೇಳಿಸಿದೆ."

ಇಷ್ಟು ಮಾಡಿ ಬಿಟ್ಟಿ ಮಾಡಿದೆ. ಆರೋಪಿಯು ಮಂಗಳೂರಿನ ಪ್ರಸಿದ್ಧ ವಕೀಲರನ್ನು ಕರೆಯಿಸಿದ. ಆದರೆ ಕಳವಾದ ಸಮಯದಲ್ಲಿ ಒಂದು ಲಕೋಟೆ ತಕ್ಕೊಂಡು ಟಪ್ಪಾಲ್ ಆಫೀಸಿನ ಗೇಟಿನಿಂದ ಹೊರಬಿದ್ದವನು ಇವನೇ ಎಂದು ಹುಡುಗಿಯ ಸಾಕ್ಷ್ಯಿಯಿಂದ ಸಿದ್ಧವಾಯಿತು. ಕಳವಾದ ಒಂದು ನೋಟು ಇವನ ಕೈಲಿ ಸಿಕ್ಕಿತೆಂಬುದೂ ಸಿದ್ಧವಾಯಿತು. ಆರೋಪಿಗೆ ಶಿಕ್ಷೆಯಾಯಿತು. ರಾಮಕಾಮತರ ಹಣ ಮರಳಿ ಸಿಕ್ಕಿತು..."

"ಆದರೆ ನಜರೇತರೇ, ನಿಜವಾಗಿ ರಾಮಕಾಮತರ ಹಣ ಕದ್ದವನು ಈ ಮನುಷ್ಯನೇ ಆಗಿದ್ದನೇ?"

"ಈಗ ಹೇಳಲಿಕ್ಕೇನು? ಅವನಲ್ಲ, ಆದರೆ, ಆದೇ ಕಳ್ಳರ ಗುಂಪಿಗೆ ಸೇರಿದವನು. ಅವನ ಕೂಡ ಸಿಕ್ಕಿದ ಹಣ ನಮ್ಮ ಜಿಲ್ಲೆಯ ಇತರ ಕಡೆಗಳಲ್ಲಿ ಕಳವು ಮಾಡಿದ್ದು. ಆದರೆ ಬೇರೆ ಪೋಲೀಸ್ ಅಧಿಕಾರಿಗಳು ರುಜುವಾತಿಲ್ಲವೆಂದು ಬಿಟ್ಟಿದ್ದರು."

"ಅಂದಿನಿಂದ ರಾಯರೇ, ಆ ಕಳ್ಳರು ನಮ್ಮ ಜಿಲ್ಲೆಯನ್ನು ಬಿಟ್ಟೇ ಬಿಟ್ಟರು" ಎಂದು ಗಸ್ವಾರಿ ನಜರೇತರು ಮುಂಡಾಸು ಸರಿಪಡಿಸುತ್ತ ಹೇಳಿದರು.

"ನಮ್ಮ ಹಳ್ಳಿಗಾಡಿನ ಅನುಭವ ಪೂರ್ಣವಾಗಿ ವಿಚಾರಮಾಡಿ ಕೊಂಡರೆ, ಬ್ರಿಟಿಷ್ ನ್ಯಾಯಪದ್ಧತಿಯು ನಮ್ಮಲ್ಲಿ ಅನರ್ಥ-ಪನ್ನುಂಟುಮಾಡಿದೆಯೆಂಬುದು ಯಾರಿಗೂ ಗೊತ್ತಾಗದಿರದು" ಎಂಬ ಅವರ ಆ ದಿನದ ಕೊನೆಯ ಮಾತುಗಳು ಈಗಲೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇವೆ.

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: ಮುಂಬಯಿ

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್'ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ಕಳಕವಾಡಿ, ಬೆಳಗಾಂವಿ.

ವ್ಯಕ್ತಿ ವೈಶಿಷ್ಟ್ಯ

ಶ್ರೀ. ಕೆ. ವಿಶ್ವನಾಥ ಹೆಗಡೆ, ಮುಂಬಯಿ

★

ಮನುಷ್ಯನನ್ನು ಉನ್ನತಿಯ ಶಿಖರಕ್ಕೇರಿಸುವುದೂ ಅವನ ವ್ಯಕ್ತಿತ್ವ; ಅವನತಿಯ ಪಾತಾಳಖಾತಕ್ಕೆ ಇಳಿಸುವುದೂ ಆತನ ವ್ಯಕ್ತಿತ್ವ! ವ್ಯಕ್ತಿತ್ವವೆಂದರೆ ಏನು? ರೂಪದಲ್ಲಿದೆಯೆ, ವೇಷದಲ್ಲಿದೆಯೆ, ಭಾಷೆಯಲ್ಲಿದೆಯೆ, ಹಾವ-ಭಾವದಲ್ಲಿದೆಯೆ, ಏತರಲ್ಲಿದೆ? ಎಲ್ಲದರಲ್ಲಿಯೂ ಇದೆ; ಇವೆಲ್ಲವನ್ನು ಮೀರಿಯೂ ಇದೆ!

★

ಯಾವುದೊ ಒಂದು ಬೇನೆಯಿಂದ ಅನೇಕ ವರ್ಷಗಳವರೆಗೆ ಕಷ್ಟಪಡುತ್ತಿದ್ದ ಗೃಹಸ್ಥರೊಬ್ಬರು, ಹೆಸರುವಾಸಿಯಾದ ಹಲವು ಜನ ವೈದ್ಯರಿಂದ ಹಾಗೂ ಡಾಕ್ಟರರಿಂದ ಉಪಚಾರಗಳನ್ನು ಮಾಡಿಸಿಕೊಂಡು ನೋತರು. ಕೊನೆಗೆ ಅತಿ ಪ್ರಸಿದ್ಧರೆಂದೆನಿಸಿಕೊಂಡ ಮತ್ತೊಬ್ಬ ಡಾಕ್ಟರರಲ್ಲಿ ಪಲತೆ ಕೇಳಿದರು. ಆ ಡಾಕ್ಟರರೂ ಅದೆಷ್ಟೋ ಔಷಧೋಪಚಾರಗಳನ್ನು ಮಾಡಿ ನೋಡಿದರು. ಆದರೆ ಆ ಗೃಹಸ್ಥರಿಗೆ ಗುಣವಾಗುವ ಲಕ್ಷಣ ಕಂಡುಬರಲಿಲ್ಲ. ಕಟ್ಟಕಡೆಗೆ ಬುದ್ಧಿವಂತರಾದ ಆ ಡಾಕ್ಟರರು, "ನೋಡಿ, ಇನ್ನು ನಿಮಗೆ ಒಂದೇ ಒಂದು ಔಷಧ ಉಳಿದಿದೆ. ಅದರಿಂದಲೂ ನಿಮಗೆ ಗುಣವಾಗದಿದ್ದರೆ ನಿಮಗೆ ಯಾವುದರಿಂದಲೂ ಗುಣವಾಗದು ಎಂದರು. ಅದಕ್ಕೆ ಆ ಗೃಹಸ್ಥರು "ಹಾಗಾದರೆ ಅದು ಯಾವುದು?" ಎಂದು ಕೇಳಿದರು. "ಅದು ಔಷಧವಲ್ಲ, ಅದೊಂದು ವ್ಯಕ್ತಿ. ನೀವು ಮೋತೀಲಾಲ ನೆಹರು ಅವರನ್ನು ಬಲ್ಲಿರಷ್ಟೆ. ಅವರ ಸಹವಾಸದಲ್ಲಿ ಕೆಲವು ಕಾಲವನ್ನು ಕಳೆಯಬೇಕು. ಒಂದೆರಡು ತಿಂಗಳಲ್ಲಿ ನಿಮಗೆ ವಾಸಿಯಾದೀತು," ಎಂದು ಡಾಕ್ಟರರು ಹೇಳಿದರು. ಅವರ ಹೇಳಿಕೆಯಂತೆ ಆ ಗೃಹಸ್ಥರು ದಿನಂಗತ ಪಂ. ಮೋತೀಲಾಲ ನೆಹರುಗಳೊಡನೆ ಕೆಲವು ಕಾಲವನ್ನು ಕಳೆದು ಗುಣಹೊಂದಿದರು. ಪಂ. ಮೋತೀಲಾಲರ ಉದ್ಭೋಧಕವಾದ ವ್ಯಕ್ತಿತ್ವವು ಆ ಗೃಹಸ್ಥರನ್ನು ಪೂರ್ವಸ್ಥಿತಿಗೆ ತಂದಿತು. ಮೋತೀಲಾಲರಲ್ಲಿ ಜನರಿಗೆ ಸುಖ-ಸಮಾಧಾನಗಳನ್ನೂ ನಂಬುಗೆಯನ್ನೂ ಒದಗಿಸುವ ಶಕ್ತಿಯಿದ್ದಿತು!

ಕೆಲವರನ್ನು ಕಂಡೊಡನೆ ನಮ್ಮ ಹೃದಯವು ಅವರೆಡೆಗೆ ಹರಿಯುವುದು. ನಮಗೆ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವು ಉಂಟಾಗುವುದು. ನಾವು ಅವರ ಸಹವಾಸವನ್ನು ಬಯಸುವೆವು. ಮತ್ತೆ ಕೆಲವರು ಸವಿಾಪ ಸುಳಿದರೆ ಸಾಕು, "ಉಃ ಇವನೇಕೆ ಒಂದನಪ್ಪಾ ಶನಿ!" ಎಂದೆನಿಸುವುದು. ಕೆಲವರು ಸಂತೋಷ-ಉತ್ಸಾಹಗಳಿಗೆ ಕಾರಣರಾದರೆ, ಇನ್ನು ಕೆಲವರು ಬೇಸರವನ್ನೂ ಹೇಸಿಕೆಯನ್ನೂ ಉಂಟುಮಾಡುವರು. ಸಾವಿರಾರು ಜನರು ಒಂದು ವ್ಯಕ್ತಿಯನ್ನು ನೋಡಲಿಕ್ಕೆ ಅಥವಾ ಆ ವ್ಯಕ್ತಿಯ ಮುಖದಿಂದ ನಾಲ್ಕು ಮಾತು ಕೇಳಲಿಕ್ಕೆ ಒಂದೆಡೆಯಲ್ಲಿಯೆ ಕಿಕ್ಕಿರಿಯುವರು. ಮಹಾತ್ಮಾಗಾಂಧಿಯಂತಹ ಮಹನೀಯರ ಹೆಸರನ್ನು ಕೇಳಿದೊಡನೆ, ಅವರ ವಿಷಯಕ್ಕೆ ನಮಗೆ ಆದರ-ವಿಶ್ವಾಸಗಳು ಹುಟ್ಟುವುವು. ಅಂತಹರ ಒಂದು ಶಬ್ದವೂ ವೇದವಾಕ್ಯವಾಗಿ, ಆದರಂತೆ ನಾವು ವರ್ತಿಸುವೆವು. ನಾಲ್ಕು ಜನರು ಕಲೆತು ಮಾತು-ಕತೆಯಾಡುವಾಗ, ಹೆಚ್ಚಾಗಿ, ಅವರೊಳಗಿನವರೊಬ್ಬರೆ ಅದರಲ್ಲಿ ಮುಖ್ಯಭಾಗವನ್ನು ವಹಿಸುವರು. ಉಳಿದವರು ಗೋಣು-ಹಾಕುವರು; ಇಲ್ಲವೆ, "ಸರಿ," "ನಿಜ," "ಉಂಟಿ," ಎಂದು ಅಲ್ಲೊಂದು ಇಲ್ಲೊಂದು ಮಾತನಾಡುವರು. ಇಂತಹ ಸಂಗತಿಗಳ ಹಿಂದೆ, ನಮ್ಮ ಕಣ್ಣಿಗೆ ಕಾಣಿಸದಿದ್ದರೂ, ನಮ್ಮ ಮನಸ್ಸನ್ನು ಸೆಳೆಯುವ ಒಂದು ವಿಧವಾದ ಶಕ್ತಿ ಎಲ್ಲಿಯೊ ಅಡಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಆ ಶಕ್ತಿಯೇ ಆಕರ್ಷಕವಾದ ವ್ಯಕ್ತಿತ್ವ ಅಥವಾ ವ್ಯಕ್ತಿವೈಶಿಷ್ಟ್ಯ.

ಘನತೆಗೇರ ಬಯಸುವ ಪ್ರತಿಯೊಂದು ವ್ಯಕ್ತಿಯೂ ವ್ಯಕ್ತಿವೈಶಿಷ್ಟ್ಯವನ್ನು ಪಡೆಯಲಿಕ್ಕೆ ಯತ್ನಿಸಲೇ ಬೇಕು. ವ್ಯವಹಾರದಲ್ಲಿ ಆಕರ್ಷಕವಾದ-ಉದ್ಭೋಧಕವಾದ-ವ್ಯಕ್ತಿತ್ವಕ್ಕೆ ಮಹತ್ವದ ಸ್ಥಾನವಿದೆ. ಬಿಕರಿಗಾರನಿಗಾಗಲಿ, ಅಧ್ಯಾಪಕನಿಗಾಗಲಿ, ವಕೀಲನಿಗಾಗಲಿ, ಡಾಕ್ಟರನಿಗಾಗಲಿ, ರಾಷ್ಟ್ರಸೇವಕನಿಗಾಗಲಿ, ಕೇವಲ ಕಾರಕೂನನಿಗೇ ಆಗಲಿ, ಎಲ್ಲರಿಗೂ ತಮ್ಮದೇ ಆದ ಒಂದು ಪ್ರತ್ಯೇಕ ವ್ಯಕ್ತಿತ್ವ ಬೇಕು. ಏಕೆಂದರೆ ನಾವು ಪ್ರಿಯರಾಗಲಿಕ್ಕೂ, ಅಪ್ರಿಯರಾಗಲಿಕ್ಕೂ ನಮ್ಮ ವ್ಯಕ್ತಿತ್ವವೇ ಬಲವಾದ ಕಾರಣವು. ನಮ್ಮ ನಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ಮಾನ-ಮರ್ಯಾದೆ, ಸ್ನೇಹ-ಸಂಬಂಧಗಳು ದೊರೆಯುವುವು ಪ್ರತಿಯೊಂದು ಕೆಲಸದಲ್ಲಿ, ಪ್ರತಿಯೊಂದು ವೇಳೆಯಲ್ಲಿ, ಇದರಿಂದಾಗಿ ನಮ್ಮ್ಯೋಗ್ಯತೆಯು ಅಳೆಯಲ್ಪಡುವುದು. ಅದು ತಾನಾಗಿಯೆ ಜನರಿಗೆ ತಿಳಿಯುವುದರಿಂದ ನಮಗೆ ಇಷ್ಟವಿದ್ದರೂ ಇಲ್ಲದಿದ್ದರೂ ಅವರಲ್ಲಿ ನಮ್ಮ ವ್ಯಕ್ತಿತ್ವಕ್ಕೆ ಅನುಗುಣವಾದ ಪ್ರತಿಕ್ರಿಯೆಯುಂಟಾಗುವುದು.

ವ್ಯಕ್ತಿವೈಶಿಷ್ಟ್ಯವೆಂದರೇನು? ಎರಡೇ ಮಾತಿನಲ್ಲಿ ಹೇಳುವುದಾದರೆ, ಒಂದು ವ್ಯಕ್ತಿಯನ್ನು ಇನ್ನೊಂದು ವ್ಯಕ್ತಿಯಿಂದ ವಿಂಗಡಿಸಿ ತೋರಿಸಬಹುದಾದ ಗುಣಸಮುದಾಯವೆಂದು ಹೇಳಬಹುದು. ದೃಷ್ಟಿ, ಸ್ಪರ್ಶ, ನಡೆ, ನುಡಿ, ಹಾವಭಾವ, ಸ್ವಾಭಾವಿಕ ಪ್ರವೃತ್ತಿ—ಇವೇ ಅದನ್ನು ನಿರ್ಧರಿಸುವಂತಹವು. ಈ ಗುಣಗಳ ಮೂಲಕ ನಾವು ಜನರಿಗೆ ಎಷ್ಟು ಬೇಕಾಗುವೆವೊ ಅಷ್ಟು ನಮ್ಮ ವ್ಯಕ್ತಿತ್ವವು ಚೆನ್ನಾಗಿದೆಯೆಂದು ತಿಳಿಯಲು ಅಡ್ಡಿಯಿಲ್ಲ. ಮಹಾತ್ಮಾ ಗಾಂಧಿಯವರಿಗೆ ಕೋಟ್ಯಂತರ ಜನರ ಹೃದಯಗಳಲ್ಲಿ

ಸ್ಥಾನವಿದೆ. ಅದಕ್ಕೆ ಕಾರಣವೇನು? ಅವರ ಸರಲತೆ, ಸ್ವಾರ್ಥ-ತ್ಯಾಗ, ಗಟ್ಟಿ ಮನಸ್ಸು, ಭೂತದಯೆ, ಕರ್ತವ್ಯನಿಷ್ಠೆ, ಆತ್ಮ-ವಿಸ್ಮೃತಿ ಇವೇ ಮೊದಲಾದ ಗುಣಗಳಲ್ಲವೆ? ಅವರ ವಿನಯ, ವಿನೋದ, ಬಟ್ಟೆ-ಬರೆ, ನಿರಹಂಕಾರ, ಆಹಾರ-ವಿಹಾರ, ಬುದ್ಧಿ-ಸಾಮರ್ಥ್ಯ ಇವು ಅವರ ವ್ಯಕ್ತಿತ್ವಕ್ಕೆ ಅಪೂರ್ವವಾದ ಮೆರುಗನ್ನು ಕೊಡುವುವು. ಅವರನ್ನು ಅರಿಯದವರು ಸಹ ಅವರನ್ನು ಒಂದು ಸಾರಿ ನೋಡಿದರೆ ಆದರಪೂರ್ಣರಾಗುವರು. ಅದೀಗ ಅವರ ಆಕರ್ಷಕತೆಯ ಗುಟ್ಟು; ಅದೀಗ ಅವರ ಮಾಹಾತ್ಮ್ಯದ ಇತಿಹಾಸ.

ನಮ್ಮ ವ್ಯಕ್ತಿತ್ವದ ಆಕರ್ಷಕತೆಯನ್ನು ತಿಳಿಯಪಡಿಸಬೇಕಾದರೆ ಡಂಗುರ ಹೊಯ್ದು ಸಾರಬೇಕಾಗುವುದಿಲ್ಲ. ಹೂವು ತನ್ನ ಪರಿಮಳವನ್ನು ಜಾಹೀರುಪಡಿಸುವುದುಂಟೆ? ಅದು ಇದ್ದುದು ನಮಗೆ ಸ್ವಾಭಾವಿಕವಾಗಿ ಗೊತ್ತಾಗುವುದು. ಉತ್ತಮವಾದ ವ್ಯಕ್ತಿವೈಶಿಷ್ಟ್ಯದ ಮುಖ್ಯ ಲಕ್ಷಣವೆಂದರೆ ಆತ್ಮವಿಸ್ಮೃತಿ. ಒಳ್ಳೆ "ಛಾಪು" ಕೂರಿಸಬೇಕೆಂಬ ಹಂಬಲವಿರದಿರುವುದು. ನಮ್ಮ ವ್ಯಕ್ತಿತ್ವವನ್ನು ಇತರರ ಮೇಲೆ ಒತ್ತಬೇಕೆಂದು ಎಷ್ಟೆಷ್ಟು ನಾವು ಉತ್ಸುಕರಾಗುವೆವೊ ಅಷ್ಟಷ್ಟು ಅದರ ಬಿಲೆ ಕಡಿವೆ ಯಾಗುವುದು ಆಶ್ಚರ್ಯವಲ್ಲ. ಆ ಕಾಲಕ್ಕೆ ನಾವು ನಮ್ಮೊಳಗೇ ಇರುವುದರಿಂದ, ಬೇರೆಯವರ ಕಡೆಗೆ ನಾವು ಹೇಗೆ ಗಮನ ಕೊಡ-ಬಲ್ಲೆವು? ಆಗ ಬೇರೆಯವರನ್ನು ದುರ್ಲಕ್ಷ್ಯಿಸಬೇಕಾಗುವುದರಿಂದ, ಅವರು ನಮ್ಮನ್ನು ಮನಃಪೂರ್ವಕವಾಗಿ ಲಕ್ಷ್ಯಿಸುವುದಿಲ್ಲ. ನಾವು ಅವರೆದುರು ನಿಂತು, ಎಂತಹ ಹಾವ-ಭಾವಗಳನ್ನು ತೋರಿಸಿದರೂ, ಎಂತಹ ಸುಸಂಸ್ಕೃತವಾದ ಭಾಷೆಯನ್ನು ಪ್ರಯೋಗಿಸಿದರೂ, ಒಳ್ಳೆಯವರೆನಿಸಿಕೊಳ್ಳಬೇಕೆಂಬುದೇ ನಮ್ಮ ಉದ್ದೇಶವಾದರೂ ಇಂತಹ ನಟನೆಯಿಂದ ಅವರಿಗೆ ಸಂತೋಷ ವಾಗುವುದಿಲ್ಲ. ಅವರು ಮನಸ್ಸಿನಲ್ಲಿಯೆ "ಇದನ್ನೆಲ್ಲ ಬೇಕೆಂತಲೆ ಮಾಡುತ್ತಿದ್ದಾನೆ" ಎಂದುಕೊಳ್ಳುವರು, ಇಲ್ಲವೆ ಅವರಿಗೆ ಒಂದಿಷ್ಟು ವಿನೋದವೆನಿಸಬಹುದು, ಅಷ್ಟೆ! ಹಾಗಾದರೆ ನಾವು ಮಾಡಬೇಕೇನು? ಬೇರೆಯವರನ್ನು ಕುರಿತು ಹೆಚ್ಚು ಲಕ್ಷ್ಯವನ್ನು ಕೊಡಬೇಕೇ ಹೊರತು, ನಮ್ಮ ಹೊಸಕೋಟು, ನಮ್ಮ ಧ್ವನಿ, ನಮ್ಮ ಶಬ್ದಗಳ ತಪ್ಪು ಒಪ್ಪು, ನಮ್ಮ ಮೋರೆಯ ರೂಪ, ನಮ್ಮ ನಿಲುವಿಕೆ, ನಮ್ಮ ಶೀವಿ-ಇವುಗಳ ಕಡೆಗೆ ಕೊಡಕೂಡದ. ನಮ್ಮನ್ನು ಮರೆತು ಬಿಡುವುದರಲ್ಲಿಯೆ ನಮ್ಮ ಆಕರ್ಷಕತೆ; ನಮ್ಮ ಪ್ರೀತಿ ಪಾತ್ರತೆ! ನನಗಿಂತಲೂ ನಮ್ಮ ಸಂಪರ್ಕದಲ್ಲಿ ಒರುವ ಜನರ ಕಡೆಗೆ ಹೆಚ್ಚು ಗಮನ ಕೊಡೋಣ. ನಮ್ಮ ಸಡೆ-ನುಡಿ, ಬಟ್ಟೆ-ಬರೆ, ನಿಲುವಿಕೆ, ಶೀವಿಗಳು ಚೆನ್ನಾಗಿರಬೇಕು; ಆದರೆ ಅವು ಸ್ವಾಭಾವಿಕವಿರಬೇಕು. ಅವು ಸ್ವಾಭಾವಿಕವಾಗುವವರೆಗೆ, ನಾವು ಅವುಗಳ ಕಡೆಗೆ ಆಗಾಗ ಲಕ್ಷ್ಯವನ್ನು ಪೂರೈಸಬೇಕಾ ಗುವುದು. ಹೀಗಿದ್ದರೂ ನಟನೆ ಅಥವಾ ಸೋಗುತೂಡುವುದು ಅವಶ್ಯವಿರುವದಿಲ್ಲ. ಇದರಿಂದ ಆತ್ಮವಿಸ್ಮೃತಿಗೆ ಆತಂಕ ಬರುವುದಿಲ್ಲ.

ಸ್ವಾಭಾವಿಕವಾಗಿ ವರ್ತಿಸಬೇಕಾದರೆ ನಾವು "ನಾವೇ" ಆಗಿರ ಬೇಕಲ್ಲವೆ? ಒಬ್ಬರು ಮೇಕೆಯ ಹಾಲು ಕುಡಿದು ದಿನದ ಆಹಾರದ ಆವಶ್ಯಕತೆಯನ್ನು ಆರು ಬಿಲ್ಲಿಯಲ್ಲಿ ತೀರಿಸಿಬಿಟ್ಟು, ಏದು ಮೊಳದ ಧೋತರ, ನಾಲ್ಮುಮೊಳದ ಶಾಲು ಇವೆರಡನ್ನೇ ಉಡುಗೆ ಯಾಗಿಟ್ಟುಕೊಂಡು ಖ್ಯಾತಿ ಪಡೆದಿದ್ದರೆ, ನಮ್ಮ ವ್ಯಕ್ತಿತ್ವವೂ ಅವರಂತಹದಾಗಬೇಕೆಂಬ ಬಯಲಾಶೆಯಿಂದ, ಅವರಂತೆಯೆ ನಡೆಯತೊಡಗಿದರೆ ನಾವು ನಗೆಗೀಡಾಗಬೇಕಾಗುವುದು. ಏಕೆಂದರೆ ಅವರು ಬೇರೆ, ನಾವು ಬೇರೆ. ಒಬ್ಬರಂತೆ ಇನ್ನೊಬ್ಬರು ಇರುವುದಿಲ್ಲ. ವ್ಯಕ್ತಿವಿಶಿಷ್ಟತೆಯೆಂದರೆ ನಮ್ಮ ವ್ಯಕ್ತಿತ್ವವು ಇತರರಿಂದ ಭಿನ್ನವಾಗಿರುವುದು. ನಾವು ಎಷ್ಟೊಂದು ಅಂಧಾನು-ಕರಣ ಮಾಡಿದರೂ, ಎಂತಹ ಸೋಗು ಹಾಕಿಕೊಂಡರೂ ನಮ್ಮ ನಿಜವಾದ ವ್ಯಕ್ತಿತ್ವವು ಹೊರಬೀಳಲೇ ಬೇಕು. ಇತರರಲ್ಲಿ ಕಂಡುಬಂದ ಗುಣಾಂಶಗಳನ್ನು ತಿಳಿದು ನಮ್ಮ ಸ್ವಭಾವದಲ್ಲಿ ಸೇರಿಸಕೂಡದು—ಎಂದು ಇದರಿಂದ ತಿಳಿಯಬಾರದು; ಸ್ವಾಭಾ-ವಿಕತೆ ಬೇಕೆಂಬುದೇ ತಾತ್ಪರ್ಯ.

ಆಕರ್ಷಕವಾದ ವ್ಯಕ್ತಿತ್ವವು ಕೇವಲ ಬಾಹ್ಯಾಡಂಬರವನ್ನು ಅವಲಂಬಿಸಿಕೊಂಡಿಲ್ಲ. ಅದಕ್ಕೆ ರಮಣೀಯವಾದ ರೂಪವು ಬೇಕೇ ಬೇಕೆಂದಿಲ್ಲ. ಕುರುಡರೂ, ಕುಂಟರೂ, ಅಡ್ಡಮೋರೆ ಯವರೂ, ದೊಡ್ಡ ಹೊಟ್ಟೆಯವರೂ, ಕಪ್ಪುಬಣ್ಣದವರೂ ಹೃದಯದ ತಂತಿಗಳನ್ನು ಮಿಡಿದು, ಮನಸ್ಸನ್ನು ಸೆಳೆದು, ನಮ್ಮ ಪ್ರೀತಿ-ಆದರಗಳಿಗೆ ಪಾತ್ರರಾಗಬಲ್ಲರು. ಅದಕ್ಕೆಲ್ಲ ಅಮೋಘ ವಾದ ಪಾಂಡಿತ್ಯಬೇಕೆಂತಲೂ ಇಲ್ಲ. ಅಥವಾ "ಬ್ಲೆಝುರ್" ಕೋಟು, ಜರಿಯಂಚಿನ ಧೋತರ-ರುಮಾಲು, ಕಿಡಿಯುಂಗರ ಇವೇ ಮೊದಲಾದ ಸಾಹಿತ್ಯ ಬೇಕೆಂತಲೂ ಇಲ್ಲ. ಅದಕ್ಕೆ ಮುಖ್ಯ ವಾಗಿ ಬೇಕಾದುವೆಂದರೆ, ನಯ-ವಿನಯ, ವಿನೋದ, ಸಹಾನು-ಭೂತಿ, ಸ್ವಾಭಾವಿಕತೆ, ಸ್ವಚ್ಛತೆ, ನಿರ್ವಂಚನೆ, ಹಾಗೂ ವಿಚಾರ ಗಳನ್ನು ಮಾತಿನಿಂದಾಗಲಿ ಬರೆಹದಿಂದಾಗಲಿ ಚೆನ್ನಾಗಿ ಪ್ರಕಟಿ ಸುವ ಶಕ್ತಿ.

ಕುಳಿತಲ್ಲಿ-ನಿಂತಲ್ಲಿ ಕೈಬೆರಳಿನಿಂದ ಇಲ್ಲವೆ ಕಾಲಿನಿಂದ ಕುರ್ಚಿ-ಮೇಜುಗಳನ್ನು ಬಾರಿಸುವವರನ್ನೂ, ಕಾಲು ಕುಣಿಸುವವರನ್ನೂ ಎಲ್ಲರೂ ಮೆಚ್ಚುವುದಿಲ್ಲ. ಉಗುರು ಕಡಿಯುವುದು, ವಿನಾಸೆ ತಿನ್ನುವುದು, ಉಶ್ಶೆಂದು ಯಾವಾಗಲೂ ದಣಿವು ತೋರಿಸು ವುದು, ಸಿಡುಕು, ಹುಸಿನಗೆ, ಕಪಟ, ಗರ್ವ—ಇಂತಹ ದೌರ್ಬಲ್ಯ ಗಳಿಂದ ನಮ್ಮ ವ್ಯಕ್ತಿತ್ವದ ಬಿಲೆ ಕಡಿವೆಯಾಗುವುದು. ಅಧಿಕ-ಪ್ರಸಂಗಿಯನ್ನು ಯಾರೂ ಗೌರವಿಸುವುದಿಲ್ಲ. ಅಂಜುಗುಳಿಯನ್ನು ಕಂಡರೆ ತುಚ್ಛತೆಯುಂಟಾಗುವುದು ಸಹಜ. ಹುರುಳಿಲ್ಲದ ಹುಟಿ ಯಲ್ಲಿ ಕಾಲ ಕಳೆಯುವವನು ತಿಳಿವಳಿಕೆಯುಳ್ಳವರ ಕನಿಕರಕ್ಕೆ ಪಾತ್ರನಾಗುವನು. ಮಾತಾಳಿಯು ಹೇಗೆ ಅಸಹ್ಯನೆನಿಸುವನೋ ಹಾಗೆಯೆ ಬಾಯಿ ತೆರೆಯದಿರುವವನೂ ನಮ್ಮ ಚಿತ್ತವನ್ನು ಸೆಳೆಯಲಾರನು.

ಆಕರ್ಷಕವಾದ, ಉತ್ಕೃಷ್ಟವಾದ ವ್ಯಕ್ತಿತ್ವವುಳ್ಳವನು ಯಾರ ಮನಸ್ಸನ್ನೂ ನೋಯಿಸುವುದಿಲ್ಲ. ಅವನ ಪ್ರತಿಯೊಂದು ಕೆಲಸದಲ್ಲಿ ಉತ್ಸಾಹವಿರುವುದು. ಅವನ ವಿಚಾರಗಳು ಉದಾತ್ತ

ವಾಗಿರುವುವು. ಅವನ ಮಾತು-ಕತೆಗಳಲ್ಲಿ ಉಪಯುಕ್ತವಾದ ಹೊಸ ಹೊಸ ವಿಷಯಗಳಿರುವುವು. ಅವನಿಂದ ಹೊಸದನ್ನು ಏನಾದರೂ ಕಲಿಯಬೇಕೆಂಬ ಬುದ್ಧಿ ಬೇರೆಯವರಲ್ಲಿ ಹುಟ್ಟುವುದು. ಅವನು ಚೆನ್ನಾಗಿ ಮಾತನಾಡಬಲ್ಲನು, ಬರೆಯಬಲ್ಲನು. ಅವನ ದೃಷ್ಟಿಯು ತನ್ನೊಳಗೇ ಸಂಕುಚಿತವಾಗಿ ಇರದೆ, ಬೇರೆಯವರ ಕಡೆಗೂ ಹಬ್ಬುವುದು. ಸಾಧ್ಯವಿದ್ದಷ್ಟೆಲ್ಲಿಗೂ ಹೋದಲ್ಲಿ ಬಂದಲ್ಲಿ ಅವನು ಸಂತೋಷದ ಹೂಬಿಸಿಲನ್ನು ಬೀರುವನು. ಅನ್ಯರ ಮೇಲೆ "ಛಾಪು" ಕೂರಿಸಬೇಕು, ತನ್ನ ಪ್ರತಿಷ್ಠೆ ಬೆಳೆಯಿಸಬೇಕು ಎಂದು ಅವನು ಹಂಬಲಿಸುವುದಿಲ್ಲ. ಅವನ ಬಟ್ಟೆ-ಬರೆಯು ಸ್ವಚ್ಛವಾಗಿರುವುದು. ಅವನಲ್ಲಿ ಒಳಗೊಂದು, ಹೊರಗೊಂದು ಇಲ್ಲ; ಅಹಂಕಾರವಿರುವುದಿಲ್ಲ, ಆದರೆ ಆತ್ಮವಿಶ್ವಾಸವಿರುವುದು. ಅವನ ಮೋರೆಯ ಮೇಲೆ ಮುಗುಳುನಗೆ ನಲಿದಾಡುತ್ತಿರುವುದು. ಅವನಲ್ಲಿ ಆಗಾಗ ಪರಿಶುದ್ಧವಾದ ವಿನೋದವನ್ನು ಕಾಣಬಹುದು.

ಮುಖವು ಹೃದಯದ ಕನ್ನಡಿಯು; ಶರೀರವು ಮನಸ್ಸಿನ ಪ್ರತಿಬಿಂಬವು. ಇವೆರಡನ್ನೂ ಪರಿಷ್ಕಾರಮಾಡಿ, ಹದಗೊಳಿಸಿದರೆ ನಮ್ಮ ವ್ಯಕ್ತಿತ್ವದ ಬೆಲೆಯು ಹೆಚ್ಚುವುದು. ನಾವು ಜನರ ಪ್ರೀತಿಗೆ ಪಾತ್ರರಾಗುವೆವು. ಅವರ ಕಡೆಯಿಂದ ನಮ್ಮ ಕೆಲಸಗಳನ್ನೆಷ್ಟೋ ಮಾಡಿಸಿಕೊಳ್ಳಬಹುದು. ಆದುದರಿಂದ ಉತ್ತಮವಾದ ವ್ಯಕ್ತಿತ್ವಕ್ಕೆ ಅಡ್ಡ ಬರುವ ದೌರ್ಬಲ್ಯಗಳನ್ನು ಬಂದೊಂದಾಗಿ ತೊಲಗಿಸಲು ಯತ್ನಿಸಬೇಕು. ಆಗಾಗ "ನಮ್ಮ ತಪ್ಪುಗಳೇನು? ಯಾವುದರಿಂದ ಜನರಿಗೆ ತೊಂದರೆಯಾಗುವಂತಿದೆ? ಯಾವ ಕಾರಣದಿಂದ ನಮ್ಮಲ್ಲಿ ವಿಶ್ವಾಸ ಕಡಿಮೆಯಾಗುವಂತಿದೆ? ಜನರಿಗೆ ಅಸಮಾಧಾನವಾಗುವಂತಹ ನಮ್ಮ ಹುಳುಕು-ಕೊಳಕುಗಳಾವವು?" ಎಂದು ಪರೀಕ್ಷಿಸಲೋಸುಗ, ನಮ್ಮೊಳಗೆ ದೃಷ್ಟಿಯನ್ನು ತಿರುಗಿಸಿ ಅವನ್ನು ಸರಿಪಡಿಸಲು ಯತ್ನಿಸಬೇಕು. ಆಗಾಗ ನಮ್ಮ ಒಳ್ಳೊಳ್ಳೆಯ ಗುಣಗಳನ್ನೂ ನೆನೆದು ಆನಂದಪಡುತ್ತ, ಅಂತಹವನ್ನು ಬಲಗೊಳಿಸಿ ಬೆಳಿಯಿಸಲೂ ಯತ್ನಿಸಬೇಕು. ನಮ್ಮ ದೌರ್ಬಲ್ಯಗಳನ್ನು ಕುರಿತು ಬಹಳ ಸಾರೆ ಚಿಂತಿಸಿದರೆ ಖಿನ್ನರಾಗಿ ಉತ್ಸಾಹಹೀನರಾಗುವೆವೆಂಬುದನ್ನು ನೆನಪಿಟ್ಟುಕೊಳ್ಳುವುದು ಅತ್ಯವಶ್ಯವು. ನಾವು ಪೂರ್ಣತೆಯನ್ನು ಹೊಂದಿದವರಲ್ಲ. ಕುಂದು-ಕೊರತೆಗಳು ಎಲ್ಲರಲ್ಲೂ ತುಂಬಿಕೊಂಡಿವೆ. ಆದುದರಿಂದ ನಾವು ಪ್ರಗತಿ ಮಾರ್ಗದಲ್ಲಿ ನಿದಾನವಾಗಿ ನಡೆದರೆ, ಎಷ್ಟು ಕಷ್ಟವೆನಿಸಿದರೂ ಎದೆಗುಂದುವ ಕಾರಣವಿಲ್ಲ. ಉದಾಸೀನರಾಗುವುದು ಬೇಡ. ನಮ್ಮೊಳಗಿನ ಉತ್ತಮೋತ್ತಮದ ಕಡೆಗೆ ನೋಡಿ ಹಿಗ್ಗುತ್ತ ಮುಂದಡಿಯಿಡೋಣ. ಅಪರೂಪಕ್ಕೆ—ಯಾವಾಗಲಾದರೊಮ್ಮೆ—ಪಾತ್ರ, ನಮ್ಮ ಋಜುತೆಯನ್ನು ತೆಗೆದುಕೊಳ್ಳುತ್ತಿರೋಣ. ಅದಂಲ್ಲಿ ಬೇಡವಾದ ಸಂಗತಿಗಳೆಷ್ಟು ಕಂಡುಬಂದರೂ ವ್ಯಸನಪಡದೆ, ಅವನ್ನು ಹೋಗಲಾಡಿಸಲು ಯತ್ನಿಸೋಣ. ಅವನ್ನು ಹೋಗಲಾಡಿಸುವೆವೆಂಬ ಭರವಸೆಯಿಂದ ಮುಂದೆ ಸಾಗೋಣ!

ಹಾಸಿಗೆಯಿಂದೆದ್ದ ಕೂಡಲೆ ದೀರ್ಘಶ್ವಾಸೋಚ್ಛ್ವಾಸದೊಂದಿಗೆ ಇಡಿ ಮೈಯನ್ನು ಜೋರಿನಿಂದ ಉಜ್ಜಿಕೊಳ್ಳಿರಿ. ಈ ರೀತಿಯು ಅಂಗಮರ್ದನದಿಂದ ರುಧಿರಾಭಿಸರಣವು ಚೆನ್ನಾಗಿ ನಡೆಯುವುದಲ್ಲದೆ ಶರೀರದ ಆಯಾ ಭಾಗಗಳಲ್ಲಿರುವ ನರಗಳ ಮುಖ್ಯಸಂಸ್ಥೆಗಳು ಚೇತರಿಸಿಕೊಂಡು, ಸರಿಯಾಗಿ ಕೆಲಸ ಮಾಡಲು ಉದ್ಯುಕ್ತವಾಗುವುವು. ತಿಕ್ಕಿಕೊಳ್ಳುವಾಗ ಅಂಗೈಗಳ ಗತಿಯು ಹೃದಯದ ಕಡೆಗೆ ನಡೆದರೆ ಇನ್ನೂ ಚೆನ್ನು. ಕಾಲುಗಳು ಹೃದಯದ ಕೆಳಭಾಗದಲ್ಲಿ ಇವೆಯಷ್ಟೆ. ಅವನ್ನು ತಿಕ್ಕಿಕೊಳ್ಳುವುದಾದರೆ ಪಾದಗಳಿಂದ ಮೊಣಕಾಲು, ಮೊಣಕಾಲಿನಿಂದ ತೊಡೆ, ಹೀಗೆ ಬುಡದಿಂದ ಮೇಲಕ್ಕೆ ಹೋಗುತ್ತಿರುವುದು ಉತ್ತಮ. ತಲೆ, ಮೋರೆ ಭುಜಗಳನ್ನು ಮೇಲಿನಿಂದ ಕೆಳಕ್ಕೆ—ಹೃದಯದ ದಿಕ್ಕಿಗೆ—ಉಜ್ಜಿಕೊಂಡರೆ ನೆಟ್ಟಗೆ. ಈ ಕೆಲಸ ನಡೆದಾಗ "ನಾನು ಕ್ಷೇಮದಿಂದ ಇದ್ದೇನೆ. ನನ್ನ ವ್ಯಕ್ತಿತ್ವವು ಪ್ರತಿದಿನವೂ ಆಕರ್ಷಕವಾಗುತ್ತ ನಡೆದಿದೆ. ನನ್ನಲ್ಲಿ ದಿನದಿನಕ್ಕೂ ಹೆಚ್ಚು ಹೆಚ್ಚು ಯೋಗ್ಯತೆ ಬರತೊಡಗಿದೆ!" ಎಂಬ ಭಾವನೆಯಿರಲಿ!

ಶರೀರವು ಗಟ್ಟಿಮುಟ್ಟಾಗಿದ್ದು ಆರೋಗ್ಯವು ಚೆನ್ನಾಗಿದ್ದರೆ ವ್ಯಕ್ತಿತ್ವಕ್ಕೆ ಸ್ವಾಭಾವಿಕವಾದ ಕಳೆ ಬರುವುದು. ಆದ್ದರಿಂದ ಯಾವಾಗಲೂ ಆರೋಗ್ಯದಲ್ಲಿರಬೇಕೆಂದು ಬೇರೆ ಹೇಳುವ ಕಾರಣವಿಲ್ಲ. ನಿಮ್ಮ ನಡೆಯು ತಕ್ಕಮಟ್ಟಿಗೆ ಗಂಭೀರವಾಗಿರಲಿ. ಎದೆಯನ್ನು ಹಂವಾಗಿಟ್ಟು, ಕತ್ತನ್ನೆತ್ತಿ, ನಸುವೆ ಉದ್ದವಾದ ಹೆಜ್ಜೆಯನ್ನಿಡುತ್ತ ನಡೆಯುವುದನ್ನು ಕೆಲಕಾಲ ಅಭ್ಯಾಸಮಾಡಿರಿ. ಕೂತರೆ ಚಳಿಜ್ವರ ಬಂದವರಂತೆ ಮುದುಡಿಕೊಂಡು ಕುಳ್ಳಿರಬೇಡಿರಿ. ಯಾರೇ ಆಗಲಿ, ನಿಮ್ಮನ್ನು ಮಾತನಾಡಿಸಿದರೆ ನಿಷ್ಕಪಟವಾಗಿ ಅವರ ಕಣ್ಣುಗಳನ್ನು ನೋಡಿರಿ. ನಂಬಿಗೆಯುಳ್ಳ, ಸರಳವಾದ ಮುಗುಳುನಗೆಯಿಂದ ಕಠಿನಹೃದಯರೂ ಮೆತ್ತಗಾಗುವರು! ಕೈಕುಲುಕುವಾಗ ವಿಶ್ವಾಸಪೂರ್ವಕವಾಗಿ ಅಂಗೈ ಒತ್ತಿರಿ. ನಮಸ್ಕಾರಮಾಡುವಾಗ ಮನಃಪೂರ್ವಕವಾಗಿ ಮಾಡಿರಿ. ನಿಮ್ಮ ಬಟ್ಟೆ-ಬರೆಯು ಯಾವಾಗಲೂ ಶುಚಿಯಾಗಿರಲಿ. ದಯೆಯುಳ್ಳವರಾದರೆ ನಮಗೆ ಲಾಭವಲ್ಲದೆ ಹಾನಿಯಿಲ್ಲ. ನೀವು ಹೋದೆಡೆಗೆ ಸಾಧ್ಯವಿದ್ದಷ್ಟು ಆನಂದವನ್ನುಂಟು ಮಾಡಿರಿ. ಚೆನ್ನಾಗಿ ಮಾತು-ಕತೆಯಾಡಲು ಯತ್ನಿಸಿರಿ. ಚೆನ್ನಾಗಿ ಮಾತು-ಕತೆಯಾಡಲಿಕ್ಕೆ ಉತ್ತಮವಾದ ಹೊಸ ಹೊಸ ವಿಷಯಗಳು ಬೇಕು! ಅನುಕೂಲವಿದ್ದಷ್ಟು ಹೊಸ ಜ್ಞಾನವನ್ನು ಸಂಪಾದಿಸಿರಿ. ದಿನಪತ್ರಿಕೆಯ "—ಲ್ಲಿ ೧೦೦ ಜನರಿಗೆ ಜಲಸಮಾಧಿ!" "ಮೋಟಾರ ಅಪಘಾತದಲ್ಲಿ ನಟಿಯ ಮರಣ!" "—ರಿಗೆ ೫ ವರ್ಷದ ಕಠಿಣ ಶಿಕ್ಷೆ" "ಜರ್ಮನರ ೧೩ ವಿಮಾನಗಳನ್ನು ನೆಲಕ್ಕುರುಳಿಸಿದರು!" "— ಠಾಣವು ವಾಸುಮಾಡಿದರು!" ಮುಂತಾದ 'ನಮ್ಮ ಸ್ವಂತ ಸುದ್ದಿಗಾರ"ರ "ತಾಜಾ" ಸುದ್ದಿಗಳಿಗಿಂತ ಹೆಚ್ಚಿನ ಮಹತ್ವದ ಸುದ್ದಿಗಳನ್ನೂ ಸಂಗತಿಗಳನ್ನೂ ಮಾತನಾಡಲಿಕ್ಕೆ ಕಲಿತರೆ ಹೆಚ್ಚು ಪ್ರಯೋಜನವುಂಟು.

ಎರಡಾಣೆಯ ಫಜೀತಿ!

(ಸ್ವಾನುಭವದ ಹರಟೆ)

ಶ್ರೀ. ಎನ್. ಕೆ. ಕುಲಕರ್ಣಿ ಎಂ.ಎ., ಬಿ.ಟಿ.

★

ಆವೂರ ಹೆಸರಾದರೂ ಹೇಳಿ ಪ್ರಯೋಜನವೇನು? ಅಷ್ಟು ತೀರ ಚಿಕ್ಕದೇನೂ ಅಲ್ಲ; ದೊಡ್ಡ ಪಟ್ಟಣವೂ ಅಲ್ಲ. ತಾಲೂಕಿನ ಸ್ಥಳವಾದರೂ ಸುಧಾರಿಸಿದ ಜನರು ಅಲ್ಲಿ ತೀರ ಕಡಿಮೆ. ಇಡಿಯ ಊರಲ್ಲೆಲ್ಲಾ ಶೆಟ್ಟರು, ವ್ಯಾಪಾರಸ್ಥರು ಇಂತಹರೇ! ಅಲ್ಲಿ ತೀರ ಸುಧಾರಿಸಿದವನೆಂದರೆ 'ಕ್ಲಬ್'ಗೆ ಹೋಗಿ ಇಸ್ಪೇಟು ಆಟವನ್ನಾಡುವವನೇ. ಅವನ ಶಿಕ್ಷಣ-ಸಂಸ್ಕೃತಿಗಳೂ,—'ಟಾಯಿಮ್ಸ್ ಆಫ್ ಇಂಡಿಯಾ' ಕೊಂಡುಕೊಳ್ಳುವ ಮಟ್ಟಿಗೆ-ಆದರೆ 'ಲೀಡರ್' ತಿಳಿಯಲಿ ಬಿಡಲಿ!

ಇಂತಹ ಊರಿನಲ್ಲಿ ಸಿನೇಮಾ ಮಂದಿರಗಳು ಎಷ್ಟಿರಬಹುದೆಂದು ನಿಮ್ಮ ಕಲ್ಪನೆ? ಒಂದಲ್ಲ, ಎರಡಲ್ಲ, ಮೂರು! ಆದರೆ 'ವಾಡಿಯಾ' ಕಂಪನಿಯ ಚಿತ್ರಪಟದ ಹೊರತಾಗಿ ಮತ್ತೊಂದು ಬಂದರೆ ದೇವರಾಣೆ! ಇರಲಿ, ಬಳಿಕು. ಏಕೆಂದರೆ ಈ ಆಣೆಗೆ ಅಪವಾದವಾಗಿ ಒಮ್ಮೊಮ್ಮೆ 'ನವಯುಗ' (ಎಂದರೆ ಮೊದಲಿನ ನಾಮಾಂಕಿತ 'ಹಂಸ' ಚಿತ್ರಪಟ) ಚಿತ್ರಪಟ ಬಂದರೂ ಬರಬಹುದು. 'ನೂರೇ ವರ್ಷ' 'ಹಂಟರ್‌ವಾಲಿ' 'ಹರಿಕೇನ್ ಹಂಸಾ' 'ಕಹಾಂ ಹೈ ಮಂಥಿಲ್ ತೇರಿ' 'ದಶಾವತಾರ'ವು ಇಂತಹ ಚಿತ್ರಪಟಗಳು ಬಂದರೆ ವೈಭವಶಾಲಿ ಏದನೆಯು ವಾರದ ವರೆಗೆ ನಡೆಯದಿದ್ದರೆ ಇಟ್ಟ ಆಣೆ. ಆದರೆ ಆದೇ 'ಸ್ಯೂಥಿಯೇಟರ್ಸ್' ಆಗಲಿ, 'ಎಂ. ಜೆ. ಎಂ' ಆಗಲಿ-ಛೆ, ಇಂತಹ ಚಿತ್ರಪಟಗಳ ಹೆಸರನ್ನು ಕೂಡ ಉಚ್ಚರಿಸಲಾಗದು ಅಲ್ಲಿ.

ಅಂದು ಹಂಸ ಚಿತ್ರಪಟದ 'ಬ್ರಹ್ಮಚಾರಿ' ಇದ್ದಿತು. ಈ ಚಿತ್ರಪಟವನ್ನು ಇದಕ್ಕೂ ಮೊದಲು ಒಂದೆರಡು ಸಲ ನಾನು ನೋಡಿದ್ದಿರಬೇಕು. 'ಎರಡನೆಯ ಸಲ ನೋಡಲು ಯೋಗ್ಯವಿದ್ದಿತೆ?' ಎಂದು ನೀವು ಕೇಳಬಹುದು. ಅದು ಹೋಗಲಿ, ಈಗ ಮೂರನೆಯ ಸಲ ನಾನು ನೋಡುವ ಭಾಗ ಬಿದ್ದಿತ್ತು. ಹಂಸ ಚಿತ್ರಪಟದ ಕಲೋಪಾಸಕನೆಂದಾಗಲಿ 'ಬ್ರಹ್ಮಚಾರಿ ಚಿತ್ರಪಟ'ದ ಪ್ರಚಾರಕನಾಗಿ ಆಗಲಿ ಅಲ್ಲ ನಾನು ಮೂರನೆಯ ಸಲ ನೋಡಬೇಕಾದುದು. 'ಹಾಗಾದರೆ ಏಕೆ?' ಎಂದು ನೀವು ಕೇಳುವಿರೊ? ನನ್ನ ಪ್ರಾರಬ್ಧಕರ್ಮವೆಂದೇ ಹೇಳಬೆಲ್ಲೆನಲ್ಲದೆ ಮತ್ತೇನು ಹೇಳಲಿಕ್ಕೂ ಅಸಮರ್ಥನು? ಅಂದು ಇಡಿ ರಾತ್ರಿ ನಿದ್ರೆ ಬರಲಿಲ್ಲ. ಅಲ್ಲಿಯ ನೆಲದ ಗುಣವೊ, ನನ್ನ ನಿದ್ದೆಯ ಗುಣವೊ ತಿಳಿಯದು ಮೇಲಾಗಿ ಮಧ್ಯಾಹ್ನದಲ್ಲಿಯೂ ಸಾಕಷ್ಟು ನಿದ್ದೆಯಾಗಿತ್ತು.

'ಯಾರಾದರೂ ನೋಡಿದರೆ!' ಎಂಬ ಭೀತಿಯೆ ಮಾಡಬಾರದ ಕೆಲಸ ಮಾಡಿಸುವುದನ್ನು ನಿಲ್ಲಿಸುತ್ತದೆ. ಒಂದು ವೇಳೆ ಅಂತಹ ಕೆಲಸ ಮಾಡಿದರೂ ಆ ಭೀತಿಯು ಮನುಷ್ಯನ ಹೃದಯವನ್ನು ಕ್ಷಣಕ್ಷಣಕ್ಕೆ ನಡುಗಿಸುತ್ತದೆ. ಈ ಹರಟೆಯ ನಾಯಕನೂ ಮಾಡಬಾರದ ಕೆಲಸ ಮಾಡಿದ; ಅದರ ಫಲವನ್ನು ಅನುಭವಿಸಿದ.

★

ಓದುತ್ತ ರಾತ್ರಿಕೊತ್ತು ಕಳೆಯಬೇಕೆಂದರೆ ಒಂದೆರಡು ದಿನದ ಮಟ್ಟಿಗೆ ಕಂಗುವ ಪ್ರಸಂಗವಿದ್ದುದರಿಂದ, ಯಾವ ಹೊತ್ತಿಗೆಗಳನ್ನೂ ಹೊತ್ತು ತರುವ ಗೋಜಿಗೆ ಹೋಗಿರಲಿಲ್ಲ. ಇಸ್ಪೇಟು ಆಟವಾಡಿ ಹೊತ್ತು ಕಳೆಯೋಣವೆ, ಜೊತೆಗಾರರೂ ಯಾರೂ ಇರಲಿಲ್ಲ. ಇಸ್ಪೇಟು ಜೋಡಂತೂ ಮೊದಲೇ ಇರಲಿಲ್ಲ. ಎಲ್ಲಿಯಾದರೂ ದೊರಕಿಸಬೇಕೆಂದರೆ ಅಸಾಧ್ಯವಿದ್ದಿದ್ದರೂ ಒಬ್ಬನೇ ಒಬ್ಬ ಕುಳಿತು ಆಡಬೇಕೇನು? ಮತ್ತೂ ಮತ್ತೂ ವೈಕುಂಠದಾಟವನ್ನು ಆಡಬೇಕು. ವೈಕುಂಠದಾಟನೇನು ಸುಲಭಸಾಧ್ಯವೆ? 'ಜೀವಂತನಾಗಿದ್ದಾಗಲೆ ಯಾಕೆ ವೈಕುಂಠದ ವಿಚಾರ?' ಎಂಬ ಲೌಕಿಕ ದೃಷ್ಟಿ ಬೇರೆ. ಅಂತೂ ಅಂದು ಆ ರಾತ್ರಿಯನ್ನು ಕಳೆಯಲು 'ಬ್ರಹ್ಮಚಾರಿ'ಯನ್ನು ಮೊರೆಹೊಗದ ಹೊರತು ಬೇರೊಂದು ಗತಿಯೇ ಇರಲಿಲ್ಲ. ಆದರೆ ಅವಶ್ಯವಿಲ್ಲದ ಒಂದು ಚಿತ್ರಪಟಕ್ಕಾಗಿ ನಾಲ್ಕಾಣೆ ಖರ್ಚು ಮಾಡಬೇಕೆ? ಮನಸ್ಸು ಒಗ್ಗದು, ಮೇಲಾಗಿ ಕಿಸೆಯಲ್ಲಿ ಅಷ್ಟಕ್ಕಷ್ಟೆ ರೊಕ್ಕ. 'ಹಾಗಾದರೆ ಹೇಗೆ ಮಾಡುವುದು?' ಎಂದು ಯೋಜನೆ ಹಾಕಿದೆ? ಆ ಊರಿನ ಇನ್ನೊಂದು ವೈಶಿಷ್ಟ್ಯವೊ ವೈಚಿತ್ರ್ಯವೊ ಎಂದರೆ ನೆಲಕ್ಕೆ ಒಂದಾಣೆ! ಅಂತೆಯೆ ಅಲ್ಲಿ ವೈಭವಶಾಲಿ ಏದನೆಯು ವಾರದ ವರೆಗೆ ಚಿತ್ರಪಟಗಳು ನಡೆಯುವುದೇನೂ ಅಚ್ಚರಿಯಲ್ಲವೆಂಬುದನ್ನು ನೀವು ಕಂಡುಕೊಳ್ಳಬಹುದು. ಎಂದೇನು, ನಾನೂ ಒಂದಾಣೆಯ....? ಛೆ! ನನ್ನ ಸಂಸ್ಕೃತಿಯೇನು, ನನ್ನ 'ಡಿಗ್ನಿ' ಏನು, ನನ್ನ 'ಡಿಗ್ನಿಟಿ' ಏನು? ಹಾಗಾಗಾದರೆ ಮಾಡುವುದೇನು? ಸಕ್ಕದ-ಕನ್ನಡಗಳ ನಡುವೆ ಹಾದಿಹಾಕಿದ ಮುದ್ದಣನ ಮಧ್ಯಮಾರ್ಗದಂತೆ ಒಂದು 'ಗೋಲ್ಡನ್ ಮೀನ್' ಅನ್ನು ಹುಡುಕಿದೆ-ಎಂದರೆ ಎರಡಾಣೆಯ 'ಬಾಲ್ಕನಿ ಟಿಕೆಟ್' ತೆಗೆಯಬೇಕೆಂದು. ಆದಕ್ಕಾದರೂ ಮನಸ್ಸು ಮೂಗು ಮುರಿಯುತ್ತಿತ್ತು, ಅಂತರಾತ್ಮವು ಅಲ್ಲಗಳೆಯುತ್ತಿತ್ತು, ಅಭಿಮಾನವು ಮೇರೆ ಮುದುರಿಸುತ್ತಿತ್ತು—ಆದರೆ 'ಬಜೆಟ್' ಉ 'ಹೂಂ' ಎಂದು ಗರ್ಜಿಸುತ್ತಿತ್ತು ಸರ್ವಾಧಿಕಾರಿಯಂತೆ. 'ಇಂತಹ ಇಸ್ತ್ರೀ ಆರಿವೆಗಳನ್ನು ಹಾಕಿಕೊಂಡು ಎರಡಾಣೆಯ ಸ್ಥಳಕ್ಕೆ ಹೋಗುವುದೆ?'— ಅಭಿಮಾನವು ಮನಸ್ಸಿನ ಅಳದಿಂದ ಮೇಲೆ ತೇಲಿಬಂದು ಒಳಗಣ್ಣಿಗೆ ಸುಳಿಯುವುದು. 'ಅಕಸ್ಮಾತ್ತಾಗಿ ಯಾರಾದರೂ ನೋಡಿದರೆ? ಅಯ್ಯೋ ಏನುಗತಿ!' ಮತ್ತೊಂದು

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಎಚ್ಚುಕಟ್ಟಾದ ಹೆಚ್ಚಿನ ಕೆಲಸ !

ಈ ಆಕಳಿಗೆ ೧೦ ಬ್ಲೇಡು !

ಮಧ್ಯಮವರ್ಗವನ್ನು ಹುಡುಕಿದೆ. (ದೇವಾ, ಜಗತ್ತಿನಲ್ಲಿ ಇಂತಹ ಮಧ್ಯಮವರ್ಗಗಳು ಇರದಿದ್ದರೆ ಜಗಳ್ಳು ಬದುಕುತ್ತಿತ್ತೆ?) 'ಏನು?' ಎಂದು ಕೇಳುವಿರಾ? ಇಸ್ತ್ರಿಯ ಆರಿಗೆಗಳನ್ನೆಲ್ಲಾ ತೆಗೆದಿಟ್ಟು ಹೋದರಾಯಿತು. ಮೇಲಾಗಿ ಬೇಸಗೆಯ ರಾತ್ರಿ; ವಿಶೇಷ ಸೆಕೆ! ಇಷ್ಟಲ್ಲದೆ ಬರಿದಲೆಯಿಂದ ಬರೆ ಶರ್ಟಿನ ಮೇಲೆ ಹೋದರೆ..ಇಷ್ಟು ವಿಚಾರಿ ಯಾರಾದರೂ ಪರಿಚಿತರು ಜೊಟ್ಟಿಯಾದರೆ ಗುರುತೂ ಕೂಡ ಹತ್ತಲಿಕ್ಕಿಲ್ಲವೆಂಬ ವಿಶೇಷ ಸಮಾಧಾನವೊಂದು. ಅಂತೂ ಕೊನೆಗೊಮ್ಮೆ ನಿಶ್ಚಿತವಾಯಿತು. ಎರಡಾಣೆಯ ಟಿಕಟ್ ತೆಗೆದೆ. ತಲೆ ಬೊಗ್ಗಿಸಿಕೊಂಡು ಒಳಕ್ಕೆ ಪ್ರವೇಶಿಸಿದೆ. ಹಾಯ್, ಹಾಯ್! ತಲೆಯೆತ್ತಿ ಮೆರೆಯುವಂತಹ ಕನ್ನಡ ಕಡ್ಡಿಗಲಿಗೆ ಜಗತ್ತಿನ ನೆನಪಿಗೆ ತಲೆತಗ್ಗಿಸುವ ಪ್ರಸಂಗ ಬಂದೀತೆ? 'ಏನುಮಾಡಬೇಕು—ಇಂತಹ ಆರ್ಥಿಕ ಮುಗ್ಗಟ್ಟಿನ ಪ್ರಸಂಗದಲ್ಲಿ!' ಎಂದು ಆರ್ಥಿಕಶಾಸ್ತ್ರ ನಿಪುಣನಂತೆ ನನ್ನ 'ಪರ್ಸ್' ಉತ್ತರ ಕೊಟ್ಟಿತು..ತನ್ನ ತೆರೆದಬಾಯಿಂದ. ಒಳಗೆ ಪ್ರವೇಶಿಸಿದೆ. ಅದಷ್ಟು ಬೇಗನೆ. ಜಾಗ್ರತೆಯಿಂದ ಪ್ರವೇಶಿಸಿದೆ—ನಾಲಾಣೆಯ ಜಾಗೆ ಎಲ್ಲದಿದ್ದರೂ ನಾಲಾಣೆಯ ಹತ್ತಿರಾದರೂ ಒಳ್ಳೆಯ ಜಾಗೆ ಸಿಕ್ಕಲೆಂದು. ಮನಸ್ಸಿಗೆ ಅಷ್ಟೇ ಸಮಾಧಾನವಾಗಬಹುದೆಂಬ ಆಶೆ. ಅಂತಹ ದೊಂದು ಜಾಗೆಯೂ ಸಿಕ್ಕಿತು. ಜಾಗೆಯೆಂದರೇನು..ಇಂತಹ ಪಾಯಾದ ಸ್ಥಳ ನಾಲಾಣೆಗೇನು ಸಿಕ್ಕಬೇಕು? ಬೆನ್ನ ಮೇಲೆಯೇ ಕಟಕಿ. ಸುಯ್ಯೆಂದು ಸೀಳುಗಾಳಿ ಬೀಸುವುದು. ಬರಾನುವಾದ ಜನಿಕೆಯಂತೆ ಸೀಮೆಂಟಿನ ಕಟ್ಟೆ, ಬೆನ್ನಿಗೆ ಚಾವಣ್ಣದ ತಣ್ಣಸ್ಸು ಲೇಪಿಸಿದಂತೆ. 'ಆಹಾ! ತಲೆಯ ಸೆಲೆಯೆ ಎಲೆಕ್ಟ್ರಿಕ್ ಫ್ಯಾನ್! ಈ ಸೌಖ್ಯ, ಈ ಸೊಗಸು ನಾಲಾಣೆಯ ಜಾಗೆಯ ಮೇಲೆ ಬರಲು ಸಾಧ್ಯವೆ?—ಆ ಕುರ್ಚಿ, ಅಯ್ಯೋ ತಗಣಿಗಳ ತವರ್ಮನೆ! ಹೀಗಿದ್ದೂ ಜನರು ನಾಲಾಣೆಯ ಜಾಗೆಯ ಮೇಲೆಯೇ ಹೋಗಲು ಯಾಕೆ ತವಕಪಡುತ್ತಾರೋ ತಿಳಿಯದು...' ವಿಚಾರಲಹರಿಯಲ್ಲಿ ಹಾಗೆ ಕುರ್ಚಿಯ ಕಡೆಗೆ ನೋಟವನ್ನು ಹೊರಳಿಸುವವನಿದ್ದೆ. ನೂರು ಮೈಲು ವೇಗದಿಂದ ಹೋಗುವ ಮೋಟಾರುಗಾಡಿಗೆ ಒಮ್ಮೆಲೆ ತಡೆಹಾಕಿದಂತಾಗಿ, ಮೋರೆ ತಗ್ಗಿಸಿದೆ.... 'ಯಾರಾದರೂ ನೋಡಿದರೆ?' ಎಂಬ ವಿಚಾರದ ಕೋಲ್ಮಿಂಚು ನನ್ನ ಕುತ್ತಿಗೆಗೆ ಲಗಾಮು ಹಾಕಿ ಈಚೆಗೆ ಎಳೆಯಿತು. 'ಬದುಕಿದೆ' ಎಂದುಕೊಂಡೆ. ಯಾರಾದರೂ ನನ್ನನ್ನು ನೋಡಿದ್ದರೆ? ಸತ್ತೇ ಹೋಗುತ್ತಿದ್ದೆನಲ್ಲ !

ವೇಳೆ ನೋಡಿದೆ— ಇನ್ನೂ ಹದಿನೈದು ನಿಮಿಷವಿದ್ದಿತು ಪ್ರಾರಂಭವಾಗುವುದಕ್ಕೆ. ಬಹಳ ಬೇಸರವೆನಿಸಿತು; ಬೇಸರಕ್ಕಿಂತಲೂ ಭಯವೇ ಹೆಚ್ಚೆನಿಸಿತೆನಬೇಕು. 'ಎಲ್ಲಿ ಏನೊ!'ಎಂಬುದೇ ಒಂದು ಪ್ರಶ್ನೆಯಿಂದ ತಂತಿಯ ಮೇಲೆ ಜೀಕಾಡುವ ಡೊಂಬಸಂತೆ ಆಯಿತು ನನ್ನ ಚಿತ್ತ! ಆದರೆ ಮರುಕ್ಷಣವೆ ಧೈರ್ಯ ತಂದು ಕೊಳ್ಳುವೆ. 'ಯಾರದೇನು ಭೀತಿ? ಆಂ? ಜಜೆಟ್ಟಿನಲ್ಲಿ 'ಡೆಫಿಸಿಟ್' ಬಿದ್ದರೇನು ಇವರಪ್ಪನ ಮನೆಯವರು ಕೊಡುತಾರೆಯೊ? ಹುಂ! ಏನು ತಪ್ಪಾಯಿತು ಒಂದು ದಿವಸ ಬೆಂಚಿನ ಮೇಲೆ ಕುಳಿತರೆ? ಮನೆಯಲ್ಲಿ ನಾವು ಬೆಂಚಿನ ಮೇಲೆ ಕೂಡುವುದಿಲ್ಲವೇನು? ಯಾಕೆ, ನೆಲದಮೇಲೆ ಕೂಡಬಾರದೆಂತಾಡುತ್ತೀರವಲ್ಲ!....ಆದರೆ ಅದು ಮನೆ, ಇದು ಸಮಾಜ!..ಬೆಂಕಿ ಹಚ್ಚಿತು ಈ ಸಮಾಜಕ್ಕೆ! ಈ ಸಮಾಜದ ಭೀತಿಗಾಗಿ ನಮ್ಮ ಹಾಸಿಗೆ ಏಕಾರಿ—ಅಲ್ಲ ನಮ್ಮ ಹಣದ ಆಳತೆ ಏಕಾರಿ—ಕಾಲುಚಾಚಬೇಕೆ? ಅರ್ಥಾತ್ ಖರ್ಚುಮಾಡಬೇಕೆ? ಇದನ್ನೇ ಕಲಿಸುವುದೇನು ನಮ್ಮ ಸಮಾಜ? ಎಂದಮೇಲೆ ಯಾವ ಸಮಾಜವು ನಮ್ಮ ಲಹಿತವನ್ನು ಬಯಸುವುದೊ, ಆ ಸಮಾಜದ ಭೀತಿ, ಆ ಸಮಾಜದ ಪರವೆ ನಮಗೇಕೆ? ಯಾರಪ್ಪನ ಮನೆಯ ಹೆದರಿಕೆ !....' 'ನನಗೆ ಅಂದವರಾರು, ಆಡಿದವರಾರು? ಎಲ್ಲಿದೆ ಸಮಾಜ ! ಎಲ್ಲಿದೆ ನನ್ನ ಚಿತ್ತ? ನನ್ನನ್ನು ಕೇಳಿದವರು ಯಾರೂ ಇಲ್ಲ; ಕೇಳ್ಗೆಯ್ದವರೂ ಯಾರೂ ಇಲ್ಲ. ಎಲ್ಲವೂ ನನ್ನ ಅಂತರಾತ್ಮನ ಪೃಚ್ಛೆಗಳು— ಆದಕ್ಕೆ ನನ್ನ ಮನಸ್ಸಿನ ಉತ್ತರಗಳು ಇಷ್ಟೆ! ನಿಜವಾಗಿಯೂ ಸಮಾಜವು ನಿರ್ದುಷ್ಟವಾಗಿಯೇ ಇರುತ್ತದೆ. ನಮ್ಮ ದೋಷಗಳ ಆರಿವೇ ನಮಗೆ ಉಂಟಾಗಿ, ನಮ್ಮ ದುರ್ಬಲತೆಗಳನ್ನು ಹುಗಿದುಕೊಳ್ಳುವುದಕ್ಕಾಗಿ ನಾವು ಸಮಾಜದ ಮೇಲೆ ಆಕ್ರೋಶಮಾಡುತ್ತೇವೆ ಇಷ್ಟೆ!' ಒಮ್ಮೆ ತತ್ತ್ವಜ್ಞಾನ, ಒಮ್ಮೆ ಸಮಾಜವಿಜ್ಞಾನ ಒಮ್ಮೆ ಆರ್ಥಿಕಶಾಸ್ತ್ರ ಈ ತ್ರಿಕೂಟಗಳ ತಿರುಗಣಿಯಲ್ಲಿ ನನ್ನ ಅಂತರಾತ್ಮವು ಸಿಕ್ಕು ಹೊಯ್ದಾಡಹತ್ತಿತು—ಗಾಳಕ್ಕೆ ಸಿಕ್ಕ ವಿಾನದಂತೆ. ಯಾರಾದರೂ ಜೊತೆಗಾರರು ಸಿಕ್ಕರೆ ಕರಟಿ ಹೂಡೆಯಬೇಕೆಂದು ನೋಡಿದೆ. ಆದರೆ ಎರಡಾಣೆಯ ಜಾಗೆಯ ಮೇಲೆ ನನಗೆ ಜೊತೆಗಾರರು ಯಾರು ಸಿಕ್ಕಬೇಕು! ಸಿಕ್ಕರೂ ಒಂದೆರೀತಿ ಗುಣವೇ! ಏಕೆಂದರೆ 'ನಾನೂ ಇವರೂ ಸಮಾನಶೀಲತೆಯಿಂದ ಸಮಾಧಾನ ಪಡೆಯಬಹುದು' ಎಂಬ ಹುರುಪಿನ ಆಶೆ. ಹೋಗಲಿ, ಹೀಗೆ ನೋಡುನೋಡುತ್ತ 'ಯಾರಾದರೂ ನಮ್ಮ ಆಳುಮನುಷ್ಯರೊ, ನಮ್ಮ ಶಿಷ್ಯರೊ ಇಲ್ಲಿಯೆ ಕುಳಿತಿದ್ದರೆ ಎಂತಹ ಭಜೀತಿ!' ಎಂದು ಮತ್ತೆ ಮುದುರಿಕೊಂಡು ಕುಳಿತೆ.

ಅಂತೂ ಒಮ್ಮೆ ಕತ್ತಲೆಯಾಯಿತು. ಕತ್ತಲೆಯಲ್ಲಿ ಎಷ್ಟು ಸೌಖ್ಯವಿದೆಯೆಂಬ ಗುಟ್ಟು ಜನರಿಗೇನು ಗೊತ್ತು! ನಿನೇಮೂ ಸುರುವಾಯಿತು. ಮನಸ್ಸು ಹಗುರಾಯಿತು. ಈಗ ಮಾತ್ರ ನಾಲ್ಕು ದಿಕ್ಕುಗಳ ಕಡೆಗೆ—ಎಂಟೂ ದಿಕ್ಕುಗಳ ಕಡೆಗೆ—ಏಳೆ ಹತ್ತೂ ದಿಕ್ಕುಗಳ ಕಡೆಗೆ ನನ್ನ ಜಾಜ್ವಲ್ಯಮಾನವಾದ ದೃಷ್ಟಿಕಿರಣಗಳನ್ನು ಸೂರೆ ಸೂರೆ ಮಾಡಬಹುದೆಂಬ ಹೆಮ್ಮೆಯಿಂದ, ಎಲ್ಲ ಕಡೆಗೂ ನೋಡಿದೆ. ನಿನೇಮವನ್ನು ನೋಡಿದೆ. ಸಂನ್ಯಾಸಿಯೊಬ್ಬನು ಸೂಳೆಗೇರಿಯಿಂದ ಹೊರಬಿದ್ದುದಕ್ಕಿಂತ ಹೆಚ್ಚಾದ ಆನಂದ ನನಗಾಯಿತು. (ಹೆಚ್ಚಾದ ಆನಂದ ಏಕೆಂದರೆ ಸಾಂಪ್ರದಾಯಿಕ ಕವಿಗಳ ಕೈಯಲ್ಲಿ ಸಂನ್ಯಾಸಿಗಳು ಸೂಳೆಗೇರಿಯನ್ನು ಕಾಣುವುದೂ ಅನುಚಿತವಲ್ಲ.) ಸ್ವಾತಂತ್ರ್ಯ ಸಾಮ್ರಾಜ್ಯದ ಅಧಿಪತಿಯಾಗಿ ಹತ್ತು ನಿಮಿಷ ಕೂಡ ಕಳೆದಿರಲಿಲ್ಲ. ಕಥಾನಾಯಿಕೆಯ ಸುಸ್ವರವಾದ ಸಂಗೀತ ಮುಗಿಯುವ ಮೊದಲೆ 'ಸೆಂಗ್‌ದಾಣೇ' ಎಂಬ ಜೋಡು ಪಂಚಮಸ್ವರವು ಕಿವಿಯ ಪಟಲಗಳನ್ನು ಭೇದಿಸಿ ಅಪ್ಪಳಿಸಲಾಗಿ, ಮತ್ತೆ ನನ್ನ ಅಭಿಮಾನದ ಕಿಚ್ಚು ದಾವಾಗ್ನಿಯಂತೆ, ಪಡವಾಗ್ನಿಯಂತೆ ಭುಗಿಲೆಂದು ಹಬ್ಬಿ, ನನ್ನ ಅಂಗಾಂಗಗಳನ್ನು ಕಮರಿಸಿ ಬಿಟ್ಟಿತು. 'ದೇವರೆ, ಅಂಕಕ್ಕೊಮ್ಮೆ ದೀಪಗಳು ಹತ್ತತೊಡಗಿದರೆ ನನ್ನ ಗತಿ?' ಎಂದು ಮೊರೆಯಿಟ್ಟೆ. ಜೋಡು ಯಂತ್ರಗಳನ್ನು ಇಡಲು ದಿಕ್ಕಿಲ್ಲದ ಆ ಹಾಳು ನಿನಿಮಾ ಸಂಚಾಲಕರನ್ನು ಶಪಿಸಿದ್ದೇ ಶಪಿಸಿದ್ದು!

ಒಂದೆರಡು ಅಂಕಗಳು ಮುಗಿಯುತ್ತಲೆ ನನಗೆ ಎಷ್ಟೋ ಧೈರ್ಯ ಬಂದುಬಿಟ್ಟಿತ್ತು. ನನ್ನ ಪಟ್ಟಿಗಲ್ಲಲ್ಲಿ ಕುಳಿತವರೊಬ್ಬರು ನನಗೆ ಒಂದು ಹಿಡಿ ಸೇಂಗಾ ಕೊಟ್ಟರು. ಬಂದವ್ದೇ ಪಂಚಾಮೃತ ವೆಂದು ನಾನೂ 'ರಿಸೀವ್ಡ್ ವುಯಿಥ್ ಥ್ಯಾಂಕ್ಸ್' ಎಂದೆ. 'ಇರಲಿ ಇದೂ ಒಂದು ಅನುಭವ' ಎಂದು 'ಬಂದದ್ದೆಲ್ಲಾ ಬರಲಿ!' ಎಂಬ ದಾಸರ ಮನೋವೃತ್ತಿಯನ್ನೂ ತಾಳಿದೆ (ತಾಳದಿದ್ದರೆ ಗತ್ಯಂತರ ವೆಲ್ಲಿದೆ?). ಒಂದಾಣೆಯ ಸ್ಥಳದಲ್ಲಿ ಕುಳಿತ ಸಮಾಜದ ಪರಿಚಯ ವಾದರೂ ಆಯಿತು ಎಂದುಕೊಂಡೆ. ಮುತ್ತು ಕೊಡುವ ಪ್ರಸಂಗದಲ್ಲಿ ನಾಯಕ-ನಾಯಿಕೆಯರಿಗಿಂತ ಎಮಿಲಾಗಿ ಜಾಯಿ ಜಪ್ಪರಿಸುವುದು — ಹಾಡಿಗೊಮ್ಮೆ 'ಒನ್ಸ್ ಮೋರ್',— ಮಾತಿಗೊಮ್ಮೆ ಹುರುಪಿನ ಉದ್ಗಾರ—ಇವೆಲ್ಲವು ಬಹುಮೋಜಿನಿಸಿದುವು. ನನಗೊ, ಆ ಉದ್ಗಾರಸ್ವಾತಂತ್ರ್ಯವೆಲ್ಲಿ? ನಾನೇನು ಮಾನವನಲ್ಲವೆ? ಶೃಂಗಾರಕ್ಕೆ ನನಗೂ ಮೈ ಜುಂ ಎನ್ನುವುದಿಲ್ಲವೆ? ನಾನು ನನ್ನ ಉದ್ಗಾರವನ್ನು ಉಚ್ಚ ಸಂಸ್ಕೃತಿಯ ವೇಷದಲ್ಲಿ ಬಚ್ಚಿಡುವ ಆತ್ಮವಂಚಕನು. ಅಭಿಮಾನ-ಅಹಂಭಾವಗಳ ಹೆಚ್ಚುವಿಕೆಯೆ ಉಚ್ಚ ಸಂಸ್ಕೃತಿಯ ಸಲ್ಲಕ್ಷಣವೆನ್ನೋಣವೆ? ಒಂದಾಣೆಯ ಜಾಗೆಯ ಜನರ ಸ್ವಾತಂತ್ರ್ಯವೆಷ್ಟು? ಎಲ್ಲಿ ಕುಳಿತರೇನು ಅವರಿಗೆ? ಯಾವ ಮಾನಕ್ಕೆ ಧಕ್ಕೆಯಾಗಬೇಕಾಗಿದೆ ಇವರಿಗೆ?..... ನಿನೇಮಾಕ್ಕೆ ಹೋಗಿ ನಿದ್ರೆಯೇನೊ ಹೋಯಿತು. ಆದರೆ ನಿನೇಮವನ್ನೇನೂ ನೋಡುವ್ದಾಗಲಿಲ್ಲ ನನ್ನಿಂದ. ಆ ನೂಲಿನ ತೆರೆಯ ಮೇಲಿನ ಚಿತ್ರಪಟಕ್ಕಿಂತ ನನ್ನ ಮನದ ತೆರೆಯ ಮೇಲೆ ನಡೆದ ಚಿತ್ರಪಟವೇ ಹೆಚ್ಚು ಕುತೂಹಲದ್ದಾಗಿ ಪರಿಣಮಿಸಿದ್ದಿತು.

'ವಿಶ್ರಾಂತಿ'ಯಾಯಿತು! ಆದರೆ ನಿನಿಮಾ ಪೂರ್ಣ ಮುಗಿದ ಹೊರತು ನನಗೆಲ್ಲಿದೆ ವಿಶ್ರಾಂತಿ? 'Half the battle is won' ಎಂಬಷ್ಟೆ ಸಮಾಧಾನವೆಂಬ ದೃಷ್ಟಿಯಿಂದ ಆರೆವಿಶ್ರಾಂತಿಯಾಯಿ ತೆನ್ನಬಹುದು ಬೇಕಾದರೆ. ಪೂರ್ಣ ಮುಗಿಯುವವರೆಗೆ ಕೂಡುವುದು ನನ್ನಿಂದೇನು ಸಾಧ್ಯವಿಲ್ಲವೆಂಬಂತೆ ತೋರಿತು. ಆದರೆ ಈ ಜಾತ್ರೆಯಿಂದ ಅ ಜ್ಞಾತನಾಗಿ ಹೊರಬೀಳುವ ಬಗೆ ಹೇಗೆ? (ಅಜ್ಞಾತವಾಸದಲ್ಲಿ ಒಂದು ವರುಷ ಕಳೆದ ಪಾಂಡವರು ನನ್ನ ಪರಿಸ್ಥಿತಿಯಲ್ಲಿ ಒಂದು ತಾಸನ್ನು ಕೂಡ ಕಳೆಯುತ್ತಿದ್ದರಲಿಲ್ಲ—ಬರೆದು ಕೊಡುವೆ ಬೇಕಾದರೆ!) ಸರಿ, ವಿಶ್ರಾಂತಿ ಮುಗಿದ ಮೇಲೆ ನಾವು ಮೆಲ್ಲನೆ ಹೊರಗೆ ಬೀಳೋಣವೆಂದು ನಿರ್ಧರಿಸಿಕೊಂಡು ಕುಳಿತೆ. ಹೇಗೊ ಮತ್ತೆ ಹತ್ತು ನಿಮಿಷ ಕಳೆದೆ. ಮೆಲ್ಲನೆ ಹೊರಬಿದ್ದೆ. ನಾಲ್ಕಾಣೆಯ Exit ನಿಂದಾದರೂ ಹೋಗೋಣವೆಂದು ಮೆಲ್ಲನೆ ಅಜೆಗೆ ಜಿಗಿದೆ. ನನ್ನ ಮನಸ್ಸಿನ ಅಲ್ಪತೆಗೆ ತಕ್ಕ ಶಾಸನವಾಯಿತು. ಯಾರೋ ಒಬ್ಬರು ನನ್ನ ಕೈ ಹಿಡಿದರು! ನನ್ನ ಎದೆ ಹಾರಿಹತ್ತಿತು. 'ಎರಡಾಣೆಯ ಚಾಣಕನಕ್ಕಾಗಿ ನಾಲ್ಕಾಣೆ ದಂಡ ತೆರುವ ಹೊಕ್ಕುಬಂದಿತೇನೊ' ಎಂದು ಕಳವಳಗೊಂಡೆ. ಅವನು ಗೇಟ್‌ಮನ್ನನೇ ಇರಬೇಕೆಂದು ನನ್ನ ತರ್ಕ. 'ಮನೆಗೆ ಹೋಗತೀನೊ' ಎಂದು ನಡುಗುವ ದನಿಯಲ್ಲಿ ನುಡಿದೆ. ನನ್ನ ದುರ್ದೈವ. ನನ್ನ ಕೈ ಹಿಡಿದವನು ಗೇಟ್‌ಮನ್ನನಾಗಿರಲಿಲ್ಲ; ನನ್ನ ದೂರದ ಒಬ್ಬ ಪದವೀಧರ ಮಿತ್ರ! .... ಮಬ್ಬುಗತ್ತಲೆಯಲ್ಲಿ ಅವರು ನನ್ನನ್ನು ಗುರುತಿಸಿದರು. 'ಹಲೋ' ಎಂದು ನಮಸ್ಕರಿಸಿದರು. ಇದೇನು ಅರ್ಧಕ್ಕೆ ಎದ್ದಿರಲ್ಲ?' ಎಂದರು. ಹ್ಯಾಮಲೆಟ್‌ನ ನಾಟಕ ನೋಡಿದ ಅವನ ಕಕ್ಕುಲಿಗಿಂತ ವಿಪರೀತವಾಗಿತ್ತು ನನ್ನ ಮನಃಸ್ಥಿತಿ. ....ನನಗೆ ಬಾಯಿಯಂತೂ ಹೋಗಿಬಿಟ್ಟಿತ್ತು. ನಮಸ್ಕರಿಸಲು ಕೈಯೆತ್ತಬೇಕೆಂದೆ; ಎತ್ತಲಾರದಷ್ಟು ಭಾರವಾಗಿತ್ತು ಕೈ.

ಸಂಗೀತಕಲಾಪ್ರವೇಶ

★

ಸಂಗೀತಕ್ಕೆ ಸಂಬಂಧಿಸಿದ ಎಲ್ಲ ಬಗೆಯ
ವಾದ್ಯಗಳನ್ನು ಕಲಿಯಲು ಮುಂಬಯಿ
ವಿದ್ಯಾಖಾತೆಯಿಂದಿದು ಮಂಜೂರಾಗಿದೆ.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

ಶ್ರೀಸರಸ್ವತೀ ಸಂಗೀತ ವಿದ್ಯಾಲಯ
ಗಣೇಶಪೇಟೆ, ಹುಬ್ಬಳ್ಳಿ.

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಬಚ್ಚುಕಟ್ಟಾದ ಹೆಚ್ಚಿನ ಕೆಲಸ !

೫ ಆಣೆಗೆ ೧೦ ಬ್ಲೇಡು !

ಪರ್ಯವಸಾನವಾಗಿದ್ದಿತು. ಆ ಸಮಯದಲ್ಲಿ ಅವಳ ಮನಸ್ಸಿನಲ್ಲಿ ಏನೇನು ಭಾವನೆಗಳು ಹಾದುಹೋದವೋ ಯಾರಿಗೆ ಗೊತ್ತು ? ಅವಳ ಮುಖದಲ್ಲಿ ಮಾತ್ರ ಯಾವ ಭಾವನೆಯೂ ಕಾಣಿಸಲಿಲ್ಲ. ಅವಳು ಸಾಮಾನ್ಯವಾಗಿ ಮಾತನಾಡುವಾಗ ಮುಖದಲ್ಲಿ ಕಾಣಿಸಿಕೊಳ್ಳುತ್ತಿದ್ದ ಭಾವನೆಗಳೂ ಕಾಣಿಸಲಿಲ್ಲ. ಅವಳು ಮಾತನಾಡಿದ್ದು ಮುಗಿದ ಮೇಲೆ ಅವಳ ಮುಖ ಒಂದು ಕ್ಷಣ ಕಳೆಗುಂದಿದಂತೆ ಕಂಡಿತು. ಆಮೇಲೆ ಅವಳು ಮುಖವನ್ನು ಕೆಳಗೆ ಮಾಡಿಕೊಂಡು ಕುಳಿತಳು. ಅವಳ ಕಣ್ಣುಗಳಲ್ಲಿ ಕಣ್ಣೀರು ಜಿನುಗಿತು. ಅವಳು ಅಳುತ್ತಿದ್ದಳು. ಅವಳ ಅಳು ಕಂಡು ನಾನು ಗಾಬರಿಯಾದೆ. ಅವಳು ಅಳುವುದನ್ನು ನಾನು ಎಂದೂ ನೋಡಿರಲಿಲ್ಲ. ಅವಳು ಅಳುವುದನ್ನು ಯಾರೂ ಎಂದೂ ನೋಡಿರಲಿಲ್ಲ. ಅವಳು ಅಳುವುದನ್ನು ಯಾರೂ ಎಂದೂ ನೋಡಿರಲಾರರು. ಅವಳು ಅಳುವುದನ್ನು ಯಾರೂ ಎಂದೂ ನೋಡಿರಲಾರರು ಎಂದು ನಾನು ಅಂದುಕೊಂಡಿದ್ದೆ

ಅಂತೂ ಒಮ್ಮೆ ಕತ್ತಲೆಯಾಯಿತು. ಕತ್ತಲೆಯಲ್ಲಿ ಎಷ್ಟು ಸೌಖ್ಯವಿದೆಯೆಂಬ ಗುಟ್ಟು ಜನರಿಗೇನು ಗೊತ್ತು! ಸಿನೇಮಾ ಸುರುವಾಯಿತು. ಮನಸ್ಸು ಹಗುರಾಯಿತು. ಈಗ ಮಾತ್ರ ನಾಲ್ಕೂ ದಿಕ್ಕುಗಳ ಕಡೆಗೆ—ಎಂಟೂ ದಿಕ್ಕುಗಳ ಕಡೆಗೆ—ಏಕೆ ಹತ್ತೂ ದಿಕ್ಕುಗಳ ಕಡೆಗೆ ನನ್ನ ಜಾಜ್ವಲ್ಯಮಾನವಾದ ದೃಷ್ಟಿಕಿರಣಗಳನ್ನು ಸೂರೆ ಸೂರೆ ಮಾಡಬಹುದೆಂಬ ಹೆಮ್ಮೆಯಿಂದ, ಎಲ್ಲ ಕಡೆಗೂ ನೋಡಿದೆ. ಸಿನೇಮವನ್ನು ನೋಡಿದೆ. ಸಂನ್ಯಾಸಿಯೊಬ್ಬನು ಸೂಳೆಗೇರಿಯಿಂದ ಹೊರಬಿದ್ದುದಕ್ಕಿಂತ ಹೆಚ್ಚಾದ ಆನಂದ ನನಗಾಯಿತು. (ಹೆಚ್ಚಾದ ಆನಂದ ಏಕೆಂದರೆ ಸಾಂಪ್ರದಾಯಿಕ ಕವಿಗಳ ಕೈಯಲ್ಲಿ ಸಂನ್ಯಾಸಿಗಳು ಸೂಳೆಗೇರಿಯನ್ನು ಕಾಣುವುದೂ ಅನುಚಿತವಲ್ಲ.) ಸ್ವಾತಂತ್ರ್ಯ ಸಾಮ್ರಾಜ್ಯದ ಅಧಿಪತಿಯಾಗಿ ಹತ್ತು ನಿಮಿಷ ಕೂಡ ಕಳೆದಿರಲಿಲ್ಲ. ಕಥಾನಾಯಿಕೆಯ ಸುಸ್ವರವಾದ ಸಂಗೀತ ಮುಗಿಯುವ ಮೊದಲೆ 'ಸೆಂಗ್‌ದಾಜೀ' ಎಂಬ ಜೋಡು ಪಂಚಮಸ್ವರವು ಕಿವಿಯ ಪಟಲಗಳನ್ನು ಭೇದಿಸಿ ಅಪ್ಪಳಿಸಲಾಗಿ, ಮತ್ತೆ ನನ್ನ ಅಭಿಮಾನದ ಕಿಚ್ಚು ದಾವಾಗ್ನಿಯಂತೆ, ವಡವಾಗ್ನಿಯಂತೆ ಭುಗಿಲೆಂದು ಹಬ್ಬಿ, ನನ್ನ ಅಂಗಾಂಗಗಳನ್ನು ಕವುರಿಸಿ ಬಿಟ್ಟಿತು. 'ದೇವರೆ, ಅಂಕಕ್ಕೊಮ್ಮೆ ದೀಪಗಳು ಹತ್ತತೊಡಗಿದರೆ ನನ್ನ ಗತಿ?' ಎಂದು ಮೊರೆಯಿಟ್ಟೆ. ಜೋಡು ಯಂತ್ರಗಳನ್ನು ಇಡಲು ದಿಕ್ಕಿಲ್ಲದ ಆ ಹಾಳು ಸಿನಿಮಾ ಸಂಚಾಲಕರನ್ನು ಶಪಿಸಿದ್ದೇ ಶಪಿಸಿದ್ದು!

ಒಂದೆರಡು ಅಂಕಗಳು ಮುಗಿಯುತ್ತಲೆ ನನಗೆ ಎಷ್ಟೋ ಧೈರ್ಯ ಬಂದುಬಿಟ್ಟಿತ್ತು. ನನ್ನ ಮುಗ್ಗಿಲಲ್ಲಿ ಕುಳಿತವರೊಬ್ಬರು ನನಗೆ ಒಂದು ಹಿಡಿ ಸೇಂಗಾ ಕೊಟ್ಟರು. ಬಂದದ್ದೇ ಪಂಚಾಮೃತವೆಂದು ನಾನೂ 'ರಿಸೀವ್ಡ್ ವುಯಿಥ್ ಥ್ಯಾಂಕ್ಸ್' ಎಂದೆ. 'ಇದಲಿ ಇದೂ ಒಂದು ಅನುಭವ' ಎಂದು 'ಬಂದದ್ದೆಲ್ಲಾ ಬರಲಿ!' ಎಂಬ ದಾಸರ ಮನೋವೃತ್ತಿಯನ್ನೂ ತಾಳಿದೆ (ತಾಳದಿದ್ದರೆ ಗತ್ಯಂತರ ವೆಲ್ಲಿದೆ?). ಒಂದಾಣೆಯ ಸ್ಥಳದಲ್ಲಿ ಕುಳಿತ ಸಮಾಜದ ಪರಿಚಯವಾದರೂ ಆಯಿತು ಎಂದುಕೊಂಡೆ. ಮುತ್ತು ಕೊಡುವ ಪ್ರಸಂಗದಲ್ಲಿ ನಾಯಕ-ನಾಯಿಕೆಯರಿಗಿಂತ ಮಿಗಿಲಾಗಿ ಬಾಯಿ ಜಪ್ಪರಿಸುವುದು — ಹಾಡಿಗೊಮ್ಮೆ 'ಒನ್ಸ್ ಮೋರ್', — ಮಾತಿಗೊಮ್ಮೆ ಹುರುಪಿನ ಉದ್ಗಾರ—ಇವೆಲ್ಲವು ಬಹುವೋಜೆನಿಸಿದುವು. ನನಗೊ, ಆ ಉದ್ಗಾರಸ್ವಾತಂತ್ರ್ಯವೆಲ್ಲಿ? ನಾನೇನು ಮಾನವನಲ್ಲವೆ? ಶೃಂಗಾರಕ್ಕೆ ನನಗೂ ಮೈ ಜುಂ ಎನ್ನುವುದಿಲ್ಲವೆ? ನಾನು ನನ್ನ ಉದ್ಗಾರವನ್ನು ಉಚ್ಚ ಸಂಸ್ಕೃತಿಯ ವೇಷದಲ್ಲಿ ಬಚ್ಚಿಡುವ ಆತ್ಮವಂಚಕನು. ಅಭಿಮಾನ-ಅಹಂಭಾವಗಳ ಹೆಚ್ಚುವಿಕೆಯೆ ಉಚ್ಚ-ಸಂಸ್ಕೃತಿಯ ಸಲ್ಲಕ್ಷಣವೆನ್ನೋಣವೆ? ಒಂದಾಣೆಯ ಜಾಗೆಯ ಜನರ ಸ್ವಾತಂತ್ರ್ಯವೆಷ್ಟು? ಎಲ್ಲಿ ಕುಳಿತರೇನು ಅವರಿಗೆ? ಯಾವ ಮಾನಕ್ಕೆ ಧಕ್ಕೆಯಾಗಬೇಕಾಗಿದೆ ಅವರಿಗೆ?..... ಸಿನೇಮಾಕ್ಕೆ ಹೋಗಿ ನಿದ್ರೆಯೇನೊ ಹೋಯಿತು. ಆದರೆ ಸಿನೇಮವನ್ನೇನೂ ನೋಡುವುದಾಗಲಿಲ್ಲ ನನ್ನಿಂದ. ಆ ನೂಲಿನ ತೆರೆಯ ಮೇಲಿನ ಚಿತ್ರ-ಪಟಕ್ಕಿಂತ ನನ್ನ ಮನದ ತೆರೆಯ ಮೇಲೆ ನಡೆದ ಚಿತ್ರಪಟವೇ ಹೆಚ್ಚು ಕುತೂಹಲದ್ದಾಗಿ ಪರಿಣಮಿಸಿದ್ದಿತು.

'ವಿಶ್ರಾಂತಿ'ಯಾಯಿತು! ಆದರೆ ಸಿನಿಮಾ ಪೂರ್ಣ ಮುಗಿದ ಹೊರತು ನನಗೆಲ್ಲಿದೆ ವಿಶ್ರಾಂತಿ? 'Half the battle is won' ಎಂಬಷ್ಟೆ ಸಮಾಧಾನವೆಂಬ ದೃಷ್ಟಿಯಿಂದ ಅರೆವಿಶ್ರಾಂತಿಯಾಯಿತೆನ್ನಬಹುದು ಬೇಕಾದರೆ. ಪೂರ್ಣ ಮುಗಿಯುವವರೆಗೆ ಕೂಡುವುದು ನನ್ನಿಂದೇನು ಸಾಧ್ಯವಿಲ್ಲವೆಂಬಂತೆ ತೋರಿತು. ಆದರೆ ಈ ಜಾತ್ರೆಯಿಂದ ಆ ಜ್ಞಾತನಾಗಿ ಹೊರಬೀಳುವ ಬಗೆ ಹೇಗೆ? (ಅಜ್ಞಾತವಾಸದಲ್ಲಿ ಒಂದು ವರುಷ ಕಳೆದ ಪಾಂಡವರು ನನ್ನ ಪರಿಸ್ಥಿತಿಯಲ್ಲಿ ಒಂದು ತಾಸನ್ನು ಕೂಡ ಕಳೆಯುತ್ತಿದ್ದರಲಿಲ್ಲ—ಬರೆದು ಕೊಡುವೆ ಬೇಕಾದರೆ!) ಸರಿ, ವಿಶ್ರಾಂತಿ ಮುಗಿದ ಮೇಲೆ ನಾವು ಮೆಲ್ಲನೆ ಹೊರಗೆ ಬೀಳೋಣವೆಂದು ನಿರ್ಧರಿಸಿಕೊಂಡು ಕುಳಿತೆ. ಹೇಗೊ ಮತ್ತೆ ಹತ್ತು ನಿಮಿಷ ಕಳೆದೆ. ಮೆಲ್ಲನೆ ಹೊರಬಿದ್ದೆ. ನಾಲ್ಕಾಣೆಯ Exit ನಿಂದಾದರೂ ಹೋಗೋಣವೆಂದು ಮೆಲ್ಲನೆ ಆಜೆಗೆ ಜಿಗಿದೆ. ನನ್ನ ಮನಸ್ಸಿನ ಅಲ್ಪತೆಗೆ ತಕ್ಕ ಶಾಸನವಾಯಿತು. ಯಾರೋ ಒಬ್ಬರು ನನ್ನ ಕೈ ಹಿಡಿದರು! ನನ್ನ ಎದೆ ಹಾರಹತ್ತಿತು. 'ಎರಡಾಣೆಯ ಚಾಣಕನಕ್ಕಾಗಿ ನಾಲ್ಕಾಣೆ ದಂಡ ತೆರುವ ಹೊತ್ತು ಬಂದಿತೇನೊ' ಎಂದು ಕಳವಳಗೊಂಡೆ. ಅವನು ಗೇಟ್‌ಮನ್ನನೇ ಇರಬೇಕೆಂದು ನನ್ನ ತರ್ಕ. 'ಮನೆಗೆ ಹೋಗತೇನೊ' ಎಂದು ನಡುಗುವ ದನಿಯಲ್ಲಿ ನುಡಿದೆ. ನನ್ನ ದುರ್ದೈವ. ನನ್ನ ಕೈ ಹಿಡಿದವನು ಗೇಟ್‌ಮನ್ನನಾಗಿರಲಿಲ್ಲ; ನನ್ನ ದೂರದ ಒಬ್ಬ ಪದವೀಧರ ಮಿತ್ರ! .... ಮಬ್ಬುಗತ್ತಲೆಯಲ್ಲಿ ಅವರು ನನ್ನನ್ನು ಗುರುತಿಸಿದರು. 'ಹಲೋ' ಎಂದು ನಮಸ್ಕರಿಸಿದರು. ಇದೇನು ಅರ್ಧಕ್ಕೆ ಎದ್ದಿರಲ್ಲ!' ಎಂದರು. ಹ್ಯಾಮಲೆಟ್‌ನ ನಾಟಕ ನೋಡಿದ ಅವನ ಕಕ್ಕುಸಿಗಿಂತ ವಿಪರೀತವಾಗಿತ್ತು ನನ್ನ ಮನಃಸ್ಥಿತಿ. ....ನನಗೆ ಬಾಯಿಯಂತೂ ಹೋಗಿಬಿಟ್ಟಿತ್ತು. ನಮಸ್ಕರಿಸಲು ಕೈಯೆತ್ತಬೇಕೆಂದೆ; ಎತ್ತಲಾರದಷ್ಟು ಭಾರವಾಗಿತ್ತು ಕೈ.

ಸಂಗೀತಕಲಾಪ್ರವೇಶ

★

ಸಂಗೀತಕ್ಕೆ ಸಂಬಂಧಿಸಿದ ಎಲ್ಲ ಬಗೆಯ
ವಾದ್ಯಗಳನ್ನು ಕಲಿಯಲು ಮುಂಬಯಿ
ವಿದ್ಯಾಲಾತೆಯಿಂದಿದು ಮಂಜೂರಾಗಿದೆ.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

ಶ್ರೀಸರಸ್ವತೀ ಸಂಗೀತ ವಿದ್ಯಾಲಯ
ಗಣೇಶಪೇಟೆ, ಹುಬ್ಬಳ್ಳಿ.

ಎಲೆ ಮುಗಿಲೆ!

★

ಲೇ. ಲೇಧರಕವಾ, ಮೈಸೂರು

೧

ಕೆಂಪುಕೆಂಪಿನ ಕುಡಿಯ ಜೊಂಪ ಭೂದೇವಿಯರ
ಕರ್ಣಕುಂಡಲವಾಗಿ ತೋಲುತಿಹುದು;
ತಂಪಿಗಾಸರೆಯಾದ ಶಶಿಯರಸ ದೆಸೆದೆಸೆಗೆ
ತಂಪೊಸೆದು ನೀಡುತ್ತ ನೋಡುತಿಹನು!
ಪರ್ಣಾಯಿಪೂದಳಕ್ತೆತ್ತ ತರು-ಲತೆಗಳಲಿ
ತುಂಬುಸಿರಿ ಮೆಯ್ಯೆತ್ತು ನಲಿಯುತಿಹುದು!
ಕಂಗಳಿಗೆ ಹಬ್ಬವಿದೆ ಮನಕೆ ನಲ್ಗಬ್ಬವಿದೆ.
ಇರುಳಲೆತಕಾಗಿ ಬಾನ್ದಿಬ್ಬವಿಹುದು!

೨

ಚಿತ್ರವಿಚಿತ್ರದ ಚೈತ್ರದೇವಿ ಬಗಿದಾಡುತಿರೆ
ಚಿರಮೌನವೇಕೆ ತಂದೆ?
ಹೊಪ ಹಸಿರನಾಂತು ಹಸನಾಗಿ ಬುವಿ ನಗುತಿರಲು
ಬಹುವಮಾನವೇನು ಕುಂದೆ?
ದಿಕ್ಕುದಿಕ್ಕಿಗೆ ಚಿಗುರಿ ಚೆಂಬವಳದಂತಿರುವ
ಪಲ್ಲವಗಳಿಲ್ಲವೇನು—
ಬಗೆಯ ಬೇಸರವ ಕಳೆದೊಗೆಯಿಸಲು ಮೆಲುನಗೆಯ
ಈ ಚೈತ್ರ ಸಾಲದೇನು?

೩

ಮುಖದಾಸರುಗುಡಿರು ಬಾತ ಕಣ್ಗುಡ್ಡೆಯಲಿ
ಒತ್ತಿ ಬಹ ಕಣ್ಣೀರು ಒಸರದಿರಲು
ತುಂಬಬಂದಿಹ ಭಾವ ಕೊರಳ ಬಿಗಿವುದು, ಮೌನ-
ವೊಂದನಾಂತತ್ತಿತ್ತಲಲುಗದಿಹುದು;
ಅಂತಾಯ್ತೆ ನಿನ್ನಿರವು? ಚಿಂತೆಯಾವುದು ಹೇಳು?
ನೀರು ನಿನ್ನೊಳಗಡಗಿ, ಗುಡುಗು ಮಡಿದು
ಏನಿಲ್ಲದಿರೆ ನಿತ್ಯ ಸಂಧ್ಯೆಯಲಿ ನಿಶ್ಚಲತೆ
ಎಲ್ಲಿಂದ ಬಂದೀತು ಮನಕೆ ನಡೆದು?

೪

ಬರಿಸದಾದಿಯೊಳಿಂದು ಬರಿದೆ ಕುಳಿತಿಹೆ ಏಕೆ?
ಬರಲಿರುವ ಚಿಂತೆಯುಂಟಿ?
ಪರಸವಲ್ಲದ ಬಾಳು ನುಲಿದೆಂದ ಹೊರಸಲ್ತೆ!
ಬೇಸರಳು ನಿನಗು ನಂಟಿ?
ಅರಸರರಸರ ಹುಚ್ಚು ಜನಪದದ ಬಾಳ್ತೆಯನು
ಒರಸುತಿದೆಯೆಂಬ ಚಿಂತೆ
ಎಲೆ ಮುಗಿಲೆ ನಿನ್ನ ಮನದಲಿ ಕುದಿವುದೇ? ಅಳವ!
ನಿನಗಿಂಥ ಬವಣೆ ಬಂತೆ?

೫

ಪವನನಂತೆಗೆ ಸಿಲುಕಿ ಅವನೊಯ್ದ ಕಡೆ ಹಾಯ್ದು
ತೊಳಲುವುದು ಬೇಡವಾಯ್ತೇನು ನಿನಗೆ?
ಅವನಿ ಚಿಗಿತಣಕನಾತಾಡುವುದಕೊಳವಾಗಿ
ನವೆಯುವೆಯ-ಕೃಷಿಕುಲದ ತಂದೆ, ಮುಗಿಲೆ!
ಸವನಿತೆ ಸಾಗರಕ್ಕೆನಿನಗು ವೈರವು ದೇವ,
ಹೊಗರಿಳಿದ ತೋಲುವೊಗವೇಕೆ? ಕರಳ
ಕರಿಕಳಭದಂತೊಮ್ಮೆ ಮುಸಗಿ ಮತ್ತಪ್ಪರಲಿ
ಗರಿಗಳಿದ ಹಕ್ಕಿಯಹೆಯೇಕೆ ಮುರಳ?

೬

ಸ್ವಾತಂತ್ರ್ಯಯುಗವಿವರೊಳಂತ್ಯದಳಿಪವರವರ
ಸ್ವಾತಂತ್ರ್ಯಸಿದ್ಧಿಯೆಂದು—
ಅರಿದಂತೆ ಕೆಳಗಿಳಿಯದೇರುವೆಯ ಬಾಂದಳವ
ನರಲೋಕದಿರವ ಕಂಡು?
ಅವಳಲು ಎಲೆ ತಂದೆ ಜೀವನವ ಬಳಸಿಹುದು?
ಅವ ನೋವೆದೆಯೊಳಿಹುದು?
ಕಾವು ಹೆಚ್ಚಿದುದನ್ನ ಮುರೆತೆನ್ನ ದೇಹದಲಿ
ಕೇಳುತಿಹೆ ನಿನ್ನನೊಲಿದು!

ಮುಂದಿಗಿಂತಲೂ ಮುಂದೆ ಗಟ್ಟಿಯಲ್ಲವೆ?

ಡಾ. ಪಂಡಿತ ತಾರಾನಾಥ

★

ಮುಂದಿಯಲ್ಲಿ ಮುಂದೆ ಬರಬೇಕಾದರೆ ಮೊದಲನೆಯದಾಗಿ ಬೇಕು ರಾಜಕೀಯ ಅಧಿಕಾರ; ಅದಿಲ್ಲದಿದ್ದರೆ ಸಿರಿವಂತಿಕೆ ಬೇಕು. ಇವೆರಡೂ ಇಲ್ಲದವರು ಪರಸ್ಪರ ಪ್ರಶಂಸಾಸಂಘದ ಸದಸ್ಯರಾಗಬೇಕು. ಕೊನೆಯ ಉಪಾಯ ಪೂರ್ಣ ಗುಣಕಾರಿಯಾದುದು!

卐

ಅನೇಕ ಸಂಗತಿಗಳು ಐತಿಹಾಸಿಕವಾಗಿ ಹಳೆಯವಾಗಿದ್ದರೂ ಪ್ರಚಾರದಲ್ಲಿ ಈ ಹೊತ್ತಿಗೂ ಜೋರಾಗಿಯೇ ನಡೆಯುತ್ತವೆ. ಅವುಗಳಲ್ಲಿ ಪ್ರಬಲವಾದದ್ದು ಎಂದರೆ ದುರಭಿಮಾನ. ಈ ಮಿಥ್ಯಾಗರ್ವಕ್ಕೆ ಅನೇಕ ಕಾರಣಗಳಿವೆ. ಜ್ಞಾನವೇ ಸಾಕಷ್ಟು ಇಲ್ಲದಿರುವುದು ಒಂದು ಮುಖ್ಯಕಾರಣ. ವಿದ್ಯೆ ಅಲ್ಪವಾಗಿರುವಲ್ಲಿ ಗರ್ವವೇನೋ ಬಹಳ ಎಂಬುದು ಸಾಮಾನ್ಯವಾಗಿಯೂ ತಿಳಿದಿರುವ ಸಂಗತಿಯೇ ಅಷ್ಟೇ? ಆದರೂ ಈ ಹೆಮ್ಮೆ ಏನೋ ಅಪ್ಯಾಗುವುದಿಲ್ಲ; ಇದ್ದರೂ ಅದು ಬಹುಕಾಲ ಬಾಳುವುದಿಲ್ಲ. ಯಾಕೆಂದರೆ ಅವಿವೇಕದ ಸೊಕ್ಕನ್ನು ವಿವೇಕವೇ ಮುರಿಯುತ್ತದಲ್ಲವೆ? ಗುದ್ದಕ್ಕೆ ಗುದ್ದ ಅದ್ದವಾಗಿ ಈ ಪ್ರಪಂಚದಲ್ಲಿ ನಿಂತೇ ಇದೆ. ವಸ್ತುಸ್ಥಿತಿ ಹೀಗಿರುವ ವರೆಗೆ ಈ ಜಾತಿಯ ನಿರಾಧಾರ ಗರ್ವಕ್ಕೆ ಒಂದಲ್ಲ ಇನ್ನೊಂದು ದಿನ ಸದ್ಗತಿ ಇದ್ದೇ ಇದೆ. ಇಲ್ಲವಾದರೆ ಅಂತಹ ಗರ್ವದ ಗೊಂಬೆಗೇ ಒಂದು ಮೂಲೆಯನ್ನು ಪ್ರಪಂಚವು ತೋರಿಸಿಯೇ ಬಿಡುತ್ತದೆ.

ಪ್ರಪಂಚವಿರುವ ವರೆಗೆ ಅಜ್ಞಾನ-ಅವಿವೇಕಗಳು ಬಿಟ್ಟುವಲ್ಲ. ಇವುಗಳನ್ನು ಹೊಂದಿಕೊಂಡು ಕುಗರ್ವವೂ ಬಿಟ್ಟದ್ದಲ್ಲ. ಆದರೆ ಜ್ಞಾನಾಭಿಲಾಷೆಯು ಸಹಜ ವ್ಯಕ್ತಿಯಲ್ಲಿ ನೈಸರ್ಗಿಕವಾಗಿಯೇ ಇರೋಣದರಿಂದ, ಪ್ರಪಂಚದ ಜ್ಞಾನವು ಅಜ್ಞಾನ-ಅಹಂಕಾರಗಳನ್ನು ಜಯಿಸದೆಯೂ ಇರುವುದಿಲ್ಲ.

ಅನೈಸರ್ಗಿಕ ಚಿತ್ತಗಳಿಗೆ ದುರಭಿಮಾನವು ಬೇಗ ಬಿಟ್ಟು ಹೋಗುವುದಿಲ್ಲ ಎಂಬುದು ನಿಜ. ಆದರೆ ಅದಕ್ಕೆ ಒಳಗಿರುವ ಅವಿವೇಕದೊಡನೆ ಹೊರಸೂಸುತ್ತಿರುವ ಅವಿವೇಕಿಗಳ ಬೆಂಬಲವೊಂದು ಸಿಕ್ಕದೆ ಹೋದರೆ, ಅದು ಆ ಅವಿವೇಕಿಯ ಪ್ರಪಂಚಾನುಭವ ಬೆಳೆದಂತೆ ತಾನಾಗಿ ಹಾದಿಗೆ ಬಂದೇ ತೀರುತ್ತದೆ. ಒಳಗೆ ಇರುವ ಅವಿವೇಕಕ್ಕೆ ಹೊರಗಿರುವ ಹೊಗಳು ಭಟ್ಟರ ಸಹವಾಸವೂ ಲಭಿಸಿದರೆ ಆ ಸ್ವನಿರ್ಮಿತ ಹೆಮ್ಮೆಮುದ್ದೆಗಳಿಗೆ ಮುಂದೆ ಗತಿಯೇ ಇಲ್ಲ.

ಒಬ್ಬರ ವಿದ್ಯೆ ಅಥವಾ ಸದ್ಗುಣಗಳನ್ನು ಹೊಗಳುವವರ ಗುಂಪು ಬೆಳೆದರೆ ಪರವಾ ಇಲ್ಲ. ಆದರೆ ಅವಿವೇಕಿಗಳ ಸರಕಾರಿ ಹುದ್ದೆಗಳಿಗಾಗಿಯೋ, ದೊಡ್ಡ ಆಸ್ತಿ-ಪಾಸ್ತಿಗಾಗಿಯೋ, ಜೊಳ್ಳು ಅಂತಸ್ಥಿಗಾಗಿಯೋ ಮರುಳಾದ ಸ್ವಾರ್ಥಿಗಳ ಸಮೂಹವು ಮಾತ್ರ ಬೆಳೆಯುತ್ತ ಹೋದರೆ, ಅಂತಹ ಸ್ವಾರ್ಥಿಗಳ ಸ್ಥಿರ-ಮೂರ್ತಿಗೆ ಮುಂದೆ ಹೆಜ್ಜೆಯಿಡಲಿಕ್ಕಾಗುವುದಿಲ್ಲ. ಆಗ ಆ ಹೊಗಳುಭಟ್ಟರ ನಾಯಕನಿಗೆ ಪ್ರಾಪ್ತಿಯಾಗುವುದು ಎಂದರೆ ಹಾಳು ಅಧೋಗತಿಯೊಂದೇ. ಅವನ ಹೆಮ್ಮೆಯ ಭಾರವೇ ಸಾಕು ಅವನನ್ನು ನೆಲಕ್ಕಿಳಿಸಲಿಕ್ಕೆ.

ಆದರೆ ಅನೇಕ ಕಡೆ ಅವಿವೇಕದ ದುರಭಿಮಾನಕ್ಕೆ ಹೊಗಳುಭಟ್ಟರ ಸಂಖ್ಯಾಬಲವಿದೆ. ಇಲ್ಲಿ ನಿರಾಧಾರ ಗರ್ವಕ್ಕೆ ಮಂದೆಯ ಆಧಾರವಿದೆ. ಜ್ಞಾನದ ಮುಂದೆ ಈ ಹೆಮ್ಮೆಯ ಸರದಾರರು ಅಜ್ಞಾನಿಗಳೇ ಆದರೂ, ಅವಿವೇಕಿಗಳ 'ವೋಟ್'ಗಳ ಬಲದಿಂದ ಇವರು ದೊಡ್ಡ ಮನುಷ್ಯರಾಗಿ ಮೆರೆಯುತ್ತಾರೆ! ಇದೊಂದು ವಿಚಿತ್ರ ಸ್ಥಿತಿ!! ಬುದ್ಧಿಬಲಕ್ಕೆ ಸಿಕ್ಕಲಾರದ ಅಂತಸ್ಥ ಸಂಖ್ಯಾಬಲದಿಂದ ಸಿಕ್ಕುತ್ತದೆ!!! ಸೊಟ್ಟು ಹಾದಿ ಹಿಡಿದ "ಡಿಮೊಕ್ರೆಸಿ"ಯ ಲಾಭಗಳಲ್ಲಿ ಇದೊಂದು.

ರಾಜಕೀಯ ರಂಗದಲ್ಲಿ ಹೀಗೆ ಮೆರೆಯುವವರೆಷ್ಟು ಜನರಿಲ್ಲ? ನಮ್ಮ ಸಾಹಿತ್ಯ ಪ್ರಪಂಚದಲ್ಲಿಯೂ ಹೀಗೇ ಹೊಗಳುಬಟ್ಟರ ವೋಟಿನ ಕಿರೀಟವನ್ನು ತೊಟ್ಟ ಸಾಹಿತಿಗಳೆಷ್ಟು ಮಂದಿಯಿಲ್ಲ? ಸಾಧಾರಣ ಎಲ್ಲ ರಂಗಗಳಲ್ಲಿಯೂ ಇದೇ ಅವಸ್ಥೆಯಲ್ಲವೆ?

ಈ ವೋಟ್‌ಗಳು ಆ ಭಟ್ಟರ ಬಾಯಿಯಿಂದ ಬೆಳೆಯುತ್ತವೆ. ಅವರು ಬಗ್ಗಿಸ ಬಲ್ಲ ಪತ್ರ-ಪತ್ರಿಕೆಗಳಿಂದ ಬೆಳೆಯುತ್ತವೆ. ಪ್ರತಿಯೊಂದು ರಂಗದಲ್ಲಿಯೂ ವೋಟಿನ ಬೇಟೆಗಾರರಿಗೇ ವಿಜಯ ಪ್ರಾಪ್ತಿಯಾಗುತ್ತಿರುವಂತೆ ತೋರುತ್ತದೆ. ಅಂತಸ್ಥನ್ನು ಹತ್ತುವ ರೀತಿಗಳಲ್ಲಿ ಇದೊಂದಾಯಿತು. ಅಲ್ಪ ಚತುರನು ಬಹುಮೂಢರ ಮೂಲಕ ಮುಂದಕ್ಕೆ ಬರುವ ರೀತಿ ಇದೊಂದು.

(೨೩ನೆಯ ಪುಟದ ಅಡಿಯಲ್ಲಿ ನೋಡಿರಿ.)

ಸಿಡುಬು ★ ಅಥವಾ ಮೈಲಿ

(Small-pox)

ಡಾ. ಡಾ. ಎಚ್. ಪಿ. ಕುಲಕರ್ಣಿ, ಎಮ್.ಬಿ.ಬಿ.ಎಸ್.
ಹೊಮಿಯೊಪಾಥ್, ಅಥಣಿ

★

ಈ ಬೇನೆಗೆ ಉಪಾಯಗಳು ಎರಡು. ಪ್ರಚಲಿತವಿದ್ದುದು (Allopathy) ಗ್ಲಿಸರಿನ್ ನಲ್ಲಿ ಮೈಲಿಯು ರಸವನ್ನು ತಯಾರಿಸಿ, ಅದನ್ನು ಕೈಮೇಲೆ ಚುಚ್ಚುವುದು. ಮತ್ತೊಂದು (Homeopathy) ಹೊಟ್ಟೆಯಲ್ಲಿ ತೆಗೆದುಕೊಳ್ಳುವುದು. ಎರಡನೆಯ ಪದ್ಧತಿಯಲ್ಲಿ, ನೋವು ನರಳಿಕೆಗಳೇನಿಲ್ಲ. ಗುಣದಲ್ಲಿ ಮೊದಲನೆಯದರಷ್ಟೇ— ಅದೇಕೆ—ಅದಕ್ಕೂ ಹೆಚ್ಚು ಗುಣಕಾರಿಯು. ಈ ಔಷಧಿಯು ಪುಡಿಗಳಂದ ಬೇನೆಯನ್ನು ಪ್ರತಿಬಂಧಿಸಲೂ ಬಹುದು (prevention). ಬೇನೆಯು ಆಗಲೆ ಬಂದಿದ್ದರೆ ಅದನ್ನು ಪೂರ್ಣ ಗುಣ ಮಾಡುವುದು (cure). ಇದು ಅಜಾಲವೈದ್ಯರಿಗೂ ರುಚಿಸುವುದು. ಈ ಹೋಮಿಯೊಪಥಿ ಉಪಾಯವನ್ನು ವೈದ್ಯರೂ ಡಾಕ್ಟರರೂ ಎಲ್ಲರೂ ವಿಚಾರಿಸಲಿ, ಆದರಿಂದ ಪೂರ್ಣ ಗುಣ ಹೊಂದಲಿ !

* * *

ಸಿಡುಬಿನ ಬೇನೆಯ ಪ್ರತಿಬಂಧಕ ಉಪಾಯವೆಂದರೆ 'ಗ್ಲಿಸರೀನ್ ನಲ್ಲಿ ತಯಾರಿಸಿದ ಮೈಲಿಯು ಔಷಧವನ್ನು ಕೈಮೇಲೆ ಚುಚ್ಚಿಸಿಕೊಳ್ಳುವುದು ' (Glycerinated Vaccine) ಎಂದು ನಮ್ಮ ಜನರು ಸಾಧಾರಣವಾಗಿ ತಿಳಿದಿದ್ದಾರೆ ; ಜನಸಾಮಾನ್ಯರು ಹೀಗೆ ತಿಳಿಯುವುದು ಆಶ್ಚರ್ಯದ ಸಂಗತಿಯಲ್ಲ ; ಆದರೆ ವೈದ್ಯರೂ, ಡಾಕ್ಟರರೂ ಈ ಬೇನೆಯ ಉಪಾಯದ ವಿಷಯದಲ್ಲಿ ಅಜ್ಞಾನವನ್ನು ವ್ಯಕ್ತಮಾಡುತ್ತಿರುವುದು ಮಾತ್ರ ಆಶ್ಚರ್ಯದ ಸಂಗತಿ. ಈ ಚುಚ್ಚುಮದ್ದಿನ ಉಪಾಯವನ್ನು ಕಂಡುಹಿಡಿದವನು **ಜೆನರ್** (Jenner) ಎಂಬ ಇಂಗ್ಲಿಷ್ ಗೃಹಸ್ಥನು. ಇದನ್ನು ಚುಚ್ಚಿಸಿಕೊಳ್ಳುವುದರಿಂದ ಜೀವಮಾನದವರೆಗೆ ಮನುಷ್ಯನಿಗೆ ಮೈಲಿಯು ಅಂಜಿಕೆಯೇ ಇಲ್ಲವೆಂದು ಜೆನರನ ಹೇಳಿಕೆಯಿತ್ತು. ಕೆಲವುಕಾಲದ ನಂತರ, ಈ ಚುಚ್ಚುವುದರ ಪರಿಣಾಮವು ಏಳುವರ್ಷಗಳವರೆಗೆ ಮಾತ್ರ ಇರುತ್ತದೆಂದು ಹೇಳತೊಡಗಿದರು. ಈಗಂತೂ ಪ್ರತಿಯೊಂದು ನಲದ ಸಿಡುಬಿನ ಪಿಡುಗಿನಲ್ಲಿಯೂ ಈ ಔಷಧವನ್ನು ಚುಚ್ಚಿಸಿಕೊಳ್ಳಬೇಕಾಗುತ್ತದೆಂದು ಹೇಳಲಾರಂಭಿಸಿದ್ದಾರೆ. ಆದರೆ ಈ ಪ್ರತಿಬಂಧಕ ಉಪಾಯವು ಶರೀರದ ಮೇಲೆ ಅಪಾಯಕಾರಕ ಪರಿಣಾಮವನ್ನುಂಟು ಮಾಡುವುದು ; ಇಷ್ಟೇ ಅಲ್ಲ, ಮೇಲಿಂದ ಮೇಲೆ ಚುಚ್ಚಿಸಿಕೊಳ್ಳುವುದರಿಂದ ತೀವ್ರತರವಾದ ಅನೇಕ ರೋಗೋಪದ್ರವಗಳೂ ಹುಟ್ಟುವುವು.

ಈ ಪ್ರಕಾರದ ಅಪಾಯಕರವಾದ ಉಪಾಯಗಳನ್ನು ಮೇಲಿಂದ ಮೇಲೆ ಮಾಡಿಸಿಕೊಂಡು ನರಳುವುದಕ್ಕಿಂತ, ಬ್ರುಕ್‌ಲೀನಿನ (ಜರ್ಮನಿ) **ಡಾ. ಬೇವೋಸ್ಕಿ** (Boskowitz) ಎಂಬವನು ಕಂಡುಹಿಡಿದ ಔಷಧವನ್ನು ತೆಗೆದುಕೊಳ್ಳುವುದು ಹಿತಕರವೂ ಜಾಣತನದ್ದೂ ಆಗಿರುತ್ತದೆ. ಈ ಔಷಧವನ್ನು ಚುಚ್ಚಿಸಿಕೊಂಡು ಕೈನೋಯಿಸಿಕೊಂಡು ಕೂಗಾಡಬೇಕಾಗಿಲ್ಲ. ಇದನ್ನು ಸುಖವಾಗಿ ನುಂಗಿ ಹೊಟ್ಟೆಯಲ್ಲಿ ತೆಗೆದುಕೊಳ್ಳಲು ಬರುವುದು. ಪರಿಣಾಮದಲ್ಲಿ ಮೊದಲಿನ ಔಷಧಕ್ಕೆ ಸ್ವಲ್ಪವೂ ಕಡಿಮೆಯಾದದ್ದಲ್ಲ. ಈ ಔಷಧದ ಗುಣವನ್ನು ಅರಿಯದ ಅನೇಕರಿಗೆ–ವಿಶೇಷವಾಗಿ ಡಾಕ್ಟರು ವೈದ್ಯರಿಗೆ—ಈ ಮಾತು ಆಶ್ಚರ್ಯವನ್ನುಂಟುಮಾಡಬಹುದು. ಈ ಹೊಸ ಔಷಧದ ಪರಿಣಾಮದ ಬಗೆಗೆ ಅಮೇರಿಕೆಯಲ್ಲಿ ಸಂಪ್ರದಾಯಶರಣರಾದ ಡಾಕ್ಟರರಿಗೂ ಹೊಸಬರಾದ ಪ್ರಗತಿ-

★

ಸಿಡುಬಿನ ರೋಗ ತುಂಬ ಘಾತುಕವಾದುದು. ಇಂದು ಅರಳಿದ ತಾವರೆಯಂತಿರುವ ಮುಖವನ್ನು ನಾಳೆಯೆ ಸೀದ ದೋಸೆಯಂತೆ ಮಾಡಿಬಿಡಬಲ್ಲದು. ಇಂದು ತಾರೆಗಳಂತೆ ತೊಳಗುತ್ತಿರುವ ಹೋಳುಗಣ್ಣುಗಳನ್ನು ನಾಳೆಯೆ ಹತ್ತಿಯ ಕಾಳಿನಂತೆ ಆಗಿಸಬಲ್ಲದದು. ಇಂತಹ ರೋಗದ ಸಂರಕ್ಷಣೆ-ನಿವಾರಣೆಗಳ ತಿಳಿವಳಿಕೆ ಎಲ್ಲರಿಗೂ ಇರಬೇಕಲ್ಲವೆ ?

★

ಪ್ರಿಯರಿಗೂ ಪ್ರಸಂಗವುಂಟಾಗಿ, ಪ್ರಕರಣವು ಕೋರ್ಟಿನವರೆಗೆ ಹೋಯಿತು. ಕೋರ್ಟಿನಲ್ಲಿ ಹೊಸಬರಿಗೇ ಜಯವುಂಟಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಈ ಔಷಧದ ಗುಣದ ಬಗ್ಗೆ ಈ ಪ್ರಕರಣದಿಂದ ಸಾಕಷ್ಟು ಸಂಗತಿಯು ವಾಚಕರಿಗೆ ತಿಳಿದುಬರುವುದರಿಂದ, ಅದನ್ನೇ ಒಂದು ಕತೆಯಂತೆ ಕೆಳಗೆ ಕೊಟ್ಟಿದ್ದೇನೆ. ಈ ಔಷಧದ ವೈಶಿಷ್ಟ್ಯವೆಂದರೆ ಇದನ್ನು ಮೈಲಿಯಿಂದ ನರಳುವ ಮನುಷ್ಯನಿಗೂ ಕೊಡಲು ಬರುವುದು. ಇದರಿಂದ ರೋಗದ ತೀವ್ರತೆಯು ಕಡಿಮೆಯಾಗುವುದಲ್ಲದೆ, ಮುಖದ ಮೇಲೆಯೂ ಬೇರೆ ಕಡೆಗೂ ಕಾಣಿಸಿಕೊಳ್ಳುವ ಮಚ್ಚೆಗಳು (ಕಲೆಗಳು) ಕಾಣಿಸುವುದಿಲ್ಲ.

ಅಮೇರಿಕೆಯಲ್ಲಿಯ ಆಯೋವಾ (Iowa)

* * *

ನಗರದಲ್ಲಿಯ ಒಂದು ಉದ್ವೇಗಜನಕ ಪ್ರಕರಣವು

(ಒಬ್ಬ ಡಾಕ್ಟರನ ಸ್ವಾನುಭವದ ಕತೆಯಿದು)

" ಆರೋಗ್ಯ ಸಂಘದವರ (Health board Iowa) ವಿಚಾರಣಾ ಸಭೆಗಳಲ್ಲಿ ತಮ್ಮ ಕಷ್ಟ-ನಷ್ಟಗಳನ್ನು ಸ್ಪಷ್ಟವಾಗಿ

ಮುಂಡಿಸಲು, ತೀರ ಸ್ವಲ್ಪ ಜನ 'ಹೋಮಿಯೋಪಥಿ' ಡಾಕ್ಟರರಿಗೆ ಮಾತ್ರ ಅನುವು ದೊರೆಯುವುದು. ಆದರೂ ವಿಘ್ನ ಪರಂಪರೆಗಳನ್ನು ಎದುರಿಸಿ ಮುಂದುವರಿಯುವುದರಲ್ಲಿ ಲಾಭವಿರುವುದಲ್ಲದೆ ಹೊಸ ಹುರುಪೂ ದೊರೆಯುವುದು.

" ಬಹುದಿವಸಗಳ ಹಿಂದೆ ನಮ್ಮೂರಲ್ಲಿ, ಒಂದು ಚಳಿಗಾಲದಲ್ಲಿ ಒಮ್ಮೆಲೆ ೭೫ ಜನರಿಗೆ ಮೈಲಿಯು ಬೇನೆಯು ಬಂದಿತು. ಆಗ ನ ಮೂರಿನ ಸರಕಾರಿ ಡಾಕ್ಟರರೂ, ಬೇರೆ ಡಾಕ್ಟರುಗಳೂ ಶಾಲೆಯ ಹುಡುಗರಿಗೆ ತೀವ್ರವೆ ಕೈಯ ಮೇಲೆ ಮೈಲಿಗಳನ್ನು ಚುಚ್ಚಲು ತಿಳಿಸಿದರು.

" ಒಳಲಾ ಹೋವಾದಲ್ಲಿಯೇ ನಾನು ಪ್ರಶಸ್ತಿಯನ್ನು ಪಡೆದು ನನ್ನ ವೈದ್ಯಕವೃತ್ತಿಯನ್ನು ನಡೆಯಿಸಿದ್ದೆ. ಕೈಮೇಲೆ ಮೈಲಿ ಚುಚ್ಚಿಸಿಕೊಳ್ಳುವುದಕ್ಕಿಂತ ಮೈಲಿಯ ಔಷಧವನ್ನು ಹೊಟ್ಟೆಯೊಳಗೆ ತೆಗೆದುಕೊಳ್ಳುವುದು ಯೋಗ್ಯವೆಂದು ನನ್ನ ಮತ. ಕೈಗಳ ಮೇಲೆಯೆ ಮೈಲಿ ಚುಚ್ಚಬೇಕೆಂದು ಕಾಯಿದೆ ಇದ್ದರೂ, ಅದರ ವಿಷಯವಾಗಿ ಎಲ್ಲವನ್ನೂ ಅಭ್ಯಾಸಮಾಡಿ, ನಾನು ಮೈಲಿಯ ಔಷಧವನ್ನು ಹೊಟ್ಟೆಯೊಳಗೇ ಕೊಡಲಾರಂಭಿಸಿದೆ. ನನ್ನ ರೋಗಿಗಳಲ್ಲಿ ೫೦ ಜನರಿಗೆ-ದಿನಕ್ಕೆ ಮೂರಾವೃತ್ತಿ-ಮೂರು ದಿನಗಳವರೆಗೆ ತೆಗೆದುಕೊಳ್ಳಲು ವೆರಿಯೊಲಿನಮ್ 12 x (Variolinum 12 x) ಪುಡಿಯನ್ನು ಕೊಟ್ಟೆ. ನಾನಾದರೂ ಅದೇ ಪುಡಿಯನ್ನು ತೆಗೆದುಕೊಂಡೆ. ಈ ೫೦ ಜನ ರೋಗಿಗಳಿಗೆ ೪ ಮೇಲೆ, ದಿನಕ್ಕೆ ಮೂರಾವೃತ್ತಿಯಂತೆ ಮೂರು ದಿನಗಳವರೆಗೆ ವ್ಯಾಕ್ಸಿನಿನಮ್ (Vaccininum) 12 x ಪುಡಿಯನ್ನು ಕೊಡಬೇಕೆಂದು ನಿಶ್ಚಯಿಸಿದೆ. ಈ ಮೈಲಿಯ ಪಿಡುಗಿನಲ್ಲಿ ನಾನು ೨೦ ರೋಗಿಗಳಿಗೆ ಔಷಧಿ ಕೊಡಬೇಕಾಯಿತು. ಅವರಿಗೆ ವ್ಹಾರಿಯೋಲಿನಮ್ (Variolinum) ೩೦×೩ ಪುಡಿಗಳನ್ನು ನಾಲ್ಕೈದು ದಿನಗಳವರೆಗೆ ಕೊಟ್ಟೆ. ಈ ೨೦ ರೋಗಿಗಳಲ್ಲಿ ಇಬ್ಬರಿಗೆ ಮಾತ್ರ ಕಪ್ಪಗಾದ ಮತ್ತು ತೀವ್ರಸ್ವರೂಪದ ಬೇನೆಯಿತ್ತು. ಒಬ್ಬ ಹೆಂಗುಸಿಗೆ ಕಪ್ಪಗಿನದಲ್ಲದೆ ರಕ್ತಸುರಿಯುವ ಮೈಲಿಯು ಬೇನೆಯಿತ್ತು. ಒಂಬತ್ತು ದಿನಗಳ ವರೆಗೆ ಅವಳು ತೀರ ನಿಶ್ಚೇತನಳಾದ್ದು, ಆಕೆಯ ಎಲ್ಲ ಕೂದಲುಗಳೂ ಉದುರಿ ಹೋದುವು. ಮೂಗು-ಕಿವಿಗಳ ಸವಿಾಪದ ತೊಗಲು ಸುಲಿದು ಹೋಗಿ ಅವಳು ಹೆಣದ ಹಾಗೆ ನೋಡಲು ಅಸಹ್ಯವಾಗಿದ್ದಳು.

" ನನ್ನ ರೋಗಿಗಳಲ್ಲಿ ಸುಮಾರು ಅರ್ಧದಷ್ಟು ಜನರು ಆ ಊರಿನ ಸಿಡುಬಿನ ಮನೆಯಲ್ಲಿ (Post-house) ಉಪಚಾರ ಹೊಂದಿದರು. ಕಾರಣ, ನನಗೆ ಹೋಮಿಯೋಪಥಿ ಮತ್ತು ಪ್ರಚಲಿತವಿದ್ದ ಹಳೆಯ ಪದ್ಧತಿ (Allopathy) ಇವುಗಳ ಉಪಚಾರದ ಬಗ್ಗೆ ತುಲನಾತ್ಮಕ ದೃಷ್ಟಿಯಿಂದ ಅಭ್ಯಾಸ ಮಾಡಲು ಅನುಕೂಲವಾಯಿತು.

" ನಾನು ಆ ವರ್ಷ, ಸಿಡುಬಿನ ಬೇನೆಯ ಸಲುವಾಗಿ, ಮೂರು ನೂರು ಜನರಿಗೆ ಹೊಟ್ಟೆಯೊಳಗೆ ಔಷಧಿ ಕೊಟ್ಟೆ. ಅವರಲ್ಲಿಯ ಐದು ಜನರು ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕ ಪರಿಚಾರಕರಿದ್ದರು. ಬೇರೆ ಕೆಲವರು ಅದೇ ಆಸ್ಪತ್ರೆಯಲ್ಲಿ ಟೆಲಿಫೋನ್ ಮತ್ತು ದೀಪದ ವ್ಯವಸ್ಥಾಪಕರು. ಸಿಡುಬಿನಿಂದ ಬಳಲುವ ಬಾಲಕ-ಬಾಲಿಕೆಯರ ಆರೈಕೆ ಮಾಡಲು ಆಸ್ಪತ್ರೆಯಲ್ಲಿಯೆ ಇರಲಿಕೊಳ್ಳುತ್ತಿದ್ದ ಕಾಯಂದಿರಿಗೂ ಔಷಧ ಕೊಟ್ಟೆನು. ಇವರು ಎಲ್ಲರೂ ಅದೇ ಆಸ್ಪತ್ರೆಯಲ್ಲಿ ಮುಂಜಾನೆಯಿಂದ ಸಂಜೆಯ ವರೆಗೆ ರೋಗಿಗಳ ಪಕ್ಕದಲ್ಲಿ ಇರುತ್ತಿದ್ದರು. ಸಿಡುಬಿನ ಬೇನೆಯು ಅವರ ಸವಿಾಪಕ್ಕೇನೂ ಹಾಯಲಿಲ್ಲ.

" ಇದೇ ಪಿಡುಗಿನಲ್ಲಿ ಹಳೆಯ ಪದ್ಧತಿಯಂತೆ (Allopathy) ಉಪಚಾರ ನಡೆಯಿಸುತ್ತಿದ್ದ ನಮ್ಮೂರಿನ ಡಾಕ್ಟರೊಬ್ಬರು, ಕೈಮೇಲೆ ಮೈಲಿಗಳನ್ನು ಚುಚ್ಚಿಸಿಕೊಂಡರು. ಆದರೆ ಮೈಲಿಗಳು ಅವರ ಕೈಮೇಲೆ ಚೆನ್ನಾಗಿ ಏಳದುದರಿಂದ, ೧೫ ದಿನಗಳನಂತರ ಪುನಃ ಚುಚ್ಚಿಸಿಕೊಂಡರು. ಆಗ ಸಾಧಾರಣವಾಗಿ ಮೂಡಿದುವು. ಅನಂತರ ಎರಡು ವರ್ಷಗಳ ಅವಧಿಯಲ್ಲಿಯೆ, ಅತನಿಗೇ ಉಗ್ರ-

---

(೨೧ ನೆಯ ಪುಟದಿಂದ ಮುಂದುವರಿದುದು.)

" ಮುಂದಕ್ಕೆ ಬರುವ " ಅನೇಕ ರೀತಿಗಳಲ್ಲಿ ಇನ್ನೊಂದಿದೆ. ಅದಕ್ಕೆ ಅನೇಕ ಮೂಢ ಸ್ವಾರ್ಥಿಗಳ ಅವಶ್ಯಕತೆಯಿಲ್ಲ. ತಮ್ಮಂತಹ ಹಲಕೆಲವು ಚತುರರ ಕೂಟವಷ್ಟೇ ಸಾಕು - ನಾಯಕನಿಗೆ. ಆದರೆ ಆದರಲ್ಲೆಲ್ಲರೂ ಸ್ವಲ್ಪ ದೊಡ್ಡ ಮನುಷ್ಯರೇ ಆಗಿರಬೇಕು. ಅವರೆಲ್ಲರೂ ಒಂದು ಅನಧಿಕೃತ (unofficial) ಸಂಘಕ್ಕೆ ಸೇರಿ, ಅವರನ್ನು ಇವರು ಇವರನ್ನು ಅವರು ಹೊಗಳುತ್ತ ಹೋದರೆ ಸಾಕು. ಇದೊಂದು ಸಾಮಾನ್ಯ ಪದ್ಧತಿ. ಒಬ್ಬೊಬ್ಬರ ಜ್ಞಾನ, ಗುಣ, ಕರ್ಮಗಳನ್ನು ಪರಸ್ಪರವಾಗಿ, ಬಹಿರಂಗವಾಗಿ ಹೊಗಳುತ್ತ ಹೋದರಾಯಿತು. ದೃಷ್ಟಾಂತಕ್ಕೆ ಒಂದು ಸಲ ನಡೆದ ವಿಷಯವನ್ನೇ ಕೇಳಿ: ಒಬ್ಬ ಕವಿಯ ಸಾಹಿತಿಯನ್ನು ಕುರಿತು ಇನ್ನೊಬ್ಬ ಹಿರಿಯ ಸಾಹಿತಿಯು ತನ್ನ ವ್ಯಾಖ್ಯಾನದಲ್ಲಿ " ಇವರು ಉತ್ತರ ಕರ್ನಾಟಕದ ಋಷಿಗಳು " ಎಂದು ವರ್ಣಿಸಿದಾಗ, ಕಿರಿಯ ಕವಿಯು " ಇವರು ಇಡೀ ಕರ್ನಾಟಕದ ಋಷಿಗಳು"-ಎಂದು ಅಲ್ಲಿಯೇ ತನ್ನ ವ್ಯಾಖ್ಯಾನದಲ್ಲಿ ಘೋಷಿಸಿಯೇ ಬಿಟ್ಟನಂತೆ! ಋಷಿಯೆಂದು ಮಹರ್ಷಿಯಾಗುವುದಾಯಿತು; ಇಂಥವರ ಕೂಟಕ್ಕೆ " ಪರಸ್ಪರ ಪ್ರಶಂಸಕ ಸಂಘ (Mutual Admiration Society) " ಎಂದು ಧಾರಾಳವಾಗಿ ಕರೆಯಬಹುದಲ್ಲವೆ?

ಯಾವ ರಂಗದಲ್ಲಿಯೇ ಆಗಲಿ, ಅಂತಹ ಸಂಘದ ಸದಸ್ಯರಾಗುವವರಿಗೆ ಆಯತಿ (prospects) ಬೇಕಷ್ಟೇ? ಅದೇನು? ಲಾಭವೇನು? ಅವರವರ ಪ್ರಶಂಸೆಯು ಅಚ್ಯುತವಾಗಿ ನಡೆಯುತ್ತಹೋಗಿ, ತದ್ವಾರಾ ಅವರ ಕೀರ್ತಿ ಅಂತಸ್ತುಗಳು " ಗೆರೆಂಟೀಡ್ " (guaranteed) !!!

ಬದುಕಿರುವಾಗಲೇ ಭೋಗಕ್ಕೆ ಬರುವ ವಿದ್ಯೆಯಲ್ಲವೆ ಇದೊಂದು?

ಸ್ವರೂಪದ ಮೈಲಿಯು ಎದ್ದು, ತೀರ ಸತ್ತು ಸಕ್ತು ಉಳಿದರು. ಈ ಪಿಡುಗಿನಲ್ಲಿ ನನಗೆ ಒಂದು ವಿಚಿತ್ರವಾದ ಅನುಭವವು ಬಂದಿತು. ಈ ಬೇನೆಯು ಇದ್ದಾಗ ನಾನು ನನ್ನ ಔಷಧದ ಪುಡಿಗಳನ್ನು ಒಬ್ಬ ಮನುಷ್ಯನ ಸಲುವಾಗಿ ಕೋಣೆಯಲ್ಲಿ ಇಟ್ಟುಬಿಟ್ಟಿದ್ದೆ. ಆ ಮನುಷ್ಯನ ಪ್ರಕೃತಿಯು ನೆಟ್ಟಗಿತ್ತು. ಆದರೆ ಆತನಿಗೆ ಈ ಔಷಧವು ಮಾತ್ರ ಸ್ವಲ್ಪವೂ ಒಗ್ಗುತ್ತಿದ್ದಿಲ್ಲ (ಮಾನಿಸುತ್ತಿದ್ದಿಲ್ಲ). ಮೂರನೆಯ ಪುಡಿಯನ್ನು ತೆಗೆದುಕೊಂಡ ಕೂಡಲೇ ಆತನಿಗೆ ತಲೆಶೂಲೆಯು ಎದ್ದು ಹೊಟ್ಟೆಯಲ್ಲಿ ಮಳಮಳಿಸಹತ್ತಿತು. ಔಷಧ ತೆಗೆದುಕೊಂಡ ಎರಡನೆಯ ದಿನ ಅವನ ಮೈಮೇಲೆ ಸಣ್ಣ ಸಣ್ಣ ಬೊಕ್ಕೆಗಳು ಎದ್ದುವು. ಆ ಮನುಷ್ಯನನ್ನು ನೋಡಿ ಮೈಲಿಯ ಬೀಜವು (ವ್ಹಾಕ್ಸಿನಾಯಿಡ್) ಎದ್ದಿತೆಂದು ನಾನು ನಿದಾನ ಮಾಡಿದೆನು. ಹಾಗೆ ನಿದಾನ ಮಾಡಿದ ಒಂದೆರಡು ತಾಸುಗಳಲ್ಲಿಯೆ ಆ ಊರ ಸರಕಾರಿ ಡಾಕ್ಟರರು ಬಂದು ನೋಡಿ, ಅದು ಮೈಲಿಯ ಬೇನೆಯೇ ಇರುತ್ತದೆಂದು ನಿದಾನ ಮಾಡಿ, ರೋಗಿಯ ಇಚ್ಛೆಯ ವಿರುದ್ಧವಾಗಿ ಅವನನ್ನು ಸಿಡುಬಿನ ಆಸ್ಪತ್ರೆಯಲ್ಲಿ ಒಯ್ದು ಒಗೆದರು. ಸಿಡುಬಿನ ಬೇನೆಯಿಂದ ಬಳಲುವ ರೋಗಿಯೆ ಹೆಸರನ್ನು ಆಸ್ಪತ್ರೆಯ ಅಧಿಕಾರಿಗಳಿಗೆ ತಿಳಿಸಲಿಲ್ಲವೆಂದು ನನ್ನ ಮೇಲೆ ಆರೋಪ ಹೊರಿಸಿ, ನನ್ನನ್ನು ಕೋರ್ಟಿನ ಮುಂದೆ ನಿಲ್ಲಿಸಲು ಅವಶ್ಯವಿದ್ದ ಸಮನ್ಸನ್ನು ನನ್ನ ಮೇಲೆ ಜಾರೀ ಮಾಡಿದರು. ಕೋರ್ಟಿನವರು ನಾನು ಕೊಡುತ್ತಿದ್ದ 'ಸೊಟ್ಟು" ಪುಡಿಗಳು ಸಿಡುಬಿನ ಬೇನೆಯ ಪ್ರತಿಬಂಧಕವಿರುತ್ತವೆಂದೂ, ಕೈಮೇಲೆ ಚುಚ್ಚುತ್ತಿದ್ದ ಪ್ರತಿಬಂಧಕ ಉಪಾಯದಷ್ಟೇ ಪರಿಣಾಮಕಾರಿಯಾಗಿ ಇರುತ್ತವೆಂದೂ ಸಿದ್ಧವಾಡಲು ನನಗೆ ಹುಕುಂಮಾಡಿದರು.

"ನಾನು ಒಬ್ಬ ಒಳ್ಳೆಯ ವಕೀಲನ ಕಡೆಗೆ ಹೋದೆನು. ಆತನು ಆ ದಿನವೇ ನನ್ನನ್ನು ಕೇಳಿ, ಮೈಲಿಯ ಬೇನೆ ಮತ್ತು ಹೊಟ್ಟೆಯೊಳಗೆ ತೆಗೆದುಕೊಳ್ಳುವ ಪ್ರತಿಬಂಧಕ ಉಪಾಯ, ಇವುಗಳ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡಲು ಪ್ರಾರಂಭಿಸಿದನು. ಆಶ್ಚರ್ಯದ ಮಾತೆಂದರೆ ಮರುದಿನವೇ ವಕೀಲನು, ತನಗೂ ನನ್ನ ಔಷಧದ ಮೂರು ಪುಡಿಗಳು ಬೇಕೆಂದು ಕೇಳಿಕೊಂಡನು. ನನ್ನ ಸಂಗಡ ಬಂದು, ಆಸ್ಪತ್ರೆಯಲ್ಲಿಯ ರೋಗಿಯನ್ನು ನೋಡಿದನು. ಆಸ್ಪತ್ರೆಯಲ್ಲಿದ್ದು ನನ್ನ ಔಷಧದ ಪುಡಿಗಳನ್ನು ತೆಗೆದುಕೊಂಡ ಮನುಷ್ಯನ ಮೈಮೇಲಿನ ಮೈಲಿಯ ಬೀಜಗಳು ೧೪ ತಾಸಿನಲ್ಲಿಯೇ ಅಡಗಿ ಹೋಗಿದ್ದುವು. ನಾನೂ ನನ್ನ ವಕೀಲನೂ, ಕೈಮೇಲೆ ಚುಚ್ಚುವ ಸಿಡುಬು-ಪ್ರತಿಬಂಧಕ ಔಷಧವನ್ನು ತಯಾರಿಸುವ ರೀತಿಯನ್ನು ಅಭ್ಯಾಸಿಸಿದೆವು. ಚೌಕಸಿಯ ದಿನ ನನ್ನ ವಕೀಲನು, ಸಿಡುಬಿನ ಬೇನೆ ಮತ್ತು ಅದರ ಉಪಚಾರದ ಎಲ್ಲ ಸಂಗತಿಗಳನ್ನೂ ಅಭ್ಯಾಸ ಮಾಡಿ ಸಿದ್ಧನಾಗಿದ್ದನು. ಸರಕಾರಿ ಡಾಕ್ಟರನು ನಮ್ಮ ವಕೀಲನ ಉಲಟ ತಪಾಸಣೆ (Cross-examination)ಯ ಕಾಲದಲ್ಲಿ ಉರುಳಿಬಿಟ್ಟನು. ಈ ಪಿಡುಗಿನಲ್ಲಿ ಸರಕಾರಿ ಡಾಕ್ಟರನಿಂದ ಉಪಚಾರ ಹೊಂದಿದ ಎಷ್ಟೋ ಜನ ಸಿಡುಬಿನ ರೋಗಿಗಳು ಮರಣಹೊಂದಿದರೆಂದು, ಡಾಕ್ಟರನ ಬಾಯಿಂದಲೇ ನಮ್ಮ ವಕೀಲನು ಹೊರಡಿಸಿದನು. ಅನಂತರ ನಮ್ಮ ವಕೀಲನು "ಆಸ್ಪತ್ರೆಯಲ್ಲಿದ್ದ ನಮ್ಮ ಮನುಷ್ಯನ ಮೈಮೇಲಿನ ಬೊಕ್ಕೆಗಳು ಹಕ್ಕಳೆಗಟ್ಟಿ, ಉದುರಿಹೋದುವೋ, ಅಥವಾ ತಮ್ಮಷ್ಟಕ್ಕೆ ತಾವೇ ಅಡಗಿ ಹೋದುವೋ?" ಎಂದು ಕೇಳಿದನು. ಅದಕ್ಕೆ ಡಾಕ್ಟರನು ಹಕ್ಕಳೆಗಟ್ಟದೆ ತನ್ನಷ್ಟಕ್ಕೇ ಅಡಗಿದುವೆಂದು ಉತ್ತರ ಕೊಟ್ಟನು. ನಮ್ಮ ವಕೀಲನು ಆ ಡಾಕ್ಟರನಿಗೆ "ಸಿಡುಬಿನ ಬೀಜ (Vaccinoid)" ಎಂದರೇನೆಂದು ಸವಾಲು ಮಾಡಿದನು. ಅದಕ್ಕೆ ಆ ಅಜ್ಞಾನಿಯು "ಡಾ. ಬೋನೆಲ್ (Bonnel) ರು ಕೊಡುತ್ತಿದ್ದ ಪುಡಿಕೆಗಳು" ಎಂದು ಉತ್ತರ ಕೊಟ್ಟನು. ಆಗ ನಮ್ಮ ವಕೀಲನು ಮೈಲಿಯ ಬೀಜ (ವ್ಹಾಕ್ಸಿನಾಯಿಡ್) ಮತ್ತು 'ವ್ಹೆರಿಯೋಲಾಯಿಡ' ಇವುಗಳ ಭೇದವನ್ನು ಕೋರ್ಟಿಗೆ ವಿಶದವಾಗಿ ತಿಳುಹಿ ಹೇಳಿದನು. "ವ್ಹೆರಿಯೋಲಾಯಿಡ" ಎಂದರೆ ಸಿಡುಬಿನ ಬೇನೆಯ ಪ್ರತಿಬಂಧಕ ಪುಡಿಗಳು. "ವ್ಹಾಕ್ಸಿನಾಯಿಡ" ಎಂದರೆ ಮೈಲೀ ಬೇನೆಯ ರೋಗಿಯ ಮೈಮೇಲಿನ ಹಕ್ಕಳೆಯನ್ನು "ಹೋಮಿಯೋಪಥಿ" ಪದ್ಧತಿಯ ಪ್ರಕಾರ ಸಂಸ್ಕಾರಗೊಳಿಸಿ, ಮಾನಿಸದೆ ಇದ್ದ ಜನರಿಗೆ ಕೊಡುವುದರಿಂದ ಏಳುವ ಸಣ್ಣ ಸಣ್ಣ ಬೊಕ್ಕೆಗಳು.

"ಅನಂತರ ವಕೀಲನು, "ಹೋಮಿಯೋಪಥಿ" ಪದ್ಧತಿಯ ಪ್ರಕಾರ ಕೊಡುತ್ತಿದ್ದ ಔಷಧವು ಹಳೆಯ ಪದ್ಧತಿಗಿಂತ ಒಂದು ತೂಕ ಹೆಚ್ಚಿನ ಯೋಗ್ಯತೆಯುಳ್ಳದ್ದು" ಎಂಬ ಬೇರೆ ಕೋರ್ಟುಗಳ ತೀರ್ಪಾನಗಳನ್ನೂ ಕೋರ್ಟಿನ ಲಕ್ಷ್ಯಕ್ಕೆ ತಂದುಕೊಟ್ಟನು. ಮತ್ತು ಹಳೆಯ ಪದ್ಧತಿಯ ಪ್ರಕಾರ ಔಷಧ ತೆಗೆದುಕೊಂಡ ರೋಗಿಗಳಲ್ಲಿ ೧೦೦ಕ್ಕೆ ೨೦ರಷ್ಟು ಜನ ಸತ್ತರೆಂಬುದನ್ನೂ ಹೋಮಿಯೋಪಥಿ ಪದ್ಧತಿಯ ಪ್ರಕಾರ ಉಪಚಾರ ಹೊಂದಿದ ರೋಗಿಗಳಲ್ಲಿ ಒಬ್ಬನೂ ಮರಣಹೊಂದಲಿಲ್ಲೆಂಬುದನ್ನೂ ಕೋರ್ಟಿನೆದುರು ಸಪ್ರಮಾಣ ಸಿದ್ಧ ಮಾಡಿ ತೋರಿಸಿದನು. ಹೊಟ್ಟೆಯಲ್ಲಿ ತೆಗೆದುಕೊಳ್ಳುವ—ಸಿಡುಬು ಪ್ರತಿಬಂಧಕ—ಉಪಾಯವು ಪರಿಣಾಮಕಾರಿಯಾಗಿ ಇರುವುದಲ್ಲದೆ, ಸುರಕ್ಷಿತವೂ ಇರುವುದೆಂದು ಅತನು ಸಪ್ರಮಾಣವಾಗಿ ಸಿದ್ಧ ಮಾಡಿ, ಈ ವಿಷಯಕ್ಕೆ ಸೊತ್ತಿರಬೇಕಾದ ಸಂಗತಿಗಳನ್ನು ಸರಕಾರಿ ಡಾಕ್ಟರನು ಅರಿತಿಲ್ಲವೆಂದು ಕೋರ್ಟಿಗೆ ಮನದಟ್ಟಾಗುವಂತೆ ಹೇಳಿಬಿಟ್ಟನು.

ಈ ಸೂಚನೆಗಳನ್ನು ಗ್ರಹಿಸಿ, ಕೋರ್ಟಿನವರು, ನನ್ನ ಮೇಲಿನ ಖಟ್ಲೆಯನ್ನು ಕಿತ್ತುಹಾಕಿಬಿಟ್ಟರು."

ಮನೋರಂಜಕವೂ ಬೋಧಪ್ರದವೂ ಆದ, ಕೋರ್ಟಿನಲ್ಲಿ ನಡೆದ ವಿಶದ ಸಂಗತಿಯನ್ನು ಮುಂದಿನ ಲೇಖನದಲ್ಲಿ ಕೊಡಬೇಕೆಂದಿರುವೆನು.

ಆಧಾರ ಗ್ರಂಥಗಳು

1) Homeopathic recorder America
vol. LVI. Jan 1941. Issue No. 1
Page 31.

2) Skin diseases: by. Dr. Burnnett M. D.

3) Dictionary of Materia Medica: by John. H. clarke Vols. II and III.

4) Meteria Medica of the nosodes: by H. C. Allen M. D.

ದ್ವೇಷವೆ ಧರ್ಮದ ಮರ್ಮವಯ್ಯಾ!

(ಒಂದು ಕಥೆ *)

ಡಿ. ಬಿ. ಪಾರ್ಥಸಾರಥಿರಾಯರು

★

ಜಾಮಿಾದನ ಧರ್ಮವಾವುದು? ಆತ ಹಿಂದುವೊ ಮುಸಲ್ಮಾನನೊ? ಎರಡೂ ಅಲ್ಲ, ಆತ ಮನುಷ್ಯ! ಅವನು ಅನುಸರಿಸುವುದು ಮನುಷ್ಯಧರ್ಮ! ಜಾಮಿಾದನಂತಹ ಧರ್ಮವನ್ನೆ ಎಲ್ಲರೂ ಪುರಸ್ಕರಿಸಕೊಡಗಿದರೆ ಮುಸ್ಲೀಮ್ ಲೀಗು ಏತಕ್ಕೆ, ಹಿಂದೂ ಮಹಾಸಭೆ ಏತಕ್ಕೆ!

★

೧

ಯಾರ ನೌಕರರಲ್ಲದಿದ್ದರೂ ಎಲ್ಲರ ನೌಕರರಾಗಿಯೂ, ತಮ್ಮದೆಂದು ಒಂದೂ ಕೆಲಸವಿಲ್ಲದಿದ್ದರೂ ತಲೆತುರಿಸಿಕೊಳ್ಳಲಿಕ್ಕೆ ಬಿಡುವಿಲ್ಲದವರಾಗಿಯೂ ಇರುವ ಮಹನೀಯರು, ಈ ಜಗತ್ತಿನಲ್ಲಿ ಕೆಲವು ಜನ ಇದ್ದಾರೆ. 'ಜಾಮಿಾದ'ನು ಇದೇ ವರ್ಗಕ್ಕೆ ಸೇರಿದವನೆಂದು ಹೇಳಬಹುದು. ಇವನು ಯಾವಾಗಲೂ ನಿಶ್ಚಿಂತ. ಯಾರಿಂದಿಗೂ ಹಗೆಯಿಲ್ಲ, ಕೆಳೆಯಿಲ್ಲ. ಯಾರಾದರೂ ಇವನೊಂದಿಗೆ ನಗು-ನಗುತ್ತ ಮಾತನಾಡಿದರೆ ಸಾಕು, ಅವರಿಗೆ 'ಜಾಮಿಾದ' ಸಂಬಳವಿಲ್ಲದ ಆಳು, ಬತ್ಯವಿಲ್ಲದ ಭೃತ್ಯ! ಸ್ವಾರ್ಥರಹಿತವಾದ ಯಾವ ಕೆಲಸವನ್ನು ಮಾಡಲಿಕ್ಕೂ ಆತನಿಗೆ ಆನಂದವೆನಿಸುವುದು. ಊರಲ್ಲಿ ಯಾರೇ ಕಾಯಿಲೆ-ಕಸರಿಕೆಯಿಂದ ಬಿದ್ದುಕೊಳ್ಳಲಿ; ಜಾಮಿಾದ ಅವರ ಆರಯಿಕೆ-ಉಪಚಾರಗಳಿಗಾಗಿ ಕೈಕಟ್ಟಿ ನಿಂತಿರುವನು. ಆವಶ್ಯಕವೆಂದು ಹೇಳಿದರೆ ನಟ್ಟಿರುಳಲ್ಲಿಯೂ ವೈದ್ಯರ ಮನೆಗೆ ಹೋಗಿ ಬರುವನು. ಔಷಧಿಗೊಂದು ಬೇರು ಬೇಕಾಗಿದೆಯೆಂದು ಸೂಚಿಸಿದರೆ ಬರಿಗಾಲು ಬರಿಮೈಯಿಂದಲೆ ನಡುಬೆಟ್ಟವನ್ನೇರಿ ಇಳಿದು ಬರುವನು. ಬಡವರ ಛಲನೆ ನಡೆದುದನ್ನು ಎಲ್ಲಿ ಯಾದರೂ ನೋಡಿದರೆ, ತನಗೇಕೆ ಬೇಕೆಂದು ಜಾಮಿಾದ ಎಂದೂ ಕೈಮುಚ್ಚಿ ಕುಳಿತುಕೊಳ್ಳುವವನಲ್ಲ. ಆಗ ಜೇವವನ್ನು ಪಣವಾಗಿ ಒಡ್ಡಲಿಕ್ಕೂ ಆತ ಹಿಂಜೆಗೆಯುವಾರ. ಜಾಮಿಾದನ ಜೀವನದಲ್ಲಿ ಇಂತಹ ಪ್ರಸಂಗಗಳು ಎಷ್ಟೋ ಏನೋ! ಪೋಲೀಸಕೊಂದಿಗೆ ಆತನ ಜಗಳಾಟ ನಿತ್ಯವೂ ಇದ್ದುದೆ; ಆದುದರಿಂದಲೆ ಜಾಮಿಾದನನ್ನು ಅನೇಕರು 'ತಲೆತಿರುಕ' ಎಂದು ತಿಳಿಯುತ್ತಿದ್ದರು; 'ಎಕ್ಸ್‌ಪ್ರ' ಎಂದು ಭಾವಿಸುತ್ತಿದ್ದರು. ಪಸ್ತುಸ್ಥಿತಿಯೂ ಹಾಗೆಯೆ ಇದ್ದಿತು. ಎರಡನೆಯವರ ತಲೆಹೊರೆಯನ್ನು ಒತ್ತಾಯದಿಂದ ಕಿತ್ತುಕೊಂಡು ತಾನೆ ಹೊತ್ತುಕೊಂಡೊಯ್ದು ಕೊಟ್ಟು ಬರುವವನನ್ನೂ, ಇನ್ನೊಬ್ಬರ ಮನೆಯ ಮಾಳಿಗೆಯೆಬ್ಬಿಸಲಿಕ್ಕೆ—ಮನೆಗೆ ಬೆಂಕೆಹತ್ತಿದುದನ್ನು ಆರಿಸಲಿಕ್ಕೆ—ಗಾವುದ ಗಾವ್ದದ ದಾರಿ ಓಡಿಹೋಗುವವನನ್ನೂ ತಿಳಿವಳಿಕೆಯುಳ್ಳವನೆಂದು ಯಾರು ಒಪ್ಪಿಕೊಂಡಾರು! ಸಾರಾಂಶವೆಂದರೆ ಇಷ್ಟು: ಜಾಮಿಾದನಿಂದ ಎರಡನೆಯವರಿಗೆ ಎಷ್ಟೇ ಲಾಭವಾಗಲಿ, ಜಾಮಿಾದನಿಗೆ ಇನ್ನೊಬ್ಬರಿಂದ ಒಂದು ಕುರುಡು ಕಪರ್ದಿಯ ಲಾಭವೂ ಇರಲಿಲ್ಲ; ಇಷ್ಟೇ ಅಲ್ಲ, ಒಪ್ಪೊತ್ತಿನ ಊಟಕ್ಕಾಗಿ ಇನ್ನೊಬ್ಬರ ಮುಖದ ಕಜೆಗೆ ನೋಡುವ ಪ್ರಸಂಗ ತಪ್ಪುತ್ತಿರಲಿಲ್ಲ ಅವನಿಗೆ. ಜಗತ್ತಿನ ದೃಷ್ಟಿಯಿಂದ ಆವನೊಬ್ಬ ಹುಚ್ಚ; ಆದರೂ ಆತನ ಹುಚ್ಚಿನಿಂದ ಲಾಭ ಹೊಂದುತ್ತಿರುವ ಜನರಿಗೇನೂ ಕೊರತೆಯಿರಲಿಲ್ಲ.

೨

ಕೊನೆಗೆ ಜನರು ಯಾರು ಯಾರೋ, ಜಾಮಿಾದನಿಗೆ ಆಗಾಗ ಉಪದೇಶ ಮಾಡತೊಡಗಿದರು:

"ಆಲ್ಲೋ, ನೀನು ಯಾವಾಗ ನೋಡಿದರೂ ಎರಡನೆಯವರ ಸಲುವಾಗಿ ಸಾಯುತ್ತಿರುತ್ತಿಯಾ! ಆದರೆ ನಿನ್ನ ಯೋಗಕ್ಷೇಮ ಕೇಳುವವರು ಯಾರಾದರೂ ಇದ್ದಾರೆಯೆ? ಎಂದಾದರೂ ನೀನು ಕಾಯಿಲೆಯಿಂದ ಮಲಗಿನೆಯೆಂದು ತಿಳಿ! ಆಗ ನಿನಗೊಂದು ಗುಟುಕು ನೀರನ್ನು ಕೊಡುವರೇ ಯಾರಾದರೂ? ನೀನು ಎಲ್ಲಿಯವರೆಗೆ ಇನ್ನೊಬ್ಬರ ಸೇನೆಯನ್ನು ಮಾಡಿಕೊಂಡಿರುತ್ತೀಯೊ ಅಲ್ಲಿಯವರೆಗೆ ಜನರು ಏನೋ ದಾನ-ಧರ್ಮಕ್ಕೆ ಕೊಟ್ಟಂತೆ ನಿನಗೆ ಏನಾದರೂ ಕೊಡಬಹುದಿಷ್ಟೆ! ಯಾವಾಗ ನಿನಗೆ ಪ್ರಸಂಗ ಒದಗೀತೋ ಆಗ, ನಿನ್ನೊಂದಿಗೆ ಒಳ್ಳೆಯವರೆಡು ಮಾತನಾಡಲಿಕ್ಕೂ ಯಾರೂ ಸಿದ್ಧರಾಗರು..ತಿಳಿಯಿತೇ?"

ಇಂತಹ ಉಪದೇಶಗಳಿಂದ ಜಾಮಿಾದನ ಕಣ್ಣು ತೆರೆದುವು. ಅವನವೆಂದು ಪಾತ್ರೆ-ಪಡಿಗ ಒಂದೂ ಇರಲಿಲ್ಲ. ಒಂದು ದಿನ ಹಾಗೆಯೆ ಎದ್ದ; ಎದ್ದು ದಾರಿಯೊಂದನ್ನು ಹಿಡಿದು ಹೊರಟ. ಎಂಟು ದಿನ ದಾರಿ ನಡೆದಮೇಲೆ ಬಂದು ಪಟ್ಟಣಕ್ಕೆ ಬಂದು ತಲ್ಪಿದ.

---

* ಹಿಂದೀ ಕಥಾಸಾಹಿತ್ಯಸಮ್ರಾಟರಾದ ಸ್ವರ್ಗೀಯ ಪ್ರೇಮಚಂದರ ಕತೆಯೊಂದರ ಅನುವಾದವಿದು. ಬಿ. ಪಿ. ಎಸ್. ರಾವ್.

ಪಟ್ಟಣ ತುಂಬ ದೊಡ್ಡದು. ದೊಡ್ಡ ದೊಡ್ಡ ಉಪ್ಪರಿಗೆಯ ಮನೆಗಳು ಮುಗಿಲಿನೊಂದಿಗೆ ಮಾತನಾಡಲು ಹೊಂಟಿದ್ದುವು. ಅಗಲವಾದ ಹಸನಾದ ಬೀದಿಗಳು; ಆಕರ್ಷಕವಾದ ಪೇಟೆ. ಮಸೀದೆ ಮತ್ತು ಗುಡಿಗಳ ಸಂಖ್ಯೆ ಮನೆಯ ಸಂಖ್ಯೆಯಷ್ಟು ಇರಲಿಲ್ಲವಾದರೂ ಕಡಿಮೆಯೇನೂ ಇರಲಿಲ್ಲ. ಹಳ್ಳಿಯೂರಲ್ಲಿ ಏನು, ಮಸೀದೆಯಿರಲಿಲ್ಲ; ಹೇಳಿಕೊಳ್ಳುವಂತಹ ದೇವಾಲಯವೂ ಇರಲಿಲ್ಲ. ಮುಸಲ್ಮಾನರು ಎಲ್ಲಿಯೆ ಒಂದು ಚಾವಡಿಯ ಪೌಳಿಯಲ್ಲಿ ನಮಾಜು ಮಾಡುತ್ತಿದ್ದರು. ಹಿಂದುಗಳು ಯಾವುದೊ ಒಂದು ಗಿಡದಡಿಯ ದೇವರ ತಲೆಯುಮೇಲೆ ನೀರು ಹುಯ್ಯುತ್ತಿದ್ದರು. ಪಟ್ಟಣದಲ್ಲಿಯ ಈ ಧರ್ಮಮಾಹಾತ್ಮ್ಯವನ್ನು ಕಂಡು ಜಾವಿಯಾದನಿಗೆ ತುಂಬ ಕುತೂಹಲವುಂಟಾಯಿತು; ಆನಂದವೂ ಆಯಿತು. ಜಾವಿಯಾದ ಧರ್ಮಕ್ಕೆ ಕೊಡುವಂತಹ ಸ್ಥಾನವನ್ನು ಇನ್ನಾವುದಕ್ಕೂ ಕೊಡುವವನಲ್ಲ ಆತ ತನ್ನೊಳಗೇ ಯೋಚಿಸ ತೊಡಗಿದ:

"ಇಲ್ಲಿಯ ಜನ ತುಂಬ ಪ್ರಾಮಾಣಿಕರಾಗಿಯೂ ಸತ್ಯವಂತರಾಗಿಯೂ ಇರಬಹುದು. ಇವರಲ್ಲಿ ಎಷ್ಟೊಂದು ದಯೆ, ಎಷ್ಟೊಂದು ವಿವೇಕ, ಎಷ್ಟೊಂದು ಸಹಾನುಭೂತಿ ಇದ್ದಿತು? ಎಂತಲೆ ಇಲ್ಲಿಯ ಜನ ದೇವರನ್ನು ಇಷ್ಟೊಂದು ಶ್ರದ್ಧೆಯಿಂದ ಪೂಜಿಸುತ್ತಾರೆ!"

ಜಾವಿಯಾದ ಹೋಗುಬರುವ ಜನದ ಕಡೆಗೆ ಶ್ರದ್ಧೆಯಿಂದ ನೋಡ ತೊಡಗಿದ; ನಮ್ರತೆಯಿಂದ ತಲೆಯನ್ನು ಬಲದಾಡಿಸುತ್ತಿದ್ದ. ಅಲ್ಲಿಯ ಜನವೆಲ್ಲರೂ ಜಾವಿಯಾದನಿಗೆ ದೇವತೆಗಳಂತೆ ಕಂಡರು.

ಹಾಗೆಯೆ ಪಟ್ಟಣದಲ್ಲಿ ಸುತ್ತಾಡುತ್ತಿರುವಾಗಲೆ ಸಂಜೆ ಯಾಯಿತು. ಜಾವಿಯಾದ ಬೇಸತ್ತ ಪ್ರಯಾಣದವನಾಗಿ ಒಂದು ದೇವಾಲಯದ ತುದಿಗಟ್ಟೆಯ ಮೇಲೆ ಕುಳಿತುಕೊಂಡ. ದೇವಾಲಯ ವಿಶಾಲವಾದುದು; ಮೇಲೆ ಚಿನ್ನದ ಕಳಸ ಮಿಂಚುತ್ತಿದ್ದಿತು. ಒಳಗಣ ರಂಗಮಂಟಪದಲ್ಲೆಲ್ಲ ಅಪೂರ್ವತೆಲೆಯ ನೆಲಗಟ್ಟು ಇದ್ದಿತು. ಇಷ್ಟೆಲ್ಲವಾದರೂ ದೇವಾಲಯದ ಅಂಗಳದಲ್ಲಿ ಪೌಳಿಯಲ್ಲಿ ಅಲ್ಲಲ್ಲಿಯೆ ಕಸ, ಸೆಗಣಿಯ ಮುದ್ದೆ ಬಿದ್ದಿದ್ದುವು. ಕೊಳೆ-ಕಸಗಳನ್ನು ಕಂಡರೆ ಜಾವಿಯಾದನಿಗೆ ಆಗುತ್ತಿರಲಿಲ್ಲ. ದೇವಾಲಯದ ಈ ಅವಸ್ಥೆಯನ್ನು ಕಂಡು ಅತನಿಂದ ಸುಮ್ಮನಿರಲಿಕ್ಕೆ ಆಗಲಿಲ್ಲ. ಕಸಬರಿಗೆಯೊಂದು ಸಿಕ್ಕರೆ ತೆಗೆದುಕೊಂಡು ಕಸ-ಕೊಳೆಯನ್ನೆಲ್ಲ ಗುಡಿಸಿ ಸ್ವಚ್ಛಮಾಡಬೇಕೆಂದು ಅತ್ತಿತ್ತ ಹುಡುಕಾಡಿದ. ಕಸಬರಿಗೆಯೆಲ್ಲಿಯೂ ಸಿಕ್ಕಲಿಲ್ಲ. ನಿರುಪಾಯನಾಗಿ ತನ್ನ ಹೆಗಲ ಮೇಲಿನ ಪಾವುಡದಿಂದಲೆ ಕಟ್ಟೆ-ಅಂಗಳಗಳನ್ನು ಗುಡಿಸಿ ಸ್ವಚ್ಛ ಮಾಡತೊಡಗಿದ.

ಸ್ವಲ್ಪ ವೇಳೆಯಲ್ಲಿಯೆ ದೇವಭಕ್ತರ ಗುಂಪು ಅಲ್ಲಿ ಕೂಡತೊಡಗಿತು. ಅಂಗಳದ ಕಸಗುಡಿಸುತ್ತಿರುವ ಜಾವಿಯಾದನನ್ನು ಆ ಗುಂಪೆಲ್ಲ ನೋಡಿತು. ತಮ್ಮ-ತಮ್ಮಲ್ಲಿಯೆ ಮಾತು-ಕತೆಗೆ ಆರಂಭ ವಾಯಿತು:

'ನೋಡಿದರೆ ಮುಸಲ್ಮಾನನ ಹಾಗೆ ಕಾಣುತ್ತಾನೆ!'

'ಛೆ! ಛೆ! ಹೊಲೆಯ ಇರಬಹುದು!'

'ಅಲ್ಲ, ಹೊಲೆಯನಿರಲಾರ! ಹೊಲೆಯರು ತಮ್ಮ ಒಟ್ಟೆಗಳಂದೆ ಎಂದೂ ಕಸಗುಡಿಸುತ್ತಿರುವುದಿಲ್ಲ!'

'ಎಲ್ಲಿಯವನಾದರೂ ಡಿಟೆಕ್ಟಿವ್ ಅಂದರೆ ಗುಪ್ತಪೋಲಿಸ ಇರಬಹುದೇನೋ!"

'ಎಲ್ಲಿಯ ಮಾತಿದು, ಪೋರೆಯ ಮೇಲೆಯೆ ಕಾಣುವುದಿಲ್ಲವೆ-ತುಂಬ ಸಭ್ಯನಾಗಿದ್ದಂತೆ ಕಾಣುತ್ತಾನೆ!'

'ಹಸನ್ನಿಹುಖಾವಿಖಾ ಜನರಲ್ಲಿ ಬಬ್ಬನಿದ್ದರೂ ಇರಬಹುದು!'

'ಅವನಿಗೆ ಬೇಕಾಗಿದೆ ಸೆಗಣಿ! ಸೆಗಣಿ ಬೇಕಾಗಿ ಗುಡಿಸುತ್ತಿದ್ದಾನೆ. ಯಾವನಾದರೂ ಮುಮ್ಮಣಿಗ (ನೇಕಾರ) ಇರಬಹುದಿಷ್ಟೆ! (ಜಾವಿಯಾದನನ್ನು ಕುರಿತು) ಏ, ಎಲ್ಲಿಯವನೋ ನೀನು? ಸೆಗಣಿಗೆ ಕೈಪಚ್ಚಿದರೆ ನೋಡು ನಿನ್ನ ಗತಿ!'

'ಸಾಹೇಬ್, ನಾನೊಬ್ಬ ಪರದೇಶದ ಪ್ರವಾಸಿ. ಸೆಗಣಿಯನ್ನು ತೆಗೆದುಕೊಂಡು ನಾನೇನು ಮಾಡಲಿ? ಏನೋ ದೇವರ ಮಂದಿರ ನೋಡಿದೆ, ಬಂದು ಕುಳಿತೆ. ತುಂಬ ಕಸ ಬಿದ್ದಿತ್ತು. ಇಲ್ಲಿಗೆ ಬರುವವರೆಲ್ಲ ಭಕ್ತ ಜನರು. ಅವರಿಗೆ ಕೊಂದರೆಯೇಕೆಂದು ನಾನೇ ಕಸ ತೆಗೆಯತೊಡಗಿದೆ!'

'ನೀನು ಮುಸಲ್ಮಾನರವ ಅಲ್ಲವೇನೋ?'

'ಅದರೇನಾಖಿತು ಸಾಹೇಬ್, ದೇವರೆಂದರೆ ಎಲ್ಲರಿಗೂ ದೇವರೆ ಅಲ್ಲವೆ. ಅವನ ಬಳಿಯಲ್ಲಿ ಹಿಂದು ಏನು, ಮುಸಲ್ಮಾನ್ ಏನು?'

'ಏನು? ನೀನು ಈ ನಮ್ಮ ದೇವರನ್ನು ಮುನ್ನಿಸುತ್ತೀಯಾ?'

'ದೇವರನ್ನು ಯಾರು ಮುನ್ನಿಸಲಿಕ್ಕಿಲ್ಲ ಸಾಹೇಬ್? ಯಾವನು ನನ್ನನ್ನು ಹುಟ್ಟಿಸಿ ದೊಡ್ಡವನನ್ನಾಗಿ ಮಾಡಿದ್ದಾನೋ ಅವನನ್ನು ಅಲ್ಲದೆ? ಇನ್ನಾರನ್ನು ಮನ್ನಿಸಬೇಕು?'

ಭಕ್ತವೃಂದಲ್ಲಿ ಏನೇನೋ ವಿಚಾರ-ಯೋಚನೆ ನಡೆದುವು. ಗುಜುಗುಜು ಮಾತು ಕೇಳಬಂದಿತು.

'ಎಲ್ಲಿಯವನೋ ಹಳ್ಳಿಯ ಹುಂಬ ಇರಬೇಕು!'

'ಇವನನ್ನು ಬಿಡಬಾರದು; ನಮ್ಮ ಬುಟ್ಟಿಗೆ ಹಾಕಬೇಕು—ಏನಾದರೂ ಮಾಡಿ!'

೩

ಜಾವಿಯಾದ ಬುಟ್ಟಿಗೆ ಸಿಕ್ಕಿಬಿದ್ದ. ಆತನಿಗೆ ಪೂಜಾ-ಮರ್ಯಾದೆ ದೊರೆಯತೊಡಗಿತು. ಗಾಳಿ-ಬೆಳಕುಗಳುಳ್ಳ ಮನೆಯೊಂದು ಇರಲಿಕ್ಕೆ ಸಿಕ್ಕಿತು. ಎರಡುಹೊತ್ತೂ ಸವಿ-ಸವಿಯು ಉಣಿಸು-ತಿನಿಸು ದೊರೆಯಲಾರಂಭಿಸಿತು. ಯಾವಾಗಲೂ ನಾಲ್ಕಾರು ಜನ ಎಡಬಲದಲ್ಲಿ ಕಾಣತೊಡಗಿದರು. ಜಾವಿಯಾದನ ಕಂಠ ಮಧುರ ವಾದುದು; ಅನೇಕ ಕೀರ್ತನೆಗಳು ಅವನಿಗೆ ಮುಖಪಾಠವಿದ್ದುವು. ನಿತ್ಯವೂ ಅವನು ದೇವಾಲಯಕ್ಕೆ ಹೋಗಿ ಕೀರ್ತನೆಗಳನ್ನು ಹೇಳ-ಲಾರಂಭಿಸಿದ. ಭಕ್ತಿಯ ಜೊತೆಗೆ ಸ್ವರಲಾಲಿತ್ಯ ಬೆರೆತ ಮೇಲೆ ಕೇಳಬೇಕೆ? ಅವನ ಕೀರ್ತನೆಗಳು ಜನರನ್ನು ತುಂಬ ಆಕರ್ಷಿಸಿದುವು. ಸಂಗೀತದ ಆಶೆಯಿಂದ ಅಸಂಖ್ಯ ಜನರು ದೇವಾಲಯಕ್ಕೆ ಬರತೊಡಗಿದರು. 'ಸಾಕ್ಷಾತ್ ಪರಮಾತ್ಮನೆ ಈ ತನ್ನ ದೂತ.

ನನ್ನು ಇಲ್ಲಿಗೆ ಕಳುಹಿದ್ದಾನೆ' ಎಂದು ಎಲ್ಲರೂ ವಿಶ್ವಾಸದಿಂದ ಹೇಳಿಕೊಳ್ಳಹತ್ತಿದರು.

ಮಂದಿರದಲ್ಲಿ ಒಂದು ದಿನ ತುಂಬಾ ಜನ ಸೇರಿದರು. ಅಂಗಳದ ತುಂಬ ಹಾಸಿಗೆಹಾಕಿದ್ದಿತು. ಜಾವಿಯಾದನಿಗೆ 'ಮುಂಡನವಿಧಿ' ನಡೆಯಿತು. ಹೊಸಬಟ್ಟೆಗಳನ್ನು ಉಡಿಸಿ ತೊಡಿಸಿ ಆಯಿತು ನೋಮ-ಶವನವಾಯಿತು. ಜಾವಿಯಾದನ ಕಡೆಯಿಂದ ನೆರೆದವರೆಲ್ಲರಿಗೂ ಸವಿಯುಣಿಸನ್ನು ಹಂಚಿಸಲಾಯಿತು.

ಇದನ್ನೆಲ್ಲ ನೋಡಿದ ಜಾವಿಯಾದನಿಗೆ ಏನೂ ತಿಳಿಯದಂತಾಯಿತು. ತನಗೆ ಆಶ್ರಯವನ್ನಿತ್ತ ಜನರ ಧರ್ಮನಿಷ್ಠೆ-ಔದಾರ್ಯಗಳಿಗೆ ತನ್ನ ಮನಸ್ಸನ್ನೆ ಮಾರುಗೊಟ್ಟ. ಆಗಾಗ ಯೋಚಿಸತೊಡಗಿದ :

' ಈ ಜನರು ಎಂತಹ ಸಜ್ಜನರಾಗಿದ್ದಾರೆ? ನನ್ನಂತಹ ಹರಕು ಬಟ್ಟೆಯ ದೇಸಗನಿಗೆ ಇಷ್ಟೊಂದು ಆದರಸತ್ಕಾರಗಳೇ? ನಿಜವಾದ ಧರ್ಮವೆಂದರೆ ಇದೇ !! '

ಜಾವಿಯಾದ ಹುಟ್ಟಿದಂದಿನಿಂದ ಒಂದು ಸಲವೂ ಇಂತಹ ಸತ್ಕಾರ ಕಂಡವನಲ್ಲ. ಆದರೆ ಆದೇ ಆ ವಿದೇಶಿಗ ತರುಣ— ತಲೆತಿರುಕನೆಂದು ಕರೆಯಿಸಿಕೊಳ್ಳುತ್ತಿದ್ದವ— ಇಲ್ಲಿಯ ಭಕ್ತವರ್ಗಕ್ಕೆಲ್ಲ ಕೀರ್ತಿದಂತಾಗಿ ಶೋಭಿಸುತ್ತಲಿದ್ದ. ನೂರಾರು ಜನರು ಅವನನ್ನು ಕಾಣಲಿಕ್ಕೆ ಬರುತ್ತಿದ್ದರು. ಆತನ ಪಾಂಡಿತ್ಯದ ವಿಷಯದಲ್ಲಿ ವಿವಿಧಮುಖವಾಗಿ ಲೋಕವಾರ್ತೆ ಹಬ್ಬತೊಡಗಿತು. ವರ್ತಮಾನಪತ್ರಗಳಲ್ಲಿ **'ಒಬ್ಬ ಪ್ರಸಿದ್ಧ ಮೌಲ್ವೀಸಾಹೇಬರು ಹಿಂದುಗಳಾದರು !'** ಎಂದು ದಪ್ಪಕ್ಷರಗಳಲ್ಲಿ ಸುದ್ದಿ ಪ್ರಕಟವಾದುವು. ಯಾವ ಕೊಂಕೂ ಗೊತ್ತಿಲ್ಲದ ಸರಳಹೃದಯದ ಜಾವಿಯಾದನಿಗೆ ಇವೆಲ್ಲ ಮಾನ-ಮರ್ಯಾದೆಗಳಲ್ಲಿಯ ರಹಸ್ಯವೇನೆಂಬುದೆ ಗೊತ್ತಾಗಲಿಲ್ಲ. ಈ ಎಲ್ಲ ಧರ್ಮಪರಾಯಣರಾದ ಸಹೃದಯ ಜನರ ಸಲುವಾಗಿ ಜಾವಿಯಾದ ಯಾವುದನ್ನು ತಾನೆ ಮಾಡಲಿಕ್ಕೆ ಸಿದ್ಧನಾಗಲಾರ? ನಿತ್ಯವೂ ಅವನು ದೇವರಪೂಜೆ ಮಾಡತೊಡಗಿದ. ಭಜನೆ-ಕೀರ್ತನೆಗಳನ್ನು ಹೇಳಲಾರಂಭಿಸಿದ. ಇದೆಲ್ಲವೂ ಅವನಿಗೇನು ಹೊಸದಾಗಿ ಇರಲಿಲ್ಲ. ತನ್ನ ಹಳ್ಳಿಯಲ್ಲಿ ಆಗಾಗ ನಡೆಯುತ್ತಿದ್ದ ಸತ್ಯನಾರಾಯಣನ ಪೂಜಾ-ಕಥಾ ಕಾಲದಲ್ಲಿ ಕೂಡ ಜಾವಿಯಾದ, ಭಕ್ತಿಯಿಂದ ಕುಳಿತು ನೋಡುತ್ತಿದ್ದ; ಕೇಳುತ್ತಿದ್ದ. ಊರಲ್ಲಿ ನಡೆಯುವ ಭಜನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದ. ಆದರೆ ಅಲ್ಲಿಗೂ ಇಲ್ಲಿಗೂ ಭೇದವಿದ್ದುದು ಇಷ್ಟು; ಹಳ್ಳಿಯಲ್ಲಿದ್ದಾಗ ಜಾವಿಯಾದನನ್ನು ಯಾರೂ ಕೇಳುವವರಿರಲಿಲ್ಲ; ಇಲ್ಲಿ ಎಲ್ಲರೂ ಆತನ ನಚ್ಚಿನ ಭಕ್ತರು.

ಒಂದು ದಿವಸ ಜಾವಿಯಾದ, ಭಕ್ತವೃಂದವನ್ನು ನಡುವೆ ಕುಳಿತು ಯಾವುದೋ ಪುರಾಣವನ್ನೊ್ದಿ ಹೇಳುತ್ತಿದ್ದನು. ಆಗ ಅವನ ಕಣ್ಣಿದುರು ಒಂದು ನೋಟ ಕಂಡಿತು:

ಎದುರಿನ ದಾರಿಯಲ್ಲಿ ಬಲಿಷ್ಠನಾದ ತರುಣನೊಬ್ಬ ದುರ್ಬಲನಾದ ಮುದುಕನೊಬ್ಬನನ್ನು ಹಿಡಿದು ಹೊಡೆಯುತ್ತಿದ್ದ. ತರುಣನ ಹಣೆಯ ಮೇಲೆ ಗಂಧ, ಕೊರಳಲ್ಲಿ ಯಜ್ಞೋಪವೀತ. ಹೊಡೆತ ತಿಂದ ಮುದುಕ ಅಳುತ್ತಲಿದ್ದ; ಕಳವಳದ ಮುದ್ರೆಯಿಂದ ಏನನ್ನೋ ಬೇಡಿಕೊಳ್ಳುತ್ತಿದ್ದ. ಮತ್ತೆ ಮತ್ತೆ ಕಾಲಮೇಲೆ ಬಿದ್ದು ಹೇಳಿಕೊಳ್ಳುತ್ತಿದ್ದ :

" ಮಹಾರಾಜ, ನನ್ನ ಅಪರಾಧ ಕ್ಷಮಿಸಿರಿ ! "

ಆದರೂ ಆ ತಿಲಕಧಾರಿ ತರುಣನ ಹೃದಯ ಸ್ವಲ್ಪವೂ ಕರಗಲಿಲ್ಲ. ಇದನ್ನು ನೋಡಿದ ಜಾವಿಯಾದನ ನೆತ್ತರು ಕುದಿದು ಹೋಯಿತು. ಇಂತಹ ನೋಟ ಕಣ್ಣಿದುರು ಕಂಡಾಗ, ಜಾವಿಯಾದ ಸುಮ್ಮಗಿದ್ದು ಬಿಡುವವನಲ್ಲ. ಕೂಡಲೆ ಹಾರಿ ಹೊರಕ್ಕೆ ಬಂದ, ಆ ತರುಣನನ್ನು ಬಳಿಸಾರಿ ಕೇಳಿದ :

" ಯಾಕೆ ಹೊಡೆಯುತ್ತೀಯಾ ಈ ಮುದುಕ ಪ್ರಾಣಿಯನ್ನು ? ಪಾಪ, ನಿನಗೆ ಈ ಅಶಕ್ತನ ವಿಷಯದಲ್ಲಿ ಸ್ವಲ್ಪ ಕೂಡ ದಯೆ ಉಂಟಾಗದೆ ? '

" ದಯೆ-ಯೇ ? ಇನ್ನೂ ಏನಾಗಿದೆ ? ಹೀಗೆಯೆ ಹೊಡೆದು ಹೊಡೆದು ಇವನ ಮೂಳೆಯನ್ನು ಮುರಿದು ಹಾಕುತ್ತೇನೆ ! " ಯುವಕನೆಂದ.

" ಆದು ಸರಿ, ಆದರೆ ಈತ ಮಾಡಿರುವ ಅಪರಾಧವಾದರೂ ಏನು ? " ಜಾವಿಯಾದ ಕೇಳಿದ.

" ಇವನ ಕೋಳಿ ನಮ್ಮ ಮನೆಯಲ್ಲಿ ಹೊಕ್ಕು, ಇಡಿ ಮನೆಯಲ್ಲೆಲ್ಲಾ ಕೊಳೆ ಮಾಡಿ ಬಂದಿವೆ ! " ಯುವಕ ಸಿಡಿಯುತ್ತ ಹೇಳಿದ.

" ಅಲ್ಲವಪ್ಪಾ, ನಿನ್ನ ಮನೆಯಲ್ಲೆಲ್ಲ ಕೊಳೆ ಮಾಡಿಬಾರೆಂದು ಇವನೇನು ಕೋಳಿಗೆ ಕಲಿಸಿ ಕಳುಹಿದ್ದನೇ ? " ಜಾವಿಯಾದ ವ್ಯಂಗ್ಯವಾಗಿ ಕೇಳಿದ. ಮುದುಕ ಹೇಳಲಾರಂಭಿಸಿದ:

" ಖುದಾವಂದ ! ನಾನು ನಿತ್ಯವೂ ಅದನ್ನು ಬುಟ್ಟಿಯಲ್ಲಿ ಮುಚ್ಚಿ ಇಟ್ಟಿರುತ್ತೇನೆ. ಇಂದೆಯೆ ಅದೇಕೋ ಮರೆತುಹೋಯಿತು. ತಪ್ಪಾಯಿತು. ಕ್ಷಮಿಸಬೇಕು— ಎಂದು ಬಂದೆಸವನೆ ಬೇಡಿಕೊಳ್ಳುತ್ತಿದ್ದೇನೆ, ಆದರೂ ಕೇಳಲೊಲ್ಲರು. ಹೊಡೆದು ಹೊಡೆದು ನನ್ನನ್ನು ಅರೆಜೀವಮಾನ್ನಾಗಿ ಮಾಡಿದ್ದಾರೆ.. "

ಯುವಕ ಗುಡುಗಿದ:

"ಏನೆ, ಇನ್ನೂ ನಿನ್ನನ್ನು ಹೊಡೆದಿಲ್ಲ ತಿಳಿಯಿತೇ ? ಇನ್ನು ಮೇಲೆ ಹೊಡೆಯುತ್ತೇನೆ. ಹೊಡೆದು ಹುಡಿಯಲ್ಲಿ ಹೂತು ಬಿಡುತ್ತೇನೆ! "

" ಹೂತುಬಿಡುತ್ತೀಯಾ ? ತಮ್ಮಾ, ಹಾಗೆ ಏನಾದರೂ ಮಾಡು, ನೀನು ಇಲ್ಲಿ ಇರುತ್ತೀಯಾ ಎಂಬುದನ್ನು ನೋಡು ! ಈಗ ಇನ್ನೊಮ್ಮೆ ಕೈಯೆತ್ತಿದ್ದರೆ ಮುಂದಿನ ಪರಿಣಾಮ ಏನಾದೀ ತೆಂಬುದನ್ನು ವಿಚಾರ ಮಾಡು !"

ತರುಣನಿಗೆ ತನ್ನ ಮೈಯ್ಯಲು ಕಸುವಿನ ಬಗೆಗೆ ಹುಚ್ಚು ವಿಶ್ವಾಸವಿದ್ದಿತು. ಎಂತಲೆ ಅವನು ಮತ್ತೆ ಮುದುಕನಿಗೆ ಏಟು ಹಾಕಲು ಕೈಯೆತ್ತಿದನು. ಆ ಏಟು ಮುದುಕನಿಗೆ ತಗಲುವುದರಲ್ಲಿಯೆ, ಜಾವಿಯಾದ ತರುಣನ ಕುತ್ತಿಗೆಗೆ ಕೈಹಾಕಿದ. ಇಬ್ಬರಲ್ಲಿಯೂ ಮಲ್ಲಗಾಳಗಕ್ಕೆ ಪೊದಲಾಯಿತು. ಜಾವಿಯಾದನು ಕೆಚ್ಚೆದೆಯ ಹುಡಿಯಾಳು. ತರುಣನ ಎರಡು ಕಾಲುಗಳಿಗೂ ಒಮ್ಮೆಲೆ ತನ್ನ ಕಾಲಿನಿಂದ

ಟ್ಟಾಂಗು ಹೊಡೆದ; ತರುಣ ಹೊಟ್ಟೆ ಮೇಲಾಗಿ ಒಮ್ಮೆಲೆ ಬಿದ್ದುಬಿಟ್ಟ. ಅವನು ಬೀಳುಬೀಳುತ್ತಿರುವಾಗಲೆ—ಇಡುವರೆಗೆ ಏನೋದದಿಂದ ನೋಡುತ್ತ ದೇವಾಲಯದಲ್ಲಿ ಕುಳಿತಿದ್ದ ಭಕ್ತ ವೃಂದವೆಲ್ಲ—ಒಮ್ಮೆಲೆ ಓಡಿಬಂದಿತು. ನಾಲ್ಕೂ ಕಡೆಯಿಂದಲೂ ಜಾವಿಾದನಿಗೆ ಏಟು ಬೀಳತೊಡಗಿತು. ಜಾವಿಾದನಿಗೆ ಆಶ್ಚರ್ಯ; ಈ ಜನರು ತನ್ನನ್ನೇಕೆ ಹೊಡೆಯುತ್ತಿದ್ದಾರೆಂಬುದೆ ಜಾವಿಾದನಿಗೆ ತಿಳಿಯದಂತಾಯಿತು. ಯಾರೂ ಏನನ್ನೂ ಕೇಳಲಿಲ್ಲ; ತಿಲಕಧಾರಿಯಾದ ತರುಣನಿಗೆ ಯಾರೂ ಏನನ್ನೂ ಅನ್ನಲಿಲ್ಲ-ಆಡಲಿಲ್ಲ. ಬಂದವರೆಲ್ಲ ತನ್ನನ್ನು ಹೊಡೆಯುತ್ತಲಿದ್ದಾರೆ. ಕೊನೆಗೆ ಜಾವಿಾದ ಶಕ್ತಿಗುಂದಿ ನೆಲಕ್ಕೆ ಬಿದ್ದ. ಆಗ ಜನರಲ್ಲಿ ಮಾತು-ಕತೆಗೆ ಆರಂಭವಾಯಿತು:

" ಕೊನೆಗೂ ನಮಗೆ ಕೈ ಕೊಟ್ಟ ಈತ! "

" ಧಿಕ್ಕಾರವಿರಲಿ ನಿನ್ನ ಜಾತಿಗೆ!..ದುಷ್ಟರಾದ ಮ್ಲೇಚ್ಛ-ಮೂರ್ಖರಿಂದ ಒಳ್ಳೆಯದನ್ನೆಂದೂ ಅಪೇಕ್ಷಿಸಲಿಕ್ಕಾಗದು..ಕಾಗೆ ಸೇರುವುದು ತನ್ನ ಜಾತಿಯ ಬಳಗದಲ್ಲಿಯೆ!..ನೀಚನು ಮಾಡುವುದೆಲ್ಲ ನೀಚತನವೇ ಸರಿ!.. ಇವನನ್ನು ಯಾರು ಕೇಳುತ್ತಿದ್ದರು? ದೇವಾಲಯದ ಕಸ ಗುಡಿಸುತ್ತಿದ್ದ; ಮೈಮೇಲೆ ಗಟ್ಟಿಯಾದ ಬಟ್ಟೆ ಕೂಡ ಇರಲಿಲ್ಲ. ನಾವು ಇವನಿಗೆ ಇಷ್ಟೊಂದೆಲ್ಲ ಮಾನಮರ್ಯಾದೆ ಮಾಡಿದೆವು...ಪಶುವನ್ನು ಮನುಷ್ಯನನ್ನಾಗಿ ಮಾಡಿದೆವು; ಆದರೂ ನಮ್ಮವನೇನೂ ಆಗಲಿಲ್ಲ ಈತ..ಈತನ ಧರ್ಮದ ತಳಹದಿಯೆ ಅಂತಹದಿದೆ..! "

* * *

ಜಾವಿಾದನು ದಾರಿಯ ಒಂದು ಪಕ್ಕದಲ್ಲಿ ಬಿದ್ದುಕೊಂಡು ರಾತ್ರಿಯುದ್ದಕ್ಕೂ ನರಳುತ್ತಲಿದ್ದ. ಅವನಿಗೆ ಹೊಡೆತದಿಂದ ಅಷ್ಟೊಂದು ದುಃಖವೆನಿಸಿರಲಿಲ್ಲ. ಇಂತಹ ಏಟುಗಳನ್ನವನು ಈ ಮೊದಲೂ ಎಷ್ಟೋ ಸಲ ತಿಂದಿದ್ದನು. ಆದರೆ ಅವನಿಗೀಗ ದುಃಖವೂ ಆಶ್ಚರ್ಯವೂ ಮತ್ತೆ ಮತ್ತೆ ಎನಿಸುವುದಕ್ಕೆ ಕಾರಣವೆಂದರೆ ' ಈ ಜನರು ಒಂದು ಕಾಲದಲ್ಲಿ ನನಗೆ ಅಷ್ಟೊಂದು ಸನ್ಮಾನವನ್ನೇಕೆ ತೋರಿಸಿದರು .. ಅವರೇ ಇಂದು ಕಾರಣವಿಲ್ಲದೆ ನನ್ನನ್ನು ಈ ರೀತಿ ಏತಕ್ಕಾಗಿ ಥಳಿಸಿದರು? ಇವರ ಸಜ್ಜನಿಕೆಯಿಂದು ಎಲ್ಲಿ ಮರೆಯಾಯಿತು? ನಾನಂತೂ ಮೊದಲಿನ ಜಾವಿಾದನೆ ಇದ್ದೇನೆ; ಯಾವ ಕೆಟ್ಟ ಕೆಲಸವನ್ನೂ ಮಾಡಿಲ್ಲ. ಸಬಲ-ದುರ್ಬಲರ ಅನ್ಯಾಯದ ಕಾದಾಟದಲ್ಲಿ ಎಲ್ಲರೂ ಯಾವ ಕಾರ್ಯಮಾಡುವುದು ಉಚಿತವೊ—ಅದನ್ನೆ ನಾನು ಮಾಡಿದೆನಿಷ್ಟೆ! ಹೀಗಿರುವಾಗ ಈ ಜನರೆಲ್ಲ ನನ್ನ ಮೇಲೆ ಇಷ್ಟೊಂದು ಅತ್ಯಾಚಾರ ಮಾಡಲಿಕ್ಕೆ ಕಾರಣವೇನು? ದೇವರು ರಾಕ್ಷಸರೇಕೆ ಆದರು? ' ಎಂದು.

ಇದೇ ವಿಚಾರದಲ್ಲಿಯೆ ಜಾವಿಾದ ಇರುಳನ್ನು ಕಳೆದ; ಬೆಳಗಾಗಲು ಮನಸ್ಸಿಗೆನಿಸಿದ ದಾರಿಯೊಂದರಿಂದ ಹೊರಟುಬಿಟ್ಟ.

*

ಜಾವಿಾದ ಕೆಲವೊಂದು ಅಂತರ ಕ್ರಮಿಸಿರಬಹುದು. ದಾರಿಯಲ್ಲಿ ನಿನ್ನೆ ಹೊಡೆತ ತಿಂದ ಮುದುಕ ಕಾಣಲು ಸಿಕ್ಕ. ಜಾವಿಾದನನ್ನು ಕಂಡೊಡನೆಯೆ ಅವನು ಹೇಳಿದ;

" ಖುದಾನ ಆಣೆಮಾಡಿ ಹೇಳುತ್ತೇನೆ; ನಿನ್ನೆ ನೀವು ಇದ್ದಿರೆಂತಲೆ ನಾನು ಬದುಕಿ ಉಳಿದೆ. ದುಷ್ಟ ಕಾಫಿರರೆಲ್ಲ ಸೇರಿ ನಿಮ್ಮನ್ನು ತುಂಬಾ ಹೊಡೆದರೆಂದು ಕೇಳಿದೆ. ಸಮಯ ಸಿಕ್ಕೊಡನೆಯೆ ನಾನು ಅಲ್ಲಿಂದ ಓಡಿಯೆ ಹೋದೆ. ನೀವು ಇದವರೆಗೆ ಎಲ್ಲಿ ಇದ್ದಿರಿ? ಇಲ್ಲಿಯ ಜನರು ಅವಾಗಿನಿಂದಲೂ ನಿಮ್ಮನ್ನು ಕಾಣಬೇಕೆಂದು ತವಕಿಸುತ್ತಿದ್ದಾರೆ. ಕಾಜೀಸಾಹೇಬರು ನಿಮ್ಮನ್ನು ಹುಡುಕುವುದಕ್ಕಾಗಿ ರಾತ್ರಿಯಲ್ಲಿಯೆ ಮನೆಬಿಟ್ಟು ಹೊರಟಿದ್ದರು; ಅವರಿಗೆ ನೀವು ಎಲ್ಲಿಯೂ ಸಿಕ್ಕಲೆ ಇಲ್ಲವಂತೆ. ನಿನ್ನೆಯ ದಿನ ನಾವು ಇಬ್ಬರೆ ಇದ್ದೆವೆಂದು, ವೈರಿಗಳು ತಮ್ಮ ಕೈ ಮೇಲುಮಾಡಿಕೊಂಡರು. ನನಾಜಿನ ವೇಳೆಯಿದ್ದಿತಾದುದರಿಂದ ಎಲ್ಲರೂ ಆಗ ಮಸೀದಿಗೆ ಹೋಗಿದ್ದರು. ಸ್ವಲ್ಪವೆ ಸಮಾಚಾರ ತಿಳಿದಿದ್ದರೆ ಬಂದು ಸಾವಿರ ಜನ ಜೊಣ್ಣೆಯ ಬಂಟರು ಹಾಗೆಯೆ ನುಗ್ಗಿ ಬರುತ್ತಿದ್ದರು. ಬಂದಿದ್ದರೆ ಆ ಕಾಫಿರರ ಬಣ್ಣ ಹೊರಬೀಳುತ್ತಿತ್ತು. ದೇವರ ಆಣೆ ಮಾಡಿ ಹೇಳುತ್ತಿದ್ದೇನೆ ನೋಡಿ! ಇಂದಿನಿಂದ ನಾನು ಮೂರು ಕೋಳಿಗಳನ್ನು ಸಾಕತೊಡಗಿದ್ದೇನೆ. ನೋಡುವಾ, ಆ ಬಮ್ಮನ್‌ಭಟ್ಟ ಏನು ಮಾಡುತ್ತಾನೊ! ಕಾಜೀಸಾಹೇಬರು ನನಗೆ ಖಂಡಿತವಾಗಿ ಹೇಳಿಯೆ ಬಿಟ್ಟಿದ್ದಾರೆ: ' ಆ ಹಾರುವ ಬರೀ ನಿನ್ನ ಕಡೆಗೆ ಕಣ್ಣು ಹೊರಳಿಸಿದರೆ ಸರಿ; ನನ್ನ ಕಡೆಗೆ ಬಂದು ದೂರುಕೊಡು! ' ಎಂದು. ಈಗ ಆ ನನ್ನ ಮಗ ಮನೆಬಿಟ್ಟಾದರೂ ಓಡಬೇಕು; ಇಲ್ಲವೆ ಎಲುವು-ಚರ್ಮ ಬೇರೆ ಬೇರೆ ಮಾಡಿಸಿಕೊಳ್ಳಬೇಕು! "

ಆ ಮುದುಕ ಜಾವಿಾದನನ್ನು ಕರೆದುಕೊಂಡು **ಕಾಜೀ ಜೋಗಾವರ್ ಹುಸೇನ್** ಅವರ ಮನೆಗೆ ಹೋದನು. ಕಾಜೀ ಸಾಹೇಬರು ಆಗ ಕೈಕಾಲು ತೊಳೆದುಕೊಳ್ಳುತ್ತಿದ್ದರು. ಜಾವಿಾದನನ್ನು ಕಂಡೊಡನೆ ಹಾಗೆಯೆ ಓಡಿಬಂದು, ಅವನನ್ನು ಅಪ್ಪಿಕೊಂಡು ಮುಂಡಾಡಿದರು. ಬಳಿಕ ಹೇಳತೊಡಗಿದರು:

' ಅಲ್ಲಾಸ ದಯೆ! ನಿಮ್ಮನ್ನು ಕಣ್ಣು ಹುಡುಕುತ್ತಲಿದ್ದಿತು. ನೀವು ಒಬ್ಬರೆ ಇಡ್ದು ಆಷ್ಟೊಂದು ಜನ ಕಾಫಿರರ ರಕ್ತವನ್ನು ತಣ್ಣಗೆ ಮಾಡಿದಿರಿ! ಎಷ್ಟೆಂದರೂ ನಿಮ್ಮ ರಕ್ತ ವೋವಿಾನರದಲ್ಲವೆ? ಅದರೆದುರು ಕಾಫಿರರ ಬೆಲೆಯೇನು? ನಾನು ಕೇಳಿದ್ದೆ, ಅವರೆಲ್ಲ ಸೇರಿ ನಿಮ್ಮನ್ನು ಶುದ್ಧೀಕರಿಸಿಕೊಳ್ಳಲಿದ್ದಾರೆಂದು; ಆದರೆ ನೀವು ಅವರೆಲ್ಲರ ಮನೋರಾಜ್ಯದ ಮೇಲೆ ಜೆನ್ನಾಗಿ ಕಣ್ಣೀರು ಹುಯ್ದುಬಿಟ್ಟಿರಿ! ಇಸ್ಲಾವಿಾಧರ್ಮಕ್ಕೆ ಇಂತಹ ನಂಬಿಗಸ್ತರ ಆವಶ್ಯಕತೆಯೆ ಇದೆ. ನಿಮ್ಮಂತಹ ಧರ್ಮನಿಷ್ಠರಿರುವುದರಿಂದಲೆ ಇಸ್ಲಾವಿ ಧರ್ಮದ ದುಂದುಭಿ ಎಲ್ಲೆಲ್ಲಿಯೂ ಮೊಳಗುತ್ತಲಿದೆ. ಆದರೆ ಒಂದು ತಪ್ಪನ್ನು ಮಾಡಿದಿರಿ; ಇನ್ನೊಂದು ತಿಂಗಳು ತಡೆಯಬೇಕಾಗಿತ್ತು ನೀವು! ಲಗ್ನವೊಂದನ್ನು ಮಾಡಿಕೊಂಡೇ ಬಿಟ್ಟಿದ್ದರೆ ತುಂಬಾ ತಮಾಷೆಯಾಗಿ ಹೋಗುತ್ತಿತ್ತು; ಒಂದು ಚೆಲುವೆಯಾದ ಹೆಣ್ಣು ಜೊತೆಗೆ ಬಂದು ಬಿಡುತ್ತಿತ್ತು; ಅಲ್ಲದೆ ಸಂಪತ್ತು ಕೂಡ ಸಿಕ್ಕ ಬಹುದಾಗಿತ್ತು. ಅಂತೂ ನೀವು ಮಾಡಿದ ಕೆಲಸವೇನೋ ದೊಡ್ಡ ಕೆಲಸ! "

ಹಗಲು ಮುಗಿಯುವವರೆಗೂ ಭಕ್ತರ ಹಿಂಡು ಬಂದು ಬಂದು ಹೋಗುತ್ತಿದ್ದಿತು. ಜಾವಿಾದನನ್ನೊಮ್ಮೆ ಕಣ್ಣುತುಂಬ ನೋಡಬೇಕೆಂದು ಎಲ್ಲರಿಗೂ ಅಪೇಕ್ಷೆ. ಆತನ ಸಾಮರ್ಥ್ಯ ಹಾಗೂ ಧರ್ಮಶ್ರದ್ಧೆಗಳು ತಲೆ ಬಾಲ ಮೂಡಿಸಿಕೊಂಡು ಎಲ್ಲರ ಬಾಯಲ್ಲಿಯೂ ಪವಾಡಕಥೆಗಳಾಗಿ ಸುಳಿದಾಡತೊಡಗಿದುವು.

೫

ರಾತ್ರಿಯು ಬಂದು ಪ್ರಹರ ಕಳೆದುಹೋಗಿದ್ದಿತು. ಬರುಹೋಗುವ ಪ್ರಯಾಣಿಕರ ಓಡಾಟ ಕಡಿಮೆಯಾಗಿದ್ದಿತು. ಜಾವಿಾದನು ಕಾಜಿಯ ಬಳಿಯಲ್ಲಿ ಕುಳಿತು ಧರ್ಮಗ್ರಂಥದ ಪಾಠನವನ್ನು ನಡೆಯಿಸಿದ್ದನು. ಕಾಜೀಸಾಹೇಬರು ಆತನಿಗಾಗಿ ತಮ್ಮ ಸಕ್ಕದ ಕಿರುಮನೆಯನ್ನೆ ತೆರವುಮಾಡಿಕೊಟ್ಟಿದ್ದರು. ಕಾಜೀಸಾಹೇಬರಿಂದ ಹೊಸಪಾಠ ಹೇಳಿಸಿಕೊಂಡು ಇನ್ನು ಮಲಗಲಿಕ್ಕೆಂದು ಆವನು ಹೊರಡುವವನಿದ್ದ. ಆಷ್ಟರಲ್ಲಿಯೆ ಕುದುರೆಗಾಡಿಯೊಂದು ಬಂದು ಬಾಗಿಲಲ್ಲಿ ನಿಂತುಕೊಂಡ ಸಪ್ಪಳು ಕಿವಿಗೆ ಬಿದ್ದಿತು. ಶಿಷ್ಯಜನರು ಕಾಜೀಸಾಹೇಬರ ಮನೆಗೆ ಯಾವಾಗಲೂ ಬಂದುಹೋಗುತ್ತಿರುವರು. ಅವರೇ ಯಾರಾದರೂ ಬಂದಿರಬಹುದೆಂದು ಜಾವಿಾದನಿಗೆ ಎನಿಸಿತು. ಕೆಳಗೆ ಬಂದು ನೋಡಿದ; ಹೆಂಗುಸೊಬ್ಬಳು ಟಾಂಗಾದಿಂದ ಇಳಿದು ಅಂಗಳದಲ್ಲಿ ನಿಂತುಕೊಂಡಿದ್ದಾಳೆ; ಟಾಂಗಾವನನು ಆಕೆಯ ಗಂಟು-ಗಡಿಗಳನ್ನು ಇಳಿಸುತ್ತಿದ್ದಾನೆ.

ಹೆಂಗುಸು ಅತ್ತಿತ್ತ ಗಾಬರಿಗಣ್ಣಿಂದ ನೋಡುತ್ತ ಗಾಡಿಯಾಳಿಗೆ ಹೇಳಿದಳು :

" ಈ ಮನೆ ಅಲ್ಲವಪ್ಪಾ! ನನಗೆ ಜೆನ್ನಾಗಿ ನೆನಪಿನಲ್ಲಿದೆ. ನಮ್ಮ ಮನೆ ಇದಲ್ಲ. ನೀನು ಎಲ್ಲಿಯೋ ತಪ್ಪಿ ಇಲ್ಲಿಗೆ ತಂದಂತೆ ತೋರುತ್ತದೆ! "

ಗಾಡಿಯಾಳು ಹೇಳಿದ :

" ಏನು ಬಾಯಿಾಸಾಬ್, ಎಷ್ಟು ಹೇಳಿದರೂ ತಮಗ ಖರೇ ಅನಸವೊಲ್ಲದು! ಯಜಮಾನರು ಮನೀ ಬದಲಿಸಿದ್ದಾರಂತ ಆಗs ಹೇಳಿಲ್ಲೀನು ತಮಗ? ಹುಂ, ಮ್ಯಾಲೆ ನಡೀರಿ! "

ಹೆಂಗುಸು ಬೇಸತ್ತ ಧ್ವನಿಯಲ್ಲಿ ಹೇಳಿದಳು :

" ಕರೆಯಲೊಲ್ಲೆಯೇಕೆ ಅಪರನ್ನ? ಹುಂ, ಕೂಗು ನೋಡೋಣ! "

" ಕೂಗೂದು ಯಾಕ ಬಾಯಿಾ ಸಾಹೇಬ್? ರಾಯರ ಮನೀ ಇದಽ ಅಂಬೂದು ನನಗ ಗೊತ್ತು ಇರಲಿಕ್ಕಾಗಿ ಕೂಗೂದು ಪಾಗೂದು ಯಾತಕ್ಕ ಬೇಕು? ಪಾಪ, ಈಗ ಮೊದಲಿನ ಜಂಪು ಹತ್ತಿದ್ದೀತು. ಸುಮ್ಮನಽ ಕೂಗಿಬಿಟ್ಟರ ಸಿಟ್ಟಿಗೆದ್ದುಗಿದ್ದಾರು! ತಾವು ನಸ್ನ ಮ್ಯಾಲ ನಂಬಿಗೀ ಇಡ್ರಿ! ನಡೀರಿ ಮ್ಯಾಲ! "

ತರುಣಿಯು ಮೇಲಕ್ಕೆ ಹತ್ತಿಹೋಗತೊಡಗಿದಳು. ಅವಳ ಹಿಂದಿನಿಂದಲೆ ಗಾಡಿಯಾಳು ಸಾವಾನು ತೆಗೆದುಕೊಂಡು ನಡೆದಿದ್ದ. ಜಾವಿಾದನು ಬೆರಗುಗೊಂಡವನಾಗಿ ಕೆಳಗೇ ನಿಂತುಕೊಂಡಿದ್ದ. ಇದೆಲ್ಲದರ ಗುಟ್ಟೇನೆಂಬುದು ಆತನ ಲಕ್ಷ್ಯಕ್ಕೆ ಬಂದಿರಲಿಲ್ಲ. ಗಾಡಿಯಾಳನ ಸಪ್ಪಳನ್ನು ಕೇಳಿದೊಡನೆಯೆ ಕಾಜೀಸಾಹೇಬರು ಆಟ್ಟದ ಮುಂಗಡೆ ಬಂದು ನೋಡಿದರು. ಹೆಂಗುಸೊಬ್ಬಳು ಬರುತ್ತಿದ್ದಾಳೆಂಬುದನ್ನು ನೋಡಿ, ಗಡಿಬಿಡಿಯಿಂದ ನಾಲ್ಕೂ ಕಡೆಯ ಕಿಟಕಿಗಳನ್ನು ಮುಚ್ಚಿಬಿಟ್ಟರು. ಗೂಟಕ್ಕೆ ತೂಗುಹಾಕಿದ್ದ ಕತ್ತಿಯನ್ನು ಇಳುಹಿ ಕೈಯಲ್ಲಿ ಹಿಡಿದುಕೊಂಡು, ಬಾಗಿಲಿಗೆ ಬಂದುನಿಂತರು.

ಹೆಂಗುಸು ಮೆಟ್ಟಿಲುಗಳನ್ನೇರಿ ಮುಗಿಸಿ, ಮಹಡಿಯ ಮೇಲೆ ಕಾಲಿಡುತ್ತಲೆ ನೋಡುತ್ತಾಳೆ; ಎದುರು ಕಾಜೀಸಾಹೇಬರು. ಒಮ್ಮೆಲೆ ಬೆಚ್ಚಿಬಿದ್ದಳು. ಕೂಡಲೆ ಹಿಂದಿರುಗುವವಳು; ಅಷ್ಟರಲ್ಲಿಯೆ ಕಾಜೀಸಾಹೇಬರು ಹಾರಿಬಂದು ಆಕೆಯ ಕೈಯನ್ನು ಹಿಡಿದರು; ಹಾಗೆಯೆ ತಮ್ಮ ಕೋಣೆಯೊಳಗೆ ಅವಳನ್ನು ಎಳೆದುಕೊಂಡು ಒಯ್ದರು. ಈ ವೇಳೆಗೆಂದರೆ ಜಾವಿಾದ—ಗಾಡಿಯಾಳು—ಇಬ್ಬರೂ ಮೇಲಕ್ಕೇರಿ ಬಂದಿದ್ದರು. ಇದೆಲ್ಲ ದೃಶ್ಯವನ್ನು ನೋಡಿ ಜಾವಿಾದ ಆಶ್ಚರ್ಯಾಜಕಿತನಾಗಿದ್ದ. ರಹಸ್ಯವು ಇನ್ನಿಷ್ಟು ರಹಸ್ಯಮಯವಾಗಿ ಪರಿಣಮಿಸಿತು. ವಿದ್ಯೆಯ ಸಾಗರನೂ ನ್ಯಾಯದ ನಿಧಿಯೂ ನೀತಿ-ಧರ್ಮ-ತತ್ತ್ವಜ್ಞಾನಗಳ ತವರೂ ಆದ ಕಾಜೀಸಾಹೇಬರು ಈ ಅವೇಳೆಯಲ್ಲಿ— ಅಪರಿಚಿತಳಾದ— ತರುಣಿಯೊಬ್ಬಳ ಮೇಲೆ ಬಲಾತ್ಕಾರ ನಡೆಯಿಸಿದ್ದಾರೆ! ಗಾಡಿಯಾಳಿನೊಂದಿಗೆ ಜಾವಿಾದನೂ ಕೋಣೆಯೊಳಗೆ ಹೋದ. ನೋಡಿದ— ಕಾಜೀಸಾಹೇಬರು ಆ ತರುಣಿಯ ಎರಡು ಕೈಗಳನ್ನೂ ಹಿಡಿದಿದ್ದಾರೆ. ಗಾಡಿಯಾಳು ಬಾಗಿಲನ್ನು ಗಟ್ಟಿಯಾಗಿ ಇಕ್ಕಿದ.

ತರುಣಿಯು ರಕ್ತಶೋಷಕದೃಷ್ಟಿಗಳಿಂದ ಗಾಡಿಯಾಳನ್ನು ನೋಡುತ್ತ ನುಡಿದಳು :

" ನೀನು ನನ್ನನ್ನು ಇಲ್ಲಿಗೇತಕ್ಕೆ ತಂದೆ? "

ಕಾಜೀ ಸಾಹೇಬರು ಕತ್ತಿಯನ್ನು ಜಳಪಿಸುತ್ತ ಹೇಳಿದರು :

" ಮೊದಲು ಸ್ವಲ್ಪ ವಿಶ್ರಾಂತಿ ತೆಗೆದುಕೊ! ಬಳಿಕ ಎಲ್ಲವೂ ನಿನಗೆ ಗೊತ್ತಾಗುವುದು! "

ತರುಣಿ ಮಾತನಾಡಿದಳು :

" ನೀವು ಯಾರೋ ಮೌಲವಿಗಳಂತೆ ಕಾಣುತ್ತೀರಿ! ಏನು? ನಿಮಗೆ ಈಶ್ವರನು ಇದನ್ನೇ ಹೇಳಿಕೊಟ್ಟಿದ್ದಾನೆಯೆ? ಇನ್ನೊಬ್ಬರ ಹೆಣ್ಣುಮಕ್ಕಳನ್ನು ಒತ್ತಾಯದಿಂದ ಮನೆಗೆ ಕರೆತಂದು, ಅವರನ್ನು ಧರ್ಮಭ್ರಷ್ಟರನ್ನಾಗಿ ಮಾಡುವುದು ಇದು ಯಾವ ಧರ್ಮದ ಆಚಾರ? "

ಕಾಜೀ ಸಾಹೇಬರು ನುಡಿದರು:

" ಹೌದು ಹೌದು! ಹಲವು ಹಂಚಿಕೆ ಮಾಡಿಯೂ ಕಾಫಿರರನ್ನು ಬಲೆಯಲ್ಲಿ ಹಿಡಿದು, ಅವರನ್ನು ಇಸ್ಲಾಮ್ ಧರ್ಮದ ದಾರಿಗೆ ಹಚ್ಚಬೇಕೆಂದು ನಮಗೆ ದೇವರ ಆಜ್ಞೆಯಿದೆ; ಧರ್ಮದ ಕಟ್ಟಳೆಯಿದೆ. ತಾವಾಗಿ ಒಪ್ಪಿ ಬಂದರೆ ಒಳ್ಳೆಯದೆ; ಇಲ್ಲದಿದ್ದರೆ ಒತ್ತಾಯದಿಂದ ಆದರೂ ಆ ಕೆಲಸ ಮಾಡುವೆವು! "

ತರುಣಿ ಕ್ರೋಧದಿಂದ ಕೇಳಿದಳು:

"ಇದೇ ರೀತಿಯಿಂದ ನಿಮ್ಮ ಹೆಣ್ಣುಮಕ್ಕಳು— ಅಕ್ಕ-ತಂಗಿಯರ ಮೇಲೆ ಬೇರೆಯವರು ಬಲುಮೆ ಮಾಡಿದರೆ?"

ಕಾಜೀಸಾಹೇಬರು ಹೇಳಿದರು:

"ಅದು ನಡೆದೇ ಇದೆಯಲ್ಲ! ನೀವು ಹೇಗೆ ನಮ್ಮೊಂದಿಗೆ ನಡೆದುಕೊಳ್ಳುತ್ತೀರೋ ನಾವು ಹಾಗೆ ನಿಮ್ಮೊಂದಿಗೆ ನಡೆದುಕೊಳ್ಳುತ್ತೇನೆ! ಇನ್ನೊಂದೆಂದರೆ ನಾವೇನು ಯಾರನ್ನೂ ಅವಮಾನಗೊಳಿಸುವುದಿಲ್ಲ. ಬರಿಯೆ ನಮ್ಮ ಧರ್ಮದಲ್ಲಿ ಸೇರಿಸಿಕೊಳ್ಳುತ್ತೇವಷ್ಟೆ! ಇಸ್ಲಾಮ್ ಧರ್ಮವನ್ನು ಒಪ್ಪಿ ಸ್ವೀಕರಿಸುವುದರಿಂದ ಮಾನ-ಮರ್ಯಾದೆ ಹೆಚ್ಚುವುದಲ್ಲದೆ ಕಡಿಮೆಯಾಗದು. ಹಿಂದೂ ಧರ್ಮಗಳಂತೂ ನಮ್ಮ ಜಾತಿಯು ಹೆಸರನ್ನಡಗಿಸಬೇಕೆಂದು ಆಣಿಯನ್ನೆತ್ತಿಯೆ ಹೊರಟಿದ್ದಾರೆ. ಈ ದೇಶದಲ್ಲಿ ನಮ್ಮ ಧರ್ಮದ ಆಸ್ತಿತ್ವವನ್ನೆ ಇಲ್ಲದಂತಾಗಿಸಲು ನಿರ್ಣಯಿಸಿದ್ದಾರೆ. ಹೆದರಿಸಿ—ಬೆದರಿಸಿ—ಆಶೆ ತೋರಿಸಿ ಮುಸಲ್ಮಾನರನ್ನೆಲ್ಲ ಕೆಲಸಕ್ಕೆ ಬಾರದವರನ್ನಾಗಿ ಮಾಡುತ್ತಲಿದ್ದಾರೆ. ಹೀಗಿರುವಾಗ ಮುಸಲ್ಮಾನರು ಮುಂದಿಯ ಮುಖದ ಕಡೆಗೆ ನೋಡುತ್ತ ನುಮ್ಮಗೆ ಕುಳಿತುಕೊಳ್ಳಬೇಕೆ?"

ತರುಣಿ ಹೇಳತೊಡಗಿದಳು:

"ಹಿಂದು—ಎಂದು ಕರೆಯಿಸಿಕೊಳ್ಳುವವನಾವನೂ ಈ ಬಗೆಯ ಅತ್ಯಾಚಾರವನ್ನು ಮಾಡಲಾರ! ನೀವು ನಡೆಯಿಸಿರುವ ಮೋಸಗಾರಿಕೆ-ಅತ್ಯಾಚಾರಗಳಿಗಾಗಿ ರೊಚ್ಚಿಗೆದ್ದ ಕೆಲವು — ಕೆಳಗಿನ ವರ್ಗದಲ್ಲಿಯ—ಹುಂಬಜನರು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲು ಸಿದ್ಧರಾಗಿರಬಹುದು. ಆದರೆ ಈಗಲೂ ಕೂಡ ನಿಜವಾದ ಹಿಂದುಗಳು ಯಾರೂ ಈ ಬಗೆಯ ಅತ್ಯಾಚಾರವನ್ನು ಪುರಸ್ಕರಿಸುತ್ತಿಲ್ಲ!"

ಕಾಜೀಸಾಹೇಬರು ಸ್ವಲ್ಪ ವೇಳೆ ಯೋಜನೆಯನ್ನೇನೋ ಮಾಡಿ ಮಾತನಾಡತೊಡಗಿದರು:

"ಸರಿ ಸರಿ! ಮುಸಲ್ಮಾನರಲ್ಲಿಯೂ ಕೆಲವು ಜನ ಹುಂಬರು ಮಾತ್ರ ಹುಂಬತನ ತೋರಿಸಿರಬಹುದು! ಸಭ್ಯರಾದ ಮುಸಲ್ಮಾನರು ಅವರ ಹುಂಬತನವನ್ನು ಹತ್ತಿಕ್ಕಲು ಆಗಾಗ ಸಾಕಷ್ಟು ಪ್ರಯತ್ನವನ್ನು ಮಾಡಿದ್ದಾರೆ. ಶಿಕ್ಷಣ ಮತ್ತು ಸುವಿಚಾರಗಳ ನೆರವಿನಿಂದ ಈ ಹುಂಬತನವೂ ಹೊರಟು ಹೋಗಬಹುದಾಗಿತ್ತು. ಆದರೆ ಈಗ ಎಲ್ಲ ಹಿಂದೂ ಜನರೂ ಸೇರಿ ನಮ್ಮನ್ನು ನುಂಗಿ ನೀರುಕುಡಿಯಬೇಕೆಂದಿದ್ದೀರಿ! ಎಂದ ಮೇಲೆ ನಮಗೆ ಬೇರೆ ಮಾರ್ಗವಾದರೂ ಏನಿದೆ? ನಾವು ಅಲ್ಪಸಂಖ್ಯಾಕರಾಗಿದ್ದೇವೆಂದು ಎಚ್ಚರದಿಂದಿದ್ದುಕೊಂಡು, ಯುಕ್ತಿಯಿಂದ ಕಾರ್ಯಸಾಧಿಸಿಕೊಳ್ಳಬೇಕಾಗುತ್ತದೆ. ನೀನು ಇಷ್ಟೊಂದು ಹೆದರುತ್ತಿಯೇಕೆ? ಇಲ್ಲಿ ನಿನಗೆ ಯಾವ ರೀತಿಯಲ್ಲಿಯೂ ತೊಂದರೆಯುಂಟಾಗದು. ಇಸ್ಲಾಮ್ ಧರ್ಮವು ಸ್ತ್ರೀಯರಿಗೆ ಕೊಡುತ್ತಿರುವಷ್ಟು ಮರ್ಯಾದೆಯನ್ನು ಇನ್ನಾವ ಧರ್ಮವೂ ಕೊಡುತ್ತಿಲ್ಲ. ಅಲ್ಲದೆ ಮುಸಲ್ಮಾನ್ ವೀರರು ತಮ್ಮ ಹೆಣ್ಣು ಮಕ್ಕಳಿಗಾಗಿ ಜೀವವನ್ನು ಕುರ್ಬಾನ್ (ತ್ಯಾಗ) ಮಾಡಲಿಕ್ಕೆ ಸಿದ್ಧರಾಗುವರು. ನನ್ನ ಈ ತರುಣ ಮಿತ್ರರು (ಜಾವಿದಾದ) ನಿನ್ನೆದುರಿನಲ್ಲಿಯೆ ನಿಂತಿದ್ದಾರೆ. ಇವರೊಡನೆಯೆ ನಿನ್ನನ್ನು ನೀಕಾ ಮಾಡಿಕೊಡಲಾಗುವುದು. ನೀನು ಇವರೊಂದಿಗೆ ಆನಂದದಿಂದ ನಿನ್ನ ಆಯುಷ್ಯವನ್ನು ಕಳೆಯುಬಹುದು!"

ತರುಣಿ ಮಾತನಾಡಿದಳು:

"ನಾನು ನಿಮ್ಮನ್ನೂ ನಿಮ್ಮ ಧರ್ಮವನ್ನೂ ಮನವಾರೆ ತಿರಸ್ಕರಿಸುತ್ತೇನೆ. ನೀವು ನಾಯಿಗಳಂತಿದ್ದೀರಿ. ನಾಯಿಯು ಹೊರತು ಇನ್ನೊಂದು ಉಪಮೆಯೆ ನನಗೆ ಸಿಕ್ಕಲೊಲ್ಲದಾಗಿದೆ. ಒಳ್ಳೆಯ ಮಾತಿನಿಂದ ಈಗ ನೀವು ನನಗೆ ಹೋಗಗೊಡಿರಿ! ಇಲ್ಲದೆ ಹೋದರೆ ನಾನು ಹುಯಿಲೆಬ್ಬಿಸದೆ ಬಿಡೆನು. ಆಗ ನಿಮ್ಮ ಮೌಲವೀ ತನದ ಮರ್ಮ ಹೊರಕ್ಕೆ ಹೊರಡದೆ ಇರದು!"

ಕಾಜೀಸಾಹೇಬರು ಸಂಕಾಪದಿಂದ ಹೇಳಿದರು:

"ನೋಡು ನೀನೀಗ ಬಾಯಿತೆರೆದರೆ ಜೀವಕ್ಕೆ ಎರವಾಗುತ್ತೀಯೆ! ಏನು ಮಾಡಬೇಕೆಂಬುದನ್ನು ಹಿಂದೆ ಮುಂದೆ ನೋಡಿ ಮಾಡು.. ತಿಳಿಯಿತೇ?"

"ಮಾನದ ಮುಂದೆ ಜೀವಕ್ಕೆ ಹುಲ್ಲುಕಡ್ಡಿಯ ಬೆಲೆ! ನೀವು ನನ್ನ ಜೀವವನ್ನು ಮಾತ್ರ ಕಳೆಯಬಲ್ಲಿರಿ! ಮಾನ-ಮರ್ಯಾದೆ ಕಳೆಯಲಿವುದು ಕಾಲತ್ರಯದಲ್ಲಿಯೂ ಸಾಧ್ಯವಿಲ್ಲ!" ತರುಣಿ ಬಿರುಸಾಗಿಯೆ ಹೇಳಿದಳು.

ಕಾಜೀಸಾಹೇಬರು ಕೇಳಿದರು:

"ಯಾಕೆ ನುಮ್ಮನೆ ಇಲ್ಲದ ಹೆಮ್ಮೆಗೆ ಹೋಗುತ್ತೀಯೆ?"

ತರುಣಿ ಬಾಗಿಲ ಬಳಿಗೆ ಹೋಗಿ ಹೇಳಿದಳು:

"ಹೆಚ್ಚಿನ ಮಾತು ಬೇಕಾಗಿಲ್ಲ; ನಾನೀಗ ಹೇಳುತ್ತೇನೆ, ಬಾಗಿಲನ್ನು ತೆಗೆದುಕೊಡಿರಿ!"

ಇಲ್ಲಿಯವರೆಗೂ ಜಾವಿದಾದನು ಮಿಟ್ಟನೆ ಮಿಸುಕದೆ ನಿಂತಿದ್ದ. ಯಾವಾಗ ಆ ತರುಣಿ ಬಾಗಿಲ ಕಡೆಗೆ ಹೋದಳೋ ಆಗ ಕಾಜೀಸಾಹೇಬರು ಆಕೆಯ ಕೈಗಳನ್ನು ಹಿಡಿದು ಜಗ್ಗಿದರು. ಜಾವಿದಾದನು ಕೂಡಲೆ ಬಾಗಿಲನ್ನು ತೆರೆದ. ಕಾಜೀಸಾಹೇಬರನ್ನುದ್ದೇಶಿಸಿ ಹೇಳಿದ:

"ಬಿಟ್ಟು ಬಿಡಿರಿ ಅವಳನ್ನು!"

ಕಾಜೀ ಸಾಹೇಬರು ಸಿಡಿಸಿಡಿಯಲ್ಲಿ ಕೇಳಿದರು:

"ಇದೇನು ಬಡಬಡಿಸುತ್ತಿದ್ದೀಯೆ ನೀನು?"

ಜಾವಿದಾದ ಸಹಜಸ್ವರದಲ್ಲಿ ಹೇಳಿದ:

"ಇನ್ನೇನೂ ಇಲ್ಲ. ಇವಳನ್ನು ಬಿಟ್ಟು ಕಳುಹುವುದರಲ್ಲಿಯೆ ಒಳ್ಳೆಯತನವಿದೆ!"

ಆದರೂ ಕಾಜೀಸಾಹೇಬರು ಆಕೆಯ ಕೈಯನ್ನು ಬಿಡಲಿಲ್ಲವಿಷ್ಟೇ ಅಲ್ಲ; ಗಾಡಿಯಾಳು ಕೂಡ ಆಕೆಯನ್ನು ಹಿಡಿಯಲಿಕ್ಕೆ ಮುಂದೆ ನುಗ್ಗಿದ. ಆಗ ಜಾವಿದಾದ ಕಾಜೀಸಾಹೇಬರಿಗೊಂದು ಬಲವಾದ ಏಟನ್ನು ಕೊಟ್ಟು ಹಿಂದಕ್ಕೆ ಸರಿಸಿದ; ಬಳಿಕ ಆ ಹೆಂಗುಸಿನ ಕೈಯನ್ನು ಹಿಡಿದುಕೊಂಡು ಕೋಣೆಯೊಳಗಿಂದ ಹೊರಬಿದ್ದ. ಗಾಡಿಯಾಳು ಅವನ ಹಿಂಬದಿಯಿಂದ ಪ್ರಹಾರ ಮೈಮೇಲೆ ಬಂದ.

ಆದರೆ ಜಾಮಿಾದನು ಅವನಿಗೊಂದು ಹೀಗೆ ಒದೆತಕೊಟ್ಟ.. ಒಂದೆ ಸವನೆ ಜಾಯಿಬಿಡುತ್ತ ಅವನು ನೆಲದಮೇಲೆ ಬಿದ್ದುಬಿಟ್ಟ. ಒಂದೆ ಒಂದು ಕ್ಷಣದಲ್ಲಿಯೆ ಜಾಮಿಾದನೂ ಆ ತರುಣಿಯೂ ಬೀದಿಯ ದಾರಿಯಲ್ಲಿ ಕಂಡರು.

ಜಾಮಿಾದ ಕೇಳಿದ :

" ತಮ್ಮ ಮನೆ ಯಾವ ಬೀದಿಯಲ್ಲಿದೆ ? "

" ಅಹಿಯಾ ಗಂಜಿನಲ್ಲಿ ! "

" ನಡೆಯಿರಿ, ನಾನು ಅಲ್ಲಿಯವರೆಗೆ ಬಂದು ನಿಮ್ಮನ್ನು ತಲ್ಪಿಸಿ ಬರುತ್ತೇನೆ ! "

" ಇದಕ್ಕಿಂತ ಹೆಚ್ಚಿನ ಉಪಕಾರ ತಮ್ಮಿಂದ ಇನ್ನೇನಾಗಬೇಕು! ನಾನು ತಮ್ಮ ಸಜ್ಜನಿಕೆಯನ್ನು ಎಂದೆಂದೂ ಮರೆಯಲಾರೆ ! ಈ ದಿನ ನನ್ನ ಮರ್ಯಾದೆಯನ್ನು ತಾವೇ ಕಾಪಾಡಿದಿರಿ ! ಇಲ್ಲದಿದ್ದರೆ ಇದುವರೆಗೆ ನಾನೆಲ್ಲಿ ಜೀವದಿಂದ ಉಳಿಯುತ್ತಿದ್ದೆ ? ನನಗೆ ಈಗೊಂದು ಸತ್ಯದ ಸಾಕ್ಷಾತ್ಕಾರವಾದಂತಾಯಿತು. ' ಒಳಿತು ಕೆಡುಕು ಎಲ್ಲೆಲ್ಲಿಯೂ ಇರುತ್ತವೆ. ನಮ್ಮ ಮನೆಯವರ ಹೆಸರು ' ಪಂಡಿತ ರಾಜಕುಮಾರ ' ಎಂದಿದೆ ! "

ಆದೇ ವೇಳೆಯಲ್ಲಿ ಒಂದು ಟಾಂಗಾ ಇವರು ನಿಂತಕಡೆಗೆ ಬರುತ್ತಿರುವುದು ಕಂಡಿತು. ಬಾಡಿಗೆಯ ಗಾಡಿಯದು. ಜಾಮಿಾದ ತರುಣಿಯನ್ನು ಒಳಕ್ಕೆ ಕುಳ್ಳಿರಿಸಿದ; ಇನ್ನು ತಾನು ಕುಳಿತುಕೊಳ್ಳಬೇಕೆಂದು ಕಾಲೆತ್ತುತ್ತಿದ್ದ. ಅಷ್ಟರಲ್ಲಿಯ ಕಾಜೀಸಾಹೇಬರು ಮೇಲಿಂದ ದೊಣ್ಣೆಯೊಂದನ್ನು ಎಸೆದರು. ಟಾಂಗಾಗಾಡಿಗೆ ಒಡೆದ ದೊಣ್ಣೆ ' ಖಟಾ ' ಎಂದು ಸಪ್ಪಳಮಾಡಿತು. ಟಾಂಗಾ ಹಾಗೆಯೆ ಭರದಿಂದ ಮುಂದೆ ಸಾಗಿತು.

ಅಹಿಯಾಗಂಜ್‌ನಲ್ಲಿ ಪಂಡಿತ ರಾಜಕುಮಾರರ ಮನೆಯನ್ನು ಕಂಡುಹಿಡಿಯಲಿಕ್ಕೆ ವಿಲಂಬವೇನೂ ಆಗಲಿಲ್ಲ. ಜಾಮಿಾದನು ಹೆಸರುಗೊಂಡು ಕೂಗಿದೊಡನೆಯೆ ಬೆಚ್ಚಿಬಿದ್ದವರಾಗಿ, ಗಾಬರಿಯ ಮೊಗದಿಂದ ಪಂಡಿತರು ಹೊರಕ್ಕೆ ಬಂದರು. ಹೆಂಡತಿಯನ್ನು ಕುರಿತು ಒಮ್ಮೆಲೆ ಕೇಳಿದರು :

" ಯಾರು ? ಇಂದಿರಾ ? ನೀನು ಎಲ್ಲಿದ್ದೆ ? ಸ್ಟೇಷನ್ನಿನಲ್ಲಿ ನನಗೆಲ್ಲಿಯೂ ನೀನು ಕಾಣಲಿಲ್ಲವಲ್ಲ ? ಸ್ಟೇಷನಿಗೆ ಬರಲಿಕ್ಕೆ ನನಗೆ ತುಂಬಾ ತಡೆಯಾಗಿಬಿಟ್ಟಿತು. ಇದುವರೆಗೆ ನೀನು ಇದ್ದೆಯಾದರೂ ಎಲ್ಲಿ ? "

ಮನೆಯೊಳಕ್ಕೆ ಪ್ರವೇಶಿಸುತ್ತಲೆ ಇಂದಿರಾ ಹೇಳಿದಳು :

" ಆದೊಂದು ರಾಮಾಯಣದ ಕತೆ ! ಮೊದಲು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಅಪ್ಪಣೆ ಕೊಡಿರಿ ; ಆ ಮೇಲೆ ಎಲ್ಲವನ್ನೂ ಹೇಳುತ್ತೇನೆ. ಇಂದು ಈ ಮುಸಲ್ಮಾನನು ನನಗೆ ನೆರವು ಕೊಡದಿದ್ದರೆ ನನ್ನ ಮರ್ಯಾದೆಯೆಲ್ಲ ಹೊರಟು ಹೋಗುತ್ತಿತ್ತು. ಇದೊಂದು ಮಾತಿನಿಂದಲೆ ನೀವೆಲ್ಲವನ್ನೂ ಊಹಿಸಿಕೊಳ್ಳಿ ! "

ಎಲ್ಲ ಸಂಗತಿಯನ್ನೂ ಕೇಳಿಕೊಳ್ಳಲೆಂದು ಪಂಡಿತರು ತೀರ ಕುತೂಹಲಿಗಳಾಗಿದ್ದರು. ಇಂದಿರೆಯೊಂದಿಗೆ ಅವರೂ ಮನೆಯೊಳಕ್ಕೆ ಹೋದರು. ಬಳಿಕ ಒಂದೇ ಒಂದು ನಿಮಿಷದಲ್ಲಿಯೆ ಹೊರಗೆ ಬಂದು ಜಾಮಿಾದನಿಗೆ ಹೇಳಿದರು.

" ಭಾಯಿಾ, ನಾನೀಗ ಮಾತನಾಡುತ್ತಿರುವುದು ಕೃತ್ರಿಮ-ಕನಡ್ಡಿಂದು ತಮಗೆ ತೋರಬಹುದು; ಆದರೂ ಆಡುತ್ತೇನೆ. ತಮ್ಮ ಸ್ವರೂಪದಲ್ಲಿ ನಾನೀಗ ನನ್ನ ಇಷ್ಟದೈವತವನ್ನು ಕಾಣುತ್ತಿದ್ದೇನೆ ! ತಮ್ಮ ಉಪಕಾರವನ್ನು ಸಂಪೂರ್ಣವಾಗಿ ಸ್ಮರಿಸಿ ಹೇಳುವಷ್ಟು ಶಕ್ತಿ ನಿಜವಾಗಿಯೂ ನನ್ನ ನುಡಿಗಳಲ್ಲಿ ಇಲ್ಲವೆ ಇಲ್ಲ ! ಒಳಕ್ಕೆ ದಯೆಮಾಡಿಸಿರಿ ; ಕುಳಿತುಕೊಳ್ಳಿರಿ ! "

ಜಾಮಿಾದ ಹೇಳಿದ :

" ಬೇಡ ಬೇಡ ಸಾಹೇಬ್ ! ನನಗೀಗ ಹೋಗಲಿಕ್ಕೆ ಅಪ್ಪಣೆ ಕೊಟ್ಟು ಬಿಡಿರಿ ! "

ಪಂಡಿತರು ಕೇಳಿದರು :

" ತಮ್ಮ ಸಜ್ಜನಿಕೆಗೆ ನಾನು ಯಾವ ಪ್ರತಿಫಲವನ್ನು ಕೊಡಬಲ್ಲೆ ! "

" ಕೊಡಬೇಕಾಗಿದ್ದರೆ ಇಷ್ಟೊಂದು ಕೊಡಿ : ಈ ದುರ್ಘಟನೆಗಾಗಿ ನೇಡು ತೀರಿಸಿಕೊಳ್ಳಬೇಕೆಂದು ನಿರಪರಾಧಿಯಾದ ಯಾವನೊ ಒಬ್ಬ ಬಡ ಮುಸಲ್ಮಾನನನ್ನು ಛಲಿಸಲಾಗದು, ಇಷ್ಟೆ ! "

ಮಾತಿನ ಕೊನೆಯೊಡನೆಯೆ ಜಾಮಿಾದ ಅಲ್ಲಿಂದ ಹೊರಟು ನಡೆದ. ಆಗಿನ ಆ ಕಗ್ಗತ್ತಲೆಯ ಭೀಕರ ರಾತ್ರಿಯಲ್ಲಿಯೆ ಪಟ್ಟಣದಿಂದ ಹೊರಬಿದ್ದ. ಆ ಪಟ್ಟಣವ ವಿಷಮಯವಾದ ಹವೆಯಲ್ಲಿ ಉಸಿರಾಡಿಸುವುದೆಂದರೆ ಅತನ ಜೀವ ಗಾಬರಿಗೊಳ್ಳುತ್ತಿತ್ತು. ತನ್ನಿಂದಾದಷ್ಟು ಬೇಗನೆ ಆ ಪಟ್ಟಣದಿಂದ ಓಡಿಹೋಗಿ, ಎಲ್ಲಿ ಸಹಾನುಭೂತಿ-ಪ್ರೇಮ-ಸೌಹಾರ್ದಗಳನ್ನೇ ಧರ್ಮ ಎಂದು ತಿಳಿಯಲಾಗುವುದೋ ಅಂತಹ ತನ್ನ ಹಳ್ಳಿಗೆ ಹೋಗಿಬಿಡಬೇಕೆಂದು ಜಾಮಿಾದ ಅಪೇಕ್ಷಿಸುತ್ತಿದ್ದ. ಆಗ ಯಾವುದೇ ಒಂದು ಧರ್ಮ—ಆ ಧರ್ಮದ ಅನುಯಾಯಿ ವರ್ಗ—ಎಂದರೆ ಅತನಿಗೆ ಒಂದು ಬಗೆಯ ತಿರಸ್ಕಾರವೆನಿಸತೊಡಗಿತು

' ನ ವ ಚೇ ತ ನ '

ಉತ್ತರ ಕನ್ನಡ ಜಿಲ್ಲೆಯ ಶ್ರೇಷ್ಠ ಮಾಸಪತ್ರಿಕೆ

ಪಂಡಿತ ತಾರಾನಾಥರ ಪ್ರತಿಭಾವಂತ ಲೇಖನಗಳು, ಶ್ರೀಷ್ಠ ಕತೆ-ಕವಿತೆಗಳು, ಸಾಮಾಜಿಕ ಪ್ರಬಂಧಗಳು, ಮಾಸಭವಿಷ್ಯ ಇತ್ಯಾದಿಗಳಿಗಾಗಿ ' **ನವಚೇತನ** 'ವನ್ನು ತರಿಸಿಕೊಳ್ಳಿರಿ. ವಾರ್ಷಿಕಚಂದಾ— ೧-೮-೦ ಅಂಚೆಪೆಜ್ಜ ಸೇರಿ.

ಸಂಪಾದಕರು— ರಾ. ವೆ. ವಾಲಗಳ್ಳಿ ' ನವಚೇತನ ಮಾಸಪತ್ರಿಕೆ ' ಶಿರಸಿ.

ಔಂಧ್ ಚಿತ್ರ ಸಂಗ್ರಹಾಲಯ

ಡಿ. ಸಿದ್ಧವನಹಳ್ಳಿ ಕೃಷ್ಣಶರ್ಮ

★

ಔಂಧಕ್ಕೆ ಹೋಗಿ ನೋಡುವವರಿಗೆ ಅಲ್ಲಿಯ ಮುಖ್ಯ ವೈಶಿಷ್ಟ್ಯಗಳಾಗಿ ತೋರುವುವೆಂದರೆ ಎರಡು : ಒಂದು ಸೂರ್ಯನಮಸ್ಕಾರ, ಇನ್ನೊಂದು ಚಿತ್ರಕಲೆ. ಸೂರ್ಯನಮಸ್ಕಾರ ಅಲ್ಲಿಯ ಹೆಂಗುಸರು—ಗಂಡುಸರು—ಹಿರಿಯರು—ಹುಡುಗರು ಎಲ್ಲರಿಗೂ ನಿತ್ಯ-ಕರ್ಮವೊಂದಾಗಿದೆ. ದೇಶವಿದೇಶದ ಚಿತ್ರ-ಶಿಲ್ಪಕಲೆಗಳ ಸೊಗಸು ಅಲ್ಲಿಯ ಚಿತ್ರ-ಸಂಗ್ರಹಾಲಯದಲ್ಲಿ ನೆಲೆಯೂರಿ ನಿಂತಿದೆ!

★

ಔಂಧ್‌ಗೆ—ಅಂದರೆ ಔಂಧ್ ರಾಜಧಾನಿಗೆ—ಹೋಗಬೇಕಾದರೆ ಹುಬ್ಬಳ್ಳಿ–ಪುಣೆ ಗಾಡಿಯ ದಾರಿಯಲ್ಲಿ **ರಹಿಮತ್‌ಪೂರ್** ಎಂಬ ನಿಲುಮನೆಗೆ ಇಳಿಯಬೇಕು. ಅಲ್ಲಿ ಔಂಧ್‌ಗೆ ಹೋಗುವ ಮೋಟಾರು ಸಿದ್ಧವಾಗಿರುತ್ತದೆ. ರಹಿಮತ್‌ಪೂರಿಗೂ ಔಂಧ್‌ಗೂ ೧೦–೧೫ ಮೈಲು ಇದೆ. ಒಂದು ಗಂಟೆಯೊಳಗಾಗಿಯೆ ತಲುಪುತ್ತೇವೆ. ದಾರಿ ಪರವಾಯಿಲ್ಲ, ಸುಮಾರಾಗಿದೆ. ಮೋಟಾರು ಯಾರೋ ಇಟ್ಟಿದಾರೆ; ಸಂಸ್ಥಾನದ್ದು ಅಲ್ಲ. ಸಂಸ್ಥಾನವೇ ಇಟ್ಟರೆ ಹೆಚ್ಚು ಅನುಕೂಲವಾದೀತು.

ನಾವು ರಹಿಮತ್‌ಪೂರದಲ್ಲಿ ಇಳಿದಾಗ ಬೆಳಗಿನ ಜಾವ ೪ರ ಹೊತ್ತು. ರಾತ್ರಿ ೧೧ ಗಂಟೆಗೆ **ಲೋಣಂದ** ನಿಲುಮನೆಯಲ್ಲಿ ಗಾಡಿ ಹತ್ತಿದ್ದೆವು ನನ್ನ ಜೊತೆಯಲ್ಲಿ ದಕ್ಷಿಣಸಂಸ್ಥಾನಗಳ ಜನರ ಪರವಾಗಿ ೨೦–೨೫ ವರುಷಗಳಿಂದ ಅವಿಶ್ರಾಂತವಾಗಿ ದುಡಿಯುತ್ತಿರುವ **ಡಿ. ಬಾಲಕೃಷ್ಣ ವಿಟ್ಠಲ ಶಿಖರೆ**ಯವರು ಇದ್ದರು. ಶಿಖರೆ ಹಿರಿಯರು; ವಯಸ್ಸಾಗುತ್ತ ಬಂದವರು. ಇದ್ದ ತಾವು ಅವರಿಗೆ ಬಿಟ್ಟು ಗಾಡಿಯೊಳಗೆ ನಾನು ಕುಳಿತೇ ಇದ್ದೆ. ರಹಿಮತ್‌ಪೂರಕ್ಕೆ ಬಂದಾಗ ತುಂಬಾ ನಿದ್ದೆ ತೂಕಡಿಕೆ. ಮೋಟಾರಿನಲ್ಲಿ ಕೂತ ಹಾಗೇ ನಿದ್ದೆ ಬಂತು.

ಔಂಧ್‌ಗೆ ಬರುವುದಾಗಿ ಮೊದಲೇ **ಅಪ್ಪಾಸಾಹೇಬ**ರಿಗೆ ತಿಳಿಸಿದ್ದೆವು ಅವರು ಆದಿನ ಊರಲ್ಲಿರುವ ಹಾಗಿರಲಿಲ್ಲ. ಎಲ್ಲಿಯೋ ಕೆಲಸವಿದ್ದು ಹೋಗಬೇಕಾಗಿತ್ತು. ಅವರು ಇರದಿದ್ದರೂ ಎಲ್ಲವೂ ಸಜ್ಜಾಗಿತ್ತು. ಮನೆಯಲ್ಲಿ ಕಾಲಿಟ್ಟವರೇ ಹಾಸಿಗೆ ಸೇರಿಬಿಟ್ಟೆವು. ನಿದ್ದೆಯಿಲ್ಲದೆ—ತಲೆ ಕೆಳಗಿಟ್ಟರೆ ಸಾಕಾಗಿತ್ತು.

ಬೆಳಗ್ಗೆ ಏಳುವಾಗ ಕೊಂಚ ತಡವಾಯಿತು. ಏಳುಗಂಟೆ ಘಿರಬಹುದು. ಆಗಲೇ ಅರಮನೆಯಲ್ಲಿ ಸೂರ್ಯನಮಸ್ಕಾರದ ಗದ್ದಲ ಮೊದಲಾಗಿತ್ತು. '**ಹ್ರಾಂ ಹ್ರೀಂ**'ಗಳ ಘೋಷ ಕೇಳಿಸುತ್ತಿತ್ತು. ಅರಮನೆಯಲ್ಲೆ ಒಂದು ಗುಡಿಯಿದೆ. ಅದರಲ್ಲಿ ವಿಶಾಲವಾದ ಪಡಸಾಲೆ. ಅಲ್ಲಿ ಸಾಲುಸಾಲಾಗಿ ನಿಂತು ಹುಡುಗರು ನಮಸ್ಕಾರಹಾಕುತ್ತಿದ್ದರು. ಎಲ್ಲರೂ ಹೈಸ್ಕೂಲಿನ ಹುಡುಗರು. ಮೈಸೂರು ಪ್ರೈದರಾಬಾದುಗಳಲ್ಲಿ ಮಿಡಲ್-ಸ್ಕೂಲು ಹೈಸ್ಕೂಲು ಎರಡುಭಾಗವಾಗಿರುತ್ತವೆ. ಮುಂಬಯಿಕಡೆ ಎಲ್ಲಾ ಒಂದೇ ಸ್ಕೂಲು; ಪ್ರೈಮರಿಯಾದ ಮೇಲೆ ಹೈಸ್ಕೂಲು. ೮–೯ ವರುಷದ ಎಳಕರಿಂದ ೧೬ ೧೭ರ ವರೆಗಿನ ಹರೆಯದವರ ತನಕ ಎಲ್ಲ ವಯಸ್ಸಿನವರೂ ಆ ಸೈನ್ಯದಲ್ಲಿದ್ದರು. ಕೆಲವರು ಹುಡುಗಿಯರೂ ಇದ್ದರು. ಅವರೂ ಗಂಡುಗಚ್ಚೆಹಾಕಿ, ಮೈ-ಮಣಿಸಿ ಇವರ ಜೊತೆಗೆ ಸಮನಾಗಿ ನಮಸ್ಕಾರಹಾಕುತ್ತಿದ್ದರು. ಬೆಂಗಳೂರು ಕಡೆಯ ಬಣ್ಣದ ಬೀಸಣಿಕೆಗಳಿಗೂ ಇದನ್ನು ಕಲಿಸಿದರೆ ಮೈಯಲ್ಲಿ ಸ್ವಲ್ಪ ನೆತ್ತರು, ಮೋರೆಯಲ್ಲಿ ಕೊಂಚ ಕಳೆ ಬಂದೀತೇನೋ ಎಂದುಕೊಂಡೆ. ಆದರೆ ಇಲ್ಲಿಯ ಹಾಗೆ ಅಲ್ಲಿ ಯಾರು ಒತ್ತಾಯದ ಮಾಫಸ್ಸಾನಕ್ಕೆ ಹಚ್ಚುವವರು?

ಇಲ್ಲಿ ಸೂರ್ಯನಮಸ್ಕಾರ ಕಡ್ಡಾಯದ ಕವಾಯತು. ಔಂಧ್ ರಾಜರಿಗೆ ಸೂರ್ಯನಮಸ್ಕಾರವೆಂದರೆ ಬಹಳ ಪ್ರೀತಿ. 'ಮನಸ್ಸಿಗೆ ಗಾಯತ್ರಿ, ಮೈಗೆ ಸೂರ್ಯನಮಸ್ಕಾರ' ಎಂಬ ತತ್ತ್ವ ಅವರದು. ಸಂಸ್ಥಾನದ ಎಲ್ಲಾ ಶಾಲೆಗಳಲ್ಲಿಯೂ ನಮಸ್ಕಾರಕ್ಕೆ ಒಂದು ಗಂಟೆಯಿದೆ. ಪ್ರೈಮರಿ ಹುಡುಗರಿಗೂ ಕಲಿಸುತ್ತಾರೆ. ಸಂಸ್ಥಾನದ ಆಡಳಿತದ ವರದಿಯಲ್ಲಿಯೂ ಸೂರ್ಯನಮಸ್ಕಾರದ ಪ್ರಸ್ತಾಪವಿದೆ. ನಾಲ್ಕು ತಿಂಗಳೊಳಗೆ ಒಂದು ಕೋಟಿ ನಮಸ್ಕಾರ ಹಾಕಬೇಕೆಂದು ರಾಜರ ಅಪ್ಪಣೆಯಿದೆ. ಈ ಕೋಟಿ ನಮಸ್ಕಾರದ ಮಾತು ಆ ವರದಿಯಲ್ಲಿಯೂ ಬರುತ್ತದೆ. ಯಾರೇ ಬರಲಿ, ಅವರಿಗೆ ಮೊದಲು ಸೂರ್ಯನಮಸ್ಕಾರ ತೋರಿಸುತ್ತಾರೆ **ಬಾಳಾಸಾಹೇಬ**ರು. ಬರೀ ಪ್ರೀತಿಯಲ್ಲ, ಅವರಿಗೆ ಅದೊಂದು ಹುಚ್ಚು. ಶರೀರವ್ಯಾಯಾಮದ ಸರ್ವೋತ್ತಮರೀತಿ ಎಂದು ಅವರ ನಂಬಿಕೆ. ನಮಸ್ಕಾರದ ಪಟಗಳನ್ನು ಮಾಡಿಸಿ ಪ್ರಚಾರಮಾಡುತ್ತಿದ್ದರು ಬಹಳ ದಿನದ ಕೆಳಗೆ. ಹೋದಹೋದಲ್ಲೆಲ್ಲ ಇದೇ

ಮಾತನ್ನು ಹೇಳುತ್ತಿದ್ದರು. ವರ್ಧಾದಲ್ಲಿ ನನಗೊಮ್ಮೆ ಅವರ ಭೆಟ್ಟಿಯಾಗಿತ್ತು. ಆಗಲೂ ಇದೇ ಸಂದೇಶ. **'ನಮಸ್ಕಾರ ಹಾಕು, ಹಾಲು ಕುಡಿ.'** ಕೆಲವುದಿನ ಈ ನಮಸ್ಕಾರದ ಹುರುಪು ಮುಂಬಯಿ ಪ್ರಾಂತದಲ್ಲಿ—ಶಾಲೆ-ಸಂಘಗಳಲ್ಲಿ ಹರಡಿ ಕೊಂಡಿತ್ತು. ಆದರೆ ಬಹಳ ದಿನ ಉಳಿಯಲಿಲ್ಲ. ಹುಡುಗರು ಹೇಗಾದರೂ ಮಾಡುತ್ತಿದ್ದರಾಗಲಿ, ಮಾಸ್ತರರಿಗೇ ಅದು ಭಾರ ವಾಗಿತ್ತು. ಅಂತೂ ಹೇಗೆ ಬಂತೋ ಹಾಗೇ ಅದು ಹೋಯಿತು.

ಅಡು ಹೇಗಾದರೂ ಇರಲಿ. ಈ ಸಮುದಾಯ ನಮಸ್ಕಾರ ದಲ್ಲಿ ಒಂದು ಶಿಸ್ತು ಗಾಂಭೀರ್ಯ ಇದೆ. ಕೂಡಿ ಕೆಲಸಮಾಡುವ ಬುದ್ಧಿ, ಗುಂಪು ಕೂಡಿದಾಗ ತೋರಿಸಬೇಕಾದ ಸಂಯಮ, ಮುಖ್ಯವಾಗಿ ಪ್ರತಿಯೊಂದು ಜೀವಿಯೂ ಸಮಾಜದ ಅಂಗ ಎಂಬ ಜ್ಞಾನ ಇದರಿಂದ ಬರುತ್ತವೆ. ಹುಡುಗರ ಎದೆ ಅಗಲ ವಾಗಿ ಹಾವಿನ ಹೆಡೆಯಂತೆ ಅರಳಿಕೊಂಡಿದ್ದುವು. ಬೊಜ್ಜು ಸುತರಾಂ ಇರಲಿಲ್ಲ. ಇರಬೇಕಾದರೂ ಹೇಗೆ? ಮೈ ಹಗುರಾಗಿ ಅಳತೆಯಾಗಿರುತ್ತದೆ. ಅವರ ಮೋರೆ ನೋಡಿದರೆ **'ಕಡಲಂ ಲಂಘಿಸಿ ಗಿರಿಯಂ ದಾಂಟಿ ಇನಮಂಡಲವನೇ ಕೀಳ್ವ'** ಹುರುಪೂ ಹುಮ್ಮಸ್ಸೂ ಕಾಣುತ್ತದೆ.

ಈ ಗುಂಪಿನಲ್ಲಿ ಜಾತಿ-ಮತವಿಭೇದವಿಲ್ಲ. ಒಬ್ಬಿಬ್ಬರು ಹರಿ-ಜನರೂ ಇದ್ದರು. ಅರಮನೆಯಲ್ಲಿಯೂ ಅಷ್ಟೆ, ಎಲ್ಲ ಜಾತಿ-ಯವರೂ ಕೆಲಸಮಾಡುತ್ತಾರೆ. ಬಾಳಾಸಾಹೇಬರದು ಧಾರ್ಮಿಕ ವೃತ್ತಿಯಾದರೂ ಒಣಮಡಿವಂತಿಕೆಯಲ್ಲ. ಹಿಂದಿನ ಕಾಲ ದಲ್ಲಿಯೇ ಇಂಗ್ಲಿಷು ಕಲಿತವರು. ಮುಂಬಯಿ ವಿಶ್ವವಿದ್ಯಾ-ಲಯದ ಬಿ. ಎ. ಪದವೀಧರರು.

ನಮಸ್ಕಾರದ ಪಡಸಾಲೆಯ ತುಂಬಾ ದೊಡ್ಡ ದೊಡ್ಡ ಚಿತ್ರಪಟಗಳಿವೆ. ನಾಲ್ಕು ನಾಲ್ಕು ಅಳ ಎತ್ತರದುವು. ಕೆಲವು ಪೌರಾಣಿಕ, ಕೆಲವು ಐತಿಹಾಸಿಕ, ಕೆಲವು ಕೌಟುಂಬಿಕ. ಎಲ್ಲವೂ ಬಣ್ಣದುವು. ಪ್ರತಿಯೊಂದು ಚಿತ್ರದ ಕೆಳಗೆ ಮರಾಟಿಯಲ್ಲಿ ಅದರ ವಿವರ, ಅದರ ಕಥೆ ಬರೆದು ಬೇರೆಯಾಗಿ ತೂಗುಹಾಕಿದ್ದಾರೆ. ಶಿವಾಜಿಯ ಜೀವನಸಂದರ್ಭದ ಒಂದೆರಡು ಚಿತ್ರ ತುಂಬಾ ಜೀನ್ನಾಗಿವೆ. ಎಲ್ಲ ಚಿತ್ರಗಳನ್ನೂ ಬಾಳಾಸಾಹೇಬರೇ—ಮೊರೆಗಳೇ ಬರೆದಿದ್ದಾರೆ. ಚಿತ್ರಗಳಲ್ಲಿ ಮರಾಠಿ ಕೈವಾಡ ಒಡೆದು ಕಾಣು ತ್ತದೆ. ಹೆಣ್ಣು ಎಲ್ಲ ಮರಾಠಿಯೇ. ಸೀತಾ-ರುಕ್ಮಿಣಿಯರು ಅಸ್ಸಲ್ ಪುಣೇರಿ ಜನ.

ಪಂತರಿಗೆ ಸೂರ್ಯನಮಸ್ಕಾರಕ್ಕಿಂತ ಪ್ರಿಯ ಚಿತ್ರಲೇಖನ; ತಿಲ್ಪವೂ ಅಷ್ಟೆ. ಅವರು ಉತ್ತಮ ಕಲೋಪಾಸಕರು. ತಮ್ಮ ಆಯುಸ್ಸಿದಲ್ಲೂ ತಮ್ಮ ಹಣದಲ್ಲೂ ಬಹುಭಾಗವನ್ನು ಕಲೋ-ಪಾಸನೆಗಾಗಿ ವೆಚ್ಚ ಮಾಡಿದ್ದಾರೆ. ದೇಶ-ದೇಶಾಂತರ ತಿರುಗಾಡಿ-ದ್ದಾರೆ. ತಮ್ಮ ಸುತ್ತಲಿನವರಿಗೂ ಕಲೆಯ ರುಚಿ ಅಂಟಿಸಿಬಿಡುವ ಸ್ವಭಾವ. ಇವರ ಪೊಮ್ಮಗಳೊಬ್ಬಾಕೆ ಇಂಗ್ಲೆಂಡಿನಲ್ಲಿ **ಬರ್ಮಿಂಘಾಮ್ ಕಲಾಭವನ**ದಲ್ಲಿ ತಯಾರಾಗಿ ಬಂದಿದ್ದಾಳೆ. ಇವರ ಆಶ್ರಯದಲ್ಲಿ ಕೆಲಸಮಾಡುತ್ತಿರುವ **ಪಂಡಿತ ಸಾತವಳೇ-ಕರರ** ಮಗ ಒಬ್ಬ ಇನ್ನೂ ಇಟಲಿಯಲ್ಲಿಯೇ ಇದ್ದಾನೆ....ಚಿತ್ರಕಲೆ ಕಲಿಯುತ್ತ.

ಪಂತರ ಕಲಾಪ್ರೇಮ ಮನೆಯೊಳಗೆ ಕಾಲಿಡುತ್ತಲೇ ತಿಳಿಯುತ್ತದೆ. ಅಂಗಳದಲ್ಲಿ ಐದು ಬಿಳಿಯಕಲ್ಲಿನ ಸುದ್ದಾದ ವಿಗ್ರಹ ಅದರ ಕುರುಹಾಗಿ ನಿಂತಿವೆ. ಅದರಲ್ಲಿ ಅವರ ತಾಯ ವಿಗ್ರಹವೊಂದಿದೆ. ಹೊರಗಡೆ ಕೊತಡಿಯೊಂದರಲ್ಲಿ ಶಿಲ್ಪಿಗಳಿಬ್ಬರು ಟೊಕ್ ಟೊಕ್ ಎಂದು ಕೆಲಸನಡೆಯಿಸಿದ್ದರು. ಇಷ್ಟೇಕೆ, ಅವರ ಕಲಾಪ್ರೇಮದ ಫಲವಾಗಿ ಊರಹೊರಗೆ ಒಂದು ಚಿತ್ರ-ಸಂಗ್ರಹಾಲಯವೇ ನಿರ್ಮಾಣವಾಗಿದೆಯಲ್ಲ. ಅದರ ಜೊತೆಗೆ **'ಶ್ರೀಂಬಕ ಕಲಾಭವನ'** ವೂ ಒಂದು.

ಚಿತ್ರಸಂಗ್ರಹಾಲಯ ಊರಹೊರಗಿನ ಗುಡ್ಡದ ಮೇಲಿದೆ. ಆ ಗುಡ್ಡಕ್ಕೆ **'ತ್ರೀಪುಂಬಕೇಶ ಮುರಡಿ'** ಎಂದು ಹೆಸರು. ಅದರ ತುದಿಯಲ್ಲಿ ಔಂಧ್ ರಾಜರ ಕುಲದೇವತೆಯ ಗುಡಿಯಿದೆ. ಗುಡ್ಡದ ಮೇಲೇರಲು ನಡುನಡುವೆ ಮೆಟ್ಟಲು ಕಟ್ಟಿದಾರೆ. ಈ ಮುಸ್ಸಿನಲ್ಲಿಯೂ ಬಾಳಾಸಾಹೇಬರು ದಿನವೂ ಗುಡ್ಡವೇರಿ ಆ ಗುಡಿಗೆ ಹೋಗಿ, ದೇವಿಯ ದರ್ಶನ ತೆಗೆದುಕೊಂಡು ಬರುತ್ತಾ-ರಂತೆ. ಸೂರ್ಯನಮಸ್ಕಾರದ ಮಹಿಮೆ. ೭೦ ವರ್ಷವಾದರೂ ಮುದುಕ ಗಟ್ಟಿಯಾಗಿದ್ದಾರೆ.

ಚಿತ್ರಸಂಗ್ರಹಾಲಯದ ಕಟ್ಟಡ ಕಟ್ಟಿ ಮೂರು ವರ್ಷವಾಗಿದೆ. ಒಳ್ಳೆ ಎತ್ತರವಾದ ಸ್ಥಳ. ಹಿತವಾದ ಸುಳಿಗಾಳಿ. ಮುರಡಿಯ ಕೆಳಗೆ ರಸ್ತೆಯ ಎರಡೂ ಪಕ್ಕದಲ್ಲಿ ಬಿಳಲುಬಿಟ್ಟಿರುವ ಆಲದ ಜಾತಿಯ ಮರಗಳ ಸಾಲು. ನೋಟ ಕಣ್ಣಿಗೆ ತುಂಬ ಸೊಂಪಾ ಗಿದೆ. ಆಲಯದಲ್ಲಿ ಶಿಲಾವಿಗ್ರಹ, ಕಂಚಿನ ಮೂರ್ತಿಗಳು, ಹಳೆಯ ಬಂಗಾರದ ವರಹಗಳು, ಸೊರಬ ಸಿಸಿರ್ಗಳ ಗಂಧದ ಸಾಮಾನು, ದಂತದ ಕೆತ್ತನೆಯ ವಸ್ತುಗಳೂ ಪಾರ್ಸೀ ಮರಾಠಿ ಕೈಬರೆಹದ ವುರಾತನ ಸಚಿತ್ರ ಗ್ರಂಥಗಳು, ಚಿತ್ರಪಟಗಳು, ಚೀನ ಜಪಾನಿನ ಪೋರ್ಸಲೇನ್ ಸಾಮಾನು, ರೋಮ್ ಗ್ರೀಸ್‌ಗಳ ಶಿಲ್ಪದ ಮಾದರಿಗಳು ಇವೆಲ್ಲ ಇವೆ. ಎಲ್ಲವನ್ನೂ ಅಚ್ಚುಕಟ್ಟಾಗಿ ಸ್ವಚ್ಛವಾಗಿ ಇಟ್ಟಿದ್ದಾರೆ.

ಬಾಳಾಸಾಹೇಬರು ೭-೮ ವರ್ಷದ ಎಳೆಯ ಹುಡುಗರಾಗಿ ದ್ದಾಗ ಅವರ ತಂದೆಗೊಂದು ಕಾಗದ ಬರೆದಿದ್ದರು. ಅವರ ತಂದೆ ಪುಣೆಗೋ ಸಾತಾರೆಗೋ ಎಲ್ಲಿಗೋ ಹೋಗಿದ್ದಾಗ ಅವರಿಗೆ ಬರೆದು ಕಳಿಸಿದರಂತೆ. ಊರಿಗೆ ಬರುವಾಗ ತಮಗೆ ಚಿತ್ರತರ ಬೇಕೆಂದು ಬರೆದಿದ್ದಾರೆ. ಪಂತರಿಗೆ ಚಿಕ್ಕತನದಿಂದಲೂ ಕಲಾರುಚಿ. ಕುಂಚ-ಬಣ್ಣ, ಸೀಸದಕಡ್ಡಿ ಕಾಗದ ಹಿಡಿದುಕೊಂಡು ಮೂಲೆ ಗಳಲ್ಲಿ ಗೊಂಬೆಗೀಚುತ್ತ ಕುಳಿತಿರುತ್ತಿದ್ದರಂತೆ. ಅರಮನೆಯ ಗೋಡೆಗಳ ಮೇಲೆಲ್ಲ ಚಿತ್ರವಿಚಿತ್ರ ವ್ಯಾಣಗಳು ದಿನಾಲೂ ಪ್ರತ್ಯಕ್ಷ ವಾಗುತ್ತಿದ್ದುವಂತೆ. ಬಾಳಾಸಾಹೇಬರ ಆ ಪತ್ರವನ್ನು ಕಾಯ್ದಿಟ್ಟು ಕನ್ನಡಿಕಟ್ಟುಹಾಕಿ ಸಂಗ್ರಹಾಲಯದಲ್ಲಿಟ್ಟಿದ್ದಾರೆ.

ಅವರೇ ಚಿತ್ರಿಸಿದ ರಾಮಾಯಣ ಭಾರತ ಚಿತ್ರಗಳು ಬೇಕಾದಷ್ಟಿವೆ. ಚಿತ್ರಗಳಲ್ಲಿ ೨ ಪುರಾಣಗಳನ್ನು ನಿರೂಪಿಸಿದ್ದಾರೆ.

ಪಂಡಿತ ಸಾತವಳೇಕರರು ಬರೆದ ಪ್ರಕೃತಿಚಿತ್ರಗಳು ಚೆನ್ನಾಗಿವೆ. **ಹಿಮಾಲಯ, ಡಾಲ್‌ಕೊಳ, ಭೋರ್‌ಘಾಟ ಕಣಿವೆ** ಮುಂತಾದ ಚಿತ್ರಗಳು ಅವರವು. ನಿಸರ್ಗರಮಣೀಯವಾಗಿವೆ. ಔಂಧ್ ಸಂಸ್ಥಾನಕ್ಕೂ ದರಬಾರು ಚಿತ್ರಕಾರರು ಇದಾರೆ. ಅವರಲ್ಲಿ **ಕೊಟ್ಯಾಳಕರರು** ಒಬ್ಬರು. ಕೊಟ್ಯಾಳ ವಿಜಾಪುರ ಜಿಲ್ಲೆಯಲ್ಲಿ ತಿಕೋಟದ ನೆರೆಯಲ್ಲಿರುವ ಒಂದು ಹಳ್ಳಿ. ಔಂಧ್ ಸಂಸ್ಥಾನಕ್ಕೆ ಸೇರಿದುದು. ಕೊಟ್ಯಾಳಕರರ ಚಿತ್ರ–೫ ಅಡಿಯವು–ಕೆಲವು ಇವೆ. ಹೆಚ್ಚಾಗಿ ಐತಹಾಸಿಕವಸ್ತುವನ್ನೇ ಆರಿಸಿಕೊಂಡಿದ್ದಾರೆ. ಇವರ ಒಂದೆರಡು ಚಿತ್ರ ಯಾವಾಗಲೋ ಜಯಕರ್ನಾಟಕದಲ್ಲಿ ಬಂದಿದ್ದಹಾಗೆ ನೆನಪು. **ಧುರಂಧರರ** ಚಿತ್ರಗಳೂ ಇವೆ.

ರಾಜಾ ರವಿವರ್ಮನ ಮೂಲಚಿತ್ರ ಕೆಲವು ಇಲ್ಲಿವೆ. ಸೈರಂಧ್ರಿ ಕೀಚಕವಧೆಯ ತಾಂಬೂಲವನ್ನು ತೆಗೆದುಕೊಂಡು, ಪರಿಮಳದ್ರವ್ಯಗಳ ತಟ್ಟೆಯೊಂದಿಗೆ ಸುಧೇಷ್ಣೆಯ ಅಂತಃಪುರದಿಂದ ಮರಳಿಬರುತ್ತಿದಾಳೆ. ನಿಧಾನವಾಗಿ ಮೆಟ್ಟಲು ಇಳಿವಾಗ ಮನಸಿನ ಭಾರಕ್ಕೆ ಹೆಜ್ಜೆ ಮಂದಾತಿಮಂದವಾಗಿದೆ. ಮೋರೆ ತಗ್ಗಿದೆ, ಬಾಡಿದೆ. ಅಂಜಿದ ಚಿಗರಿಯ ಬೆದರುಗಣ್ಣು. ಕಪ್ಪು ಬಣ್ಣದ ಕೆಂಪಂಚಿನ ಸಿರೆ. ಹೀಗೇ ಭೀಮನ ಕಣ್ಣಿಗೆ ಬಿದ್ದರೆ ಕೀಚಕನ ಅವತಾರ ಮುಗಿಯಲೇ ಬೇಕು.

ಮಂಗಳೂರಿನ **ಎ. ಎಚ್. ಮುಲ್ಲರರ** ಕೆಲವು ಚಲೋ ಚಿತ್ರ ಇವೆ. ಬೆಂಗಳೂರಿನ **ಸ್ವಾಮಿ** ಎಂಬವರ ಕೆಲವು ಪೆನ್ಸಿಲ್ ಸ್ಕೆಚ್–ಸೀಸದ ಕಡ್ಡಿಯಿಂದ ತೆಗೆದ ಚಿತ್ರ—ಇವೆ. ಆಧುನಿಕ ಪಾಶ್ಚಾತ್ಯ ಪದ್ಧತಿಯ ಇಂಪ್ರೆಷನಿಸ್ಟ್ ಸ್ಕೆಚ್–ಭಾವನಾಚಿತ್ರ—ಒಂದೆರಡಿವೆ. ಚಿತ್ರಕಲೆಯರಿಯದ ಕಣ್ಣಿಗೆ ಕ್ಷ ಕಿರಣದ ಫೋಟೋ ಕಂಡಹಾಗೆ ಕಾಣುತ್ತವೆ. **ವ್ಯಾನೆಟ್ಟಿ** ಎಂಬ ಫ್ರೆಂಚ್ ಚಿತ್ರಕಾರನ ಅಂಧ ಚಿತ್ರ ಎರಡಿವೆ. ಆದರೆ ಹೆಚ್ಚಾಗಿರುವುವು ರಾಜಪುತಾನ ಚಿತ್ರಗಳು. ಅವು **ಕಾಂಗ್ರಾ** ರೀತಿಯವಂತೆ. ಅದರಲ್ಲಿ ರಾಗ-ರಾಗಿಣೀ ಚಿತ್ರಗಳಂತೂ ಮೇಲುಮಾಳಿಗೆಯ ತುಂಬ ಇವೆ. ಒಂದು ರಾಗ, ಅದಕ್ಕೆ **ನಾಲ್ಕು** ರಾಗಿಣಿ. ಈ ಕುಟುಂಬಕ್ಕೆ ಎಂಟು ಮಂದಿ ಕುಮಾರ-ಕುಮಾರಿಯರು– ಜನ್ಯರಾಗಗಳು– ಹೀಗೆ ರಾಗದ ಚಿತ್ರಗಳ ಸಂಸಾರ ನಿತ್ಯರಮಣೀಯವಾಗಿ ಸಾಗಿದೆ. ಇವಕ್ಕೆ ಜೊತೆಯಾಗಿ **'ದುರ್ಗಾಸಪ್ತಶತಿ'** **'ಮೇಘದೂತ'** ಕಾವ್ಯಗಳ ಚಿತ್ರಗಳಿವೆ. ಅದರಲ್ಲೂ ಇದರಲ್ಲೂ ಕೆಲವು ಪದ್ಯಗಳ ಸನ್ನಿವೇಶಕ್ಕೆ ಸರಿಯಾಗಿ ಚಿತ್ರ ಬರೆದಿದ್ದಾರೆ. ಇವಲ್ಲದೆ ಮೊಗಲ ಪದ್ಧತಿಯ ವ್ಯಕ್ತಿಚಿತ್ರಗಳೂ—Portrait paintings–ಇವೆ. ಕಾಂಗ್ರಾ ಪಂಜಾಬೀ ಪದ್ಧತಿಯವು ೫೫-೬೦ ಇವೆ. ೧೬ನೆಯ ಶತಮಾನದಿಂದ ೨೦ನೆಯ ಶತಮಾನದ ವರೆಗಿನ ಬೇರೆ ಬೇರೆ ಕಲಾರೀತಿಯೆಲ್ಲ ಇಲ್ಲಿ ಕಾಣಬರುತ್ತವೆ. ಒಟ್ಟು **ಆರೇಳು** ನೂರು ಚಿತ್ರ ಇವೆ.

ಸರಸಿಯ ಗುದಿಗಾರರ ಗಂಧದ ರಾಮಾಯಣ-ಭಾರತ ಚಿತ್ರಾವಳಿಯೊಂದಿದೆ. ಕೆತ್ತನೆ ಬಹು ಸೂಕ್ಷ್ಮ, ಕುಸುರು. ಇಂಥವೇ ರಾಮಾಯಣ ಭಾರತದ ದೊಡ್ಡ ಬೆಳ್ಳಿಯ ತಟ್ಟೆಯಿವೆ. ಕಲ್ಲು-ಮರ. ಲೋಹ-ಎಲ್ಲತರದ ಪ್ರತಿಮೆಗಳೂ ಇವೆ. ಇಂಗ್ಲೆಂಡಿನಲ್ಲಿ ಸಿಗುವ **ಕಂಬರ್ಲೆಂಡ್** ಕಲ್ಲಿನಲ್ಲಿ ಕೆತ್ತಿದ 'ತಾಯಿ-ಮಗು' ಪ್ರತಿಮೆಯೊಂದೂ ಎರಕ ಹೊಯ್ದು ಮಾಡಿದ 'ಮಗು' ಏನ ಮೂರ್ತಿಯೊಂದೂ ಪಾಶ್ಚಾತ್ಯಶಿಲ್ಪದ ಅತ್ಯಾಧುನಿಕ ರೀತಿಯ ಗುರುತಾಗಿ ಇಲ್ಲಿವೆ. ಮೊದಲನೆಯದನ್ನು ಕೆತ್ತಿದ ಶಿಲ್ಪಿ **ಹೆನ್ರಿ ಮೂರ್**. ಎರಡನೆಯದು **ಗರ್ ಟ್ರೂಡ್ ಹೆವ್ಸ್** ಎಂಬ ಕಲಾವಿದನದು. ಇಬ್ಬರೂ ಬ್ರಿಟಿಷರು. ಯುದ್ಧಕ್ಕೆ ಮೊದಲು ಇಂಗ್ಲೆಂಡಿನಲ್ಲಿದ್ದವರು. ಇವಕ್ಕಿಂತಲೂ ಕುತೂಹಲ ಹುಟ್ಟಿಸುವುದು **'ಸ್ಟ್ರಾಂಗ್ ಫರ್ ಅಪ್ರೋಲೋ'** ಏನ ಪ್ಲಾಸ್ಟರ್ ಮೂರ್ತಿ. ಇದು ೨೬೦೦ ವರ್ಷದ ಕೆಳಗೆ ಗ್ರೀಸ್ ದೇಶದಲ್ಲಿ ಮಾಡಿದ ವಿಗ್ರಹ. ಬ್ರಿಟಿಷ್ ಮ್ಯೂಸಿಯಂನಿಂದ ಇವರು ಕೊಂಡು ತಂದಿದ್ದಾರೆ.

ಪರದೇಶದಲ್ಲಿಯಲ್ಲದೆ ಹಿಂದುಸ್ತಾನದಲ್ಲಿಯೂ ಬಾಳಾಸಾಹೇಬರು ಇವಕ್ಕಾಗಿ ತಿರುಗಾಡಿದ್ದಾರೆ. ಹಿಮಾಲಯಕ್ಕೆ ಕೇದಾರನಾಥ-ಬದರೀನಾಥ ಕ್ಷೇತ್ರಗಳನ್ನು ನೋಡ ಹೋಗಿ ಐದು ವಿಗ್ರಹಗಳನ್ನು ತಂದಿದ್ದಾರೆ. ಎಲ್ಲವೂ ಭಗ್ನಮೂರ್ತಿಗಳು. ನಾರಾಯಣ ವಿಗ್ರಹ ೯ನೆಯ ಶತಮಾನದ್ದಂತೆ; ಅದಕ್ಕಿಂತಲೂ ಹಳೆಯದು ಮಹಿಷಾಸುರಮರ್ದಿನಿ. ಹದಿನೆಂಟುಗೈಯಮ್ಮನಾದ ಆಕೆಗೆ ಸದ್ಯ ಒಂಭತ್ತೇ ಕೈಯಿವೆ. ಒಂದು ಮಗ್ಗಲು ಇಡೀ ಕತ್ತರಿಸಿಹೋಗಿದೆ. ಇದು ೬ನೆಯ ಶತಮಾನದ್ದಂತೆ. ಹಿಮಾಲಯ ಪ್ರಾಂತದ ಅದುರುಮಣ್ಣನ್ನೂ ಬಣ್ಣಬಣ್ಣದ ಕಲ್ಲನ್ನೂ ತಂದಿದ್ದಾರೆ. ಹಿಮಾಲಯದ ಮೇಕೆಯೊಂದರ ಚರ್ಮ, ಎರಡು ಹುಲಿಯ ಚರ್ಮ ತಂದಿದ್ದಾರೆ. ಕಸ್ತೂರಿಮೃಗದ ಚರ್ಮವೂ ಒಂದಿದೆ. ಆ ಮೃಗದ ನಾಭಿಯನ್ನಷ್ಟೆ— ಅದರ ನಾಭಿಯಲ್ಲಿ ಕಸ್ತೂರಿ ಒಂದು ಸಣ್ಣ ಗಂಟಾಗಿರುತ್ತದೆ—ಬೇರೆ ತೆಗೆದಿಟ್ಟಿದೆ. ಆ ಪ್ರಾಂತದ್ದೇ ಒಂದು ಜಮಖಾನೆ, ಬರ್ಮಾದ ಒಂದು ಮರದ ಪ್ರತಿಮೆ ಇವೆ.

ಇಟಲಿಯದೊಂದು ಚಿಕ್ಕ ಗಡಿಯಾರವಿದೆ. ಅದರ ತಲೆಯ ಮೇಲೆ ಬಣ್ಣದ ಕೋಗಿಲೆಯೊಂದಿದೆ. ಗಡಿಯಾರಕ್ಕೆ ಕೀಲಿ ಕೊಟ್ಟರೆ ಆ ಕೋಗಿಲೆ ರೆಕ್ಕೆ ಅಪ್ಪಳಿಸಿ ಸದ್ದು ಮಾಡುತ್ತ ಗಡಿಯಾರ ನಡೆಯಿಸುತ್ತದೆ. ಸೂಕ್ಷ್ಮವಾದರೂ ಆ ಚಲನ ಸ್ಪಷ್ಟವಾಗಿ ಕಾಣುತ್ತದೆ. ಕೊನೆಗೆ ಕೆಂಪಿನಲ್ಲಿ ಕಡೆದ ಗಣೇಶನನ್ನು ನೋಡಿದೆ. ಒಳ್ಳೆಯ ಮೂರಂಗುಲದ ಕೆಂಪು ಪಚ್ಚ. ಸಾಧಾರಣ ಜನ ನಾವು, ಅಷ್ಟು ದೊಡ್ಡ ಕೆಂಪು ನೋಡಬೇಕೆಲ್ಲಿ? ಈಗಂತೂ ಇಮಿಟೇಷನ್ ಕಲ್ಲಿನ ಕಾಲ, ನಿಜವಾದ ಕೆಂಪನ್ನು ನೋಡುವುದೂ ಅಪರೂಪವೇ.

ಆ ಗಣೇಶ ಸಾಮಾನ್ಯನಲ್ಲ, ೭೫ ಸಾವಿರ ರೂಪಾಯಿ ಬೆಲೆಯ ಗಣೇಶನಂತೆ.

ಧುರಂಧರ ಮೊದಲಾದವರು ತಮ್ಮ ಸ್ವಂತದ ಚಿತ್ರವನ್ನು ತಾವೇ ಬರೆದಿದ್ದಾರೆ. ಹೀಗೆ ಕಲಾವಿದರು ತಾವೇ ತೆಗೆದ ಅವರ ಚಿತ್ರ ಏಳು ಇವೆ.

ಇದೆಲ್ಲ ಮುಗಿಸಿ ಹೊರಗೆ ಬಂದರೆ ಸುತ್ತಲಿನ ನೋಟ ಬಹಳ ಸೊಂಪಾಗಿ ಕಾಣುತ್ತದೆ. ಪಕ್ಕದಲ್ಲಿ ಊರು; ಊರ ಮುಂದೆ ಗಿಡಗಳು; ಸುತ್ತಲೂ ಹಚ್ಚ ಹಸಿರು. ಆಲಯದ ಹಿಂದೆ ಆರು ಋತುಗಳನ್ನು ತೋರಿಸುವ ಆರು ವಿಗ್ರಹ ಕೆತ್ತಿಸಿ ನಿಲ್ಲಿಸಿದ್ದಾರೆ. ಆಯಾ ವಿಗ್ರಹಕ್ಕೆ ವ್ಯಾಖ್ಯಾನವೆಂಬ ಹಾಗೆ ಒಂದು ಮರಾಠಿ ಪದ್ಯ.

ಮನೆಗೆ ಬಂದಾಗ ಊಟಕ್ಕೆ ತಡವಾಗಿತ್ತು. ಅಪ್ಪಾ ಸಾಹೇಬರು ತಮ್ಮ ಪ್ರವಾಸದಿಂದ ತಿರುಗಿ ಬಂದು ನಮಗಾಗಿ ಹಾದಿ ಕಾಯುತ್ತಿದ್ದರು. ಅಲ್ಲಿ ಊಟ ತಿಂಡಿ ಎಲ್ಲವೂ ಹೊತ್ತು-ಹೊತ್ತಿಗೆ ಕ್ಲುಪ್ತವಾಗಿ ನಡೆಯಬೇಕು. ಎಲ್ಲಕ್ಕೂ ಒಂದು ಕ್ರಮ. ಊಟ ಫಲಾಹಾರ ಎಲ್ಲಾ ಇಷ್ಟುಹೊತ್ತಿಗೆ ಎಂದು ಅಂಗಳದಲ್ಲೊಂದು ಕಪ್ಪುಹಲಗೆಯ ಮೇಲೆ ದಿನವೂ ಬರೆಯುತ್ತಾರೆ. ವರ್ಧಾದಲ್ಲಿ ಆ ಹೊತ್ತಿಗೆ ಸರಿಯಾಗಿ— ಬಜಾಜವಾಡಿಯಲ್ಲಿ— ಗಂಟೆ ಬಾರಿಸುತ್ತಿದ್ದರು. ಇಲ್ಲಿ ಗಂಟೆಯಿಲ್ಲ. ಎಲ್ಲರೂ ಆ ಹೊತ್ತಿಗೆ ಬರಬೇಕು.

ಬಂದವನೇ ತಡವಾದುದಕ್ಕೆ ಕ್ಷಮೆಬೇಡಿದೆ. 'ಇಲ್ಲಿ ಅಂಥ ಮನಸೆಳೆಯುವ ಪ್ರದರ್ಶನವನ್ನು ಸೇರಿಸಿಟ್ಟು, ಇಲ್ಲಿ ಹೊತ್ತಿಗೆ ಸರಿಯಾಗಿ ಊಟಕ್ಕೆ ಬಾ ಎಂದರೆ ಹೇಗೆ? ಈ ಶಿಸ್ತು ಆ ಕಲಾ-ಪ್ರಪಂಚ ಎರಡೂ ತಾಳಗೂಡುವುದಿಲ್ಲ' ಎಂದೆ.

ಅಪ್ಪಾ ಸಾಹೇಬರು ನಕ್ಕರು. 'ಅದೇ ಅಲ್ಲವೆ ನಮ್ಮ ದೌರ್ಭಾಗ್ಯ. ಕಲೆಯೆಂದರೆ ಯಾವ ನಿಯಮವೂ ಇರಬಾರದು— ಎಂದು ನಾವು ತಿಳಿಯುತ್ತೇವೆ. ಕಲಾವಂತನಿಗೆ ಸರ್ವಮಾನ್ಯ. ಅವನ ಸರ್ವಾಪರಾಧವೂ ಕ್ಷಮ್ಯವೇ. ಅವನು ಬ್ರಹ್ಮನ ಸರಿಜೋಡಿ. ಅವನು ಮಾಡಿದ್ದರಲ್ಲೆಲ್ಲ ಸೃಷ್ಟಿಯ ಜಳಕವಿದೆ.... ಹೀಗೆ ತಿಳಿದು ನಮ್ಮಲ್ಲಿ ಕಲೆಗೆ ಬದಲು ಸ್ವೇಚ್ಛೆ-ಸೋಮಾರಿತನ ಬೆಳೆಯುತ್ತಿವೆ' ಎಂದರು.

'ಚೆನ್ನಾಗಿದೆ. ನೀವು ಕಾಳಿದಾಸನಿಗೂ ಸೂರ್ಯನಮಸ್ಕಾರ ಕಲಿಸುವ ಜನ. ರವೀಂದ್ರನಾಥನಿಗೂ ರಾಟೆ ತಿರುಗಿಸು - ಎಂದು ಗಾಂಧೀಜಿ ಹೇಳಿದ್ದರಂತೆ. ನಿಮ್ಮ ಗುರು ಅಲ್ಲವೆ; ಗುರುವಿನಂತೆ ಶಿಷ್ಯ!' ಎಂದೆ.

'ಅದಲ್ಲ ನನ್ನ ಅಭಿಪ್ರಾಯ. ಕಲೆ ಮಾದಕಶಕ್ತಿಯಾಗ ಬಾರದು. ಬಾಳಿಗೆ ಹೊಂದದೆ ಬರೀ ಕನಸಿನಲ್ಲಿಯೇ ತೇಲುವ ಕಲೆ ಫಲಕಾರಿಯಲ್ಲ. ಈ ಗಾಳಿನೂಲು ನೀರುಬರೆಹ ಬೀಡವೆನ್ನುತ್ತೇನೆ' ಎಂದರು.

'ಸರಿಯಪ್ಪ, ಕಲೆಗೂ ಫಲಬೇಕೋ! ತಾಂಬೂಲ ಹಾಕಿದರೆ ಏನು ದೇಹಕ್ಕೆ ಉಪಯೋಗ? ಹಾಲು ಕಾಸಿ ಕುಡಿದರೆ ಹೇಗೆ, ಹಸಿಯದು ಕುಡಿದರೆ ಹೇಗೆ? ಹೀಗೆಲ್ಲ ಕೇಳುವ ವಿಜ್ಞಾನ-ಪಂಡಿತನಾದ ಗೆಳೆಯನೊಬ್ಬ ಇದ್ದಾನೆ ನನಗೆ. ನಿಮ್ಮದೂ ಹಾಗೇ ಆಯಿತು, ಫಲಕ್ಕೆ ಆಶಿಪಡಬಾರದೆಂದು ನಿಮ್ಮ ವೇದಾಂತವೇ ಹೇಳಿಲ್ಲವೆ?' ಎಂದೆ.

'ಅದು ವ್ಯಕ್ತಿಯ ಮಾತು. ಇರಲಿ ಊಟಕ್ಕೆ ತಡವಾಯಿತು' ಎಂದು ಸೂಜನೆ ಬಂತು.

ಊಟವಾದ ಮೇಲೆ ಅಪ್ಪಾ ಸಾಹೇಬರ ಕೋಣೆಗೆ ಹೋದೆವು. ಅಲ್ಲಿ ಪಂಡಿತ ಸಾತವಳೇಕರರ ಮಗ-ಇಟಲಿಯಲ್ಲಿ ಚಿತ್ರಕಲಾಭ್ಯಾಸ ಮಾಡುತ್ತಿರುವನ-ಬರೆದ ದೊಡ್ಡ ಚಿತ್ರವೊಂದಿತ್ತು. ಅರಣ್ಯ-ಪ್ರದೇಶ. ಸುತ್ತಲೂ ಗುಡ್ಡಗಾಡು. ಅದರ ನಡುವೆ ಒಂದು ಕಣಿವೆ. ಆ ಕಣಿವೆಯ ಇಕ್ಕಟ್ಟುದಾರಿಯಲ್ಲಿ ಗಾಂಧೀಜೀ ಹೋಗುತ್ತಿದ್ದಾರೆ. ಕೈಯಲ್ಲಿ ಕೋಲು. ನಡಿಗೆ ಯಾವಾಗಲೂ ಇರುವಷ್ಟು ವೇಗವಾಗಿಲ್ಲ. ನೋಟ ಅಂತರ್ಮುಖವಾಗಿದೆ. ದಾರಿಯ ಮೇಲೆ ಬೆಳಕು ಮಸಕು-ಮಸಕಾಗಿ ಬಿದ್ದಿದೆ. ಆ ಕಣಿವೆ ಏರಿಹೋಗಬೇಕು. ಹಿನ್ನೆಲೆಗೆ ಹಿಂದೀಜನ ದೂರದಲ್ಲಿ ಯಾದರೂ ಇದ್ದರೆ ಚೆನ್ನಾಗಿತ್ತೋ ಏನೋ! ಅಥವಾ ಸತ್ಯಾರಾಧಕನು ಹೋಗುತ್ತಿರುವ ಸತ್ಯದ ಕಣಿವೆಯಿದ್ದರೂ ಇರಬಹುದು.

ಮೇಲ್ತರಗತಿಯ

ಹಳಕು (Concentrated) ಬಣ್ಣಗಳು

★ ಬರೆಯುವ ಮಸಿಗಳು

★ ಟಾಯಿಪ್‌ರಾಯಿಟಿಂಗ್ ರಿಬನ್ನುಗಳು

★ ಸಾಬೂನುಗಳು

★ ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆಬಳಸುವ ಬಣ್ಣಗಳು.

ವಿಶೇಷ ವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಕೊಳ್ಳಿರಿ.

ಕ್ರೆಪಾಗ್ ಲಿಮಿಟೆಡ್,

ಪೋ. ಬಾ. ನಂ. ೨೦೦, ಮುಂಬಯಿ.

ಅಧ್ಯಕ್ಷೀಯ ಭಾಷಣವೊಂದು

(ಮಿದುಳಿಗಷ್ಟು ಮೃಷ್ಟಾನ್ನ)

ಕಳೆದ ಮೇ ೧೭ನೆಯ ತಾರೀಖಿನ ದಿನ ಶಿರ್ಸಿಯಲ್ಲಿ ಸೇರಿದ ಉತ್ತರ ಕನ್ನಡ ಜಿಲ್ಲಾ ೧೧ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ಪ್ರೊ. ಆರ್. ವಿ. ಜಾಗಿರದಾರರು ಮಾಡಿದ ಭಾಷಣವಿದು.

★

ಸ್ವಾಗತಾಧ್ಯಕ್ಷರೆ ಮತ್ತು ಗೆಳೆಯರೆ,

ಅಧ್ಯಕ್ಷನಾದವನಿಗೆ ಔಪಚಾರಿಕ ನಡತೆ ಗೊತ್ತಿಲ್ಲದಿದ್ದರೂ ಅಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದ ಕೆಲವು ಔಪಚಾರಿಕ ಮಾತುಗಳಿವೆ. ಆದರೆ ಇಂದು ಪ್ರಾರಂಭಕ್ಕೆ ಆ ಮಾತುಗಳನ್ನೂ ಬಿಟ್ಟುಕೊಟ್ಟು ಬೇರೊಂದು ವಿಷಯವನ್ನೆ ತಮ್ಮ ಲಕ್ಷ್ಯಕ್ಕೆ ತರಬೇಕೆಂದು ಧೈರ್ಯತಾಳಿ ನಿಂತಿದ್ದೇನೆ. ವಿಷಯವು ಬೇರೊಂದೆನಿಸಿದರೂ ನನ್ನ ದೃಷ್ಟಿಯಿಂದ ಮತ್ತು ಇಂತಹ ಸಂದರ್ಭಗಳಲ್ಲಿ ಅದು ಅತ್ಯಂತ ಮಹತ್ತ್ವವಾದ್ದಾಗಿದೆ; ಅವಕಾಶ ದೊರೆತಾಗೊಮ್ಮೆ ಅದರ ಬಗ್ಗೆ ಹೇಳಬೇಕೆಂಬ ಹಟವೂ ನನಗಿದೆ. ತಾವು ಈಗ ನೆರೆಯಿಸುವ ಸಮ್ಮೇಳನದ ಹೆಸರನ್ನು ನೋಡಿದಾಕ್ಷಣ ಆ ಹಟ ನನ್ನಲ್ಲಿ ತಲೆ ಎತ್ತಿತು. ತಮ್ಮದು 'ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ' ಎಂದು ಹೇಳಿದ್ದೀರಿ. ರೂಢಿಯನ್ನು ಅನುಸರಿಸಿಯೆ ತಾವು ಹಾಗೆ ಹೆಸರಿಟ್ಟದ್ದು ಎಂಬುದನ್ನು ನಾನು ಬಲ್ಲೆ. ಕರ್ನಾಟಕದಲ್ಲಿ 'ಉತ್ತರ ಕನ್ನಡ' ಇದೆ, 'ದಕ್ಷಿಣ ಕನ್ನಡ' ಇದೆ; ಸುದೈವದಿಂದಲೊ ದುರ್ದೈವದಿಂದಲೊ 'ಪೂರ್ವ ಕನ್ನಡ'ವಾಗಲಿ 'ಪಶ್ಚಿಮ ಕನ್ನಡ'ವಾಗಲಿ ಇಲ್ಲ! ಅದಕಾಗಿಯೂ ನಾವು ಹೆಮ್ಮೆಪಡೋಣವೆ? ನಮ್ಮಲ್ಲಿ ಪೂರ್ವವಾಗಲಿ ಪಶ್ಚಿಮವಾಗಲಿ ಇಲ್ಲದ್ದಕ್ಕೆ ನಮ್ಮ ಕನ್ನಡ ಬ್ರಿಟಿಶ ಸಾಮ್ರಾಜ್ಯಕ್ಕೂ ಮೇಲು. ಬ್ರಿಟಿಶ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗುವುದಿಲ್ಲ ಎಂದಿಷ್ಟೆ ಹೆಮ್ಮೆ ಇದ್ದರೆ ನಮ್ಮಲ್ಲಿ ಮುಳುಗುವುದೂ ಇಲ್ಲ ಮೂಡುವುದೂ ಇಲ್ಲ ಎಂದು ಹೆಮ್ಮೆಪಡೋಣವೆ? ಸೂರ್ಯನು ಮೂಡುವುದಾದರೂ ಹೇಗೆ? ಬುದ್ಧಿಯ ಆಲಸ್ಯವು ಕಪ್ಪು ಮೋಡದಂತೆ ಕ್ಷಿತಿಜವನ್ನು ಆವರಿಸಿದೆ. ಕಳೆದ ಇಪ್ಪತ್ತು ವರುಷಗಳಿಂದ ಭಾರತದ ಎಲ್ಲ ಪ್ರಾಂತಗಳಲ್ಲಿ ಹೊಡೆದೆಬ್ಬಿಸುವ ಜಾಗೃತಿ ಕಂಡುಬಂದರೆ ನಮ್ಮಲ್ಲಿ ಕಡಿದುಬೀಳುವ ಜಗಳಕೃತಿಗಳೆ ಹೆಚ್ಚಾಗಿವೆ! ಪ್ರತಿಯೊಂದು ಪ್ರಾಂತದ ಜೀವನವು ಗುರಿ ಗೊತ್ತುಮಾಡಿಕೊಂಡು ಸಾಗಿದೆ; ಪ್ರತಿಯೊಂದು ಪ್ರಾಂತದ ಜೀವನಕ್ಕೆ ಗುರಿಯ ಗಾಂಡೀವಿಯಂತಹ ಮುಂದಾಳುತನ ದೊರಕಿದೆ; ಪ್ರತಿಯೊಂದು ಪ್ರಾಂತದ ಭಾಷೆಗೆ ಪ್ರೋತ್ಸಾಹ ದೊರೆತು, ಆ ಜನತೆಯ ವಿಚಾರಕ್ಕೆ ವ್ಯಕ್ತಿತ್ವ ಬಂದಿದೆ; ವಿಶ್ವವಿದ್ಯಾನಿಲಯಗಳಿಂದ ವ್ಯವಹಾರದಲ್ಲಿ ಸ್ಥಳಿಕ ಯೋಗ್ಯತೆಗೆ ಅವಕಾಶ ದೊರೆತಿದೆ! ಆದರೆ ನಮ್ಮಲ್ಲಿ? ಮೊದಲನೆಯದಾಗಿ ಪ್ರಾಂತಿಕ ಜೀವನವೆ ಇಲ್ಲ! ಒಂದು ಪ್ರಾಂತವೆಂಬ ಅಭಿಮಾನ ಸ್ವಾರ್ಥ-ಸಾಧಕರ ಸಾಕುನಾಯಿಯಾಗಿದೆ ಮಾತ್ರ. ಕರ್ನಾಟಕವು ಹಿಂದೆ ಒಂದಾಗಿತ್ತು; ಮುಂದೆ ಐತಿಹಾಸಿಕ ಕಾರಣಗಳಿಗಾಗಿಯೂ ಆಡಳಿತಗಾರರ ಅನುಕೂಲತೆಗಾಗಿಯೂ ಚಿಂದಿಚಿಂದಿಯಾಗಿ ಮುಂದಿಯ ಛಿದ್ರಗಳನ್ನು ಮುಚ್ಚಲು ಮಾತ್ರ ಯೋಗ್ಯವಾಯಿತು; ಇಂದಿಗೂ ಮತ್ತೆ ನಾವು ಮೈಸೂರು ಕನ್ನಡ— ಮುಂಬಯಿ ಕನ್ನಡ— ಉತ್ತರ ಕನ್ನಡ— ದಕ್ಷಿಣ ಕನ್ನಡ— ಹೈದರಾಬಾದ್ ಕನ್ನಡ— ಹದಿನೆಂಟು ತರದ ಕನ್ನಡ ಎಂಬ ಸಂಪ್ರದಾಯವನ್ನೆ ನಡೆಯಿಸಿಕೊಳ್ಳುತ್ತಿದ್ದೇವೆ. ಇಂತಹ ಮನೋವೃತ್ತಿಯಿಂದ ನಮ್ಮ ವಿಚಾರಸರಣಿಯ ಮೇಲೆ ಸತತವಾಗಿ ಛೇದಬುದ್ಧಿಯ ಪರಿಣಾಮವಾಗುವುದೆಂಬುದನ್ನು ಮರೆಯುತ್ತಲಿದ್ದೇವೆ. ಇನ್ನು ತಿಳಿದ ಮೇಲಾದರೂ ಇಂತಹ ಸಂಪ್ರದಾಯವನ್ನು ಬಿಟ್ಟು ಬಿಡೋಣ; ಕೇವಲ ಪ್ರಾಂತದ ದೃಷ್ಟಿಯಿಂದಲೆ ನಮ್ಮ ನಡೆ-ನುಡಿಗಳನ್ನು ಇಟ್ಟುಕೊಳ್ಳೋಣ! ನಮಗೀಗ ಪ್ರಾಂತಾಭಿಮಾನವು ಜಾಗೃತವಾಗಬೇಕಾಗಿದೆ. ಪ್ರಾಂತಾಭಿಮಾನದ ಜ್ವಾಲೆ ಇಲ್ಲದಲ್ಲಿ ದೇಶಾಭಿಮಾನವೆಂಬ ಅನ್ನ ಪಕ್ವವಾಗಲಾರದು; ಪಕ್ವವಾಗದ ದೇಶಾಭಿಮಾನವನ್ನು ತಿಂದರೆ ದಕ್ಕದು. ಜೀರ್ಣವಾಗದ ದೇಶಾಭಿಮಾನಕ್ಕಾಗಿ ಮುಲುಕಿದ್ದಬುದ್ಧಿಯ ಕೆಲ 'ದೇಶಭಕ್ತ'ರು ಪ್ರಾಂತಾಭಿಮಾನಕ್ಕಾಗಿ ನಿಮ್ಮನ್ನು ಸೆದರಿಸುವುದುಂಟು. ಪಾಕಿಸ್ತಾನ್ ಚಳವಳಿಕ್ಕೆ ಬೊಟ್ಟುಮಾಡಿ, ನಿಮ್ಮ ಪ್ರಾಂತಾಭಿಮಾನವನ್ನು ತಿರಸ್ಕರಿಸುವುದುಂಟು; ಆದರೆ ಅದಕಾಗಿ ನಾವು ಹೆದರಬೇಕಾಗಿಲ್ಲ. ಯಾಕೆಂದರೆ— ಏಕೀಕರಣಕ್ಕಾಗಿ ಬೇಕಾದ ಪ್ರಾಂತಾಭಿಮಾನಚ್ಚಾಲೆ ಬೇರೆ, ಪಾಕಿಸ್ತಾನ್ ಪದ್ಧತಿಯ ಜ್ವರ ಬೇರೆ; ನಮ್ಮ ಪ್ರಾಂತಾಭಿಮಾನದಲ್ಲಿ 'ನಾವೆಲ್ಲರೂ ಒಂದು!' ಎಂಬ ಭಾವನೆಗೆ ಪ್ರಾಶಸ್ತ್ಯವಿದೆ; ಪಾಕಿಸ್ತಾನದಲ್ಲಿ 'ನಾವಿಷ್ಟೆ ಜನ ಬೇರೆ' ಎಂಬ ಭಾವನೆಗೆ ಪ್ರಾಶಸ್ತ್ಯವಿದೆ. ಪ್ರಾಂತಾಭಿಮಾನದಲ್ಲಿ 'ನಾವು ಒಂದಾಗಿ ನಮ್ಮ ದೇಶಕ್ಕೆ ಹೆಚ್ಚು ಬಲಬರಲಿ' ಎಂಬ ವಿಚಾರವಿದೆ; ಪಾಕಿಸ್ತಾನದಲ್ಲಿ 'ನಮ್ಮ ದೇಶ ಎರಡಾಗಿ, ನಾವು ಬಲದಿಂದ ಒಂದಾಗೋಣ' ಎಂಬ ಅವಿವೇಕವಿದೆ. 'ನಮ್ಮ ಭಾಷೆ, ನಮ್ಮ ಸಂಸ್ಕೃತಿ ಮಿಕ್ಕವರೊಡನೆ ಬೆಳೆಯಲಿ' ಎಂಬುದು ಪ್ರಾಂತಾ

ಭಿಮಾನದ ಸದ್ದುದ್ದಿ; 'ವಿಳ್ಳವರಿಂದ ಬೇರೆಯಾಗಿ ನಮ್ಮ ಭಾಷೆ, ನಮ್ಮ ಸಂಸ್ಕೃತಿ ಎಂದಿನಂತೆಯೆ ಉಳಿಯಲಿ' ಎಂಬುದು ಸಾಕಿಸ್ತಾನದ ಆಜ್ಞಾನಸಮೃದ್ಧಿ. ಪ್ರಾಂತಾಭಿಮಾನದಿಂದ ಪರಸ್ಪರ ವಿಶ್ವಾಸ ಬೆಳೆಯುವುದು; ಪಾಕಿಸ್ತಾನಕ್ಕಾಗಿ ಪರಸ್ಪರ ಅವಿಶ್ವಾಸ ಬೆಳೆಯುವುದು. ಹೀಗಿರುವಾಗ ಪ್ರಾಂತಾಭಿಮಾನವನ್ನೆ ಪೆಚ್ಚಾಗಿ ಹಬ್ಬಿಸುವುದು ನಮ್ಮ ಅತ್ಯಗತ್ಯ ಕರ್ತವ್ಯವಾಗಿದೆ. ಇಂತಹ ಕಾಲದಲ್ಲಿ ಬುದ್ಧಿಗೆ ಭೇದದ ದಾರಿಯನ್ನೆ ತೋರಿಸುವ ಸಂಪ್ರದಾಯವನ್ನು, ದಿಕ್ಕೆಟ್ಟ ಕರ್ನಾಟಕಕ್ಕೆ ಇಲ್ಲದ ದಿಕ್ಕನ್ನು ತೋರಿಸುವ ಅಂಜೆಪಾತೆಯಂತಹ ವಿಳಾಸ (Address)-ಶೈಲಿಯನ್ನು ಬುದ್ಧಿಪೂರ್ವಕವಾಗಿ ಬಿಡತಕ್ಕದ್ದು ಎಂದು ನನ್ನ ಹಟದ ಬೀಡಿಕೆ. ಹಟದ ಬೀಡಿಕೆ ಎಂದೇ ಸಮ್ಮೇಳನಗಳ ರೀತಿ-ನೀತಿಗಳನ್ನು ಬದಿಗಿಟ್ಟು ಪ್ರಾರಂಭಕ್ಕೆಯೆ ಅದರ ಪ್ರಸ್ತಾಪಮಾಡಿದ್ದೇನೆ. ಸಂಪ್ರದಾಯದಲ್ಲಿ ತೋರಿಸಿದ ಈ ಶಿಸ್ತುಭಂಗಕ್ಕಾಗಿ ತಮ್ಮ ಕ್ಷಮೆಯನ್ನು ಬೇಡಿ ಅಧ್ಯಕ್ಷತೆಯ ಉಪಚಾರಕ್ಕೆ ತೊಡಗುವೆ.

ಸಾಹಿತ್ಯಸಮ್ಮೇಳನಗಳ ಅಧ್ಯಕ್ಷರಿಗೆ ಯಾವಾಗಲೂ ಒಂದು ವಿಶೇಷ ತೊಂದರೆ. ಅದೆಂದರೆ, ಅಧ್ಯಕ್ಷೀಯ ಭಾಷಣದ ವಿಷಯ. ಸಮ್ಮೇಳನಗಳ ಸ್ವರೂಪವೇನು, ಸಮ್ಮೇಳನಗಳ ಉಪಯೋಗ ಎಷ್ಟು ಮತ್ತು ಎಲ್ಲಿ—ಎಂಬುದನ್ನು ಅಧ್ಯಕ್ಷನಾದವನು ಮನದಟ್ಟಾಗಿಸಿಕೊಂಡು ಮುಂದೆ ಸಾಗಬೇಕಾಗುವುದು. ಯಾವುದೆ ಕ್ಷೇತ್ರದಲ್ಲಿ ಅವಶ್ಯವಿದ್ದ ಕೆಲಸವನ್ನು ಶಿಸ್ತಿನಿಂದ ಮತ್ತು ಸಂಘಟನೆಯಿಂದ ಕೈಕೊಳ್ಳುವುದಕ್ಕೆ ಸಮ್ಮೇಳನಗಳು ಬೇಕು. ನಾಲ್ಕು ಜನರು ಕೂಡಿ, ವಿಚಾರಮಾಡಿ, ಯೋಜನೆ ಹೂಡುವುದಕ್ಕೆ ಸಮ್ಮೇಳನಗಳು ಬೇಕು. ಆದರೆ ನಮ್ಮಲ್ಲಿ ಮಾತ್ರ ಸಮ್ಮೇಳನಗಳಿಗೂ ಕಾರ್ಯ-ಯೋಜನೆಗೂ ಅಷ್ಟೊಂದು ಸಂಬಂಧವೆ ಇದ್ದಂತೆ ತೋರುವುದಿಲ್ಲ. ಸಮ್ಮೇಳನಾಧ್ಯಕ್ಷರ ಆಯ್ಕೆಯ ವಿಧಾನವೆ ಈ ಮಾತಿಗೆ ದೃಷ್ಟಾಂತ. ಅಧ್ಯಕ್ಷನನ್ನಾರಿಸುವಾಗ ಆ ವ್ಯಕ್ತಿಯ ಕೆಲಸಗಾರಿಕೆ, ಮಾಡುತ್ತಲಿರುವ ಕೆಲಸದ ಯೋಗ್ಯತೆ, ಯೋಗ್ಯ ಕೆಲಸಕ್ಕಾಗಿ ಇನ್ನೊಬ್ಬರನ್ನು ಪ್ರೋತ್ಸಾಹಿಸುವ ಕಲೆಗಾರಿಕೆ, ಸಂಘಟನಾಶಕ್ತಿ—ಇಂತಹವುಗಳ ಕಡೆಗೆ ನಮ್ಮ ಲಕ್ಷ್ಯವಿಲ್ಲ. (ಸಾಕ್ಷಾತ್ತಾಗಿ ನನ್ನಂತಹವನನ್ನು ಚುನಾಯಿಸಿ ಇದಿರಿನಲ್ಲಿ ಎತ್ತಿರಿಸಿದ ತಪ್ಪಿಗೆ ನನ್ನ ಅಭಿವ್ಯಾಯ ತಪ್ಪಾದುದು ಎಂದು ಹೇಳಲು ಅವಕಾಶವಿಲ್ಲ, ಅಧಿಕಾರವೂ ಇರಲಾಗದು.) ಅಧ್ಯಕ್ಷನಾದವನಿಗೆ ಅಧ್ಯಕ್ಷಪದವಿಗೆ ತಕ್ಕ ಉದ್ದವಾದ ಭಾಷಣಮಾಡುವ ಯೋಗ್ಯತೆ ಇದ್ದರೆ ಸಾಕು, ಅಷ್ಟಕ್ಕೆ ನಮಗೆ ಸಮಾಧಾನ. ಭಾಷಣ ಉದ್ದವಾಗಿರಬೇಕು, ಆಳವಾಗಿರಬೇಕಾಗಿಲ್ಲ; ಆಳವಾಗಿದ್ದರೆ ಸಮ್ಮೇಳನಕ್ಕೆ ವಾಡಿಕೆಯು ಹಕ್ಕಿನ ಯಶಸ್ಸು ದೊರಕುವ ಸಂಭವ ಕಡಮೆ! ಇನ್ನು ನನ್ನಂತ ಹರಿಗೆ ಉಸಿರು ಉದ್ದವಾಗಿದ್ದರೂ ಬೇರೊಂದು ತೊಂದರೆ. ಭಾಷಣಕ್ಕೆ ವಿಷಯ ಯಾವುದು? ದಿನದ ವ್ಯವಹಾರಕ್ಕೆ ಮಹತ್ವವಾದ ವಿಷಯಗಳನ್ನಾರಿಸಿದರೆ ಗೌರವ ಕಡಮೆ ಎನಿಸುವುದು; ವ್ಯವಹಾರಕ್ಕೆ ಸಂಬಂಧಿಸಿದ ಶಾಸ್ತ್ರಗಳನ್ನಾರಿಸಿದನೆ ನಮ್ಮ ವಿಚಾರಕ್ಕಾಗಲಿ ನಿರ್ಣಯಗಳಿಗಾಗಲಿ ಅಧಿಕಾರ ಕಡಮೆ. ಹೀಗೆ ಅಸ್ಪಷ್ಟವಾಗಿ ನಮಗೆ ಭಾಷಣಸ್ವಾತಂತ್ರ್ಯವೆ ಇಲ್ಲ ಎಂದು ಸಾಧಿಸಬಹುದಾಗಿದೆ; "ಸಾಹಿತ್ಯ" ಎಂಬ ಒಂದೇ ವಿಷಯ ನಮಗೆ ಅಧಿಕಾರ-ಪ್ರಾಪ್ತ. ಆ ವಿಷಯವಾದರೊ ಸಾಂಪ್ರದಾಯಿಕವಾಗಿ ಸಹಸ್ರಾವಧಿ ಸಾಹಿತ್ಯ ಸಮ್ಮೇಳನಗಳಲ್ಲಿ ಚರ್ಚಿತವಾಗಿದೆ. ಚರ್ವಿತಚರ್ವಣಕ್ಕೆ ಬೇಸರಿಯುವ ನನ್ನ ಸ್ವಭಾವದ ಸಮಾಧಾನಕ್ಕಾಗಿ ಹೊಸ-ಮಾತುಗಳನ್ನು ಹುಡುಕಬೇಕೆಂದರೆ ಅಷ್ಟೊಂದು ಏಕೈಕದೃಷ್ಟಿಯ ಕನ್ನಡ ಪಾಂಡಿತ್ಯ ನನಗಿಲ್ಲ. ಕನ್ನಡ ಸಾಹಿತ್ಯದ ಅಭ್ಯಾಸ ಮಾಡದೆ ಕನ್ನಡ ಗ್ರಂಥಗಳನ್ನು ಬರೆವ ಎದೆಗಾರಿಕೆಯ ಲೇಖಕರಲ್ಲಿ ನಾನೊಬ್ಬ. ಸಾಹಿತ್ಯದ ಅಭ್ಯಾಸವಿರಲಿ, ಪಂಡಿತರು ಹೇಳುವ ಸಾಹಿತ್ಯವಿಷಯದ ವಿಚಾರಗಳನ್ನಾದರೂ ಅರಿತುಕೊಳ್ಳುವ ಶಕ್ತಿ ನನಗಿದೆಯೆ ಎಂಬ ಸಂದೇಹ ನನ್ನಲ್ಲಿ. ಪ್ರತಿಯೊಂದು ಮಾದರಿಯ ಸಾಹಿತ್ಯಸಭೆಯಲ್ಲಿ "ಸಾಹಿತ್ಯವೆಂದರೇನು" ಎಂಬ ಪ್ರಶ್ನೆಗೆ ಪಾಂಡಿತ್ಯ ಪ್ರಚುರವಾದ ಉತ್ತರಗಳನ್ನು ಕೇಳಿದ್ದೇನೆ. 'ಸಾಹಿತ್ಯವು ಎಷ್ಟು ಅಗಾಧವಾದುದು! ಅಗಮ್ಯವಾದುದು!' ಎಂದು ಬೀಗುಗೊಂಡಿದ್ದೇನೆ. "ಜೀವನ—ಸೌಂದರ್ಯೋಪಾಸನೆ—ಸ್ಫೂರ್ತಿ—ಆಘಾತ—ಭಾವಾವೇಶ— ನವನವೋನ್ಮೇಷಶಾಲಿನಿ" ಮುಂತಾದ ಶಬ್ದಗಳಿಗಾಗಿ ಪ್ರಜ್ಞೆ ತಪ್ಪಿಸಿಕೊಂಡಿದ್ದೇನೆ. ಯಾವುದು ಸಾಹಿತ್ಯ ಎಂದು ಮತ್ತೊಮ್ಮೆ ತಪ್ಪಿ ಕೂಡ ಕೇಳಲು ಧೈರ್ಯವಾಗುವಂತಿಲ್ಲ. ಅದಕಾಗಿ ಸಾಹಿತ್ಯವನ್ನು ಎದುರಿಸದೆ ಬೇರೊಂದು ದಾರಿಯಿಂದ ಸಾಗಿ ನನ್ನ ಕುತೂಹಲವನ್ನು (ಹೆಚ್ಚೆಚ್ಚು ತಿಳಿಯದಂತಾಗಲು ತಿಳಿದುಕೊಳ್ಳುವ ಕುತೂಹಲ ಮಾತ್ರ ಹೆಚ್ಚಾಗಿದೆ— ಆ ಕುತೂಹಲವನ್ನು) ಸಮಾಧಾನಗೊಳಿಸಲು ಯತ್ನಿಸುತ್ತೇನೆ.

'ನನ್ನ ದಾರಿ ಬೇರೆಯಾದುದು' ಎಂದ ಮಾತ್ರಕ್ಕೆ ಅಷ್ಟೊಂದು ಅಚ್ಚರಿಗೊಳ್ಳಬೇಕಾಗಿಲ್ಲ. ಇದುವರೆಗೆ ಪಂಡಿತರನೇಕರು "ಯಾವುದು ಸಾಹಿತ್ಯ?" ಎಂದು ಪ್ರಶ್ನೆಹಾಕಿದ್ದಾರೆ. ನಾನು ಮಾತ್ರ 'ಯಾವುದು ಸಾಹಿತ್ಯವಲ್ಲ?' ಎಂಬ ಪ್ರಶ್ನೆಯನ್ನು ಕೆಣಕುತ್ತಲಿದ್ದೇನೆ, ಇಷ್ಟೆ. ನನ್ನ ರೀತಿಯಲ್ಲಿ ಒಂದು ಅನುಕೂಲತೆ ಇದೆ. ಇಂತಹುದೆ ಸಾಹಿತ್ಯ ಎಂದು ಅನುಷ್ಠಾನ (formula) ವನ್ನು ಗೊತ್ತುಪಡಿಸಿದರೆ ಸಾಹಿತ್ಯಕ್ಕೆ ನಿರ್ಬಂಧಹಾಕಿದಂತಾಗುವುದು. ನೇತಿ ನೇತಿ ಎಂದು ಪರಮಾತ್ಮನನ್ನು ಬಣ್ಣಿಸುವಂತೆ ಸಾಹಿತ್ಯವನ್ನು ಬಣ್ಣಿಸಿದರೆ ಅದೊಂದು ಗೌರವ; ಅಲ್ಲವೆ? ಇದಲ್ಲದೆ ಇಂತಹುದೆ ಸಾಹಿತ್ಯ ಎಂದಾಗ ಒಂದಿಲ್ಲೊಂದು ತೊಂದರೆಯನ್ನೆಬ್ಬಿಸಬಹುದಾಗಿದೆ. ದೃಷ್ಟಾಂತಕ್ಕೆ, 'ಆನಂದವನ್ನುಂಟುಮಾಡುವುದೆ ಸಾಹಿತ್ಯ' ಎಂದರೆ ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲಿ 'ಹೋಳಿಗೆ ಹುಣ್ಣಿಮೆಯ ಪದಗಳೆ ಸಾಹಿತ್ಯ' ಎಂದು ಬಹುಮತದಿಂದ ನಿರ್ಣಯವಾಗಬಹುದು; 'ಸೌಂದರ್ಯೋಪಾಸನೆಯೆ ಸಾಹಿತ್ಯ' ಎಂದರೆ ಚಿತ್ರಕಲೆಯ ಮೂಕನಗ್ನತೆಗೆ ಮಾತು ಮೂಡಿ ಮೈ ನಡುಗಬಹುದು; 'ಸಹಜಸ್ಫೂರ್ತಿಯಿಂದ ಹೊರಹೊಮ್ಮಿದುದೆ ಸಾಹಿತ್ಯ' ಎಂದರೆ (ಸಹಜ ವಿಕಾರಾವೇಶದಿಂದ ಹೊರಹೊಮ್ಮುವ ಶಬ್ದಗಳು ಅಚ್ಚುಹಾಕಲು ಅಯೋಗ್ಯವೆನಿಸಿ) ಬಿಳಿಕಾಗದಗಳ ಗ್ರಂಥಗಳನ್ನೆ ಕಟ್ಟಬೇಕಾದೀತು; 'ಸಮಾಜದ ಪ್ರತಿಬಿಂಬವೆ ಸಾಹಿತ್ಯ' ಎಂದರೆ ವೃತ್ತಪತ್ರಿಕೆಗಳ ಚಾಹೀರಾತುಗಳೆ ಮಹಾಕಾವ್ಯವೆನಿಸಬಹುದು!

ಮೇಲಿನ ಮಾತುಗಳು ತೋರಿಕೆಯಲ್ಲಿ ಅತಿಶಯೋಕ್ತಿ ಎನಿಸಬಹುದು. ಆದರೆ ಸೂಕ್ಷ್ಮವಾಗಿ ನೋಡಿದರೆ ಅವುಗಳಲ್ಲೂ ತಾತ್ತ್ವಿಕವಾದ ಸಂದೇಶಗಳು ಅಡಕವಾದದ್ದು ಸ್ಪಷ್ಟವಾಗುವುದು. ಭಾವಾವೇಶದ ಸಹಜ ವಿಕಾಸವೆ (spontaneous outflew ofemotions) ಸಾಹಿತ್ಯ ಎಂದು ಹೇಳುವರಲ್ಲ ? ಆದೊಂದೇ ಮಾತಿನ ಸೂಕ್ಷ್ಮವಿಚಾರವನ್ನು ಮಾಡೋಣ. ಸಾಹಿತ್ಯವು ಸಹಜವಾದ ವಿಕಾಸ ಎಂಬುದನ್ನು ಒಪ್ಪಬಹುದೆ ? ಯಾವುದು ಸಹಜವಿದೆ ಸಾಹಿತ್ಯದಲ್ಲಿ ? ಮೊದಲು ಅದರಲ್ಲಿ ಕಂಡುಬರುವ ಭಾಷಾಶೈಲಿಯೆ ಸಹಜವಾಗಿರುವುದಿಲ್ಲ ! ಗ್ರಂಥಗಳಲ್ಲಿ ಕಂಡುಬರುವ ಭಾಷೆಯ ಮಾದರಿಯನ್ನು ಮಾನವನು ಸಾಮಾನ್ಯವಾಗಿ ತನ್ನ ವ್ಯವಹಾರದಲ್ಲಿ ಉಪಯೋಗಿಸುವುದಿಲ್ಲ ! ಅದರಂತೆಯೆ ಕವಿತೆಯಲ್ಲಾಗಲಿ ಸಂಭಾಷಣಾರೂಪದಲ್ಲಾಗಲಿ ಮಾನವನು **ಸಹಜವಾಗಿ** ತನ್ನ ವಿಚಾರಗಳನ್ನು ಹೊರಗೆಡಹುವುದಿಲ್ಲ. ಹೀಗಿರುವಾಗ ಸಾಹಿತ್ಯದ ಸಹಜತೆ ಎಲ್ಲಿದೆ ? ತಾತ್ಕಾಲಿಕ ಅನುಭವದ ಆವೇಶವು **ಸಹಜವಾಗಿದೆ** ಎಂದೂ ಹೇಳುವಂತಿಲ್ಲ ; ಯಾಕೆಂದರೆ, ಯಾವ ಸಾಹಿತಿಯೂ ಅನುಭವದ ತತ್ಕ್ಷಣ ತನ್ನ ಗ್ರಂಥವನ್ನು ಬರೆಯುವುದಿಲ್ಲ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಸಾಹಿತ್ಯದಲ್ಲಿ ನಾವು ತಿಳಿದಂತಹ ಸಹಜತೆ ಇಲ್ಲದಿರುವಾಗ 'ಸಹಜವಿಕಾಸವೆ ಸಾಹಿತ್ಯ' ಎಂದು ಹಟತೊಟ್ಟನೆ ಅಸಂಬದ್ಧ ಪರಿಸ್ಥಿತಿ ಉತ್ಪನ್ನವಾಗ ಬಹುದಲ್ಲವೆ ? " ನನ್ನ ದೃಷ್ಟಿಯಿಂದ ಸಹಜವಲ್ಲದಿದ್ದರೂ ಸಾಹಿತಿಯ ದೃಷ್ಟಿಯಿಂದ ಅದು ಸಹಜವೆ ಆಗಿದೆ, ಯಾಕೆಂದರೆ " ಸಾಹಿತಿ ನಮಗಿಂತ ಬೇರೆಯಾದ ವ್ಯಕ್ತಿ " ಎಂದು ಯಾರಾದರೂ ಹೇಳಬಹುದು. ಆದರೆ ಸಾಹಿತಿಯೂ ಮಾನವಪ್ರಾಣಿಯೆ ಎಂಬುದನ್ನು ಮರೆಯುವ— ಸಾಹಿತಿ ಎಂದರೆ ಸ್ವೈರವೃತ್ತಿಯ ಸರ್ವಾಧಿಕಾರಿ ಎಂದು ಅರಿಯುವ—ಈ ಮಾತಿನಿಂದ ತನ್ನ ಅಜ್ಞಾನವನ್ನು ಮುಚ್ಚಿಕೊಳ್ಳಲು ಯತ್ನಿಸಿದಂತಾಗುವುದಲ್ಲದೆ, ಹೊಸ ತತ್ತ್ವವನ್ನು ಹೇಳಿದಂತಾಗುವುದಿಲ್ಲ. ಸಾಹಿತಿಯು ಅತಿಮಾನುಷ ಎಂದು ಅವಶ್ಯವಾಗಿ ಒಪ್ಪಬೇಕಾದಲ್ಲಿ, ಅವನ ಕೃತಿ ಸಾಹಿತ್ಯವಲ್ಲ ಎಂದು ಒಪ್ಪುವುದೆ ವಿಚಾರವಂತಿಕೆ.

ಇನ್ನೊಂದು ತರದ ದೃಷ್ಟಾಂತವನ್ನು ನೋಡೋಣ. ಒಂದು ಗ್ರಂಥವಿದೆ; ಅದನ್ನು ಓದದ ಬುತ್ತು ಅನುಭವಿಸದ ಜನರೇ ಹೆಚ್ಚಾಗಿದ್ದರೂ ಬಹುಜನರಿಗೆ ಅದರ ಪರಿಚಯವಿರಲು ಸಾಕು; ಆ ಗ್ರಂಥವೆಂದರೆ ಇಂಡಿಯನ್ ಪಿನಲ್ ಕೋಡ್ (Indian Penal Coda). ಯಾವುದು ಕೆಟ್ಟ ಕೆಲಸ ಇಲ್ಲವೆ ಅನಾಚಾರ ಇಲ್ಲವೆ ಅಪರಾಧ ಎಂಬುದನ್ನು ತೋರಿಸಿ, ದಂಡನೆಯಿಂದ ಹೆದರಿಸಿ, 'ರಾಮಾದಿವತ್ ವರ್ತಿತವ್ಯಂ ನ ರಾವಣಾದಿವತ್' ಎಂಬ ಧಾಟಿಯಲ್ಲಿ ಜನರನ್ನು ತಪ್ಪದೆ ಸನ್ಮಾರ್ಗಕ್ಕೆ ಹಚ್ಚಬಹುದಾಗಿದೆ ಆ ಗ್ರಂಥ. ಮಾನವನ ಇಡಿಯ ಸಾಮಾಜಿಕ ಜೀವನವನ್ನೆ ಸುಧಾರಿಸುವಂತೆ ಉಪದೇಶಪಾಡುವ ಗ್ರಂಥವದು. ಆದರೂ ಅದು ಸಾಹಿತ್ಯವಲ್ಲ ಎಂಬ ಮಾತನ್ನು ನಾವೆಲ್ಲರೂ ಒಪ್ಪುವೆವಲ್ಲವೆ ? ಯಾಕೆ ? :—

ಅಥವಾ ಸೈಲುಕಂಪನಿಗಳ ದರ್ಶಕ (Poster) ಗಳಿವೆ ಕಾಶ್ಮೀರದ ಸೌಂದರ್ಯವನ್ನು (ರಿಯಾಯಿತಿಯಿಂದ) ನವಿದು ಬರಲು ನಮ್ಮನ್ನು ಸ್ಫೂರ್ತಿಗೊಳಿಸುತ್ತಿವೆ; ಆದರೂ ಆ ದರ್ಶಕಗಳು ಸೌಂದರ್ಯೋಪಾಸನೆಯ ಸಾಹಿತ್ಯ ಎಂದು ಯಾರೂ ಒಪ್ಪುವುದಿಲ್ಲವಲ್ಲ ! ಯಾಕೆ ? :—

ಮೇಲಿನ ದೃಷ್ಟಾಂತಗಳಲ್ಲಿಯ ವಿಷಯಗಳು ಯಾಕೆ ಸಾಹಿತ್ಯವಲ್ಲ ಎಂಬ ಪ್ರಶ್ನೆಗೆ ಒಂದೇ ಒಂದಾದ ಉತ್ತರವಿಲ್ಲ; ಸಮರ್ಪಕವಾದ ಉತ್ತರವೂ ಇಲ್ಲ ಎಂದು ನನ್ನ ಅಭಿಪ್ರಾಯ. ಪಿನಲ್ ಕೋಡಿನಿಂದ ಹೆದರಿಕೆ ಹುಟ್ಟುವುದಲ್ಲವೆ ಆನಂದವಲ್ಲ ಎಂದು ಹೇಳಬಹುದು; ಆದರೆ ಅದೇ ಪಿನಲ್ ಕೋಡಿಗಾಗಿ ಲಾಯರ (lawyer) ಜನರಿಗೂ ಮಿದುಗುಳಿಗಳಿಗೂ ಆನಂದವಿದೆಯಲ್ಲವೆ ? 'ಸೈಲು ಕಂಪನಿಗಳ ಬಣ್ಣದ ಹಲಗೆಗಳು ಸ್ವಾರ್ಥಕ್ಕಾಗಿ ಇವೆ, ಸೌಂದರ್ಯೋಪಾಸನೆಗಾಗಿ ಅಲ್ಲ' ಎನ್ನಬಹುದು; ಆದರೆ ಸ್ವಾರ್ಥದಿಂದ ಪರಾರ್ಥ ಸಾಧಿಸುತ್ತಿದ್ದರೆ ಆ ಸ್ವಾರ್ಥಕ್ಕೇನು ಕುಂದು ? ಈ ಸಂದರ್ಭದಲ್ಲಿ ನನ್ನ ಮಾತನ್ನು ಒಪ್ಪದವರು ಒಂದು ವಿಚಾರವನ್ನು ಮುಂದುಮಾಡಬಹುದಾಗಿದೆ. 'ಸಾಹಿತ್ಯದಲ್ಲಿ ಸಾಹಿತಿಗೂ ವಾಚಕರಿಗೂ ಸಹೃದಯತೆ ಬೇಕು; ಅದಿಲ್ಲದಲ್ಲಿ ಸಾಹಿತ್ಯವಿಲ್ಲ; ಸಹೃದಯತೆ ಎಂದರೆ ಮುಂದಿಟ್ಟ ಅನುಭವದಲ್ಲಿ ತನ್ಮಯನಾಗಿ ಆನಂದವನ್ನು ಆಸ್ವಾದಿಸುವುದು; ಅಂತಹ ಪರಿಸ್ಥಿತಿ— ನಾನು ಕೊಟ್ಟ ದೃಷ್ಟಾಂತಗಳಲ್ಲಿ ಇಲ್ಲ' ಎಂದು. ಒಟ್ಟಾರೆ ಸಾಹಿತಿಗೆ ಒಂದು ಅಸಾಧಾರಣ ಹೃದಯಸಂಸ್ಕಾರವಿರಬೇಕೆಂದೂ, ಆ ಸಾಹಿತ್ಯವನ್ನು ಸವಿಯಬೇಕಾದರೆ ವಾಚಕರಿಗೂ ವಿಮರ್ಶಕರಿಗೂ ಅಂತಹವೆ ಹೃದಯ ಸಂಸ್ಕಾರವಿರಬೇಕೆಂದೂ ಈ ಸಾಹಿತ್ಯಶಾಸ್ತ್ರಜ್ಞರು ಹೇಳಬಹುದು.

ಈ ಮಾತನ್ನು ಒಂದು ನಿಮಿಷ ನಾನು ಒಪ್ಪುವೆ, ಸಂತೋಷದಿಂದಲೆ ಒಪ್ಪುವೆ; ಯಾಕೆಂದರೆ ಈ ಮಾತಿನಿಂದ ಮೇಲೆ ಕಾಣಿಸಿದ ನನ್ನದೇ ಒಂದು ವಿಚಾರಕ್ಕೆ ಪುಷ್ಟಿ ದೊರಕುವುದು; 'ವಿಶಿಷ್ಟ ಹೃದಯಸಂಸ್ಕಾರದಿಂದಲೆ ಸಾಹಿತ್ಯದ ಉಗಮವಾಗುವುದು' ಎಂದರೆ 'ಸಾಹಿತ್ಯವು ಸಹಜವಾದುದಲ್ಲ' ಎಂಬ ನನ್ನ ಮಾತನ್ನೆ ಒಪ್ಪಿದಂತಾಗುವುದು. 'ಸಾಹಿತ್ಯಕ್ಕೆ ತಪಸ್ಸು ಬೇಕು, ಸಾಹಿತ್ಯಜ್ಞೆಕ್ಕೆ ಸಾಧನೆ ಬೇಕು, ಉಪಾಸನೆ ಬೇಕು' ಎಂದು ಅಲಂಕಾರದಿಂದ ಹೇಳುವಾಗ 'ಸಾಹಿತ್ಯವು ಸಾಹಿತಿಗೆ ಕೂಡ ಸಹಜವಾದುದಲ್ಲ. ಪ್ರಯತ್ನಮಾತ್ರಸಾಧ್ಯವಾದುದು' ಎಂದೇ ಹೇಳಿದಂತಾಗುವುದಿಲ್ಲವೆ ?

'ಸಾಹಿತ್ಯವು ಪ್ರಯತ್ನಸಾಧ್ಯ—ಎಂದು ಗೊತ್ತಾದ ಮೇಲೆ ಈ ಪ್ರಯತ್ನಕ್ಕೆ ಕಾರಣವೇನು, ಪ್ರೇರಣೆ ಯಾವುದು ?' ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುವುದು. ತಾನು ಬರೆದುದನ್ನು ಅನ್ಯರು ನೋಡಬೇಕು, ಕೇಳಬೇಕು ಎಂಬ ಆಕಾಂಕ್ಷೆ ಮೊದಲು ಸಾಹಿತಿಯಲ್ಲಿ ಇರಬೇಕಾದುದು, ನಿರ್ವಿವಾದವಾಗಿ ನಿರರ್ಗಳವಾಗಿ ಇರಬೇಕಾದುದು. ಗ್ರಂಥಪ್ರಕಟನೆಯ ಇಂದಿನ ಕಾಲದಲ್ಲಂತೂ ಈ ಮಾತನ್ನು ಯಾರೂ ಅಲ್ಲಗಳೆಯಲಾರರು, ಅನ್ಯರು ಕೇಳಲೀ

ಬೇಕೆಂಬ ಹಟಕ್ಕಾಗಿ, ಸಾಹಿತಿಯು ಅವರಲ್ಲಿ ಅಂತಹ ಆಸಕ್ತಿ— ಉತ್ಸುಕತೆ— ಕುತೂಹಲಗಳನ್ನು ಹುಟ್ಟಿಸುವ ಶೈಲಿಯಲ್ಲಾಗಲಿ ವಿಷಯವನ್ನಾಗಲಿ ಹೇಳುವನು. ಆಲಂಕಾರಿಕ ಶೈಲಿಯು ಇಲ್ಲವೆ ನವೋನವವಾದ ವಿಷಯದ ಪರಿಶ್ರಮವನ್ನು ಸಾಹಿತಿ ತೆಗೆದುಕೊಳ್ಳುವನಲ್ಲ, ಅದಕ್ಕೆ ಪ್ರೇರಣೆ ಯಾವುದು? ಅನುಭವದ ಆವೇಗವೆ ಕಾರಣ ಎಂದು ಹೇಳುವ ವಾಡಿಕೆಯೇನೊ ಇದೆ. ಆದರೆ ಇಡಿಯ ಪ್ರಪಂಚದ ಇತಿಹಾಸವನ್ನು ಮಹಾಕಾವ್ಯವಾಗಿ ಬರೆಯುವ ಕವಿಗೆ ಅನುಭವದ ಆವೇಗವಿದೆ, ಒಂದು ಪ್ರಸಂಗದಿಂದ ಸ್ಫೂರ್ತಿ ಬಂದಿದೆ, ಯಾವುದೊ ಸಂನಿವೇಶದ ಆಘಾತವಾಗಿದೆ, ವ್ಯಾಕರಣ-ಅಲಂಕಾರ-ಲಕ್ಷಣ-ವೃತ್ತಗಳ ಪಾಂಡಿತ್ಯಪ್ರದರ್ಶನ ಜೊತೆಯಲ್ಲಿ ಸಹಜವಾದ ಸ್ಫೂರ್ತಿ ಇದೆ ಎಂದರೆ ನಂಬುವುದು ಕಷ್ಟ; ಒಂದೇ ಒಂದು ದಿನದ ಊಟದಲ್ಲಿ ತೂಕ ತಪ್ಪಿದರೆ ಅನಾರೋಗ್ಯ ಬರುವುದೆಂಬಂತೆ ನಂಬಲು ಕಷ್ಟ. ಅನೇಕ ದಿವಸಗಳಿಂದ ದೇಹದೊಳಗೆ ಸಂಚಯಿಸುತ್ತಿರುವ "ಅತಿ-ಯಿತಿ"ಗಳೆ ಅನಾರೋಗ್ಯಕ್ಕೆ ಕಾರಣವೆಂಬಂತೆ, ಅನೇಕ ಅನುಭವಗಳ ಸಂಚಯವೆ ಸಾಹಿತ್ಯಕ್ಕೆ ಕಾರಣ ಎಂದು ಹೇಳಬಹುದು. ಒಂದು ದಿನದ ಅವ್ಯವಸ್ಥೆ ಅನಾರೋಗ್ಯಕ್ಕೆ ತಾತ್ಕಾಲಿಕ (Immediate) ಪ್ರೇರಣೆಯಾಗುವಂತೆ ಸಾಹಿತಿಗೂ ಒಂದು ತಾತ್ಕಾಲಿಕ ಪ್ರೇರಣೆ ಇದೆ, ಹೃದಯದ ಪ್ರೇರಣೆ ಇದೆ. ಆ ಪ್ರೇರಣೆ ಯಾವುದು? 'ಸರ್ವಸಾಮಾನ್ಯವಾದ ಅಸಂಕಾರವನ್ನು ಬಿಟ್ಟರೆ **ತನ್ನ ಅನುಭವಗಳ ಪ್ರಚಾರಮಾಡುವ ಬುದ್ಧಿಯೆ ಸಾಹಿತಿಗೆ ಪ್ರೇರಕ**ವಾಗುವುದು' ಎಂದು ಹೇಳಬಹುದು. "ಪ್ರಚಾರ" ಎಂಬ ಶಬ್ದಕ್ಕಾಗಿ ಯಾರೂ ಮೂಗು ಮುರಿಯಬೇಕಾಗಿಲ್ಲ; ಯಾಕೆಂದರೆ ನಾವು ಸಾಮಾನ್ಯ ವ್ಯವಹಾರದಲ್ಲಿ ಕಾಣುವ ಪ್ರಚಾರಕ್ಕೂ ಸಾಹಿತಿಯ ಪ್ರಚಾರಕ್ಕೂ ವ್ಯತ್ಯಾಸವಿದೆ. ಇಲ್ಲಿ—ಎಂದರೆ **ಸಾಹಿತ್ಯದಲ್ಲಿ—ಪ್ರಚಾರನ** ಗುರಿ ಎನಿಸುವುದು, **ಪ್ರಚಾರಕ್ಕೆ ಅದರ ಹೊರತಾಗಿ ಬೇರೊಂದು ಗುರಿ ಇಲ್ಲ.** ಎಲ್ಲೆಲ್ಲಿ ಪ್ರಚಾರಕ್ಕೆ ಪ್ರಚಾರದಿಂದ ಬೇರೆಯಾಸ ಗುರಿ ಇದೆಯೊ ಅಲ್ಲಿ ಸಾಹಿತ್ಯವೆ ಇಲ್ಲ ಎಂದು ಹೇಳಬಹುದು.

"ಕಲೆಗಾಗಿ ಕಲೆ, ಕಲೆಗೆ ಬೇರೊಂದು ಗುರಿಯಿಲ್ಲ" ಎಂಬ ಮಾತನ್ನೆ ಸುತ್ತುಸುತ್ತಾಗಿ ನಾನು ಹೇಳುತ್ತಲಿದ್ದೇನೆ ಎಂದು ಯಾರೂ ಭಾವಿಸಬಾರದು. ಕಲೆಗಾಗಿ ಕಲೆ ಎಂಬ ವಿಚಾರಕ್ಕೂ ಕಲೆಗೆ ಅನುಭವಪ್ರಚಾರವೆ ಗುರಿ ಎಂಬುದಕ್ಕೂ ಒರಿಯು ಭೇದ ಮಾತ್ರವಲ್ಲ, ವಿರೋಧವಿದೆ. 'ಕಲೆಗಾಗಿ ಕಲೆ' ಎನುವಾಗ ಸಾಹಿತಿಯನ್ನು ಕೇವಲ ವೈಯಕ್ತಿಕವಾಗಿ ನಾವು ನೋಡುತ್ತೇವೆ ("ನನ್ನ ಕೃತಿ ಇದು, ಇದನ್ನು ಕೇವಲ ನಾನು ಹೇಳಿದಂತೆಯೆ ನೋಡಬೇಕು" ಎಂಬ ಧೋರಣವಿರುವುದಿಲ್ಲ) ಅನುಭವದ ಪ್ರಚಾರವೆ ಗುರಿ ಎನುವಾಗ ಸಾಹಿತಿಯನ್ನು ಸಾಮಾಜಿಕ ಸಂಬಂಧದಲ್ಲಿರಿಸಿ ನೋಡುತ್ತೇವೆ. ("ನಿಮ್ಮೊಡನೆ ಬಾಳುತ್ತಿರುವಾಗ ನಮ್ಮ ನಿಮ್ಮ ಸಂಬಂಧದಲ್ಲಿ ಬಂದ ಅನುಭವವಿದು. ಕೇಳುವಿರಾ? ಕೇಳತಕ್ಕಂತಹವಿದೆ" ಎಂಬ ಧೋರಣವಿಲ್ಲಿ.) ಇವೆರಡೂ ವಿಚಾರಗಳಲ್ಲಿ ಒಂದು—ಕಲೆಗಾಗಿ ಕಲೆ ಎಂಬುದು—ಪೂರ್ತಿಯಾಗಿ ಅಸಮಂಜಸವಾದುದು ಎಂದು ನನ್ನ ಅಭಿಪ್ರಾಯ. ಕಲೆಗಾಗಿ ಕಲೆ ಎನ್ನುವವರು ಮಾನವಪ್ರಪಂಚದ ವೈಶಿಷ್ಟ್ಯವನ್ನೆ ಮರೆತಿದ್ದಾರೆಂದು ಹೇಳಬಹುದು. ಸಮಾಜದಲ್ಲಿ—ಸಮಾಜದ ಘಟಕನಾಗಿ—ಸಾಮಾಜಿಕ ಜೀವನಕ್ಕೆ ಪೋಷಕನಾಗಬೇಕಾಗಿ ಮಾನವನು ಹುಟ್ಟುತ್ತಾನೆ, ಈ ದೃಷ್ಟಿಯಿಂದ ಮಿಕ್ಕ ಎಲ್ಲ ಪ್ರಾಣಿಜಾತಿಗಳಿಂದ ಅವನ ಎಂಗಡವಿದೆ. ಸಾಮಾಜಿಕಜೀವನದಲ್ಲಿ ಮಾನವನು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸಂಭವವು ಹೆಚ್ಚು; ಆದರೆ ಅದು ಹಾಗಾಗಬಾರದೆಂದು ತೋರಿಸಲು, ವ್ಯಕ್ತಿಸ್ವಾತಂತ್ರ್ಯದಿಂದ ಸಮಾಜಕ್ಕೆ ಹಿತವೆ ಇದೆ ಎಂಬುದನ್ನು ನಿದರ್ಶನಕ್ಕೆ ತರಲು, ಸ್ವಾತಂತ್ರ್ಯವನ್ನು ಸಂರಕ್ಷಿಸಲು ಸಾಹಿತಿಯು ವೀರವೃತ್ತಿಯಿಂದ **ತನ್ನವೆ ಆದ ಅನುಭವಗಳ** ಪ್ರಚಾರಕ್ಕೆ ಪ್ರೇರಿತನಾಗುವನು; ಸಮಾಜದಿಂದ ಸಂಘಟನೆ-ಸಂರಕ್ಷಣೆಗಳಿವೆ ಎಂಬುದನ್ನು ತಿಳಿದು, ವಿಚಾರವಂತನಾದ ಸಾಹಿತಿ ಅದೇ ವೇಳೆಗೆ ಸಮಾಜಕ್ಕೂ ಪೋಷಕನಾಗಿ ಉಳಿಯುವನು. ಸಮಾಜಕ್ಕೂ ವ್ಯಕ್ತಿಗೂ ಇರುವ ಅಪರಿಹಾರ್ಯ ಮತ್ತು ಪರಸ್ಪರ ಪೋಷಕ ಸಂಬಂಧಕ್ಕಾಗಿ "ಕಲೆಗಾಗಿ ಕಲೆ, ನನಗಾಗಿ ನಾನು, ನಾನೇ ನಾನು" ಎಂಬ ಧೋರಣೆ ಆತ್ಮಹತ್ಯಾಧೋರಣೆಯದೆ ಒಂದು ಸ್ವರೂಪ ಎಂದು ಹೇಳಬಹುದು; ಆತ್ಮಹತ್ಯೆ ಅಪರಾಧವೆನಿಸುವಂತೆ (ಅದೇ ತರ್ಕಸರಣಿಯನ್ನನುಸರಿಸಿ) ಕಲೆಗಾಗಿ ಕಲೆ ಎಂಬುದೂ ಅಪರಾಧವೆನಿಸಬಹುದಾಗಿದೆ. ಒಂದು ವೇಳೆ ಕಲೆಗಾಗಿ ಕಲೆ ಎನ್ನುವವರು ತಮ್ಮ ಗ್ರಂಥವನ್ನು ಪ್ರಕಟಿಸುವುದೆ ಇಲ್ಲವೆಂದರೆ ಹಟವನ್ನು ಸಾಧಿಸುವಂತಾಗುವುದಲ್ಲದೆ, ತತ್ತ್ವವನ್ನು ಸಿದ್ಧಮಾಡಿದಂತಾಗುವುದಿಲ್ಲ. ಯಾಕೆಂದರೆ ಕಲೆಗಾಗಿ ಕಲೆ ಎಂಬುದು ತತ್ತ್ವದ ಆಭಾಸವಿದೆ, ಸತ್ಯಕ್ಕೆ ಮೋಸವಾಗಿದೆ. ಅದಕಾಗಿ ಸಾಹಿತಿಯಾಗಲಿ ಅವನ ಅನುಭವವಾಗಲಿ ಸಮಾಜದಿಂದ ಬೇರೆಯಾಗಿದ್ದರೆ, ಸಮಾಜಕ್ಕೆ ಅಸಂಬದ್ಧವಾಗಿದ್ದರೆ, ಸಾಮಾಜಿಕತೆ ಇಲ್ಲದೆ ಹೋದರೆ ಆ ಕೃತಿ ಸಾಹಿತ್ಯವಲ್ಲ ಎಂದು ಧೈರ್ಯವಾಗಿ ಕೇಳಬಹುದು.

ಇಂದಿನ ನಮ್ಮ ಜೀವನವನ್ನು ನೋಡಿದರೆ ಅದರಲ್ಲಿ ಸಾಮಾಜಿಕತೆಗೆ ಸ್ಥಾನವೆ ಇಲ್ಲ ಎಂದು ಕಂಡುಬರುವುದು. ಒಬ್ಬನು ಇನ್ನೊಬ್ಬನೊಡನೆ ಸಮಾನ ಆಶೆ-ಆಕಾಂಕ್ಷೆಗಳಿಂದ ಬೆರೆತುಕೊಳ್ಳುವ ಪೈರವು ಸಂಸ್ಕಾರವೆ ನಮ್ಮಲ್ಲಿ ಕಡಮೆಯಾಗಿದೆ. ಬಂದಾನೊಂದು ಕಾಲಕ್ಕೆ ದೇಶದಲ್ಲಿ ನವಚೈತನ್ಯ ಬೆಳಗುವುದರಲ್ಲಿದ್ದಿತು. ದೇಶಾಭಿಮಾನದ ಬೆಳಕಿನಲ್ಲಿ ಭಾರತೀಯರು ಪರಸ್ಪರರನ್ನು—ಎಲ್ಲರನ್ನು—ನೋಡಿ, ಕೂಡಿ, ಸಮಾನ ಆಶೆ ಆಕಾಂಕ್ಷೆಗಳ ಸಂಘಟನೆಯಿಂದ ಮುಂದೆ ಸಾಗಬಹುದೆಂದು ತೋರುತ್ತಿದ್ದಿತು. ಆದರೆ ಇಂದಿನ ಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇಳುವುದಾದರೆ, ಆ ತೋರಿಕೆ ಬಿಸಿಲ್ಗುದುರೆಯಾಯಿತು. ನಮ್ಮ ದೇಶಾಭಿಮಾನವು ಒಳಗಿನಿಂದ ಚಿಗುರಿದುದಲ್ಲ, ಹೊರಗಿನಿಂದ ಮುಸುಕಿದುದು. ನಮ್ಮ ಮೂವತ್ಮೂರು ಕೋಟಿ ದೇವತೆಗಳಿಗೆ "ದೇಶ" ಎಂಬ ಮೂವತ್ಮೂರು ಕೋಟಿ ಒಂದನೆಯ ದೇವತೆಯನ್ನು

ಜೋಡಿಸಿದೆವಿಷ್ಟೆ! ಮುಂಚಿನ ದೇವತೆಗಳೇ ಇನ್ನೂ ತಮ್ಮ ಅಧಿಕಾರವನ್ನು ನಡೆಯಿಸುತ್ತಲಿವೆ, ಮುಂಚಿನವೆಂಬ ಹಿರಿತನದಿಂದ ಹೊಸ ದೇವತೆಯಾದ ದೇಶಕ್ಕೂ ವಿಗಿಲೆನಿಸಿ ಬೆರೆಯುತ್ತಲಿವೆ. ಇಷ್ಟೇಕೆ? "ದೇಶ" ದೇವತೆಯನ್ನು ತಮಗೆ ಅನುಕೂಲವೆನಿಸುವಂತೆ ಮಾರ್ಪಡಿಸಿಕೊಳ್ಳುತ್ತಲಿವೆ. "ದೇಶ" ಎಂದರೆ ಇಂದಿನ ದೇಶವಲ್ಲ, ಹಿಂದಿನ ದೇವತೆಗಳ ದೇಶ ಎಂದು ಅರ್ಥವಾಗುತ್ತಲಿದೆ. ಅದಕಾಗಿಯೆ ದೇಶಾಭಿಮಾನವೆಂಬುದು ಹಿಂದು—ಮುಸ್ಲಿಂ—ಸ್ಪೃಶ್ಯ—ಅಸ್ಪೃಶ್ಯ—ಬ್ರಾಹ್ಮಣ—ವೀರಶೈವ ಮುಂತಾಗಿ ಮತಾಭಿಮಾನಕ್ಕೆ ಸಮಾನಾರ್ಥವಾಗಿ, ಸಹಾಯಕವಾಗಿ ಬಡಲಾಯಿಸಿದೆ. ದಾಸ್ಯ-ದಾರಿದ್ರ್ಯ—ಮಲೇರಿಯಾ—ಮೈಗೂಲಿ ಮುಂತಾದುವುಗಳಿಗಾಗಿ ನಮ್ಮದು ಸಮಾನತಂತ್ರತೆ (Common allegiance) ಯಾಗಿದ್ದರೂ, ದೇಶಾಭಿಮಾನದಲ್ಲಿ ಭಿನ್ನ ವ್ಯವಹಾರವಿದೆ. ದೇಶಾಭಿಮಾನದಿಂದ ನಮ್ಮ ಹೃದಯ ವಿಶಾಲವಾಗಲಿಲ್ಲ; ದೇಶದ ಕಲ್ಪನೆಯನ್ನೆ ಸಂಕುಚಿತಗೊಳಿಸಿ ಅದರೊಡನೆ ಹೃದಯವನ್ನೂ ಸಣ್ಣದಾಗಿಸುತ್ತಲಿದ್ದೇವೆ! ಒಬ್ಬನು ಇನ್ನೊಬ್ಬನೊಡನೆ ಬೆರೆತುಕೊಳ್ಳಬೇಕೆಂಬ ವಿಚಾರಕ್ಕೆ ಬದಲಾಗಿ ಒಬ್ಬನು—ಪ್ರತಿಯೊಬ್ಬನು— ತನ್ನವರೊಡನೆಯೆ ಬೆರೆತುಕೊಳ್ಳಬೇಕೆಂಬ ವಿಚಾರ ನಮ್ಮದಾಗಿದೆ! ಇದಕಾಗಿಯೆ ನಾನು ಹೇಳಿದ್ದು ನಮ್ಮ ಜೀವನದಲ್ಲಿ ಸಾಮಾಜಿಕತೆ ಇಲ್ಲವೆಂದು.

ಸಾಮಾಜಿಕತೆ ಇಲ್ಲದ್ದಕ್ಕಾಗಿ ಅಲ್ಲಿಯ ಸಾಹಿತ್ಯವೆ ನಮ್ಮಲ್ಲಿ ಹೆಚ್ಚಾಗಿದೆ. ನಮ್ಮ ವ್ಯವಹಾರವೆ ವೈಯಕ್ತಿಕತೆಯ ತಳಹದಿಯ ಮೇಲೆ ನಿಂತಂತೆ, ಸಾಹಿತ್ಯವೂ ಸಾಮಾಜಿಕತೆಯನ್ನು ಬಿಟ್ಟಿದೆ; ಸಮಾಜದ ಹೊರಗುಳಿದು ಆಶ್ರಮವನ್ನು ಕಟ್ಟಿದೆ. ಸಾಹಿತಿ ಆಶ್ರಮದ ಋಷಿಯಾಗಿದ್ದಾನೆ; ಅದಕಾಗಿ ಋಷಿಯಂತೆ ಸಾಹಿತಿ ಸಾವಿರಾರು ವರುಷಗಳ ಮುಂಚೆಯೆ ಕಣ್ಣುಮುಚ್ಚಿದ್ದಾನೆ, ಸಾವಿರಾರು ವರುಷಗಳ ತರುವಾಯ ಕಣ್ದೆರೆಯುವನೆನಿದ್ದಾನೆ; ಇಂದಿನದೆಲ್ಲ ಮಾತ್ರ ಕತ್ತಲೆಯಾಗಿದೆ, ಕನಸಾಗಿದೆ ಅವನಿಗೆ.

ನಾನು ಹೇಳುವ ರೀತಿ ಬೇರೆಯಾಗಿರಬಹುದು, ಆದರೆ ಕಾಣಿಸಿದ ಸ್ಥಿತಿ ಮಾತ್ರ ಅತಿಶಯೋಕ್ತಿಯಲ್ಲ ಎಂದು ನನ್ನ ಭಾವನೆ. ಇಂದಿನ ಕನ್ನಡ ಸಾಹಿತ್ಯವನ್ನು ನೋಡಿದರೆ ಸಾಮಾಜಿಕತೆಗೆ, ಸಮಾಜಜೀವನಕ್ಕೆ, ಇಂದಿನ ಜೀವನಕ್ಕೆ ಪೋಷಕವೆನಿಸುವಂತಹ ಗ್ರಂಥನಿರ್ಮಾಣ ಎಷ್ಟಿದೆ? ಆಥವಾ ಹುಡುಕುವ ಪರಿಶ್ರಮವೆ ಹೆಚ್ಚಾಗಬಹುದೆಂದು "ಇಲ್ಲವೆ ಇಲ್ಲ" ಎಂದು ಹೇಳಬಹುದೆ? ಜನತೆಯಲ್ಲಿ ಜಾಗೃತಿ, ಜೀವನ ಧೋರಣದಲ್ಲಿ ಪ್ರಗತಿ, ಮಾನವ ಸ್ವಾತಂತ್ರ್ಯಕ್ಕಾಗಿ ಹೋರಾಟ— ಇವೆಲ್ಲ "ಸ್ಫೂರ್ತಿ"ಗೆ ಕಾರಣವೆಂದು ಹೇಳುವ ರೂಢಿಯುಂಟು. ಕಾರಣವಿದ್ದರೂ ಇದಕ್ಕೆ ತಕ್ಕುದಾದ ಕಾರ್ಯ ನನ್ನು ಸಾಹಿತ್ಯದಲ್ಲಿ ಕಾಣುವುದಿಲ್ಲ. ಹೊರಗೆ ಇದ್ದದ್ದಕ್ಕೆ ಕಣ್ಣುಮುಚ್ಚಿ, ಹೊಟ್ಟೆಗಿಲ್ಲದ್ದಕ್ಕೆ ಹಗಲುಗನಸುಗಳನ್ನೆ ಕಾಣುತ್ತಿದ್ದೇವೆ ನಾವು!.. ಯಾಕೆ?

ಗೆಳೆಯರೆ, ಯಾಕೆ-ಯಾಕೆ ಎಂದು ಅನೇಕ ಪ್ರಶ್ನೆಗಳನ್ನು ನಾನು ಕೇಳುತ್ತಲಿದ್ದೇನೆ. ಈ ಪ್ರಶ್ನೆಗಳಿಗೆ ಉತ್ತರಕೊಡುವುದು ಒಂದು ವ್ಯಕ್ತಿಗೆ ಸಾಧ್ಯವಲ್ಲ. ಬೇರೆ ಬೇರೆ ಸಾಹಿತ್ಯಗಳನ್ನು ಓದಿದವರು, ಬೇರೆ ಬೇರೆ ಸ್ಥಳಗಳಿಂದ ಬಂದವರು, ಜಾತಿ—ಧರ್ಮ—ದೇವರುಗಳ ನಿಮಿತ್ತವಾಗಿ ಬೇರೆಯಾಗಿದ್ದವರು— ಆದರೂ "ಕನ್ನಡ" ಎಂಬ ವಿಚಾರದಿಂದ ಒಂದಾದವರು—ತಾವೆಲ್ಲರೂ ಇಲ್ಲಿ ಸೇರಿದ್ದೀರಿ. ಸಾಮಾಜಿಕ ದೃಷ್ಟಿಯಿಂದ ಇಂತಹ ಪ್ರಶ್ನೆಗಳನ್ನು ವಿಚಾರಿಸಿ ನಿರ್ಣಯಿಸುವುದು ತಮ್ಮ ಅಧಿಕಾರ, ತಮ್ಮ ಕರ್ತವ್ಯ; ಅಧ್ಯಕ್ಷನಾದುದಕ್ಕೆ ಕೇವಲ ಪ್ರಶ್ನೆಗಳನ್ನು ತಮ್ಮೆದುರಿನಲ್ಲಿ ಇರಿಸುವುದಕ್ಕೆ ನನಗೆ ಅಧಿಕಾರ, ನನ್ನ ಯೋಗ್ಯತೆ. ಯಾವ ಸ್ನೇಹ-ವಿಶ್ವಾಸಗಳಿಂದ ನನ್ನನ್ನು ಅಧ್ಯಕ್ಷನನ್ನಾಗಿರಿಸಿರುವಿರೊ ಅವೇ ಸ್ನೇಹ-ವಿಶ್ವಾಸಗಳಿಂದ ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಬೇಡುವೆ. ಉತ್ತರ ದೊರೆತಾಗ ನಾನು ತಮಗೆ ನಿಜವಾಗಿಯೂ ಋಣಿ. ಉತ್ತರವಿಲ್ಲದಿದ್ದರೆ ಆ ಮಾತು ಬಿಸು ದಾಕ್ಷಿಣ್ಯವೆನಿಸುವುದು.

ತಮ್ಮ ವಿಶ್ವಾಸಕ್ಕೆ ನಾನು ತಕ್ಕವನೆನಿಸಲಿ, ತಮ್ಮ ವಿವೇಕವು ಜೀವನವನ್ನು ತಣಿಸಲಿ.

ಆಸಕ್ತಿಗೆ ಅನುಕೂಲತೆ ಒಂದು ತಿಂಗಳು ಮುಂದೆ ಬಿದ್ದಿದೆ
ಅಚ್ಚಿನಲ್ಲಿದೆ! ● ತಯಾರಾಗುತ್ತಲಿದೆ!!

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಕ್ರೌನ್ ಅಷ್ಟಪತ್ರದ ಸುಮಾರು ೩೫೦-೪೦೦ ಪುಟ

ಬರೆದವರು: ಶ್ರೀರಂಗ

ವಿ. ಸೂ.—

ಅನಿವಾರ್ಯ ಕಾರಣಗಳಿಗಾಗಿ ಪುಸ್ತಕದ ಪ್ರಕಟನೆಯನ್ನು ಆಗಸ್ಟದ ವರೆಗೆ ಮುಂದೆ ಹಾಕಲಾಗಿದೆ. ಸವಲತ್ತಿನ ಅವಧಿಯನ್ನು ಮುಂದೆ ಹಾಕಿದೆ.

ಜುಲೈ ೧೫ ರ ಒಳಗಾಗಿ ಗ್ರಂಥಕರ್ತರಿಗೆ
[ಪ್ರೊ. ಆರ್. ವಿ. ಜಾಗೀರದಾರ, ಎಂ. ಎ. (ಲಂಡನ್)
ಕರ್ನಾಟಕ ಕಾಲೇಜ ಧಾರವಾಡ.]

೧೫—೦—೦ ಮುಂಗಡ ಕಳುಹಿಸುವವರಿಗೆ

ಸಾದಾ ಪ್ರತಿ ೨-೮-೦ (ಅಂಚೆ ವೆಚ್ಚ ಸೇರಿ)
ಕ್ಯಾಲಿಕೋ ಪ್ರತಿ ೩-೦-೦ (ಅಂಚೆ ವೆಚ್ಚ ಸೇರಿ)

ಮಳೆಗಾಲದ ಬಗ್ಗೆ ಮುಂಜಾಗ್ರತರಾಗಿರಬೇಕೆನ್ನುವವರು ಮಕ್ಕಳ ಆರೋಗ್ಯದ ವಿಚಾರವನ್ನು ಮರೆಯಬೇಡಿರಿ!

★ ಚಳಿ ★

ನೆಗಡಿ

ಕೆಮ್ಮು

★ ಅಪಚನ

ಮೊದಲಾದುವುಗಳನ್ನು ತಪ್ಪಿಸಲಿಕ್ಕೆ

"ಕುಮಾರೀ ಆಸವ ನಂ. ೩"

ಇದನ್ನು ಉಪಯೋಗಿಸಿರಿ! ಯಾವ ತೊಂದರೆಯೂ ಇಲ್ಲದಂತೆ ಮಕ್ಕಳ ಆರೋಗ್ಯಸೌಖ್ಯಪಡೆಯಿರಿ!

ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್.

ಹುಬ್ಬಳ್ಳಿ: ಯುನೈಟೆಡ್ ಏಜನ್ಸೀಜ್ ಧಾರವಾಡ: ಎನ್. ಜಿ. ಟಿಕಾರೆ ಗದಗ: ಖರೇ ಮತ್ತು ಕಂಪನಿ.

ಎಚ್ಚರಿಕೆ

★

ಹರೆಯದಲ್ಲಿ ಮುಪ್ಪಿನ ಚಿಂತೆಯೆ ನಿಮಗೆ?
ಚಿಂತೆಯಿಂದ ಇರುವ ಸ್ವಲ್ಪ ಪೌರುಷವೂ
ಹಾಳಾಗುವದು— ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ. ಎಲ್ಲ ಧಾತು ನಷ್ಟಗಳನ್ನು ಸರಿಪಡಿಸುತ್ತದೆ. ಸ್ವಪ್ನೇಂದ್ರಿಯ, ನಪುಂಸಕತೆ, ಅಗ್ನಿ ಮಾಂದ್ಯ, ಮಲಬದ್ಧತೆ, ದುರ್ಬಲತೆ,— ಮುಂತಾದ ದುಷ್ಪರಿಣಾಮಗಳನ್ನೆಲ್ಲ ತೆಗೆದು ಹಾಕುತ್ತದೆ. ಬುದ್ಧಿಬಲ, ಸ್ಮರಣಶಕ್ತಿ, ಕೆಲಸದಲ್ಲಿ ಹುರುಪು ಇವುಗಳನ್ನು ಬೆಳೆಸುತ್ತದೆ. ಬೆಲೆ ರೂ. ೨—೦—೦.

ವಿಳಾಸ: 'ಬಿಕ್ರಂ' ಡಿಸ್ಟ್ರಿಬ್ಯೂಟರ್ಸ್,
೨೪. ಕಾನಕೊನಹಳ್ಳಿ ರೋಡ್, ಬನವನಗುಡಿ,
ಬೆಂಗಳೂರು.

ಶರಣಸಂದೇಶ

(ವಾರಪತ್ರಿಕೆ)

★

ಸಂಪಾದಕರು:

ಶ್ರೀ. ಹಡೇ೯ಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತ-ಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ-ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯ ವೆಚ್ಚಸೇರಿ ೩-೦-೦ ಗಳು.

'ಶರಣಸಂದೇಶ'

ಪೋಸ್ಟ್: ಆಲಮಟ್ಟಿ, ಜಿಲ್ಲಾ ಧಾರವಾಡ.

ಜೂನ್ ೧೯೪೧
೬-೪೬೫೫

ನಗೀಗೆ ನೇವಿದ್ಯ

ಭೂಗೋಲಕ್ಕೆ ಪ್ರಮಾಣ

ತಂದೆ ಮಗನು ಕಲಿತುದನ್ನು ಪರೀಕ್ಷಿಸ ಬೇಕೆಂದು ಕೇಳಿದನು :

"ಏನಪಾ, ಈ ಭೂಮಿ ಸೂರ್ಯನ ಸುತ್ತಲೂ ತಿರಗತ್ತದ— ಅಂಬೂದನ್ನ ಮೂರು ಉದಾಹರಣ ಕೊಟ್ಟು ಸಿದ್ಧ ಮಾಡು ನೋಡೋಣ !

ಮಗ ತಟ್ಟನೆ ಉತ್ತರ ಕೊಟ್ಟ :

"ನನ್ನ ಭೂಗೋಲದ ಪುಸ್ತಕದೊಳಗ ಹಾಂಗ ಬರದಾದ ಒಂದು; ಮೊನ್ನೆ ಸಾಲ್ಯಾಗ ಮಾಸ್ತರರು ಹಾಂಗ ಹೇಳೂ ಮುಂದೂ ಹಾಂಗs ಹೇಳಿದರು; ಈಗ ಹಾಂಗ ಆದs ಅಂತ ನೀನೂ ಹೇಳತಾ ಇದ್ದೀಯಾ !"

* * *

ಮೊದಲು ಮಾಸ್ತರಿಗೆ

ಹುಡುಗರು ಶಾಲೆಯಲ್ಲಿ ಸರಸ್ವತಿಯ ಪೂಜೆಯನ್ನು ಮಾಡಿದರು. ಪುರೋಹಿತ ಗುಂಡಾಚಾರ್ಯರು ಪೂಜೆಗಾಗಿ ಬಂದಿದ್ದರು. ಪೂಜೆಯನ್ನು ಮುಗಿಸಿ ಆಚಾರ್ಯರು, ಕೈಯಲ್ಲಿ ಪ್ರಸಾದದ ತಟ್ಟೆ ಹಿಡಿದು ಕೊಂಡು ಹುಡುಗರಿಗೆ ಹೇಳಿದರು :

"ಮಂ, ಪ್ರಸಾದಾ ಹಿಂದೀ ಕೋ ಹುಡುಗರ್ರಾ ! ಸರಸ್ವತೀ ಪ್ರಸಾದಾ ತಿಂದರ ಬುದ್ಧಿ ಬರತ್ತದ, ಬುದ್ಧಿ !"

ಹತ್ತಿರ ನಿಂತ ಹುಡುಗನೊಬ್ಬ ಹೇಳಿದ :

"ಹೀಂಗೇನು ? ಮೊದಲ ಮಾಸ್ತರಿಗೆ ಕೊಟ್ಟು ಆ ಮ್ಯಾಲ ನಮಗ ಕೊಡ್ರಿ ಆಚಾರ್ರs !"

* * *

ಸರಿಪಡಿಸಿದ ತಪ್ಪು !

ಒಂದು ನಗರ. ನಗರವಿದ್ದಲ್ಲಿ ಮ್ಯುನಸಿಪಾಲಿಟಿ ಇರಲೇಬೇಕಲ್ಲ. ಹೊಸದಾಗಿ ಚುನಾವಣೆ ನಡೆಯಿತು. ಅದರ ನಿರ್ಣಯದ ವಿಚಾರವನ್ನು ಬರೆಯುವಾಗ ಒಂದು ಸ್ಥಳೀಯ ವೃತ್ತಪತ್ರಿಕೆಯು ಹೀಗೆ ಬರೆದಿದ್ದಿತು:

"ಇಲ್ಲಿಯ ನಗರಸಭೆಗೆ ಸದಸ್ಯರಾಗಿ ಆರಿಸಿ ಬಂದಿರುವವರಲ್ಲಿ ಅರ್ಧದಷ್ಟು ಜನರಿಗೆ ಓದಲಿಕ್ಕೆ ಬರೆಯಲಿಕ್ಕೆ ಬರುವುದೇ ಇಲ್ಲ! "

ಈ ಸುದ್ದಿ ಪ್ರಕಟವಾದ ಮರುದಿನವೆ ಸದಸ್ಯರ ಮುಂದಾಳು ಸಂಪಾದಕರಿಗೆ ಭೆಟ್ಟಿಯಾಗಿ ಹೇಳಿದ :

"ನೀವು ಪ್ರಕಟಿಸಿದ ಸಂಗತಿ ಅಪಮಾನಕಾರಕ ಅದ! ನೋಡ್ರಿ; ಇವರ ಸಲುವಾಗಿ ನಿಮ್ಮ ಮ್ಯಾಲೆ ಮಾನಹಾನಿಯ ಖಟ್ಲೆ ಮಾಡಬೇಕಾದೀತು ! "

ಸಂಪಾದಕರು ಗಂಭೀರಭಾವದಿಂದಲೇ ಹೇಳಿದರು :

"ನೋಡ್ರೀ ರಾಯರs, ಖಟ್ಲೆಪಟ್ಲೆ ಮಾಡಬ್ಯಾಡರಿ! ಏನೋ ಅಚಾತುರ್ಯ ನಡೆಸುಹೋಗೇದ. ಆದದ್ದನ್ನೆ ಸುಧಾರಿಸಿ ಕೊಳ್ಳಿಲಿಕ್ಕೂ ಬರೂಹಾಂಗ ಅವ. ಮುಂದಿನ ವಾರದ ಸಂಚಿಕೀ ಒಳಗ 'ಅರ್ಧದಷ್ಟು ಜನರಿಗೆ ಓದಲಿಕ್ಕೆ ಬರೀಲಿಕ್ಕೆ ಬರತ್ತದ' ಅಂತ ಪ್ರಕಟಿಸಿದರ ಆಯಿತೋ ಇಲ್ಲೋ!"

"ಹಂ, ಪಂ, ಅಷ್ಟು ಮಾತಿಬಿದ್ರಿ, ಏನೂ ಆಡ್ದಿಯಿಲ್ಲ!" ನಗರಸಭೆಯ ಹಿರಿಯರಾದ ಸಮಾಧಾನದಿಂದ ಹೇಳಿದ.

* * *

ಪರ್ಯಾಯ ವರ್ಣನೆ

ತುಂಗಾ:— ನೋಡು ರಂಗೂ, ನಿನಗಾಗಿ ನೋಡಿಬಂದರಲ್ಲಾ ಆ ಬಂಕಾಪೂರ ಬಲಭೀಮರಾಯರನ್ನ ! ಅವರ ವಿಷಯಕ್ಕ ನಮ್ಮ ನೆರೆಮನೀ ಗಂಗೂ ಒಂದು ಮಾತು ಹೇಳತಿನ್ನು !

ರಂಗೂ:— (ಕುತೂಹಲದಿಂದ) ಏನದು ?

ತುಂಗಾ:— ಏನಂದರ ಅವರು ಉಗಿಬಂಡೀ ಒಳಗ ಕೂಡಬೇಕಾದರ, ಇಂಜನಿಗೆ ಸವಿಾಪ ಇರೂ ಡಬ್ಬಿಯೊಳಗ ಎಂದೂ ಕೂಡೂದಿಲ್ಲಂತ!

ರಂಗೂ:— ಅದ್ಯಾಕದು ?

ತುಂಗಾ:— ಕಲ್ಲಿದ್ದಲೀ ಅಂತ ಕಲ್ಪನಾ ಮಾಡಿಕೊಂಡು ತಮ್ಮನ್ನೆಲ್ಲಾ ದರೂ ಇಂಜನಿ ನೊಳಗ ಚೆಲ್ಲಿಗಿಲ್ಲಾ ರೂ ಅಂತ ಅವರಿಗೆ ಹೆದರಿಕಿ ಅನಸತದಂತ!

* * *

ಗಂಡಸರ ಬುದ್ಧಿ

ಮಾಲಾ:— ಗಂಡಸರದೊಂದು ಸ್ವಭಾವನೇ ವಿಚಿತ್ರ ! ಮುಂಜಾನೆ ಕೂತು ಕೊಂಡು ನಿನ್ನ ಕೂದಲು ಹೀಂಗವ ಹಾಂಗವ— ಅಂತ ಕೂದಲ ವರ್ಣನಾ ಮಾಡೀಮಾಡಿದರು !

ಲೀಲಾ:— ಮಾಡಿದ್ದಾರು. ನಿನ್ನ ಕೂದಲು ಛಲೋ ಅವಕನs ಅವ !

ಮಾಲಾ:— ಅದನ್ನs ಹೇಳತೀನಲಾ, ಆಗ ವರ್ಣನಾಮಾಡಿದ ನನ್ನ ಕೂದಲನ್ನ ಊಟಕ್ಕ ಕೂತಾಗ ಎಷ್ಟು ತಿರಸ್ಕರಿಸಿ ಮಾತಾಡದೇಳು ! ಒಂದೇ ಒಂದು ಕೂದಲು ಅನ್ನದಾಗ ಬಂದದ್ದೇ ತಪ್ಪು !

ಲೀಲಾ:— ಅದಕ್ಕs ಅ ನಮ್ಮ ದು.. ಗಂಡಸರ ಬುದ್ಧೀನೇ ಸ್ಥಿರಾ ಇರೂದಿಲ್ಲಾ ಅಂತ !





ಪ್ರಭುತ್ವದ ಪಾಂಡಿತ್ಯ

ಮೇ ತಿಂಗಳ ೩೦ ತಾ. ಗೆ ಮಿಸ್ ಇಲೀನೋರ್ ರಾಥ್‌ಬೋನ್ ಎಂಬ ವಿದುಷಿ— ಈಕೆ ಇಂಗ್ಲಂಡಿನ ಪಾರ್ಲಮೆಂಟ್ ಸದಸ್ಯಳೂ ಆಗಿದ್ದಾಳೆ— 'ಕೆಲವು ಭಾರತೀಯ ಮಿತ್ರರಿಗೆ ಬಿಜ್ಞೋಲೆ'ಯೊಂದನ್ನು ಬರೆದಿದ್ದಾಳೆ. ನಮ್ಮ ಎಲ್ಲ ಪತ್ರಿಕೆಗಳೂ ಈ ಓಲೆಗೆ ಪ್ರಮುಖವಾಗಿ ಪ್ರಸಿದ್ಧಿಯನ್ನು ಕೊಟ್ಟಿವೆ. ಸದ್ಯದ ಯುದ್ಧಪ್ರಯತ್ನಕ್ಕಾಗಿ ಭಾರತೀಯ ರಾಜಕಾರಣಿಗಳು ತೋರಬಯಸುವ ಅಸಹಕಾರ (ವಿರೋಧವಲ್ಲ ಎಂಬುದು ಲಕ್ಷ್ಯದಲ್ಲಿಡತಕ್ಕ ಮಾತು)ವೃತ್ತಿಯನ್ನು ನಿಷೇಧಿಸುವುದೇ ಈ ಓಲೆಯ ಮುಖ್ಯ ಉದ್ದೇಶ. ಬೇರೆ ಅನೇಕ ಪಕ್ಷಗಳೂ ಒಂದಲ್ಲೊಂದು ವಿಧವಾದ ಅಸಹಕಾರವೃತ್ತಿಯನ್ನೆ ತಳೆದಿದ್ದರೂ ಮಿಸ್ ಇಲೀನೋರಳು ಕೇವಲ ಕಾಂಗ್ರೆಸಿನ ಮುಂದಾಳುಗಳ ವೃತ್ತಿಯನ್ನೆ ನಿಷೇಧಿಸಲು ಯತ್ನಿಸಿದ್ದಾಳೆಂಬುದು ಓಲೆಯನ್ನೋದಿದ ಕೂಡಲೆ ಸ್ಪಷ್ಟವಾಗುವುದು. ಸದ್ಯದ ನಮ್ಮ ರಾಜಕೀಯ ಬಿಕ್ಕಟ್ಟಿಗಾಗಿ ಇಂಗ್ಲಂಡಿನಲ್ಲಿ ಕೂಡ ಅನೇಕರು ಬ್ರಿಟಿಶ ಸರಕಾರವನ್ನೆ ದೂಷಿಸುತ್ತಿರುವರೆಂದೂ, ಅದಕಾಗಿ ಬ್ರಿಟಿಶ ಸರಕಾರವೆ ಈ ಬಿಕ್ಕಟ್ಟಿಗೆ ಕಾರಣವಾಗಿದೆ ಎಂಬ ತಪ್ಪು ಕಲ್ಪನೆಯಾಗಬಹುದೆಂದೂ, ಹಾಗಾಗದೆ ಭಾರತೀಯ ಮುಂದಾಳುಗಳದೂ ಇದರಲ್ಲಿ ದೋಷವಿದೆ ಎಂಬುದನ್ನು ತೋರಿಸಕೊಡಬೇಕೆಂದೂ ತಾನು 'ಬಿಜ್ಞೋಲೆಯನ್ನು ಬರೆದುದಾಗಿ ಈ ಪಾರ್ಲಮೆಂಟ್ ಪಂಡಿತಾಬಾಯಿ ಹೇಳುತ್ತಾಳೆ. ಇದಲ್ಲವೆ ಪ್ರಭುತ್ವದ ಪಾಂಡಿತ್ಯ? 'ಬ್ರಿಟಿಶರದೂ ದೋಷವಿದೆ' ಎಂದು ಒಪ್ಪುವಾಗ ಭಾರತೀಯರಿಗೆ ಬಿಜ್ಞೆ, ಚುಜ್ಞಿ ಹೇಳುವ ಅವಸರವೇನು? ಪರರಾಷ್ಟ್ರಗಳಲ್ಲಿ ನಮ್ಮ ವಿರುದ್ಧ ಪ್ರಚಾರವನ್ನೆಬ್ಬಿಸುವುದೆ ಉದ್ದೇಶವಾಗಿಲ್ಲ ಎಂದು ಹೇಗೆ ಹೇಳಬಹುದು? ಪ್ರಜಾಪ್ರಭುತ್ವದ ತತ್ತ್ವವನ್ನು ಸಾರಿ, ಅದಕಾಗಿ ಯುದ್ಧ ಎಂದು ಹೇಳಿ, ಭಾರತದಲ್ಲಿ ಮಾತ್ರ ಸರ್ವಾಧಿಕಾರಿತ್ವವನ್ನೆ ಮೆಸೆದ ಅಧಿಕಾರಧುರಂಧರರಿಗೆ ಸಾಮ್ರಾಜ್ಯಪ್ರಿಯರಿಗೆ ಅವರ ನಜತೆಯ ಅನುಬಂಧತೆಯನ್ನು ತೋರಿಸಿಕೊಡುವುದು ಹೆಚ್ಚು ಅಗತ್ಯವಲ್ಲವೆ? ಇದರೇನು? 'ಬ್ರಿಟಿಶರು ಸುಸಂಸ್ಕೃತರು' ಎಂಬ ಹೆಮ್ಮೆಯ ಹಿರಿತನದಿಂದ ಉಪದೇಶದ ಹೊರೆಯನ್ನು ನಮ್ಮಮೇಲೆ ಹೇರಿದ್ದು!

ದಾಸರ ದುರ್ದೈವ!

ಬ್ರಿಟಿಶರ ಇಂತಹ ವೃತ್ತಿಯಿಂದಲೆ ಭಾರತೀಯರಿಗೆ ಮೇಲಿಂದ ಮೇಲೆ ತಮ್ಮ ದಾಸ್ಯದ ಕಲ್ಪನೆ ಬರುವುದು. ಮಿಸ್ ರಾಥಬೋನಳು ಭಾರತಕ್ಕಾಗಿ ಸಹಾನುಭೂತಿಯುಳ್ಳವಳಂತೆ! ಆದರೆ ಈ ದರ್ಪೋಕ್ತಿಯನ್ನು ಕೇಳಿರಿ:—

'We shall win through without your aid. ನಿಮ್ಮ ಸಹಾಯವಿಲ್ಲದೆಯೂ ಕೊನೆಗೆ ನಾವೇ ಗೆಲ್ಲುವೆವು'! ಹಾಗಿದ್ದರೆ ಈ ಬಿಜ್ಞೋಲೆಯ ಅವಶ್ಯಕತೆಯಾಕೆ? ನಿಜವಾಗಿ ನೋಡಿದರೆ ಯುದ್ಧಪ್ರಯತ್ನಕ್ಕಾಗಿ ಸಹಾಯ ಮಾಡಬೇಕೊ ಮಾಡಬಾರದೊ ಎಂಬ ಪ್ರಶ್ನೆಯೆ ಹೊರಟಿಲ್ಲ. ಇಂದಿನ ಅಸಹಕಾರವು ಯುದ್ಧಸಹಾಯಕ್ಕೆ ಸಂಬಂಧಿಸಿಲ್ಲ. 'ಭಾರತೀಯನಿಗೆ ವಿಚಾರಸ್ವಾತಂತ್ರ್ಯ ಬೇಕು, ಭಾಷಣಸ್ವಾತಂತ್ರ್ಯ ಬೇಕು, ಆ ಸ್ವಾತಂತ್ರ್ಯವಿಲ್ಲ' ಎಂಬುದನ್ನು ತೋರಿಸಿ ಜನಜಾಗೃತಿಯನ್ನುಂಟುಮಾಡಿ, ಅದನ್ನು ದೊರಕಿಸಲು ಸದ್ಯದ ಶಾಸನಭಂಗ ಚಳವಳಿ. ಇಂದು ಕಾಂಗ್ರೆಸು ನಿಜವಾಗಿಯೆ ಯುದ್ಧಸಹಾಯಕ್ಕೆ ವಿರೋಧವನ್ನು ಮಾಡಿದರೆ ಎಂತಹ ಪರಿಸ್ಥಿತಿ ಬಂದೀತು ಎಂಬುದು ಸಾರ್ವಜನಿಕರಂತೆ ಸರಕಾರಕ್ಕೂ ಗೊತ್ತಿದೆ. ಆದರೆ ಕಾಂಗ್ರೆಸು ವಿರೋಧವನ್ನು ಒಡ್ಡುವಂತಿಲ್ಲ. ಯಾಕೆ? ಹಿಟ್ಲರೀ 'ಹುಂಬಕಾರಣ'ಕ್ಕೆ ಕಾಂಗ್ರೆಸು ತತ್ತ್ವತಃ ವಿರುದ್ಧವಾಗಿದೆ. ಯಾವ ರೀತಿಯಿಂದಲೂ ಹಿಟ್ಲರನಿಗೆ ಪ್ರೋತ್ಸಾಹ ದೊರೆಯುವಂತೆ ಬಾರದೆಂಬ ದಕ್ಷತೆಯನ್ನು ವಹಿಸಿ, ಕಾಂಗ್ರೆಸು ಸ್ವಾಭಿಮಾನ ಸಂಪಾದನೆಗಾಗಿ ಚಳವಳಿಯನ್ನು ಹೂಡಿದೆ. ಆದರೂ ಮಿಸ್ ಇಲೀನೋರಳು ಪರಿಸ್ಥಿತಿಯನ್ನು ಹೀಗೆ ಬೇರೆಯಾಗಿ ಬಣ್ಣಿಸಿದ್ದಾಳೆ. ಯಾಕೆ? ನಾವು ದಾಸರು—ಅದಕಾಗಿ ದೋಷದ ಭಾರ ನಮ್ಮ ಮೇಲೆ!

ವಿಸಂಗತವಾದ

ಮಿಸ್ ರಾಥಬೋನಳ ಭಾವನೆಯಂತೆ ತರ್ಕವೂ ವಿಸಂಗತವಾಗಿದೆ. ನಮ್ಮ ಸಹಾಯವಿಲ್ಲದೆ ಗೆಲ್ಲುವ ಆತ್ಮವಿಶ್ವಾಸ ಒಂದೆಡೆ. ಇನ್ನೊಂದೆಡೆ 'ಜೇರೆ ವಿಚಾರಸರಣಿಯ ಭಾರತೀಯರ ಉಪಯುಕ್ತ ಸಹಾಯ ನಮಗಿದೆ— We have the efficient aid of Indians of other ways of thinking' ಎಂಬ ಪ್ರಚಾರವೋಸ! ಉಪಯುಕ್ತವಾದ ಸಹಾಯವನ್ನು ನೀಡುವ ಭಾರತೀಯರು ಇದ್ದುದೆ ಆದರೆ ಹೀಗೆ ಭಾರತವನ್ನು ಹೆದರಿಸುವುದು ವಿಸಂಗತವಲ್ಲವೆ? ಹೆದರಿಸುವ ಮಾತು ಹೀಗಿದೆ: 'Victorious allies will be in no mood to be

guided by those who have hindered and not helped victory'. (ತಮ್ಮ ವಿಜಯಕ್ಕಾಗಿ ಸಹಾಯಮಾಡದೆ ವಿರೋಧ ಮಾಡಿದವರ ಮಾತನ್ನು ಜಯಶಾಲಿಗಳಾದ ಸಹಾಯಕ ರಾಷ್ಟ್ರದವರು ಕೇಳುವಂತಿಲ್ಲ). ಇದರರ್ಥವೇನು? 'ಜಯ ದೊರೆಯುವವರೆಗೆ ಸಹಾಯ ಮಾಡುವವರನ್ನು ನೆನೆಸುವುದು, ಜಯ ದೊರೆತಾಕ್ಷಣ ಅವರನ್ನು ಮರೆತು ವಿರೋಧ ಮಾಡಿದವರನ್ನು ಮುಂದೆ ಮಾಡಿ ಜಯದ ಫಲವನ್ನು ಭಾರತಕ್ಕೆ ತಪ್ಪಿಸುವುದು' ಎಂದೊ? ಅಥವಾ 'ಸದ್ಯಕ್ಕೆ ಸಹಾಯ ಮಾಡುವ ಭಾರತೀಯರ ಸಂಖ್ಯೆ ತೀರ ಸಣ್ಣದಾಗಿದೆ' ಎಂಬ ಒಪ್ಪಿಗೆಯೊ? ಅಥವಾ 'ಸದ್ಯದ ಯುದ್ಧವು ಪ್ರಜಾಪ್ರಭುತ್ವದ ತತ್ತ್ವಕ್ಕಾಗಿ ಅಲ್ಲ, ತಮ್ಮ ಮತ್ತು ತಮ್ಮ ಸಹಾಯಕರ ಲಾಭಕ್ಕಾಗಿ ಮಾತ್ರ' ಎಂದೊ? ಈ ವಿದುಷಿಯ ವಾದವು ಎಷ್ಟು ವಿಸಂಗತವಾಗಿದೆ ಎಂಬುದಕ್ಕೆ ಇನ್ನೊಂದು ಮಾತನ್ನು ತೋರಿಸಬಹುದು. ಇಂಗ್ಲಂಡವು ಜಗತ್ತಿಗಾಗಿ ಹೋರಾಡುತ್ತಿದ್ದುದರಿಂದ ಸದ್ಯದ ಬಿಕ್ಕಟ್ಟಿನಲ್ಲಿ ತಮ್ಮ ಹಟವನ್ನು ಬಿಟ್ಟು ಬ್ರಿಟಿಶರು ಹೇಳುವಂತೆ ಒಪ್ಪುವುದು ಭಾರತೀಯರ ಕರ್ತವ್ಯವಾಗಿದೆಯಂತೆ! (..'the duty of at least temporary surrender may now lie on you and not on the British, since the cause for which Britain bears the main responsibility is a world cause and there will be no freedom or independence for India if it is lost'.) ಗೆದ್ದರೆ ಶ್ರೇಯಸ್ಸು ಅವರದು, ಸೋತರೆ ಹೊಣೆಗಾರಿಕೆ ನಮ್ಮದು! ವಿಸಂಗತವಾದದ ವಿಕೋಪವಲ್ಲವೆ ಇದು?

ಪರಸ್ಪರ ವಿಶ್ವಾಸಕ್ಕೆ ಪ್ರೋತ್ಸಾಹವಿಲ್ಲ

'ಇಂಗ್ಲಂಡವು ಸೋತರೆ ಭಾರತಕ್ಕೆ ಸ್ವಾತಂತ್ರ್ಯವಿಲ್ಲ' ಎಂಬ ಮಾತನ್ನು ಮಿಸ್ ಇಲೀನೋರಳು ಭಾರತೀಯರಿಗೆ ಹೇಳಬೇಕಾಗಿಲ್ಲ. ಈ ಮಾತು ಕಾಂಗ್ರೆಸ್ ಮುಂದಾಳುಗಳಿಗೆ ಎಂದಿನಿಂದಲೂ ಗೊತ್ತಿದೆ. ಆದರೆ 'ಇಂಗ್ಲಂಡವು ಗೆದ್ದರೆ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದು' ಎಂಬ ಮಾತಿಗಾಗಿ ಇಂದಿನ ಬಿಕ್ಕಟ್ಟು. ಈ ಮಾತಿನಲ್ಲಿ ಕಾಂಗ್ರೆಸಿಗರಿಗೆ ವಿಶ್ವಾಸವಿಲ್ಲ; ಇತ್ತಿತ್ತಲಾಗಿ ಬೇರೆ ಪಕ್ಷಗಳಲ್ಲೂ ಅವಿಶ್ವಾಸ ಹೆಚ್ಚುತ್ತಲಿದೆ. ಈ ಅವಿಶ್ವಾಸಕ್ಕೆ ಆಸ್ಪದ ಕೊಡದ ಪರಸ್ಪರ ವಿಶ್ವಾಸವನ್ನು ಬೆಳೆಯಿಸುವುದು ಬ್ರಿಟಿಶ ಸರಕಾರದ ಮೊದಲ ಕರ್ತವ್ಯವಲ್ಲವೆ? 'ನಿಮ್ಮ ಯುದ್ಧದ ಧ್ಯೇಯವೇನು?' ಎಂದು ಕಾಂಗ್ರೆಸು ಕಂಠಶೋಷವಾಗಿ ಕೇಳಿತು, ಅದಕ್ಕೆ ಉತ್ತರವಿಲ್ಲ. 'ಯುದ್ಧದ ಧ್ಯೇಯವೇನೆ ಇರಲಿ, ಸದ್ಯಕ್ಕೆ ನಮ್ಮಲ್ಲಿ ವಿಶ್ವಾಸವನ್ನಿಟ್ಟು ಅಖಿಲಶಾಸ್ಟ್ರೀಯ ಮಂತ್ರಿಮಂಡಳ (National cabinet) ವನ್ನು ಸ್ಥಾಪಿಸಿರಿ' ಎಂದು ಮೊದಲು ಕಾಂಗ್ರೆಸು, ಆ ಮೇಲೆ ಮಿಕ್ಕೆ ಪಕ್ಷಗಳು ಕೇಳಿದರೆ ಅದಕ್ಕೂ ಉತ್ತರವಿಲ್ಲ! ಎಂಟು ಪ್ರಾಂತಗಳಲ್ಲಿ ಬಹುಮತದ ಮಂತ್ರಿಮಂಡಳಗಳನ್ನು ರಚಿಸಿದ ಕಾಂಗ್ರೆಸು ಭಾರತೀಯರ ಪ್ರತಿನಿಧಿಯಲ್ಲ, ಜಾತಿಸಂಕುಚಿತದೃಷ್ಟಿ ಇಲ್ಲದ ಪ್ರಾಗತಿಕ ಮುಂದಾಳುಗಳಂತೂ ಯಾರ ಪ್ರತಿನಿಧಿಯೂ ಅಲ್ಲ, ಪಾಕಿಸ್ತಾನಕ್ಕೆ ಒಪ್ಪಿಗೆ ಇಲ್ಲ— ಹೀಗೆಂದರೆ ಸರಕಾರದ ಧೋರಣೆಯಾದರೂ ಎಂತಹದು ಎಂದು ಅನೇಕರಿಗೆ ಸಹಜವಾಗಿಯೆ ಸಂದೇಹ ಉಂಟಾಗುವುದು. 'ಸ್ವಾತಂತ್ರ್ಯಕೊಟ್ಟರೆ ಮಾತ್ರ ಸಹಾಯಮಾಡುವೆವು' ಎಂಬ ವ್ಯಾಪಾರವೃತ್ತಿಯನ್ನು ಕಾಂಗ್ರೆಸು ಎಂದೂ ಕಳೆದಿಲ್ಲ; ತದ್ವಿರುದ್ಧವಾಗಿ 'ಸಹಾಯ ಮಾಡದಿದ್ದರೆ ಜೋಕೆ!' ಎಂದು ಹೆದರಿಸುವ ಪಾಂಡಿತ್ಯದಲ್ಲಿಯೆ ಆ ವೃತ್ತಿ ಇದೆ. 'ಜಗತ್ತಿಗಾಗಿ ಯುದ್ಧ' ಎಂದರೆ ಅರ್ಥವಿಲ್ಲ. 'ಜಗತ್ತಿನಲ್ಲಿ ಯಾವುದು ಬೇಕು' ಎಂಬ ಅಭಿಪ್ರಾಯವು ಸ್ಪಷ್ಟವಾದಹೊರತು ಆ ಗುಣ್ಡದಂತಹ ಮಾತಿಗೆ ಕಡ್ಡಿಯಷ್ಟೂ ಬೆಲೆ ಇಲ್ಲ. ಇಂದಿನ ಬಿಕ್ಕಟ್ಟು ಕಾಂಗ್ರೆಸು ಬಯಸಿದ್ದಲ್ಲ; ಯಾಕೆಂದರೆ ಕಾಂಗ್ರೆಸಿಗೂ ಸರ್ವಾಧಿಕಾರಸದ್ಧತಿಯನ್ನು ನಿರ್ನಾಮ ಮಾಡಬೇಕಾಗಿದೆ. ಕಾಂಗ್ರೆಸಿಗೆ ತತ್ತ್ವದ ಹಟವಿದೆ; 'ಜಗತ್ತಿಗೆ ಅನ್ವಯಿಸುವ ತತ್ತ್ವ ಭಾರತಕ್ಕೂ ಅನ್ವಯಿಸುವುದು' ಎಂಬ ವಿಶ್ವಾಸವನ್ನು ಕಾಂಗ್ರೆಸಿಗರಲ್ಲಿ ಹುಟ್ಟಿಸುವುದು ಬ್ರಿಟಿಶರಿಗೇ ಶಕ್ಯವಿದೆ, ಬ್ರಿಟಿಶ ಸರಕಾರದ ಕರ್ತವ್ಯವಾಗಿದೆ.

ಯಾರ ಹೊಣೆ?

'ಕಾಂಗ್ರೆಸು ತನ್ನ ಅಸಹಕಾರದಿಂದ ಹಿಟ್ಲರನಿಗೆ ಪ್ರೋತ್ಸಾಹವನ್ನು ಕೊಟ್ಟಂತಾಗುವುದು' ಎಂದು ಮಿಸ್ ರಾಥಬೋನಳು ಹೇಳುವ ಮಾತನ್ನು ಯಾವ ಸ್ವಾಭಿಮಾನದ ಭಾರತೀಯನೂ ಖಂಡಿಸದೆ ಇರಲಾರನು. ಭಾರತವು ಅಸಹಾಯಪಾದ ರಾಷ್ಟ್ರವಾಗಿದೆ; ತನ್ನ ಅಸಂತೋಷವನ್ನು ವ್ಯಕ್ತಪಡಿಸಲು ಅಸಹಕಾರದ ಹೊರತು ಬೇರೊಂದು ಶಸ್ತ್ರವೆ ಅದಕ್ಕಿಲ್ಲ. ಇದಲ್ಲದೆ ಇಂದಿನದು ಅನಿರ್ವಾಹವು ಅಸಹಕಾರವಾಗಿದೆ. ಯುದ್ಧ ಪ್ರಾರಂಭವಾದಾಕ್ಷಣ ಕಾಂಗ್ರೆಸು ಯುದ್ಧಕ್ಕೆ ಮನಬಿಚ್ಚಿ ಸಹಾಯವನ್ನು ಮಾಡಬೇಕು ಎಂದು ಹೇಳಿದ ಮೊದಲ-ಒಬ್ಬರೇ ಬಬ್ಬ—ಭಾರತೀಯ ಮುಂದಾಳು ಎಂದರೆ ಮಹಾತ್ಮಾ ಗಾಂಧಿಯವರು. ಈ ಧೋರಣೆಯ ಮಹಾತ್ಮರೆ ಇಂದು ಅಸಹಕಾರದ ಸ್ಫೂರ್ತಿ-ಕೇಂದ್ರವಾಗಿದ್ದರೆ ಅದು ಅವರ ಅಸಂಬದ್ಧತೆಗಾಗಿ ಅಲ್ಲ, ಅಸಹಾಯತೆಗಾಗಿ— ಎಂಬುದು ಅವರ ಮತ್ತು ವೈಸರಾಯರ ಸಂದರ್ಶನಸಂಗತಿಗಳನ್ನರಿತವರು ಬಲ್ಲರು.

ಎಲ್ಲಿ ತಪ್ಪಿದೆ?

ಕಾಂಗ್ರೆಸಿನ ಭಾವನೆ ದುಷ್ಟವಾಗಿದೆ ಎಂದರೆ ಯಾರೂ ಒಪ್ಪರು, ಕಾಂಗ್ರೆಸಿನ ಧೋರಣೆ ತಪ್ಪಿದೆ ಎಂದರೆ ಅನೇಕರು ಒಪ್ಪುವರು. 'ಕಾಂಗ್ರೆಸು ತಪ್ಪುದಾರಿಯನ್ನು ಹಿಡಿದಿದೆ' ಎಂದು ಕಟುವಾದ ಸತ್ಯ (ಮತ್ತು ಪ್ರಾಮಾಣಿಕ ಅಭಿಪ್ರಾಯ) ವನ್ನು ಕಳೆದ ಅನೇಕ ತಿಂಗಳುಗಳಿಂದ ಈ ನಮ್ಮ 'ನೋಟ'ದಲ್ಲಿ ಕಾಣಿಸಿದ್ದೇವೆ. ಇಂದು ಸರಕಾರವು ಕಾಂಗ್ರೆಸನ್ನು ಬಿಕ್ಕಟ್ಟಿಗೆ ಹೊಣೆಗಾರ ಎನಿಸುವಂತೆ ಮಾಡಿದೆ. ಆದರೆ ಕಾಂಗ್ರೆಸು ಬುದ್ಧಿಪೂರ್ವಕವಾದ ಧೋರಣೆಯನ್ನು ಮುಂದೆ ಸಾಗಿಸಿದ್ದರೆ ಸರಕಾರವನ್ನೆ ಇಂದು ಅದು ತಪ್ಪಿನಲ್ಲಿ ಇರಿಸಬಹುದಾಗಿತ್ತು. ಇಂದಿನ ಅಧಿ-

ಕಾರಿಗಳ ಮಂತ್ರಿಮಂಡಳ, ಇಂದಿನ ಜಾತಿ-ಜಗಳ, ಇಂದಿನ ವಿಚಾರಪದ್ಧತಿಯ ಅರಾಜಕತೆ, ಇಂದಿನ ಔದ್ಯೋಗಿಕ ಕೂರ್ಮ ಪ್ರಗತಿ, ಇಂದಿನ ಅಪಪ್ರಚಾರ—ಇವೆಲ್ಲವನ್ನೂ ಕಾಂಗ್ರೆಸು ತಡೆಯಬಹುದಾಗಿತ್ತು. ಆದರೆ ಇದು ಕೇವಲ ತಪ್ಪು ಧೋರಣೆ, ದುಷ್ಟ ಭಾವನೆ ಎಂದಿಗೂ ಅಲ್ಲ. ತತ್ತ್ವದ ಒರೆಗಲ್ಲಿಗೆ ನಿಂತುದು ಬ್ರಿಟಿಶ ಮುತ್ಸದ್ದಿತನ, ಭಾರತದ್ದಲ್ಲ.

ಪೂರ್ವದಲ್ಲಿ ಪ್ರಸಂಗ

ಸಂಧ್ಯಾಕಾಲದ ನೆರಳಿನಂತೆ ಯುರೋಪ ಯುದ್ಧವು ದಿನೇ ದಿನೇ ಹೆಚ್ಚಾಗಿ ಪೂರ್ವಕ್ಕೆ ಹಬ್ಬುತ್ತಲಿದೆ. ಭೂಮಧ್ಯಸಮುದ್ರ ಮತ್ತು ಕೆಂಪುಸಮುದ್ರ ಇವೆರಡರಲ್ಲಿ ಒಂದೆಡೆ ಹಿಟ್ಲರನ ಸೂರ್ಯನು ಮುಳುಗಬೇಕಾಗಿದೆ. ಮುಳುಗುವುದು ಖಂಡಿತ ಎಂದು ಸದ್ಯದ ಪರಿಸ್ಥಿತಿಯಲ್ಲೂ ಹೇಳಬಹುದು. ಕಳೆದ ತಿಂಗಳು ಕ್ರೀಟ ದ್ವೀಪದಲ್ಲಿ ಅತ್ಯಂತ ಮಹತ್ತ್ವದ ಯುದ್ಧ ನಡೆಯಿತು. ಹನ್ನೆರಡು ದಿನಸಗಳ ಹಗಲು-ರಾತ್ರಿ ಹೋರಾಟದ ತರುವಾಯ ಸಾಮ್ರಾಜ್ಯ ಸೈನಿಕರು ದ್ವೀಪವನ್ನು ನಾಝೀನಾಶಯಂತ್ರಕ್ಕೆ ಬಿಟ್ಟು ಕೊಡಬೇಕಾಯಿತೇನೊ ನಿಜ. ಒಂದು ದೃಷ್ಟಿಯಿಂದ ಬ್ರಿಟಿಶ ನೌಕಾಬಲಕ್ಕೆ ಈ ದ್ವೀಪದ ಮಹತ್ತ್ವವಿದ್ದಿತು. ಆದರೆ ಸಾಕಷ್ಟು ಸಿದ್ಧತೆ ಇಲ್ಲದೆ ಹೋರಾಡುವುದು ಬುದ್ಧಿಮತ್ತೆಯ ಲಕ್ಷಣವಲ್ಲವೆಂದು ಅಭಿಪ್ರಾಯಪಟ್ಟು ಬ್ರಿಟಿಶರು ಸೈನ್ಯವನ್ನು ಹಿಂತೆಗೆದುಕೊಂಡರು. ಇದಲ್ಲದೆ ಗ್ರೀಸದಲ್ಲಿದ್ದ ಜರ್ಮನರಿಗೆ ಕ್ರೀಟವು ತೀರ ಸಮೀಪ; ಉತ್ತರ ಆಫ್ರಿಕೆಯಲ್ಲಿದ್ದ ಬ್ರಿಟಿಶರಿಗೆ ಅಷ್ಟೇದೂರ. ಇದೂ ಒಂದು ಕಾರಣವಾಯಿತು. ಜೇಂಬರ್‌ಲೇನರ ಶಾಂತಿಧೋರಣೆಗಾಗಿ ಯುದ್ಧದ ಸಿದ್ಧತೆಯನ್ನೆ ಇಂಗ್ಲಂಡವು ಎಷ್ಟೋ ವರ್ಷ ಮಾಡಲಿಲ್ಲ; ಅದಕ್ಕಿದು ಪ್ರಾಯಶ್ಚಿತ್ತ. ಆದರೆ ಇಂದು ಇಡಿಯ ಸಾಮ್ರಾಜ್ಯದಲ್ಲಿ ನಡೆದ ಯುದ್ಧಸಾಮಗ್ರಿಗಳ ಉತ್ಪಾದನೆ ಮತ್ತು ಅಪೇರಿಕೆಯ ಸಹಾಯ—ಇವುಗಳಿಂದ ಇಂಗ್ಲಂಡವು ದಿನೇದಿನೇ ಬಲಗೊಳ್ಳುತ್ತಲಿದೆ. ಕ್ರೀಟದ ನಿಕರ ಹೋರಾಟದಿಂದ ಇಂಗ್ಲಂಡದ ಆತ್ಮವಿಶ್ವಾಸ ಮತ್ತು ಹೆಚ್ಚುತ್ತಲಿರುವ ಬಲ ಇವುಗಳ ಕಲ್ಪನೆ ಬರುವಂತಿದೆ.

ಬರುವ ಭೀಕರತೆ

ಇನ್ನು ದಿನದಿನಕ್ಕೆ ಯುದ್ಧದ ಸ್ವರೂಪ ಹೆಚ್ಚು ಭೀಕರವಾಗ ಬಹುದಾಗಿದೆ. ಒಂದೆಡೆ ಗೆದ್ದ ರಾಷ್ಟ್ರಗಳನ್ನು ತಡೆದು ಹಿಡಿಯುವುದು, ಒಂದೆಡೆ ಆಹಾರಸಾಮಗ್ರಿಶಕ್ತಿಗಳನ್ನು ಪೂರೈಸುವುದು—ಇವೆರಡೂ ದಿನದಿನಕ್ಕೆ ಹಿಟ್ಲರನಿಗೆ ಹೆಚ್ಚು ಕಠಿಣವಾಗುವವು. ಅದಕಾಗಿ ಕೊನೆಗಾಲಕ್ಕೆ ಅವನು ಧಾವಿಸಬಹುದಾಗಿದೆ. ಕ್ರೀಟದಲ್ಲಿ ಜರ್ಮನ್ ಶ್ರಿಶಂಕು ದಳ (parachutist) ವು ತನ್ನ ಯುಕ್ತಿಶಕ್ತಿಗಳನ್ನು ತೋರಿಸಿದೆ. ಅದರಿಂದ ಪ್ರೋತ್ಸಾಹಿತನಾಗಿ ಹಿಟ್ಲರನು ಬೇಗನೆ ಇಂಗ್ಲಂಡದ ಮೇಲೆ ದಾಳಿಯನ್ನು ಮಾಡಬಹುದೆಂದು ಅನೇಕರು ಊಹಿಸುತ್ತಾರೆ. ಅಥವಾ—ರತಿಯಾದ ಸಹಾನುಭೂತಿಯಿಂದ ತುರ್ಕಸ್ತಾನವನ್ನು ತಟಸ್ಥವಾಗಿರಿಸಿ ಇರಾಕಿನಿಂದ, ಫ್ರ್ಯಾಂಕೋನನ್ನು ಹೆದರಿಸಿ ಸ್ಪೇನದಿಂದ ಏಕಕಾಲಕ್ಕೆ ದಾಳಿ ಮಾಡಿ, ಭೂಮಧ್ಯಸಮುದ್ರದ ಬ್ರಿಟಿಶನೌಕಾದಳಕ್ಕೆ ತೊಂದರೆಯನ್ನುಂಟುಮಾಡಬಹುದೆಂದು ಬೇರೆ ಕೆಲವರು ಊಹಿಸುತ್ತಾರೆ. ಆದರೆ ಇಂಗ್ಲಂಡದಲ್ಲಾಗಲಿ ಇಜಿಪ್ತದಲ್ಲಾಗಲಿ ಕ್ರೀಟದಂತಹ ಪರಿಸ್ಥಿತಿ ಇಲ್ಲ. ಸಾಮ್ರಾಜ್ಯದ ಶಕ್ತಿ ಇವೆರಡೂ ಕಡೆ ಸಮಗ್ರವಾಗಿ ಸಜ್ಜಾಗಿದೆ. ಪಶ್ಚಿಮ ಆಫ್ರಿಕ ಕರಾವಳಿಗಾಗಿ ಪ್ರೆಸಿಡೆಂಟ್ ರೂಝ್‌ವೆಲ್ಟರು ದಕ್ಷತೆಯನ್ನು ವಹಿಸಲು ಸಿದ್ಧರಾದುದರಿಂದ, ದಕ್ಷಿಣಆಫ್ರಿಕದ ಸೈನ್ಯವೂ ಉತ್ತರಕ್ಕೆ ಬಹುಮಟ್ಟಿಗೆ ಬರಬಹುದಾಗಿದೆ. ಹೀಗೆ ಇನ್ನು ಮುಂದಿನ ಯುದ್ಧರಂಗದಲ್ಲಿ ಹಿಟ್ಲರನು ಸಾಮ್ರಾಜ್ಯದ ನಿಜವಾದ, ಅಪಾರವಾದ ಶಕ್ತಿಯನ್ನು ಎದುರಿಸಬೇಕಾಗುವುದು.

(೪೩ನೆಯ ಪುಟದಿಂದ ಮುಂದರಿದದ್ದು)

೧೦. **ಜ್ಞಾನೋಪಾಸನೆ** (ವಿಶೇಷ ಸಾಹಿತ್ಯಕ ಗ್ರಂಥ). ಪ್ರೋ. ಬನಹಟ್ಟಿ ಯವರ ಮೂಲ ಮರಾಠಿ ಗ್ರಂಥವನ್ನು 'ಸ್ವಾತಂತ್ರ್ಯ ಪ್ರಿಯ' ರು ಅನುವಾದಿಸಿದ್ದಾರೆ. ಧಾರವಾಡದ ಎಂಬಿನ ಬಳ್ಳಿಯ ೪ನೆಯ ವರ್ಷದ ೧-೨ನೆಯ ಕುಡಿ. ಕ್ರೌ. ಆ. ೮+೨೩೨ ಪುಟ. ಬೆಲೆ ೧-೮-೦.

೧೧. **ಮೊಗವೀರ ಸಾಂವತ್ಸರಿಕ** (ವಾರ್ಷಿಕ ಸಂಚಿಕೆ). ಮುಂಬಯಿಯ ಮೊಗವೀರ ಯುವಕ ಸಂಘದಿಂದ ಪ್ರಕಾಶಿತವಾದುದು. ಕ್ರೌ. ಡಿಕ್ಷ ೧೦೨ ಪುಟಗಳು. ಬೆಲೆ ೦-೪-೦.

೧೨. **ಸಾಹಿತ್ಯಸಮಿತಿ ಪತ್ರಿಕೆ** (ಇಂಗ್ಲಿಷ್-ಕನ್ನಡ ತ್ರೈಮಾಸಿಕ) ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಹೊಸದಾಗಿ ಪ್ರಾರಂಭಿಸಲಾಗಿದೆ. ಡೆ ಅ. ೧೪೬ ಪುಟಗಳು. ವಾ.ಚಂ.

೧೩. **ಪರ್ಣಕುಟಿ** (ಪರಿಚಯಾತ್ಮಕ ಪ್ರಬಂಧ). ಲೇ. ಶ್ರೀಮಾನ್ ಸಿದ್ದವ್ವನಹಳ್ಳಿ ಕೃಷ್ಣಶರ್ಮರು. ಕ್ರೌ. ಆ. ೧೬+೨೦೮ ಪುಟ. ಬೆಲೆ ೧-೮-೦. ಪ್ರಕಾಶಕರು ಶ್ರೀಮಾನ್ ಶೇಷಗಿರಿರಾವ್ ಕುಲಕರ್ಣಿ ಸಾಧನ ಮುದ್ರಣಾಲಯ, ಧಾರವಾಡ.

೧೪. **ಪ್ರತಿಭಾ** (ಹೊಸ ಮಾಸಪತ್ರಿಕೆ). ಸಂಪಾದಕರು ಶ್ರೀಯುತರುಗಳಾದ ಭಾಲಚಂದ್ರ ಫಾಣೇಕರ್ ಮತ್ತು ಬಸವರಾಜ ಕಟ್ಟಿಮನಿ ಅವರು. ಪ್ರಕಾಶನ ಸ್ಥಳ: ಪ್ರತಿಭಾ ಪ್ರೆಸ್ ಧಾರವಾಡ ಕ್ರೌ. ಡಿದಳ ಪುಟ. ವಾ. ಚಂದಾ ೧-೮-೦; ಬಿಡಿಸಂಚಿಕೆಗೆ ೦-೨-೦.

೧೫. **ಶ್ರೀ ವಿಸುವಿನ ಜೀವನ ಚರಿತ್ರೆ** (ಪದ್ಯಮಯ) ಲೇ. ಶ್ರೀ. ಬಿ. ನರಸಪ್ಪ. ಪ್ರಕಾಶಕರು ಬಡವರ ಬಂಧು ಪ್ರಿಂಟಿಂಗ್ ಪ್ರೆಸ್ ಲಿಮಿಟೆಡ್, ಮಂಗಳೂರು. ಬೆಲೆ ೦-೧-೦.

೧೬. **ನನ್ನ ದೇಶ** (ಚಿಕ್ಕ ನಿಬಂಧ) ಲೇ. ಶ್ರೀಮಾನ್ ರಾ.ಗು. ಜೋಶಿ ರಾಯಿಚೂರು. ಪ್ರಕಾಶನ ಸ್ಥಳ: ತಿಳಿವಿನ ತುತ್ತೂರಿಯ ಚಾವಡಿ, ರಾಯಚೂರು. ಕ್ರೌ. ಆ. ೮ ಪುಟಗಳು. ಬೆಲೆ ೦-೦-೦.

ಜಯಂತಿಯ ಏಜಂಟರಿಗಾಗಿ

★

ಸದ್ಯದ ಮಹಾಯುದ್ಧದ ಮೂಲಕ ಮುದ್ರಣ ಸಲಕರಣೆ, ಕಾಗದ ಮೊದಲಾದುವುಗಳ ದರವು ಒಂದಕ್ಕೆ ಮೂರು-ನಾಲ್ಕುರಷ್ಟು ಹೆಚ್ಚಾದುದರಿಂದ, ತಿಂಗತಿಂಗಳೂ ಆವಶ್ಯವಿರುವಷ್ಟೆ ಪ್ರತಿಗಳನ್ನು ತೆಗೆಯಬೇಕಾಗಿದೆ. ಆದುದರಿಂದ ಜಯಂತಿಯ ಏಜಂಟರೆಲ್ಲರೂ ಇಲ್ಲಿ ಹೇಳಿದ ನೈಮಿತ್ತಿಕ ನಿಯಮಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಇನ್ನು ಮುಂದಿನ ವ್ಯವಹಾರ ನಡಾಯಿಸುತ್ತಿರಬೇಕು. ಸದ್ಯದ ಆರ್ಥಿಕ ಗಂಡಾಂತರದ ಸಂದರ್ಭ ಕಳೆದು ಹೋಯಿತೆಂದರೆ ಮತ್ತೆ ಮೊದಲಿನ ನಿಯಮ ದಂತೆಯೆ ಪರಸ್ಪರರ ವ್ಯವಹಾರ ನಡಾಗಬಹುದು.

ನಿಯಮಗಳು

೧. ಹತ್ತಕ್ಕಿಂತ ಕಡಿಮೆ ಪ್ರತಿಗಳನ್ನು ತರಿಸಿಕೊಳ್ಳುವ ಏಜಂಟರಿಗೆ ಪುಕ್ಕಟೆ ಪ್ರತಿ ಸಿಕ್ಕಲಾರದು. ಮಾರದೆ ಉಳಿದ ಪ್ರತಿಗಳನ್ನು ಮರಳಿತೆಗೆದುಕೊಳ್ಳುವುದಿಲ್ಲ. ಆದುದರಿಂದ ತಮಗೆ ಖಂಡಿತ ಎಷ್ಟು ಬೇಕಾಗುವುವೊ ಅಷ್ಟೇ ಪ್ರತಿಗಳನ್ನು ಏಜಂಟರು ತರಿಸಿಕೊಳ್ಳಬೇಕು.

೨. ಹತ್ತಕ್ಕಿಂತ ಕಡಿಮೆ ಪ್ರತಿಗಳನ್ನು ತಕ್ಕೊಳ್ಳುವವರು ತಾವು ತೆಗೆದುಕೊಳ್ಳುವ ಪ್ರತಿಗಳ ಬೆಲೆಯನ್ನು—ಕಮಿಶನ್ ಮುರಿದುಕೊಂಡು—ಮುಂಗಡ ಕಳುಹಬೇಕು. ಮುಂಗಡ ಕಳುಹದ ಏಜಂಟರಿಗೆ ಪ್ರತಿಗಳನ್ನು ಕಳುಹುವುದಿಲ್ಲ.

೩. ಹತ್ತು, ಹತ್ತಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಏಜಂಟರಿಗೆ ಪುಕ್ಕಟೆ ಪ್ರತಿಯೊಂದನ್ನು ಕೊಡಲಾಗುವುದು. ಪ್ರತಿಗಳು ಹೆಚ್ಚಿಗೆ ಉಳಿಯದಂತೆ ಮೊದಲೆ ಎಚ್ಚರಿಕೆ ತೆಗೆದುಕೊಳ್ಳುವ ಹೊಣೆಗಾರಿಕೆ ಏಜಂಟರದು. ನಿಯಮಕ್ಕಿಂತ ಹೆಚ್ಚಿನ ಒಂದು ಪ್ರತಿಯನ್ನೂ ತಿರುಗಿ ತೆಗೆದುಕೊಳ್ಳಲಾರೆವು.

೪. ಹತ್ತಕ್ಕಿಂತ ಹೆಚ್ಚು ಪ್ರತಿ ತರಿಸಿ ಮಾರಾಟ ಮಾಡುವ ಏಜಂಟರು, ತಾವು ತರಿಸುವ ಪ್ರತಿಗಳ ಬೆಲೆಯ ಇಮ್ಮಡಿಯಷ್ಟು ಹಣವನ್ನು ಕಾರ್ಯಾಲಯದಲ್ಲಿ ಮುಂಗಡ ಹಣವನ್ನಾಗಿ ಇಡಲೆಬೇಕು.

೫. ಮುಂದಿನ ಸಂಚಿಕೆಯನ್ನು ಕಳುಹುವುದಕ್ಕೆ ೭ ದಿನಗಳ ಮೊದಲೆ ತಲ್ಪುವಂತೆ ಪ್ರತಿಯೊಬ್ಬ ಏಜಂಟನೂ ಕಾರ್ಯಾಲಯಕ್ಕೆ ಎಲ್ಲ ಹಣವನ್ನೂ ಕಳುಹಬೇಕು.

೬. ಹಣಕಳುಹುವವರು ಚಕ್ಕಿನ ರೂಪದಿಂದ ಕಳುಹಲಾಗದು. ಮನಿಯಾರ್ಡರಿನಿಂದಾಗಲಿ, ಪೋಸ್ಟಲ್ ಆರ್ಡರಿನಿಂದಾಗಲಿ ಕಳುಹಬೇಕು.

೭. ಕೆಲಕೆಲವು ಏಜಂಟರು ಕಾರ್ಯಾಲಯದೊಂದಿಗೆ ಮಾಡುವ ಪತ್ರವ್ಯವಹಾರದ ಪೆಚ್ಚವನ್ನು ನಮ್ಮ ಮೇಲೆ ಹೇರಲು ಅಪೇಕ್ಷಿಸುವರು. ಎಲ್ಲರೂ ಖಂಡಿತವಾಗಿ ನೆನಪಿನಲ್ಲಿ ಇಟ್ಟುಕೊಂಡಿರಬೇಕು : ಪತ್ರವ್ಯವಹಾರದ ಯಾವ ವೆಚ್ಚದ ಹೊಣೆಯನ್ನೂ ನಾವು ಹೊರಲಾರೆವು.

ವ್ಯವಸ್ಥಾಪಕ ಜಯಂತಿ, ಧಾರವಾಡ



ಶ್ರೀ. ಹುಯಿಲಗೋಳ ರಾಮರಾವ್. B Sc.

ಜಯಂತಿಯ ವಾಚಕರಿಗೆ ಇವರು ಅಪರಿಚಿತರಲ್ಲ. ಇವರ ಲೇಖನಗಳು ಕೆಲವು ಜಯಂತಿಯಲ್ಲಿ ಅಚ್ಚಾಗಿ ಜನಪ್ರಿಯವಾಗಿವೆ. ಗದುಗಿನ ನಿವಾಸಿಗಳಾದ ಇವರು ವಿಮಾನದಳದಲ್ಲಿ ಅಧಿಕಾರಿಗಳಾಗಿ ಸೇರಿ, ಮುಂಬಯಿಯಲ್ಲಿಯ ತಮ್ಮ ಮೊದಲಿನ ಶಿಕ್ಷಣವನ್ನೆಲ್ಲ ಪಡೆದುಕೊಂಡು, ಈಗ ಲಾಹೋರಿಗೆ ಹೊರಟಿದ್ದಾರೆ. ಅಚ್ಚಕಟ್ಟಿನ ಕನ್ನಡಿಗ ವೈಮಾನಿಕರಿವರು

ಲೆಫ್ಟ್‌ನೆಂಟ್ ಬಿ. ಆರ್. ಆಚಾರ್ಯ್

ಇವರು ಬಳ್ಳಾರಿ ಜಿಲ್ಲಾ ಹೊಸಪೇಟೆಯ ನಿವಾಸಿಗಳು. ಇದೀಗ ತಾನೇ ಕಾಲೇಜಿನ ವ್ಯಾಸಂಗ ಮುಗಿಸಿದ ಈ ಕನ್ನಡ ತರುಣ, ಹಿಂದುಸ್ತಾನ್ ಸರಕಾರ ಸೈನ್ಯದ ವೈದ್ಯದಳದಲ್ಲಿ ಸೇರಿಕೊಂಡಿದ್ದಾರೆ. ಶ್ರೀ. ಹುಯಿಲಗೊಳ ರಾಮರಾಯರು ಇವರಿಗೆ ಸಮೀಪದ ಆಪ್ತರು. ಅವರು ವೈಮಾನಿಕರು. ಇವರು ವೈದ್ಯರು. ಇಬ್ಬರಿಗೂ ಜಯಂತಿ ಗೆಲವನ್ನು ಕೋರುತ್ತದೆ.

ಶ್ರೀ. ಹುಯಿಲಗೋಳ

ಲೆ. ಬಿ. ಆರ್. ಆಚಾರ್ಯ

'ಜಯಂತಿ' ಸಣ್ಣಕತೆಗಳ ಮೇಲಾಟದ ನಿಯಮಗಳು

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ವಿಸ್ತಾರದಷ್ಟು, ಎಂದರೆ ಕೈಬರೆಹದಲ್ಲಿ ಫೂಲ್‌ಸ್ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ವಿಸ್ತಾರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನ್ನು ಬಿಟ್ಟ ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಬಾಗ ವಹಿಸಬಹುದು.

೫. "ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ" ಎಂದು ಕೈಬರೆಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು. ಆದರೆ ಎರಡೂ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಆಗಸ್ಟ್ ೩೦ನೆಯ ತಾರೀಖು. ಸಪ್ಟಂಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳ ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯುದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಆವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : 'ಜಯಂತಿ' ಧಾರವಾಡ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ವಿಮೆ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊಡಲನೆಯ ಮೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR

ತಲೆಗೂದಲು ಚೆನ್ನಾಗಿದ್ದರೆ ಚೆಲುವಿಗೊಂದು ಬೆಲೆ!

ಹಾಗೆ ಚೆನ್ನಾಗಿರುವುದೆಂದರೇನು?

ತಲೆಗೂದಲು ಕಪ್ಪಗೆ ಇರಬೇಕು, ದಟ್ಟವಾಗಿ, ನೀಳವಾಗಿ ಇರಬೇಕು!

ಹಾಗಾಗಬೇಕಾದರೆ 'ಮುಕುಲ' ಉಪಯೋಗಿಸಿರಿ!

ತರುಣ-ತರುಣಿಯರು ಬರಿಯ ಕಣ್ಣು-ಮೂಗು-ಬಣ್ಣಗಳಿಂದ ಚೆನ್ನಾಗಿದ್ದರೆ ಏನಾಯಿತು? ತಲೆಗೆ ಕೂದಲು ಚೆನ್ನಾಗಿರದಿದ್ದರೆ ಎಷ್ಟು ಚೆಲುವಿಕೆಯಿದ್ದರೂ ಅದು ವ್ಯರ್ಥವೆನಿಸುವುದು.

ಅದಕ್ಕಾಗಿಯೆ

ಶಕ್ತಿ
ನಿಯಮಿತ ಕಂಪನಿ
ಆಯುರ್ವೇದಾಶ್ರಮ ಫಾರ್ಮಸಿ ಲಿ: ಅಹಮ್ಮದನಗರ

ಆಯುರ್ವೇದ ತಜ್ಞರಿಂದ ಶುದ್ಧ ಕೊಬ್ಬರಿಯೆಣ್ಣೆಯಲ್ಲಿ ತಯಾರಿಸಲಾದ, 'ಮುಕುಲ' ಎಂಬ ಕೇಶವರ್ಧಕ ತೈಲವನ್ನು ಯಾವಾಗಲೂ ಬಳಸುತ್ತಿದ್ದರೆ, ನಿಮ್ಮ ಚೆಲುವಿಕೆ ಪೂರ್ಣತೆ ಪಡೆಯುವುದೆಂಬುದನ್ನು ಮರೆಯಬೇಡಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ., ಅಹಮ್ಮದನಗರ

ಕರ್ನಾಟಕ ಶಾಖೆ: ಸ್ಟೇಶನ್‌ರೋಡು, ಹುಬ್ಬಳ್ಳಿ.

rinted by V. Y. Jathar, B. Sc. Karnatak Printing Works, Dwr. Edited and published by M. G. Patil at Jayanti Office Dharwar.

ಪ್ರಜಾಮತ

ಜುಲೈ ೧೯೪೧

ವರ್ಷ ೮

ಸಂಚಿಕೆ

ನಾಲ್ಕು ಆಣೆ

ಎಚ್. ಪಿ. ಜೋತಿ ಬಿ. ಎ. ಅವರ ಸಣ್ಣಕತೆ, 'ಶ್ರೀರಂಗ'ರ ವ್ಯಂಗ್ಯಲೇಖನ, ಪಂಡಿತ ತಾರಾನಾಥರಾಯರ ವಿಚಾರಪ್ರಬಂಧ, ಡಾ. ಎಚ್. ಪಿ. ಪುಲಕರ್ಣಿಯವರ 'ಹೋಮಿಯೊಪಥಿ' ಲೇಖನ ಅಲ್ಲದೆ ಬೇರೆ ಲೇಖನ-ಕಥೆ-ಕವಿತೆಗಳು.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣೆ ಅಂಚೆವೆಚ್ಚ ಸೇರಿ ೩—೦—೦ ..... ವ್ಹಿ. ಪಿ. ಯಿಂದ ೩—೫—೦ ..... ಬಿಡಿಸಂಚಿಕೆಗೆ ೪ ಆಣೆ.

ಸಂಪಾದಕರು :

ಬೆಟಗೇರಿ ಕೃಷ್ಣಶರ್ಮರು ಪಾಟೀಲ ಮಾಧವರಾಯರು

೪ನೆಯ ವರ್ಷ	ಜುಲೈ ೧೯೪೧	೨ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಕಾತರ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ	೪೯
ಸಂಪಾದಕೀಯ	ಸಂಪಾದಕರು	೫೦
ಮಂಗನ ಮಲ್ಲಿನಾಥತನ	'ಮಲ್ಲಿನಾಥ'	೫೧
ಒದುಕಿಸುವ ಧರ್ಮ—ಬದುಕಿನ ಮರ್ಮ (ಪ್ರಬಂಧ) ..	ಪಂಡಿತ ತಾರಾನಾಥರಾಯರು	೫೩
ಕನ್ನಡಾಂಬೆಯ ವಿಜಯಯಾತ್ರೆ (ಹಾಡು)	ಶ್ರೀ. ಬೆಸಗಲ್ ರಾಮರಾಯರು, ಎಂ.ಎ., ಎಲ್.ಎಲ್.ಬಿ.	೫೬
ಕೊರಗದಿರೆಲೆ ಕಮಲ! (ಕವಿತೆ)	ಶ್ರೀ. 'ಶಂಕರಸುತ' ಬೈಲಹೊಂಗಲ	೫೬
ದೇವರ ಗುಡಿ (ಪ್ರೇಮಜಂಜರ ಕತೆ)	ಶ್ರೀ. ಪಿ. ಪಾರ್ಥಸಾರಥಿರಾಯರು	೫೭
ರೇಲ್ವೆ ಪ್ರವಾಸಿಕರ ಹಕ್ಕು-ಬಾಧ್ಯತೆಗಳು (ಪರಿಚಯಾತ್ಮಕ) ..	ಶ್ರೀ. ಬಿದರಕುಂದಿ ವೆಂಕಟರಾಯರು	೬೪
ಸಪ್ಪ ಪಿಡುಗು—ಪುಢಾರಿಗಳು (ವ್ಯಂಗ್ಯಲೇಖನ)	'ಶ್ರೀರಂಗ'	೬೭
ಗೆಳೆತನ (ಕವನ)	ಶ್ರೀ. ಎಂ. ಗೋಪಾಲಕೃಷ್ಣ ಅಡಿಗ	೬೯
ಆಶನಕ್ಕಾಗದ ಅಕ್ಷರಶಿಕ್ಷಣ (ಚರ್ಚಾತ್ಮಕ ಪ್ರಬಂಧ) ..	ಶ್ರೀ. ಹಳಪೇಟೆ ಚಿಂತಾಮಣಿರಾಯರು	೭೨
ದಿನಚರಿಯ ಕತೆ (ಸಣ್ಣಕತೆ)	ಶ್ರೀ. ಎಚ್. ಪಿ. ಜೋಶಿ, ಬಿ. ಎ.	೭೫
ಹೋಮಿಯೊಪಥಿ (ವೈದ್ಯಕ ವಿಜ್ಞಾನ)	ಡಾಕ್ಟರ್ ಎಚ್. ಪಿ. ಕುಲಕರ್ಣಿ, ಎಂ. ಬಿ. ಬಿ. ಎಸ್.	೭೯
ನಾನು ದೊಡ್ಡ ಮನುಷ್ಯನಾಗಲು (ಹರಟೆ)	ಶ್ರೀ. ಕರ್ನಮಡಕಲ ರಾಧಾಕೃಷ್ಣನ್, ಬೆಂಗಳೂರು	೮೧
ನನ್ನ ದಕ್ಷಿಣ ಹೈದರಾಬಾದಿನ ಯಾತ್ರೆ (ಪ್ರವಾಸಕಥೆ) ..	ಶ್ರೀ. ಎಚ್. ಎಸ್. ಪಾಟೀಲ, ಎಂ. ಎ., ಬಿ. ಕಾಮ್.	೮೫
ಪುಸ್ತಕ ವಿಮರ್ಶೆ	ಬೇರಬೇರೆ ವಿಮರ್ಶಕರು	೮೯
ಸಾದರಸ್ವೀಕಾರ	.. ..	೯೧
ನಗೀಗೆ ನೇವಿದ್ಯ	'ನಕಲಿಯ ನಾರಾಯಣಾಚಾರ್ಯ'	೯೨
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೯೩

ಪಯಣ

ಜುಲೈ
೧೯೮೦
ವರ್ಷ ೮
ಸಂಚಿಕೆ ೨

ಕಾತರ

ಲೀ. ಟಿ. ಎನ್. ಶ್ರೀನಿವಾಸಮೂರ್ತಿ, ಮೈಸೂರು

★

ಕಾಲಚಕ್ರ ಉರುಳುತಿದೆ,
ಜೀವನದಿಯು ಹರಿಯುತಿದೆ,
ಸಾವು ಕೂಗಿ ಕರೆಯುತಿದೆ
ಕಾಣದ ಕರೆ ಮರೆಯಲಿ !

ಆಸೆ ಘಾಸಿಯಾಗುತಿದೆ ;— ನಿ-
ರಾಸೆಯು ಬೆಸಲಾಗುತಿದೆ ;
ಆದರ್ಶವು ಉರುಳುತಿದೆ
ಮಣ್ಣ ಕೀಳು ಹುಡಿಯಲಿ !

ಉತ್ಸಾಹವು ಹಿಂಗುತಿದೆ ;
ನಿರುತ್ಸಾಹ ನೋಯುತಿದೆ ;
ಜೀವತಂತು ಮಿಡುಕುತಿದೆ
ಕೂನೆಯದೊಂದು ಉಸಿರಲಿ !

ಕೈಯ ಮಾಲೆ ಬಾಡುತಿದೆ ;
ಭಕ್ತಿಯೊರತೆ ಬತ್ತುತಿದೆ ;
ಗಾನದ ದನಿ ಕುಗ್ಗುತಿದೆ
ಕ್ಷಣ ಕ್ಷಣ ಕ್ಷಣದಲಿ !

ಅಂಜಲಿಯಲರಿವ ಮುನ್ನ,
ಕಡೆಯ ಉಸಿರನೆಳೆವ ಮುನ್ನ,
ಬಾರ, ಪೂಜೆಗೊಳಲು ಚೆನ್ನ !
ಬದುಕ ವ್ಯರ್ಥಗೊಳಿಸದೆ.

ಅಲರ ಮಾಲೆ ಬಾಡಿ, ಎನ್ನ
ಕೈಯಿನಿಳೆಯ ಸೇರ್ವ ಮುನ್ನ,
ಹಸ್ತಸ್ಪರ್ಶ ಪೊಂದಿ ನಿನ್ನ,
ಸಾರ್ಥಕತೆಯ ಗಳಿಸಲಿ !

ಶಿರದೊಳಾನಲೊಪ್ಪದಿರಲು,
ಕೊರಳೊಳಿಡಲು ಬೇಡದಿರಲು,
ಅಮೃತ ಹಸ್ತ ಸ್ಪರ್ಶದಲೇ
ಮುಕ್ತಿಪಥವ ಕಾಣಿಸೈ !

ಆಸೆಯ ಕಿಡಿ ಆರ್ವ ಮುನ್ನ,
ಸುತ್ತ ತಮವು ಕವಿವ ಮುನ್ನ,
ಶಾಸ್ತ್ರಿಕ್ಯವು ಕೊನೆವ ಮುನ್ನ
ಜ್ಯೋತಿಪಥವ ತೋರಿಸೈ !



ನಾವಿಂದು ಆಚರಿಸಬೇಕಾದ ಧರ್ಮ

ಭಾರತೀಯರ ಜೀವನದಲ್ಲಿ— ಅಧ್ಯಾತ್ಮಿಕ ಲಕ್ಷ್ಯವೊಂದರ ಕಡೆಗೇ ದೃಷ್ಟಿಇದ್ದುದರಿಂದ — ಲೌಕಿಕಬುದ್ಧಿಯೆ ಹಾಳಾಗಿ ಹೋಗಿದೆ. ಕನ್ನಡನಾಡಿನಲ್ಲಿಯಂತು ಇದು ಇನ್ನೂ ಹೆಚ್ಚು; ಏಕೆಂದರೆ ಅಧ್ಯಾತ್ಮಿಕ ಮತ-ಪಂಥಗಳ ಆಚಾರ್ಯಪುರುಷರೆಲ್ಲ ಬೆಳೆದು ಬಾಳಿದುದು ಇಲ್ಲಿಯೆ. ಈ ಮತ-ಪಂಥಗಳ ಬೆಳೆವಣಿಗೆಯು, ಮಾನವನ ಸಹಜಧರ್ಮವಾದ ಸಂಘಜೀವನವನ್ನು ಬಿಡಿಸಿ, ವೈಯಕ್ತಿಕಜೀವನದ ಕಡೆಗೆ ಜನತೆಯ ಮನಸ್ಸನ್ನೆಳೆಯಿತು. ಇದರಿಂದ ನಮ್ಮಲ್ಲಿ ಉಂಟಾದ ಪರಿಣಾಮವೇನು? ಸಮಾಜದಲ್ಲಿ ಅನೈಕ್ಯ, ನೆರೆಹೊರೆಯವರೊಂದಿಗೂ ಜಗಳಾಟ! ಬುದ್ಧಿವಂತರಾದ ತುಂಟರು ಕೆಲವರು ಸುಖದಿಂದ ಬಾಳುವುದು; ಅಂಧಶ್ರದ್ಧೆಯವರಾದ ಬಹುಜನರು ಕಷ್ಟದಲ್ಲಿ ತೊಳಲಾಡುವುದು! ಸ್ವಾರ್ಥಸಾಧನೆ ಬೆಳೆಯಿತು; ಪರಸ್ಪರ ಸಹಾನುಭೂತಿ ಇಲ್ಲದಂತಾಯಿತು! ಆದುದರಿಂದಲೆ ಪರದೇಶಗಳಿಂದ ಮುಷ್ಟಿಕುಂಬ ಬಂದ ಯಾವ ಜನಾಂಗದವರಿಗೂ ಭಾರತವು ತಲೆವಾಗಬೇಕಾಯಿತು. ಸಾವಿರಾರು ವರ್ಷಗಳಿಂದಲೂ ಒಂದಿಲ್ಲೊಂದು ಬಗೆಯ ಪರದಾಸ್ಯದಲ್ಲಿ ಕೆಳವಳಿದಿಂದ ಕುದಿಯಬೇಕಾಯಿತು.

ಈ ಮತ-ಪಂಥಗಳಿಗಿಂತ ಮೊದಲಿನ ಭಾರತೀಯರ ಧರ್ಮ ಎಂದರೆ ಶುದ್ಧ ವೈದಿಕಧರ್ಮ—ವೀರಧರ್ಮ— ವಾಗಿದ್ದಿತು. ಅದರಲ್ಲಿ ದಯೆ-ಸಹಾನುಭೂತಿಗಳಿಗೆ ಸಾಕಷ್ಟು ಸ್ಥಾನವಿದ್ದರೂ ಹುಚ್ಚು ಅಹಿಂಸೆಗೆ ಅಪ್ಪದವಿರಲಿಲ್ಲ. ಕೂಡಿ ಬದುಕಬೇಕೆಂಬ ಭಾವನೆಗೆ ಕಡಿಮೆಯಿರಲಿಲ್ಲವಾದರೂ ಕಾಳಿಗೆ ಮಾಡಬಹುದಾದ ಶಕ್ತಿಗೆ ಅರ್ಧಚಂದ್ರಪ್ರಯೋಗವಿರಲಿಲ್ಲ. ದುಷ್ಟತನ-ಪರಪೀಡಕತನಗಳಿಗೆ ಒಪ್ಪಿಗೆಯಿರಲಿಲ್ಲವಾದರೂ ಪ್ರಗತಿಯ ಆಕೆ-ಮಹತ್ತ್ವಾಕಾಂಕ್ಷೆಗಳಿಗೆ ತಡೆ ಇರಲಿಲ್ಲ. ದಿವ್ಯಜ್ಯೋತಿಯನ್ನು ಕಾಣುವುದು ಮುಖ್ಯಗುರಿಯಾಗಿದ್ದರೂ ಲೌಕಿಕಜೀವನವನ್ನು ಶೂನ್ಯೀಕರಿಸುತ್ತಿರಲಿಲ್ಲ. ಶಾಂತಿಯು ಅಪೇಕ್ಷೆ ಅತ್ಯಧಿಕವಾಗಿದ್ದರೂ ಅದರ ಸಿದ್ಧಿಗಾಗಿ ಹಲವು ಕ್ರಾಂತಿಗಳನ್ನು ಎಳೆದುಕೊಂಡು ಬಂದು, ಅದರಿಂದ ಪಾರಾಗುವ ಯೋಜನೆಗಳನ್ನು ಅಂದಿನವರು ಹುಡುಕುತ್ತಿದ್ದರು. ಈ ಮಾತುಗಳನ್ನೆಲ್ಲ ವೈದಿಕರ ಸ್ವಾರ್ಥನಾಶೂನ್ಯಗಳಲ್ಲಿಯೂ ಔಪನಿಷದಿಕರ ಉಪನಿಷನ್ಮಂತ್ರಗಳಲ್ಲಿಯೂ ನಾವು ಸ್ಪಷ್ಟವಾಗಿ ಕಾಣುವೆವು. ಉದಾಹರಣೆಗಾಗಿ ಅನೇಕರಿಗೆ ಚಿರಪರಿಚಿತವಾದ ಉಪನಿಷತ್ ಶಾಂತಿಮಂತ್ರವೊಂದನ್ನು ತೆಗೆದು ಕೊಳ್ಳೋಣ:

" ಓಂ, ಸಹನಾವವತು, ಸಹನೌಭುನಕ್ತು, ಸಹವೀರ್ಯಂ ಕರವಾವಹೈ, ತೇಜಸ್ವಿನಾವಧೀತಮಸ್ತು, ಮಾ ವಿದ್ವಿಷಾವಹೈ! ಓಂ ಶಾಂತಿಃ! ಶಾಂತಿಃ! ಶಾಂತಿಃ!"

ಈ ಮಂತ್ರದ ಅಭಿಪ್ರಾಯವೇನು? ಆ ಕಾಲದ ಗುರುವೊಬ್ಬ ತನ್ನ ಶಿಷ್ಯನಿಗೆ ಹೇಳಿದ ಸೂತ್ರರೂಪವಾದ ಮಾನವಧರ್ಮ — ಹಿರಿಯುದಾದ ಧರ್ಮ— ಈ ಕಿರುಮಾತುಗಳಲ್ಲಿ ಅಡಕವಾಗಿದೆ. 'ನಾವಿಬ್ಬರೂ ಕೂಡಿ ಬದುಕೋಣ, ಕೂಡಿ ಉಣ್ಣೋಣ, ಕೂಡಿಯೇ ವೀರ್ಯವತ್ತಾದ ಕಾರ್ಯ ಮಾಡೋಣ, ಇಬ್ಬರೂ ತೇಜಸ್ವಿಗಳಾಗಿರೋಣ, ಒಬ್ಬರನ್ನೊಬ್ಬರು ದ್ವೇಷಿಸದಿರೋಣ!' ಇದೇ ಈ ಮಂತ್ರದ ವಾಚ್ಯಾರ್ಥ. ನಮ್ಮ ಸಂಪ್ರದಾಯಪ್ರಿಯರು ಇವಕ್ಕೆ ಏನು ಅರ್ಥ ಹೇಳುವರೋ ಹೇಳಲಿಲ್ಲವೇಕೆ! ಸಮಾಜಶಾಸ್ತ್ರಜ್ಞರೆನಿಸಿಕೊಳ್ಳುವವರು ಇದರಲ್ಲಿಯ ಮರ್ಮವನ್ನು ಹೀಗೆಂದು ಸ್ಪಷ್ಟೀಕರಿಸುವರು:

"ನಾವು ಬದುಕಬೇಕಾಗಿದೆ; ಬದುಕುವುದಕ್ಕಾಗಿ ತಿನ್ನಬೇಕಾದುದು ಅವಶ್ಯ. ತಿಂದು ಸುಮ್ಮಗೆ ಬದ್ದುಕೊಂಡಿರುವುದು ಬೇಡ; ಏನಾದರೂ 'ವೀರ್ಯ'ವನ್ನು ಮಾಡುತ್ತಿರೋಣ! ಈ ವೀರಕಾರ್ಯದಿಂದ ನಮ್ಮ ತೇಜಸ್ಸನ್ನು ಬೆಳೆಯಿಸೋಣ! ತೇಜಸ್ವಿಗಳಾಗಿ, ಒಬ್ಬರೊಡನೊಬ್ಬರು ದ್ವೇಷದಿಂದ ಕಾದಾಡದೆ ಇರೋಣ! ಇದರಿಂದಲೇ ನಿಜವಾದ ಶಾಂತಿ ದೊರೆಯುವುದು!"

ಮಾನವನಿಗೆ ನಿಜವಾದ ಹಾರೈಕೆಯಿದು. ಈ ರೀತಿಯಲ್ಲಿ ಬಾಳಿದರೆ ವ್ಯಕ್ತಿಗೂ ಸಮೂಹಕ್ಕೂ ಶಾಂತಿ ಸಿಕ್ಕೇಸಿಕ್ಕುವುದು. ಇಂತಹ ಜೀವಂತ ಧರ್ಮವನ್ನು ದುರ್ಲಕ್ಷಿಸಿ:

"ಎಂಥಾದೋ ಈ ಸಂಸಾರಾ ಎಲೊ ಹರಿಯೆ!"
"ಭಂಡನಾವೆಸು ನಾನು ಸಂಸಾರದಿ...!"
"ಏನು ಬರುವುದೋ ಸಂಗಡೇನು ಬರುವುದೋ?"
"ಹಿಗ್ಗು ವೆಯಾಕೋ ಈ ವೇಡಕೆ?"
"ಎಂದಿಗಾದರೊಂದು ದಿನ ಸಾವು ತಪ್ಪದು!"

ಇತ್ಯಾದಿ ನಿರಾಶಾವಾದವನ್ನು ಹೆಚ್ಚಿಸುವ ಭಾವನೆಗಳ ಬೆನ್ನು ಹತ್ತಿತು ನಮ್ಮ ಜನ.

"ಆತ್ತ ಇತ್ತ ಯೋಗದಂತೆ ಹೆಳವನ ಮಾಡಿನ್ನ ತಂದೆ!"

ಎಂಬ ನಿಷ್ಕ್ರಿಯಾ ಭಾವಕ್ಕಾಗಿ ಆರೆಪಡತೊಡಗಿದೆವು ನಾವು.

"ಕುರ್ವನ್ನೇವೇಹ ಕರ್ಮಾಣಿ
"ಜಿಜೀವಿಷೇತ್ ಶತಂ ಸಮಾಃ"

ಎಂದರೆ 'ನಮಗೆ ನಮಗೆ ಉಚಿತವಾದ ಕಾರ್ಯ ಮಾಡುತ್ತ ನೂರು ವರ್ಷ ಬಾಳೋಣ' ಎಂದು ಹಾರೈಸುತ್ತಿದ್ದ ನನ್ನ ಅಶಾವಾದಿ ಜನತೆ 'ಕೈಯ ಬಡಬೇಡ ಕಂದಾ ಕರುಣಾಕರ ದೇವಾ, ಒಯ್ಯೋ ಬೇಗನೆ ನಿನ್ನ ಬಳಿಗೆ!' ಎಂದು ಜೋಲುಮೊಗದವರಾಗಿ ಅಳತೊದಗಿದೆವು. ಇಂತಹ ಹೇಡಿತನವು ಲೋಕದಲ್ಲಿ ಬದುಕಬೇಕಾಗಿದ್ದವರ ಧರ್ಮವೆನಿಸೀತೆ? ಅಂತಹದಲ್ಲವಾದುದರಿಂದಲೆ ಅದರ ಪರಿಣಾಮದ

(೫೫ ನೆಯ ಪುಟಕ್ಕೆ ಮುಂದುವರಿದಿದೆ)

೧. ಒಂದೇ ಬಣ್ಣ !

ಲಂಡನ್‌ನಿಂದ ಒಂದು ಸೋಜಿಗದ ಸುದ್ದಿ ಪ್ರಕಟವಾಗಿದೆ. ಒಂದು ಸಲ ಬಾಂಬಿನ ಹೊಡೆತದಿಂದ ಮುರಿದುಬಿದ್ದ ಒಂದು ಮನೆಯಿಂದ ಅನೇಕ ಜನರು ನಿರಾಶ್ರಿತರಾಗಿ ಹೊರಬಿದ್ದರು. ಅವರಲ್ಲಿ ಭಾರತೀಯರಾದ ಸರ್ ಹರಿಸಿಂಗ ಗೌರ ಎಂಬವರಿದ್ದರು. ಒಂದು ಹೊಟೆಲಿನಲ್ಲಿ 'ನಿಮ್ಮೇ ಟಿಯರಿಗೆ ಸ್ಥಾನವಿಲ್ಲ' ಎಂಬ ನೆಪದಿಂದ ಗೌರ ಇವರಿಗೆ ಜಾಗೆಯನ್ನು ನಿರಾಕರಿಸಿದರಂತೆ! ಪಾಪ! ಹೆಸರು 'ಗೌರ' ಆದರೂ, ಮುಖ ಕಪ್ಪುದೇಶದ್ದಲ್ಲವೆ? ಹಾಗಾದರೆ ಕಪ್ಪು ಮುಖದ ಸೈನಿಕರಿಗೆ ಬ್ರಿಟನದಲ್ಲಿ ಸ್ಥಾನ ಹೇಗೆ ದೊರೆಯುವುದು—ಎಂದು ಯಾರಾದರೂ ಕೇಳಬಹುದು, ಅದಕ್ಕೆ ಲೇಬರ್ (ಕೂಲಿಕಾರ) ಪಕ್ಷದ ಮಂತ್ರಿಗಳಾದ ಮೊರಿಸನ್‌ರು ಸಮಾಧಾನ ಹೇಳುತ್ತಾರೆ. 'ಸರಕಾರದ ದೃಷ್ಟಿಯಲ್ಲಿ ಬಣ್ಣಭೇದದ ನೀತಿಗೆ ಸ್ಥಾನವಿಲ್ಲ. ಆದರೆ ಹೊಟೆಲ್‌ದ ಮೇಲೆ ಸರಕಾರದ ಅಧಿಕಾರವಿಲ್ಲವಲ್ಲ'! ಅದಕ್ಕೆ ಮಂಗರಾಯನಲ್ಲೂ ಒಂದು ಸಮಾಧಾನವಿದೆ. ಲೇಬರ ಪಕ್ಷವಾಗಲಿ ಲಂಪಟಪಕ್ಷವಾಗಲಿ, ಮೊರಿಸನ್‌ರಾಗಲಿ, ಮಿಕ್ಕವರಾಗಲಿ-ಒಂದೇ ಜಾತಿಯವರದು ಒಂದೇ ಬಣ್ಣ, ಹೋಗಲಿ— ನಮಗೇಕೆ ಆ ಗೊಡವೆ? ಒಂದು ನೇಳೆ ಬೆಂಕಿಯಿಂದ ಮುರಿದು ಬಿದ್ದ ಮನೆಯೊಳಗಿಂದ ಹೊಗೆ ಕಸ್ಟಿ ಮುಖದಿಂದ ತಮ್ಮನನ್ನೆ ಹೊರಬಿದ್ದಲ್ಲಿ— ಅವನ ಗತಿ ಏನಾಗಬಹುದು ಎಂಬ ಮೋಜಿನ ಕಲ್ಪನೆ ಮಂಗರಾಯನಿಗೆ.

* * *

೨. ಮಂಗೋಪಾಯ

ದೇಶದಲ್ಲಿ ಅಲ್ಲಲ್ಲಿ ನಡೆವ ಜಾತೀಯ ಗಲಭೆಗಳಿಂದ ದಿಗ್ಭ್ರಾಂತನಾದ ವಾಚಕನೊಬ್ಬನು ಮಂಗರಾಯನಿಗೆ ಪೊರೆ ಇಟ್ಟಿದ್ದಾನೆ. ಎಲ್ಲರನ್ನೂ ಮೀರಿದ ಅನೇಕ ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ತೋರಿಸಬಲ್ಲ ಮಂಗರಾಯನು, ಈ ಪ್ರಶ್ನೆಯನ್ನೂ ಬಿಡಿಸಬಲ್ಲ—ಎಂದು ಈ ವಾಚಕನ ವಿಶ್ವಾಸ. ಆದರೇನು? ಮಂಗರಾಯನಿಗೆಯೆ ಈ ವಿಷಯದಲ್ಲಿ ಆತ್ಮವಿಶ್ವಾಸವಿಲ್ಲವೆಂಬ ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಯಾಕೆಂದರೆ ಇಂತಹ ಗಲಭೆಗಳ ಗೂಢವನ್ನೆ ಮಂಗರಾಯನಿಗೆ ತಿಳಿಯುವಂತಿಲ್ಲ. ಮಾರ್ಕೆಟಿನಲ್ಲಿ ಕಡಿದಾಡುವ ಈ ಮಾದರಿಗಳೆ ಜಾತಿಯ ಅಭಿಮಾನಿಗಳು ಎಂಬುದು ಮಂಗರಾಯನು ಮನಗಾಣದ ಮಾತಾಗಿದೆ. ಮನುಷ್ಯರಲ್ಲಿ ಹೊಡೆದಾಡುವ ದೊಂದು ವಿಶಿಷ್ಟಜಾತಿ ಇರಬಹುದೆಂದು ಮಂಗರಾಯನಿಗೆ ಸಂದೇಹ. ಏನೇ ಇರಲಿ— ಮಂಗರಾಯನದೊಂದು ಸಮ್ಯಸೂಚನೆ ಇದೆ: ಈ ಗಲಭೆಗಳಿಗೆ 'ಜಾತೀಯ' ಎಂಬ ಹೆಸರನ್ನೆ ಕೊಡಬಾರದು! ಆ ಮೇಲೆ ಕಡಿದಾಡುವವರಿಗೆ

ಸಣ್ಣ ಕತೆಗಾರರಿಗೆ

*

'ಜಯಂತಿ' ಸಣ್ಣ ಕತೆಯ ನೀಲಾಟದಲ್ಲಿ ಭಾಗವಹಿಸಬೇಕಾದ ಸುಸಂಧಿಯನ್ನು ಯಾರೂ ಕಳೆದುಕೊಳ್ಳಬೇಡಿರಿ!

ಉತ್ಸಾಹವೆ ಕುಗ್ಗಬಹುದಾಗಿದೆ. ಅಥವಾ— ಯಾರೂ ತನ್ನ ಜಾತಿಯನ್ನು ಹಣೆಯ ನೇಲೆ ಬರೆದು ಕೊಂಡು ತಿರುಗಬಾರದೆಂದಾಗಲಿ— ಅಥವಾ ಜಾತಿಯನ್ನು ಹುಟ್ಟಿಸಿದ ದೇವರು ಬೇಕಾದಲೆ ತಂತಮ್ಮೊಳಗೆ ಕಡಿದಾಡಿ ನಿರ್ಣಯವನ್ನು ಕೊಡಬೇಕೆಂದಾಗಲಿ—ಅಥವಾ ಕಡಿದಾಡುವ ಉತ್ಸಾಹವಿದ್ದವರು ಸೈನ್ಯಭರ್ತಿಯಲ್ಲಿ ಸೇರಬೇಕು ಎಂದಾಗಲಿ— ಅಥವಾ— ಜಾತ್ಯಭಿಮಾನಿಗಳಾದ ಮುಂದಾಳುಗಳ ವ್ಯವಸ್ಥೆಯುದ್ದವನ್ನೇರ್ಪಡಿಸ ಬೇಕೆಂದಾಗಲಿ—ಅಥವಾ—ಕ್ಷಮೆ ಇರಲಿ, ಈ ವಿಷಯದಲ್ಲಿ ಮಂಗರಾಯನೂ ಹರಾಶನಿದ್ದಾನೆಂದು ಮೊದಲೇ ಹೇಳಿಲ್ಲವೆ? ಜಾತಿಗೆ ತುತ್ತಾಗದ ಕೋತಿಯನ್ನು ಹೆಚ್ಚು ಕೆಣಕುವವೇಕೆ?

* * *

೩. ಸತ್ಯಕ್ಕೆ ಸಾವಿಲ್ಲ, ಸತ್ಯಾಗ್ರಹಕ್ಕೆ ಸುಖವಿಲ್ಲ !

ಉದಾಹರಣೆ— ಮುಂದುವರಿದದ್ದು :—

(೧) 'ಅಹಿಂಸಾದೊಳಗೆ ವಿಶ್ವಾಸ ಇದ್ದವರೆ ಸತ್ಯಾಗ್ರಹಕ್ಕೆ ಮುಂದಾಗ್ಬೇಕು ಅಂದಾರ ಮಹಾತ್ಮರು. ಅವರ ಮಾತು ಯೋಗ್ಯ ಆದ ಅಂದೆ. ಆದರೆ—ನಮ್ಮ ಕೋತ (ಕುವ್ವತ್) ನೋಡಿರಿ. ಮುಂಜಾನೆದ್ದರೆ ಹೆಂಡತಿ ಮ್ಯಾಲೆ ಹರಿಹಾಯೋ ಹುಚ್ಚಾಂಡೇಗಂಡರು ನಾವು— ನಮಗೇನು ಆ ಯೋಗ್ಯತಾ ಬಂದೀತು? ಸತ್ಯಕ್ಕೆ ಸಾವಿಲ್ಲ— ಏನಂತೀರಿ?'

(೨) 'ನೋಡಿರಿ— ಸರಕಾರದ ಯುದ್ಧ ಧೋರಣಾ ನನ್ನ ಮನಸಿಗೂ ಬಂದಿಲ್ಲ ಅಂದೆ.. ಧಾರಣೆ ಎಷ್ಟು ಏರಿವೆ ನೋಡಿರಿ.. ಅದಕ್ಕ ವಿಚಾರ ಮಾಡಿದೆ— ನಾವಂತೂ ಮಹಾತ್ಮರ ಶಿಷ್ಯರು. ಸತ್ಯಾಗ್ರಹ ಮಾಡೋದೇನು ತಪ್ಪಿದ್ದಲ್ಲ.. ಅದಕ್ಕ ಮತ್ತೆ ಅನುಕೂಲ ನೋಡಿಕೊಂಡು ಈಗೇ ಯಾಕ ಮಾಡ್ಬಾರದೂ ಅಂತ— ಅದಕೇ ಒಂದೆರಡು ಕಡೆ ವಸೂಲಿ ಉಳಿದಿದೆ—ಆದಾಯತ್ತು ಅಂದ್ರೆ— ಅಲ್ಲ— ಅಂಜಿಕೆಯಾಕೇ ಅಂತೀನಿ— ಸತ್ಯಕ್ಕೇನು ಸಾವಿಲ್ಲ!'

(೩) 'ಹೋದಸಾರೆ ಮಾತು ಬೇರೆ ಇದ್ದಿತರೀ.. ಜನಕ್ಕೆ ಜನಾನೇ ಜೀಲಿಗೆ ಹೋದರು..ಹೊರಗ ಬಂದಮ್ಯಾಲೆ ಆಷ್ಟೇನು ತ್ರಾಸ ಆಗಲಿಲ್ಲ..ಈ ಸಾರೆ ಮಾತು ಹಾಂಗಲ್ಲ..ಆದಕ್ಕೇ ಎಲ್ಲಾ ನ್ಯವಸ್ಥಾ ಗಟ್ಟಿಮಾಡಿ—ಆಲ್ಲ ನೋಡಿರಿ—ಎಷ್ಟು ನೆಟ್ಟಿಗಿದ್ದೀವಿ ಅಷ್ಟು ದೇಶಸೇವಾ ಗಟ್ಟಿ—ಯಾಕೆ ಒಪ್ಪಿಕೋ ಬಾರ್ದು? ಸತ್ಯಕ್ಕೇನು ಸಾವಿಲ್ಲಲ?'

* * *

೪. ಅಹಿಂಸೆಯ ಸಮೀಕರಣ

ಹಿಂದು-ಮುಸಲ್ಮಾನ್ ಗಲಭೆಯಲ್ಲಿ ಕಾಂಗ್ರೆಸ್ ಭಕ್ತರ ಕರ್ತವ್ಯವೇನು?.... ಎಂಬುದನ್ನು ಮಹಾತ್ಮರು ಸ್ಪಷ್ಟೀಕರಿಸಿದ್ದಾರೆ. ಅದರೆ ಕಾಂಗ್ರೆಸಿಗರು ಅಹಿಂಸಾನ್ಯಶ್ತಿಯಿಂದ ಪುಂಡರ ಹೊಡೆತಕ್ಕೆ



ನಾವಿಂದು ಆಚರಿಸಬೇಕಾದ ಧರ್ಮ

ಭಾರತೀಯರ ಜೀವನದಲ್ಲಿ— ಅಧ್ಯಾತ್ಮಿಕ ಲಕ್ಷ್ಯವೊಂದರ ಕಡೆಗೇ ದೃಷ್ಟಿಇದ್ದುದರಿಂದ — ಲೌಕಿಕಬುದ್ಧಿಯೆ ಹಾಳಾಗಿ ಹೋಗಿದೆ. ಕನ್ನಡನಾಡಿನಲ್ಲಿಯಂತು ಇದು ಇನ್ನೂ ಹೆಚ್ಚು; ಏಕೆಂದರೆ ಅಧ್ಯಾತ್ಮಿಕ ಮತ-ಪಂಥಗಳ ಆಚಾರ್ಯಪುರುಷರೆಲ್ಲ ಬೆಳೆದು ಬಾಳಿದುದು ಇಲ್ಲಿಯೆ. ಈ ಮತ-ಪಂಥಗಳ ಬೆಳವಣಿಗೆಯು, ಮಾನವನ ಸಹಜಧರ್ಮವಾದ ಸಂಘಜೀವನವನ್ನು ಬಿಡಿಸಿ, ವೈಯಕ್ತಿಕಜೀವನದ ಕಡೆಗೆ ಜನತೆಯ ಮನಸ್ಸನ್ನೆಳೆಯಿತು. ಇದರಿಂದ ನಮ್ಮಲ್ಲಿ ಉಂಟಾದ ಪರಿಣಾಮವೇನು? ಸಮಾಜದಲ್ಲಿ ಅನೈಕ್ಯ, ನೆರೆಹೊರೆಯವರೊಂದಿಗೂ ಜಗಳಾಟ! ಬುದ್ಧಿವಂತರಾದ ತುಂಟರು ಕೆಲವರು ಸುಖದಿಂದ ಬಾಳುವುದು; ಅಂಧಶ್ರದ್ಧೆಯವರಾದ ಬಹುಜನರು ಕಷ್ಟದಲ್ಲಿ ತೊಳಲಾಡುವುದು! ಸ್ವಾರ್ಥಸಾಧನೆ ಬೆಳೆಯಿತು; ಪರಸ್ಪರ ಸಹಾನುಭೂತಿ ಇಲ್ಲದಂತಾಯಿತು! ಆದುದರಿಂದಲೆ ಪರದೇಶಗಳಿಂದ ಮುಷ್ಟಿಕುಂಬಂದ ಯಾವ ಜನಾಂಗದವರಿಗೂ ಭಾರತವು ತಲೆವಾಗಬೇಕಾಯಿತು. ಸಾವಿರಾರು ವರ್ಷಗಳಿಂದಲೂ ಒಂದಿಲ್ಲೊಂದು ಬಗೆಯ ಪರದಾಸ್ಯದಲ್ಲಿ ಕಳವಳದಿಂದ ಕುದಿಯಬೇಕಾಯಿತು.

ಈ ಮತ-ಪಂಥಗಳಿಗಿಂತ ಮೊದಲಿನ ಭಾರತೀಯರ ಧರ್ಮ ಎಂದರೆ ಶುದ್ಧ ನೈದಿಕಧರ್ಮ—ವೀರಧರ್ಮ—ವಾಗಿದ್ದಿತು. ಅದರಲ್ಲಿ ದಯೆ-ಸಹಾನುಭೂತಿಗಳಿಗೆ ಸಾಕಷ್ಟು ಸ್ಥಾನವಿದ್ದರೂ ಹುಚ್ಚು ಅಹಿಂಸೆಗೆ ಅಪ್ಪದವಿರಲಿಲ್ಲ. ಕೂಡಿ ಬದುಕಬೇಕೆಂಬ ಭಾವನೆಗೆ ಕಡಿಮೆಯಿರಲಿಲ್ಲವಾದರೂ ಕಾಳೆಗ ಮಾಡಬಹುದಾದ ಶಕ್ತಿಗೆ ಅರ್ಧಚಂದ್ರಪ್ರಯೋಗವಿರಲಿಲ್ಲ. ಮುಸ್ಪತನ-ಪರಪೀಡಕತನಗಳಿಗೆ ಒಪ್ಪಿಗೆಯಿರಲಿಲ್ಲವಾದರೂ ಪ್ರಗತಿಯ ಆಶೆ-ಮಹತ್ತ್ವಾಕಾಂಕ್ಷೆಗಳಿಗೆ ಕಡೆ ಇರಲಿಲ್ಲ. ದಿವ್ಯಜ್ಯೋತಿಯನ್ನು ಕಾಣುವುದು ಮುಖ್ಯಗುರಿಯಾಗಿದ್ದರೂ ಲೌಕಿಕಜೀವನವನ್ನು ಶೂನ್ಯೀಕರಿಸುತ್ತಿರಲಿಲ್ಲ. ಶಾಂತಿಯ ಅಪೇಕ್ಷೆ ಅತ್ಯಧಿಕವಾಗಿದ್ದರೂ ಅದರ ಸಿದ್ಧಿಗಾಗಿ ಹಲವು ಕ್ರಾಂತಿಗಳನ್ನು ಎಳೆದುಕೊಂಡು ಬಂದು, ಅದರಿಂದ ಪಾರಾಗುವ ಯೋಜನೆಗಳನ್ನು ಅಂದಿನವರು ಹುಡುಕುತ್ತಿದ್ದರು. ಈ ಮಾತುಗಳನ್ನೆಲ್ಲ ವೈದಿಕರ ಪ್ರಾರ್ಥನಾಸೂತ್ರಗಳಲ್ಲಿಯೂ ಔಪನಿಷದಿಕರ ಉಪನಿಷನ್ಮಂತ್ರಗಳಲ್ಲಿಯೂ ನಾವು ಸ್ಪಷ್ಟವಾಗಿ ಕಾಣುವೆವು. ಉದಾಹರಣೆಗಾಗಿ ಅನೇಕರಿಗೆ ಚಿರಪರಿಚಿತವಾದ ಉಪನಿಷತ್ ಶಾಂತಿಮಂತ್ರವೊಂದನ್ನು ತೆಗೆದು ಕೊಳ್ಳೋಣ:

" ಓಂ, ಸಹನಾವವತು, ಸಹನೌಭುನಕ್ತು, ಸಹವೀರ್ಯಂ ಕರವಾವಹೈ, ತೇಜಸ್ವಿನಾವಧೀತಮಸ್ತು, ಮಾ ವಿದ್ವಿಷಾವಹೈ! ಓಂ ಶಾಂತಿಃ! ಶಾಂತಿಃ! ಶಾಂತಿಃ!"

ಈ ಮಂತ್ರದ ಅಭಿಪ್ರಾಯವೇನು? ಆ ಕಾಲದ ಗುರುವೊಬ್ಬ ತನ್ನ ಶಿಷ್ಯನಿಗೆ ಹೇಳಿದ ಸೂತ್ರರೂಪವಾದ ಮಾನವಧರ್ಮ — ಹಿರಿಯುದಾದ ಧರ್ಮ— ಈ ಕಿರುಮಾತುಗಳಲ್ಲಿ ಅಡಕವಾಗಿದೆ. 'ನಾವಿಬ್ಬರೂ ಕೂಡಿ ಬದುಕೋಣ, ಕೂಡಿ ಉಣ್ಣೋಣ, ಕೂಡಿಯೇ ವೀರ್ಯವತ್ತಾದ ಕಾರ್ಯ ಮಾಡೋಣ, ಇಬ್ಬರೂ ತೇಜಸ್ವಿಗಳಾಗಿರೋಣ, ಒಬ್ಬರನ್ನೊಬ್ಬರು ದ್ವೇಷಿಸದಿರೋಣ!' ಇವೇ ಈ ಮಂತ್ರದ ವಾಚ್ಯಾರ್ಥ. ನಮ್ಮ ಸಂಪ್ರದಾಯಪ್ರಿಯರು ಇದಕ್ಕೆ ಏನು ಅರ್ಥ ಹೇಳುವರೋ ಹೇಳಲೊಲ್ಲರೇಕೆ! ಸಮಾಜಶಾಸ್ತ್ರಜ್ಞರೆನಿಸಿಕೊಳ್ಳುವವರು ಇದರಲ್ಲಿಯ ಮರ್ಮವನ್ನು ಹೀಗೆಂದು ಸ್ಪಷ್ಟೀಕರಿಸುವರು:

"ನಾವು ಬದುಕಬೇಕಾಗಿದೆ; ಬದುಕುವುದಕ್ಕಾಗಿ ತಿನ್ನಬೇಕಾದುದು ಅವಶ್ಯ. ತಿಂದು ಸುಮ್ಮಗೆ ಬದ್ದುಕೊಂಡಿರುವುದು ಬೇಡ; ಏನಾದರೂ 'ವೀರ್ಯ'ವನ್ನು ಮಾಡುತ್ತಿರೋಣ! ಈ ವೀರಕಾರ್ಯದಿಂದ ನಮ್ಮ ತೇಜಸ್ಸನ್ನು ಬೆಳೆಯಿಸೋಣ! ತೇಜಸ್ವಿಗಳಾಗಿ, ಒಬ್ಬರೊಡನೊಬ್ಬರು ದ್ವೇಷದಿಂದ ಕಾದಾಡದೆ ಇರೋಣ! ಇದರಿಂದಲೇ ನಿಜವಾದ ಶಾಂತಿ ದೊರೆಯುವುದು!"

ಮಾನವನಿಗೆ ನಿಜವಾದ ಹಾರೈಕೆಯಿದು. ಈ ರೀತಿಯಲ್ಲಿ ಬಾಳಿದರೆ ವ್ಯಕ್ತಿಗೂ ಸಮೂಹಕ್ಕೂ ಶಾಂತಿ ಸಿಕ್ಕೇಸಿಕ್ಕುವುದು. ಇಂತಹ ಜೀವಂತ ಧರ್ಮವನ್ನು ದುರ್ಲಕ್ಷಿಸಿ:

"ಎಂಥಾದೋ ಈ ಸಂಸಾರಾ ಎಲೊ ಹರಿಯೆ!"
"ಭಂಡನಾವೆನು ನಾನು ಸಂಸಾರದಿ....!"
"ಏನು ಬರುವುದೋ ಸಂಗಡೇನು ಬರುವುದೋ?"
"ಹಿಗ್ಗು ಏಕಾಕೋ ಈ ದೇಹಕೆ?"
"ಎಂದಿಗಾದರೊಂದು ದಿನ ಸಾವು ತಪ್ಪದು!"

ಇತ್ಯಾದಿ ನಿರಾಶಾವಾದವನ್ನು ಹೆಚ್ಚಿಸುವ ಭಾವನೆಗಳ ಬೆನ್ನು ಹತ್ತಿತು ನಮ್ಮ ಜನ.

"ಅತ್ತ ಇತ್ತ ಹೋಗದಂತೆ ಹೆಳವನ ಮಾಡೆನ್ನ ತಂದೆ!"

ಎಂಬ ನಿಷ್ಕ್ರಿಯಾ ಭಾವಕ್ಕಾಗಿ ಆಶೆಪಡತೊಡಗಿದೆವು ನಾವು.

"ಕುರ್ವನ್ನೇವೇಹ ಕರ್ಮಾಣಿ
"ಜಿಜೀವಿಷೇತ್ ಶತಂ ಸಮಾಃ"

ಎಂದರೆ 'ನನಗೆ ನನಗೆ ಉಚಿತವಾದ ಕಾರ್ಯ ಮಾಡುತ್ತ ನೂರು ವರ್ಷ ಬಾಳೋಣ' ಎಂದು ಹಾರೈಸುತ್ತಿದ್ದ ನಮ್ಮ ಆಶಾವಾದಿ ಜನತೆ 'ಕೈಯ ಬಿಡಬೇಡ ಕಂದಾ ಕರುಣಾಕರ ದೇವಾ, ಒಯ್ಯೋ ಬೇಗನೆ ನಿನ್ನ ಬಳಿಗೆ!' ಎಂದು ಜೋಲುಮೊಗದವರಾಗಿ ಅಳತೊಡಗಿದೆವು. ಇಂತಹ ಹೇಡಿತನವು ಲೋಕದಲ್ಲಿ ಬದುಕಬೇಕಾಗಿದ್ದವರ ಧರ್ಮವೆನಿಸೀತೆ? ಅಂತಹದಲ್ಲವಾದುದರಿಂದಲೆ ಅದರ ಪರಿಣಾಮದ

(೫೫ ನೆಯ ಪುಟಕ್ಕೆ ಮುಂದುವರಿದಿದೆ)

೧. ಒಂದೇ ಬಣ್ಣ !

ಲಂಡನದಿಂದ ಒಂದು ಸೋಜಿಗದ ಸುದ್ದಿ ಪ್ರಕಟವಾಗಿದೆ. ಒಂದು ಸಲ ಬಾಂಬಿನ ಹೊಡೆತದಿಂದ ಮುರಿದುಬಿದ್ದ ಒಂದು ಮನೆಯಿಂದ ಅನೇಕ ಜನರು ನಿರಾಶ್ರಿತರಾಗಿ ಹೊರಬಿದ್ದರು. ಅವರಲ್ಲಿ ಭಾರತೀಯರಾದ ಸರ್ ಪರಿಸಿಂಗ್ ಗೌರ ಎಂಬವರಿದ್ದರು. ಒಂದು ಹೊಟೆಲಿನಲ್ಲಿ 'ವಿದೇಶೀಯರಿಗೆ ಸ್ಥಾನವಿಲ್ಲ' ಎಂಬ ನೆಪದಿಂದ ಗೌರ ಇವರಿಗೆ ಜಾಗೆಯನ್ನು ನಿರಾಕರಿಸಿದರಂತೆ! ಸಾಸ! ಹೆಸರು 'ಗೌರ' ಅದರೂ, ಮುಖ ಕಪ್ಪುದೇಶದ್ದಲ್ಲವೆ? ಹಾಗಾದರೆ ಕಪ್ಪು ಮುಖದ ಸೈನಿಕರಿಗೆ ಬ್ರಿಟನದಲ್ಲಿ ಸ್ಥಾನ ಹೇಗೆ ದೊರೆಯುವುದು—ಎಂದು ಯಾರಾದರೂ ಕೇಳಬಹುದು. ಅದಕ್ಕೆ ಲೇಬರ್ (ಕೂಲಿಕಾರ) ಪಕ್ಷದ ಮಂತ್ರಿಗಳಾದ ಮೊರಿಸನ್‌ರು ಸಮಾಧಾನ ಹೇಳುತ್ತಾರೆ. 'ಸರಕಾರದ ದೃಷ್ಟಿಯಲ್ಲಿ ಬಣ್ಣಭೇದದ ನೀತಿಗೆ ಸ್ಥಾನವಿಲ್ಲ. ಆದರೆ ಹೊಟೆಲ್‌ದ ಮೇಲೆ ಸರಕಾರದ ಅಧಿಕಾರವಿಲ್ಲವಲ್ಲ'! ಅದಕ್ಕೆ ಮುಂಗರಾಯನದೂ ಒಂದು ಸಮಾಧಾನವಿದೆ. ಲೇಬರ ಪಕ್ಷವಾಗಲಿ ಲಂಪಟಪಕ್ಷವಾಗಲಿ, ಮೊರಿಸನ್‌ರಾಗಲಿ, ಮಿಕ್ಕವರಾಗಲಿ-ಒಂದೇ ಜಾತಿಯವರದು ಒಂದೇ ಬಣ್ಣ, ಹೋಗಲಿ— ನಮಗೇಕೆ ಆ ಗೊಡವೆ? ಒಂದು ವೇಳೆ ಬೆಂಕಿಯಿಂದ ಮುರಿದು ಬಿದ್ದ ಮನೆಯೊಳಗಿಂದ ಹೊಗೆ ಕಪ್ಪಿಟ್ಟ ಮುಖದಿಂದ ತಮ್ಮವನೆ ಹೊರಬಿದ್ದರೆ— ಅವನ ಗತಿ ಏನಾಗಬಹುದು ಎಂಬ ಮೋಜಿನ ಕಲ್ಪನೆ ಮುಂಗರಾಯನಿಗೆ.

* * *

೨. ಮುಂಗೋಪಾಯ

ದೇಶದಲ್ಲಿ ಅಲ್ಲಲ್ಲಿ ನಡೆವ ಜಾತೀಯ ಗಲಭೆಗಳಿಂದ ದಿಗ್ಭ್ರಾಂತನಾದ ವಾಚಕನೊಬ್ಬನು ಮುಂಗರಾಯನಿಗೆ ಮೊರೆ ಇಟ್ಟಿದ್ದಾನೆ. ಎಲ್ಲರನ್ನೂ ಮಿಂಚಿದ ಅನೇಕ ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ತೋರಿಸಬಲ್ಲ ಮುಂಗರಾಯನು, ಈ ಪ್ರಶ್ನೆಯನ್ನೂ ಬಿಡಿಸಬಲ್ಲ—ಎಂದು ಈ ವಾಚಕನ ವಿಶ್ವಾಸ. ಆದರೇನು? ಮುಂಗರಾಯನಿಗೆಯೆ ಈ ವಿಷಯದಲ್ಲಿ ಆತ್ಮವಿಶ್ವಾಸವಿಲ್ಲವೆಂದು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಯಾಕೆಂದರೆ ಇಂತಹ ಗಲಭೆಗಳ ಗೂಢವೆ ಮುಂಗರಾಯನಿಗೆ ತಿಳಿಯುವಂತಿಲ್ಲ. ಮಾರ್ಕೆಟಿನಲ್ಲಿ ಕಡಿದಾಡುವ ಈ ಮಾದರಿಗಳೆ ಜಾತಿಯ ಅಭಿಮಾನಿಗಳು ಎಂಬುದು ಮುಂಗರಾಯನು ಮನಗಾಣದ ಮಾತಾಗಿದೆ. ಮನುಷ್ಯರಲ್ಲಿ ಹೊಡೆದಾಡುವುದೊಂದು ವಿಶಿಷ್ಟಜಾತಿ ಇರಬಹುದೆಂದು ಮುಂಗರಾಯನಿಗೆ ಸಂದೇಹ. ಏನೇ ಇರಲಿ— ಮುಂಗರಾಯನದೊಂದು ನಮ್ರಸೂಚನೆ ಇದೆ: ಈ ಗಲಭೆಗಳಿಗೆ 'ಜಾತೀಯ' ಎಂಬ ಹೆಸರನ್ನೆ ಕೊಡಬಾರದು! ಆ ಮೇಲೆ ಕಡಿದಾಡುವವರಿಗೆ

ಸಣ್ಣ ಕತೆಗಾರರಿಗೆ

*

'ಜಯಂತಿ' ಸಣ್ಣ ಕತೆಯ ಮೇಲಾಟದಲ್ಲಿ ಭಾಗವಹಿಸಬೇಕಾದ ಸುಸಂಧಿಯನ್ನು ಯಾವೂ ಕಳೆದುಕೊಳ್ಳಬೇಡಿರಿ!

ಉತ್ಸಾಹವೆ ಕುಗ್ಗಬಹುದಾಗಿದೆ. ಅಥವಾ— ಯಾರೂ ತಮ್ಮ ಜಾತಿಯನ್ನು ಹಣೆಯ ಮೇಲೆ ಬರೆಮುಕೂಂಡು ತಿರುಗಬಾರದೆಂದಾಗಲಿ— ಅಥವಾ ಜಾತಿಯನ್ನು ಹುಟ್ಟಿಸಿದ ದೇವರು ಬೇಕಾದರೆ ತಂತಮ್ಮೊಳಗೆ ಕಡಿದಾಡಿ ನಿರ್ಣಯವನ್ನು ಕೊಡಬೇಕೆಂದಾಗಲಿ—ಅಥವಾ ಕಡಿದಾಡುವ ಉತ್ಸಾಹವಿದ್ದವರು ಸೈನ್ಯಭರ್ತಿಯಲ್ಲಿ ಸೇರಬೇಕು ಎಂದಾಗಲಿ— ಅಥವಾ— ಜಾತ್ಯಭಿಮಾನಿಗಳಾದ ಮುಂದಾಳುಗಳ ವ್ಯವಸ್ಥೆಯುದ್ದವನ್ನೇರ್ಪಡಿಸ ಬೇಕೆಂದಾಗಲಿ—ಅಥವಾ—ಕ್ಷಮೆ ಇರಲಿ, ಈ ವಿಷಯದಲ್ಲಿ ಮುಂಗರಾಯನೂ ಹತಾಶನಿದ್ದಾನೆಂದು ಮೊದಲೇ ಹೇಳಿಲ್ಲವೆ? ಜಾತಿಗೆ ತುತ್ತಾಗದ ಕೋತಿಯನ್ನು ಹೆಚ್ಚು ಕೆಣಕುವದೇಕೆ?

* * *

೩. ಸತ್ಯಕ್ಕೆ ಸಾವಿಲ್ಲ, ಸತ್ಯಾಗ್ರಹಕ್ಕೆ ಸುಖವಿಲ್ಲ !

ಉದಾಹರಣೆ— ಮುಂದುವರಿದದ್ದು :—

(೧) 'ಅಹಿಂಸಾದೊಳಗೆ ವಿಶ್ವಾಸ ಇದ್ದವರೆ ಸತ್ಯಾಗ್ರಹಕ್ಕೆ ಮುಂದಾಗ್ಬೇಕು ಅಂದಾರ ಮಹಾತ್ಮರು. ಅವರ ಮಾತು ಯೋಗ್ಯ ಅದ ಅಂದೆ. ಆದರೆ—ನಮ್ಮ ಕೋತ (ಕುವ್ವತ್) ನೋಡಿರಿ. ಮುಂಜಾನೆದ್ದರೆ ಹೆಂಡತಿ ಮ್ಯಾಲೆ ಹರಿದಾಯೋ ಹುಚ್ಚುಂಡೇಗಂಡರು ನಾವು— ನಮಗೇನು ಅಯೋಗ್ಯತಾ ಬಂದೀತು? ಸತ್ಯಕ್ಕೆ ಸಾವಿಲ್ಲ— ಏನಂತೀರಿ?'

(೨) 'ನೋಡಿರಿ— ಸರಕಾರದ ಯುದ್ಧ ಭೋದನಾ ನನ್ನ ಮನಸಿಗೂ ಬಂದಿಲ್ಲ ಅಂದೆ.. ಧಾರಣೆ ಎಷ್ಟು ಏರಿವೆ ನೋಡಿರಿ.. ಅದಕ್ಕ ವಿಚಾರ ಮಾಡಿದೆ— ನಾನಂತೂ ಮಹಾತ್ಮರ ಶಿಷ್ಯರು. ಸತ್ಯಾಗ್ರಹ ಮಾಡೋದೇನು ತಪ್ಪಿದ್ದಲ್ಲ.. ಅದಕ್ಕ ಮತ್ತೆ ಅನುಕೂಲ ನೋಡಿಕೊಂಡು ಈಗೇ ಯಾಕ ಮಾಡ್ದಾರದೂ ಅಂತ— ಅದೇ ಒಂದೆರಡು ಕಡೆ ವಸೂಲಿ ಉಳಿದಿದೆ—ಆದಾಯ್ತು ಅಂದ್ರೆ— ಅಲ್ಲ— ಅಂಜಿಕೆಯಾಕೇ ಅಂತೀನಿ— ಸತ್ಯಕ್ಕೇನು ಸಾವಿಲ್ಲ!'

(೩) 'ಹೋದಸಾರೆ ಮಾತು ಬೇರೆ ಇದ್ದಿತನೀ.. ಜನಕ್ಕ ಜನಾನೇ ಜೇಲಿಗೆ ಹೋದವು..ಹೊರಗ ಬಂದಮ್ಯಾಲೆ ಅಷ್ಟೇನು ತ್ರಾಸ ಆಗಲಿಲ್ಲ..ಈ ಸಾರೆ ಮಾತು ಹಾಂಗಲ್ಲ..ಅದಕ್ಕೇ ಎಲ್ಲಾ ವ್ಯವಸ್ಥಾ ಗಟ್ಟಿಮಾಡಿ—ಅಲ್ಲ ನೋಡಿರಿ—ಎಷ್ಟು ನೆಟ್ಟಗಿದ್ದೀವಿ ಅಷ್ಟು ದೇಶಸೇವಾ ಗಟ್ಟಿ—ಯಾಕೆ ಒಪ್ಪಿಕೋ ಬಾರ್ದು? ಸತ್ಯಕ್ಕೇನು ಸಾವಿಲ್ಲಲ?'

* * *

೪. ಅಹಿಂಸೆಯ ಸಮೀಕರಣ

ಹಿಂದು-ಮುಸಲ್ಮಾನ್ ಗಲಭೆಯಲ್ಲಿ ಕಾಂಗ್ರೆಸ್ ಭಕ್ತರ ಕರ್ತವ್ಯವೇನು?.... ಎಂಬುವನ್ನು ಮಹಾತ್ಮರು ಸ್ಪಷ್ಟೀಕರಿಸಿದ್ದಾರೆ. ಆದರೆ ಕಾಂಗ್ರೆಸಿಗರು ಅಹಿಂಸಾವೃತ್ತಿಯಿಂದ ಪುಂಡರ ಹೊಡೆತಕ್ಕೆ



ಎಲ್ಲರೂ ಯಾಕೆ ಬಳಲುವದಿಲ್ಲ?

ಎಲ್ಲರ ಪ್ರಕೃತಿಯು ಒಂದೇ ಸನನೆ ಇರದ್ದರಿಂದ. ಆದರೂ ಬಿಸಿಲಿನ ತಾಪ, ಅಂಗೈ ಅಂಗಾಲಿನ ಉರಿವು, ಉರಿಯುವ ಉಚ್ಚಿ, ಹುಳಿಡರಿಕೆ, ಮೇಲಿಂದ ಮೇಲೆ ನೀರಡಿಕೆ, ನಿರುತ್ಸಾಹ, ದಣಿವು ಮುಂತಾದ ತೊಂದರೆಗಳು ಮೂಡಿದ ಕೂಡಲೇ ನೀವು ಸಾಕಷ್ಟು ನಿದ್ದೆ ಮಾಡುವದಿಲ್ಲ, ನೀವು ಬಹಳ ಶ್ರಮಪಡುವಿರಿ, ನಿಮ್ಮ ಆಹಾರವು ನಿಯಮಿತವಿಲ್ಲ-ಈ ಕಾರಣಗಳಿಂದಲೂ ಹೊಟ್ಟೆಯಲ್ಲಿ ಉಷ್ಣ ಹವೆಯು ಹೋಗುವದರಿಂದಲೂ ನಿಮ್ಮ ಸಚನೇಂದ್ರಿಯಗಳು ದಣಿದು ಮಂದವಾಗಿವೆಯೆಂದು ತಿಳಿಯಿರಿ. ಅವಕ್ಕೆ ಮೊದಲಿನಂತೆಯೇ ಕಸುವು ಕೊಡಲಿಕ್ಕೆ **ಪರ್ಲ ಕಾಢೆ**ಯನ್ನು ತೆಗೆದು ಕೊಳ್ಳಹತ್ತಿರಿ. ಮೈಯಲ್ಲಿಯ ಎಲ್ಲ ದಣಿವೂ ನಿರುತ್ಸಾಹವೂ ಕೂಡಲೇ ಬಿಟ್ಟುಹೋಗುವವು. ಶುದ್ಧ ಕಳಿಪದ್ದು ಕೆಂಪು ರಕ್ತ ಹರಿಯಹತ್ತುವದು. ಹೊಟ್ಟೆ ಹರಿಯುವಂತೆ ಹಸಿವೆ ಹತ್ತಿ ಉಂಡದ್ದೆಲ್ಲ ಕರಗಿ ಹೋಗುವದು. ಮೈಯಲ್ಲೆಲ್ಲ ಆನಂದ ಉತ್ಸಾಹ ತುಂಬಿ ಬಿಸಿಲು ಅಂದ ಕೂಡಲೇ ನಗೆ ಬರುವದು.

ಯಿಂದ ಬಿಸಿಲಿನ ಬಳಲಿಕೆ ಆಗದು

ವಿನಯದಿಂದ, ವಿಸ್ಮೃತವದನದಿಂದ ತಲೆ ಬಾಗಿಸಬೇಕೆಂಬ ಆ ಸ್ಪಷ್ಟೀಕರಣದಿಂದ ಕಾಂಗ್ರೆಸಿನ ಕಡುಭಕ್ತರು ಕೂಡ ಅಸಮಾಧಾನ ತಾಳಿದ್ದಾರೆ. ಈ ಅಸಮಾಧಾನ ಯಾಕೆ ಎಂಬುದು ಮುಂಗರಾಯನಿಗೆ ಸ್ಪಷ್ಟವಾಗಿಲ್ಲ. ಅಹಿಂಸೆಯು ತತ್ತ್ವವೆ ಇವರಿಗೆ ಸರಿಯಾಗಿ ತಿಳಿದಿರಲಿಕ್ಕಿಲ್ಲವೆ ?—ಛೆ! ಶಾಂತಂ ಪಾಪಂ! ವಾಯುವಿಗೆ ಉಸಿರಾಡಿಸಲು ಬರುವುದಿಲ್ಲ ಎನಬಹುದೆ? ಹಾಗಾದರೆ ಅಸಮಾಧಾನ ಯಾಕೆ? ಮುಂಗರಾಯನಿಗೆ ಕೂಡ ಮಹಾತ್ಮರ ಮಾತಿನ ಮರ್ಮ ತಿಳಿದಿದೆ. ಆದೆಂತೆನೆ: ವಾಚಕಜನನೇಜಯಾ, ಕೇಳು ವಂಥಾತ್ತನಾಗು. ಮುಸಲ್ಮಾನರಿಗೆ ತಾವು ಅಲ್ಪಸಂಖ್ಯಾಕರೆಂಬ ಮಾತಿನಾಗಿ ಹೆದರಿಕೆಯಲ್ಲವೆ? ಅಂತಹ ಹೆದರಿಕೆ ದಂಗೆಗೆ ಕಾರಣ. ಈ ಸಮಯ ದಲ್ಲಿ ಆ ದಾಸ ಅಹಿಂಸಾಭಕ್ತರೆಂಬವರಿದ್ದಾರೆಯೊ ಅಂತಹ ಮಹಾನುಭಾವರು, ಮುಸಲ್ಮಾನರ ಹೊಡೆತಕ್ಕೆ ತಲೆಬಾಗಿಸಿದರೆ ಸ್ವಲ್ಪಾವಧಿಯಲ್ಲಿಯೆ ಹಿಂದುಗಳ ಸಂಖ್ಯೆಯೂ ಮುಸಲ್ಮಾನ್ ಸಂಖ್ಯೆಗೆ ಇಳಿಯಬಹುದಲ್ಲವೆ? ಆಷ್ಟಾದ ಮೇಲೆ ಮುಸಲ್ಮಾನರ ಹೆದರಿಕೆಗೆ ಆಧಾರವೆ ಇಲ್ಲದಂತಾಗಬಹುದಲ್ಲವೆ? ಆರ್ಥಾತ್, ಅಷ್ಟು ಸಂಖ್ಯೆ ಜನರನ್ನೇ ಮಾತ್ರ ಮುಸಲ್ಮಾನರು ಹೊಡೆಯಬಹುದೆಂದು ನಾವು ಯಾಕೆ ತಿಳಿಯಬಾರದು? ಆದಕಾಗಿ ಅಹಿಂಸಾಮೂಲಕವಾಗಿ ಕಾಂಗ್ರೆಸಿಗರಲ್ಲಿ ಇಂತಹ ಹೃದಯವಿಕಾರ—ಚೇಂಜ್ ಆಫ್ ಹಾರ್ಟ್—ಅವಶ್ಯ—ಏನು—? ಕ್ಷಮಿಸಿರಿ—ವಿಚಾರಗೊಂದಲಕ್ಕೆ! ಅಹಿಂಸೆಯ ಗೂಢವು ಅಲ್ಪನು ತಿಗೆ ತಿಳಿಯುವುದೆಂತು?

ಇತಿಶ್ರೀ ಭವಿಷ್ಯೋತ್ತರ ಪುರಾಣೇ
ಕಲಹಕಾಂಡೇ ಅಹಿಂಸಾಧ್ಯಾಯಃ

* * *

೫. 'ಸಂಯುಕ್ತ' ಅಹಿಂಸೆ

'ಕಾಂಗ್ರೆಸಿನ ಸದಸ್ಯರಲ್ಲಿ ೧೦೦ ಕ್ಕೆ ೯೦ ರಷ್ಟು ಜನರಾದರೂ ಮಹಾತ್ಮಾ ಗಾಂಧಿಯವರ ವಿಚಾರಗಳನ್ನು ಅನುಸರಿಸಲು ಈ ಹೊತ್ತು ಸಿದ್ಧರಿಲ್ಲೆಂದು ಹೇಳಿದರೆ ತಪ್ಪಾಗದು. ಅನೇಕರು ಶ್ರೀ. ಮುನಸಿಯವರಂತೆ ಕಾಂಗ್ರೆಸ್ಸಿನಿಂದ ಹೊರಗೆ ಬೀಳಬೇಕಾಗುವುದು.. ವಿಚಾರಗಳ ಹೊಸ ತರಂಗಗಳನ್ನು ಎಬ್ಬಿಸಿದ್ದಕ್ಕಾಗಿ, ಶ್ರೀ. ಮುನಶಿಯವರನ್ನು ತುಂಬಾ ಅಭಿನಂದಿಸುತ್ತೇವೆ.'

ಎಚ್ಚರ! ವಾಚಕರೆ, ಜೋಕೆ! ಮೇಲಿನ ವಿಚಾರಗಳು, ಅಹಿಂಸಾತತ್ತ್ವದ ಅನಳನ್ನು ಕೆಣಕುವ ವಿಚಾರಗಳು. ಹಾಯ್! ಹಾಯ್! ಮಹಾತ್ಮರ ಮುಂದಾಳುತನಕ್ಕೆ ಧಕ್ಕೆಯನ್ನು ತಗಲಿಸಬಹುದಾದ ವಿಚಾರಗಳು ಮುಂಗತನದ ಒಡೆಯನ ವಿಚಾರಗಳಲ್ಲ. ಅಖಿಲ ಕರ್ನಾಟಕದ 'ಕಾಂಗ್ರೆಸ್‌ತನ'ದ ಸರ್ವಾಧಿಕಾರವನ್ನು ಹೊತ್ತ, 'ಸಂಯುಕ್ತತನ'ದಲ್ಲಿ ಒಂದೇ ಒಂದಾದ ಉಜ್ವಲ ರಾಷ್ಟ್ರೀಯ ದೈನಿಕವಾದ 'ಸಂಯುಕ್ತ ಕರ್ನಾಟಕ'ದ ಅಗ್ರ ಲೇಖನದಲ್ಲಿಯ ವಿಚಾರಗಳು! ಹೋಗಲಿ ಮುಂಗರಾಯನಿಗೊಂದು ಸಮಾಧಾನ. ೨೦ ವರ್ಷ ಮಹಾತ್ಮರ ಮುಂಗಾನುಸರಣ ಮಾಡಿ ಮಾಡಿ, ಕೊನೆಗೆ ಮುಂಗರಾಯನಿಗೆ ವಿಶಿಷ್ಟವಾದ ಮುಂಗತನದ ವಿಚಾರಗಳನ್ನೊಪ್ಪುವರಲ್ಲ ಇವರು ಎಂದು! ಶ್ರೀ. ಮುನಶಿಯವರನ್ನು ಯಾರೇ ಅಭಿನಂದಿಸಲಿ, ಈ ವಿಷಯದಲ್ಲಿ 'ವಿಚಾರತರಂಗ'ಗಳನ್ನೆಬ್ಬಿಸಿದ್ದಕ್ಕಾಗಿ ಮೊದಲ ಅಭಿನಂದನೆ ಮುಂಗರಾಯನಿಗೇ ಸಲ್ಲತಕ್ಕದ್ದು.

ಬದುಕಿಸುವ ಧರ್ಮ--ಬದುಕುವ ಮರ್ಮ

ಶ್ರೀ. ಸಂ. ತಾರಾನಾಥ

★

ಮೇಲಿನಿಂದ ಒತ್ತಿದ ಮುದ್ರಿಕೆಯೆಂದರೆ ಧರ್ಮವಲ್ಲ; ಒಳಗಿನಿಂದ ಸಹಜವಾಗಿ ಅರಳಿದ ಹೃದಯವಿಕಾಸವೆ ನಿಜವಾದ ಧರ್ಮ. ಅದರ ಶಾರೀರಿಕವಿ ಭಾಗಕ್ಕೂ ಆಧ್ಯಾತ್ಮಿಕ ವಿಕಾಸಕ್ಕೂ ವ್ಯಕ್ತಿ ಮತ್ತು ಸಮಾಜಗಳ ಪರಸ್ಪರಾನುಕೂಲತೆಗಳಿ ಜೀವಜೀವಾಳ! ಇದೇ ಎಲ್ಲ ಧರ್ಮಗಳ ತತ್ತ್ವ!

★

ಸಾಮಾನ್ಯವಾಗಿ 'ಬದುಕು' ಎಂದರೆ ನಮಗೆ ಅನ್ನ, ಬಟ್ಟೆ; ಇವು ಸರಿ ಹೋದುವು ಎಂದರೆ ಇರಲಿಕ್ಕೊಂದು ಆಶ್ರಯ; ಇದಾದ ಮೇಲೆ ಬೇಕಾದ್ದು ಹೆಂಡತಿ ಮಕ್ಕಳು. ರೂಢವಾದ ಬದುಕಿಗೆ ಸೇರಿದ ಸಂಗತಿಗಳು ಅಂದರೆ ಇವೇ ಅಲ್ಲವೆ? ಆದರೆ ಇವೆಲ್ಲವೂ ಬೇಕಾದ್ದು ಮುಖ್ಯ ಶರೀರಕ್ಕೆ ತಾನೆ? ಆ ಶರೀರವೇ ಚೆನ್ನಾಗಿಲ್ಲವಾದರೆ ಇವನ್ನು ಸಂಪಾದಿಸುವ ಬಗೆ ಯಾವುದು?

ಯೋಗ್ಯ ಆಹಾರ, ನಿದ್ರಾ, ಮೈಥುನಗಳಿಂದಲೇ ವ್ಯಕ್ತಿಯೂ, ಸಂತತಿಯೂ, ಸಮಾಜವೂ ಉಳಿಯುವುದು, ಬೆಳೆಯುವುದು. **ವ್ಯಕ್ತಿಗೂ ಸಮಾಜಕ್ಕೂ ಇವುಗಳ ಅನುಕೂಲತೆಯನ್ನು ಮೊದಲುಮಾಡಿಕೊಡುವ ಉಪಾಯವೇ** ನಿಜವಾದ **ಸಕಾರಣ ಧರ್ಮವು.** ಇದು ಮೊತ್ತಮೊದಲು ಶರೀರಕ್ಕೆ ಸೇರಿದ್ದು. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ಪಿಯರ ಪ್ರಸಿದ್ಧ ಮಾತು ಇದಕ್ಕಾಗಿಯೇ ನಿಂತಿದೆಯೆಂದು ತೋರುತ್ತದೆ. ಬದುಕಲಿಕ್ಕೆ ಇವು ಬೇಕು, ಇವಕ್ಕಾಗಿ ಶರೀರ ಬೇಕು. ಇದರ ಅವಸರಾವಶ್ಯಕತೆಗಳನ್ನು ವ್ಯಕ್ತಿ-ಸಮಾಜಇವೆರಡೂ ನಿರಂತರವಾಗಿ ಪೂರಯಿಸುವ ಕಡೆಯಲ್ಲಿ ಮಾತ್ರ ನಿಜಧರ್ಮವೂ ನೆಲಸಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದಲ್ಲವೆ?

ಇಂಥ ಅನುಕೂಲತೆಯ ಬಲದಿಂದ ಈ ಮೊನಲ ಧರ್ಮವು ಎಲ್ಲಿ ವಿರಾಜಿಸುತ್ತಿದೆಯೋ ಅಲ್ಲಿ ಮಾತ್ರ ಬುದ್ಧಿ-ಭಾವನೆಗಳಿಗೆ ಬಿಡುವು ಇರುತ್ತದೆ. ಆ ಬಲದಿಂದ ಶರೀರವು ಎಲ್ಲಿ ಸುಖವಾಗಿ ಇರುತ್ತದೋ, ಅದರಿಂದ ಎಲ್ಲಿ ಮನಸ್ಸು ಚಿಂತಾಭಯಗಳಿಂದ ದೂರವಾಗಿರುತ್ತದೋ ಅಲ್ಲಿ ತನುಮನಸ್ಸುಗಳಿಗೇ ಸಹಜ ಚೈತನ್ಯವಿರುತ್ತದೆ. **ಆ ಚೈತನ್ಯದ ಬಸಿಯಿಂದ ಎಲ್ಲಿ ವ್ಯಕ್ತಿತ್ವವು ಅರಳುತ್ತದೋ ಅಲ್ಲಿಯೇ ಆಧ್ಯಾತ್ಮಿಕ ಧರ್ಮಪುಷ್ಪ ಅರಳುತ್ತದೆ.** ಪುಷ್ಪಿಯುಳ್ಳ ಗಿಡವು ತನ್ನ ಬಲದಿಂದಲೇ ಬೆಳೆದು ಅರಳುತ್ತದೆ. ಅರಳುವದು ಅದರ ಸಹಜಗುಣ. ಆದರೆ ಅದು ಮುಖ್ಯವಾಗಿ ತನ್ನೊಳಗಣ ಬಲದಿಂದಲೇ ಅರಳುತ್ತದೆ, ಅಲ್ಲದೆ ಹೊರಗಿನ ಒತ್ತಾಯದಿಂದಲ್ಲ. ಒಳಗಿನ ಬಲಕ್ಕೆ ಹೊರಗಿನ ಅನುಕೂಲತೆಗಳು ಸಹಾಯಕವಾಗಿವೆ ಎಂಬುದು ನಿಜ; ಆದರೆ ಅವು ಅನುಕೂಲತೆಗಳು, ಒತ್ತಾಯಗಳಲ್ಲ....ಎಂಬದನ್ನು ಮಾತ್ರ ಮರೆಯಲಿಕ್ಕಾಗದು. ಪುಷ್ಪ ಮತ್ತದರ ಪರಿಸ್ಥಿತಿಗೆ ಹೇಗೆಂಥ ಸಂಬಂಧವಿದೆಯೋ ಅಂಥ ಸಂಬಂಧವೇ ವ್ಯಕ್ತಿಗೂ ಸಮಾಜಕ್ಕೂ ಇರಬೇಕು. ಆಗಲೇ ವ್ಯಕ್ತಿಗೆ ವಿಕಾಸ, ಸಂಘಕ್ಕೆ ಆ ವಿಕಾಸದ ಸಹಜ ಪರಿಮಳ—ಇವುಗಳ ಪ್ರಾಪ್ತಿಯಾಗುವದು. ಮತ್ತಲ್ಲಿ ಇರಬೇಕಾದದ್ದು ಅನುಕೂಲತೆ ವಿನಾ ಒತ್ತಾಯವಲ್ಲ.

ಸಾರಾಂಶ:—ಧರ್ಮವು ಮೇಲಿನಿಂದ ಒತ್ತಿದ ಮುದ್ರಿಕೆಯಲ್ಲ; ಒಳಗಿನಿಂದ ಅರಳಿದ ಹೃದಯವಿಕಾಸ. ಅದರ ಶಾರೀರಿಕ ವಿಭಾಗಕ್ಕೂ ಆಧ್ಯಾತ್ಮಿಕ ವಿಕಾಸಕ್ಕೂ ವ್ಯಕ್ತಿ-ಸಮಾಜಗಳ ಪರಸ್ಪರಾನುಕೂಲತೆಯೇ ಜೀವಜೀವಾಳ. ಇದೇ ಎಲ್ಲ ಧರ್ಮಗಳ ತತ್ತ್ವ, ಇದೇ ಎಲ್ಲ ಧರ್ಮಗಳ ಮೂಲ ಆಗಿರಬೇಕು—ಎಂದು ನುಡ್ಡಿಲಿ ನಿರ್ಣಯಿಸುತ್ತದೆ.

ಎಲ್ಲ ಧರ್ಮಗಳ ತತ್ತ್ವವೂ ಒಂದೇ

ಎಲ್ಲ ಧರ್ಮಗಳ ತತ್ತ್ವವನ್ನು ಒಂದೇ ಮಾತಿನಲ್ಲಿ ಹೇಳುವದಾದರೆ "ಜಗದ್ಧಿತಾಯ ಆತ್ಮನೋ ಮೋಕ್ಷಾಯ" ಎಂಬ ಗೀತಾವಾಕ್ಯವೇ ಸಾಕು. ತತ್ತ್ವವನ್ನು ವಿವೇಚಿಸಿದರೆ ಎಲ್ಲ ಧರ್ಮಗಳ ತತ್ತ್ವವೂ ಒಂದೇ. ಅದನ್ನು ಹೇಳಿದ ಜನರು ಬೇರೆ, ಭಾಷೆಗಳು ಬೇರೆ, ಗ್ರಂಥಗಳು ಬೇರೆ ಬೇರೆಯಾಗಿದ್ದರೂ ತತ್ತ್ವವು ಒಂದೇ. ಆ ತತ್ತ್ವವನ್ನು ಅರಿತು ಆಚರಿಸಿ ಮೈಗೂಡಿಸಿಕೊಳ್ಳಬೇಕೆಂಬುದೇ ಹಿಂದೂ,ಮುಸಲ್ಮಾನ್, ಕ್ರೈಸ್ತ, ಯಹೂದಿ ಇತ್ಯಾದಿ ಇತ್ಯಾದಿ ಎಲ್ಲ ಧರ್ಮಗಳ ಉದ್ದೇಶವಾಗಿದೆ.

ಎಂದಮೇಲೆ—ಎಲ್ಲ ಧರ್ಮಗಳೂ ಒಂದೇನೋ? ಅವುಗಳಲ್ಲಿ ಪರಸ್ಪರ ವ್ಯತ್ಯಾಸವಿಲ್ಲವೋ?—ಎಂಬ ಪ್ರಶ್ನೆಗಳು ಸಹಜವಾಗಿ ಎದ್ದು ನಿಲ್ಲಬಹುದು. ಇವುಗಳನ್ನು ಉತ್ತರಿಸಬೇಕಾದರೆ ಕೆಲವು ಮುಖ್ಯ ವಿಷಯಗಳನ್ನು ಸ್ಪಷ್ಟೀಕರಿಸುವದು ಅವಶ್ಯಕ. ಧರ್ಮಗಳು ಒಂದೇ ಉದ್ದಿಶ್ಯದಿಂದ, ಒಂದೇ ಆದರ್ಶದಿಂದ ಹುಟ್ಟಿದ್ದರೂ (೧) ಅವುಗಳು ಹುಟ್ಟಿದ ಸ್ಥಾನಗಳು ಬೇರೆ (೨) ಕಾಲಗಳು ಬೇರೆ (೩) ಅವುಗಳನ್ನು ಪ್ರಕಾಶಕ್ಕೆ ತಂದ ವ್ಯಕ್ತಿಗಳು ಬೇರೆ (೪) ಅಲ್ಲಲ್ಲಿಯ ಸಂಘಸ್ಥಿತಿಗಳು ಬೇರೆ (೫) ಅಲ್ಲಲ್ಲಿಯ ಜನರ ಸಂಸ್ಕಾರ ನಾಗರಿಕತೆಗಳು ಬೇರೆಯಷ್ಟೆ? ಧರ್ಮತತ್ತ್ವವು ವ್ಯಕ್ತವಾಗಬೇಕಾದರೆ, ಅದು ಈ ಐದು ಸ್ಥಿತಿಗಳನ್ನು ಹೊಂದಿಕೊಂಡೇ ಹೊರಡಬೇಕಲ್ಲವೆ? ತತ್ತ್ವವು ಎಷ್ಟೇ ಗಹನವಾಗಿರಲಿ, ಎಷ್ಟೇ ಸುಂದರವಾಗಿರಲಿ, ಅದು ಆಯಾ ದೇಶ, ಕಾಲ, ಪರಿಸ್ಥಿತಿ, ಜನಸಂಸ್ಕೃತಿಗೆ ಸುಲಭಗ್ರಾಹ್ಯವಾಗಿಲ್ಲವಾದರೆ, ಅದು ಸಾರ್ಥಕವಾಗದೆ ಅನರ್ಥಕವಾಗಿಯೇ ಹೋಗುವದು. ವ್ಯತ್ಯಾಸಗಳು ಈ ಅನಿತ್ಯ ಸ್ಥಿತಿ-ಪರಿಸ್ಥಿತಿಗಳಿಗೆ ಸ್ಪೋರಿಸಿಯೇ ಹೊರತು ನಿತ್ಯತತ್ತ್ವಕ್ಕಲ್ಲ.

ಸಮಾಜಕ್ಕಲ್ಲವೆ ಧರ್ಮಗಳನ್ನು ಹೇಳುವದು? ಜನರ ನಿತ್ಯ ಜೀವನದ ತುಚ್ಛಿ-ಪುಚ್ಛಿಗಾಗಿ ಅಲ್ಲವೇ ಅವು ಪ್ರಕಟವಾಗುವದು? ಆದರೆ ಎಲ್ಲ ಜನಾಂಗಗಳ ನಿತ್ಯಜೀವನವು ಒಂದೇ ರೀತಿಯಾಗಿದೆಯೋ? ಅವುಗಳ ರೂಢಿ-ಸಂಪ್ರದಾಯಗಳು ಒಂದೇ ತರದವಾಗಿರುತ್ತವೋ? ಅವಿರಲಿ—ಒಂದೇ ಒಂದು ಜನಾಂಗದಲ್ಲಿ ಯಾದರೂ ಎಲ್ಲ ಕಾಲಗಳಲ್ಲಿಯೂ ಇವು ಒಂದೇ ರೀತಿಯಾಗಿ ಇರುತ್ತವೋ? ಎಲ್ಲ ಜನಾಂಗಗಳ ಆಹಾರ ವ್ಯವಹಾರಗಳು ಸರಿಸಮಾನವಾಗಿರುತ್ತವೋ? ಅವರ ಸಾಂಘಿಕ ರಾಜಕೀಯ ಸ್ಥಿತಿ-ಗತಿಗಳು, ರೀತಿನೀತಿಗಳು ಒಂದೇಯಾಗಿರುತ್ತವೋ? ಎಂದಿಗೂ ಇಲ್ಲ! ನಮ್ಮ ಕಣ್ಣ ಮುಂದಿನ ನಮ್ಮ ಒಂದೇ ದೇಶದಲ್ಲಿ, ಕಳೆದ ಇಪ್ಪತ್ತೈದೇ ವರ್ಷಗಳಲ್ಲಿ ಆಗುತ್ತ ಹೋದ ಹಲವು ಮಾರ್ಪಾಟಗಳನ್ನು ನೋಡಿಕೊಳ್ಳೋಣ. ಅನ್ನ, ಬಟ್ಟೆ, ವ್ಯವಹಾರ, ಮದುವೆ, ಪ್ರಯಾಣಪದ್ಧತಿ, ರಾಜ್ಯನೀತಿ, ಇತರ ಎಷ್ಟೋ ಸ್ಥಿತಿ-ಗತಿಗಳು ಎಷ್ಟೊಂದು ಮಾರ್ಪಟ್ಟು ಹೋಗಲಿಲ್ಲ? ಎಷ್ಟೋ ವಿಷಯಗಳಲ್ಲಿ ನಂಬಲಾರದಷ್ಟು ಬದಲಾವಣೆಗಳೂ ಸಂಸ್ಕರಣಗಳೂ ಆಗಿಬಿಟ್ಟಿವೆಯಲ್ಲವೆ? ಒಂದೇ ಜನಾಂಗದಲ್ಲಿ ಕಾಲ, ಪರಿಸ್ಥಿತಿಯ ವ್ಯತ್ಯಾಸಗಳಿಂದ ಇಷ್ಟು ವ್ಯತ್ಯಾಸಗಳಾದರೆ, ಕಾಲಕಾಲದಲ್ಲಿಯೂ, ಜನಾಂಗ-ಜನಾಂಗದಲ್ಲಿಯೂ, ದೇಶ-ದೇಶದಲ್ಲಿಯೂ ಎಷ್ಟು ವ್ಯತ್ಯಾಸಗಳಿರಲಿಕ್ಕಿಲ್ಲ? ಈ ವ್ಯತ್ಯಾಸಗಳೆಲ್ಲವೂ ಅಲ್ಲಲ್ಲಿಯ ಜನರ ಸಂಕಲ್ಪಬಲದಿಂದ ಉಂಟಾಗುವಷ್ಟಲ್ಲ, ಪರಿಸ್ಥಿತಿಯ ಪ್ರಭಾವದಿಂದ ಉಂಟಾಗುವವು. ಪರಿಸ್ಥಿತಿ ವ್ಯತ್ಯಾಸದಿಂದ ಜನರ ಸ್ಥಿತಿ-ಗತಿ-ಗಮ್ಯಗಳು ಮಾರ್ಪಟ್ಟೇ ತೀರುತ್ತವೆ. **ಈ ವ್ಯತ್ಯಾಸಗಳು ಅನಿವಾರ್ಯವಾಗಿ ವಿಧವಿಧವಾಗಿ ಮಾರ್ಪಡುವ ಸ್ಥಿತಿ-ಪರಿಸ್ಥಿಗಳೊಡನೆ ಜೀವಿಯ ಜೀವಿತದ ಒತ್ತಾಯದಿಂದ, ಜೀವನೋದ್ಧಾರಕ್ಕಾಗಿಯೇ ಸಹಜವಾಗಿ ಹೊಂದಿಕೊಂಡು ನಡೆಯುವ ಬಗೆ. ಪರಿಸ್ಥಿತಿಯೊಡನೆ ಹೊಂದಲಾರದ, ಹೊಂದಿಕೊಳ್ಳದ ಜೀವಿಗೆ ಮುಂದಿನ ಹಾದಿ ಎಂದರೆ ಕ್ಷಯ-ಮರಣಗಳೇ ಸೈ!**

ಇಡೀ ವಿಶ್ವಪ್ರಕೃತಿಯೇ ತನ್ನ ಅನಾದಿ ಇತಿಹಾಸದ್ವಾರಾ ಮನುಷ್ಯನಿಗೆ ಕಲಿಸುವ ಪಾಠವಿದು. ಇದನ್ನು ಕಲಿಯದ ವ್ಯಕ್ತಿ-ಸಂಘಗಳೆರಡೂ ಮರಣದ ಮಡುವಿನಲ್ಲಿಯೆ ಸುಳಿದಾಡುತ್ತಿವೆ. ಇರಲಿ!

ಹೀಗೆ ಸದಾ ವ್ಯತ್ಯಾಸಗೊಳ್ಳುವ ಸ್ಥಿತಿ-ಗತಿ-ಪರಿಸ್ಥಿತಿಗಳಲ್ಲಿ ವ್ಯತ್ಯಾಸಾರ್ಹ ರೀತಿನೀತಿ ಸಂಪ್ರದಾಯಗಳೂ ಸಹಜವಾಗಿ ಇವೆ, ಅಪರಿಹಾರ್ಯವಾಗಿ ಇರಲೇಬೇಕು. ಆಯಾ ಕೆಲಸಕ್ಕೆ ತಕ್ಕಂತೆ ಇವುಗಳಲ್ಲೊಂದು ಯೋಗ್ಯತೆಯೂ ಇರಬಹುದು. ಆದರೆ ಇವೂ ನಿತ್ಯ, ಸರ್ವವ್ಯಾಪ್ತ "ಜಗದ್ಧಿತಾಯ ಆತ್ಮನೋಭೋಕ್ಷಾಯ" ಎಂದು ಭಾವಿಸಿಕೊಂಡು ವರ್ತಿಸಲಿಕ್ಕಾಗುವುದಿಲ್ಲ. ಕಾಲಬಾಹ್ಯ, ಸ್ಥಾನಬಾಹ್ಯವಾದದ್ದಿಲ್ಲವೂ ಎಂಜಲೇ ಅಲ್ಲವೇ? ಕೊಳೆಯೇ ಅಲ್ಲವೆ? ಎಲೆಯೊಳಗಿನ ಅನ್ನ ಆಹಾರವೇ. ಅಲ್ಲಿಂದ ಸ್ಥಾನ-ಬಾಹ್ಯವಾದ ಅಗುಳೋ? ಎಂಜಲು ಅಲ್ಲವೇ? ಅದನ್ನು ತಿಂದು ಬದುಕುವವರು, ಅದನ್ನು ತಿನ್ನಲಿಕ್ಕೆ ಜೀವಿಸುವವರು ಹುಳುಗಳು, ನೊಣಗಳು. ದ್ವಿಪಾದಿಗಳು, ಅಲ್ಲದೆ, ಪ್ರಬುದ್ಧ ಮಾನವ ಜೀವಿಗಳೆಂದು ಭಾವಿಸಲಿಕ್ಕಾಗುವದಿಲ್ಲ. **ಧರ್ಮ ಜೀವನಕ್ಕೆ ಅನಾದಿ ಸತ್ಯ-ಸತ್ತ್ವವೇ ಅವಶ್ಯಕವಲ್ಲದೆ, ಹಳೆಯ ಕೊಳೆಯಲ್ಲ.**

ಕೊಳೆಯುಂಡು ಕೊಳೆಯಲ್ಲಿಯೇ ತೆವಳುವವರು ಸಂಘ-ವೈರಿಗಳು. ಜೀವನದ ಗುಣದಿಂದಲೇ ಕ್ರಿಮಿಗಳು ಸಂಘ ವೈರಿಗಳು. ಹಾಗೆ ಜೀವಿಸುವವರ ಅವಿವೇಕವು, ಎಲ್ಲ ಧರ್ಮಗಳ ತಿರುಳಾದ ಸ್ವತಂತ್ರ ಶಾಶ್ವತ ಭಾಗವನ್ನು ಅವುಗಳ ಅನಿತ್ಯ ದೇಶ-ಕಾಲಾಶ್ರಿತ ಉಪಾಯಗಳಿಂದ ನಾಶಮಾಡುತ್ತಿದೆ. ಅಂಥವರ ಧರ್ಮವು ಜ್ಞಾನದಲ್ಲಿಲ್ಲ, ವಿಶ್ವಹಿತದಲ್ಲಿಲ್ಲ; ದುರಭಿಮಾನದಲ್ಲಿದೆ.

ಯುರೋಪಿನ ಯುದ್ಧಕ್ಕೇ ಆಗಲಿ, ಇಂಡಿಯದ ಹಿಂದೂ-ಮುಸಲ್ಮಾನರ ಜಗಳ-ಜೊಂಬಗಳಿಗೇ ಆಗಲಿ ಇಂಥ ಅವಿವೇಕವೇ ಕಾರಣ. ಧರ್ಮದ ಹೆಸರಿನಿಂದ ಧರ್ಮದ ತಿರುಳಿಗೇ ತೂತು ಹಾಕುವ ಮನೋಗತಿಗೆ 'ಧರ್ಮ' ಎಂದು ಯಾರಾದರೂ ಒಪ್ಪಿಕೊಂಡಾರು?

ಎಲ್ಲ ಮತಧರ್ಮಗಳ ಒಂದೇ ಒಂದು ನಿತ್ಯಭಾಗವನ್ನು ಪುನರುಜ್ಜೀವಿಸುವದೇ ಸಪೇತುಕ ಸಾರ್ವತ್ರಿಕ ಸಂಸ್ಕರಣವೇ ಹೊರತಾಗಿ, ಧರ್ಮಗಳ ಗುಣ ಸುಟ್ಟು ಹೆಣದ ಪೂಜೆ ಮಾಡುವದಲ್ಲ. ಮತಧರ್ಮಗಳ ದೇಶ-ಕಾಲ-ಜನ ಪರಾಧೀನ ಭಾಗಗಳು, ಅದರ ಸಾರ್ವತ್ರಿಕ ಶಾಶ್ವತ ಭಾಗಕ್ಕೆ ಅಧೀನ ಮತ್ತು ಅನುಕೂಲವಾಗಿಯೇ ಇರಬೇಕು, ಅಲ್ಲದೆ ಬಾಲವು ತಲೆಯನ್ನೇ ಹಿಸುಕಿ ಕೊಲ್ಲಬಾರದು.

(೫೦ ನೆಯ ಪುಟದಿಂದ ಮುಂದುವರಿದದ್ದು)

ಕಹಿಯನ್ನು ಕ್ಷಣಕ್ಷಣಕ್ಕೆ ನಮಗೆ ಉಣ್ಣಬೇಕಾಯಿತು. ಅಸ್ತಿಕ್ಯಭಾವ ನಮ್ಮ ಜನರಿಂದ ದೂರವಾಗಬೇಕೆಂದು ನಮ್ಮ ಇದುವರೆಗಿನ ಹೇಳಿಕೆಯ ಅಭಿಪ್ರಾಯವೆಂದು ಯಾರೂ ತಿಳಿಯಲಾಗದು. ಪೌರುಷ ಎಲ್ಲಿಯ ವರೆಗೆ ಕಾರ್ಯಮಾಡಬಹುದೆಂಬುದನ್ನು ಪ್ರಯೋಗಮಾಡಿ ನೋಡಿದೆ, ಒಮ್ಮೆಲೆ ದೇವರಿಗೆ ಕಕ್ಕೆ ಬೀಳಲಿಕ್ಕೆಹೋಗುವ ಅಸಾಹಾಯ್ಯ ಆಸ್ತಿಕ್ಯಭಾವ ಬೇಕಾಗಿಲ್ಲವಿಪ್ಪೆ! ಮಧ್ಯಕಾಲದಲ್ಲಿ ನಮ್ಮನಾಡಿನಲ್ಲಿ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಪೌರುಷದಿಂದ ಬಾಳಿದವರ ಬೀವನವನ್ನು ವಿಶ್ಲೇಷಿಸಿ ನೋಡಿದರೆ, ಈ ಮತ-ಪಂಥಗಳು ಹೇಳುತ್ತಲಿರುವ 'ದೀನ ನಾನು' ವಾದವು ಎಲ್ಲಿಯೂ ಕಾಣುವುದಿಲ್ಲ. ಇಂದು ಕೂಡ ನಾವು ವೀರರಾಗಿ ಮನುಷ್ಯರಂತೆ ಬಾಳಬೇಕಾದರೆ ಈ 'ದೀನ ನಾನು' ವಾದವನ್ನು ಗಡಿ ದಾಟಿಸದಿದ್ದರೆ ಗತಿಯಿಲ್ಲ.

ಈಗ ನಾವು ಎಂತಹ ಕಾಲದಲ್ಲಿ ಬದುಕಿದ್ದೇವೆ ಎಂಬುದರ ಕಡೆಗೆ ಎಲ್ಲರ ಲಕ್ಷ್ಯವಿರಲಿ! ಹತ್ತುದಿಕ್ಕಿನಿಂದಲೂ ನಮಗೆ ಭಯ ಹೆದರಿಕೆ ಉಂಟು. ಬರಿಯೆ ಪ್ರಾರ್ಥನೆ ಈಗ ಏನು ಪ್ರಯೋಜನಕಾರಿಯಾಗುತ್ತಲಿದೆಯೆಂಬುದನ್ನು, ಪರದೇಶಗಳಲ್ಲಿಯ ಪುರೋಹಿತರು ಆಗಾಗ ಮಾಡುತ್ತಿರುವ ಪ್ರಾರ್ಥನೆಗಳ ಪರಿಣಾಮಗಳಿಂದ ನಾವು ಪ್ರತ್ಯಕ್ಷ ಕಾಣುತ್ತಿದ್ದೇವೆ. ಆದುದರಿಂದಲೆ

'ನಾನ್ಯಥಾ ಶರಣಂ ನಾಸ್ತಿ
ತ್ವಮೇವ ಶರಣಂ ಮಮ!'

ಎಂಬ ಇದುವರೆಗಿನ ನಮ್ಮ ಪೌರಾಣಿಕ ಪ್ರಾರ್ಥನೆಯಿಂದ ನಮ್ಮ ಮನಸ್ಸನ್ನು ಈಗ ಕೆತ್ತ ಹಾಕೋಣ!

'ಸಂಗಚ್ಛಧ್ವಂ ಸಂವದಧ್ವಂ'

ಎಂಬ ಔಪನಿಷದಿಕ ಸಹಕಾರ ಮಂತ್ರದ ಕಡೆಗೂ

'ಉತ್ತಿಷ್ಠತ, ಜಾಗೃತ,
ಪ್ರಾಪ್ಯವರಾನ್ನಿಬೋಧತ!'

ಎಂಬ ವೈದಿಕ ಜಾಗೃತಿಮಂತ್ರದ ಕಡೆಗೂ ಮನಸ್ಸು-ಹೃದಯಗಳನ್ನು ಹಚ್ಚೋಣ! ಬಂದ ಕುತ್ತದಿಂದ ಪಾರಾಗಿ ಇಲ್ಲದ ಸ್ವಾಧೀನ ಜೀವನವನ್ನು ಸಂಪಾದಿಸೋಣ!

ಕನ್ನಡ ರಾಜ್ಯವನ್ನು ಎಂದೂ ಮರೆಯದಂತೆ ಕಟ್ಟಿ ಆಳಿದ ವೀರರೂ ಆಚಾರ್ಯರೂ ಅನುಸರಿಸಿದ ವೀರಧರ್ಮವಿದು! ಇದೇ ಧರ್ಮವನ್ನು ನಾವೂ ಇಂದು ಆಚರಿಸೋಣ!

—ಸಂಪಾದಕರು

ಆಪತ್ತಿನ ಅನುಕೂಲತೆ ಒಂದು ತಿಂಗಳು ಮುಂದೆ ಬಿದ್ದಿದೆ
ಅಚ್ಚಿನಲ್ಲಿದೆ! ● ತಯ್ಯಾರಾಗುತ್ತಲಿದೆ!!

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಕ್ರೌನ್ ಅಷ್ಟಪತ್ರದ ಸುಮಾರು ೩೫೦-೪೦೦ ಪುಟ

.....ಬರೆದವರು : ಶ್ರೀರಂಗ'.....

ವಿ. ಸೂ.—

ಅನಿವಾರ್ಯ ಕಾರಣಗಳಿಗಾಗಿ ಪುಸ್ತಕದ ಪ್ರಕಟನೆಯನ್ನು ಆಗಸ್ಟದ ವರೆಗೆ ಮುಂದೆ ಹಾಕಲಾಗಿದೆ. ಸಪಲತ್ತಿನ ಅವಧಿಯನ್ನು ಮುಂದೆ ಹಾಕಿದೆ.

ಜುಲೈ ೧೫ ರ ಒಳಗಾಗಿ ಗ್ರಂಥಕರ್ತರಿಗೆ
[ಪ್ರೊ. ಆರ್. ವಿ. ಜಾಗೀರದಾರ, ಎಂ. ಎ. (ಲಂಡನ್)
ಕರ್ನಾಟಕ ಕಾಲೇಜ ಧಾರವಾಡ.]

೧—೦—೦ ಮುಂಗಡ ಕಳುಹಿಸುವವರಿಗೆ

ಸಾದಾ ಪ್ರತಿ ೨-೪-೦ (ಅಂಚೆ ವೆಚ್ಚ ಸೇರಿ)
ಕ್ಯಾಲಿಕೋ ಪ್ರತಿ ೩-೦-೦ (ಅಂಚೆ ವೆಚ್ಚ ಸೇರಿ)

ಶರಣಸಂದೇಶ

(ವಾರಪತ್ರಿಕೆ)

★

ಸಂಪಾದಕರು :

ಶ್ರೀ. ಹರ್ಡೇಕರ್ ಮಂಜಪ್ಪನವರು

ಹಿಂದೂ ಸಂಘಟನೆಯ ಗುರಿಯನ್ನಿಟ್ಟುಕೊಂಡು ಯಶಸ್ವಿಯಾಗಿ ಕಾರ್ಯಮಾಡುತ್ತಿರುವ ಕನ್ನಡ ವೃತ್ತ-ಪತ್ರಿಕೆಯೆಂದರೆ ಇದೊಂದೆ. ದೇಶ-ವಿದೇಶದ ವರ್ತಮಾನಗಳನ್ನೂ ವಿಚಾರಪೂರ್ಣ-ಲೇಖನಗಳನ್ನೂ ಇದರಲ್ಲಿ ಓದಬಹುದು.

ವಾರ್ಷಿಕ ವರ್ಗಣಿ ಅಂಚೆಯ ವೆಚ್ಚ ಸೇರಿ ೩-೦-೦ ಗಳು.

' ಶರಣಸಂದೇಶ '

ಪೋಸ್ಟ್ : ಅಲಮಟ್ಟಿ, ಜಿಲ್ಲಾ ಧಾರವಾಡ.

ಕನ್ನಡಾಂಬೆಯ ವಿಜಯಯಾತ್ರೆ

★

ಶ್ರೀ. ಬೆನಗಲ್ ರಾಮರಾಯರು

ರಾಗ: ಹೋಯನಕಲ್ಯಾಣಿ–ರೂಪಕತಾಳ.

ಬೆಳಗಾಯಿತೇಳಯ್ಯ ಕಂದ— ಮೂಡಿ।
ತೊಳಗುವನಿನ-ನಿನ್ನ ಭಾಗ್ಯದ ಕಂದ ॥ಪ॥
ಚಲಿಪಿಲಿ ಗೀತೆಯ। ಬೆಳೆಯಿಸೆ ಖಗಕುಲ।
ಸುಳಿಯೆ ಸುಖಾನಿಲ। ತಿಳಿಯೆ ಗಗನತಲ ॥ಅ ಪ॥

ಹಿಂದಿನ ಚಿತ್ತದ ಕತ್ತಲೆ ಮರೆಸಿ।
ಮುಂದಿನುನ್ನತಿಯ ತಳಿರಂಕುರಿಸಿ ॥
ವಂದಿ ಮಾಗಧರ ನುತಿಯನುಸರಿಸಿ
ಬಂದಳು ಕನ್ನಡ ಜನಕುಲದರಸಿ। ॥೧॥

ತನ್ನ ಜನದ ಶುಭಯೋಗವ ನೋಡಿ।
ಮುನ್ನಿನ ಕೀರ್ತಿ ಸುಗಂಧವ ತೀಡಿ ॥
ಕನ್ನಡಾಂಬೆ ಬರಲಭಯವ ನೀಡಿ।
ಕಣ್ಣನೆ ಜೊಂಪಿಸಲೇಕಿದು ಮೋಡಿ? ॥೨॥

ನೇರಳೆ ಪಡೆಯೊಡವರೆ, ಜಯಭೇರಿ।
ಬಾರಿಸಿ, ಮಣಿಮಯ ರಥವನೆ ಏರಿ ॥
ಊರ ಸುತ್ತಿ ಕರೆಯಲು ಬಳಿಸಾರಿ।
ನೀರರಿಗೆಲ್ಲಿ ವಿರಾಮಕೆ ದಾರಿ? ॥೩॥

ಕೊರಗದಿರೆಲೆ ಕಮಲ!

ಶ್ರೀ 'ಶಂಕರಸುತ' ಬೈಲಹೊಂಗಲ

★

ಕೊರಗದಿರೆಲೆ ಕಮಲ, ಬರಲಿಹ ನೇಸರು
ಇರುಳ ಕಾವಳ ಹಣೆದಟ್ಟಿ;
ತೊರೆಯದಿರಾಶೆಯ ಸೈರಿಸು ಸೈರಿಸು!
ಬರುವ ಬೆಳಗ ನಂಬು ಗಟ್ಟಿ! ೧

ಇರುಳು ಹಗಲಿಗೆ ಗುರುತು, ಬರಲಾರದಾ ಹಗಲು—
ಇರುಳು ಇಲ್ಲದೆ ಇರುವಲ್ಲಿ!
ದುಃಖ ಸುಖಕೆ ಗುರುತು, ಸುಖ ಬರಲಾರದು—
ದುಃಖದ ನೆರೆಯಿರದಲ್ಲಿ! ೨

ನಂಬು ನಿನ್ನನೆ ನೀನು, ನಂದಿದ ನಗೆಯನು
ಅರಳಿಸು, ಉಲ್ಲಾಸದಿಂಡೆ!
ಸೂಸಲಿ ಬೇಗನೆ ಸೌಷವ ನಿನ್ನಯ
ನಗೆಮೊಗದರಳುಗಳಿಂದೆ! ೩

ಕೂಗುತಲಿವೆ ಕೋಳಿ 'ಬೆಳಗು ಬರುತಲಿದೆ
ಬಿಡುಬಿಡು ಹೆದರಿಕೆ!' ಎಂದು,
ಹಾಡುತಲಿವೆ ಹಕ್ಕಿ ಗೂಡುಗಳಿಂದೆದ್ದು
'ಬೂದಿತು ಬೆಳಗು ಏಳ' ಎಂದು. ೪

ಹಗಲುಗರತಿ ತನ್ನ ಸೊಗದಾಣ್ಮ ಬರುವುದ
ನೋಡುತ ನಗೆಮೊಗದಿಂದ
ನಾಚುತ ನಂತಿರಲಾಕೆಯ ಗಲ್ಲಕೆ
ಬಣ್ಣ ನೇರಿಸುತಂದದಿಂದ— ೫

ಬರುವನು ನೇಸರು, ತರುವನು ಲೋಕಕೆ
ಹೊಸದಿನ ಹೊಸಹುಮ್ಮಸವನು;
ನೋಡುವೆ ನೀನಂದು ಹೊಸಲೋಕ ತಾನೊಂದು
ಕಣ್ಮುಂದೆ ನಲಿದಾಡುವುದನು! ೬

ಸುಯ್ಯೆಂದು ಸುಳಿಗಾಳಿ ತೀಡುತ ಸೂರೆಯ
ಗೈವುದು ನಿನ್ನಾ ಸೌಸವವ!
ಹಾಡುತ ಗೀತ ಹಾರಾಡುತ ಬರುವುದು
ಕುಂಬ ಮುದ್ದಿಸೆ ನಿನ್ನ ಮೊಗವ! ೭

ಕೊರಗದಿರೆಲೆ ಕಮಲ, ಬರಲಿಹ ನೇಸರು
ಇರುಳ ಕಾವಳ ಹೊಡೆದಟ್ಟಿ!
ತೊರೆಯದಿರಾಶೆಯ ಸೈರಿಸು ಸೈರಿಸು!
ಬೆಳಗು ಬರುತಿದೆ ನಂಬು ಗಟ್ಟಿ! ೮

ದೇವರ ಗುಡಿ

(ಸಣ್ಣ ಕತೆಯೊಂದು)*

★

ಶ್ರೀ. ವಿ. ಪಾರ್ಥಸಾರಥಿರಾಯರು

೧

ಭಲೆ ಭಲೆ, ಮಾತೃಪ್ರೇಮವೆ, ನೀನೆ ಧನ್ಯ ಧನ್ಯ! ನಿನ್ನ ಹೊರತು ಜಗತ್ತಿನಲ್ಲಿ ಇನ್ನಾವ ಸಂಗತಿಗಳಿದ್ದರೂ ಅವೆಲ್ಲ ಟೊಳ್ಳು, ನಿಸ್ಸಾರ! ಮಾತೆಯ ಪ್ರೀತಿಯೆಂಬುದೆ ಸತ್ಯವಿದೆ, ಶಾಶ್ವತವಿದೆ, ಅಖಂಡವಿದೆ, ಅವಿರತವಿದೆ!

ಮೂರು ದಿನಗಳಿಂದಲೂ ಸುಖಿಯಾನ ಬಾಯಲ್ಲಿ ಅಗುಳು ಅನ್ನವಿಲ್ಲ, ಹನಿ ನೀರಿಲ್ಲ. ಎದುರಿನ ಹೊರಸಿನ ಮೇಲೆ ಆಕೆಯ ಉಸಿರೋ ಹೃದಯವೊ ಆದ ಮಗು 'ಜೀವನ' ಮಲಗಿ ಕೊಂಡಿದೆ; ಒಂದೆ ಸವನೆ ನರಳುತ್ತಲಿದೆ. ಈಗ ಮೂರು ದಿನಗಳಿಂದಲೂ ಮುಚ್ಚಿದ ಕಣ್ಣು ತೆರೆಯದೆ ಮಲಗಿದ ಮಗು—ಅದೇನೋ—ಇಂದು ಸ್ವಲ್ಪ ಕಣ್ಣು ತೆರೆದಿದೆ. ಸುಖಿಯಾ ಮಗುವನ್ನು ಒಮ್ಮೆ ತೊಡೆಯ ಮೇಲೆ ತೆಗೆದುಕೊಳ್ಳುವಳು; ಮತ್ತೊಮ್ಮೆ ಹೊರಸಿನ ಮೇಲೆ ಮಲಗಿಸುವಳು. ಜೆನ್ನಾಗಿ ನಕ್ಕು ನಲಿದು ಆಡಿಕೊಂಡಿರುವ ಮಗುವಿಗೆ ಒಮ್ಮಿದೊಮ್ಮೆ ಹೀಗೆಕಾಯಿತೆಂಬುದು ಯಾರಿಗೂ ತಿಳಿದಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆ ತಾಯಿಗೆ ಹಸಿವು-ನಿರಡಿಕೆಗಳ ಪರವೆಯೆಲ್ಲಿಯದು? ಸುಖಿಯಾ ಒಂದುಸಲ ಬಾಯಲ್ಲಿ ಒಂದು ಗುಟುಕು ನೀರನ್ನು ಹಾಕಿಕೊಂಡಿದ್ದಳು; ಆದರೆ ಅದನ್ನು ಗುಟುಕರಿಸುವುದಕ್ಕೆ ಅವಳಿಂದಾಗಲಿಲ್ಲ. ಆಕೆಯ ಜೀವನವೆಂದರೆ ಅದೊಂದು ಕರುಣೆಯ ಕಥೆ. ಒಂದೇ ಒಂದು ವರ್ಷದಲ್ಲಿ ಆಕೆ ತನ್ನ ಹೊಟ್ಟೆಯ ಕರುಳುಗಳೆರಡನ್ನು ಕಾಲನ ಬಾಯಿಗೆ ಕವಳವಾಗಿಸಿದ್ದಳು; ಗಂಗೆಯ ತಡಿಯ ಮಣ್ಣಲ್ಲಿ ತಾನೆ ತನ್ನ ಕೈಯಿಂದ ಮಲಗಿಸಿ ಮುಚ್ಚಿ ಬಂದಿದ್ದಳು. ಗಂಡ ಆಕೆಯನ್ನು ಅನಾಥೆಯನ್ನಾಗಿ ಮಾಡಿ ಅದಕ್ಕಿಂತ ಮೊದಲೆ ಮಣ್ಣಾಕೂಡಿ ಹೋಗಿದ್ದ. ಈಗ ಸುಖಿಯಾನ ಜೀವನದ ಒಂದೆ ಒಂದು ಆಶಾತಂತುವೆಂದರೆ ಕಾಯಿಲೆಯಾಗಿ ಮಲಗಿರುವ ಈ ಹುಡುಗ! 'ಅಬ್ಬಾ, ಅವನನ್ನೂ ಆ ಪರಮಾತ್ಮನೆಂಬುವವನು ತನ್ನ ತೊಡೆಯಿಂದ ಸೆಳೆದುಕೊಳ್ಳುವನೆ?' ಎಂಬ ಈ ಕೆಟ್ಟ ಯೋಚನೆ ತಲೆಯಲ್ಲಿ ಮೂಡಿದೊಡನೆಯೆ—ಪಾಪ!—ಸುಖಿಯ ಕಣ್ಣುಗಳಿಂದ ಗಳಗಳನೆ ಕಂಬನಿಗಳು ಇಳಿಯುವುವು,

*ಹಿಂದೀ ಸಾಹಿತ್ಯದಲ್ಲಿ ಕಥಾಸಮ್ರಾಟನೆನಿಸಿಕೊಂಡ ಸ್ವರ್ಗೀಯ 'ಪ್ರೇಮ-ಚಂದ' ಅವರ ಕತೆಯ ಅನುವಾದವಿದು. —ಲೇಖಕ

ಸುಖಿಯಾ ತನ್ನ ಮಗುವನ್ನೊಬ್ಬನನ್ನೆ ಬಿಟ್ಟು ಒಂದು ಕ್ಷಣವೂ ಅಗಲಿರುತ್ತಿರಲಿಲ್ಲ. ಹುಲ್ಲು ಕೊಯ್ಯಲಿಕ್ಕೆ ಹೋಗುವಾಗ ಜೊತೆಯಲ್ಲಿ ಕರೆದೊಯ್ಯುವಳು. ಹುಲ್ಲು ಮಾರಲಿಕ್ಕೆ ಹೋದಾಗ ಕೂಡ ಕಂಕುಳಲ್ಲಿ ಮಗು ಇದ್ದೇ ಇರುವುದು. ಮಗುವಿಗೆ ಚಿಕ್ಕದೊಂದು ಕುರುಪಿಯನ್ನು ಮಾಡಿಸಿಕೊಟ್ಟಿದ್ದಳು ಸುಖಿಯಾ. 'ಜೀವನ (ಮಗುವಿನ ಹೆಸರು)' ತಾಯಿಯೊಂದಿಗೆ ಹುಲ್ಲು-ಕೊಯ್ಯುತ್ತ ಆಗಾಗ ಹೇಳುವನು:

" ಅಮ್ಮಾ, ನನಗೂ ಒಂದು ದೊಡ್ಡ ಕುಡುಗೋಲು ಮಾಡಿಸಿ ಕೊಡಮ್ಮಾ! ನಾನು ಬಹಾಳಷ್ಟು ಹುಲ್ಲನ್ನು ಕೊಯ್ಯುತ್ತೇನೆ; ನೀನು ಮನೆಯ ಮುಂದಿನ ಜಗುಲಿಯ ಮೇಲೆ ಕುಳಿತು ಥಾಗೆಯೆ ನನ್ನನ್ನು ನೋಡುತ್ತಿರು; ನಾನು ಪೇಟೆಗೆ ಹೋಗಿ ಹುಲ್ಲನ್ನು ಮಾರಿಕೊಂಡು ಬರುತ್ತೇನೆ....! "

ಹೃದಯದ ಹಿಗ್ಗಿನಿಂದ ತಾಯಿ ಕೇಳುವಳು;

★

ಸುಖಿಯಾ ಸಮುಗಾರತಿಯಾದರೇನು, ಇನ್ನಾ-ರಾದರೇನು? ಪ್ರೇಮದಿಂದ ತುಂಬಿದ ಆಕೆಯ ಹೃದಯವೆ ದೇವರ ಗುಡಿ. ಪ್ರೇಮ-ಕರುಣೆಗಳು ಇಲ್ಲದ ಹೃದಯ ಹಾಳು ದೇಗುಲ. ಈ ಹಾಳು ದೇಗುಲದಲ್ಲಿಯೆ ಸುಖಿಯಾ ತನ್ನ ಜೀವನನನ್ನು ಕಳೆದುಕೊಂಡಳು; ಜೀವವನ್ನೂ ಕಳೆದುಕೊಂಡಳು!

★

" ನನಗೆ ಏನೇನು ತಂದುಕೊಡುತ್ತೀಯಪ್ಪಾ, ಪೇಟೆಯಿಂದ—ಜೀವಾ! "

ಜೀವನನು ತಾಯಿಗಾಗಿ ಕೆಂಪು-ಕೆಂಪನೆಯ ಬಣ್ಣದ ಸೀರೆ ತಂದು ಕೊಡಬೇಕೆಂದು ನಿಶ್ಚಯಿಸುವನು. ಅಲ್ಲದೆ 'ಇಷ್ಟಿಷ್ಟು ಬೆಲ್ಲ ನಿನಗಾಗಿ ತರುವೆನು' ಎಂದು ಕೈಮಾಡಿ ಹೇಳುವನು. ಅಂದು ಮಗು ಆಡಿದ ಆ ತೊದಲುನುಡಿಗಳೆಲ್ಲ ಇಂದು ನೆನಪಿ-ನೆದುರು ನಿಂತು, ಆ ತಾಯಿಯ ಅಂತಃಕರಣವನ್ನು ತಲ್ಲಣಗೊಳಿ ಸುತ್ತಿದ್ದುವು.

ಕಾಯಿಲೆಯಿಂದ ಮಲಗಿದ ಆ ಮಗುವನ್ನು ನೋಡಿದವರೆಲ್ಲರೂ ತಟ್ಟನೆ ನುಡಿದು ಬಿಡುತ್ತಿದ್ದರು:

" ಈ ಹುಡುಗನಿಗೆ ಯಾರೋ ಮಾಟ ಮಾಡಿಸಿದ್ದಾರೆ! "

ಸರಿ, ಅದರೆ ಯಾರು ಮಾಟಮಾಡಿಸಬೇಕು? ಪಾಪ, ಈ ಗಂಡನಿಲ್ಲದ ಒಡಪೆಂಗುಸಿಗೂ ಹಗೆಗಳಿದ್ದಾರೆಯೆ? ಯಾರ

ಬಹುದು? ಅವರೊಂದುವು ಗೊತ್ತಾಗಿದ್ದರೆ ಸುಖಿಯಾ ನೇರವಾಗಿ ಹೋಗಿ ಅವರ ಕಾಲುಗಳ ಮೇಲೆ ಬೀಳುತ್ತಿದ್ದಳು; ತನಗಿರುವ ಒಂದೆ ಒಂದಾದ ಆ ಮಗುವನ್ನು ಅವರ ತೊಡೆಯ ಮೇಲೆ ಹಾಕಿಬಿಡುತ್ತಿದ್ದಳು. ಹೀಗೆ ಮಾಡಿದರೆ ಅವರ ಹೃದಯ ಕರುಣೆಯಿಂದ ಕರಗಬಹುದಾಗಿದ್ದಿತಲ್ಲವೆ? ಅಹುದು, ಆದರೆ ಯಾರೆಂಬುದನ್ನು ಹೆಸರೆತ್ತಿ ಯಾರು ಹೇಳಬೇಕು? ಯಾರೂ ಹೇಳಲೊಲ್ಲರು. ಸುಖಿಯಾ ಈಗ ಎಲ್ಲಿಗೆ ಹೋಗಬೇಕು, ಯಾರನ್ನು ಕೇಳಬೇಕು.... ?

೨

ರಾತ್ರಿಯ ಮೂರು ಪ್ರಹರಗಳು ಮುಗಿದಿದ್ದುವು. ಚಿಂತಾ-ವ್ಯಥಿತವಾದ ಸುಖಿಯಾನ ಚಂಚಲಮನಸ್ಸು ಎಲ್ಲಿಯೆಲ್ಲಿಯೊ ಓಡಾಡುತ್ತಿತ್ತು. 'ಯಾವ ದೇವರಿಗೆ ಶರಣುಹೋಗಬೇಕು? ಯಾವ ದೇವತೆಗೆ ಹರಕೆ ಕಟ್ಟಬೇಕು?' ಎಂಬ ಯೋಜನೆಯಲ್ಲಿರುವಾಗಲೆ ಆಕೆಯ ಕಣ್ಣು ಮುಚ್ಚಿದುವು; ಕಿರುನಿದ್ದೆ ಮುಸುಕಿತು. ಆಗವಳು ಕನಸೊಂದನ್ನು ಕಂಡಳು: ಗಂಡ ಬಂದು ಮಗುವಿನ ತಲೆದೆಸೆಯಲ್ಲಿ ನಿಂತುಕೊಂಡ; ಮಗುವಿನ ತಲೆಯಮೇಲೆ ಕೈಯನ್ನಾಡಿಸುತ್ತ ಸುಖಿಯಾಗೆ ಹೇಳಿದ; 'ಅಳಬೇಡ ನೀನು ಸುಖಿಯಾ! ನಿನ್ನ ಮಗುವಿಗೆ ನೆಮ್ಮದಿಯುಂಟಾಗುತ್ತದೆ. ನಾಳೆಯ ದಿನ ದೇವಾಲಯಕ್ಕೆ ಹೋಗಿ, ಠಾಕೂರಜಿಗೆ ಪೂಜೆಯನ್ನು ಮಾಡು. ಅವನೇ ನಿನಗೆ ಸಹಾಯ ನೀಡಬಲ್ಲನು!' ಇಷ್ಟು ಹೇಳಿ ಗಂಡ ಹೊರಟುಹೋದ. ಸುಖಿಗೆ ತಟ್ಟನೆ ಎಚ್ಚರಾಯಿತು. ಗಂಡ ಬಂದು ತನಗೆ ದರ್ಶನಕೊಟ್ಟು ಹೋದನೆಂಬುದನ್ನು ಸುಖಿಯಾ ಸಂಪೂರ್ಣವಾಗಿ ನಂಬಿದಳು. 'ನನ್ನನ್ನು ಅವರು ಇನ್ನೂ ಮರೆತಿಲ್ಲ' ಎಂಬ ಕಲ್ಪನೆಯಿಂದ ಆಕೆಯ ಹೃದಯ ಆಶಾಯುಕ್ತವಾಯಿತು. ಗಂಡನ ವಿಷಯಕವಾದ ಪ್ರೇಮ-ಶ್ರದ್ಧೆಗಳ ಮೂಲಕ ಸುಖಿಯ ಕಣ್ಣುಗಳು ಕಂಬನಿಗಳಿಂದ ತುಂಬಿದುವು. ಆಕೆ ಮಗನನ್ನು ಎತ್ತಿ ತೊಡೆಯ ಮೇಲೆ ತೆಗೆದುಕೊಂಡಳು. ಮುಗಿಲ ಕಡೆಗೆ ಮೊಗವನ್ನೆತ್ತಿ ಬೇಡಿಕೊಂಡಳು:

"ಭಗವಂತಾ, ನನ್ನ ಕೂಸಿಗೆ ನೆಮ್ಮದಿಯುಂಟಾಗಲಿ, ನಾನು ನಿನಗೆ ನನ್ನ ಪೂಜೆ ಸಲ್ಲಿಸುತ್ತೇನೆ. ಈ ದಿಕ್ಕಿಲ್ಲದ ಹೆಂಗುಸನ್ನು ದಯಾದೃಷ್ಟಿಯಿಂದ ನೋಡು ದೇವಾ!"

ಸುಖಿಯಾ ಹೀಗೆ ಬೇಡಿಕೊಳ್ಳುತ್ತಿರುವಾಗಲೆ ಜೀವನ ಕುಡಿಯಲಿಕ್ಕೆ ನೀರನ್ನು ಕೇಳಿದ. ಆತುರದಿಂದ ಓಡಿ ಓಡಿ ಹೋಗಿ ಆಕೆ ಬಟ್ಟಲಲ್ಲಿ ನೀರನ್ನು ತಂದಳು; ಮಗನಿಗೆ ಕುಡಿಸಿದಳು. ನೀರು-ಕುಡಿದ ಬಳಿಕ ಜೀವನ ತಾಯಿಯನ್ನು ಕೇಳಿದ:

"ಅಮ್ಮಾ ಈಗ ರಾತ್ರಿಯೋ ಹಗಲೋ?"

"ಇನ್ನೂ ರಾತ್ರಿಯಿದೆ ಮಗು! ನೀನೀಗ ಚೆನ್ನಾಗಿದ್ದೀಯಲ್ಲವೆ?"

"ಚೆನ್ನಾಗಿದ್ದೇನಮ್ಮಾ! ಈಗ ನನ್ನ ಕಾಯಿಲೆಯೆಲ್ಲ ಗುಣವಾಗಿ ಹೋಯಿತು!"

"ನಿನ್ನ ಬಾಯಿತುಂಬ ಸಕ್ಕರೆ ಬೀಳಲಿ ಕಂದಾ! ದೇವರ ದಯೆಯಿಂದ ಬೇಗನೆ ಹಾಸಿಗೆ ಬಿಟ್ಟು ಏಳು! ಈಗ ನಿನಗೇನಾದರೂ ತಿನ್ನಲಿಕ್ಕೆ ಬೇಕೇನು?"

"ತಿನ್ನಲಿಕ್ಕೆ .... ? ಹುಂ, ಬೇಕು ಅಮ್ಮಾ ...! ನನಗೆ ಬೆಲ್ಲ ಬೇಕು ಕೊಡಮ್ಮಾ....!"

"ಬೆಲ್ಲ ತಿನ್ನಬಾರದು ನನ್ನ ದೊರೆ! ಎಲ್ಲಿಯಾದರೂ ಅಪಥ್ಯವಾದೀತು. ಬೇಕಾದರೆ ಸ್ವಲ್ಪ ಅನ್ನ ಮಾಡಿ ಕೊಡುತ್ತೇನೆ ನೋಡು; ಮಾಡಲೇ?"

"ಬೇಡ ಹೋಗೇ ಅಮ್ಮಾ ಅನ್ನ! ಸ್ವಲ್ಪೇ ಸ್ವಲ್ಪ ಬೆಲ್ಲ ಕೊಡಮ್ಮಾ, ನಿನ್ನ ಕಾಲು ಬೀಳುತ್ತೇನೆ ನೋಡು....!"

ತಾಯಿಯ ಕರುಳು. ಮಗುವಿನ ಹಟವನ್ನು ನಡೆಯಿಸದಿರಲಿಕ್ಕೆ ಮನಸ್ಸಾಗಲಿಲ್ಲ. ಸುಖಿಯಾ ಬೆಲ್ಲದ ಡಬ್ಬಿ ತೆರೆದು, ತೀರ ಸ್ವಲ್ಪ ಬೆಲ್ಲವನ್ನು ಮಗನ ಕೈಗೆ ಕೊಟ್ಟಳು. ಇನ್ನುಮೇಲೆ ಬೆಲ್ಲದ ಡಬ್ಬಿಯ ಬಾಯನ್ನು ಮುಚ್ಚುವನಳು, ಅಷ್ಟರಲ್ಲಿಯೆ ಹೊರಗೆ ಯಾರೋ ಕೂಗಿದ ಕರೆ ಕೇಳಿದುದರಿಂದ, ಸುಖಿಯಾ ಬಾಗಿಲನ್ನು ತೆರೆಯಲಿಕ್ಕೆಂದು ಅತ್ತ ಹೊರಟುಹೋದಳು. ಇತ್ತ ಜೀವನನು ಇನ್ನೂ ಒಂದೆರಡು ಕಣ ಬೆಲ್ಲವನ್ನು ಕೈಯಲ್ಲಿ ತೆಗೆದುಕೊಂಡ; ಅವಸರ ಅವಸರದಿಂದ ಅದನ್ನೆಲ್ಲ ತಿಂದು ನುಂಗಿಬಿಟ್ಟ.

೩

ಬೆಳಗಾಯಿತು. ಸಂಜೆಯ ವರೆಗೂ ಮಗುವಿನ ಪ್ರಕೃತಿ ಚೆನ್ನಾಗಿದ್ದಿತು. ಅನ್ನವನ್ನೂ ಸ್ವಲ್ಪ ಊಟಮಾಡಿದ. ಒಂದೆರಡು ಸಲ ಗುಡಿಸಿಲಿನ ಮುಂಬಾಗಿಲ ವರೆಗೂ ಬೆಲ್ಲಗೆ ಅಡಿಯಿಡುತ್ತ ಬಂದು ಬಂದು ಹೋದ. ಓರಗೆಯ ಹುಡುಗರು ಆಟವಾಡುತ್ತಿದ್ದರು; ಅಶಕ್ತತೆಯ ಮೂಲಕ ಅವರೊಂದಿಗೆ ಸೇರಿ ಆಟವಾಡಲಿಕ್ಕೆ ಜೀವನನಿಂದ ಸಾಧ್ಯವಿರಲಿಲ್ಲವಾದರೂ ಗೆಳೆಯರ ಆಟ ನೋಡಿ ಮನಸ್ಸನ್ನು ರಂಜಿಸಿಕೊಂಡ. ಮಗುವಿಗೆ ಸಂಪೂರ್ಣ ಗುಣವಾಯಿತೆಂದು ಸುಖಿಯಾನಿಗೆ ಸಮಾಧಾನ. ಒಂದೆರಡು ದಿನಗಳಲ್ಲಿಯೆ— ಎಂದರೆ ಕೈಯಲ್ಲಿ ಸ್ವಲ್ಪ ಹಣವಾದಮೇಲೆ ಠಾಕೂರಜಿಗೆ ಪೂಜೆಯ ಹರಕೆ ಸಲ್ಲಿಸಬೇಕೆಂದವಳು ಮನಸ್ಸಿನಲ್ಲಿ ನಿಶ್ಚಯಿಸಿದಳು. ಅಂದಿನ ದಿನವೆಲ್ಲ ಮನೆಯನ್ನು ಉಡುಗುವುದು ಸಾರಿಸುವುದರಲ್ಲಿಯೂ ಅಡಿಗೆ-ನೀರುಗಳಲ್ಲಿಯೂ ಹೊರಟು ಹೋಯಿತು. ಸಂಜೆಯಾದಂತೆಲ್ಲ ಜೀವನನಿಗೆ ಜ್ವರ ಏರತೊಡಗಿತು. ಸುಖಿಯಾ ನೋಡಿದಳು, ಗಾಬರಿಗೊಂಡಳು. 'ಪೂಜೆಯ ಹರಕೆ ಸಲ್ಲಿಸುವುದಕ್ಕೆ ತನ್ನಿಂದ ವಿಲಂಬವಾಯಿತೆಂದು ಜ್ವರ ಮತ್ತೆ ಮರುಕೊಳಿಸಿತೇನೊ' ಎಂಬ ಸಂಶಯ ಅವಳನ್ನು ಬಾಧಿಸತೊಡಗಿತು. ಆಗ ಸೂರ್ಯನಿನ್ನೂ ಪಶ್ಚಿಮಕ್ಷಿತಿಜದಲ್ಲಿ

ಕಾಣುತ್ತಿದ್ದ. ಮಗುವನ್ನು ಹಾಗೆಯೆ ಮಲಗಿಸಿ ಸುಖಿಯಾ ಪೂಜೆಯ ಸಾಹಿತ್ಯಗಳನ್ನು ಅಣಿಗೊಳಿಸತೊಡಗಿದಳು. ಜಮಿನ್‌ದಾರರ ತೋಟದಲ್ಲಿ ಬೇಕಾದಷ್ಟು ಹೂ ದೊರೆತುವು. ಮನೆಬಾಗಿಲ ಕಟ್ಟೆಯಲ್ಲಿಯೇ ತುಲಸೀ ದಲಗಳು ಇದ್ದುವು. ಆದರೆ ನೈವೇದ್ಯಕ್ಕೆ ಏನಾದರೂ ಸವಿದಿನಿಸು ಬೇಕಲ್ಲವೆ? ಊರಲ್ಲೆಲ್ಲ ಅಲೆದಾಡಿ ಬಂದಳು; ಎಲ್ಲಿಯೂ ಸಾಲ-ಕೈಗಡ ಸಿಕ್ಕಲಿಲ್ಲ. ಕೆಟ್ಟವೇಳೆ; ಯಾರಲ್ಲಿಯೂ ನಾಲ್ಕಾಣೆ ಕೂಡ ಸಿಕ್ಕಬಾರದೆಂದರೆ ಏನೆನ್ನ ಬೇಕು? ಕೊನೆಗವಳು ತನ್ನ ಕೈಯಲ್ಲಿಯ ಬೆಳ್ಳಿಯ ಕಡಗವನ್ನು ತೆಗೆದಳು; ಬೇಗಬೇಗನೆ ಅಡಿಯಿಡುತ್ತ ಸೆಟ್ಟಿಯ ಅಂಗಡಿಗೆ ಹೋದಳು. ಕಡಗವನ್ನು ಅಡವು ಇಟ್ಟು ಪೂಜೆಗೆ ಬೇಕಾಗುವಷ್ಟು ಬೆಂಡು-ಬತ್ತಾಸಗಳನ್ನು ತೆಗೆದುಕೊಂಡು, ಓಡುತ್ತೋಡುತ್ತಲೆ ಮನೆಯ ಕಡೆಗೆ ಬಂದಳು.

ಪೂಜೆಯ ಸಾಹಿತ್ಯವೆಲ್ಲ ಸಜ್ಜಾಯಿತು. ಬಳಿಕ ಸುಖಿಯಾ ಜ್ವರದ ಹುಡುಗನನ್ನು ಎಡದ ಕಂಕುಳಲ್ಲಿ ಕುಳ್ಳಿರಿಸಿಕೊಂಡಳು; ಬಲದ ಕೈಯಲ್ಲಿ ಪೂಜೆಯ ತಟ್ಟೆಯನ್ನು ಹಿಡಿದುಕೊಂಡು ಶ್ರೀಕೃಷ್ಣನ ದೇವಾಲಯದ ಕಡೆಗೆ ಸಾಗಿದಳು.

ದೇವಾಲಯದಲ್ಲಿ ಸಾಯಂಕಾಲದ ಮಂಗಲಾರತಿಯ ಗಂಟೆ ಮೊಳಗುತ್ತಿದ್ದಿತು. ಎಂಟು ಹತ್ತು ಜನ ಭಕ್ತರು ನಿಂತುಕೊಂಡು ಆರತಿಯ ಹಾಡುಗಳನ್ನು ಹೇಳುತ್ತಿದ್ದರು. ಅದೇ ಸಮಯದಲ್ಲಿ ಸುಖಿಯಾ ಪೂಜಾ ಸಾಮಗ್ರಿಯೊಂದಿಗೆ ದೇವಾಲಯದ ಮುಂಬದಿಯಲ್ಲಿ ಬಂದು ನಿಂತುಕೊಂಡಳು. ಪೂಜಾರಿ ಕೇಳಿದ:

"ಇಲ್ಲೇನು ನಿನ್ನ ಕೆಲಸವೇ? ಏತಕ್ಕಾಗಿ ಒಂದಿದ್ದೀಯಾ?"

ಜಗುಲಿಯನ್ನೇರಿ ನಿಂತು ಸುಖಿಯಾ ದೈನ್ಯಧ್ವನಿಯಲ್ಲಿ ಹೇಳಿದಳು:

"ದೇವರಿಗೆ ಬೇಡಿಕೊಂಡಿದ್ದೆ ಬುದ್ಧಿ! ಆ ಹರಕೆ ತೀರಿಸಲಿಕ್ಕೆ ಈಗ ಬಂದಿದ್ದೇನೆ ಮಹಾರಾಜಾ!"

ಈ ಪೂಜಾರಿ 'ಮಹಾರಾಜ'ನು ಬೆಳಗು ಬೈಗು ಠಾಕೂರಜಿಯ ಪೂಜೆ ಮಾಡುತ್ತಿದ್ದ. ಮಿಕ್ಕ ವೇಳೆಯಲ್ಲೆಲ್ಲ ಜಮಿನ್‌ದಾರರ ಕುಳಗಳ ಪೂಜೆಯನ್ನು ಮಾಡುತ್ತಿದ್ದ. ರಾತ್ರಿ ಮಲಗುವುದು ದೇವಾಲಯದಲ್ಲಿಯೆ. ಅಡಿಗೆಯನ್ನು ಕೂಡ ಅಲ್ಲಿಯೆ ಮಾಡಿಕೊಳ್ಳುತ್ತಿದ್ದುದರಿಂದ, ದೇವಾಲಯದ ಒಳಗೋಡೆಗಳೆಲ್ಲ ಹೊಗೆ ತಿಂದು ಕರಿಗೊಂಡು ಹೋಗಿದ್ದುವು. ಪೂಜಾರಿ ದಯಾಳು ಸ್ವಭಾವದವ. ತುಂಬ ಸಂಪ್ರದಾಯನಿಷ್ಠ; ಎಂತಲೆ ಎಂತಹ ಜಳಿಯಿರಲಿ, ತಂಗಾಳಿಯಿರಲಿ, ಸ್ನಾನಮಾಡದೆ ಜಾಯಲ್ಲಿ ಒಂದು ಗುಟುಕು ನೀರನ್ನು ಕೂಡ ಹಾಕುತ್ತಿರಲಿಲ್ಲ. ಜಳಿ-ಮಳೆಗಳಲ್ಲಿಯೆ ಸ್ನಾನಮಾಡಬೇಕಾಗುತ್ತಿದ್ದುದರಿಂದ, ನಿದಾನವಾಗಿ ಕುಳಿತುಕೊಳ್ಳುವುದಕ್ಕೆ ಹೇಗಾಗಬೇಕು? ಗಡಬಡಿಯಲ್ಲಿಯೆ ಮುಗಿಸಿ ಬಿಡಬೇಕಾಗುತ್ತಿದ್ದುದರಿಂದ ಸ್ನಾನದ ಕಾಲದಲ್ಲಿ ಮೈ-ಕೈ-ಕಾಲುಗಳನ್ನು ಚೆನ್ನಾಗಿ ಉಜ್ಜಿಕೊಳ್ಳಲಿಕ್ಕೆ ಆಗುತ್ತಿರಲೆ ಇಲ್ಲ. ಆದುದರಿಂದಲೆ ಪೂಜಾರಿಯ ಕೈ-ಕಾಲುಗಳು ಯಾವಾಗಲೂ ಕಿಲುಬುಕಿಲುಬಾಗಿ ತೋರುತ್ತಿದ್ದುವು. ಪಾಪ, ಅವನದೇನು ತಪ್ಪು? ತಪ್ಪದೆ ಸ್ನಾನದ ಸಂಪ್ರದಾಯವನ್ನು ಉಗ್ರನಿಷ್ಠೆಯಿಂದ ಸಾಗಿಸಿಕೊಂಡು ಬಂದಿದ್ದ. ಆತನೆ ಆ ಪೂಜಾರಿ ಸುಖಿಯನ್ನು ಕೇಳಿದ:

"ಹಾಗಾದರೆ ಏನು..ಗುಡಿಯೊಳಗೇ ಬರುವವಳೇನು ನೀನು? ಸರಿ, ಒಳ್ಳೆಯ ಪೂಜೆ ನಿನ್ನದು! ಒಳಗೆ ಬಂದು ದೇವರನ್ನೆಲ್ಲ ಭ್ರಷ್ಟಾಚಾರಗೊಳಿಸಿ ಬಿಡಬೇಕೆನ್ನುತ್ತೀಯೋ ಏನು?"

ಒಬ್ಬ ಭಕ್ತ ಹೇಳಿದ: "ದೇವರನ್ನು ಪವಿತ್ರಗೊಳಿಸಿ ಹೋಗಲಿಕ್ಕೆ ಬಂದಿದ್ದಾಳ್ರೀ ಅವಳು! ಹೀಗೇನು ಕೇಳತೀರಿ ನೀವು?"

ಸುಖಿಯಾ ತುಂಬ ದೈನ್ಯಭಾವದಿಂದ ಹೇಳಿಕೊಂಡಳು:

"ಠಾಕೂರಜಿಯ ಕಾಲುಗಳನ್ನು ಹಿಡಕೊಳ್ಳಲಿಕ್ಕೆ ಬಂದಿದ್ದೇನೆ ಮಹಾರಾಜ! ಪೂಜೆಗೆ ಬೇಕಾಗುವ ಎಲ್ಲ ಸಾಹಿತ್ಯವನ್ನೂ ತಕ್ಕೊಂಡು ಬಂದಿದ್ದೇನೆ!"

ಪೂಜಾರಿ ಹೇಳಿದ:

"ಎಂಥಾ ಬುದ್ಧಿಗೇಡಿತನದ ಕೆಲಸವೇ ನಿನ್ನದು? ನಿನಗೆ ಹುಚ್ಚುಗಿಚ್ಚೇನೂ ಹಿಡಿದಿಲ್ಲವಷ್ಟೆ? ನೀನು ಹೇಗಮ್ಮಾ ಠಾಕೂರಜಿಯನ್ನು ಮುಟ್ಟಿ ಪೂಜೆ ಮಾಡುತ್ತೀಯೆ?"

ಸುಖಿಯಾ ಇದುವರೆಗೆ ಎಂದೂ ದೇವಾಲಯದ ಬಾಗಿಲೆದುರು ಬಂದವಳಲ್ಲ; ಎಂದೂ ಅಂತಹ ಅವಕಾಶವೇ ಆಕೆಗೆ ದೊರೆತಿರಲಿಲ್ಲ. ಈಗ ಆಶ್ಚರ್ಯದಿಂದ ಕೇಳಿದಳು:

"ಯಾಕೆ? ಏನಾಗುತ್ತದೆ ಬುದ್ಧಿ! ಠಾಕೂರಜಿಯೆಂದರೆ ಎಲ್ಲರಿಗೂ ಒಡೆಯ— ಯಜಮಾನ! ಅವನ ದರ್ಶನದಿಂದ ಎಂಥೆಂಥಾ ಪಾಪಿಗಳೆಲ್ಲ ಕೂಡ ಉದ್ಧಾರವಾಗಿ ಹೋಗುತ್ತಾರಂತೆ ಬುದ್ಧಿ! ನಾನು ಮುಟ್ಟಿ ಅವನ ಕಾಲು ಹಿಡಿಯುವುದರಿಂದ, ಠಾಕೂರಜಿಗೆ ಮೈಲಿಗೆಯಾಗುವುದೇ ಮಹಾರಾಜ?"

"ಅಲ್ಲವೇ, ನೀನು ಸಮಗಾರವಳು ಅಲ್ಲವೇನೇ?...."

ಪೂಜಾರಿ ಕೇಳಿದ.

ಸುಖಿಯಾ ಸಹಜಸ್ವರದಲ್ಲಿ ಕೇಳಿದಳು:

"ಆದರೆ ಏನಾಯಿತು ಬುದ್ಧಿ! ಸಮಗಾರರನ್ನು ಹುಟ್ಟಿಸಿದವನೂ ಠಾಕೂರಜಿಯೆ ಅಲ್ಲವೇನು? ಸಮಗಾರರ ದೇವರೊಬ್ಬ ಬೇರೆ ಇದ್ದಾನೇನು? ಈ ಹುಡುಗನಿಗಾಗಿ ಹರಕೆ ಹೊತ್ತಿದ್ದೇನೆ ಬುದ್ಧಿ!"

ಭಕ್ತರೆಲ್ಲ ಸೇರಿ ಇದೀಗಲೆ ದೇವರ ಸ್ತೋತ್ರವನ್ನು ಹೇಳಿ ಮುಗಿಸಿದ್ದರು. ಆ ಸ್ತೋತ್ರದಲ್ಲಿ ಬರುವ 'ದೀನೋದ್ಧಾರಕಾ!' 'ಪತಿತಪಾವನಾ!' 'ಭಕ್ತವತ್ಸಲಾ' ಎಂಬ ಸಂಬೋಧನೆಗಳನ್ನು ಗಟ್ಟಿಸಿ ಗಟ್ಟಿಸಿ ಇದೀಗಲೆ ಹೇಳಿದ್ದರು. ಹಾಗೆ ಹೇಳಿದ ಭಕ್ತ-ಶಿರೋಮಣಿಯೆ ಒಬ್ಬ ಗುಡುಗಿನ ದನಿಯಲ್ಲಿ ಗರ್ಜಿಸಿದ:

"ಹೊಡೆದು ಹೊರಕ್ಕೆ ದಬ್ಬಿರೊ ಆ ಹುಚ್ಚು ಮುಖೆಯನ್ನ! ದೇವಾಲಯವನ್ನೆಲ್ಲ ಭ್ರಷ್ಟಾಚಾರಗೊಳಿಸಲಿಕ್ಕೆ ಬಂದಿದ್ದಾಳೆ ಇಲ್ಲಿ! ಕಸಿದು ಜೆಲ್ಲಿರಿ ಆ ಕೈಯೊಳಗಿನ ತಟ್ಟೆಯನ್ನ...ಕತ್ತೆಮುಂ...! ಮೊದಲೇ ಏನಿಲ್ಲದೆ ಜಗತ್ತಿನಲ್ಲಿ ಉತ್ಪಾತಗಳು ತಲೆದೋರುತ್ತಲಿವೆ! ಇನ್ನು ಈ ಸಮಗಾರರೆಲ್ಲ ಎದ್ದು ಠಾಕೂರಜಿಯ ಪೂಜೆ ಮಾಡಲಿಕ್ಕೆ ನಿಂತ ಮೇಲೆ ಉಳಿಯಬೇಕೇನು? ಪ್ರಪಂಚ ರಸಾತಳಕ್ಕೆ ಇಳಿಯುವುದೇ ಕಟ್ಟಿಟ್ಟ ಮಾತು!"

ಇನ್ನೊಬ್ಬ ಭಕ್ತಮಹಾಶಯ ಸಿಡಿಲನ್ನು ಹಾರಿಸಿದ:

"ಸರಿಸರಿ, ಸಮಗಾರತಿ ಬಂದು ಠಾಕೂರಜಿಗೆ ನೈವೇದ್ಯ ತೋರಿಸುತ್ತಾಳಂತೆ....ಪ್ರಳಯಕಾಲ ಹತ್ತಿರ-ಹತ್ತಿರಕ್ಕೆ ಬಂದ ಗುರುತೇ ಇದು, ಇನ್ನೇನಿದೆ ಮತ್ತೆ!"

ಹೊರಗೆ ತುಂಬ ಚಳಿ ಬಿದ್ದಿತ್ತು. ಸುಖಿಯಾ ಅಲ್ಲಿ ನಿಂತುಕೊಂಡು ಗಡಗಡನೆ ನಡುಗುತ್ತಿದ್ದಳು; ಈ ಧರ್ಮಸಂರಕ್ಷಕ ಸಂಘದ ಸದಸ್ಯರೆಲ್ಲ ಒಳಗೆ ನಿಂತುಕೊಂಡು, ಕ್ರಾಂತಿಯುಂಟಾಗ ಬಹುದಾದ ಕಾಲವನ್ನು ಕುರಿತು ಆಲೋಚನೆ ನಡೆಯಿಸಿದ್ದರು. ಜ್ವರದಿಂದ ಬಳಲುತ್ತಿದ್ದ ಜೀವನ, ಚಳಿಯ ಆಘಾತವನ್ನು ಸಹಿಸದೆ ತಾಯಿಯ ಮಗ್ಗಿಲಲ್ಲಿ ಸೇರಿಕೊಳ್ಳುವ ಪ್ರಯತ್ನದಲ್ಲಿದ್ದ. ಸುಖಿಯಾ ಅಲ್ಲಿಂದ ಕಾಲನ್ನು ಕಿತ್ತಲೆ ಇಲ್ಲ. ಎರಡೂ ಕಾಲುಗಳು ಭೂಮಿಯಲ್ಲಿ ಹೂತುಕೊಂಡಿವೆಯೇನೋ ಎನ್ನುವಷ್ಟು ಸ್ಥಿರಭಾವದಿಂದ ನಿಂತುಕೊಂಡಿದ್ದಳು. ನಡುನಡುವೆ ಆಕೆಯ ಮನಸ್ಸಿನಲ್ಲಿ ವಿಚಾರಲಹರಿ ಹೀಗೆ ಎದ್ದು ಬಿಡುತ್ತಿತ್ತು:

"ಒಮ್ಮೆಲೆ ಹೀಗೆಯೆ ಹೋಗಿ ಠಾಕೂರಜಿಯ ಅಡಿಗಳನ್ನು ಹಿಡಿದು ಬಿದ್ದು ಬಿಡಬೇಕು! ಠಾಕೂರಜಿ ಇವರಿಗಾಗಿಯಷ್ಟೆ ಇದ್ದಾನೆಯೆ? ನಮ್ಮಂತಹ ಬಡವರೊಂದಿಗೆ ಆತನದೇನೂ ಸಂಬಂಧವೇ ಇಲ್ಲವೆ?.... ನಡುವೆ ಬಂದು ತಡೆಯುವುದಕ್ಕೆ ಇವರಿಗೇನು ಅಧಿಕಾರ?...."

ಮತ್ತೆ ಆಕೆಯ ಮನಸ್ಸಿನಲ್ಲಿ ಹೀಗೆಂದು ಯೋಚನೆ ತಲೆದೋರುವುದು:

"ನಿಜವಾಗಿಯೆ ಈ ಜನರು ನನ್ನ ಪೂಜಾಸಾಹಿತ್ಯವನ್ನೆಲ್ಲ ಕಿತ್ತುಕೊಂಡು ವಿನಾಶಿಬಿಟ್ಟರೆ ನಾನು ಮಾಡಬೇಕೇನು?"

ಈ ಯೋಚನೆ ಎದೆಯನ್ನು ನಡುಗಿಸಿದೊಡನೆಯೆ ಮೊದಲಿನ ವಿಚಾರಲಹರಿಯು ಶಕ್ತಿಗುಂದಿಹೋಗುವುದು; ಹುಟ್ಟಿದಲ್ಲಿಯೆ ಹುದುಗಿಹೋಗುವುದು. ಕೊನೆಗೆ ಯಾವುದೋ ಒಂದು ವಿಚಾರ ಹೊಳೆದು ಸುಖಿಯಾ, ಅಲ್ಲಿಯೆ ಸಮೀಪದಲ್ಲಿರುವ ಮರದ ನೆರಳಿನ ಕಗ್ಗತ್ತಲೆಯಲ್ಲಿ ಹೋಗಿ ನಿಂತುಕೊಂಡಳು; ಭಕ್ತವೃಂದ ವೆಲ್ಲ ಹೊರಟುಹೋಗುವ ದಾರಿಯನ್ನು ಕಾಯಲು ತೊಡಗಿದಳು.

ಆರತಿ-ಪ್ರಾರ್ಥನೆಗಳನ್ನು ಮುಗಿಸಿದ ಬಳಿಕ, ಭಕ್ತಜನರೆಲ್ಲರೂ ಎಷ್ಟೋಹೊತ್ತಿನ ವರೆಗೆ, ಶ್ರೀಮದ್ಭಾಗವತ ಪುರಾಣಶ್ರವಣಕ್ಕೆ ಕುಳಿತರು. ಪೂಜಾರಿ ಒಲೆಹೊತ್ತಿಸಿ ಅಡಿಗೆಗಿಟ್ಟ. ಒಲೆಯ ಮುಂದೆ ಕುಳಿತುಕೊಂಡೇ 'ಹುಂ, ಹುಂ,' ಎನ್ನುತ್ತಿದ್ದ; ನಡು ನಡುವೆ ಏನೇನೋ ವ್ಯಾಖ್ಯಾನವಾಡಿ ಹೇಳುತ್ತಿದ್ದ. ಹತ್ತುಗಂಟೆ ರಾತ್ರಿಯವರೆಗೂ ಪುರಾಣಶ್ರವಣ, ಹಾಡು, ಕೀರ್ತನ— ಒಂದರ ಹಿಂದೊಂದು ನಡೆದೆ ಇದ್ದುವು. ಸುಖಿಯಾ ಸಮಾಧಿಸ್ಥಳಂತೆ ಮರದ ಕೆಳಗೆ ಕದಲದೆ ನಿಂತುಕೊಂಡಿದ್ದಳು.

ಒಬ್ಬರಹಿಂದೆ ಒಬ್ಬರಂತೆ ಮೆಲ್ಲಮೆಲ್ಲಗೆ ಭಕ್ತಜನರು ಹೊರಡತೊಡಗಿದರು. ಪೂಜಾರಿ ಒಬ್ಬನೆ ಒಬ್ಬ ಉಳಿದ. ಆಗ ಸುಖಿಯಾ ಮುಂದಡಿಯಿಟ್ಟು ನಡೆದಳು, ಗುಡಿಯ ಮುಂಜಗುಲಿಯನ್ನು ಹತ್ತಿ ನಿಂತುಕೊಂಡಳು. ಪೂಜಾರಿ ಕುದಿಯುತ್ತಿರುವ ಅನ್ನದ ಸುಮಧುರ ಸಂಗೀತವನ್ನು ಆಲಿಸುತ್ತ ಕುಳಿತಿದ್ದ. ಯಾರದೊ ಅಡಿಯ ಸಪ್ಪಳವನ್ನು ಕೇಳಿದಂತಾಗಿ ಆತ ತಲೆಯೆತ್ತಿ ನೋಡುತ್ತಾನೆ; ಸುಖಿಯಾ ಬಂದು ನಿಂತಿದ್ದಾಳೆ. ಸಿಟ್ಟಿನಿಂದ ಸಿಡಿಯುತ್ತ ಪೂಜಾರಿ ಕೇಳಿದ:

"ಏನೇ ಇದು? ಇದುವರೆಗೂ ನೀನು ಇಲ್ಲಿಯೆ ನಿಂತುಬಿಟ್ಟಿದ್ದೀಯಾ?"

ಸುಖಿಯಾ ಕೈಯ ತಟ್ಟೆಯನ್ನು ಕೆಳಕ್ಕಿಟ್ಟಳು; ಸೆರಗನ್ನೊಡ್ಡಿ ಬಾಯಿತೆರೆದು ಬೇಡಿಕೊಂಡಳು: "ಸ್ವಾಮಿ, ನಾನೊಂದು ದುರ್ದೈವಿ ಜೀವ! ಈ ಮಗುವೊಂದನ್ನು ಬಿಟ್ಟರೆ ನನಗೆ ಜೀವನಾಧಾರ ಬೇರೆಯೇನೂ ಇಲ್ಲ. ನನಗೆ ದಯೆ ತೋರಿಸಿರಿ ಮಹಾರಾಜಾ! ಮೂರು ದಿನಗಳಾದುವು, ಮಗು ಮೇಲಕ್ಕೆ ತಲೆಯನ್ನೆತ್ತಿಲ್ಲ! ತಮಗೆ ಪುಣ್ಯಬರಲಿ ಮಾಸ್ವಾಮಿ!"

ಮಾತಿನ ಕೊನೆಯೊಂದಿಗೆ ಸುಖಿಯಾ ಅಳಲಾರಂಭಿಸಿದಳು. ಪೂಜಾರಿ ಸ್ವಲ್ಪ ಹೆಣ್ಣಿದೆಯವ. ದಯೆಯಿಂದ ಕರಗಿಹೋದನು. ಆದರೆ ಎಷ್ಟೇ ಕರಗಿದರೂ ಸಮಗಾರತಿಯನ್ನು ದೇವರ ಹತ್ತಿರ ಹೋಗಗೊಡುವಂತಹ— ಎಂದೂ ನೋಡದ— ಕೇಳದ— ಘೋರಪಾತಕ, ಆ ಸಂಪ್ರದಾಯಭೀರುವಿನ ಕಡೆಯಿಂದ ಹೇಗೆ ಆಗಬೇಕು? 'ಈ ಪಾತಕ ಮಾಡಲಿಕ್ಕೆ ಸಿದ್ಧನಾದರೆ ದೇವರು ತನಗೆ ಎಂತಹ ಶಿಕ್ಷೆ ವಿಧಿಸಬಹುದೊ!' ಎಂಬ ಯೋಚನೆ ಬಂದು ಪೂಜಾರಿಯ ಎದೆಯನ್ನು ನಡುಗಿಸಿತು. ತನಗೂ ಮಕ್ಕಳು-ಮರಿಗಳಿದ್ದುವು; ಕುಪಿತನಾದ ದೇವರು ತನ್ನ ಕುಟುಂಬದ ಜನರನ್ನೂ ಊರ ಜನರನ್ನೂ ಕಾಡತೊಡಗಿದರೆ....! ಬಗೆಗಾಣದ ಧ್ವನಿಯಲ್ಲಿ ಪೂಜಾರಿ ಹೇಳಿದ:

"ನೀನೀಗ ಮನೆಗೆ ಹೋಗು; ಬರಿ ದೇವರ ಹೆಸರು ತೆಗೆದುಕೊಂಡು ಮಗುವಿಗೆ ಅಂಗಾರವನ್ನು ಹಚ್ಚು! ಇದರಿಂದಲೆ ಖಂಡಿತ ಗುಣವಾಗುತ್ತದೆ. ಅಲ್ಲದೆ ನಾನೀಗ ನಿನಗೆ ದೇವರ ನಿರ್ಮಾಲ್ಯದ ತುಲಸೀದಳ ಕೊಡುತ್ತೇನೆ; ಅದನ್ನು ಮಗುವಿಗೆ ತಿನಿಸು! ಚರಣತೀರ್ಥಕೊಡುತ್ತೇನೆ, ಅದನ್ನು ಕಣ್ಣುಗಳಿಗೆ ಹಚ್ಚು! ಎಲ್ಲ ನೂತೂ ಆತನ ಕೈಯಲ್ಲಿದೆ; ನಿನ್ನ ಮಗನಿಗೆ ಗುಣಮಾಡಬೇಕೆಂದಿದ್ದರೆ ದೇವರಿಗೇನೂ ಅಸಾಧ್ಯವಲ್ಲ!"

ಸುಬಿಯಾ ಹೇಳತೊಡಗಿದಳು :

" ಮಹಾರಾಜ, ತಾವು ನನ್ನನ್ನು ರಾಕೂರಜಿಯ ಪಾದದ ಮೇಲೆ ಬೀಳಗೊಡುವುದಿಲ್ಲವೇಕೆ? ನೋಡಿರಿ, ನಾನು ತುಂಬಾ ದುರ್ದೈವಿ— ದುಃಖಿನಿ— ಇದ್ದೇನೆ. ಕೈಯಲ್ಲಿಯ ಕಡಗವನ್ನು ಮುರಿಸಿ ಇದೆಲ್ಲ ಪೂಜೆಯ ಸಾಹಿತ್ಯ ಕೂಡಿಸಿದ್ದೇನೆ. ನಿನ್ನೆ ರಾತ್ರಿ ಕನಸಿನಲ್ಲಿ ' ಠಾಕೂರಜಿಗೆ ಪೂಜೆಯ ಹರಕೆ ಸಲ್ಲಿಸು; ನಿನ್ನ ಮಗುವಿಗೆ ಸಂಪೂರ್ಣ ಗುಣವಾಗುವುದು!' ಎಂಬುದಾಗಿ ಆಜ್ಞೆ-ಯಾಗಿದೆ ನನಗೆ! ಅದಕೆಂತಲೆ ನಾನು ಇಲ್ಲಿಗೆ ಧಾವಿಸಿ ಬಂದಿದ್ದೇನೆ. ಎಲ್ಲ ವೆಚ್ಚವಾಗಿ ಇನ್ನೊಂದು ರೂಪಾಯಿ ನನ್ನ ಬಳಿ ಉಳಿದಿದೆ. ಅದನ್ನು ತಾವು ತೆಗೆದುಕೊಳ್ಳಿರಿ; ಆದರೆ ದೇವರ ಪಾದಗಳನ್ನು ಗಟ್ಟಿಯಾಗಿ ಅಪ್ಪಿಕೊಳ್ಳುವುದಕ್ಕೆ ನನಗೆ ಅವಕಾಶ ಮಾಡಿಕೊಡಿರಿ!"

ರೂಪಾಯಿಯ ಮೋಹ ಪೂಜಾರಿಯನ್ನು—ಒಂದೇ ಒಂದು ಕ್ಷಣ— ಚಂಚಲಚಿತ್ತನನ್ನಾಗಿ ಮಾಡಿತು. ಆದರೆ ಅಜ್ಞಾನ-ಮೂಲವಾದ ಭಾವಿಕತನದಿಂದುಂಟಾದ—ಪರಮಾತ್ಮನ ವಿಷಯಕ ಭೀತಿಯ ನೆರಳು ಮನಸ್ಸಿನ ಮೇಲೆ ಬಿದ್ದುದರಿಂದ, ಮತ್ತೆ ಸ್ಥಿರಚಿತ್ತನಾಗಿ ಪೂಜಾರಿ ಹೇಳಿದ :

" ಎಲೆ, ಹುಚ್ಚಿಯೇನು ನೀನು? ದೇವರು ಭಕ್ತರ ಮನದಲ್ಲಿಯ ಶ್ರದ್ಧಾ-ಭಕ್ತಿಗಳಿಗೆ ಒಲಿಯುತ್ತಾನಲ್ಲದೆ ಬರೀ ಕಾಲು ಹಿಡಿದುಕೊಂಡು ಬಿದ್ದು ಬಿಟ್ಟರೆ ಒಲಿಯುವುದಿಲ್ಲ. ನಿನಗೆ ಗೊತ್ತಿಲ್ಲವೆ.... 'ಮನಸ್ಸು ಶುದ್ಧವಾಗಿದ್ದರೆ ಮನೆಯಲ್ಲಿಯೆ ಗಂಗೆ-ಗೋದಾವರಿ' ಎಂದು ಹೇಳುವ ಮಾತು? ಭಕ್ತಿಯೊಂದು ಇಲ್ಲದಿದ್ದರೆ ಲಕ್ಷಸಲ ಕಾಲ ಮೇಲೆ ಬಿದ್ದರೂ ಏನೂ ಉಪಯೋಗವಾಗದು. ನೋಡು, ನನ್ನ ಬಳಿಯಲ್ಲೊಂದು ಯಂತ್ರವಿದೆ. ಅದರ ಬೆಲೆ ಬಹಳ ಇದೆಯಾದರೂ ಪಾಪ, ನಿನಗೆ ಒಂದೇ ಒಂದು ರೂಪಾಯಿಗೆ ಅದನ್ನು ಕೊಟ್ಟುಬಿಡುತ್ತೇನೆ. ಹುಡುಗನ ಕೊರಳಿಗೆ ಅದನ್ನು ಕಟ್ಟು; ಅದರಿಂದ ನಾಳೆಯ ದಿನವೆ ಈತ ಎದ್ದು ಆಟವಾಡದಿದ್ದರೆ....ನನ್ನನ್ನು ಮಾತನಾಡಿಸು!"

ಸುಬಿಯಾ ಮತ್ತೆ ದೈನ್ಯದಿಂದ ಕೇಳಿದಳು :

"ಹಾಗಾದರೆ ಠಾಕೂರಜಿಯ ಪೂಜೆಯನ್ನು....ಮಾಡಗೊಡುವುದಿಲ್ಲವೆ ಮಹಾರಾಜ?"

" ಈಗ ನೀನು ಮಾಡಿರುವಷ್ಟು ಪೂಜೆ ಸಾಕೇ ಸಾಕು. ಇಂದಿನ ವರೆಗೆ ಯಾವ ಘಟನೆ ಎಂದೂ ನಡೆದಿಲ್ಲವೊ ಅದನ್ನಿಂದು ನಾನು ನಡೆಯಗೊಟ್ಟೆನೆಂದು ತಿಳಿ; ಏನಾದರೂ ಉಪದ್ರವ ಎದ್ದು ಊರನ್ನು ಹಾಳುಮಾಡತೊಡಗಿದರೆ ಮುಂದೆ ಗತಿಯೇನು? ನೋಡು, ನೀನೂ ಸ್ವಲ್ಪ ವಿಚಾರಮಾಡು! ಇವನಿಗೆ ಯಾರದೋ ಕೆಟ್ಟ ದೃಷ್ಟಿ ತಗಲಿದಂತೆ ತೋರುತ್ತದೆಯಿಷ್ಟೆ....! ಹಾಂ, ಅಹುದು, ಹುಡುಗ ಎಷ್ಟೊಂದು ಜೆಲುವನಾಗಿದ್ದಾನೆ ನೋಡು!"

ಪೂಜಾರಿಯ ಮಾತನ್ನು ಕೇಳಿ ಸುಬಿಯಾ ಕಳವಳದಿಂದ ಹೇಳಿದಳು :

"ಇವನಿಗೆ ಜ್ವರ ಬಂದಾಗಿನಿಂದ ನನ್ನ ಜೀವವೆಲ್ಲಾ ಕಣ್ಣಲ್ಲಿಯೆ ಬಂದು ಕುಳಿತಿದೆ ಮಹಾರಾಜ!"

ಪೂಜಾರಿ ಹೇಳಿದ :

"ಈ ನಿನ್ನ ಮಗ ಮುಂದೆ ದೊಡ್ಡ ಹೆಸರನ್ನು ಗಳಿಸುತ್ತಾನೆಂದು ತೋರುವುದು. ಪರಮಾತ್ಮನು ಇವನನ್ನು ಬದುಕಿಸಿ ಉಳಿಸಿದರೆ ಇವನಿಂದ ನಿನ್ನ ಸಂಕಟಗಳೆಲ್ಲವೂ ಪರಿಹಾರವಾದಾವು. ನಿನ್ನ ಮಗ ಇಲ್ಲಿಗೆ ಅನೇಕ ಸಲ ಆಟವಾಡಲಿಕ್ಕೆಂದು ಬರುತ್ತಿದ್ದ. ಇತ್ತೀಚೆಗೆ ಮೂರುನಾಲ್ಕು—ಹುಂ ಅನ್ನು— ಮೂರುನಾಲ್ಕು ದಿನಗಳಿಂದ ಮಾತ್ರ ನಾನು ಇವನನ್ನು ಕಂಡಿಲ್ಲ!"

ಜ

ಮನೆಗೆ ಬಂದು ಮಗುವಿನ ಕೊರಳಿಗೆ ಸುಬಿಯಾ ಯಂತ್ರವನ್ನು ಕಟ್ಟಿದಳು; ರಾತ್ರಿ ಕಳೆಯುತ್ತ ಹೋದಂತೆಲ್ಲ ಜ್ವರ ಹೆಚ್ಚುತ್ತ ನಡೆಯಿತು. ಕೊನೆಗೆ ಮೂರು ಗಂಟೆಯ ಸಮಯದಲ್ಲಂತೂ ಮಗುವಿನ ಕೈಕಾಲು ತಣ್ಣಗಾಗತೊಡಗಿದುವು. ಸುಬಿಯಾ ಆಗ ಗಾಬರಿಗೊಂಡಳು. ತನ್ನ ಕಾರ್ಯಕ್ಕೆ ತಾನೇ ಪಶ್ಚಾತ್ತಾಪಪಡತೊಡಗಿದಳು :

" ಅಯ್ಯೋ, ನಾನು ಸಂಕೋಚಭಾವಕ್ಕೆ ಕಟ್ಟು ಬಿದ್ದೆ; ಠಾಕೂರಜಿಯ ಸಂದರ್ಶನ ತೆಗೆದುಕೊಳ್ಳದೆ ಹಾಗೆಯೆ ಹೊರಟು ಬಂದೆ. ಯಾರನ್ನೂ ಕೇಳದೆ ಹಾಗೆಯೆ ಒಳಗೆ ನುಸುಳಿಬಿಟ್ಟಿದ್ದರೆ— ಠಾಕೂರಜಿಯ ಪಾದದೆಡೆಗೆ ಹೋಗಿ ಬಿದ್ದುಕೊಂಡುಬಿಟ್ಟಿದ್ದರೆ— ಯಾರು ಏನು ಮಾಡುತ್ತಿದ್ದರು ನನಗೆ? ಬಹಳವಾದರೆ ಅವರೆಲ್ಲ ಸೇರಿ ಅಡ್ಡಿಪಡಿಸಿ ನನ್ನನ್ನು ಹೊರಗೆ ಹಾಕಬಹುದಾಗಿತ್ತು; ಇನ್ನೂ ಹೆಚ್ಚೆಂದರೆ ನಾಲ್ಕೆಂಟು ಏಟುಗಳನ್ನೂ ಹಾಕಬಹುದಾಗಿತ್ತು. ಆದರೆ ನನ್ನ ಮನೋರಥ ಪೂರ್ಣವಾಗುತ್ತಿದ್ದಿತಲ್ಲ! ನಾನು ನನ್ನ ಕಂಬನಿಗಳಿಂದ ಠಾಕೂರಜಿಯ ಅಡಿಗಳನ್ನು ತೋಯಿಸಿಬಿಟ್ಟಿದ್ದರೆ—ನನ್ನೀ ಕಂದಯ್ಯನನ್ನು ಅತನ ಅಡಿಯ ಮೇಲೆ ಮಲಗಿಸಿಬಿಟ್ಟಿದ್ದರೆ—ಈ ದೀನ ಅಬಲೆಯ ಸಲುವಾಗಿ ಠಾಕೂರಜಿ ಕರುಣೆಯನ್ನು ತೋರಿಸಬಹುದಾಗಿತ್ತಲ್ಲವೆ? ಅವನು ದಯಾಶಾಲಿಯಾದ ಪರಮಾತ್ಮ, ದೀನರನ್ನು ಸಂರಕ್ಷಿಸುವವನು—ಎಂದ ಮೇಲೆ ನನ್ನನ್ನು ದಯಾದೃಷ್ಟಿಗಳಿಂದ ನೋಡುತ್ತಿರಲಿಲ್ಲವೆ?"

ಇವೆಲ್ಲ ವಿಚಾರಗಳಿಂದ ಸುಬಿಯಾನ ಮನಸ್ಸು ತುಂಬ ಅಸ್ಥಿರವಾಗಿ ಹೋಯಿತು. ಮತ್ತೆ ತನ್ನೊಳಗೆ ಯೋಚಿಸತೊಡಗಿದಳು :

" ಉಹುಂ, ಈಗ ತಡಮಾಡಿ ಉಪಯೋಗವಿಲ್ಲ. ಅವಶ್ಯ ನಾನೀಗ ದೇವಾಲಯಕ್ಕೆ ಹೋಗಲೇಬೇಕು. ಮಗುವನ್ನು ಠಾಕೂರಜಿಯ ಪಾದಗಳ ಮೇಲೆ ಹಾಕಿ, ಈ ಮಗುವಿನ ಪ್ರಾಣವೊಂದನ್ನು ಭಿಕ್ಷೆನೀಡೆಂದು ಅತ್ತುಕರೆದು ಬೇಡಿಕೊಳ್ಳಬೇಕು!" ಎಂಬುದಾಗಿ ಸುಬಿಯಾ ಸಂಕಲ್ಪಿಸಿದಳು. ಆ ಅಬಲೆಯ ಆಶಂಕಿತ ಹೃದಯಕ್ಕೆ ಇದರ ಹೊರತು ಇನ್ನಾವ ಆಶ್ರಯವೂ ಉಳಿದಿರಲಿಲ್ಲ. ' ದೇವಾಲಯದ ಬಾಗಿಲಿಗೆ ಬೀಗಹಾಕಿದ್ದರೆ ಅದನ್ನು ಮುರಿದಾದರೂ ಒಳಕ್ಕೆಹೋಗಬೇಕು ' ಎಂದವಳು

ನಿರ್ಣಯಿಸಿದಳು. 'ಠಾಕೂರಜಿಯೆಂದರೆ ಯಾ ರೊ ಬ್ ರ ನೆರೆಯಾಳಲ್ಲ; ಅವನನ್ನು ಬೀಗಬಿಗಿದು ಬಂದಿವಾಸದಲ್ಲಿ ಇಡಲಿಕ್ಕೆ ಇವರು ಯಾರು?' ಎಂಬುದು ಸುಖಿಯ ವಿಚಾರ.

ಮೂರುಗಂಟೆ ರಾತ್ರಿಯಾಗಿದ್ದಿತು. ಒಂದು ಕಂಬಳಿಯ ತುಂಡಿನಲ್ಲಿ ಮಗುವನ್ನು ಸುತ್ತಿ ಎಡಹೆಗಲ ಮೇಲೆ ಒರಗಿಸಿ ಕೊಂಡಳು; ಬಲಗೈಯಲ್ಲಿ ಪೂಜೆಯ ತಟ್ಟೆಹಿಡಿದುಕೊಂಡು ದೇವಾಲಯದ ದಾರಿಯನ್ನು ಹಿಡಿದಳು. ಮನೆಯಿಂದ ಹೊರಕ್ಕೆ ಬಿದ್ದೊಡನೆಯೆ ಚಳಿಯಿಂದ ಕೂಡಿದ ಗಾಳಿ ಮೈಯನ್ನು ಕೊರೆಯ ತೊಡಗಿತು. ಕೈಕಾಲುಗಳ ನರಗಳು ಚಳಿಗೆ ಶಿಥಿಲಗೊಳಗೊಡ ಗಿದುವು. ಕಣ್ಣನ್ನು ಕುರುಡುಗೊಳಿಸುವ ಕಗ್ಗತ್ತಲೆ ಬೇರೆ. ದೇವಾಲಯಕ್ಕೆ ಹೋಗಬೇಕಾದ ದಾರಿ ಎರಡು ಫರ್ಲಾಂಗು ಗಳಿಗಿಂತ ಕಡಿಮೆಯೇನೂ ಇರಲಿಲ್ಲ. ಅದಕ್ಕಿದ್ದ ಕಾಲುದಾರಿ ಸಾಲುಮರಗಳ ಅಡಿಯಲ್ಲಿ ಹಾ ಯ್ದು ಹೋ ಗಿ ದ್ದಿ ತು. ಪಕ್ಕದಲ್ಲಿಯೆ ಬಂದು ಹಾಳುಮನೆಯಿತ್ತಲ್ಲದೆ ಅದಕ್ಕೆ ಮುಂದೆ ಕೆಲವು ಹುಲ್ಲಿನ ಗುಡಿಸಿಲುಗಳಿದ್ದುವು. ಹಾಳುಮನೆಯಲ್ಲಿ ವಾಸಿಸುತ್ತಿದ್ದ ಅಗಸನೊಬ್ಬ ಅಂದೆ ಸತ್ತುಬಿದ್ದಿದ್ದ. ಬಲಗಡೆಗೆ ಹಸಿರುಹೊಲಗಳು; ಜೀರುಂಡೆಗಳ 'ಜಿರ್‌ಜಿಟ್' ಎಂಬ ಕರ್ಕಶ ಸ್ವರವು ಅವಿರತವಾಗಿ ಸಾಗಿದೆ. ಹಟಾತ್ತಾಗಿ ನರಿಗಳ ಕೂಗಿನ ಅಮಂಗಲಸ್ವರವು ಕಿವಿಗೆ ಬಿದ್ದಿತು. ಅಬ್ಬಾ! ಲಕ್ಷ ರೂಪಾಯಿ ಗಳನ್ನು ಕೊಡುತ್ತೀವೆಂದು ಯಾರಾದರೂ ಹೇಳಿದ್ದರೂ— ಇಂತಹ ರಾತ್ರಿಯಲ್ಲಿ— ಅಂತಹ ಕಾಯಿಲೆಯ ಮಗುವನ್ನು ಕಟ್ಟಿಕೊಂಡು— ಸುಖಿಯಾ ಮನೆಬಿಟ್ಟು ಹೊರಬೀಳಬಹು ದಾಗಿತ್ತೆ? ಆದರೆ ಆಕೆಯ ಪುತ್ರಪ್ರೇಮ ಎಲ್ಲ ಹೆದರಿಕೆ-ಜಿದರಿಕೆ ಗಳನ್ನೂ ಹತ್ತಿಕ್ಕುತ್ತ ಹೊರಟಿದ್ದಿತು. 'ದೇವರೆ, ಈಗ ನೀನಲ್ಲದೆ ಇನ್ನಾರು ಆಧಾರ' ಎಂಬ ಮಂತ್ರವನ್ನೆ ಆಕೆಯ ಹೃದಯ ಎಡೆಬಿಡದೆ ಜಪಿಸುತ್ತಿದ್ದಿತು.

* * * *

ದೇವಾಲಯದ ಬಾಗಿಲ ಬಳಿ ಬಂದು ಸುಖಿಯಾ ಬೀಗವನ್ನು ಜಗ್ಗಿ ನೋಡಿದಳು; ಬಿಗಿಯಾಗಿ ಹಾಕಿದ್ದಿತು. ಪೂಜಾರಿ ಬಾಗಿಲನ್ನು ಇಕ್ಕಿಕೊಂಡು ತನ್ನ ಕೋಣೆಯಲ್ಲಿ ಮಲಗಿದ್ದ. ನಾಲ್ಕೂ ದಿಕ್ಕುಗಳನ್ನೂ ಕಗ್ಗತ್ತಲೆ ವ್ಯಾಪಿಸಿ ನಿಂತಿದೆ. ಅಂಗಳದಲ್ಲಿ ಬಿದ್ದಿದ್ದ ದೊಣ್ಣೆ ಕಲ್ಲೊಂದನ್ನು ತೆಗೆದುಕೊಂಡು ಸುಖಿಯಾ, ಕಸುವಿನಿಂದ ಬೀಗಕ್ಕೆ ಏಟುಹಾಕತೊಡಗಿದಳು. ಆಕೆಯ ಕೈಯಲ್ಲಿ ಇಂದು ಇಷ್ಟೊಂದು ಶಕ್ತಿ ಎಲ್ಲಿಂದ ಬಂದಿತ್ತೋ! ಮೂರು ನಾಲ್ಕು ಏಟು ಬಿದ್ದೊಡನೆಯೆ ಬೀಗ ಮುರಿದು ಕೆಳಕ್ಕೆ ಬಿದ್ದಿತು. ಮೆಲ್ಲಗೆ ಬಾಗಿಲನ್ನು ತೆರೆದಳು. ಇನ್ನು ಒಳಕ್ಕೆ ಅಡಿಯಿಡುವವಳು, ಅಷ್ಟರಲ್ಲಿಯೆ ಪೂಜಾರಿ ಮಹಾರಾಜ ಎದ್ದು, ಬಾಗಿಲು ತೆರೆದು ಹೊರಕ್ಕೆ ಬಂದ. ಬಂದವನೇ 'ಅಯ್ಯೊ ಕಳ್ಳ, ಕಳ್ಳ!' ಎಂದು ಕೂಗಿಕೊಳುತ್ತ ಊರಕಡೆಗೆ ಓಡತೊಡಗಿದ. ಚಳಿಗಾಲದ ದಿನಗಳಲ್ಲಿ ಸಾಮಾನ್ಯವಾಗಿ ಬಹುಜನರಿಗೆ ಪ್ರಹರ. ರಾತ್ರಿಯಿರುವಾಗಲೆ ಎಚ್ಚರಾಗುವುದು ಅನುಭವದ ಸಂಗತಿ. ಪೂಜಾರಿಯ ಹುಯಿಲನ್ನು ಕೇಳಿದೊಡನೆಯೆ ಜನರು—ದೀಪ—ದೊಣ್ಣೆಗಳನ್ನು ಹಿಡಿದುಕೊಂಡು ಎಲ್ಲೆಲ್ಲಿಂದಲೊ ಓಡಿಬಂದರು. ಎಲ್ಲರೂ ರೋಷ–ಗಾಬರಿಗಳಿಂದ ಕೇಳತೊಡಗಿದರು:

"ಎಲ್ಲಿ?....ಕಳ್ಳ ಎಲ್ಲಿದ್ದಾನೆ?....ಯಾವಕಡೆಗೆ ಓಡಿದ?...."

ಪೂಜಾರಿ ಉಬ್ಬಸದ ಧ್ವನಿಯಲ್ಲಿ ಹೇಳಿದ:

"ದೇವಾಲಯದ ಬಾಗಿಲನ್ನು ಯಾರೋ ತೆರೆದಿದ್ದಾರೆ. ಕೀಲಿ ಮುರಿಯುವ ಸಪ್ಪಳವನ್ನು ನಾನೇ ಈ ನನ್ನ ಕಿವಿಯಿಂದಲೆ ಕೇಳಿದೆ."

ಸುಖಿಯಾ ಒಮ್ಮಿಂದೊಮ್ಮೆ ಒಳಅಂಗಳದಿಂದ ಹೊರಕ್ಕೆ ಬಂದಳು. ಜನರೆಲ್ಲರನ್ನೂ ನೋಡಿ ಹೇಳಿದಳು: "ಇಲ್ಲಿ ಕಳ್ಳರಾರೂ ಇಲ್ಲ, ನಾನು ಇದ್ದೇನೆ! ಠಾಕೂರಜಿಗೆ ಪೂಜೆ ಸಲ್ಲಿಸಲಿಕ್ಕೆ ಬಂದಿದ್ದೇನೆ; ಇನ್ನೂ ಒಳಗೆ ಕಾಲಿಟ್ಟಿರಲಿಲ್ಲ ಕೂಡ; ಅಷ್ಟರಲ್ಲಿಯೆ ಕೂಗಾಟಕ್ಕೆ ಆರಂಭಿಸಿಬಿಟ್ಟರು!"

ಪೂಜಾರಿ ಸಂತಾಪದಿಂದ ಹೇಳಿದ:

"ಅನರ್ಥ! ಅನರ್ಥ ನಡೆದುಬಿಟ್ಟಿದೆ ಇಲ್ಲಿ! ಅಯ್ಯೊ! ಸಮಗಾರ ಹೆಂಗುಸು ಒಳಗೆ ಹೋಗಿ....ದೇವರನ್ನು ಭ್ರಷ್ಟ ಗೊಳಿಸಿ....ಬಂದಿದ್ದಾಳೆ!"

ಸರಿ! ಮುಂದಿನ ಕತೆ ಕೇಳಬೇಕೆ? ಕ್ರೋಧದಿಂದ ಕೆಂಡ ದಂತಾಗಿದ್ದ ಜನ ಸುಖಿಯ ಕಡೆಗೆ ಹೊರಳಿತು; ಹೊಡೆತ ಬಡಿತ ಗಳು ಆಕೆಯ ಮೈಮೇಲೆ ಒಂದರ ಹಿಂದೊಂದು ಬೀಳತೊಡಗಿ ದುವು. ಸುಖಿಯಾ ಒಂದು ಕೈಯಲ್ಲಿ ಹುಡುಗನನ್ನು ಹಿಡಿದು ಕೊಂಡಿದ್ದು, ಇನ್ನೊಂದು ಕೈಯನ್ನು ಹುಡುಗನಿಗೆ ಏಟುಗಳು ಬೀಳಜ್ಜಾರದೆಂದು ಮುಂದೆ ಒಡ್ಡಿ ಹಿಡಿದಿದ್ದಳು. ಅಷ್ಟರಲ್ಲಿಯೆ ದಾಂಡಿಗನಾದೊಬ್ಬ ರೈತನು ಸುಖಿಯಾನಿಗೊಂದು ಜೋರಿನ ಒದೆತ ಕೊಟ್ಟ. ಅದರಿಂದ ಹೋದ ಜೋಲಿಯನ್ನು ಹಿಡಿದು ನೆಲೆಯೂರಿ ನಿಂತುಕೊಳ್ಳಬೇಕೆನ್ನುವುದರಲ್ಲಿಯೆ ಮಗುವು ಕೈಯಿಂದ ತಪ್ಪಿ ಕೆಳಕ್ಕೆ ಬಿದ್ದಿತು. ಬಿದ್ದರೂ ಆ ಹುಡುಗ ಅಳಲಿಲ್ಲ — ಮಾತನಾಡಲಿಲ್ಲ—ಉ ಸಿ ರಾ ಡಿ ಸ ಲಿ ಲ್ಲ ಕೂ ಡ. ಸುಖಿಯಾ ಸಹ ಕೆಳಗೆ ಬಿದ್ದು ಬಿಟ್ಟಳು. ಹೇಗೋ ಹೇಗೋ ಮಾಡಿ ಮಗುವನ್ನು ಎತ್ತಿಕೊಂಡಳು. ಆಗವಳು ಮಗುವಿನ ಮುಖದ ಕಡೆಗೆ ನೋಡಿ 'ಅಯ್ಯೋ!' ಎಂದು ಒಮ್ಮೆಲೆ ಗಟ್ಟಿಯಾಗಿ ಅರಚಿಕೊಂಡಳು. ಮಗುವಿನ ತಲೆಯನ್ನು ಕೈಯಿಂದ ಮುಟ್ಟಿ ನೋಡಿದಳು; ಮೈಯೆಲ್ಲ ತಂಪುತಂಪಾಗಿ ಹೋಗಿದ್ದಿತು. ನಿಡಿದಾದ ಉಸಿರೊಂದನ್ನು ಚೆಲ್ಲಿ ಸುಖಿಯಾ ಮೆಲ್ಲಗೆ ಎದ್ದು ನಿಂತಳು. ಆಗ ಆಕೆಯ ಮುಖ ಕ್ರೋಧಜ್ವಾಲೆಯಿಂದ ಕೆಂಪಾಗಿ ಹೋಗಿತ್ತು. ಕಂಬನಿಗಳು ಕಾಣಲೆ ಇಲ್ಲ. ಕಣ್ಣಿಂದ ಕಿಡಿಗಳು ಉದುರುತ್ತವೆಯೆನೋ ಎಂಬಂತೆ ಕಂಡಿತು. ಆಕೆಯ ಕೈಗಳೆರಡೂ ಬಿಗಿಯಾದ ಮುಷ್ಟಿಯಿಂದ ಕೂಡಿದ್ದುವು. ಕರಕರನೆ ಹಲ್ಲು ತಿನ್ನುತ್ತಾ ಆಕೆ ನುಡಿದಳು:

"ಪಾಪಿಗಳೆ, ನನ್ನ ಮುದ್ದು ಕಂದನನ್ನು ಕೊಂದುಬಿಟ್ಟಿದ್ದೀರಿ! ಇಷ್ಟಕ್ಕೆ ನಿಮ್ಮ ಕೆಲಸವಾದಂತಾಯಿತೆ? ದೂರವೇಕೆ ನಿಂತಿದ್ದೀರಿ? ಬನ್ನಿರಿ, ನನ್ನ ಮಗುವಿನೊಂದಿಗೆ ನನ್ನನ್ನೂ ಕೊಂದು ಹಾಕಿರಿ! ನಾನು ಮುಟ್ಟಿದುದರಿಂದ ರಾಕೂರಜಿಗೆ ಮೈಲಿಗೆಯಾಯಿತೆ? ಸ್ಪರ್ಶಮಣಿಯನ್ನು ಮುಟ್ಟುವುದರಿಂದ ಕಬ್ಬಿಣ ಬಂಗಾರವಾಗುವುದಲ್ಲದೆ ಸ್ಪರ್ಶಮಣಿ ಕಬ್ಬಿಣವಾಗುತ್ತದೆಯೆ? ನನ್ನ ಸ್ಪರ್ಶದಿಂದ ಆ ಪರಮೇಶ್ವರನು ಅಪವಿತ್ರನಾಗುತ್ತಾನೆಯೆ? ನನ್ನನ್ನು ನಿರ್ಮಾಣ ಮಾಡಿದವನು ಅವನೇ ಅಲ್ಲವೆ? ಆಗೇಕೆ ಆತನಿಗೆ ಮೈಲಿಗೆಯಾಗಲಿಲ್ಲ? ಸರಿ, ಇಟ್ಟುಕೊಳ್ಳಿರಿ— ನಿಮ್ಮ ದೇವರನ್ನು ಬೀಗಹಾಕಿದ ಬಂದಿವಾಸದಲ್ಲಿ! ಇನ್ನು ನಾನು ಎಂದೆಂದೂ ಇಲ್ಲಿ ಬರುವುದಿಲ್ಲ ಅವನನ್ನು ಮುಟ್ಟಲಿಕ್ಕೆ! ಅಯ್ಯೋ, ನಿಮಗೆ ಸ್ವಲ್ಪವೂ ಕರುಣೆ-ಕಳವಳ ಇಲ್ಲವೆ? ನಿಮ್ಮ ಎದೆ ಕಲ್ಲಿನದೆ ಇದೆಯೆ? ನಿಮಗೆಲ್ಲ ಮಕ್ಕಳು ಮರಿಗಳಿದ್ದೂ ಒಬ್ಬ ಹತಭಾಗಿನಿಯಾದ ತಾಯಿಯ ವಿಷಯದಲ್ಲಿ ಕನಿಕರವೆನಿಸಬಾರದೇ ನಿಮಗೆ? ಇಷ್ಟಾದರೂ ಧರ್ಮಕ್ಕೆ ಆಶ್ರಯಭೂತರು ನೀವೇ ಎಂದು ಮೆರೆಯಿಸಿಕೊಳ್ಳುತ್ತೀರಿ! ನಿಜವಾಗಿಯೂ ನೀವು ಕಟುಕರು.... ಕೊಲೆಗಡುಕರು....! ಅಹುದು! ಖಂಡಿತ ನೀವು ಕೊಲೆಗಡುಕರು! ಆದರೆ ನೀವೀಗ ಅಂಜುವುದಕ್ಕೇನೂ ಕಾರಣವಿಲ್ಲ. ನಾನು ಪೋಲೀಸ್‌ಠಾಣೆಗೇನೂ ಹೋಗುವುದಿಲ್ಲ. ನನ್ನ ಈ ನ್ಯಾಯಕ್ಕೆ ಸರಿಯಾದ ತೀರ್ಮಾನಕೊಡುವವನು ಆ ಪರಮೇಶ್ವರ! ಆತನ ಸಮ್ಮುಖದಲ್ಲಿಯೆ ನಾನೀಗ ದೂರಿಡುತ್ತೇನೆ!"

ಎಲ್ಲೆಲ್ಲಿಯೂ ಮೌನ! ಯಾರೂ ಗಟ್ಟಿಯಾಗಿ ಉಸಿರಿಡುತ್ತಿರಲಿಲ್ಲವೆಂದಮೇಲೆ ಪಿಸುಮಾತು-ಗುಣುಗುಣಾಟಗಳಾದರೂ ಎಲ್ಲಿ ಕೇಳಿಸಬೇಕು? ಎಲ್ಲ ಜನರೂ ಕಲ್ಲುಗೊಂಬೆಗಳಂತೆ ತಲೆತಗ್ಗಿಸಿಕೊಂಡು ನಿಂತುಬಿಟ್ಟಿದ್ದರು.

ಇಷ್ಟರಲ್ಲಿ ಊರ ಜನರೆಲ್ಲ ಅಲ್ಲಿಯೆ ಸೇರಿದರು. ಸುಖಿಯಾ ಮತ್ತೊಂದು ಸಲ ತನ್ನ ಸತ್ತ ಮಗುವಿನ ಮೊಗದ ಕಡೆಗೆ ನೋಡಿದಳು. ಆಗ ಆಕೆಯ ಮುಖದಿಂದೊಂದು ಉದ್ಗಾರ ಹೊರಟಿತು:

"ಅಯ್ಯೋ ಕಂದಾ! ನನ್ನ ಜೀ.....ವ....."

ಕೂಡಲೆ ಆಕೆ ಪೈಮರೆದವಳಾಗಿ ನೆಲದ ಮೇಲೆ ಬಿದ್ದಳು. ಜೀವ ದೇಹದಿಂದ ಹೊರಟು ಮುದ್ದು ಮಗು ಜೀವನನನ್ನು ಹುಡುಕುತ್ತ ನಡೆದುಬಿಟ್ಟಿತು. ಮಗುವಿಗಾಗಿ ಸುಖಿಯಾ ತನ್ನ ಜೀವನವನ್ನೆ ಆಹುತಿ ಕೊಟ್ಟಳು.

ತಾಯೆ, ಧನ್ಯಳು ನೀನು! ನಿನ್ನಂತಹ ನಿಷ್ಠೆಯೂ ನಿನ್ನಂತಹ ಪ್ರೇಮವೂ ನಿನ್ನಂತಹ ವಿಶ್ವಾಸವೂ ಜಗತ್ತಿನಲ್ಲಿ ಇನ್ನೆಲ್ಲಿಯೂ ಕಾಣವು! ಧನ್ಯೆ ಧನ್ಯೆ ನೀನು!



ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಸುರನ್ಸ್ ಕಂ., ಲಿ.

ಮುಖ್ಯ ಕಚೇರಿ: ಮುಂಬಯಿ

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್'ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ಕಳಕಪಾಡಿ, ಬೆಳಗಾಂವಿ.

ರೇಲ್ವೆ ಪ್ರವಾಸಿಕರ ಹಕ್ಕು-ಬಾಧ್ಯತೆಗಳು

ಶೀ. ಬಿದರಕುಂದಿ ವೆಂಕಟರಾಯರು, ಗದಗು

★

ಉಗೆಬಂಡಿಗಳಲ್ಲಿ ಪ್ರಯಾಣಮಾಡದ ಜನ ಸಾವಿರಕ್ಕೊಬ್ಬರು ಸಿಕ್ಕುವರೊ ಇಲ್ಲವೊ! ಆದರೆ ಪ್ರಯಾಣಕಾಲದಲ್ಲಿ ತೊಂದರೆಗೆ ಒಳಗಾಗುವವರು ಸಾವಿರಕ್ಕೆ ಒಂಬತ್ತು-ನೂರು ಜನ! ಇದಕ್ಕೆ ಕಾರಣವೆಂದರೆ ತಮಗಿರುವ ಪ್ರಯಾಣಕಾಲದ ಅನುಕೂಲತೆಗಳು ಯಾವುವು—ಎಂಬುದರ ಅಜ್ಞಾನ!

★

ಜನರ ಸುಖ-ಸೌಕರ್ಯಕ್ಕಾಗಿ ನಡೆದಿರುವ ಸಂಘ-ಸಂಸ್ಥೆಗಳೂ ವ್ಯಾವಹಾರಿಕ ಕಂಪನಿಗಳೂ, ಕಾನೂನಿಗೆ ಬದ್ಧವಾಗಿ ತಮ್ಮ ಒಳ-ನಿಯಮಗಳಿಗೆ ಅಂಟಿಕೊಂಡು ನಡೆಯಬೇಕು. ಹಾಗೆ ನಡೆಯುವುದರಲ್ಲಿಯೆ ಅವುಗಳ ಸ್ಥಿರತ್ವಕ್ಕೆ ಬಲವು ಸಿಕ್ಕುವುದು. ಆದರಂತೆಯೆ ಹಿಂದುಸ್ತಾನದೊಳಗಿನ ಎಲ್ಲ ರೇಲ್ವೆ ಕಂಪನಿಗಳು, ಕಂಪನಿಯ ಸುರಕ್ಷಿತತನಕ್ಕೂ ಪ್ರವಾಸಿಕರ ಅನುಕೂಲತೆಗಳಿಗೂ ಬಾಧೆ ತಟ್ಟದಂತಹ ಕಾನೂನು-ನಿಯಮಗಳಿಂದ ಬದ್ಧವಾಗಿರುವುವು. ಅಂತಹ ನಿಯಮಗಳು ಯಾವುವೆಂಬುದನ್ನು ಅರಿತ ಜನರು ನಮ್ಮಲ್ಲಿ ಎಷ್ಟು ಜನರು ಸಿಕ್ಕುವರು?

ಈ ಕಾನೂನು-ನಿಯಮಗಳು **"ರೇಲ್ವೆ ಟೈಮ್ ಟೇಬಲ್"** ಎಂಬ ಇಂಗ್ಲಿಷ್ ಪುಸ್ತಕಗಳಲ್ಲಿ ನೋಡಲು ಸಿಗುವುವು. ಅಯಾ ಕಂಪನಿಗಳ ಟೈಮ್ ಟೇಬಲುಗಳು ಸ್ಟೇಷನ್ ಮಾಸ್ಟರರ ಕಡೆಗೂ ರೇಲ್ವೆ ಬುಕ್ ಸ್ಟಾಲುಗಳಲ್ಲಿಯೂ ಪ್ರತಿಯೊಂದಕ್ಕೆ ೦–೩–೦ ಯಂತೆಯೊ ೦–೪–೦ ಯಂತೆಯೊ ಮಾರಲಿಕ್ಕೆಸಿಗುವುವು. ರೇಲ್ವೆಯ ಕಾನೂನುಗಳ ಸಂಕ್ಷಿಪ್ತ ಮಾಹಿತಿ ಇದ್ದ ದೇಶಭಾಷೆಯ ವೇಳಾ-ಪತ್ರಿಕೆಗಳೂ ಸಿಕ್ಕುವುವು. ಇದರಲ್ಲಿ ವಿಸ್ತೃತ ಮಾಹಿತಿ ಸಿಕ್ಕದಿದ್ದಾಗ ಗಾಡಿಗಳು ಹೋಗು-ಬರುವ ವೇಳೆ, ಮಾರ್ಗ, ಸ್ಟೇಷನು. ಇಷ್ಟೇ ಸಿಗುವುವು. ಇದರಿಂದ ಜನರಿಗೆ ಸಾಕಷ್ಟು ತಿಳಿವಳಿಕೆಯುಂಟಾಗಲಾರದು.

ಜನರ ಸೌಕರ್ಯಕ್ಕಾಗಿ ಮಾಡಿದ ನಿಯಮಗಳು ಸಾಧಾರಣವಾಗಿ ಸರ್ವಸಮ್ಮತವಿದ್ದರೂ, ಅವುಗಳನ್ನು ಪ್ರತ್ಯಕ್ಷ ಕೃತಿಯಲ್ಲಿ ತರಲಾಗುತ್ತಿಲ್ಲ. ಇದು ನಮ್ಮ ಅನುಭವಸಿದ್ಧವಾದ ಮಾತು. ಆದರೂ— "ನಮಗೇಕೆ ಬೇಕು, ತಲ್ಪತಕ್ಕ ಸ್ಥಳಗಳಿಗೆ—ಎಷ್ಟೇ ಅನಾನುಕೂಲತೆಗಳಾದರೂ—ತಲ್ಪಿದರೆ ಸಾಕು!" ಎಂಬ ಭಾವನೆಯುಳ್ಳವರೇ ನಮ್ಮಲ್ಲಿ ಬಹಳ ಜನರಿರುವರು. ಆದರೆ ಪ್ರವಾಸಿಕರಿಗೆ ತಮಗಿದ್ದ ಹಕ್ಕು-ಬಾಧ್ಯತೆಗಳನ್ನು ಸಂಪೂರ್ಣವಾಗಿ ಪಡೆಯಲು ಅಧಿಕಾರವಿರುತ್ತದೆ. ಅದನ್ನು ಪಡೆದುಕೊಳ್ಳಲು ಪ್ರಯತ್ನಿಸಿ ಎಲ್ಲರೂ ಪಡೆದುಕೊಳ್ಳಲೇ ಬೇಕು. ಇದರಿಂದ ತಮಗೂ ಸಹಕರವಾಗಿ ಪ್ರವಾಸವಾಗುವದಲ್ಲದೆ ಜನತೆಯ ದೃಷ್ಟಿಯಿಂದಲೂ ಪರೋಪಕಾರದ ಕೆಲಸ ಮಾಡಿದಂತಾಗುವದು. ಆದುದರಿಂದ ಪ್ರತಿಯೊಬ್ಬ ಪ್ರವಾಸಿಯೂ ತನಗಾದ ತೊಂದರೆಯನ್ನು ರೇಲ್ವೆ ಅಧಿಕಾರಿಗಳಿಗೆ ತಿಳಿಸಿ, ತನ್ನ ಹಕ್ಕನ್ನು ಪ್ರಸ್ಥಾಪಿಸಿ, ಜನತೆಯ ಮುಂದೆ ಅದರ ವಿಚಾರವನ್ನು ಇಡಲು ಮರೆಯಬಾರದು. ಕಲಿತವರು ಕುಳಿತು "ನಮಗೇಕೆ ಬೇಕು" ಎಂದು ಸುಮ್ಮನಿದ್ದುಬಿಟ್ಟರೆ, ನಿರಕ್ಷರಿಗಳು ಅಥವಾ ಇಂಗ್ಲಿಷ್ ಅರಿಯದವರು ಏನು ಮಾಡಬಲ್ಲರು.

ಪ್ರತಿಯೊಂದು ಕೂಡುನಿಲ್ದಾಣ (ಜಂಕ್ಶನ್ ಸ್ಟೇಷನ್) ಗಳಲ್ಲಿಯೂ ದೊಡ್ಡ ದೊಡ್ಡ ಊರುಗಳ ಸ್ಟೇಷನುಗಳಲ್ಲಿಯೂ ವಿಚಾರಣಾ ಕಚೇರಿ (ಎನ್‌ಕ್ವಾಯರಿ ಆಫೀಸ್) ಇರುವುದು. ಅಲ್ಲಿ ತಮಗೆ ಗೊತ್ತಾಗದ ವಿಷಯವನ್ನು ಕೇಳಿ ತಿಳಿದುಕೊಳ್ಳಬೇಕು. ಕನ್ನಡ ನಾಡಿನ ಎಲ್ಲ ಸ್ಟೇಷನುಗಳಲ್ಲಿ ಕನ್ನಡದಿಂದಲೇ ಕೇಳಬೇಕು. ತಿಳಿಯದಿದ್ದರೆ ಬಲ್ಲವರಿಂದ ಅರಿತುಕೊಳ್ಳುವ ಒಗ್ಗೆಜತ್ತಾಯ ಮಾಡಬೇಕು.

ತಮ್ಮ ವ್ಯವಹಾರದ ಲಾಭಕ್ಕಾಗಿ ಮತ್ತು ಸ್ಥಿರತ್ವಕ್ಕಾಗಿ ರೇಲ್ವೆ ಕಂಪನಿಗಳು ನಿರ್ಮಿಸಿದ ಎಲ್ಲ ನಿಯಮಗಳು, ಸರ್ವ-ಸಾಮಾನ್ಯವಾಗಿ ಎಲ್ಲರ ತಿಳಿವಳಿಕೆಗೂ ಒಂದಿರುವುವು. ಅದರಲ್ಲಿ ತಪ್ಪಿದ ಪ್ರವಾಸಿಕರಿಂದ ಆದ ಹಣದ ವಸೂಲಿ, ದಂಡ, ತಿಕ್ಷೆಗಳ ಮೂಲಕ ಜನರ ನಿದರ್ಶನಕ್ಕೆ ಅವು ಒಂದಿರುವುವು. ತಪ್ಪಿ ನಡೆಯುವ ಪ್ರವಾಸಿಕರನ್ನು ಶೋಧಿಸುವ ನೋಕರರ ವರ್ಗವೂ ಪ್ರತಿಯೊಂದು ಸ್ಟೇಷನುಗಳಲ್ಲಿ ಇದ್ದೇ ಇರುವುದು. ಅದರಿಂದ "ಪ್ರವಾಸಿಕರು ಲಕ್ಷ್ಯದಲ್ಲಿ ಇಡತಕ್ಕ ಸಂಗತಿ"ಗಳನ್ನು ಬರೆಯುವದು ಅವಶ್ಯವಿಲ್ಲ.

ಉದಾಹರಣಾರ್ಥವಾಗಿ. 'ಟಿಕೀಟು ಇಲ್ಲದೆ ಪ್ರವಾಸ ಮಾಡ ಬಾರದು' 'ನಿಲ್ದಾಣದ ಒಳಗೂ ಹೋಗಬಾರದು' ಎಂಬ ನಿಯಮ ಗಳನ್ನು ಅರಿಯುದವರು ಸಿಗುವುದು ಶಕ್ಯವೇ ಇಲ್ಲ.

ಪ್ರವಾಸಿಕರಿಗಾಗಿ ಇರುವ ಅನುಕೂಲತೆಯ ಹಕ್ಕು ಗಳು ಏನೆಂಬುದು ಒಹಳವಾಗಿ ಒಳಕೆಯಲ್ಲಿ ಇರುವುದಿಲ್ಲ. ಗಿನೆಯ ತಿನೆಯ ವರ್ಗದ ಪ್ರವಾಸಿಕರು ಸಾಕಷ್ಟು ಕಲಿತವರೂ ಅನುಭವಿ ಕರೂ ಇರುವರಲ್ಲದೆ, ಆ ವರ್ಗಗಳ ಸೌಕರ್ಯಗಳನ್ನೂ ರೇಲ್ವೆ ಕಂಪನಿಗಳು ಸಾಕಷ್ಟು ಮಾಡಿರುವುದು ರೂಢಿಯಲ್ಲಿ ಉಂಟು. ಈಗ ತಿನೆಯ ವರ್ಗದ ಪ್ರವಾಸಿಕರ ಅನುಕೂಲತೆಗಳನ್ನು ಕುರಿತು ಇಲ್ಲಿ ಕೆಲವೊಂದು ವಿಷಯವನ್ನು ಬರೆಯಲಿರುವೆನು.

ಟಿಕೀಟು

ಗಾಡಿಯು ಸ್ಟೇಷನಿಗೆ ಬರುವ ವೇಳೆಗಿಂತ ಮೊದಲು—ಅರ್ಧ ತಾಸಿನಿಂದ ಎರಡು ತಾಸುಗಳವರೆಗೆ ಮೊದಲೇ—ಅಲ್ಲಲ್ಲಿಯ ಜನರ ಗದ್ದಲದ ಪ್ರಮಾಣದಲ್ಲಿ—ಟಿಕೀಟು ಕೊಡುವ ಕಿಟಕಿಗಳು ತೆರೆ ಯಲ್ಪಡುವುವು. ಕೆಲವು ಜಂಕ್‌ಶನ್ ಮತ್ತು ದೊಡ್ಡ ಸ್ಟೇಷನು ಗಳಲ್ಲಿ ಯಾವಾಗಲೂ ಟಿಕೀಟು ಕೊಡುವ ಏರ್ಪಾಡು ಇರುವುದು. ಪ್ರತಿಯೊಂದು ಟಿಕೀಟುಕೊಡುವ ಕಿಟಕಿಯ ತಲೆಯ ಮೇಲೆ ಟಿಕೀಟು ದೊರೆಯಬಹುದಾದ ವೇಳೆಯನ್ನು ಬರೆದಿರುವರು. ಆ ವೇಳೆಗೆ ಟಿಕೀಟು ಕೊಡುವ ಕಿಟಕಿಗಳು ತೆರೆದಿರದಿದ್ದರೆ ಪ್ರವಾಸಿ ಕರು ತಕರಾರು ಮಾಡಬಹುದು.

ಟಿಕೀಟು ಪಡಕೊಂಡನಂತರ ಗಾಡಿಗೆ ಹೋಗುವುದು ತಪ್ಪಿದಲ್ಲಿ, ಸ್ಟೇಷನ್ ಮಾಸ್ಟರರಿಗೆ ಕಾರಣ ತಿಳಿಸಿದರೆ, ಟಿಕೀಟಿಗೆ ಕೊಟ್ಟ ಹಣ ವನ್ನು ತಿರುಗಿ ಕೊಡುವರು; ಇಷ್ಟೇ—ಬಂದಾಣೆ 'ಕ್ಲಾಕೇಜ್' ಎಂದು ತೆಗೆದುಕೊಳ್ಳುವರು.

ತಲ್ಪಬೇಕಾದ ಸ್ಟೇಷನುಗಳಿಗೆ ಟಿಕೀಟನ್ನು ಕೊಂಡು, ಮಧ್ಯ ದಲ್ಲಿಯೆ ಯಾವುದಾದರೊಂದು ಸ್ಟೇಷನಿಗೆ ಇಳಿಯಬೇಕೆಂದು ಎನಿಸಿ ದರೆ, ಆ ಸ್ಟೇಷನ್‌ಮಾಸ್ಟರನಿಂದ ಸಹಿ ಮಾಡಿಸಿದ ಟಿಕೀಟನ್ನು "ಡಿಸ್ಪಾಚ್ ಟ್ರಾನ್ಸ್‌ಪೋರ್ಟೇಶನ್ ಸುಪರಿಂಟೆಂಡೆಂಟ್" ರ ಜೊತೆಗೆ ಅರ್ಜಿ ಸಹಿತ ಕಳಿಸಿದಲ್ಲಿ ಇಳಿದ ಸ್ಟೇಷನಿನಿಂದ ಮುಂದೆ ಟಿಕೀಟು ಕೊಂಡ ಸ್ಟೇಷನಿನ ವರೆಗೆ ಆಗುವ ಬಾಡಿಗೆಯ ಹಣ ತಿರುಗಿ ದೊರೆಯುವುದು.

ತಲ್ಪತಕ್ಕ ಊರಿಗೆ ಟಿಕೀಟನ್ನು ಪಡಕೊಂಡು, ಗಾಡಿಯಲ್ಲಿ ಕುಳಿತು, ಅದಕ್ಕಿಂತಲೂ ಮುಂದೆ ಹೋಗಬೇಕಾದಲ್ಲಿ, ಟಿಕೀಟು ಪಡೆದ ಸ್ಟೇಷನಿನಲ್ಲಿ ಗಾರ್ಡನಿಗೆ ಭೆಟ್ಟಿಯಾಗಿ, ಹೋಗತಕ್ಕ ಸ್ಟೇಷನನ್ನು ತಿಳಿಸಿದರೆ, ಪಡೆದುಕೊಂಡ ಟಿಕೀಟಿನ ಹೊರತಾಗಿ, ಹೋಗತಕ್ಕ ಸ್ಟೇಷನಿನ ವರೆಗೆ ಆಗುವ ಚಾರ್ಜನ್ನು ಮಾತ್ರ ತೆಗೆದು ಕೊಂಡು ಅತ ರಸೀದಿ ಕೊಡುವನು.

ತಿಳಿಯದೆ ಅಥವಾ ನಿದ್ರೆಹತ್ತಿದಾಗ ತಾವು ಇಳಿಯಬೇಕಾದ ಸ್ಟೇಷನನ್ನು ಬಿಟ್ಟು, ಮುಂದೆ ಹೋಗಿ ಎಚ್ಚರಾಗಿ ಇಳಿದರೆ, ಇಳಿಯ ಬೇಕಾದ ಟಿಕೀಟಿನ ಹೊರತಾಗಿ, ಇಳಿದ ಸ್ಟೇಷನಿಗೆ ಆಗತಕ್ಕ ಟೀಕಿಟಿನ ಹಣವನ್ನು ಮಾತ್ರ ತೆಗೆದುಕೊಂಡು ಪಾವತಿಕೊಡುವರು.

ಪ್ಯಾಸೆಂಜರ್ ಬಂಡಿಯ ಟಿಕೀಟನ್ನು ತೆಗೆದುಕೊಂಡು 'ಮೇಲ್' ಅಥವಾ 'ಎಕ್ಸ್‌ಪ್ರೆಸ್' ಗಾಡಿಯಲ್ಲಿ ಹೋಗುವ ಪ್ರಸಂಗ ಒದಗಿ ದಾಗ, ಸ್ಟೇಷನ್ ಮಾಸ್ಟರರಿಗೆ ಹೆಚ್ಚಿಗೆ ಬೀಳುವ ಹಣವನ್ನು ಕೊಟ್ಟು, ಅವರಿಂದ ಪಾವತಿ ಪಡೆದುಕೊಂಡು ಹೋಗಲಿಕ್ಕೆ ಬರು-ತ್ತದೆ. ಅದರಂತೆಯೇ ಹೆಚ್ಚಿನ ವರ್ಗದ ಡಬ್ಬಿಗಳಲ್ಲಿ ಕುಳಿತು ಪ್ರವಾಸಮಾಡಲು ಅಪೇಕ್ಷಿಸಿದವರೂ ಹೆಚ್ಚಿನ ಹಣವನ್ನು ಮಾತ್ರ ಕೊಟ್ಟು ಪಾವತಿ ಪಡೆದುಕೊಂಡು ಕುಳಿತುಕೊಳ್ಳಬಹುದು. ಪಾವತಿಗೂ ಟಿಕೀಟಿನಷ್ಟೇ ಮಹತ್ವವಿರುವುದು.

ನಾವು ಹೋಗತಕ್ಕ ಊರುಗಳಿಗಾಗಿ ಮುದ್ರಿತವಾದ ಟಿಕೀಟು ಗಳು ಸ್ಟೇಷನುಗಳಲ್ಲಿ ಇರದಿದ್ದರೆ, ಬರಿ ಟಿಕೀಟಿನ ಮೇಲೆ, ಹೋಗ ತಕ್ಕ ಊರನ್ನೂ, ಬಾಡಿಗೆಯ ಹಣವನ್ನೂ ಬರೆದುಕೊಡುವುದಕ್ಕಾಗಿ ಸ್ಟೇಷನ್ ಮಾಸ್ಟರರಿಗೆ ಬರುತ್ತದೆ. ಇದನ್ನು ಅವರ ನಿದರ್ಶನಕ್ಕೆ ತಂದು ಕೊಟ್ಟು ಟಿಕೀಟನ್ನು ಪಡೆದುಕೊಳ್ಳಬೇಕು.

ಮೇಲೆ ಒರೆದುವುಗಳಲ್ಲಿ, ಪಾವತಿ ಪಡಕೊಳ್ಳುವ ಹಣ, ರೇಲ್ವೆ ಗಾಡಿಯ ಬಾಡಿಗೆಯಷ್ಟೇ ಇರುವುದೆಂಬುದನ್ನು ನೆನಪಿನಲ್ಲಿಡಬೇಕು.

ಪ್ರವಾಸಿಕರ ಹಕ್ಕು

ದೂರ ಪ್ರವಾಸ ಮಾಡುವವರು ವಿಶ್ರಾಂತಿಗಾಗಿ ೧೦೦ ಮೈಲಿಗೆ ಒಂದುದಿನದಂತೆ ನಡುವೆ ಬೇಕಾದ ಸ್ಥಳದಲ್ಲಿ ವಿಶ್ರಾಂತಿ ಹೊಂದ ಬಹುದು. ಆದರೆ ಟಿಕೀಟಿನ ಮೇಲೆ ಸ್ಟೇಷನ್ ಮಾಸ್ಟರರ ಕಡೆ ಯಿಂದ ಶರಾ ಬರೆಯಿಸಿ ಸಹಿ ಮಾಡಿಸಿಕೊಳ್ಳಬೇಕು.

ನೀವು ೧೦೦ ಮೈಲು ಪ್ರವಾಸ ಮಾಡಿ, ನಡುವೆ ಇಳಿದ ಸ್ಟೇಷನು ಗಳಲ್ಲಿ ಅಥವಾ ಜಂಕ್ಶನ್ ಸ್ಟೇಷನುಗಳಲ್ಲಿ, ಒಂದು ಗಾಡಿಗೆ ಇಳಿದು ಎರಡನೆಯ ಗಾಡಿಗೆ ಹೋಗಬೇಕಾದಲ್ಲಿ (ನಡುವೆ ಇರುವ ವೇಳೆ ಯಲ್ಲಿ), ಕೆಲಸದ ನಿಮಿತ್ತ ಊರೊಳಗೆ ಹೋಗಬೇಕಾದರೆ, ನಿಮ್ಮ ಲ್ಲಿದ್ದ ಸಾಮಾನುಗಳನ್ನು ಸಂಗಡ ಒಯ್ಯಲು ತೊಂದರೆಯಾಗುತ್ತಿ ದ್ದರೆ, ಅವುಗಳನ್ನು ಸ್ಟೇಷನಿನ 'ಕ್ಲೋಕ್‌ರೂಮ್' ಎಂಬ ಕೊಠಡಿ ಯಲ್ಲಿ ಇಟ್ಟು ಹೋಗಲಿಕ್ಕೆ ಬರುತ್ತದೆ. ಅದಕ್ಕಾಗಿ ಪ್ರತಿಯೊಂದು ಸಾಮಾನಿಗೆ ಎರಡಾಣೆಯಂತೆ ಬಾಡಿಗೆಯನ್ನು ತೆಗೆದುಕೊಂಡು, ಗಂಟುಗಳ ಸಂಖ್ಯೆಯ ಬಗ್ಗೆ ಪಾವತಿ ಕೊಡುವರು. ತಿರುಗಿ ತೆಗೆದು ಕೊಳ್ಳುವಾಗ 'ಪಾವತಿಯ ಪ್ರಕಾರ ಸಾಮಾನು ಇದೆ' ಎಂಬು ದನ್ನು ಖಾತ್ರಿ ಮಾಡಿಕೊಂಡು ತೆಗೆದುಕೊಳ್ಳಬೇಕು.

ಟಿಕೀಟು ಪಡೆದುಕೊಂಡು ಗಾಡಿಯಲ್ಲಿ ಕುಳಿತಾಗ ಡಬ್ಬಿಗಳು ಬಹಳ ಹೊಲಸು ಇದ್ದರೆ, ಪಾಯಖಾನೆಯು ಅಸ್ವಚ್ಛವಿದ್ದರೆ, ನೀರು ಇರದಿದ್ದರೆ, ರಾತ್ರಿ ದೀಪಗಳನ್ನು ಹಚ್ಚದಿದ್ದರೆ, ಮತ್ತು ಇಂತಿಷ್ಟೇ ಜನರು ಕೂಡ್ಯಬೇಕೆಂದು ನಿರ್ದಿಷ್ಟವಿದ್ದ ಡಬ್ಬಿಯಲ್ಲಿ ಗದ್ದಲವಾಗುವಷ್ಟು ಜನರನ್ನು ತುಂಬಿದ್ದರೆ—ಈ ತೊಂದರೆಗಳನ್ನು

ಸ್ಟೇಷನ್ ಮಾಸ್ಟರರಿಗೆ ತಿಳಿಸಿ, ಸರಿಪಡಿಸಿಕೊಳ್ಳಬೇಕು. ಕೇಳದೆ ಇದ್ದರೆ ಸಭ್ಯಗೃಹಸ್ಥರ ಸಾಕ್ಷಿ ಸಹಿತವಾಗಿ ಅರ್ಜಿ ಮಾಡಿಕೊಂಡು, ವರ್ತಮಾನಪತ್ರಗಳಲ್ಲಿಯೂ ಪ್ರಸಿದ್ಧಿಸಬಹುದು. ಇಂತಹ ದೂರುಗಳು ಕಂಡಾಗಲೆಲ್ಲ ಅವುಗಳನ್ನು ಆಗಾಗ ರೇಲ್ವೆ ಅಧಿಕಾರಿಗಳ ನಿದರ್ಶನಕ್ಕೆ ತಂದುಕೊಡುತ್ತಿದ್ದಲ್ಲಿ, ತೀವ್ರತೆಯಿಂದ ಸುಧಾರಣೆಗಳು ಆಗುವುವು. ಇದರಂತೆಯೇ ಸ್ಟೇಷನುಗಳ ಮೇಲೆ ನಳಗಳಿದ್ದರೂ ನೀರು ಬಿಡುವುದಿಲ್ಲ, ದೀಪದ ಕಂಬಗಳಿದ್ದರೂ ರಾತ್ರಿ ದೀಪ ಹಚ್ಚುವುದಿಲ್ಲ; ಕುಳಿತುಕೊಳ್ಳಲು ಬೆಂಚುಗಳಿದ್ದರೂ ಇಟ್ಟಿರುವುದಿಲ್ಲ. ಕಕ್ಕಸ (ಪಾಯಿಖಾನೆ) ಗಳೆಂದರೆ ನೋಡಲು ಸಾಧ್ಯವಿರುವುದಿಲ್ಲ. ಇದರ ಬಗ್ಗೆ ದೂರುಗಳನ್ನೂ ರೇಲ್ವೆ ಅಧಿಕಾರಿಗಳಿಗೆ ಕಳಿಸುವುದನ್ನು ಮರೆಯಬಾರದು. ತಮಗೆ ತೊಂದರೆಯಾದರೂ ಮುಂದೆ ಸುಧಾರಣೆಗಳಾಗುವುವು. ಮತ್ತು ಪ್ರತಿಯೊಂದು ಜಂಕ್ಷನ್ ಸ್ಟೇಷನುಗಳಲ್ಲಿಯೂ ದೊಡ್ಡ ಊರುಗಳ ಸ್ಟೇಷನುಗಳಲ್ಲಿಯೂ ಇಂತಹ ವಿಷಯಗಳಿಗಾಗಿ 'ಕಂಪ್ಲೆಂಟ್ಸ್ ಬುಕ್ಕು' ಇರುವುವು. ಅವುಗಳಲ್ಲಿ ಕಲಿತ ಜನರು ಕೂಡ ಏನನ್ನೂ ಬರೆಯುವುದಿಲ್ಲ. ಈ ಕಂಪ್ಲೆಂಟ್ಸ್ ಬುಕ್ಕುಗಳಲ್ಲಿ ಬೇಕಾದ ಭಾಷೆಯಿಂದ ಬರೆಯಬಹುದು. ಈ ಬುಕ್ಕು ಎಲ್ಲಿರುವುದೆಂಬುದನ್ನು ಸ್ಟೇಷನ್ ಮಾಸ್ಟರರನ್ನು ಕೇಳಿ ತಿಳಿದುಕೊಳ್ಳಬೇಕು.

ರಾತ್ರಿಯ ಹೊತ್ತಿನಲ್ಲಿ ಗಾಡಿಯಿಂದ ಇಳಿದ ಪ್ರವಾಸಿಕರಿಗೆ, ಮೂರನೆಯ ವರ್ಗದ ವೇಟಿಂಗ್ ರೂಮಿನಲ್ಲಿ ಬೆಳಗಾಗುವ ವರೆಗೆ ಇರಲು ಅಧಿಕಾರವಿರುತ್ತದೆ.

ಪ್ರತಿಯೊಬ್ಬ ಸಿನೆಯ ವರ್ಗದ ಪ್ರವಾಸಿಕನಿಗೆ ತನ್ನ ಸಂಗಡ ೬೫ ಪೌಂಡು (೯೦ ಪೌಂಡು) ತೂಕದಷ್ಟು ಸಾಮಾನುಗಳನ್ನು ಜೊತೆಗೆ ಒಯ್ಯಲು ಒರುತ್ತದೆ. ಆದರೆ ಪ್ರವಾಸಿಕನಿಗೆ ಬೇಕಾದ ಹಾಸಿಗೆ, ಕೈಯೊಳಗಿನ ಬಿಡಿಗೆ, ಕೊಡೆ, ಫರಾಳದ ಡಬ್ಬಿ ಮತ್ತು ಸಣ್ಣ ಕೂಸುಗಳ ಸಲುವಾಗಿ ತೆಗೆದುಕೊಂಡ ತೊಟ್ಟಿಲು ಮೊದಲಾದುವುಗಳನ್ನು ತೂಕ ಮಾಡುವ ಕಾರಣವಿರುವುದಿಲ್ಲ.

ಅನುಕೂಲತೆಗಳು

ಕೆಲವು ಗೊತ್ತುಪಡಿಸಿದ ಗಾಡಿಗಳಲ್ಲಿ ಮತ್ತು ಸ್ಟೇಷನುಗಳಲ್ಲಿ ಫಲಾಹಾರದ ವ್ಯವಸ್ಥೆ ಇರುವುದು. (ಚಹಾ-ಕಾಫಿ ಸಹ) ಅವುಗಳ ಕ್ರಯದ ಪಟ್ಟಿಯನ್ನು ನೋಡಿ ಬೆಲೆಯ ಪೊಕ್ಕ ಕೊಡಬೇಕು; ಮತ್ತು ಜೀನಸುಗಳನ್ನು ರೇಲ್ವೆಯ ನಿಯಮದಂತೆ ಮಾಡಿರದಿದ್ದರೆ ಅದರ ಸಲುವಾಗಿ ದೂರುಗಳನ್ನು ರೇಲ್ವೆ ಅಧಿಕಾರಿಗಳ ಕಡೆಗೆ ಕೊಡಬೇಕು. ಊಟದ ವ್ಯವಸ್ಥೆಯನ್ನು ಕೆಲವು ಗೊತ್ತುಪಡಿಸಿದ ಸ್ಟೇಷನುಗಳಲ್ಲಿ ಇಟ್ಟಿರುವರು. ಯಾವ ಸ್ಟೇಷನುಗಳಲ್ಲಿ ಈ ವ್ಯವಸ್ಥೆ ಇರುವುದೋ ಅದಕ್ಕೆ ಹಿಂದಿನ ಬೇಕಾದ ಸ್ಟೇಷನಿನಲ್ಲಿಯೂ ಊಟದ ಒಗ್ಗೆ ಇಂತಿಷ್ಟು ಜನರಿಗೆ ವ್ಯವಸ್ಥೆ ಮಾಡಿಸಬೇಕೆಂದು ಗಾರ್ಡನಿಗೆ ತಿಳಿಸಿದರೆ, ಅವನು ತಂತಿಯ ಮೂಲಕ ಪುಕ್ಕಟೆಯಾಗಿ ಅವರಿಗೆ ತಿಳಿಸುವನು. ಆದರೆ ಗಾರ್ಡನಿಗೆ ತಿಳಿಸುವ ವೇಳೆಯಿಂದರೆ, ರೇಲ್ವೆ ಭೋಜನಾಲಯವಿದ್ದ ಸ್ಟೇಷನಿಗೆ ಮುಟ್ಟುವುದಕ್ಕಿಂತ ಎಂಟು ತಾಸು ಮೊದಲು ಇರಬೇಕು.

ಊಟದ ದರವನ್ನೂ ಪದಾರ್ಥಗಳ ಕ್ರಯವನ್ನೂ, ಕಂಪನಿಯಿಂದ ಗೊತ್ತುಪಡಿಸಿದ ಬರೆದಿಟ್ಟ ದರಗಳ ಪಟ್ಟಿಯಲ್ಲಿ ನೋಡಬೇಕು. ಇಲ್ಲಿಯೂ 'ಕಂಪ್ಲೇಂಟ್ಸ್ ಬುಕ್ಕು' ಇರುವುದು. ತಿಂಡಿತಿನಿಸುಗಳಲ್ಲಿ ಅಸ್ವಚ್ಛತೆಯಿದ್ದರೆ—ಹೊಲಸು ಅಥವಾ ತಂಗುಳು ಇದ್ದರೆ—ಅದನ್ನು ಈ ಬುಕ್ಕಿನಲ್ಲಿ ಬರೆದು, ಮುಂದೆ ಅಧಿಕಾರಿಗಳ ಕಡೆಗೂ ದೂರು ಕಳಿಸಬೇಕು.

ರೇಲ್ವೆ ಪ್ರವಾಸಿಕರಿಗೆ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕಾಗಿ ಬೆಳಗಾಂವಿಯಲ್ಲಿ "ರೇಲ್ವೆ ಮಂಡಳ" ಎಂಬ ಸಂಸ್ಥೆ ಇರುವುದು. ಈ ಮಂಡಲಕ್ಕೆ ಪ್ರವಾಸಿಕರು ತಮ್ಮ ತೊಂದರೆಯನ್ನು ಸವಿಸ್ತಾರವಾಗಿ ತಿಳಿಸಿದಲ್ಲಿ, ಅವರು ರೇಲ್ವೆ ಅಧಿಕಾರಿಗಳ ಕೂಡ ಪತ್ರವ್ಯವಹಾರ ಮಾಡಿ, ಸರಿಪಡಿಸುವುದಕ್ಕೆ ಪ್ರಯತ್ನಿಸುವರು. ಸ್ಟೇಷನುಗಳಲ್ಲಿ ರೇಲ್ವೆ ಕಂಪನಿಯಿಂದ ಅಪ್ಪಣೆ ಪಡೆದ ಪ್ಲ್ಯಾಟಫಾರ್ಮ್ ಕೂಲಿಗಳಿರುವರು. ಅವರಿಗೆ ಒಂದು ತಲೆಭಾರದ ಸಾಮಾನಿಗೆ ಒಂದಾಣೆಯಂತೆ ಕೂಲಿ ಕೊಡಬೇಕೆಂದು ನಿಯಮವಿದೆ. ಆದರೆ ಅವರು ಪ್ರತಿಯೊಂದು ಗಂಟಿಗೂ ಒಂದಾಣೆಯಂತೆ ಕೂಲಿ ಬೇಡುವರು. ಇದನ್ನು ಲಕ್ಷ್ಯದಲ್ಲಿ ಇಡಬೇಕು. ಅವರ ಬಿಲ್ಲೆಯ ನಂಬರು ನೋಡಿ ಇಟ್ಟು, ಆ ನಂಬರಿನ ಕೂಲಿಯ ಮೇಲೆ ದೂರುಹಾಕಬೇಕು. ಯಾವುದೇ ಒಂದು ಪ್ರಸಂಗದಲ್ಲಿ ೮ ಜನರಿಗಿಂತ ಹೆಚ್ಚು ಜನರು ಹೋಗುವುದಿದ್ದಲ್ಲಿ, ಸ್ಥಳವನ್ನು ಕಾದಿಡುವ ಬಗ್ಗೆ—ಯಾವ ಸ್ಟೇಷನಿನಿಂದ ಹೊರಡುವುದಿರುವುದೋ ಆ ಸ್ಟೇಷನಿನ ಮಾಸ್ತರರಿಗೆ—೪೮ ತಾಸು ಮೊದಲೆ ತಿಳಿಸಿದಲ್ಲಿ, ಅವರು ಸ್ಥಳವನ್ನು ರಿಝರ್ವ್ ಮಾಡಿ ಇಡುವರು.

ಭಯಸೂಚಕ ಸರಪಳಿ

ಪ್ರತಿಯೊಂದು ಡಬ್ಬಿಯ ಮೇಲ್ಭಾಗದಲ್ಲಿಯೂ ಒಂದು ಸರಪಳಿಯ ಅಡ್ಡ ತುಂಡು ಇರುವುದು. ಅದನ್ನು ೫೦ ರೂಪಾಯಿಗಳಿಗಿಂತ ಹೆಚ್ಚಿನ ಬೆಲೆಯ ಸಾಮಾನು ಬಿದ್ದಾಗಲೆ ಜಗ್ಗಬಹುದೆಂಬ ಕಲ್ಪನೆ ಹಲವರಲ್ಲಿ ಇದೆ; ಆದರೆ ಇದು ತಪ್ಪು.

ಒಂದು ಡಬ್ಬಿಯಲ್ಲಿ ನಿರ್ಧರಿಸಲ್ಪಟ್ಟ ಸ್ಥಳಗಳಿಗಿಂತ ಹೆಚ್ಚು ಜನರು ಸೇರಿಗೆದ್ದಲಾದರೆ, ಹೆಣ್ಣುಮಕ್ಕಳ ಮೇಲೆ ಒಳಾತ್ಕಾರವಾಗುತ್ತಿದ್ದರೆ, ಕಳ್ಳರು ಅಥವಾ ಸೇಡು ತೀರಿಸಿಕೊಳ್ಳುವವರು ಮೈಮೇಲೆ ಎರಿ ಒಂದರೆ, ಬೆಂಕಿ ಹತ್ತಿದರೆ, ಮತ್ತೇನಾದರೂ ಅಪಘಾತಗಳಾದರೆ, ಸ್ಟೇಷನ್ ಬಿಡುವಾಗ ಕೂಸು ಹೆಣ್ಣು ಮಕ್ಕಳು ಅಥವಾ ಮುದುಕರು ಅತಕ್ಕ ಜನರು ಕೆಳಗೆ ಉಳಿದು ಗಾಡಿ ನಡೆದರೆ, ಹೆಂಗುಸರ ಡಬ್ಬಿಗಳಲ್ಲಿ ಗಾಡಿ ನಡೆಯುವಾಗ ಯಾರಾದರೂ ಹತ್ತಿದರೆ, ಬಾಗಿಲು-ಕಿಟಕಿಗಳು 'ನಾದುರುಸ್ತ' ಇದ್ದು ಭಯ ಒದಗುತ್ತಿದ್ದರೆ, ಒಯ್ಯತಕ್ಕ ಸಾಮಾನು ಕಳ್ಳರೇ

(ಒನೆಯ ಪುಟಕ್ಕೆ ಮುಂದುವರಿದಿದೆ)

ನಮ್ಮ ಪಿಡುಗು-ಪುಢಾರಿಗಳು

ಶ್ರೀಕಂಠ

೧. ಕರ್ನಾಟಕ-ವನ-ಕಂಠೀರವ

ಅರ್ಥಾತ್

ಕನ್ನಡ ಕಂಠರವ

[ಎಚ್ಚರಿಕೆ:— ಇದೊಂದು ವ್ಯಂಗ್ಯ-ಚಿತ್ರಲೇಖ-ಮಾಲೆ. ಕೇವಲ ಕಾಲ್ಪನಿಕವಾದುದು. ಇಲ್ಲಿ ಚಿತ್ರಿಸಿದ ವ್ಯಕ್ತಿ, ವ್ಯವಹಾರದ ಯಾವುದೊಂದು ವ್ಯಕ್ತಿಯನ್ನೂ ಸಂಬಂಧಿಸಿಲ್ಲ. ಈ ಮಾತನ್ನು ಮರೆತು ಯಾರಾದರೂ ದೊಡ್ಡಿಸ್ತನದಿಂದಾಗಲಿ ದುರ್ಲಕ್ಷ್ಯದಿಂದಾಗಲಿ ತಮ್ಮ ಇಲ್ಲವೆ ಅನ್ಯರ ಸಂಬಂಧ ಕಲ್ಪಿಸಿಕೊಂಡರೆ, ಅದರ ಪೂರ್ಣ ಹೊಣೆಗಾರಿಕೆ ಅವರವರ ತಲೆಯ ಮೇಲೆಯೆ. —ಸಂಪಾದಕರು]

ಹತ್ತು ಸಾವಿರಗಟ್ಟಲೆ ಕನ್ನಡಿಗರು ಸೇರಿದ ಸಭೆಯಲ್ಲಿ ಭಾರತದ ಮುಂದಾಳು ಮಹನೀಯರೊಬ್ಬರು 'we, Indians, have no voice— ಭಾರತೀಯರಾದ ನಮ್ಮನ್ನು ಯಾರೂ ಕೇಳುವುದಿಲ್ಲ' ಎಂದರಂತೆ. ಆಗ ನಮ್ಮ ಮುಂದಾಳು ಎದ್ದು ನಿಂತು 'ಏನು? ನನ್ನಂತಹನ ಕಂಠರವ ಇರುವಾಗ ಇಂತಹ ಮಾತೆ?' ಎಂದನಂತೆ. ಅಂದು ನೆರೆದ ಕನ್ನಡಿಗ ಶ್ರೋತೃವೃಂದವು ನಗೆಯ ಅಭಿಷೇಕದಿಂದ 'ಕನ್ನಡ ಕಂಠರವ' ಎಂಬ ಬಿರುದನ್ನು ಕೊಟ್ಟಿದ್ದಾರೆ ಈ ಮಹನೀಯರಿಗೆ!

ತ್ರೇತಾಯುಗದ ದಶಕಂಠನ ಕತೆಯಲ್ಲವಿದು; ಬಾತಾಯುಗದ ವಶಕಂಠನ ಪರಿಚಯ. ಮುಂದಾಳಾಗಬೇಕಾದರೆ ಮೊದಲನೆಯ ಮುಖ್ಯಗುಣವಾವುದು ಗೊತ್ತೇ? ಕೂಗುವುದು, ಕಿರುಚುವುದು! 'ಕಂಠರವ'ರು ಅದನ್ನು ಬಹು ಚೆನ್ನಾಗಿ ಮಾಡಬಲ್ಲರು!

ಈ 'ಕನ್ನಡ ಕಂಠರವ'ರಂತಹ ಮುಂದಾಳು ದೊರೆತುದು ನಿಜವಾಗಿಯೆ ಕರ್ನಾಟಕದ ಭಾಗ್ಯ. ಕಳೆದ ೩೦—೪೦ ವರ್ಷಗಳಿಂದ ಕರ್ನಾಟಕದ ಕೂಗು ಒಂದೇ ಸವನೆ ಕೇಳಬರುತ್ತಿರುವುದಕ್ಕೆ ಈ ಮಹನೀಯರ ಕಂಠತ್ರಾಣವೆ ಮುಖ್ಯಕಾರಣ. ಇಷ್ಟು ವರ್ಷಗಳಿಂದ ಇಂತಹ ಉದಾಹರಣೆ ನಮ್ಮ ಕಣ್ಣು ಕಟ್ಟಿದ್ದರಿಂದಲೆ ಕನ್ನಡಿಗರಾದ ನಾವೆಲ್ಲರೂ ಕೂಗುವುದನ್ನು ಕಲಿಯುತ್ತಲಿದ್ದೇವೆ. ಇಂದು ನೋಡಿದಲ್ಲೆಲ್ಲ ಒಂದಿಲ್ಲೊಂದು ಕೂಗು. ಒಂದು ಕಡೆ ದೇಶದ ಹೆಸರಿನಿಂದ, ಒಂದು ಕಡೆ ಧರ್ಮದ ಹೆಸರಿನಿಂದ, ಇನ್ನೊಂದು ಕಡೆ ಜಾತಿಯ ಹೆಸರಿನಿಂದ— ಹೀಗೆ ಯಾವುದೇ ನಿಮಿತ್ತವನ್ನು ಕಂಡುಹಿಡಿದು ಯಾವಾಗಲೂ ಕೂಗುತ್ತಿರುವ ನಮ್ಮ ವೀರವೃತ್ತಿಗೆ ಈ 'ಕಂಠರವ'ರೆ ಸ್ಫೂರ್ತಿಯಾಗಿದ್ದಾರೆ. ಮುಖ್ಯವಾದ ಕೆಲಸವೆಂದರೆ ಕೂಗುವುದು, ಅದಕ್ಕೂ ಮುಖ್ಯವಾದುದೆಂದರೆ ಕಿರುಚುವುದು.

ನಮ್ಮ 'ಕಂಠರವ'ರ ಉದಾಹರಣೆಯಿಂದ ಕನ್ನಡಿಗರ ಸಂಕುಚಿತದೃಷ್ಟಿ ಕಳೆಯುತ್ತಲಿದೆ; ಕನ್ನಡಿಗರು ವಿಶಾಲಹೃದಯುದವರು, ದೂರದೃಷ್ಟಿಯವರು ಆಗುತ್ತಲಿದ್ದಾರೆ. ಅಲ್ಲವೆ ಮತ್ತೆ? ಒಬ್ಬನು 'ಕಾಂಗ್ರೆಸ್ಸೆ ಶ್ರೇಷ್ಠ' ಎನ್ನುವುದು, ಒಬ್ಬನು 'ಹಿಂದೀ ಬೇಕು' ಎನ್ನುವುದು, ಇನ್ನೊಬ್ಬನು 'ಎಲ್ಲಕ್ಕೂ ಏಕೀಕರಣವೆ ಮದ್ದು' ಎನ್ನುವುದು, 'ಮತೊಬ್ಬನು ಜಾತಿಭೇದ ಬೇಡ' ಎನ್ನುವುದು— ಇದಲ್ಲವೆ ಏಕೈಕದೃಷ್ಟಿಯ ಸಂಕುಚಿತಮನೋವೃತ್ತಿ? ಈ ಸಂಕುಚಿತ ವೃತ್ತಿಯನ್ನು ಒಂದೇಸವನೆ ತೆಗೆದು ಹಾಕಲು ಯತ್ನಿಸುತ್ತಿದ್ದಾರೆ ನಮ್ಮ 'ಕಂಠರವ' ಕಲಾಗಲಿಗಳು. 'ಇದೇ ಒಳಿತು, ಇದು ಒಲ್ಲದು' ಎಂಬ ಸಂಕುಚಿತ ಪಟ ಅವರಿಗಿಲ್ಲ. ಯಾವುದರಲ್ಲಿ ಹೆಚ್ಚಾಗಿ ಕಂಠರವಕ್ಕೆ ಅನುಕೂಲ ವಿದೆಯೊ ಅದನ್ನು ಸಾರುವರು ಅವರು. ಹಿಂದೊಮ್ಮೆ ಕಾಂಗ್ರೆಸು ಶ್ರೇಷ್ಠವಿದ್ದಿತು. ಯಾಕೆ? ಕಾಂಗ್ರೆಸಿನಲ್ಲಿ ಕಂಠರವಕ್ಕೆ ಮಾನ ವಿದ್ದಿತೆಂದು! ಇಂದು ಕರ್ನಾಟಕ ಶ್ರೇಷ್ಠ; ಯಾಕೆಂದರೆ, ಕರ್ನಾಟಕಾಂಬೆಯ ಕರುಣಾಜನಕ ಕೂಗಿಗಾಗಿ ಕಂಠರವನ್ನು ಕುಣಿದಾಡಿಸಲು ಇಂದು ಹೆಚ್ಚು ಅನುಕೂಲ. ಮುಂದೆ, ಜಾತಿಭೇದವೆ ಮಹತ್ತ್ವವೆದ್ದೆನಿಸಬಹುದು—ಆದರಿಂದ ಕಂಠರವಕ್ಕೆ

ಮಸ್ಸಣಿ ದೊರೆತರೆ. ಒಟ್ಟು, 'ಕಂಠರವವೆ ಸತ್ಯ, ಕಾಂಗ್ರೆಸ್-ಕರ್ನಾಟಕ ಎಂಬ ಭೇದ ಅಸತ್ಯ' ಎಂಬುದು ಈ ಮಾತಿನ ಮುಲ್ಲರ ಮರ್ಮಜ್ಞಾನ.

'ಇಂದು ಒಂದು, ನಾಳೆ ಇನ್ನೊಂದು ಎಂದು ಬೇರೆ ಧ್ಯೇಯಗಳನ್ನಿಟ್ಟುಕೊಳ್ಳುವುದು ಇದೆಂತಹ ಅಸಂಬದ್ಧ (inconsistent) ನಡತೆ?' ಎಂದು ವಾಚಕರು ತಪ್ಪು ತಿಳಿದುಕೊಳ್ಳಬಾರದು. ಯಾಕೆಂದರೆ, ಇಲ್ಲಿ ಬೇರೆ ಧ್ಯೇಯಗಳ ಪ್ರಶ್ನೆಯೆ ಬರುವುದಿಲ್ಲ. ಕಂಠರವ-ಕಂಠರವ-ಕಂಠರವ, ಇದೇ ತ್ರಿಕಾಲಗಳಲ್ಲೂ ಒಂದೇ ಒಂದಾದ ಧ್ಯೇಯ.

ಈ ಕನ್ನಡ 'ಕಂಠರವ'ಕಲಿಯನ್ನು ಕಂಡರಿಯದವರಾರು? ಕರ್ನಾಟಕದ ಮೂಲೆ ಮೂಲೆಗಳಲ್ಲಿ, ಎಲ್ಲೆಲ್ಲಿ ಸಭೆ ಸೇರುವುದೊ, ಅಲ್ಲಿ ಶ್ರೋತೃವೃಂದವು ಕಿವಿಯುಚ್ಚಿಕೊಂಡು ಕುಳಿತಿದ್ದರೆ 'ಕಂಠರವ'ರ ಉಪನ್ಯಾಸ ಗಡಚಿಕ್ಕುತ್ತಲಿದೆ ಎಂದು ತಟ್ಟನೆ ತಿಳಿದುಕೊಳ್ಳಬಹುದು. ಕಪ್ಪುಮುಖ, ಕೆಂಪುನಾಲಗೆ, ಬಿಳಿಯವಾದ ಹಲ್ಲು— ಈ ತ್ರಿವರ್ಣಧ್ವಜ ಯಾವ ಸಭೆಯಲ್ಲಿ ಕಂಡು ಬರುವುದೊ ಅಲ್ಲಿ 'ಕಂಠರವ'ನು ಕನ್ನಡ ಸಭಾರಮಣನಾಗಿದ್ದಾನೆಂದು ಖಂಡಿತವಾಗಿ ಕಾಣಬಹುದು. ಎಷ್ಟೊಂದು ಗರ್ಜಿಸಿದರೂ ಮೈ ಬೆವರೊಡೆಯದಂತಹ ಗಟ್ಟಿಗನಿವನು! ಬೆವರೊಡೆದರೂ ಅದು ಕೇವಲ ಕಣ್ಣೀರಿನ ರೂಪದಿಂದಲೆ ಹೊರಬೀಳುವುದು; ಇಂತಹ ಶುದ್ಧಸ್ವಭಾವದವನಿವನು! ಅದೆಂತಹ ಕಂಠತ್ರಾಣ! ಎಷ್ಟೋಸಲ ಯಾರಿಗೂ ಸಭೆಯಂತಹ ಪ್ರಸಂಗದಲ್ಲಿ ಶಕ್ಯವಾಗದ ಶಬ್ದಗಳನ್ನು ಈ ಕಂಠವು ಬಯಲಿಗೆ ಎಳೆದುತರುವುದು. ಎಂತಹ ಕಂಠತ್ರಾಣ! ಬುದ್ಧಿಗೆ ತೋಚದ ವಿಚಾರಗಳನ್ನೂ ಹೃದಯದಲ್ಲಿ ಇರದ ಭಾವನೆಗಳನ್ನೂ ಕೇವಲ ತನ್ನ ಶಕ್ತಿಯಿಂದಲೆ ವ್ಯಕ್ತಪಡಿಸುವುದು. ಎಂತಹ ನಿಷ್ಪಕ್ಷಪಾತದ ಕಂಠತ್ರಾಣ! ಯಾವ ವಿಷಯವನ್ನು ಕೊಟ್ಟರೂ ಅದೇ ಕಂಠವಲ್ಲಿ ಅದೇ ತ್ರಾಣ, ಅಷ್ಟೆ ತ್ರಾಣ!

ತ್ರೇತಾಯುಗದ ದಶಕಂಠನಿಗಿಂತಲೂ ನಮ್ಮ 'ಬಾತಾಯುಗ'ದ ವಿಶಕಂಠನು ವಿಂಗಿಲೆನಿಸುವ ಬಲಾಢ್ಯನು. ಹತ್ತು ಕಂಠಗಳಿಂದ ಒಂದೇ ಹೆಸರನ್ನು ಜಪಿಸಿ ಪರಮಾತ್ಮನನ್ನು ಒಲಿಸಿಕೊಂಡನು ದಶಕಂಠನು; ಆದರೆ ಒಂದೇ ಕಂಠದಿಂದ ಹತ್ತು ಮಾತುಗಳನ್ನು ಹೇಳಿ ಪರಮಾತ್ಮನನ್ನೂ ಪ್ರಜೆಗಳನ್ನೂ ಒಲಿಸಿಕೊಂಡಿದ್ದಾನೆ ನಮ್ಮ ವಿಶಕಂಠ! ಪಾಪ, ದಶಕಂಠನಿಗೆ ಹತ್ತು ತುಂಬಿದ ತಲೆಗಳ ಭಾರ; ನಮ್ಮ ನಾಲಗೆ ನರಕೇಸರಿಗೆ ತುಂಬಿದ್ದೆಂದರೆ ಕಂಠ ಮಾತ್ರ, ತಲೆಯಲ್ಲ; ಇದು ಹೆಚ್ಚಿನ ಅನುಕೂಲ. ಹತ್ತು ಬಾಯಿಗಳಿದ್ದರೂ ಒಂದೇ ಭಾಷೆಯನ್ನು ಬಲ್ಲನು ದಶಕಂಠನು; ನಮ್ಮ ಏಕ್ರೋಶ ವಿಶಕಂಠನು ಒಂದೇ ಬಾಯಿಯಿಂದ ಹತ್ತು ಭಾಷೆಗಳನ್ನು ಬಲ್ಲನು! ಎತ್ತರವಾಗಿ ಬೆಳೆದು ಆಕಾಶವನ್ನು ಮುಟ್ಟಬೇಕೆಂಬ ಹುಚ್ಚು ಹಂಬಲ ದಶಕಂಠನಿಗಿದ್ದರೆ, ಆಗಲಾಗಿ ಬೆಳೆದು ಭೂಮಿಯನ್ನು ತುಂಬಬೇಕೆಂಬ ಅರ್ಥವತ್ತಾದ ಆಶೆ ವಿಶಕಂಠನಿಗೆ. ಹೆಚ್ಚಿಗೆ ಹೇಳುವುದೇನು? ಅಂದಿನ ದಂಡಕಾರಣ್ಯವೆಂಬ ಇಂದಿನ ಕರ್ನಾಟಕವಸದಲ್ಲಿ ಕಂಠರವನು ಬ್ರಾಹ್ಮಣನಾದರೂ ಅನಭಿಷಿಕ್ತ ಕ್ಷತ್ರಿಯನಂತಿದ್ದಾನೆ.

ಇಂತಹ ಕನ್ನಡಕಡುಗಲಿ ಮುಂದಾಳಾದ ಕಂಠರವರು, ಸರ್ವಲೋಕೈಕ ಪ್ರಿಯನಾಗಿರುವುದರಲ್ಲಿ ಆಶ್ಚರ್ಯವೇನು? ಮುದುಕರಿಗೆ ಇವನು ಅತ್ಯಂತ ಪ್ರಿಯನು; ಕೂಗಿ ಮಾತನಾಡದಿದ್ದರೆ ಅವರಿಗೆ ಕೇಳಬರುವುದಿಲ್ಲ. ತರುಣರಿಗೆ ಇವನು ಅತ್ಯಂತ ಪ್ರಿಯನು; ಯಾಕೆಂದರೆ ಆರ್ಭಟದ ವೀರ ವಿಕ್ರೋಶವು ಅವರ ಮನಸ್ಸನ್ನು ಹಿಡಿಯುವುದು. ಹೆಣ್ಣುಮಕ್ಕಳಿಗೂ ಇವನು ಅತ್ಯಂತವಾಗಿಯೆ ಪ್ರಿಯನಾಗಿದ್ದಾನೆ; ಪಾಪ! ಯಾವಾಗಲೂ ಗದರಿಸಿಕೊಂಡೇ ಮಾತನಾಡಿಸಿಕೊಂಡ ರೂಢಿ ಈ ಮಾನಿನಿಯರಿಗೆ.

ಇಂತಹ ಮುಂದಾಳು ಮಹಾಶಯರ ಕಂಠರವವನ್ನು ಕೇಳುವ ವೀರರ ನಾಡು '(ಕರ್ಣ+ನಾಡು=ಕರ್ನಾಡು) ಕನ್ನಡ' ಎಂದು ಶೋಧಕರು ಸಾಹಸದಿಂದ, ಶ್ರಮದಿಂದ ಹೇಳಿದರೆ ಯಾರಿಗೆ ರೋಮಾಂಚವೇಳಲಿಕ್ಕಿಲ್ಲ? ಖುದ್ದ-ಸ್ವತಃ 'ಕಂಠರವ'ರಿಗೆ ಸರ್ವಾಂಗ ರೋಮಾಂಚನವೇಳುವುದು. ಮೈತುಂಬ ಕೂದಲ ಹಂದರವಿದ್ದ ಇವರಿಗೆ, ರೋಮಾಂಚವೆದ್ದರೆ ಇವರು ಶರಪಂಜರದ ಮೇಲೆ ನಿಂತಂತೆಯೆ ಕಾಣುವುದು. ಆದಕಾರಿಯೆ ಇವರಿಗೆ 'ಕನ್ನಡದ ಭೀಷ್ಮಾಚಾರ್ಯ' ಎನ್ನುವ ಪರಿಪಾಠವಿದೆ.

ಕರ್ನಾಟಕ ಮಾತೇ, ಇಂತಹ ಮಕ್ಕಳಿಂದ ನೀನು ಜಗನ್ಮಾತೆಯಾದೆ— ಅರ್ಥಾತ್ ಜಗತ್ತಿಗೆ ನಿನ್ನ ಮಾತು ಕೇಳಿಸುವುದು.

(೬೬ನೆಯ ಪುಟದಿಂದ ಮುಂದುವರಿದದ್ದು)

ಉಳಿದು ಗಾಡಿ ನಡೆದರೆ ಇನ್ನೂ ಇಂತಹ ಎಷ್ಟೋ ಆಕಸ್ಮಿಕ ತೊಂದರೆಗಳ ಸಲುವಾಗಿ ಗಾಡಿ ನಡೆಯುವಾಗ, ಸರಪಳಿಯನ್ನು ಜಗ್ಗಿ ಸರಿಪಡಿಸಿಕೊಳ್ಳಬಹುದು.

ರೇಲ್ವೆಯ ನಿಯಮದಂತೆ ದಿನಾಂಕಗಳು ರಾತ್ರಿಯ ಹನ್ನೆರಡಕ್ಕೆ ಮುಗಿದು ೧ ಗಂಟೆಗೆ ಒದಲು ಆಗುವುವು. ರೇಲ್ವೆಯವರು ಗಡಿಯಾರದ ಅಂಕಿಗಳನ್ನು ೧ರಿಂದ ೨೪ರ ವರೆಗೆ ಎಣಿಸುವರು.

ರೇಲ್ವೆ ನೌಕರರಲ್ಲಿ ಏನಾದರೂ ಅಸಭ್ಯ ನಡತೆಗಳು ಕಂಡಲ್ಲಿ ಅದನ್ನು ಅಧಿಕಾರಿಗಳ ಕಣ್ಣಿಗೆ ಹಾಕುವುದನ್ನು ಯಾರೂ ಮರೆಯಬಾರದು. ಅಧಿಕಾರಿಗಳು ಕೇಳದಿದ್ದರೆ 'ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟೇಶನ್ ಸುಪರಿಂಟೆಂಡೆಂಟ್' ಅವರ ಕಡೆಗೆ ದೂರು ಕೊಡಬೇಕು.

ಗೆಳೆತನ

★

ಶ್ರೀ. ಎಂ. ಗೋಪಾಲಕೃಷ್ಣ ಅಡಿಗ

೧

ಕೊನೆಗಾಣದೆ, ಬಿಗಿ ನೂಣದೆ, ತಳುವಬೇಕು, ಗೆಳೆತನ :—
ತಳುವಬೇಕು— ನನಗೆ ನಿನಗೆ ಬರುವವರೆಗೆ ಕೊನೆದಿನ !
ತಳಿರ ತಳಿರ ತಳ್ಕೆಯಂತೆ ಮೃದುಲ ಮಧುರ ಜೀವನ;
ಮುಲರೆ ಮುಲರೆ ನೂಳ್ಕೆಯಂತೆ, ಮನದ ಮನದ ನಿಮುತನ !

೨

ಒಂದೆ ಗಾನತಾನ ನನ್ನ ನಿನ್ನ ಹೃದಯಮಿಲನಕೆ ;
ಒಂದೆ ಅಚ್ಚು ಮೆಚ್ಚು ನಮ್ಮ ಭಾವಜೀವ ವಲನಕೆ ;
ಒಂದೆ ಅಂಕೆ–ಸಂಖ್ಯೆ ನಮ್ಮ ಸೌಖ್ಯದ ಸಂಕಲನಕೆ ;
ಒಂದೆ ಗಮ್ಯಗತಿಯು ನಮ್ಮ ಜೀವನ ಸಂಚಲನಕೆ !

೩

ಮುಗಿಲಯುಗಲದಂತೆ ಬಂದು ಸೇರಿ ಸಾರಿ ಅಗಲದೆ,
ಹಗಲ ನೊಗದ ರಾಗದಂತೆ ಸಂಜೆಯೊಡನೆ ಜಗುಳದೆ,
ಗಾಳಿಗೈಯ ತರಗೆಲೆಗಳ ಹಾಗೆ ಕಲೆತು ಕದಲದೆ,
ಬಾಳಬೇಕು, ಬೆಳೆಯಬೇಕು; ಸಖ್ಯ ಕ್ಷಣಿಕವೆನಿಸದೆ.

೪

ಗುಡುಗು-ಮಿಂಚಿನಂತೆ ಒಂದುಗೂಡಿ ಬೆಳಗಿ ಮೊಳಗುವಾ !
ಕಡಲು-ತಡಿಗಳಂತೆ ಒಂದನೊಂದು ತಡೆದು ತಡಹುವಾ !
ಗಾಳಿ–ಕಿಚ್ಚಿನಂತೆ ಕೂಡಿಯಾಡಿ ತಿರೆಯ ಬೆಳಗುವಾ !
ಬಾನು-ಬುವಿಗಳಂತೆ ಒಂದಕೊಂದು ಸೀಮೆಯೆನಿಸುವಾ !

೫

ನಿನ್ನೊಳೊಂದು ಭಿಕ್ಷೆ ಗೆಳೆಯ—ಅದುವೆ ಹೃದಯದಾನವು !
ಜನ್ಮ-ಮೃತ್ಯುಗಳನು ನಗುವ ಪ್ರೇಮದಮೃತಪಾನವು ;
ದುಃಖ-ಸುಖಗಳನ್ನು ಮಿಗುವ ತ್ಯಾಗದಮರಗಾನವು ;
ಹೊಂದುವಳಿಕೆ ಶವದ ಸಖ್ಯಯೋಗದಭ್ರಯಾನವು !

೬

ತನ್ನತನವೆ ಎರಡು ಕವಲುಗೊಂಡ ಹಾಗೆ ಬಾಳುತೆ,
ಬನ್ನ ಬೇಗುದಿಗಳನೊಂದೆ ಜೀವನಾಗಿ ತಾಳುತೆ,
ಸುಗ್ಗಿ ಬರಲಿ—ಮಾಗಿ ಬರಲಿ—ಹೊಂದುವಳಿಕೆಯಳಿಯದೆ,
ಹಿಗ್ಗು ವರಿಗೆ ಗೆಳೆಯ ಕೆಳೆಯ ಕನಸು ನನಸಿಗಿಳಿಯದೆ ?

೭

ನನ್ನ ನಿನ್ನ ಜೀವ ಗೆಳೆಯ, ಒಂದಕೊಂದು ಪೂರಕ !
ನನ್ನನಿನ್ನ ಭಾವ ಒಂದಕೊಂದು ಕಾಂತಿದಾಯಕ !
ಒಂದು ಹೃದಯ ಧನುವು; ನೋಣದೊಂದು ನಿಶಿತಸಾಯಕ !
ಒಂದು ಗಂಗೆ ಒಂದು ಯಮುನೆ— ತ್ರಿವಳಿಸಾರ್ಗವಾಹಕೆ !

೮

ಹೀಗೆ ಬಾಳ್ವೆನೆಂಬ ಬಯಕೆಯೊಂದದೇಕೊ ಹಿರಿದಿದೆ ;
ಯೋಗವಿದು ಫಲರ್ಥ— ನಿನ್ನ ಹೃದಯಯೋಗ ಬರದಿರೆ
ಬರಿಯ ಕೆಂಡ ಗಳಿಗೆಯೊಳಗೆ ನಂದಿ ಕಾಂತಿಯಳಿಯದೆ ?
ನೆರವು ಬರಲು ಗಾಳಿಯಿಂದ ಅದರ ಬಾಳು ಬೆಳಗದೆ ?

ಅಶನಕ್ಕಾಗದ ಅಕ್ಷರಶಿಕ್ಷಣ

(ವಿಚಾರ ಪ್ರಚೋದಕ ಪ್ರಬಂಧ)*

ಶ್ರೀ. ಹಳಸೇಟಿ ಚಿಂತಾಮಣಿರಾಯರು

★

ಶಿಕ್ಷಣದ ಗುರಿಯೇನು? ಮನುಷ್ಯನನ್ನು ನಾಗರಿಕನನ್ನಾಗಿ ಮಾಡುವುದು! ಸ್ವಂತದ ಸಮಾಜದ ಲೌಕಿಕ ಯೋಗಕ್ಷೇಮ ಸಾಧಿಸಿಕೊಂಡು ವೈಯಕ್ತಿಕ ಆಧ್ಯಾತ್ಮಿಕ ಉನ್ನತಿ ಮಾಡಿಕೊಳ್ಳುತ್ತಿರುವುದೆ ನಾಗರಿಕನ ಮುಖ್ಯ ಲಕ್ಷಣ. ಅಂತಹ ನಾಗರಿಕರು ನಮ್ಮ ಸುಶಿಕ್ಷಿತವರ್ಗದಲ್ಲಿ ಎಷ್ಟು ಜನ ಸಿಕ್ಕುವರು?

★

ಶಿಕ್ಷಣದ ಉದ್ದೇಶವನ್ನು ಸ್ವಲ್ಪದರಲ್ಲಿಯೆ ಹೇಳುವುದು ಕಠಿಣವಿದ್ದರೂ—ಇನ್ನುಳಿದ ವಿಚಾರಗಳನ್ನು ಬಿಟ್ಟು ಕೇವಲ ವ್ಯಾವಹಾರಿಕ ದೃಷ್ಟಿಯಿಂದ ವಿಚಾರಿಸಿದಲ್ಲಿ—ಒಳ್ಳೆಯ ನಾಗರಿಕನಾಗಿ ಬದುಕಿಬಾಳುವುದಕ್ಕಾಗಿ ಬೇಕಾಗುವ ಜ್ಞಾನಸಂಪಾದನೆಯೆ ಶಿಕ್ಷಣದ ಉದ್ದೇಶವೆಂದು ಹೇಳಬಹುದು. 'ಈ ಉದ್ದೇಶವು ಇಂದಿನವರೆಗೆ ನಾವು ಪಡೆದ, ಪಡೆಯುತ್ತಿರುವ ಶಿಕ್ಷಣದಿಂದ ಸಾಧಿಸಿದೆಯೆ?' ಎಂದು ಕೇಳಿಕೊಂಡಪರೇ ನಿರಾಶರಾಗಿ, ಇನ್ನೊಂದು ಮಾರ್ಗವನ್ನು ಹುಡುಕುತ್ತಿರುವರು. ಅದಕ್ಕಾಗಿ ವಿಚಾರ — ಚರ್ಚೆ — ಪ್ರಯೋಗಗಳನ್ನು ಸಾಗಿಸಿದ್ದನ್ನು ಕಾಣಬಹುದಾಗಿದೆ. ಪ್ರಯೋಗದ ಫಲವಿನ್ನೂ ಸಿಕ್ಕಿರದಿದ್ದರೂ ಚರ್ಚೆಯ ಫಲವಾಗಿ 'ಇಂದು ಸಾಗಿದ ಶಿಕ್ಷಣವು ಜೀವನೋಪಯೋಗಿಯಾಗಿರುವುದಿಲ್ಲ, ಒಳ್ಳೆಯ ನಾಗರಿಕನ ಕರ್ತವ್ಯಗಳಿಗೆ ಅದು ಸಹಾಯಕಾರಿ ಇಲ್ಲ' ಎಂಬುದಾಗಿ ಒಹುತರ ಎಲ್ಲರೂ ಒಪ್ಪಿದಂತಾಗಿದೆ. ಯಾವ ಮಾತನ್ನೂ ಒಮ್ಮೆಲೆ ಬಿಸಲಾರದ ನನ್ನು ಜೀವನಸರಂಪರೆಗೆ ಅನುಸರಿಸಿ, ಇಂದಿನ ಶಿಕ್ಷಣವನ್ನೇ ಮೂರ್ಪಡಿಸಿಕೊಂಡು, ಜೀವನೋಪಯುಕ್ತ ಶಿಕ್ಷಣವನ್ನಾಗಿ ಮಾಡುವ ಪ್ರಯತ್ನವೀಗ ಸಾಗಿದೆ. ಈಗಿನ ಕೇವಲ ಸಾಹಿತ್ಯಿಕ ಶಿಕ್ಷಣದ ಜೊತೆಯಲ್ಲಿಯೆ ವ್ಯಾವಸಾಯಿಕ ಶಿಕ್ಷಣವನ್ನೂ ಸೇರಿಸಿಬಿಟ್ಟು, 'ಕೇವಲ ಬೌದ್ಧಿಕ ವಿಕಾಸವೇ ಶಿಕ್ಷಣದ ಗುರಿ' ಎಂದಿದ್ದ ಮೊದಲಿನ ಮಾತನ್ನು ತಿದ್ದಿ, ಉತ್ಪನ್ನ ನಾಗರಿಕನಾಗುವುದನ್ನೇ ಶಿಕ್ಷಣದ ಉದ್ದೇಶವನ್ನಾಗಿ ಮಾಡಬಾಗುತ್ತಿದೆ.

ಈ ಪ್ರಯೋಗದ ಪ್ರಯತ್ನದಲ್ಲಿ ಎದ್ದ ವಾದವೆಂದರೆ "ಅಕ್ಷರ ಶಿಕ್ಷಣದ ಜೊತೆಯಲ್ಲಿ ಉದ್ಯೋಗವೋ? ಉದ್ಯೋಗದ ಜೊತೆಯಲ್ಲಿ ಅಕ್ಷರಶಿಕ್ಷಣವೋ? ಸಾಮಾನ್ಯ ಜ್ಞಾನದಿಂದ ಶಿಕ್ಷಣದ ಪ್ರಾರಂಭವೋ? ಲಿಪಿಜ್ಞಾನದಿಂದ ಶಿಕ್ಷಣವೋ?" ಎಂಬುದು. ಈ ವಾದಗಳೇನೆ ಇರಲಿ, ಮೂಲಮಾತನ್ನೊಪ್ಪಿ ಇಬ್ಬರೂ ಮುಂದೆ ಸಾಗಿದ ಮೇಲೆ, ವಾದದಿಂದ ಪಾರಾಗಿ ಹೇಗೂ ನಿರ್ಣಯವನ್ನು ನಿಲುಕಬಹುದು. ಇಂದು ನಡೆದಿರುವ ಜೀವನದ ಹೋರಾಟ, ಈ ವಾದಕ್ಕೆ ಕಿವಿಗೊಟ್ಟು ಹಾಗೆಯೆ ಸಾಗುವಷ್ಟು ಮಂದಗತಿಯಿಂದ ನಡೆದಿಲ್ಲ. ಪ್ರತಿಕ್ಷಣಕ್ಕೆ ಮುಂದೆ ನಿಲ್ಲುವ ನಿರಕ್ಷನ-ನಿರುದ್ಯೋಗದ ಪ್ರಶ್ನೆಗಳಿಗೆ ಉತ್ತರಕೊಡುವ ಶಿಕ್ಷಣ ಇಂದು ಬೇಕಾಗಿದೆ. ಶಿಕ್ಷಣದ ಸಾರ್ವಭೌಮತ್ವಕ್ಕೊಪ್ಪಿದ ಜನತೆಗೆ, ನಿರೀಕ್ಷಣೆಯಂತೆ ಅದು ಫಲವನ್ನು ಕೊಡಬೇಕಾಗಿದೆ. ನಾಗರಿಕನಾಗಿ ಬಾಳಬೇಕಾದಲ್ಲಿ, ಮುಖ್ಯವಾದ—ಮೊದಲನೆಯದಾಗಿರುವ ಕರ್ತವ್ಯವೆಂದರೆ ತನ್ನ—ತನ್ನವರ—ಪೋಷಣೆ. ಈ ಕರ್ತವ್ಯದ ಪಾಲನೆಗಾಗಿ ಬೇಕಾಗುವ ಬುದ್ಧಿಶಕ್ತಿ, ಕರ್ತೃತ್ವಶಕ್ತಿ, ಉಪಕ್ರಮಶಕ್ತಿ, ಕಲ್ಪಕತೆ. ಇವೆಲ್ಲ ಗುಣಗಳನ್ನು ವಿಕಾಸಗೊಳಿಸುವುದೆ ಶಿಕ್ಷಣದ ತಿರುಳಾಗಬೇಕಾಗಿದೆ. ಈ ಕಾರ್ಯವನ್ನು ಸಾಗಿಸುತ್ತಲೇ ಅವನು ತನ್ನ ಆಧ್ಯಾತ್ಮಿಕ ಉನ್ನತಿಯ ಮತ್ತು ಆದರ್ಶಗಳ ಕಡೆಗೆ ಸಹಜವಾಗಿ ಸಾಗಬಹುದು. ಇಂದಿನ ಪರೆಗೆ ಈ ಮೊದಲ ಮೆಟ್ಟಲನ್ನು ಮರೆತು, ಬುದ್ಧಿವಿಕಾಸವೆಂಬ ಕೊನೆಯ ಮೆಟ್ಟಲನ್ನು ಒಮ್ಮೆಲೆ ಹತ್ತಹೋಗಿ ಮುಗ್ಗರಿಸುತ್ತಿದ್ದುದು ಈಗಲೂ ಹಾಗೆಯೆ ಸಾಗಿದೆ. ಇವೆಲ್ಲ ಮಾತುಗಳು—ಕೊಂಚ ಬಳಗಣ್ಣಿನಿಂದ ನೋಡುವವರಿಗೆ—ಹೆಚ್ಚು ಸ್ಪಷ್ಟವಾಗಿ ತಿಳಿಯಬಹುದು. ಸುಶಿಕ್ಷಿತನು ಒಳ್ಳೆಯ

* ಈ ಲೇಖನದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಕ್ಕೆ ಯಾರಾದರೂ ಭಿನ್ನಮತದವರಿದ್ದರೆ, ಅವಶ್ಯವಾಗಿ ಇದನ್ನು ಖಂಡಿಸಿ ತಮ್ಮ ಮತವನ್ನು ಮಂಡಿಸಿ ಲೇಖನ ಬರೆದು ಕಳುಹಬೇಕು. ಜಯಂತಿಯಲ್ಲಿ ಪ್ರಕಟಿಸುವೆವು.
—ಸಂ. ಜ.

ನಾಗರಿಕನಾಗಬೇಕೆಂದು ಹೇಳುವವರು, ಅವನ ಕಾರ್ಯಕ್ಷೇತ್ರದ ಕಡೆಗೂ ಲಕ್ಷ್ಯಕೊಡಬೇಡವೇ? ಅವನ ಮೊಟ್ಟಮೊದಲಿನದಾದ ಕರ್ತವ್ಯವೆಂದರೆ ತನ್ನ ಹಾಗೂ ತನ್ನವರ ಪೋಷಣೆ. ಎರಡನೆಯದು ಸಾಮಾಜಿಕ ಹೊಣೆ. ಮೂರನೆಯದಾಗಿದ್ದುದು ತನ್ನ ಆಧ್ಯಾತ್ಮಿಕ ಉನ್ನತಿ. ಈ ತ್ರಿವೇಣಿ ಸಂಗಮವೇ ನಾಗರಿಕ ಜೀವನ. ಇವೇ ಬಿಡಿಬಿಡಿಯಾದ ಮಾತುಗಳನ್ನೇ ಇಡಿಯಾಗಿ ಹೇಳುತ್ತ **ಲೋಕಮಾನ್ಯತಿಲಕರು** 'ದೇಹ ದೇಶ, ದೇವರು ಇದು ಶಿಕ್ಷಣದ ತಿರುಳಾಗಬೇಕು' ಎಂದು ಒಂದೇ ಮಾತಿನಲ್ಲಿ ಹೇಳಿದ್ದಾರೆ.

ಇನ್ನೊಂದು ಮಾತು: 'ಉದ್ಯೋಗದ ಸಂಗಡ ಶಿಕ್ಷಣವೋ? ಶಿಕ್ಷಣದ ಸಂಗಡ ಉದ್ಯೋಗವೋ?' ಎಂಬ ಮಾತನ್ನು, ಶಿಕ್ಷಣವನ್ನೇ ಉದ್ಯೋಗವನ್ನಾಗಿಟ್ಟುಕೊಂಡ ಶಿಕ್ಷಣತಜ್ಞರಿಗಿಂತ ಬೇರೆ ದೃಷ್ಟಿಯಿಂದ ನೋಡಬೇಕು. 'ಶಿಕ್ಷಣದ ಉದ್ದೇಶವನ್ನು ಸಾಧಿಸುವುದಕ್ಕಾಗಿ ಬೇಕಾಗುವ ಸಾಧನ ಸಾಹಿತ್ಯ ಒಂದೇ ಒಂದು' ಎಂದವರ ಮತ. ಇನ್ನುಳಿದ ಸಾಧನಗಳ ವಿಷಯವಾಗಿ ಬಹಳ ಜನ ಶಿಕ್ಷಣತಜ್ಞರು ಅಷ್ಟೊಂದು ಆಸ್ಥೆಯುಳ್ಳವರಿಲ್ಲ. ಈ ಕಲ್ಪನೆಯೇ ಇಂದಿನ ವರೆಗೆ ನಮ್ಮನ್ನು ಪುಸ್ತಕದ ಹುಳುಗಳನ್ನಾಗಿ ಮಾಡಿದೆ. ಸಾಹಿತ್ಯದಿಂದಾಗಬೇಕಾದುದು ಬುದ್ಧಿವಿಕಾಸ. ಈ ಬುದ್ಧಿವಿಕಾಸದಿಂದಲೇ ಮಾನವನು ಬೇಕಾದುದನ್ನು ಮಾಡಬಲ್ಲನೆಂದು ಅವರ ವಾದ. ಈ ವಾದದಲ್ಲಿ ಹುರುಳಿಷ್ಟಿದೆ? ಕೇವಲ ಬುದ್ಧಿವಿಕಾಸವಾಗಬೇಕು— ಎಂದರೆ, ಪರೋಪಜೀವಿಗಳಾಗಬೇಕಾದುದು ಎಲ್ಲಿಯ ನ್ಯಾಯ? ಸಾಹಿತ್ಯಶಿಕ್ಷಣದ ಕೃತ್ರಿಮತನದಿಂದ ನಿಜಜ್ಞಾನದ ಮೊದಲಂಚನ್ನು ನಿಲುಕುವುದು ಕೂಡ ಕಷ್ಟವಾಗಿ ಕುಳಿತಿದೆ. ಹೀಗಿರುವಾಗ ನಾಗರಿಕತನದ ವ್ಯವಹಾರ ಸಾಧಿಸುವುದು ದೂರದ ಮಾತೆಂದೇ ಹೇಳಬಹುದಲ್ಲವೆ? ಸರಿಯಾದ ದಾರಿ ಎಂದರೆ ಸಾಹಿತ್ಯ-ತತ್ತ್ವಜಿಜ್ಞಾಸೆಗಳ ಕವಚವನ್ನೊಡೆದು ಶಿಕ್ಷಣವು ಇಂದು ಬಯಲಿಗೆ ಒರಬೇಕಾಗಿದೆ; ಸಾಧ್ಯವನ್ನು ಸಾಧಿಸಬೇಕಾಗಿದೆ.

ಲಿಪಿಯ ಶೋಧವಾಗಲಿ, ಸಾಹಿತ್ಯದ ಜನ್ಮವಾಗಲಿ ತನ್ನ ವಿಚಾರಗಳನ್ನು ಇನ್ನೊಬ್ಬನೆದುರು ಸ್ಪಷ್ಟವಾಗಿ ಇಡಲು ಒಂದೇಕೆಂದೂ, ತನ್ನ ಮತ (ಅಭಿಪ್ರಾಯ) ಪ್ರಚಾರಕ್ಕೆ ಅನುವಾಗಬೇಕೆಂದೂ ಇದೆ. ಅದೆಲ್ಲಿ ಎಲ್ಲೋ ಉಳಿದು, ಅನುಕೂಲ ಹೆಚ್ಚೆಂದು ಶಿಕ್ಷಣ ಕ್ಷೇತ್ರದಲ್ಲಿ ಸೇರಿದ ಸಾಧನವೇ ಇಂದು ಸಾಧ್ಯವಾಗಿ ಕುಳಿತಿದೆ. ಓದು-ಬರಿಹ ಬಂದರೆ ಸಾಕು— ಶಿಕ್ಷಣದ ಕೆಲಸವಾಯಿತೆಂದೇ ಬಹುಜನರ ಕಲ್ಪನೆ. ಒಂದು ವೇಳೆ ಈ ಅಕ್ಷರಗಳ ಶೋಧವಾಗದಿದ್ದರೆ ಭಾಷೆಗೆ ಒರಗಾಲ ಇರುತ್ತಿತ್ತೆ? ಅಕ್ಷರಗಳೇ ಇಲ್ಲದಿದ್ದರೆ ಸಾಹಿತ್ಯವೇ ಹುಟ್ಟುತ್ತಿರಲಿಲ್ಲವೇ? ಅಕ್ಷರಗಳ ಶೋಧದ ಉದ್ದೇಶವೇನೇ ಇರಲಿ, ಲಿಪಿಕಾರನು ಪ್ರಾರಂಭದಲ್ಲಿ ಹಾಕಿದ 'ಅ' ಶಬ್ದವೇ ಶಿಕ್ಷಿತನ ಜೀವನದ ಪ್ರತಿಮಾತಿನ ಮೊದಲಕ್ಷರವಾಗಿ ಕುಳಿತಿದೆ. ಇದನ್ನೇ **ಆಚಾರ್ಯ ಕಾಲೇಲ್ಕರ್** ಅವರ ಮಾತಿನಲ್ಲಿ ಹೇಳಬೇಕೆಂದರೆ 'ಶಿಕ್ಷಣದ ಪ್ರಾರಂಭಕ್ಕೆ ಪೂಜೆಗೈಯುತ್ತಿರುವ ವಿಘ್ನಹಾರಕ ಶ್ರೀ ಗಣೇಶನೇ, ಶಿಕ್ಷಿತನ ಜೀವನದ ಪ್ರತ್ಯಂಗಕ್ಕೂ ವಿಘ್ನಕಾರಕನಾಗಿ ಕುಳಿತಿದ್ದಾನೆ'

ಒಂದು ವೇಳೆ ಹೀಗೂ ಕಲ್ಪಿಸೋಣ: 'ಸಾಹಿತ್ಯ ಶಿಕ್ಷಣದಿಂದ ಇಡಿ ಜಗತ್ತೇ ನಮ್ಮೆದುರು ನಿಲ್ಲುವುದರಿಂದ, ಅಂತಹ ವಿಸ್ತೀರ್ಣ ಕ್ಷೇತ್ರದಲ್ಲಿ ನಮ್ಮ ಬುದ್ಧಿಶಕ್ತಿಯನ್ನು ಪಯೋಗಿಸಿ, ಬೇಕಾದದ್ದನ್ನು ಸಾಧಿಸಬಹುದಲ್ಲವೇ?' ನಿಜ! ಆದರೆ 'ಜಗತ್ತಿನ ಎಲ್ಲ ಸಂಗತಿಗಳ ಪರಿಚಯವೆಂದರೆ ಅದಷ್ಟೆ ಶಿಕ್ಷಣವೇ?' ಎಂದು ಕೇಳಿದರೆ ಉತ್ತರ ನೇನು? ಜಗದ್ವಂದ್ಯ ಕವಿ **ರವೀಂದ್ರರ** ಗೀತಾಂಜಲಿ ಜಗತ್ತಿನ ಎಲ್ಲದರ ಪರಿಚಯದಿಂದಾಗಲಿ, ವಿಶ್ವವಿದ್ಯಾನಿಲಯಗಳ ಹೊರಲಾರದ ಪದವಿಗಳಿಂದಾಗಲಿ ದೊರೆತುದಲ್ಲ; ಆದರೆ ಜಗತ್ತಿನ ಮೂಲೆ-ಮೂಲೆಗಳಲ್ಲಿಯೂ ಅದರ ಪರಿಚಯದ ಆತುರ ಹೆಚ್ಚಾಗಿದೆ. ದುರ್ದೈವದಿಂದ ಒಬ್ಬ ಪ್ರತಿಭಾವಂತನಿಗೆ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷೆಗೆ ಕಟ್ಟುವ ಹೊತ್ತುಬಾರದೆ ಅವನಿಗೆ ಪದವಿ ಸಿಕ್ಕಿರದಿದ್ದಲ್ಲಿ, ಅವನ ಪ್ರತಿಭೆಗೆ ಕುಂದೇ? ಎಲ್ಲ ಜಗತ್ತಿನ ಪರಿಚಯವಾಗಲಿ, ಉದ್ದುದ್ದ ಪದವಿಗಳಾಗಲಿ ಶಿಕ್ಷಣಕ್ಕೆ ಬೇಕಿಲ್ಲ. ಜೀವನಕ್ಕಾಗಿ ಜೀವಿಸಬೇಕೆಂಬ ತತ್ತ್ವ ಅದಕ್ಕೆ ಬೇಕಾಗಿದೆ.

ಒಂದು ಮಾತು ಯಾವಾಗಲೂ ನಮ್ಮೆದುರು ಒರುವುದು: 'ಸ್ವತಂತ್ರ ಪರರಾಷ್ಟ್ರಗಳಲ್ಲಿ, ಈಗ ನಮ್ಮಲ್ಲಿ ಸಿಕ್ಕುತ್ತಿರುವಂತಹ ಶಿಕ್ಷಣವೇ ಸಿಕ್ಕುತ್ತಿರುವಾಗ, ನಾವೇಕೆ ಅದರಿಂದ ದೂರ ಸರಿಯಬೇಕು?' ಇಂಥವರ ಬುದ್ಧಿವಾದ ಒಂದು ಮೂಲ ಮಾತನ್ನೇ ಮರೆತಿರುವುದು. ಇನ್ನೊಂದು ರಾಷ್ಟ್ರದ ಶಕ್ತಿಯನ್ನು ಹೀರಿ, ಅದರಿಂದಲೇ ತನ್ನ ಪ್ರಜೆಗಳಿಗೆ ಶಿಕ್ಷಣ ಕೊಡುತ್ತಿರುವ ಅಧಿಕಾರೋನ್ಮತ್ತ ಸರಕಾರದ ಶಿಕ್ಷಣಪದ್ಧತಿ ಬೇರೆ. ನಮ್ಮಂತಹ ಗುಲಾಮರಾಷ್ಟ್ರಕ್ಕೆ ಬೇಕಾಗುವ ಶಿಕ್ಷಣ ಪದ್ಧತಿ ಬೇರೆ. ಒಬ್ಬನಿಗೆ ರುಚಿಯಾದುದು ಇನ್ನೊಬ್ಬನಿಗೆ ಅರುಚಿ. ಸ್ವತಂತ್ರ ಬುದ್ಧಿವಂತನಿಗೆ ತನ್ನವರ ಜೀವನದ ಮಟ್ಟವನ್ನು ಎಲ್ಲ ರೀತಿಯಿಂದಲೂ ಮೇಲಕ್ಕೆತ್ತುವುದು, ಅವರ ಜೀವನವನ್ನು ಸಮೃದ್ಧಗೊಳಿಸಿ, ಅವರ ಸೇವೆ ಮಾಡುತ್ತಲೇ ತನ್ನ ಉನ್ನತಿಯನ್ನು ಮಾಡಿಕೊಳ್ಳುವುದು ಸಾಧ್ಯವಿದ್ದರೆ ಆ ಮಾತು ಗುಲಾಮನಿಗೆ ಸಾಧ್ಯವೇ? ಪಡೆದ ಶಿಕ್ಷಣದಿಂದ ಜನಸಾಮಾನ್ಯರನ್ನು ಅಜ್ಞಾನದಲ್ಲಿಟ್ಟು, ತನ್ನ ಸ್ವಾರ್ಥಸಾಧನೆಯನ್ನು ಮಾತ್ರ ಮಾಡಿಕೊಳ್ಳಲು ಸಾಧ್ಯವಿದೆ: ಆ ಕಾರ್ಯ ಮಾತ್ರ ತಪ್ಪದೆ ನಡೆಯಿಸಿರುವ ನಮ್ಮಲ್ಲಿಯ ಸುಶಿಕ್ಷಿತರ ಶೂರತನವನ್ನು, ಬಿಡುಗಣ್ಣರಿಗೆ ಬಿಚ್ಚಿ ತೋರಿಸುವ ಕಾರಣವಿಲ್ಲ. ಸುಶಿಕ್ಷಿತ ಗುಲಾಮನು ಸಂಧಿಸಾಧಿಸುವ ಪ್ರತ್ಯಕ್ಷ ಹೀನ ಕೆಲಸ ಮಾಡದಿದ್ದರೂ, ಸಾಧಿಸಿದ ಸಂಧಿಯನ್ನು ಉಪಯೋಗಿಸುವ ಕಾರ್ಯವನ್ನು ಬಿಡದೆ ಮಾಡುವ ಧೂರ್ತತನವನ್ನು ಮಾತ್ರ ಪಡೆದಿರುತ್ತಾನೆ.

ಇನ್ನು ಪ್ರಾಥಮಿಕ ಶಿಕ್ಷಣದ ಸಂಗಡ ಕೈಗಾರಿಕೆಯ ಶಿಕ್ಷಣವು ಬೇಕೆನ್ನುವಂತೆ, ಮಾಧ್ಯಮಿಕಶಿಕ್ಷಣದಲ್ಲಿಯೂ ಕೈಗಾರಿಕೆಯ

ಶಿಕ್ಷಣ ಅವಶ್ಯವಾಗಿ ಬೇಕಾಗಿದೆ ಎಂಬ ಮಾತು ಹೆಚ್ಚಾಗಿ ಕಿವಿಗೆ ಬೀಳಹತ್ತಿದೆ. ಇಂದಿಲ್ಲ ನಾಳೆ ಆ ರೀತಿ ಆಗಿಯೇ ತೀರುವುದಾಗಿ ಬಹುಜನ ಶಿಕ್ಷಣತಜ್ಞರು ಭವಿಷ್ಯ ನುಡಿದಿದ್ದಾರೆ. ಅವರ ಭವಿಷ್ಯ ಎಂದಾದರೂ ಫಲಿಸಲಿ; ಅದಕ್ಕೂ ಮುಂದೆ ಸಾಗಿ ವಿಶ್ವವಿದ್ಯಾನಿಲಯದ ಕಲಾತಜ್ಞ (Mother of Arts) ರಿಗೂ ಕೂಡ ಕೈಗಾರಿಕೆ–ವ್ಯವಸಾಯಗಳ ಶಿಕ್ಷಣ ಅತ್ಯವಶ್ಯವೆಂದೇಕೆ ಹೇಳಲಾಗದು? ಅವರು ತಜ್ಞರಾದ ಕಲೆಯಾವುದು? ಅದು ಜೀವನದ ಕಾರ್ಯರಂಗದಲ್ಲುಪಯೋಗವಿದೆಯೆ? ಕುಳಿತು ಉಣ್ಣುವುದೇ? ದುಡಿದುಣ್ಣುತ್ತಿರುವ ಇನ್ನೊಬ್ಬನಿಗೆ ಭಾರವಾಗಿ ಒಳುವುದೇ? ಜನಜಂಗುಳಿಯ ಖಣಿಯಲ್ಲಿ ರತ್ನಗಳಾಗಿ ತೊಳ-ತೊಳಗಬೇಕಾದವರು, ಅಕ್ಕಿಯ ರಾಶಿಯಲ್ಲಿಯ ಹರಳುಗಳೋ, ಹುಳುಗಳೋ ಆಗಿ ಪರಿಣಮಿಸುತ್ತಲಿದ್ದಾರೆ. ಹೊಣೆಗಾರ ರಾಷ್ಟ್ರೀಯ ಮುಖಂಡನ ಮುಂದೆ ದೇಶೋನ್ನತಿಗಾಗಿ ಕೈಕೊಳ್ಳಬೇಕಾದ ಕಾರ್ಯದ ಬಗ್ಗೆ ಸಾವಿರ ಸಲ ಇವರು ವಾದ-ಚರ್ಚೆ ನಡೆಯಿಸಬಹುದು; ಆದರೆ ನಿರ್ಣಯದಂತೆ ಸಾಗುವ ಕೆಲಸ ಮಾತ್ರ ಇನ್ನೊಬ್ಬರದು. ತಾವು ಸಿನೇಮಾ ನಟ-ನಟಿಯರ ಬಣ್ಣನೆಯಲ್ಲಿಯೋ, ಕಲ್ಪನಾ-ಸೃಷ್ಟಿಯಲ್ಲಿಯ ಪ್ರೇಯಸಿಯ ಆರಾಧನೆಯಲ್ಲಿಯೋ ಕಾಲಕಳೆಯುವರು. 'ಹೀಗೇಕೆ?' ಎಂದು ಕೇಳಿದರೆ 'ಯಾವ ಮುಂದಾಳು ನಮಗೆ ಸರಿಯಾದ ದಾರಿ ತೋರಿಸಿದ್ದಾನೆ? ಯಾರನ್ನು ನಾವು ದೆನ್ನುಹತೊಣ?' ಎಂಬ ಹೊಣೆಯಿಲ್ಲದ ಉತ್ತರ ಕೊಡಲಿಕ್ಕೆ ಕಲಿತವರೆಂಬವರು ಹಿಂದುಮುಂದು ನೋಡುವುದಿಲ್ಲ. ಸರಕಾರವು ಮಾಡುವ ಶಿಕ್ಷಣವೆಚ್ಚದ ಬಹುಭಾಗವನ್ನು ತಿಂದು, ಪರಪುಷ್ಟ ಜಂತುವಿನಂತೆ ಬೆಳೆದು, ಸಮಾಜದ ಪ್ರಗತಿಯ ಜೀಕಕ್ಕೆ ಜೋತು ಬಿದ್ದಿಲ್ಲವೆ ಇವರು? ಅಗಾಧ ಬುದ್ಧಿಶಕ್ತಿ ಇರಬಹುದು; ಅಮೌಲ್ಯ ಪಾಂಡಿತ್ಯವಿರಬಹುದು. ಆದು ವ್ಯವಹಾರಕ್ಕೆ ಹೊಂದಿಕೊಂಡಿಲ್ಲ ವಾದರೆ ಲಾಭವೇನು? ಅಂತೆಯೆ ಇಂದಿನ ವಿಶ್ವವಿದ್ಯಾನಿಲಯಗಳು ಮೂರ್ಖವಿದ್ವಾಂಸರನ್ನು ಸಿದ್ಧಗೊಳಿಸುವ ಪಡಿಯಚ್ಚುಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ. ಕೈಕಾಲುಗಳನ್ನೆಲ್ಲ ಖಂಡೇರಾಯನಿಗೆ ಕೊಟ್ಟು, ತಲೆಯನೊಂದನ್ನೇ ಪೃಥ್ವಿಯಷ್ಟು ದೊಡ್ಡದನ್ನಾಗಿ ಮಾಡಿಕೊಂಡರೆ ಲಾಭವೇನು? ವ್ಯಾವಹಾರಿಕ ಸತ್ಯಸೃಷ್ಟಿಯಲ್ಲಿ ತಾಂಡವ ನಡೆಯಿಸಿರುವ ಧನಲಕ್ಷ್ಮಿಯ ನಿವಾಸ ಸ್ಥಾನ ಶಿರಕಮಲವಲ್ಲ, ಕರಕಮಲವೆಂಬ ಮಾತನ್ನು ಅರಿತಿರಬೇಕವರು. ಪ್ರತಿಯೊಂದು ಕಾರ್ಯವನ್ನೂ ಅನುಮಾನದ ಮೇಲೆ ಸಾಗಿಸುವ ನಮ್ಮ ಸಮಾಜಕ್ಕೆ, ದಿಕ್ಕುಗೆಡಿಸುವ ತರ್ಕಪ್ರಧಾನ ಬುದ್ಧಿಯುಳ್ಳ ಈ ಸುಶಿಕ್ಷಿತರು, ಪರರಾಜ್ಯಸತ್ತಿಗಿಂತಲೂ ಭಾರವಾಗಿ ಕುಳಿತಿದ್ದಾರೆ.

ಜಗತ್ತಿನಲ್ಲಿಯೆ ಸಿರಿವಂತ ರಾಷ್ಟ್ರವಾಗಿ ಮೆರೆಯುತ್ತಿರುವ ಅಮೇರಿಕೆಯಲ್ಲಿ ಕೂಡ ಶಿಕ್ಷಣದಲ್ಲಿ ಸುಧಾರಣೆಮಾಡುತ್ತ ಶಿಕ್ಷಣದ ಜೊತೆಯಲ್ಲಿಯೆ ಧನಾರ್ಜನವ್ಯವಸಾಯ ಸಾಗಿಸುತ್ತಾರೆ. ಅಲ್ಲಿಯು ಒಂದು ಉದ್ಯಮ ವ್ಯವಹಾರ (Business administration) ವಿದ್ಯಾಲಯದ ಮೂಲಕ ವಿದ್ಯಾರ್ಥಿಗಳು, ಒಂದು ವರ್ಷದಲ್ಲಿ ಹೊರಗೆ ಕೆಲಸಮಾಡಿ ಇಟ್ಟ ಲಕ್ಷ ಡಾಲರುಗಳನ್ನು ಗಳಿಸಿದ್ದಾರೆ ಎಂಬುದಾಗಿ ವರದಿ ಇದೆ. ಈ ಗಳಿಕೆಯು— ತಮ್ಮ ಅಭ್ಯಾಸದ ಹೊರತು ಉಳಿದ ವೇಳೆಯಲ್ಲಿ— ಕೇವಲ ಖರಡುಗೀಚಿ ದೊರಕಿಸಿದ್ದಲ್ಲ. ಜಹದ ಅಂಗಡಿಗಳಲ್ಲಿ ಕೆಲಸ, (ಇದರಿಂದಲೇ ಒಹುಭಾಗ ಗಳಿಕೆಯಾದದ್ದು) ಸ್ವಚ್ಛತೆ, ಬಾಗಿಲುಕಾಯುವುದು, ಹೊತ್ತುಮಾರುವುದು, ವಾಹನ ನಡೆಯಿಸುವುದು, ಸಿರಿವಂತರ ಸಂಜಿಗೆಯ ಸಂಗಡಿಗನಾಗುವುದು, ಸಂಗೀತದ ಹಿಮ್ಮೇಳದ ಕೆಲಸ–ಹೀಗೆ ನಾನಾರೀತಿಯ ಕೆಲಸಗಳಿಂದ ಗಳಿಸಿದ್ದಾರೆ. ತಮ್ಮ ಶಿಕ್ಷಣದ ವೆಚ್ಚವನ್ನೂ ಹೊರಗೆ ತೆಗೆದಿದ್ದಾರೆ.

ಹೀಗೆ ಗಳಿಕೆಮಾಡುವುದಿಷ್ಟೆ ಅವರ ಉದ್ದೇಶವಿಲ್ಲ. ಆ ವರದಿಯಲ್ಲಿಯೇ ಹೇಳಿದಂತೆ ಈ ಬಗೆಯ ಕೆಲಸಮಾಡುವುದರಿಂದ ಅದರ ರೂಢಿ ಬೆಳೆಯುವುದಲ್ಲದೆ, ಆ ವೇಳೆಯಲ್ಲಿ ಬೇರೆ ಬೇರೆ ತರದ ಜನರ ಸಂಬಂಧ ಒರುವುದರಿಂದ, ಪ್ರತ್ಯಕ್ಷ ವ್ಯವಹಾರದಲ್ಲಿ ಯಾವ ತೊಂದರೆಗಳಿವೆ?.. ತಮ್ಮ ಮುಂದಿನ ದಿನಗಳಲ್ಲಿ ಯಶಸ್ವಿಯಾಗಿ ಬಾಳಬೇಕಾದರೆ, ಎಷ್ಟು ಪರಿಶ್ರಮಮಾಡಬೇಕಾಗುವುದು?.. ಮೊದಲಾದ ಮಾತುಗಳ ಪರಿಚಯವಾಗುವುದು.

'ನಮ್ಮ ಹೈಸ್ಕೂಲುಗಳಲ್ಲಿ ಕೂಡ, ಸುಧಾರಣೆಯ ಮೆಟ್ಟಿಲೆಂದು ಹೇಳುತ್ತ, ತಮ್ಮ ನಿಯಮಗಳ ಚೌಕಟ್ಟಿನಲ್ಲಿಯೇ ಆಗಲಿ ವಾಗ್ವರ್ಧಿನೀಸಭೆ, ನಾಟಕ, ಚರ್ಚೆ, ಪರಿಷತ್ತು, ಉತ್ಸವ, ಸಮಾಜಸೇವೆಯ ಪಥಕಗಳು, ಬಾಲಕರ ಗುಂಪು, ಬಿಡುವಿನ ಪ್ರವಾಸ, ಬಾಲಕರ ಮಾಸಪತ್ರಿಕೆಗಳು, ಬಾಲಕರ ಆಂಗಡಿಗಳು, ಹುಡುಗರ ಸ್ವರಾಜ್ಯದಾಟದ ಪಾರ್ಲಮೆಂಟು, ಬಾಲಕರ ವ್ಯಾಯಾಮಮಂದಿರ ಪ್ರದರ್ಶನ, ಧಾರ್ಮಿಕ ಹಬ್ಬಗಳ ವಿವರಣೆ ಮೊದಲಾದುವುಗಳಿಂದ ವ್ಯವಹಾರಜ್ಞಾನವನ್ನು ಬೆಳೆಯಿಸುತ್ತೇವೆ' ಎಂದು ಹೇಳಲಾಗುತ್ತಿದೆ; ಆದರೆ ನಮಗೆ ಬೇಕಾಗಿರುವುದು ಇಂದಿನ ಶಿಕ್ಷಣದಲ್ಲಿಯ ಸುಧಾರಣೆಯಲ್ಲ, ಪರಿವರ್ತನೆ. ನೂರಕ್ಕೆ ೯೦ ಪಾಲು ನಮ್ಮ ಪೋಷಣೆಗಾಗಿ ಹೋರಾಡಬೇಕಾದ ವೇಳೆಯಲ್ಲಿ, ವ್ಯವಹಾರದ ರಣರಂಗದಲ್ಲಿ ನಿರುಪಯೋಗಿಯಾಗುವ ಸುಧಾರಣೆ ಗಳಿಂದಾಗಬೇಕೇನು?

ಒಟ್ಟಾರೆ ಶಿಕ್ಷಣದ ತಾತ್ಕಾಲಿಕ ಸುಧಾರಣೆಯಲ್ಲಿ ಇಂದಿನ ವ್ಯವಸಾಯಿಗಳೆಲ್ಲ ಸುಶಿಕ್ಷಿತರಾಗಬೇಕು; ಸುಶಿಕ್ಷಿತರೆಲ್ಲ ವ್ಯವಸಾಯಿಗಳಾಗಬೇಕು. ಶಾಶ್ವತ ಸುಧಾರಣೆಯಲ್ಲಿ ಎಲ್ಲರೂ ಸುಶಿಕ್ಷಿತ-ವ್ಯವಸಾಯಿಗಳಾಗಬೇಕು– ಇದೇ ಶಿಕ್ಷಣ.

ದಿನಚರಿಯ ಕತೆ

ಡಿ. ಹ. ವಿ. ಜೋಶಿ ಬಿ. ಎ.

★

ಮಾನವನ ಶಕ್ತಿಯನ್ನು ಮೀರಿ ನಿಂತಿರುವುದೆಂದರೆ 'ಪರಮಾತ್ಮಶಕ್ತಿ' ಒಂದೇ ಎಂಬ ಕಲ್ಪನೆ ನಮ್ಮಲ್ಲಿ ರೂಢವಾಗಿದೆ; ಆದರೆ ಇನ್ನೂ ಒಂದಿದೆ! ಅದಾವುದು ಗೊತ್ತೆ? ಸ್ತ್ರೀ-ಪುರುಷರ ಹೃದಯಾಕರ್ಷಣ ಶಕ್ತಿ. ಪರಮಾತ್ಮ ಶಕ್ತಿ ಎಂದೂ ಯಾರಿಗೂ ಕಾಣದಂತಹದು; ಈ ಹೃದಯಾಕರ್ಷಣಶಕ್ತಿ ಯಾರಿಗೂ ಯಾವಾಗಲೂ ಕಂಡೂ ಕಾಣದಂತಹದು!

★

೨೬ ಜನವರಿ :—

ಈ ನಾಲ್ಕು ದಿನಗಳೆಂದರೆ, ನಾಲ್ಕು ಯುಗಗಳೇ—ತೀರಿಯೂ ತೀರದಂತಾಗಿದ್ದುವು. ಯಾರ ಸಂಪರ್ಕವೂ ಬೇಡವೆಂದು ಈ ಅಡ್ಡ ದಿನಗಳಲ್ಲಿ ಗೇರುಸೊಪ್ಪೆಯ ತಡಿಸಿಲನ್ನು ನೋಡಬೇಕೆಂದು ಬಂದೆ. ನೋಡಬೇಕಾದದ್ದಾದರೂ ಏನು?— ಈ ದಿನಗಳಲ್ಲಿ ಇಲ್ಲಿ ನೋಡತಕ್ಕಂಥಾದ್ದು ಇರುವುದಾದರೂ ಏನು?— ಶರಾವತಿಯ ನೀರು ಇಳಿದಿದೆ—'ರಾಣಿ' ಯು ಸೊರಗಿರುವಳು— ಆದರೂ ಸುತ್ತಲಿನ ವನಸಿರಿ, ಮೈಸೂರುಬಂಗ್ಲೆಯ ಆತಿಥ್ಯ ಇವೇನೋ ಅದ್ಭುತವಾಗಿರುವುವು. ಇಡಿ ಬಂಗ್ಲೆಯಲ್ಲಿ ನಾನೊಬ್ಬನೇ ಒಬ್ಬ; ಇದ್ದಾನೆಯೆಂದರೆ ಸವಿಯೂಡ ಊಟವನ್ನುಣಿಸುವ "ಮದ್ರಾಸಿ ಜಾಸವಮಾ" ಒಬ್ಬ! ಆತನೂ ಇಂದು ಸಿರಸಿಗೆ ಹೋಗಿರುವನು. ಸಂಜೆಗೆ ಬರಬಹುದು.

೨೪ ಜನವರಿ :—

ಬೇಸತ್ತೆ— ನನ್ನೆದುರು ತಡಿಸಿಲು, ತಡಸಿಲಿನೆದುರು ನಾನು— ಒಮ್ಮೆ ಬಾಸ್ವೆಲನು ಜಾನ್ಸನ್ನನಿಗೆ ಕೇಳಿದ್ದನಂತೆ; "ಡಾಕ್ಟರ್, ಲಂಡನ್ ಟಾವರಿನ ಮೇಲೆ ನಿಮ್ಮ ಜೊತೆಗೆ ಒಂದು ಮಗು ಮತ್ತು ನೀವು ಹೀಗೆ ಇಬ್ಬರನ್ನೇ ಇಟ್ಟರೆ ನೀವೇನು ಮಾಡುವಿರಿ?"ಎಂದು. ಜಾನ್ಸನ್ನನು ಇಂಥ ತಿಳಿಗೇಡಿ ಪ್ರಶ್ನೆಗೆ ಉತ್ತರವನ್ನೇನೂ ಕೊಡಲಿಲ್ಲ—ಇಷ್ಟೇ ಅಲ್ಲ—ಬಾಸ್‌ವೆಲ್ಲನ ಕಿವಿಯನ್ನು ಮಾತ್ರ ಜೆನ್ನಾಗಿ ಹಿಂಡಿದನು. ಬಾಸ್‌ವೆಲ್ಲನ ಪ್ರಶ್ನೆ ತಿಳಿಗೇಡಿತನದ್ದು ಅಹುದೇನು? ಮಾತಿನಲ್ಲಿ ಜಾನ್ಸನ್ನನೆಂದರೆ ಪ್ರತ್ಯಕ್ಷ ಮಹಾಭೂತ. ಪ್ರೇಮ ದಿಂದಲೂ ಕೌತುಕದಿಂದಲೂ ಅತನನ್ನು ಕೆಣಕುವ ಗೆಳೆಯರ ಗುಂಪು ಹಗಲಿರುಳೂ ಅತನ ಸುತ್ತು ನೆರೆದಿರುತ್ತಿತ್ತು. ಈ ಪ್ರಚಂಡ ಪಂಡಿತನಿಗೆ ಎಂದಾದರೊಂದು ದಿನ ತಿಳಿವಿಲ್ಲದ ಮಗುವಿನ ಜೊತೆಯಲ್ಲಿ ಇರಬೇಕಾಯಿತು ಎಂದು ತಿಳಿಯೋಣ— ಅದೊಂದು ಅವನಿಗೆ ಶಿಕ್ಷೆಯೆ ಅಲ್ಲವೆ?

ನಾನು ಮತ್ತು ಈ ತಡಿಸಿಲು! ಪ್ರಳಯವಾಗಿ ಉಳಿದುದೆಲ್ಲವೂ ಇಲ್ಲದಂತಾಯಿತೆಂದರೆ— ನಮ್ಮಿಬ್ಬರಲ್ಲಿ ಏನೋ ಒಂದು ವಿಶೇಷ ಶಕ್ತಿಯಿದ್ದು ನಾವು ಪ್ರಳಯವನ್ನು ಮೀರಿ ಉಳಿದಿವೆಂದರೆ— ಮತ್ತೆ ಹೊಸ ಭಟ್ಟಿ ಕೂಡುವವರೆಗೆ ನಾವಿಬ್ಬರೂ ವೇಳೆ ಕಳೆಯುವುದು ಹೇಗೆ? ಏನೇನೋ ವಿಚಾರ— ನಾನು ನನ್ನ ದಿನಚರಿಯಲ್ಲಿ ಹೀಗೆ ಏನೇನೋ ಬಹಳ ಬರೆದಿರುತ್ತೇನೆ. ಇದೊಂದು ಮನಸಂಜನೆಯ ವಿಷಯ. ನನಗೇ ನಗೆಬರುತ್ತಿದೆ ಇಂಥ ಕಲ್ಪನೆಗಳ ಕಸರತ್ತನ್ನು ನೋಡಿ— ಪುಚ್ಚಕ್ಕೊಂದರಂತೆ ಪಕ್ಷಿಯಾದರೆ ಮುಗಿಲು ಹಿಡಿಸಲಿಕ್ಕಿಲ್ಲ ಅವಕ್ಕಾಗಿ—

೨೫ ಜನವರಿ :—

ವೈಜಿಟರ್ಸ್ ಬುಕ್ಕನ್ನು ತರಿಸಿದೆ. ಬರತಕ್ಕವರೆಲ್ಲರೂ ಬಂದು ಹೋಗಿದ್ದಾರು. ರಾಜರು, ಮಹಾರಾಜರು, "ವಿ. ಜಿ. ಜಿ." ಸೇನಾಪತಿ ಸಾಹೇಬರು, ಮರಳಿ ಹೋಗುವ ಲಾಟಸಾಹೇಬರು— ಅಹುದು ಈ ಸಲ ಲಾರ್ಡ್ ಅರ್ವಿನ್ ಸಾಹೇಬರು ಬಂದು ಹೋಗಿದ್ದರು— ಕೊನೆಯ ಉಲ್ಲೇಖ! ಎಂದರೇನು? ಯಾರಿಗೆ ಏನು ಬರೆಯಬೇಕೆಂದೆನಿಸಿತೊ ಅದನ್ನವರು ಬರೆದು ಇಟ್ಟಿದ್ದರು— ಕೊನೆಗೆ ಸಹಿ ಮತ್ತು ತಾರೀಖು—ಕೊನೆಯ ಇಂಥ ಉಲ್ಲೇಖ ೧೦ನೆಯ ತಾರೀಖಿನದು— ನಡುವೆ ಎಂಟು ದಿನಗಳ ಬಿಡುವು— ಹೊತ್ತು ಸಾಧಿಸಿ ನನಗೆ ಏಕಾಂತವಾಸದ ಅಪೇಕ್ಷೆಯಾಯಿತು, Solitary confinement ಕೈದಿ ನಂ X-X ಬಡಾಬುದ್ಧಾಷ್ ತಿಂದು ಉಂಡು ಮಜಾ ಹೊಡೀತಾ ಕೂತಾನೆ; ಕಳಿಸಿರಿ ಅವನನ್ನು ಮೈಸೂರು ಬಂಗಲೇಗೆ— ಮಧ್ಯಾಹ್ನದಿಂದ ಹೇಗೆ ರಣರಣ ಸುರಿಯ ತೊಡಗಿದೆ— ಈ ದಿನಗಳಲ್ಲಿ ಯಾರೂ ಒರುತ್ತಿರಲಿಕ್ಕಿಲ್ಲ. ಬೆಳಗ್ಗೆ ಲರ್ರ ಸುಮಾರಿಗೆ ಯಾವನೋ ಒಬ್ಬ ಬಂದ— ಕೂಡಲೆ ಕೆಳಗೆ ಇಳಿಯುವುದಕ್ಕೆ ಪ್ರಾರಂಭ ಮಾಡಿದ. ಮೂರ್ಖ, ನನ್ನ ಕಡೆಗವನ ಲಕ್ಷ್ಯವೆ ಇಲ್ಲ! 'ಸುಖಂಜವೋ ಶಯನಂಜವೋ' ನಾನೆಂದರೆ ಒಂಗ್ಲೆಯಲ್ಲಿಯ ಒಬ್ಬ ಕಾರಕೂನನಿರಬಹುದೆಂದು ತಿಳಿದುಕೊಂಡಿರಬೇಕು ಅವನು. ಹಿಡಿದು ಕಿವಿಹಿಂಡಬೇಕೆಂದು ನಿರ್ಣಯಿಸಿ ಜಪ್ತಿಸಿಕೊಂಡು ಕುಳಿತೆ— ಇದರೆ ಅದೊಂದು ಚಕ್ರಂ— ಯಾವ ಅಡ್ಡದಾರಿಯಿಂದ ಪಾರಾಯಿತೊ!— ಇನ್ನು ಊಟ— ಹೊರಗೆ ಮಲಗುಬಾರದಂತೆ !

ನಾನೂ ಊಟಕ್ಕೆಂದು ಎದ್ದೆ— ಮುಂದೆ ನಾಲ್ಕು ದಿನ ನನಗೆ ಮಹಾರಾಜರು ಕಾಣಲಿಲ್ಲ— ಆ ಪರದೆಗಳಾಚೆಗಿನ ಜೀವನಕ್ರಮವನ್ನು ಕುರಿತು ನಾನು ಎಷ್ಟೆಷ್ಟೋ ಕಲ್ಪನಾಚಿತ್ರಗಳನ್ನು ಚಿತ್ರಿಸಿರಬೇಕು— ಭಾರಿ ಬೆಲೆಯ ಗುಡಾಕು, ಅತ್ತರಿನ ಕಂಪು, ನಡುವೇ ಒಂದು ಹೆಜ್ಜೆಯ ಸದ್ದು. ಇವೆಲ್ಲವುಗಳ ಆಧಾರದಿಂದ ನಾನು ತರ್ಕಗಳ ಗೋಪುರಗಳನ್ನೆ ಕಟ್ಟಿರಬೇಕು— ಇದು ನಾಲಕ್ಕನೆಯ ದಿನವೋ ಏನೊ, ರಾತ್ರಿಯ ಶಾಂತವೇಳೆಗೆ ಸರಿಯಾಗಿಯಾರೋ ಬೀನ್ (ವೀಣೆ) ನುಡಿಸುತ್ತಿದ್ದರು— ಅದು ಪಳಗಿದ ಕೈಯಿತ್ತು— ಹೊಸಬಿಸಿ ಕೈಯಲ್ಲಿ ಆ ಕೈಚಳಕ, ಆ ನಯ, ಆ ಬೆಳಕು ಸಿಗಲಾರದು. ಹೀಗಿದ್ದರೂ ನುಡಿಸುವಿಕೆ 'ಯಥಾ ತಥಾ' ಆಗಿತ್ತು— ಕೇಳಿ ಮನಸ್ಸು ಖುಷಿಗೊಳ್ಳುತ್ತಿತ್ತು— ನಾನು ಒಮ್ಮೆ ಬಿಡಾರ ಕಿತ್ತ ಬೇಕೆಂದು ಕಟ್ಟಿಟ್ಟಿ— ರಾತ್ರಿ ಊಟ ಮುಗಿಸಿ ಕುರ್ಚಿಯ ಮೇಲೆ ಒರಗಿದ್ದೆ— ಸುತ್ತಲೂ ಬೆಳ್ದಿಂಗಳು— ಎಂದಿನಂತೆ 'ಬೀನ್'ನ ಸ್ವರಗಳು ಕೇಳತೊಡಗಿದುವು— ಇಂದಿನ ರಂಗು ಏನೋ ಬೇರೆಯಾಗಿತ್ತು— ಒಂದೆರಡು ನಿಮಿಷಗಳಲ್ಲಿ ಎಲ್ಲೆಲ್ಲಿಯೂ ತುಂಬಿತುಳುಕುತ್ತಿತ್ತು— ಎಷ್ಟೋ ಹೊತ್ತಿನವರೆಗೆ ನಾನು ಹಾಗೇ ಮೈಮರೆತು ಕೇಳುತ್ತ ಒರಗಿದ್ದೆ— ಒಮ್ಮಿಂದೊಮ್ಮೆಲೆ ಸಂಗೀತ ನಿಂತು ಹೋಯಿತು— ಸುತ್ತಲೂ ಮೌನಭೂತ ಬಡಿದಂತಾಯಿತು— ಪರದೆಗಳಾಚೆಗಿನ ಜಗತ್ತಿನಲ್ಲಿ ಒಮ್ಮಲೆ ಓಡಾಟ-ಗಡಿಬಿಡಿಗಳಿಗೆ ಪ್ರಾರಂಭವಾಯಿತು— ಎಂತಹ ಭಯಂಕರ ಘಟನೆ ಬಂದಿರಬೇಕೆಂಬುದರ ಬಗ್ಗೆ ಕಲ್ಪನೆ ಹರಿಯಲಿಲ್ಲ— ರಾತ್ರಿಯಲ್ಲಿ ಮೋಟಾರುಗಳು ಹೊರಟುವು— ಆಳುಮಕ್ಕಳು ದೀವಟಿಗೆ-ಲಾಂದರುಗಳನ್ನು ಹಿಡಿದುಕೊಂಡು ಓಡಾಡತೊಡಗಿದ್ದರು— ನಾನು ಮಾತ್ರ ಬೆಳಗಾಗುವವರೆಗೆ ಏನೇನಾಗುವುದೋ ಎಂಬುದರ ಬಗ್ಗೆ ಅನಿಶ್ಚಿತತೆಯಲ್ಲಿಯೇ ಇರುಳನ್ನು ಕಳೆದೆ— ಕಣ್ಣಿಗೆ ಕಣ್ಣು ಹತ್ತಲಿಲ್ಲ— ಚಹದ ಕಾಲಕ್ಕೆ 'ಖಾನಸಾಮ'ನು ಏನೇನೋ ಹೇಳಿದ— ಆತನ ಮಾತಿನ ನಿಷ್ಕರ್ಷವಿಷ್ಟೇ— ಮಹಾರಾಜರೊಂದಿಗೆ ಇದ್ದ ಆ ವಯಸ್ಸಾದ ಗೃಹಸ್ಥರು ತೀರಿದರಂತೆ— ನಾನು ದಂಗುಗೊಂಡು ಹೋದೆ— ನಾನು ಅವರನ್ನು ನೋಡಿದ್ದಾದರೂ ಒಮ್ಮೆ— ಆದರೆ ಮನಸ್ಸಿಗೆ ಹಳವಂಡವೆನಿಸಿತು— ರಾತ್ರಿಯಲ್ಲಿ ಹೋದ ಮೋಟಾರುಗಳು ಮರಳಿ ಬಂದುವು— ಮೈಸೂರು ಸಂಸ್ಥಾನದ ಅಧಿಕಾರಸ್ಥರೂ ಬ್ರಿಟಿಶ್ ಅಧಿಕಾರಸ್ಥರೂ ಒಂದಿದ್ದರು— ಒಳಗೆ ಹೋಗಿ ನೋಡಿ ಬಂದರು— ಎಷ್ಟೋ ಹೊತ್ತಿನವರೆಗೆ ಚರ್ಚೆಯಾಯಿತು— ತುಸು ಹೊತ್ತಿನಲ್ಲಿ ನನಗೆ ಅಲ್ಲಿಂದ ಕರೆ ಬಂತು— ಎಷ್ಟೋ ಪ್ರಶ್ನೆಗಳನ್ನು ಕೇಳಿದರು— ನಾನೂ ಒಳಗೆ ಹೋಗಿ ಒಮ್ಮೆ ನೋಡಿ ಒಂದೆ— ಆ ವಯಸ್ಸಾದ ಗೃಹಸ್ಥರು ಶಾಂತಭಾವದಿಂದ ಮಲಗಿದ್ದರು— ಸಾವಿನ ಉರುಲೆಂದರೆ ಒಂದು ಹೂವಿನ ಹಾರ— ಹಾಗೆ ನೋಡಿದರೆ ಹೆಣದ ಕಳೆ ಮಹಾರಾಜನ ಮೋರೆಯ ಮೇಲೆಯೇ ಮೂಡಿತ್ತು— ಅವರ ಕರುಣಾಸ್ಥಿತಿಯನ್ನು ನೋಡಿ ಯಾರಿಗಾದರೂ ಕನಿಕರವೆನಿಸುತ್ತಿತ್ತು— ಅಧಿಕಾರಸ್ಥರಲ್ಲಿ ವಿಚಾರ ವಿನಿಮಯವಾಯಿತು— ಹೆಣವನ್ನು ಸಂಸ್ಥಾನಕ್ಕೇ ಸಾಗಿಸಬೇಕೆಂದು ಗೊತಾಯಿತು.— ಮೃತರಿಗೆ ತಮ್ಮ ಹೆಂಡತಿಯ ಗೋರಿಯ ಹತ್ತಿರವೆ ತನ್ನ ಶವ ಹೂಳಬೇಕೆಂಬ ಇಚ್ಛೆಯಿತ್ತಂತೆ— ಮಧ್ಯಾಹ್ನಕ್ಕೆ ಹೊರಟದ್ದಾಯಿತು— ಸಾವಿರ ಮೈಲಿನ ಪ್ರವಾಸ— ಜೊತೆಗೆ ಒಬ್ಬ ಬ್ರಿಟಿಶ್ ಅಧಿಕಾರಸ್ಥರೂ ಹೊರಟಿದ್ದರು— ಮಹಾರಾಜರ ಸೂಚನೆಯ ಮೇರೆಗೆ ನಾನೂ ಹೊರಟುಬಿಟ್ಟೆ. ಮೂರು-ನಾಲ್ಕು ದಿನಗಳ ನಂತರ ನಾವು ಇಲ್ಲಿಗೆ ಬಂದು ಮುಟ್ಟಿದೆವು— 'ದಫನ್' ವಿಧಿ ಯಥಾಸಾಂಗವಾಗಿ ಕೊನೆಗಂಡಿತು— ಬಡಬಗ್ಗರಿಗೆ ಫಕೀರರಿಗೆ ದಾನ-ಧರ್ಮ-ಭೋಜನಗಳಾದುವು— ಮಹಾರಾಜರು ಏಕಾಂತದಲ್ಲಿಯೆ ಕಾಲಕಳೆಯತೊಡಗಿದರು— ಎಂಟು ಹತ್ತು ದಿನ ನಾನು ಮಾತ್ರ ಪೇಜಾಟದಲ್ಲಿ ಬಿದ್ದೆ— ಕೊನೆಗೆ ಬೀಜಾರಾಗಿ ಮಹಾರಾಜರನ್ನು ಕಂಡುಕೊಂಡು ಮರಳಿ ಹೋಗಲಿಕ್ಕೆ ಅಪ್ಪಣೆ ಕೇಳಿದೆ— ಅವರು ನನಗೆ ಹೋಗಬಾರದಾಗಿ ಹೇಳಿದರು— ನನಗೆ ಕೆಲಸಕ್ಕಾಗಿ ಎಂದರೆ ಶ್ರೀಯುವರಾಜ ಸಾಹೇಬ ಮತ್ತು ವಿಾರ್ ಫರೂಕ್‌ಸಾಹೇಬ್ ಅವರ 'ಟ್ಯೂಟರ್‌ಶಿಪ್' — ಹಾಗೆಂದರೆ ಮಿಸ್ಟರ್ ಈವ್ಲಿನ್ ಜೋನ್ಸ್ ಎಂಬವರನ್ನು ಟ್ಯೂಟರರನ್ನಾಗಿ ನೇಮಿಸಿಯೆ ಇದ್ದರು— ನಾನು ಹೆಸರಿಗೆ— ಸಸ್ಸ ಕೆಲಸವೆಂದರೆ ಅವರ ಅಭ್ಯಾಸ-ಪ್ರಕೃತಿಮಾನಗಳ ಬಗ್ಗೆ ಮಹಾರಾಜರಿಗೆ ವರದಿ ಒಪ್ಪಿಸತಕ್ಕದ್ದು— ಶ್ರೀಯುವರಾಜರ ವಯಸ್ಸು ೧೪-೧೫ ಇದೆ— ವಿಾರ್ ಸಾಹೇಬರಾದರೂ ಅಷ್ಟೇ ವಯಸ್ಸಿನವರು— ಅವರು ಭಯ್ಯಾ (ಆ ಮೃತರನ್ನು ಮಹಾರಾಜರು ಹೀಗೆ ಉಲ್ಲೇಖಿಸುವರು.) ಅವರ ಮೊಮ್ಮಗ— ಭಯ್ಯಾ ಅವರ ಅಳಿಯ ವಿಾರ್ ಸಾದತ್ ಅಲ್ಲೀಖಾನ್‌ಸಾಹೇಬರು, ಸಂಸ್ಥಾನದ ಒಬ್ಬ ಮಾಂಡಲೀಕರು— ಚಿಕ್ಕವಯಸ್ಸಿನಲ್ಲಿಯೆ ತೀರಿದ್ದರು— ಅವರ ಜಹಾಗಿರಿಯ ವ್ಯವಸ್ಥೆ ಸಂಸ್ಥಾನದ ಮೂಲಕ ಸಾಗಿತ್ತು— 'ಮಾಸಾಹೇಬ'ರು ತಮ್ಮ ತಂದೆಯವರ ಕಡೆಗೆ ಇರತೊಡಗಿದರು— ಅಂದಿನಿಂದ ಫರೂಕ್ ಸಾಹೇಬರ ಶಿಕ್ಷಣ ಶ್ರೀಯುವರಾಜರೊಂದಿಗೆ ಸಾಗಿತ್ತು—

೧೯೫೫ ಅಕ್ಟೋಬರ್. ತಾಜಮಹಲ್ ಹೋಟೆಲ್— ರಾತ್ರಿ ಎರಡು ಘಂಟೆ:—

ಇಂದು ನಾನು ಕೇಳಿದುದರ ಮೇಲೆ ವಿಶ್ವಾಸವನ್ನಿಡಬೇಕೋ ಬಾರದೋ ಎಂಬುದೆ ತಿಳಿಯದಾಗಿದೆ— ಇಂದು ಮಧ್ಯಾಹ್ನ ×× ಬೋಟಿನಿಂದ ಶ್ರೀಯುವರಾಜಸಾಹೇಬರೂ ವಿಾರ್‌ಸಾಹೇಬರೂ ಮಿ. ಜೋನ್ಸ್ ಅವರೂ ಏಲಾಯತಿಗೆ ಹೊರಟರು— ಹಡಗಿನ ಮೇಲಿನ ನೋಟನನ್ನು ಮರೆಯುವುದೇ ಶಕ್ಯವಿಲ್ಲ— 'ಮಾಸಾಹೇಬ'ರ ಅಳುಸನ್ನು ನಿಲ್ಲಿಸುವುದಾಗಲಿಲ್ಲ— ಮಹಾರಾಜರು ಗಂಡುಸರು— ಅವರು ತೋರಿದ ಸಂಯಮವು ಹೊಗಳುವಂಥದು— ನಾವು ಮರಳಿ ಒಂದಾಗ ಅವರಿಂದ ತಡೆಯಲಿಕ್ಕಾಗಲಿಲ್ಲ— ಮಾತನಾಡುತ್ತ ಅವರೆಂದರು: "ಮಾಸ್ತರಜಿ, ಇಂದು ಬೆಳಗಿನಿಂದ ನನಗೆ ಭಯ್ಯಾ ನೆನಪಿಗೆ ಬರುತ್ತಿರುವನು— ಹಡಗಿನ

ಮೇಲೆ **ಜಿತೇಂದ್ರ** (ಯುವರಾಜ) ಮತ್ತು **ಫರೂಕ್** ಇವರಿಬ್ಬರನ್ನು ನೋಡಿದಾಗ, ನಾನು ಮತ್ತು ಭಯ್ಯಾ ಈ ಜೊತೆಯನ್ನೇ ಕಂಡಂತಾಯಿತು— ನಾವಿಬ್ಬರೂ ಹೀಗೇ ಬೆಳೆದವರು — ಭಯ್ಯಾನ ತಂದೆಯವರು ಸಯಾಮದಿಂದ ಬಂದರು— ನನ್ನ ತಂದೆಯವರು ಅವರನ್ನು ಮಮತೆಯಿಂದ ಸ್ವಾಗತಿಸಿದರು— ಅವರಿಗೆ ತುಂಬಾ ಮಾನಕೊಡುತ್ತಿದ್ದರು— ನಾನೂ ಅವರನ್ನು 'ಕಾಕಾಜಿ' ಎಂದು ಕರೆಯುತ್ತಿದ್ದೆ— ಕಾಕಾಜಿಯವರು ಒಬ್ಬ ಶ್ರೇಷ್ಠಸ್ಪರ್ತಿಯ ಗಾಯಕರಿದ್ದು, ಬೀನ್ ನುಡಿಸುವುದರಲ್ಲಿ ಅವರನ್ನು ವಿಾರಿದವರು ಯಾರೂ ಇರಲಿಲ್ಲ— ಭಯ್ಯಾನಿಗೆ ಅವರು ಬೀನ್ ಕಲಿಸುತ್ತಿದ್ದರಂತೂ ಸರಿ—ನಾನೂ ಅವರ ಕಡೆಗೆ ಬೀನ್ ಕಲಿಯತೊಡಗಿದೆ— ಅವರಿಗೆ ಒಬ್ಬ ತಮ್ಮನೂ ಇದ್ದಂತಿತ್ತು—ಆ ತಮ್ಮ ತೀರಿಕೊಂಡದ್ದರಿಂದ ಆತನ ಪರದೇಶಿ ಮಗಳನ್ನು ಕಾಕಾಜಿಯವರೆ ಸಾಕಿ ಸಲುಹಬೇಕಾಗಿತ್ತು— **ಸಕೀನೆ**ಯು ಬುದ್ಧಿಶಾಲಿಯಂತೂ ಸರಿ— ಇಂಪಾದ ಧ್ವನಿಯೊಂದನ್ನೂ ದೇವರು ಆಕೆಗೆ ದಯಪಾಲಿಸಿದ್ದನು— ಕಾಕಾಜಿಯವರು ಆಕೆಗೆ ಹಾಡಿಕೆ ಕಲಿಸಿದರು— ಕಾಕಾಜಿಯವರ ಜರಬು ದೊಡ್ಡದೇನೊ ನಿಜ—ಆದರೆ ಆಕೆಯ ಎದುರು ಆದರಾಟ ಸಾಗುತ್ತಿರಲಿಲ್ಲ— ಆಕೆಗೆ ಹಾಡಲಿಕ್ಕೆ ಹೇಳಿದರೆ, ಯಾರ ಎದುರಿಗೂ ಧಿಟ್ಟತನದಿಂದ ಹಾಡುತ್ತಿದ್ದಳು— ನಮ್ಮಲ್ಲಿ ಯಾರಾದರೂ ಅತಿಥಿಗಳು ಬಂದಿದ್ದರೆ ಅವರು, ಆಕೆಯ ಹಾಡಿಕೆ ಕೇಳಿಸಬೇಕೆಂದು ಆಗ್ರಹದಿಂದ ಹೇಳಿಕೊಳ್ಳುತ್ತಿದ್ದರು— ಕಾಕಾಜಿಯವರಾದರೂ ಅವರ ಮಾತನ್ನು ಅಲ್ಲಗಳೆಯುತ್ತಿರಲಿಲ್ಲ— ಒಮ್ಮೆ ××× ಸಾಹೇಬ್‌ಜಾದಾ ಅವರು ನಮ್ಮ ಕಡೆಗೆ ಅತಿಥಿಗಳಾಗಿ ಬಂದಾಗ, ಆಕೆ ಹಾಡಿದಳು— ಸಾಹೇಬ್‌ಜಾದಾ ಅವರು ಆಕೆಗೆ ಒಂದು 'ಠುಂಬರಿ' ಹಾಡಲಿಕ್ಕೆ ಹೇಳಿದರು— ಆಕೆ ಕಾಕಾಜಿಯವರ ಒಪ್ಪಿಗೆಗಾಗಿ ಅವರ ಕಡೆಗೆ ನೋಡಿದಳು— ಸಾಹೇಬ್‌ಜಾದಾ ಅವರು ನಡೆಯಿಸಿದ ಲೀಲೆ, ಮಂಗಾಟಗಳಿಂದ ಕಾಕಾಜಿಯವರು ಸಿಟ್ಟುಬೆಂಕಿಯಾಗಿ— ಅವರು ಇಷ್ಟೆ ಹೇಳಿದರು: "ಅಡ್ಡಿ ಏನು! ನೋಡು, ನೋಡು! ಗೆಜ್ಜೆಗಳಿದ್ದರೆ ತುಸು ಕುಣಿದೂ ತೋರಿಸಬಹುದು!" ಸಾಹೇಬ್‌ಜಾದಾ ಅವರು ಬೆಚ್ಚಿಬಿದ್ದರು—ಸಕೀನೆಯಂತೂ ಅತ್ತುಬಿಟ್ಟಳು— ಅಂದಿನಿಂದ ಆಕೆ ಯಾರ ಎದುರಿಗೂ ಹಾಡಲಿಲ್ಲ ಅಥವಾ ಯಾರ ಎದುರಿಗೂ ಬಂದು ಕೂಡಲಿಲ್ಲ— ಹೀಗಿತ್ತು ಅವರ ಸ್ವಭಾವ— ದಿನದಿನಕ್ಕೆ ಅವರು ಸೊಲುತ್ತ ನಡೆದರು— ಅವರಿಗೆ ಬಂದೇ ಬಂದು ಧ್ಯಾಸ:— ಭಯ್ಯಾ ಭೋಳೆ ಸ್ವಭಾವದವ, ಅನುಭವವಿಲ್ಲದವ— ತಾವು ಹೋದ ಬಳಿಕ ಭಯ್ಯಾನ ಗತಿ ಏನಾದೀತು?.. ಇದೇ ಧ್ಯಾಸ. ಸಕೀನೆಯೊಂದಿಗೆ ಆತನ ಮದುವೆ ಮಾಡಿದರು— ಒಂದು ಕರ್ತವ್ಯವನ್ನು ಮುಗಿಸಿದಂತಾಯಿತು — ಆದರಿಂದ ಅವರ ಸನೂಧಾನವಾಗುವಂತಿರಲಿಲ್ಲ. ತಂದೆಯವರು ತೀರಿಕೊಂಡರು—ನಾನು ಗಾದೆಗೆ ಬಂದೆ— ನಾನಾದರೂ ಕಾಕಾಜಿಯವರ ಮಾನಮರ್ಯಾದೆ ಮೊದಲಿನಂತೆ ಇಟ್ಟೆ— ಅವರು ಬಹಳ ನ ಬದುಕಲಿಲ್ಲ— ಸಾಯುವಾಗ ನನ್ನನ್ನು ಹತ್ತಿರ ಕರೆದು 'ಭಯ್ಯಾ ಭೋಳೆ ಸ್ವಭಾವದವನು; ನೀನೇ ಆತನನ್ನು ಕಾಯಬೇಕು! ಸಕೀನೆಯು ಇನ್ನೂ ಹುಡುಗಿ— ಆಕೆಯಿಂದಿದಾಗದು— ಅವರಿಬ್ಬರೂ ನಿನ್ನ ಉಡಿಯಲ್ಲಿ'— ಎಂದು ಹೇಳಿಹೋದರು— ನಾನು ಆ ಇಬ್ಬರಿಗೆ ಯಾವುದಕ್ಕೂ ಕೊರತೆ ಮಾಡಲಿಲ್ಲ—ಕೆಲಸವಿಲ್ಲದಾಗೆಲ್ಲ ಅವರ ಜೊತೆಯಲ್ಲಿ ಕಾಲಕಳೆಯುತ್ತಿದ್ದೆ— ಭಯ್ಯಾ ನನ್ನನ್ನೆಂದೂ ಬಿಟ್ಟಿರುತ್ತಿರಲಿಲ್ಲ— ನಾನೇ ಯಾವಾಗಲಾದರೂ ದಿಲ್ಲಿ-ಸಿವಾಲ್ಲಕ್ಕೆ ಹೋದಾಗ, ಹೊರಗಿನ ಜಗತ್ತನ್ನು ನೋಡುವ ಪ್ರಸಂಗ ಆತನಿಗೆ—ಈ ಹೊರತಾಗಿ ಎಲ್ಲಿಂದಾದರೂ ಕರೆ ಬಂದರೆ ಆತನು ನಿರಾಕರಿಸುತ್ತಿದ್ದನು— ಒಮ್ಮೆ ನೇಪಾಳದ ಮಹಾರಾಜರು ಹಿಂದುಸ್ಥಾನದಲ್ಲಿಯ ಹೆಸರಾದ ಗಾಯಕರನ್ನು ಕರೆತಂದು ಒಂದು ದೊಡ್ಡ 'ಮಜಲೀಸ್' ಕೂಡಿಸಿದ್ದರು— ಭಯ್ಯಾನನ್ನು ಕಳಿಸಿಕೊಡುವುದಕ್ಕಾಗಿ ನನಗೆ ಆಗ್ರಹಪೂರ್ವಕವಾಗಿ ಬರೆದಿದ್ದರು— ದಿಲ್ಲಿಯಲ್ಲಿ ಅವರು ಒಮ್ಮೆ ಆತನ ಸಂಗೀತ ಕೇಳಿದ್ದರು— ಭಯ್ಯಾ ಮೊದಲು ಒಪ್ಪಿರಲಿಲ್ಲ— ನಾನೇ ಪ್ರಯಾಸದಿಂದ ಕಳಿಸಿಕೊಟ್ಟೆ— ನಮ್ಮ ಅಪೇಕ್ಷೆಯಂತೆ ಆತನ ಎಲ್ಲ ಕಾರ್ಯಕ್ರಮಗಳೂ ಯಶಸ್ವಿಯಾದುವಲ್ಲದೆ, ಅಪ್ರತಿಮವಾದುವು—ಮಹಾರಾಜರು ನನಗೆ ಅಭಿನಂದನೆಯ ತಂತಿ ಕಳಿಸಿದರು— ನನ್ನ ಮನವು ಹಿಗ್ಗಿನಿಂದ ಅರಳಿತು—

ಸಕೀನೆಯು ಹಾಡತೊಡಗಿದಳು—ನಾವು ಆ ರಾತ್ರಿ ಎಷ್ಟೋ ಹೊತ್ತಿನವರೆಗೆ ಮಾತನಾಡುತ್ತ ಕುಳಿತಿದ್ದೆವು— ನಾನು ಭಯ್ಯಾನಿಗೆ ಪ್ರೀತಿಯದಾದ 'ಹಿಂಡೋಲ' ರಾಗವನ್ನೆ ಬೀನಿನಲ್ಲಿ ನುಡಿಸಲಾರಂಭಿಸಿದ್ದೆ— ಕಣ್ಣು ಮುಚ್ಚಿ ಒಂದೊಂದು ಸ್ವರ ವಿಾಟುತ್ತಿದ್ದೆ— ಅಷ್ಟರಲ್ಲಿ ನನ್ನ ಹೆಗಲಿಗೆ ಒಂದು ಮೃದುವಾದ ಸ್ಪರ್ಶವಾಯಿತು — ನನ್ನ ಎದೆ ಹಾರಲಾರಂಭಿಸಿತು— ಮರುಕ್ಷಣವೆ

ಎಲ್ಲಕ್ಕಿಂತ ಆಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !

೫ ಆಣೆಗೆ ೧೦ ಬ್ಲೇಡು !

ಸಕೀನೆಯು ಎಚ್ಚರು ತಪ್ಪಿ ನನ್ನ ಮೈಮೇಲೆ ಬಿದ್ದಳು— ನಾವು ಜಗತ್ತನ್ನು ಮರೆತೆವು— ಭಯ್ಯಾನನ್ನೂ ಮರೆತೆವು— ಆ ಕಾಳ ರಾತ್ರಿ ಒಮ್ಮೆ ಮುಗಿಯಿತು.—

ಹೊಸ ದಿನದೊಂದಿಗೆ ಅಪರಾಧದ ಅರಿವೂ ಹುಟ್ಟಿತ — ಆ ಇಡಿ ದಿನ ಬಳಲಿ ಬಳಲಿ ತೊಳಲಾಡಿದೆ— ಸಂಜೆಗೆ ಭಯ್ಯಾನ ಮನೆಯ ಒಬ್ಬ ಆಳು ಮನುಷ್ಯ, ಸಕೀನೆಯು ವಿಷಕುಡಿದು ಚಿತ್ಯವಸ್ಥಳಾಗಿ ಬಿದ್ದಿರುವಳೆಂದು ಗಾಬರಿ ಗಾಬರಿಯಾಗಿ ಹೇಳುತ್ತ ಬಂದ— ನಾನು ಗಡಿಬಿಡಿಯಿಂದ ಹೋದೆ— ಎಲ್ಲ ಮಾನವಯತ್ನಗಳೂ ವ್ಯರ್ಥವಾಗಿದ್ದುವು— ಸಕೀನೆಯು ಅತ್ಯಂತ ಪ್ರಖರವಾದ ನಿಷವನ್ನು ಕುಡಿದಿದ್ದಳು— ನಾನು ಹತ್ತಿರ ಹೋದಕೂಡಲೆ ಆಕೆ ಬಿನ್ನಳಾಗಿ ನಕ್ಕು ನುಡಿದಳು: "ಇದರ ಹೊರತು ಬೇರೆ ಉಪಾಯವಿರಲಿಲ್ಲ— ನಾನು ಹೋದ ಬಳಿಕ ಅವರಿಗೆ ಎಲ್ಲವನ್ನೂ ಹೇಳಿಬಿಡಿರಿ. ಅವರು ನಮ್ಮನ್ನು ಕ್ಷಮಿಸುವರು—ಅವರಿಗೆ ಅಂತರಾಯ ತರಬೇಡಿರಿ—ಛೋಟಿಮನ್ನು ಸಲುಹಿರಿ"—ಅದೆ ರಾತ್ರಿ ಭಯ್ಯಾನ ಸಂಸಾರ ಮಣ್ಣುಗೂಡಿತು—ನನ್ನ ಅಪರಾಧವನ್ನು ನಾನು ಬಚ್ಚಿಟ್ಟೆ—ಸಕೀನೆಯು ವಿಷ ತೆಗೆದುಕೊಂಡಳೆಂಬ ಮಾತನ್ನು ಮರೆ ಮಾಡಿಟ್ಟೆ—'ಸಕೀನೆಯು ಎರಡು ದಿನ ಹಾಸಿಗೆ ಹಿಡಿದು ತೀರಿದಳು—ಡಾಕ್ಟರರಿಗೆ ಆಕೆಯ ಬೇನೆ ತಿಳಿಯಲಿಲ್ಲ' ಎಂದು ಹೇಳಿದೆ— ಎಂಥ ನೇರವಾದ ಮಾತು— ಎಷ್ಟು ನೇರವಾಗಿ ನಾನು ಹೇಳಿಬಿಟ್ಟೆ— ಆತನನ್ನು ಕಣ್ಣುಗೊಟ್ಟು ನೋಡಲಿಕ್ಕೆ ನನಗೆ ಸಾಚಿಕೆಯಾಯಿತು— ಆತನ ಬಾಯಿಂದ "ಯಾ ಖುದಾ!" ಇಷ್ಟೇ ಶಬ್ದ— ಶಬ್ದವೆಲ್ಲಿಯವಳ— ಗಾಯಗೊಂಡು ಮರುಗುವ ಪ್ರಾಣಿಯ ಆರ್ತಹುಂಕಾರವೆ ಅದು!—ಅಂದಿನಿಂದ ಭಯ್ಯಾ ಎಂದೂ ಬಾಯಿ ತೆರೆದು ಮಾತನಾಡಲಿಲ್ಲ—ಆತನ ವೃತ್ತಿ ಒಂದು ಹಸುವಿನಂತಾಯಿತು— 'ಛೋಟಿ'ಯನ್ನು ನಾನೇ ಸಾಕಿ ಸಲಹಿದೆ— ಆಕೆ ದೊಡ್ಡವಳಾದ ಮೇಲೆ ××ದ ವಿಚಾರ್‌ಸಾಹೇಬರೊಂದಿಗೆ ಮದುವೆ ಮಾಡಿಕೊಟ್ಟೆ—ಭಯ್ಯಾನ ಪ್ರತಿಯೊಂದು ಮಾತನ್ನೂ ನಡೆಯಿಸಲಿಕ್ಕೆ ನಾನು ಸಿದ್ಧನಿದ್ದೆ—ಆದರೆ ಆತನು ನನ್ನನ್ನು ಯಾವ ಮಾತಿಗಾಗಿಯೂ ಬಾಯ್ದೆರೆದು ಕೇಳಲಿಲ್ಲ—ಎಂದೋ ಒಮ್ಮೆ ನೀನು ನನಗೆ ಬೀನ್ ಸುಡಿಸಲಿಕ್ಕೆ ಹೇಳುತ್ತಿದ್ದ—ಇಷ್ಟೇ ಆತನ ಹೆಚ್ಚಿನ ಬೇಡಿಕೆ ನಾನು ಬಿನ್ ಕೈಯಲ್ಲಿ ತೆಗೆದುಕೊಂಡ ಕೂಡಲೆ ಸಕೀನೆಯು ಬಂದು ಕಿವಿಯಲ್ಲಿ ಗೊಣಗುಡುತ್ತಿದ್ದಂತಾಗುತ್ತಿತ್ತು: "ಇದೇ ಸಮಯ; ಹೇಳಿ ಬಿಡಿರಿ ಎಲ್ಲವನ್ನೂ!" ಎಂದು— ಮೊದಮೊದಲು ಇದೆಲ್ಲ ಭಾಸವೆಂದೆನಿಸಿತು—ಬರುಬರುತ್ತ ಸ್ಪಷ್ಟವಾಗಿ ಕೇಳಬರತೊಡಗಿತು—ಎಷ್ಟೋ ಸಲ ಶಬ್ದಗಳು ಹೊರಬೀಳಲೆಸಗುತ್ತಿದ್ದುವು—ನಾನೇ ಪ್ರಯಾಸದಿಂದ ತಡೆದುನಿಲ್ಲಿಸುತ್ತಿದ್ದೆ— ಮೈನೂರು ಬಂಗ್ಲೆಯಲ್ಲಿ ಅಂದು ಆಕೆಯ ಕಿರಕಿರಿಗೆ ಪ್ರಾರಂಭವಾದಕೂಡಲೆ, ನಾನು ಅದನ್ನು ಬೀನಿನ ಸ್ವರಗಳಲ್ಲಿ ಅಡಗಿಸಿದೆ— ಇತ್ತೀಚೆಗೆ ಭಯ್ಯಾನ ಪ್ರಕೃತಿ ಅತಿ ಸೂಕ್ಷ್ಮವಾಗಿತ್ತು—ಆ ದಿನ ಒಮ್ಮಿಂದೊಮ್ಮೆಲೆ ಕೆಟ್ಟುಹೋಯಿತು—ಇನ್ನು ತಾನು ಉಳಿಯುವದಿಲ್ಲವೆಂಬುದು ಅತನಿಗೆ ತಿಳಿಯಿತು—ಔಷಧ ತೆಗೆದುಕೊಳ್ಳುವುದನ್ನು ಬಿಟ್ಟು ಬಿಟ್ಟನು—ಎಲ್ಲರಿಗೂ ಹೊರಗೆ ಹೋಗಲಿಕ್ಕೆ ಹೇಳಿ ನಾವಿಬ್ಬರೇ ಉಳಿದಾಗ ಅತನೆಂದನು: "ಹೆದರಬೇಡ, ನನಗೆ ಎಲ್ಲವೂ ತಿಳಿದಿದೆ. ಸೇವಾಳವಿಂದ ಬಂದ ದಿನ ರಾತ್ರಿಯಲ್ಲಿಯೆ ಆಕೆ ಎಲ್ಲವನ್ನೂ ಹೇಳಿದಳು—ಅದು ನಿನ್ನ ತಪ್ಪು ಅಲ್ಲ; ಆಕೆಯ ತಪ್ಪೂ ಅಲ್ಲ!—ದೈವವೆ ಎಲ್ಲವನ್ನೂ ಒದಗಿಸಿತು" —'ನಾನು ಸ್ತಂಭಿತನಾದೆ'— 'ನಾನು ಹೇಡಿ. ಮೂವತ್ತೈದು ವರ್ಷ ಎಲ್ಲವನ್ನೂ ಮನಸ್ಸಿನಲ್ಲಿಯೆ ಇಟ್ಟುಕೊಂಡು ಅನಂತಯಾತನೆಗಳನ್ನನುಭವಿಸಿದೆ. ಇನ್ನು ಹೇಳಿರಿ, ಮಾಸ್ತರಜಿ, ಭಯ್ಯಾ ಧೈರ್ಯದವನು— ಮೂವತ್ತೈದು ವರ್ಷ ಎಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಅತನೇಕೆ ಅನಂತಯಾತನೆಗಳನ್ನನುಭವಿಸಿದನು? ಈಗ ಹೇಳಿರಿ, ಮಾಸ್ತರಸಾಹೇಬ್! ಭಯ್ಯಾ ಸರಲಸ್ವಭಾವದವನಲ್ಲವೆ? ಅತನು ನನ್ನನ್ನೇಕೆ—ಗುಂಡಿಹಾಕಿ ಕೊಲ್ಲಲಿಲ್ಲ? ನನ್ನ ಎದೆಗೆ ಚೂರಿಯನ್ನೇಕೆ ಹಾಕಲಿಲ್ಲ? ಸಕೀನೆಯಾದರೂ ನನ್ನನ್ನೇಕೆ ಮೋಸಗೊಳಿಸಬೇಕು? ಪೊದಲನೆಯ ದಿನವೆ ತಾನೇ ಎಲ್ಲವನ್ನೂ ಹೇಳಿ, ನನ್ನ ಬಾಯಿಂದ ನುಡಿಸುಪ್ಪರಲ್ಲಿ ಏನು ಪ್ರಯೋಜನವಿತ್ತು?— ಆಕೆಯಾದರೂ ಇಷ್ಟೇಕೆ ನನ್ನ ಸತ್ತ್ವಪರೀಕ್ಷೆ ಮಾಡಬೇಕು?'— ಆವೇಗದ ಭರದಲ್ಲಿ ಅವರ ಗಂಟಲು ಬಿಗಿದು ದನಿ ಗೊಗ್ಗರಾಗಿ ಹೋಗಿತ್ತು—ಅವರು ಸೋತುಹೋಗಿದ್ದರು. ಎಷ್ಟೋ ಹೊತ್ತಿನವರೆಗೆ ಕಣ್ಣುಮುಚ್ಚಿಕೊಂಡು ಬಿದ್ದುಕೊಂಡಿದ್ದರು— ನಾನು ಕಾಲು ಸಪ್ಪಳ ಮಾಡದೆ ಹೊರಗೆ ಹೋದೆ.

೧೫ನೆಯ ಜನವರಿ, ನ್ಯಾಶನಲ್ ಹಿಂದೂ ಹೋಟೆಲ್, ಬೊಂಬಾಯಿ:—

ನನ್ನ ಆಶ್ರಯದಾತರಾದ ಮಹಾರಾಜರು ತೀರಿ ಒಂದು ತಿಂಗಳಾಯಿತು. 'ಭಯ್ಯಾ' 'ಸಕೀನಾ' ಅವರಿಗೆ ಛೋಟಿಯಾಗಿದ್ದಿರಬಹುದೆ? ಅವರ ಪ್ರಶ್ನೆಯ ಉತ್ತರಗಳು ದೊರೆತಿರಬಹುದೆ?

'ನವಚೇತನ'

ಉತ್ತರಕನ್ನಡ ಜಿಲ್ಲೆಯ ಶ್ರೇಷ್ಠ ಮಾಸಪತ್ರಿಕೆ

ಪಂಡಿತ ತಾರಾನಾಥರ ಪ್ರತಿಭಾವಂತ ಲೇಖನಗಳು, ಶ್ರೇಷ್ಠ ಕತೆ-ಕವಿತೆಗಳು, ಸಾಮಾಜಿಕ ಪ್ರಬಂಧಗಳು, ಮಾಸಭವಿಷ್ಯ ಇತ್ಯಾದಿಗಳಿಗಾಗಿ 'ನವಚೇತನ'ವನ್ನು ತರಿಸಿಕೊಳ್ಳಿರಿ. ವಾರ್ಷಿಕಚಂದಾ ೧-೮-೦ ಅಂಚೆಖರ್ಚು ಸೇರಿ.

ಸಂಪಾದಕರು— **ರಾ. ವೆ. ಪಾಲಗಳ್ಳಿ** 'ನವಚೇತನ ಮಾಸಪತ್ರಿಕೆ' **ಶಿರಸಿ.**

ಹೋಮಿಯೋಪಥಿ (ವ್ಯಾಧಿಸಾಮ್ಯ ಚಿಕಿತ್ಸೆ)

ಡಾ. ಎಚ್. ಪಿ. ಕುಲಕರ್ಣಿ ಎಂ. ಬಿ. ಬಿ. ಎಸ್. ಅಥಣಿ

"The physician's high and ONLY mission is to restore the SICK to health, to CURE as it is termed."

—Samuel Hahnmann: organon of Medicine.

★

ಆರ್ಯವೈದ್ಯರೆ ಇರಲಿ, ಆಲೊಪಥಿ ಡಾಕ್ಟರರಿರಲಿ, ಹೋಮಿಯೊಪಥಿ ಡಾಕ್ಟರರಿರಲಿ, ಕಣ್ಣಿಗೆ ಬಿದ್ದ ಚಿಕಿತ್ಸಾಪಂಡಿತರಿಂದ ಔಷಧಿ ಕೊಡಿಸುವವರೆ ನಮ್ಮಲ್ಲಿ ಬಹಳ ಜನ ಇದ್ದಾರೆ. 'ಅವರವರು ಕೊಡುವ ಔಷಧಿಗಳ ರೀತಿಗಳೇನು? ಗುಣಧರ್ಮಗಳೇನು?' ಎಂಬುದನ್ನು ಅರಿತವರು ಇಲ್ಲವೇ ಇಲ್ಲವೆಂದರೂ ಸಲ್ಲುವುದು. ಹೀಗಿರುವ ಮನುಷ್ಯಸಮೂಹ ಸಮಾಜವೆನಿಸಬಲ್ಲದೆ?

★

೫೦ದಿನ ಸಂಚಿಕೆಯಲ್ಲಿ 'ಆಯೋವಾ' ನ್ಯಾಯಸಭೆಯ ಮುಂದೆ ನಡೆದ ವ್ಯಾಜ್ಯದ ವಿವರವನ್ನು ಕೊಡುತ್ತೇವೆಂದು ಹೇಳಿದ್ದೆವು. ಆದರೆ ಅದು ಸಾಮಾನ್ಯವಾಚಕರಿಗೆ ಅಷ್ಟೊಂದು ಮನೋರಂಜಕವೂ ಬೋಧಪ್ರದವೂ ಆಗಲಿಕ್ಕಿಲ್ಲವೆಂಬ ಕಂಕೆಯಿಂದ, ಅದನ್ನು ವಿಸ್ತರಿಸದೆ ಸಾರಾಂಶದಲ್ಲಿಯೇ ಬರೆದು, ಪ್ರಮುಖವಾದ ಕೆಲವು ವಿಷಯಗಳನ್ನು ಜರ್ಚಿಸಬೇಕೆಂದಿರುವೆವು. ಆ ನ್ಯಾಯಸಭೆಯ ತೀರ್ಪು ಹೋಮಿಯೋಪಥಿ ಡಾಕ್ಟರರಂತೆಯೇ ಆಯಿತು. ಅವರು ಹೇಳಿದ್ದು ಹೀಗೆ: "ಔಷಧಶಾಸ್ತ್ರದ ಅಂತಿಮೋದ್ದೇಶವು ರೋಗಿಯ ರೋಗವನ್ನು ಪರಿಹಾರಮಾಡುವದಿದ್ದು, ಆ ಕಾರ್ಯವು ಯಾರಿಂದಲೇ ಆಗಲಿ, ಯಾವ ಕಾಲದಲ್ಲಿಯೇ ಆಗಲಿ, ನಾವು ಅದನ್ನು ಮನ್ನಿಸಲೇ ಬೇಕು!" ಇದೀಗ ಸರಿಯಾದ ತೀರ್ಪು; ವಿಶಾಲವಾದ ಧರ್ಮದ ಕಟ್ಟಳೆಗೆ ಅನುಸರಿಸಿ ಕೊಟ್ಟ ತೀರ್ಪು. ಜಗತ್ತಿನ ಬಹುಭಾಗದ ಜನರ ಅದರಣೆಗೆ ಪಾತ್ರವಾದ ಈ ನ್ಯಾಯಾಸನದ ಮುಂದೆ, ತನ್ನ ವಿಜಯಪತಾಕೆಯನ್ನು ಎತ್ತಿಹಿಡಿದ ಈ ಶಾಸ್ತ್ರದ ಮಾಹಾತ್ಮ್ಯ ಮತ್ತು ಅದರ ಉಪಯುಕ್ತತೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಉಚಿತವಾದದ್ದೇ ಸರಿ.

ಈಗ ನಮಗೆ ಔಷಧಕೊಡುವ M.B.B.S., L.C.P.S, M.D. ತತ್ಸಮ ಪದವಿಗಳನ್ನು ಪರಮೇಶದಿಂದ ತಂದವರು ಹಲವು ಜನರಿರುವರು. ಇವರೆಲ್ಲರಿಗೂ ಸಾಧಾರಣವಾಗಿ 'Allopaths' ಎನ್ನುವುದುಂಟು. 'Allopathy' ಎಂಬ ಈ ಶಬ್ದದ ಅರ್ಥವು 'ರೋಗಕಾರಣಕ್ಕೆ ವಿರೋಧಸ್ಥಿತಿಯನ್ನುಂಟುಮಾಡುವ ಚಿಕಿತ್ಸಾಕ್ರಮ' ಎಂದಿದೆ.

ಬೇನೆಯನ್ನು ಪರೀಕ್ಷಿಸಿ, ಅದಕ್ಕೆ ವಿರುದ್ಧಗುಣದ ಔಷಧವನ್ನು ಕೊಟ್ಟು, ಅದಕ್ಕೆ ಟೊಣ್ಣೆಯ ಪೆಟ್ಟನ್ನು ಹಾಕಿದಂತೆ ಅವರು ಮಾಡುವರು. ಅದು ಸಾಧ್ಯವಾಗದಿದ್ದರೆ, ಶಮನಕರ (Sedatives) ಔಷಧದಿಂದ ಉಪಜರಿಸಿ, ಬೇನೆಯು ಹೆಚ್ಚಾಗದಂತೆ ಪ್ರಯತ್ನಪಡುವರು. ಇಷ್ಟೆಲ್ಲಕ್ಕೂ ಬೇನೆಯು ಹಣಿಯದಿದ್ದರೆ, ಕೊನೆಗೆ ಚಾಕು, ಕತ್ತರಿ (Surgery)ಗಳ ಸಹಾಯದಿಂದ ಅಥವಾ "ಕ್ಷ" ಕಿರಣದ ಪ್ರಭಾವದಿಂದ (x ray Therapy) ಅದನ್ನು ನಿರ್ಮೂಲಮಾಡಲು ಉದ್ಯುಕ್ತರಾಗುವರು.

ಹೀಗೆ ಚಿಕಿತ್ಸೆಯನ್ನು ಮೇಲಿಂದಮೇಲೆ ಬಡಲುಮಾಡುತ್ತಿರುವುದನ್ನು ನೋಡಿದವರಿಗೆ 'ಇದಕ್ಕೆ ಒಂದು ಗಟ್ಟಿಯಾದ ತಳಹದಿಯು ಇದೆಯೇ?' ಎಂಬ ಪ್ರಬಲವಾದ ಶಂಕೆಯು ಬಾರದೆ ಹೋಗದು; ಅದೂ ಅಲ್ಲದೆ, ಎಲ್ಲ ಬಗೆಯ ಉಪಚಾರಗಳನ್ನು ಹೊಂದಿದರೂ ಕೆಲವು ರೋಗಿಗಳು ಹಾಗೆಯೆ ಒಳಲುತ್ತಿರುವುದನ್ನು ನಾವು ನೋಡುವುದಿಲ್ಲವೆ? ಇದಕ್ಕೆ ಕಾರಣವೇನು? ಮನುಷ್ಯನ ದೈವವೋ, ಶಾಸ್ತ್ರದ ಅಪೂರ್ಣತೆಯೋ? ಹೀಗೆಯೆ ಅನೇಕ ಸಂಶಯಗಳೆದ್ದು, ಹಲವು ಪ್ರಶ್ನೆಗಳು ಸಾಧಕರ ಎದುರಿಗೆ ಬಂದು ನಿಲ್ಲುವವು.

ಇವೆಲ್ಲವುಗಳನ್ನೂ ತನ್ನ ಚಾಣಾಕ್ಷ ಬುದ್ಧಿಗೆ ತಕ್ಕಂತೆ ವಿಚಾರಿಸಿ, Allopathy ಶಾಸ್ತ್ರದ ಕುಂದು-ಕೊರತೆಗಳನ್ನು ಕಂಡು ಹಿಡಿದು, ಮಾನವನ ವ್ಯಾಧಿ-ವಿಡ್ಡೂರಗಳನ್ನು ಹೋಗಲಾಡಿಸುವ ಯೋಗ್ಯ ಪ್ರಾಣಿಯನ್ನು ಕಂಡುಹಿಡಿದುಬೇಕೆಂಬ ಮಹದಾಶೆಯಿಂದ, ಜಗತ್ತಿನ ಪ್ರಾರಂಭದಿಂದ ೧೯ನೆಯ ಶತಮಾನದ ಅರ್ಧದವರೆಗೂ ಬರೆದ ಎಲ್ಲ

ಔಷಧಶಾಸ್ತ್ರಗಳನ್ನೂ, ಅವಕ್ಕೆ ಸಂಬಂಧಿಸಿದ ಬೇರೆ ಶಾಸ್ತ್ರಗಳನ್ನೂ ಅಭ್ಯಾಸಮಾಡಿ, ಅವನ್ನೆಲ್ಲ ಪರಿಶೀಲನೆ ಮಾಡಿ 'ಹೋಮಿಯೋಪಥಿ' ಎಂಬ ಹೊಸ ಶಾಸ್ತ್ರವನ್ನು "ಹೆನ್‌ಮನ್" ಎಂಬ ಜರ್ಮನ್ ಡಾಕ್ಟರನು ಕಂಡುಹಿಡಿದನು.

ಹೆನ್‌ಮನ್ನನು ತನ್ನ ಶಾಸ್ತ್ರಕ್ಕೆ, ಗ್ರೀಸ್ ದೇಶದ ಮಹದ್ವಿಖ್ಯಾತ ಔಷಧಶಾಸ್ತ್ರಜ್ಞನಾದ "ಹಿಪ್ಪೋಕ್ರಿಟ್ಸ್"ನ ಒಂದು ಸೂತ್ರವನ್ನು ಆಧಾರವಾಗಿ ಹಿಡಿದುಕೊಂಡು, ಸ್ವಂತದ ಶ್ರಮದಿಂದ ಅದನ್ನು ಬೆಳೆಯಿಸಿ, ಜಗತ್ತಿಗೆ ಉಪಯೋಗವಾಗುವಂತೆ ಒರೆದಿದ್ದಾನೆ. "ಹಿಪ್ಪೋಕ್ರಿಟ್ಸ್"ನ ಸೂತ್ರವೆಂದರೆ:—"ರೋಗಗಳು ಅವಕ್ಕೆ ಸಮಾನ ಧರ್ಮದ ಔಷಧಗಳಿಂದಲೇ ಗುಣಹೊಂದುತ್ತವೆ; Likes are cured by likes, similia, similibus curanter." ಎಂದಿದೆ ಈ ಸೂತ್ರವನ್ನು ಹೆಚ್ಚಾಗಿ ಸ್ಪಷ್ಟೀಕರಿಸದಲ್ಲಿ, ಅದರ ಅರ್ಥವು ಜನಸಾಮಾನ್ಯರಿಗೆ ಚೆನ್ನಾಗಿ ಬೋಧವಾಗಬಹುದು. ನಮ್ಮ ಯಾವ ಔಷಧವು ನಿಶ್ಚಯವಾಗಿ, ಮತ್ತು ನಿರಾತಂಕವಾಗಿ (Safely) ರೋಗಿಯನ್ನು ಗುಣಪಡಿಸುವುದೋ, ಆ ಔಷಧವನ್ನು ನಿರೋಗಿಯಾದ ಮನುಷ್ಯನಿಗೆ ಕೊಟ್ಟರೆ, ಆತನಲ್ಲಿ ಅದು, ಗುಣಪಡಿಸುವ ರೋಗದ ಎಲ್ಲ ಅಥವಾ ಬಹುತರ ಎಲ್ಲ ಲಕ್ಷಣಗಳನ್ನೂ ಉಂಟುಮಾಡುವಂತಹದಿರಬೇಕು. ಅಥವಾ ಯಾವ ರೋಗಕ್ಕೆ ನಾವು ಔಷಧವನ್ನು ಕೊಡಬೇಕೆನ್ನುವೆವೋ, ಆ ಔಷಧವನ್ನು ನಿರೋಗಿ ಮನುಷ್ಯನಿಗೆ ಕೊಟ್ಟರೆ, ಆತನ ಶರೀರದಲ್ಲಿ, ನಾವು ಉಪಚರಿಸಬೇಕೆನ್ನುವ ರೋಗದ ಲಕ್ಷಣಗಳು ಹೊಸತಾಗಿ ಉಂಟಾಗಬೇಕು. ಅಂತಹ ಔಷಧವೇ ಮೇಲಿನ ಸೂತ್ರಕ್ಕೆ ತಕ್ಕದ್ದು. ಈ ಔಷಧಸೂತ್ರಕ್ಕೆ ಹೆನ್‌ಮನ್ನನು **"ಹೋಮಿಯೋಪಥಿ"** ಎಂದಿದ್ದಾನೆ.

ಮೇಲೆ ಹೇಳಿದ "ಹಿಪ್ಪೋಕ್ರಿಟ್ಸ್"ನ ಸೂತ್ರವು ನಮ್ಮ ಆಯುರ್ವೇದ ಶಾಸ್ತ್ರದಲ್ಲಿಯಾದರೂ ಇದೆ. ಆಯುರ್ವೇದ ಶಾಸ್ತ್ರವನ್ನು ಒರೆದ ಮಹರ್ಷಿಗಳೇ "ವ್ಯಾಧಿಸಾಮ್ಯಚಿಕಿತ್ಸಾ" ಎಂಬ ಸೂತ್ರಗಳನ್ನು ಬರೆದಿದ್ದಾರೆ. ೨೦೦೦ ವರ್ಷಕ್ಕಿಂತಲೂ ಪೂರ್ವದಲ್ಲಿ ಅವರು ಈ ಮಾತನ್ನು ಕಂಡುಹಿಡಿದಿದ್ದಾರೆ.

Allopathy ಡಾಕ್ಟರೆಲ್ಲರೂ ಕೊಮಿಯೋಪಥಿಯ ಸಣ್ಣ ಗುಳಿಗೆಗಳನ್ನು ಬಹಳವಾಗಿ ಹಳಿಯುವರು. ಇಷ್ಟು ಸಣ್ಣ ಗುಳಿಗೆಗಳು ಮಹತ್ತರವಾದ ವ್ಯಾಧಿಗಳನ್ನು ಹೇಗೆ ತಾನೇ ಪರಿಹರಿಸಬಲ್ಲವು? ಎಂಬುದೇ ಅವರ ಪ್ರಶ್ನೆ. Allopathy ಡಾಕ್ಟರರು ಕೊಡುವ ಮಿಶ್ರಣದ ನೀರನ್ನು (Mixtures)ನಾವೆಲ್ಲರೂ ನೋಡಿರುವೆವು. ಅದರಲ್ಲಿ ಎಷ್ಟು ಔಷಧಗಳ ಮಿಶ್ರಣ? ಯಾವ ಔಷಧವು ಯಾವ ವ್ಯಾಧಿಯನ್ನು ವಾಸಿಮಾಡುತ್ತದೆ? ಮತ್ತು ಎಲ್ಲವೂ ಒಂದೆಡೆ ಸೇರಲಾಗಿ ಯಾವ ಪರಿಣಾಮವನ್ನುಂಟುಮಾಡುತ್ತವೆ ಎಂಬುದನ್ನು ಯಾರು ತಾನೇ ಧೈರ್ಯದಿಂದ ಹೇಳಬಲ್ಲರು? ಔಷಧವನ್ನು ಕೊಡುವ ಡಾಕ್ಟರರಿಗೇ ಇದರ ಬಗ್ಗೆ ಸಂಶಯವೆಂದು ನನ್ನ ಸಂಬಿಕ್ಷ್ಮಿಮಿಶ್ರಣವನ್ನು ತಯಾರಿಸುವವನಿಗಂತೂ ಇದರ ಅರಿವು ಇರುವುದೇ ಇಲ್ಲ. ಜ್ವರದಲ್ಲಿ ನಾವೆಲ್ಲರೂ Quinine Mixture (ಕ್ವಿನೀನ್ ಮಿಕ್ಶ್ಚರ್) ಅನ್ನು ಕುಡಿಯುತ್ತೇವೆ. ಜ್ವರವು ಕಡಿಮೆಯಾಗುವ ದರಲ್ಲಿಯೆ ಪಜೆನಕ್ಕಿಯೆಯು ಮುಂದವಾಗುತ್ತದೆ; ಕಿವಿಗಳು ಮಂದವಾಗುತ್ತವೆ. ಈ ಹೊಸ ವಿಕಾರಗಳಿಗೆ ಕಾರಣವೇನೆಂದು ಕೇಳಿದರೆ, ಡಾಕ್ಟರರು ನೇರವಾಗಿ ಉತ್ತರ ಕೊಡದೆ, ಅದನ್ನು ತಪ್ಪಿಸಲು ಹವಣಿಸುವರು. ಹೆನ್‌ಮನ್ನನ ಕಾಲದಲ್ಲಿ, ಈ ಮಿಶ್ರಣದ ಪಟ್ಟಿಯಲ್ಲಿ, ೨೦–೩೦ ಬೇರೆ ಬೇರೆ ಔಷಧ– ಒಂದಕ್ಕೊಂದು ವಿರುದ್ಧ ಕಾರ್ಯನಮಾಡುವಂತಹವು— ಇರುತ್ತಿದ್ದುವು. ಈಗ ನಾವು ಉಪಯೋಗಿಸುವ Eastrn Syrup (ಈಸ್ಟರ್ನ್ ಸೈರಪ್) ಎಂಬ ಹೆಸರಿನ ಶಕ್ತಿವರ್ಧಕ ಔಷಧದಲ್ಲಿ Quinine (ಕ್ವಿನೀನ್), ಸೋಮಲ (Arsenic)ಮತ್ತು ಲೋಹ (Iron) ಇವುಗಳ ಮಿಶ್ರಣವಿರುವುದು. ಈ ಮಿಶ್ರಣದಲ್ಲಿ ಇರುವ ಔಷಧಗಳು ಮನುಷ್ಯನ ಶರೀರದ ಮೇಲೆ ಒಂದಕ್ಕೊಂದು ವಿರುದ್ಧವಾದ ಕಾರ್ಯವನ್ನು ಮಾಡುವವು. ಇಂತಹ ಮಿಶ್ರಣದಿಂದ ಶಕ್ತಿಯು ಹೇಗೆ ವರ್ಧಿಸುವುದೆಂಬುದು **'ಹೋಮಿಯೋಪಥಿ'**ಗೆ ಆಶ್ಚರ್ಯವನ್ನುಂಟುಮಾಡುತ್ತದೆ.

ಹೆನ್‌ಮನ್ನನ ಕಾಲಕ್ಕೆ ರೋಗಚಿಕಿತ್ಸಾಪದ್ಧತಿಯು ತೀರ ಅಮಾನುಷಪ್ರಕಾರದುದಿತ್ತು. ಮೊದಮೊದಲು ಆ ಶಾಸ್ತ್ರದ ಪ್ರಕಾರವೆ ಔಷಧಕೊಡುತ್ತಿದ್ದುದನ್ನು ಆತ ಬರುಬರುತ್ತ ಬಿಟ್ಟು ಬಿಟ್ಟನು. ಅವನ ಹೊಸ ಶಾಸ್ತ್ರದ ಪ್ರಕಾರ, ಯಾವ ಬೇನೆಗಾದರೂ ಒಂದಾವೃತ್ತಿಗೆ ಒಂದೇ ಔಷಧವನ್ನು ಕೊಡುವುದು (The application of a single medicine at one time, in minimum doses) ಮತ್ತು ಅದನ್ನು ತೀರ ಸಣ್ಣ ಪ್ರಮಾಣದಲ್ಲಿ, ಅಣು-ರೇಣು ರೂಪದಲ್ಲಿ— Infinitessimal doses— ಕೊಡುವುದೇ ಶಾಸ್ತ್ರಕ್ಕೆ ಸಮ್ಮತವಾದದ್ದು. ಒಂದು ಔನ್ಸು ಔಷಧವನ್ನೆಣ್ಣೆಯಿಂದ ಹೊಟ್ಟೆಯಾಡಿಸಿದ್ದರೆ ೨ ಅಥವಾ ೪ ಔನ್ಸು ತೆಗೆದುಕೊಳ್ಳಬೇಕು. ಅದರಿಂದಲೂ ಭೇದಿಯಾಗದಿದ್ದರೆ ನಿತ್ಯವೂ ತೆಗೆದುಕೊಂಡು ಅದರ ಚಟವನ್ನು ಹಚ್ಚಿಕೊಳ್ಳಬೇಕು. ಹೆನ್‌ಮನ್ನನ ಶಾಸ್ತ್ರದ ಪ್ರಕಾರ ಔಷಧವನ್ನು ಸೇವಿಸಿದರೆ, ವ್ಯಾಧಿಯು ಬೇಗನೆ ಪರಿಹಾರವಾಗಿ ಮನುಷ್ಯನು ನಿರೋಗಿಯಾಗುವನು. ಇದನ್ನೆಲ್ಲ ಕಂಡ Allopathy ಡಾಕ್ಟರರು ತಮ್ಮ ಮಿಶ್ರಣದ್ರವ (Mixtures)ಗಳನ್ನು ಬಿಟ್ಟು ಇಂಜೆಕ್ಶನ್ನಿನ (Injection and vaccines) ಹೊಸ ವಿಚಾರವನ್ನು ಶೋಧ ಮಾಡಿದರು.

ಈಗ ಅವರು ಬಹುಕಾಲದ ರೋಗಗಳಿಗೆ (chronic diseases) ಇಂಜೆಕ್ಶನಿನ ಉಪಯೋಗವನ್ನೇ ಹೆಚ್ಚಾಗಿ ಮಾಡುತ್ತಲಿದ್ದಾರೆ. ಅರಣ್ಯದಲ್ಲಿ ಪಾರಿಯನ್ನು ಕಳೆದುಕೊಂಡವರಂತೆ ಅವರು, ತಮ್ಮ ಹಳೆಯ ಪದ್ಧತಿಯಲ್ಲಯೇ ಸುಧಾರಣೆಯನ್ನು ನಡೆಯಿಸಿರುವರೇ

ಹೊರತು, ಉದಯೋನ್ಮುಖವಾದ ಈ ಹೊಸ ಶಾಸ್ತ್ರವನ್ನು ಅಭ್ಯಸಿಸುವ ಪ್ರಯತ್ನವನ್ನು ನಡೆಯಿಸಲ್ಲ. ಈ ಜನರು ಹಾಗೆಯೆ ಹಟ ಹಿಡಿದು ಹೆನ್‌ಮನ್ನರನ್ನು ಸೋಲಿಸಲು ಬಂದರು ಅಮೇರಿಕೆಯ **ಡಾ. ಹೆರಿಂಗ್** ಅವರ ಚರಿತ್ರೆಯನ್ನು ಓದಿದಲ್ಲಿ, ಅಲೋಪಥಿ (Allopathy) ಡಾಕ್ಟರರಿಗೆ ತಮ್ಮ ಉತ್ಕರ್ಷವು ಎಲ್ಲಿದೆಯೆಂಬುದು ಹೊಳೆಯದಿರಲಾರದು.

ಪೆನ್‌ಮನ್ನನ ಶಾಸ್ತ್ರದ ಬೆಳೆವಣಿಗೆಯನ್ನೂ ತೀವ್ರ ಗುಣ ಕೊಡುವ ಅದರ ಪ್ರಭಾವವನ್ನೂ ಕಂಡು, ಅಸೂಯೆಪಟ್ಟ ಅನೇಕ ಜನ ಹಳೆಯ ಡಾಕ್ಟರರು, ಈ ಹೊಸ ಚಿಕಿತ್ಸಾಶಾಸ್ತ್ರವು ಬೆಳೆಯಬಾರದೆಂದು ಶಕ್ತ್ಯವಿದ್ದಷ್ಟು ಪ್ರಯತ್ನಪಟ್ಟರು. "ಹೋಮಿಯೋಪಥಿಯು ಔಷಧಶಾಸ್ತ್ರವಲ್ಲ; ಅದೊಂದು ಮೋಸ! ಅದನ್ನು ತೆಗೆದುಕೊಳ್ಳುವುದೆಂದರೆ ಕೇವಲ ಆತ್ಮವಂಚನೆ" ಇತ್ಯಾದಿ ಇತ್ಯಾದಿ ಮುದ್ರಣಾಲಯದಿಂದಲೂ ರುಗ್ಣಾಲಯದಿಂದಲೂ ಸಾರಹತ್ತಿದರು. "ಹೋಮಿಯೋಪಥಿಯು 'ಫೇತ್ ಕ್ಯೂರ್' (Faith cure)' ಇದ್ದು, ವಿಶ್ವಾಸದಿಂದ ಜನರು ಗುಣ ಹೊಂದುತ್ತಾರೆಯೇ ಹೊರತು ಆ ಚಿಕ್ಕ ಗುಳಿಗೆಗಳಿಂದೆನೂ ಅಲ್ಲ, ಭಾವನೆಗೆ ತಕ್ಕ ಪರಿಣಾಮ. (Natural Law of cure) ಭೂತ-ಪಿಶಾಚಿಗಳನ್ನು ಬಿಡಿಸುವವರ ಹಾಗೆ ಈ ಹೋಮಿಯೋಪಥಿ ಉಪಚಾರ ಮಾಡುವವರೂ ತಕ್ಕರು" ಎಂದು ಮೊದಲಾಗಿ ವಾದಿಸಿದರು. ಆದರೆ ಈ ಹೋಮಿಯೋಪಥಿ ಚಿಕಿತ್ಸೆಯಿಂದ ದನ-ಕರುಗಳೂ, ಬೆಕ್ಕು-ನಾಯಿಗಳೂ ಗುಣ ಹೊಂದಿದುದನ್ನು ಪಾಶ್ಚಾತ್ಯ ದೇಶದಲ್ಲಿಯ ಹಲವು ಉದಾಹರಣೆಗಳಿಂದ ನಾವು ತಿಳಿದುಕೊಳ್ಳಬಹುದು. ಈ ಸಂಗತಿಗೆ ಈ ನಿಂದಕರಿಂದ ಸಮಾಧಾನಕರವಾದ ಉತ್ತರವಿನ್ನೂ ಒಂದಿಲ್ಲ. ಪರದೇಶಗಳಲ್ಲಿಯಂತೂ ದನ-ಕರುಗಳ "ಹೋಮಿಯೋಪಥಿ" ಶಾಸ್ತ್ರವು ಭರದಿಂದ ಪಟ್ಟಾಲಾರಂಭಿಸಿದೆ; ಬೆಳೆಯಲಾರಂಭಿಸಿದೆ. ಅದರ ಬಗ್ಗೆ ಹೊಸ ಹೊಸ ಪುಸ್ತಕಗಳು ಬರೆಯಲ್ಪಟ್ಟಿವೆ. ಹೊಸ ಹೊಸ ದವಾಖಾನೆಗಳು ಹೊರಟಿವೆ. ಇದರ ಬಗ್ಗೆ ಮನೋರಂಜಕವಾದ ಸಂಗತಿಗಳನ್ನು ಸಾವಕಾಶವಾಗಿ ಬರೆಯುತ್ತಿರುವೆವು. ಈಗ ಕ್ರಮವಾಗಿ "ಹೋಮಿಯೋಪಥಿ" ಶಾಸ್ತ್ರದ ಮೂಲತತ್ತ್ವಗಳನ್ನು ವಿವರಿಸಿ, ವಾಚಕರನುರಂಜಿಸುವ ವಿಚಾರವಿದೆ. ಸದ್ಯಕ್ಕೆ ಆ ಶಾಸ್ತ್ರದ ಆಧಾರಸ್ತಂಭಗಳಂತಿದ್ದ ಮೂರು ಸೂತ್ರಗಳನ್ನು ಇಲ್ಲಿ ಕೊಡುತ್ತೇವೆ.

'ಹೋಮಿಯೋಪಥಿ'ಯ ಪ್ರಕಾರ ಔಷಧ ಕೊಡಲಿಚ್ಛಿಸುವವರು, ಕೆಳಗಿನ ಈ ಮೂರು ಸೂತ್ರಗಳನ್ನು ಚೆನ್ನಾಗಿ ಅರಿತಿರಬೇಕಾಗಿರಬೇಕು. ಈ ಸೂತ್ರಗಳೇ ಹೋಮಿಯೋಪಥಿಶಾಸ್ತ್ರದ ಮೂಲ ಸಿದ್ಧಾಂತಗಳು. ಇಷ್ಟೇ ಅಲ್ಲ, ಔಷಧವನ್ನು ಕೊಡಲಿಚ್ಛಿಸುವವರು ಬೇರೆ ಕೆಲವು ಮಹತ್ತ್ವದ ಸಂಗತಿಗಳನ್ನೂ ತಿಳಿದುಕೊಳ್ಳಬೇಕು. ಆದರೆ ಅವು ಅಷ್ಟು ಮಹತ್ತ್ವವಾದುವುಗಳಲ್ಲ. ಈ ಸೂತ್ರಕ್ಕೆ ಸರಿ ಹೋಗದ ಔಷಧಗಳು ಹೋಮಿಯೋಪಥಿಗೆ ಸಮ್ಮತವಾದುವುಗಳಲ್ಲ. ಈ ಮೂಲತತ್ತ್ವಗಳನ್ನು ಚೆನ್ನಾಗಿ ಅರಿಗಿಸಿಕೊಳ್ಳದೆ ಔಷಧ ಕೊಡುತ್ತ ಹೋದರೆ, ಶಾಸ್ತ್ರದ ಪ್ರಗತಿಯು ಆಗುವುದಿಲ್ಲ; ಇಷ್ಟೇ ಅಲ್ಲ, ಮೇಲೆ ದಬ್ಬತನವು ಮಾತ್ರ ಪಾಲಿಗೆ ಬರುತ್ತದೆ.

(೧) ರೋಗಗಳು, ಅವಕ್ಕೆ ಸಾಮ್ಯಗುಣದ ಔಷಧ ಕೊಟ್ಟಲ್ಲಿ ತೀವ್ರ ಗುಣವಾಗುತ್ತವೆ. (Similia similibus curanter or likes are cured by likes) ಈ ಸೂತ್ರವೇ ಆಯುರ್ವೇದದಲ್ಲಿಯ "ವ್ಯಾಧಿಸಾಮ್ಯ ಚಿಕಿತ್ಸೆಯು".

(೨) ಅತಿ ಸಣ್ಣ ಪ್ರಮಾಣದಲ್ಲಿ ಔಷಧಗಳನ್ನು ಕೊಡುವುದು. (Minimum doses)

(೩) ಒಂದಾವೃತ್ತಿಗೆ ಒಂದೇ ಔಷಧವನ್ನು ಕೊಡುವುದು. (The application of only one medicine at a time)

ಮೇಲಿನ ಸೂತ್ರಗಳ ಸ್ಪಷ್ಟೀಕರಣವನ್ನು ಮುಂಬರುವ ಲೇಖನಗಳ ಮೂಲಕ "ಜಯಂತಿ"ಯಲ್ಲಿ ಕೊಡುತ್ತ ಹೋಗುವೆವು.

ಈ ಹೊಸ ಶಾಸ್ತ್ರವನ್ನು ಮನಮುಟ್ಟಿ, ಮನಸಾರೆ ಅಭ್ಯಾಸ ಮಾಡುವ ಆಲಸೆಯು ನಮ್ಮ ಭಾರತ ಭೂಮಿಯಲ್ಲಿ ಬೆಳೆಯಲಿ! ಈಗ ತಾನೇ ಧರದಿಂದ ಬೆಳೆಯುತ್ತಲಿದ್ದ ಈ ಶಾಸ್ತ್ರವೈಕ್ಯವು ಜನರ ಉತ್ಸಾಹ-ಪ್ರೋತ್ಸಾಹನೆಗಳಿಂದ ವಿಶಾಲವಾಗಿ, ಸಮೃದ್ಧಿಯಾಗಿ ಬೆಳೆಯಲಿ!! ಆದರ ಫಲಗಳಿಂದ, ವ್ಯಾಧಿ-ಪೀಡಿತರಿಗೆ ತತ್ಕಾಲವು ನವಿಮ್ಮಾ ಒಡದೇಶದ ಬಡಬಗ್ಗರಿಗೆ ಉಪಯೋಗವಾಗಲಿ!! ಇದಿಷ್ಟೇ ಈ ಲೇಖನದ ಉದ್ದೇಶ.

ಜಯಂತಿಯ ಮುಖಾಂತರ ಯಾರಾದರೂ ಈ ವಿಷಯದಲ್ಲಿ ಕೇಳಿದರೆ, ಏನನಾದರೂ ಇವರ ಸಂಶಯಗಳನ್ನು ಶಾಸ್ತ್ರೀಯವಾಗಿ, ಸಪ್ರಮಾಣವಾಗಿ, ಆಧಾರ ಸಹಿತವಾಗಿ ನಿವಾರಿಸಲು ಪ್ರಯತ್ನಪಡುತ್ತೇವೆಯೆಂದು ಇಲ್ಲಿ ಸೂಚಿಸುತ್ತೇವೆ.

ಆಧಾರ ಗ್ರಂಥಗಳು

(1) Chronic disease— Its Cause and Cure
by P. N. Banerjee, B. A.

(2) Miracles of Healing and how they are done
by J. Ellis Barker.

(3) Homeopathy Explained—
by John Henry Clarke M. D.

(4) What is Homeopathy ?
by Dr. Gilbert Charette

ಜುಲೈ ೧೯೪೧
೫-೧೧೬೨

ನಾನು ದೊಡ್ಡಮನುಷ್ಯನಾಗಲು...

ಶ್ರೀ. ಕರ್ನಮಡಕಲ ರಾಧಾಕೃಷ್ಣನ್, ಬೆಂಗಳೂರು

★

ದೊಡ್ಡ ಮನುಷ್ಯರ ವರ್ಗದಲ್ಲಿ ಬಹುಜನರು ಸಂಸ್ಥೆಗಳ ಸಂಚಾಲಕರು; ಇಲ್ಲವೆ ಲೇಖಕರು; ಇಲ್ಲವೆ ಸಂಪಾದಕರು! ಇವರ ಕೀರ್ತಿಯೆ ನಾಡಿನಲ್ಲಿ ನೊಳಗುತ್ತಿರುವುದು; ಎಂದ ಮೇಲೆ ದೊಡ್ಡ ಮನುಷ್ಯನಾಗಬೇಕೆನ್ನುವ ಮಹತ್ತ್ವಾಕಾಂಕ್ಷೆಯಾದ ವಿದ್ಯಾರ್ಥಿ, ಬೇರೆ ದಾರಿಯನ್ನು ಹುಡುಕಬೇಕೇಕೆ?

★

ಶಾಲೆಯಲ್ಲಿ ನಾವೆಲ್ಲ ತರಗತಿಯಲ್ಲಿ ಕುಳಿತಿದ್ದಾಗ ಒಂದು ಪ್ರಶ್ನೆ ಬಂತು: "ನಿಮ್ಮ ಜೀವನದ ಧ್ಯೇಯವೇನು?"

"ಮೋಕ್ಷ, ಆತ್ಮಕ್ಕೆ ಸ್ವಾತಂತ್ರ್ಯ" ಎಂದು ರಾಮಾಶಾಸ್ತ್ರಿಗಳ ಮಗ ತೀನ ಉತ್ತರವಿತ್ತ. ಮೂರ್ತಿ ಮಾತ್ರ "ಭಾರತದ ಸ್ವಾತಂತ್ರ್ಯ" ಎಂದ. ಮರಿ ಏನೋ "ಸುಖವಾಗಿ ಸಂಸಾರ ಮಾಡುವುದು" ಎಂದು ಬಿಟ್ಟ. ಹೀಗೇ ಎಷ್ಟೆಷ್ಟೋ ಉತ್ತರಗಳು ಬಂದುವು....ಕೊನೆಗೆ ನನ್ನ ಸರದಿಯೂ ಬಂದಿತು. "ದೊಡ್ಡ ಮನುಷ್ಯನಾಗಬೇಕು!" ಇದೇ ನಾನು ಬಿಚ್ಚಿಟ್ಟ ಜೀವನದ ಧ್ಯೇಯ.

ಅಂದಿನಿಂದ ಒಗ್ಗುರಿಯ ಬೇಟೆ ಸಾಗುತ್ತಲೇ ಇದೆ; ಇದುವರೆಗೆ ನಾನು ದೊಡ್ಡ ಮನುಷ್ಯನಾದ ಒಗ್ಗೆ ಯಾವ ಸೂಚನೆಗಳೂ ಅಗಿಲ್ಲ. ಇತರರು ನನ್ನನ್ನು ದೊಡ್ಡ ಮನುಷ್ಯನೆಂದು ಹೊಗಳಿಲ್ಲ; ಹಾಗೆ ಹೇಳಿಕೊಳ್ಳಲಿಕ್ಕೆ ನನಗೂ ಧೈರ್ಯವಿದಿಲ್ಲ.

ಪ್ರಪಂಚದಲ್ಲಿ ಅನೇಕರ ಜೀವನದ ಗುಟ್ಟು, ಫಲಿತಾಂಶ, ಗುರಿ ಇವೆಲ್ಲ ಇಷ್ಟೇ: ದೊಡ್ಡ ಮನುಷ್ಯನಾಗಬೇಕೆಂಬ ಹಂಬಲು; ಅದಕ್ಕೆ ಗಾಢಪ್ರಯತ್ನ. ಫಲಿತಾಂಶ ತಿಳಿದೇ ಇದೆಯಲ್ಲ—ಜೀವನದಲ್ಲಿ ಸೋಲು, ಬೇಸರ, .. ಕಡೆಗಂತೂ ಅದೇ ಕೊರಗಿನಲ್ಲಿ ಕೊನೆ! ಈ ಆಸ್ಥೆ ಈಗ ರೆಕ್ಕೆಕಳೆದ ಹಕ್ಕಿಯಂತಾಗಿದೆ. ಅನೇಕರು ಅನೇಕವಿಧಧ ಹಾದಿ ತುಳಿಯುತ್ತಾರೆ. ಆದರೆ ಎಲ್ಲ ದಾರಿಗಳೂ ಸೇರುವುದೊಂದೇ ಎಡೆಯಲ್ಲಿ—ಸುಡುಗಾಡಿನಲ್ಲಿ! ಈ ಮಹಾ ಸಂಪತ್ತಿಗೆ, ಜನ ಏಕೆ ಹಿಡಿಯುತ್ತಾರೋ ನೂರೆಂಟು ಹಾದಿ!

* * * *

ನನ್ನ ನಿರ್ಮಲ ಮನಸ್ಸಿನಲ್ಲಿ ಮೊದಲು ತಲೆ ಹಾಕಿದ್ದು ಸಾಹಿತಿಯಾಗಬೇಕೆಂಬ ದಾರಿ. "ಇದರಿಂದ ನನ್ನ ಹೆಸರು ಅಗಸದ ನಕ್ಷತ್ರಗಳಂತೆ ಮಿನುಗೀತು. ನನ್ನ ಹೆಸರೂ ಮುಂದೆ ಬಂದೀತು. ನಾನೂ ದೊಡ್ಡ ಮನುಷ್ಯನಾದೇನು" ಎನ್ನಿಸಿತು. 'ದೂರದ ಗುಡ್ಡ ನುಣ್ಣಗೆ' ಎಂದಿದೆ ಗಾದೆ. ದುರ್ಯೋಧನ ಮಹಾರಾಯ ನಿಗಾದ ಗತಿಯನ್ನೇ ನಾನೂ ಕಂಡದ್ದು. ದೂರದಲ್ಲಿ ಮನುಕು ಮನುಕಾಗಿ ಅಮೃತತಿಲೆಯ ಭಾವನೆ ಬಂದಿತ್ತು; ಆದರೆ ಅದು ಆಳವಾದ ನೀರಿನ ಕೊಳವೆಂಬುದು ಕೆಳಗೆ ಬಿದ್ದಮೇಲೆ ತಿಳಿಯಿತು—ಶಕುನಿಗೂ ಕೂಡ.

ಸಾಮಾನ್ಯವಾಗಿ ನಾನು ಕಲಿತದ್ದು ಮೂರು ಭಾಷೆ—ಇಂಗ್ಲಿಷ್ ಒಂದು; ಜೊತೆಗೆ ಕನ್ನಡ; ಆದರ 'ಗಿಳಿಯ'ನಂತೆ ತೆಲುಗು. ಇಂಗ್ಲಿಷ್ ಭಾಷೆಯಲ್ಲಿ ಬರೆದು ಹೆಸರುಗಳಿಸಲಿಕ್ಕೆ ತಲೆತುಂಬ ಬಿದ್ದು ಹಳಸಿರುವ ರಾಷ್ಟ್ರೀಯ ಭಾವನೆ ಅಡ್ಡ ಬಂದಿತು. ಇದರಿಂದ ಆ ಯೋಜನೆಯನ್ನು ಮುಂಲೆಗೊತ್ತಬೇಕಾಯಿತು. ನಿಜಕ್ಕೂ ಕಾರಣ ಬೇರೆ ಉಂಟು. ಪೇಪರುಗಳಿಗೆ ಬರೆಯುವಷ್ಟು ಭಾಷೆ ನನಗೆಲ್ಲಿ ಬರಬೇಕು? ಶೈಲಿ ಎಲ್ಲಾದರೂ ಹಾಳಾಗಲಿ; ಶುದ್ಧವಾದ ಭಾಷೆಯಾದರೂ ಬೇಡವೋ?

ಹಾಳೂರಿಗೆ ಉಳಿದವನೇ ಗೌಡ- ಇನ್ನು ನನಗುಳಿದದ್ದು ಕನ್ನಡ. ಆಗ ತಾನೆ ಕನ್ನಡದಲ್ಲಿ ಚಳವಳಿ ಬೇರೆ ನಡೆದಿತ್ತು. ನನ್ನ ದೃಷ್ಟಿ ಆ ಕಡೆಗೇ ಹೊರಳಿತು.

ದೊಡ್ಡವರ ಸಂಘಗಳಿಗೆ ಸೇರಿದರೆಷ್ಟು, ಬಿಟ್ಟರೆಷ್ಟು! ಒರಿವೆಂಬರೆಂದು ಹೇಳಿಕೊಂಡರೆ ಆದದ್ದು ಮಾತ್ರ ಏನು? ನಾವಿದ್ದೆಡೆ ಹುಡುಗರ ಸಂಘವೊಂದಿರಲಿಲ್ಲ. ನಾನು ಮೂರ್ತಿ ಸೇರಿ ಯೋಚಿಸಿದೆವು. ಮೂರ್ತಿ ಒಬ್ಬ ದೊಡ್ಡ ಹುಚ್ಚ. ಸರಿ, ಹನಿಗೆ ಹನಿ ಸೇರಿತು. ಇದಕ್ಕೆ ಮೂರ್ತಿಯ ತಂದೆ. ಆಚಾರ್ಯೂ ಕೂಡ ಒಹಳ ಪ್ರೋತ್ಸಾಹಿಸಿದರು. ಸರಿ ಹಳ್ಳವೊಂದಾಯಿತು. '**ಬಾಲಕನಾಟಕ ಸಂಘ**' ಒಂದನ್ನು ಸ್ಥಾಪಿಸಿದ್ದಾಯಿತು. ಸ್ಥಾಪಿಸಿದ

ದಿನವೇ ನೆರೆದವರಲ್ಲಿ ಒಬ್ಬರಿಂದ ಪ್ರಶ್ನೆ ಬಂತು— "ಇದೇನು ಕರ್ನಾಟಕದ ಬಾಲಸಂಘವೋ ? ಕರ್ನಾಟಕವೇ ಇಲ್ಲದಾಗ ಅದಕ್ಕೆ ಬಾಲ ಎಲ್ಲಿಯದು ? "

ಸಂಘ ಸ್ಥಾಪಿಸಿದರೆ ತೀರಿತೇ ? ತಾಯಿ ಮಕ್ಕಳನ್ನು ಹೆತ್ತು, ಮನೆ ತುಂಬಿಸಿದರೆ ತೀರಿತೇ ತಾಯಿಯ ಕೆಲಸ ? ಕೂಟಸ್ಥಾಪಿಸಿ ಕೆಲಸ-ಕಾರ್ಯ ಮಾಡದಿದ್ದರೆ ಕಾರ್ಯದರ್ಶಿಯೇಕೆ ? ಮೊದಲ ವರ್ಷ ಹುಗುಪಿನಿಂದ ಕಾರ್ಯದರ್ಶಿಯಾದೆ ; ಆದರೆ ಕೆಲಸಕ್ಕೆ ನಿಂತಾಗ ತಿಳಿಯಿತು— 'ಸಂಘಗಳು ಏಕೆ ಸದ್ದಿಲ್ಲದಿರುತ್ತವೆ' ಎಂದು. ಬೆಳಗಾದರೆ ಮೆಂಬರುಗಳ ಹತ್ತಿರ ಹಣವಸೂಲಿಗೆ ದಂಡಯಾತ್ರೆ. ಒಬ್ಬ ಪ್ರಾಣಿಯಾದರೂ ಒಂದೇ ಬಾರಿಗೆ, ಒಂದೇ ದಿನವೇ 'ಮರುದಿನ ಮತ್ತೆ ಬಾ ಎನ್ನದೆ' ಕೊಟ್ಟವನುಂಟೆ ? ಎಲ್ಲರೂ ಸ್ನೇಹಿತರೇ ! ಆದರೆ ಅವರೇ ಹೀಗೆ ಮಾತಾಡುವುದು. ಶನಿವಾರ ಬಂದಿತೆಂದರೆ ಕಾರ್ಯಕಾರಿ ಸಮಿತಿಸೇರುವುದು. ಅದಕ್ಕೆರಡು ದಿನ ಸಿದ್ಧತೆ. ಅದಾದನಂತರ ಎರಡು ದಿನ ಕೆಲಸ. ಭಾನುವಾರ ಸಭೆ. ಅದಕ್ಕೆ ಅಧ್ಯಕ್ಷರ ಮನೆಗೆ ಓಟಾಟ; ಮೆಂಬರುಗಳಿಗೆ ತಿಳಿಸುವುದು. ಪ್ರಾರಂಭೋತ್ಸವ, ವಾರ್ಷಿಕೋತ್ಸವ, ಜಯಂತಿ ಗಳು ಬೇರೆ.

ಮನೆಗೆ ಊಟಕ್ಕೆ ಹೊತ್ತಾಗಿ ಬರುವುದು ಪ್ರಾರಂಭವಾಯಿತು. ಇದರ ಜೊತೆಗೆ ಮನೆಯಲ್ಲಿ ಬೈಗಳು ಭಾರಿ ಸಿಕ್ಕತೊಡಗಿದುವು. ಪರೀಕ್ಷೆ ಬಂತು; ಓದಲಿಕ್ಕೆ ಕಾಲವಿಲ್ಲ. ಪರೀಕ್ಷೆಯಲ್ಲಿ ಹೇಗಾಯಿ ತೆಂಬುದನ್ನು ನಾಚಿಕೆಯಿಲ್ಲದೆ ಹೇಳಬೇಕೇ !

ಹೋಗಲಿ ! ಈ ವರ್ಷ ಆದನಂತರ ಈ ಸ್ಥಾನಕ್ಕೆ ಸಲಾಮು ಹಾಕಿ ಹೊರಡೋಣವೆಂದರೆ— ಸ್ನೇಹಿತರು ಬಿಡುತ್ತಾರೆಯೇ— ಬಿಟ್ಟೇಬಸವನಿಗೇ ಹೆಚ್ಚು ಮೂಟೆ.

ಹೇಗೋ ಉಪಾಯಮಾಡಿ ಮೂರು ವರ್ಷದ ಮೇಲೆ ಮೂರ್ತಿಯ ತಲೆಗೆ ಈ ಪಟ್ಟಕಟ್ಟಿ, ಮೆಲ್ಲನೆ ಜಾರಿಬಿದ್ದೆ.

.... ಆದರೆ ದೊಡ್ಡಮನುಷ್ಯನೇನಾಗಲಿಲ್ಲ ! ಯಾವಾಗ ಆಗುವುದು ?.....

* * *

ಹಿರಿಯವನಾಗುತ್ತ ಲೇಖನ ಬರೆಯಬೇಕೆನಿಸಿತು. ಕನ್ನಡ ನಾಡಿನಲ್ಲೇನು ' ಅಮೋಘ ' ವಾದ ಅನೇಕ ಪತ್ರಿಕೆಗಳಿವೆಯಲ್ಲ ! ಯಾವ ದಾದರೊಂದಕ್ಕೆ ಬರೆದರೆ ಆಯಿತು. ತಿಳಿಸದೆ ತಿಳಿಯದೆ— ಕದ್ದಾಗಲಿ – ಬರೆದರೆ ಹೆಸರು ಬಂದೀತು ! ನಾನೂ ದೊಡ್ಡ ಮನುಷ್ಯನಾದೇನು !

ಲೇಖನ ಬರೆಯಲಿಕ್ಕೆ ಮುಂಚೆ ಒಂದು ಗುಪ್ತನಾಮ ಬೇಕಲ್ಲ ! ಇಲ್ಲದಿದ್ದರೆ ಲೇಖಕನಾಗುವುದು ಹೇಗೆ ? ಇತರರಿಗೆ ಓದಿ ತೋರಿಸಿ, ಅವರು ' ಚೆನ್ನಾಗಿದೆ ' ಎಂದರೆ ನಾನು ತಲೆದೂಗಿ, ' ನನ್ನದೇ ಅದು ' ಎಂದು ಹೇಳಿಕೊಳ್ಳಬಹುದು. ' ಚೆನ್ನಾಗಿಲ್ಲ ' ಎಂದರೆ ಹೌದೇದು ನನ್ನನ್ನು ನಾನೇ ಅವರೆದುರಿಗೆ ಬೈದುಕೊಂಡು, ಇಂತಹ ಲೇಖನಗಳನ್ನು ಪ್ರಕಟಿಸುವ ಕನ್ನಡ ಪತ್ರಿಕೆಗಳನ್ನೂ ಬೈದುಬಿಟ್ಟರೆ ಸರಿ !..ಹೀಗೆಯೇ ಯೋಚನೆ ಹೊರಳಿಸಿ, ಬಂದು ಅಡ್ಡ ಹೆಸರನ್ನು ತೆಗೆದಿಟ್ಟೆ. ಲೇಖನ ಕಳುಹಲಿಕ್ಕೆ ಮುಂಚೆಯೇ ನನ್ನ ಮಿತ್ರರ ಎದುರಿನಲ್ಲಿ " ಲೋ ! ಈ ವಾರದ ' ಸ್ವಮಿತ್ರ 'ನಲ್ಲಿ ' ರಾಗಿಣಿ ' ಬರೆದ ಲೇಖನ ಓದಿರೋ ! " ಎಂದು ಒಲು ಬುದ್ಧಿಯಿಂದ ಹೇಳಿದೆ. ಆದರೆ ಎಲ್ಲರೂ ಕ್ವಿಕ್ಸಾಟರೇ ! ಮೂರನೆಯ ದಿನ ನನ್ನ ಬಿಳಿಟೋಪಿಯ ಮೇಲೆ ' **ಶ್ರೀಮತಿ ರಾಗಿಣಿ** ' ; ಪುಸ್ತಕದ ಹಾಳಿಗಳ ಮೇಲೆ ಬೆಂಚಿನ ಮೇಲೆ—ಬ್ಲೇಡಿಂದ ಕೆತ್ತಿ—'**ರಾಗಿಣಿ**'ಎಂದು ಬರೆದಿದ್ದರು. ಬೀದಿಯಲ್ಲಿ ಸ್ನೇಹಿತರು ಕೂಗುವುದು ' **ಶ್ರೀಮತಿ ರಾಗಿಣಿ** ' ಎಂದು. ಉಪಾಧ್ಯಾಯರಿಗೆಲ್ಲ ತಿಳಿದು ಅದು ಹೆಡ್ಮಾಸ್ಟರ ವರೆಗೂ ಹೋಯಿತು.

ನನ್ನ ಅದೃಷ್ಟಕ್ಕೆ ಆ ವಾರ ನನ್ನ ಲೇಖನ ಮುದ್ರಣವಾಗಲಿಲ್ಲ. ದೇವರ ದಯೆಯಿಂದ ನನ್ನ ಮಿತ್ರರೂ ಆ ಪೇಪರನ್ನು ಕೊಂಡಿರಲಿಲ್ಲ. ಮೂರು ವಾರದ ಮೇಲೆ, ನಾನು ಮೂರು ಪತ್ರಗಳನ್ನು ಬರೆದ ಮೇಲೆ, ನನ್ನ ಲೇಖನ " ವಂದನೆ ವಿಷಾದಗಳೊಂದಿಗೆ " ಹಿಂದಿರುಗಿ ಬರುತ್ತದೆಂದು ಗೊತ್ತಿದ್ದರೆ, ನನ್ನ ಲೇಖನದ ಪತ್ರಿಕೆಗೆ ಕೊಡುತ್ತಿದ್ದೆನೇ ? ಅದೃಷ್ಟವಿಲ್ಲ ' ಸಮ್ಮಂತಹರ ' ಲೇಖನ ಮುದ್ರಿಸಲು.

ಇಲ್ಲಿಗೇ ಈ ತೆರದ ಯೋಜನೆ ಮುಗಿಸುವ ಎನ್ನಿಸಿತು. ಆದರೆ ದೊಡ್ಡಮನುಷ್ಯ.... ?

* * *

ಕಡೆಗೆ " **ಸೂರ್ಯೋದಯ** "ಕ್ಕೆ ಸ್ವಂತವಾಗಿ ಮುಸೊಲಿನಿಯ ಮೇಲೆ ಒಂದು ಲೇಖನ ಬರೆದು ಕೊಡೋಣವೆಂದು, ಸ್ವಲ್ಪ ಚೆನ್ನಾಗಿ, ಹುಮ್ಮಸ್ಸಿನಿಂದ ಬರೆದೆ. ನನಗೂ ತೃಪ್ತಿಯೆನಿಸಿತು—ನನ್ನ ಲೇಖನ " ಸೂರ್ಯೋದಯ "ದ ಆಫೀಸಿಗೆ ಹೋಗಿ, ಈ ಲೇಖನ ಕೊಟ್ಟು ಬರುವ ಎಂದು ಹೊರಟು ಯೋಚಿಸಿದೆ : ' ಸಂಪಾದಕನು, ಈ ಲೇಖನ ಕೊಟ್ಟಾಗ ನನ್ನನ್ನು ನೋಡಿ, ಲೇಖನ ನೋಡದೆಯೇ ಮೂಲೆಗೊತ್ತಿದರೆ ಹೇಗೆ ? ' ಎಂದು. ಆದುದರಿಂದ ' ಆಫೀಸು ಮುಚ್ಚುವ ಸಮಯದಲ್ಲಿ, ಮುಚ್ಚಿದ ಮೇಲೆ ಹೋಗಿ, ಬಾಗಿಲ ಕೆಳಗಿನಿಂದ ದೂರಿಸಿ ಬರುವ, ಎಂದೆ ; ಹೊರಟೆ. ಹಾಗೆಯೆ ಮಾಡಿದ್ದು. ಲೇಖನದ ಜೊತೆಗೊಂದು ಪತ್ರ ಹೊಸೆದಿದ್ದೆ : " ಈ ಲೇಖನ ಮುದ್ರಿಸಿದರೆ,— ಮುದ್ರಿಸಿಯೇ ತೀರುತ್ತೀರೆಂದು ನನ್ನ ನಂಬುಗೆ— ಪತ್ರಿಕೆಯ ಪ್ರತಿಯೊಂದನ್ನು ನನಗೆ ಕಳುಹಿಸಿ " ಎಂದು ಪತ್ರಕೊಟ್ಟು ಬರೆದಿದ್ದೆ.

ಅದೊಂದು ಸಾಹಸಕೃತ್ಯವೇ ಸರಿ ! ಆದರೆ ಆ ವಾರ ನನಗೇನು ಪ್ರತಿ ಬರಲಿಲ್ಲ ; ಸರಿ ! ನನ್ನ ಲೇಖನವೇನಾಯಿತೋ ಎಂದು ಹೊಟೆ. ಅಂಗಡಿಯಲ್ಲಿ ತೂಗುಹಾಕಿದ್ದ ಪ್ರತಿಯನ್ನು ನೋಡಿದೆ. ಕುತೂಹಲದಿಂದ ಒಂದನ್ನು ಕೊಂಡೆ.

ನನ್ನ ಅದೃಷ್ಟ! ನನ್ನ ಲೇಖನ ಮುದ್ರಿತವಾಗಿತ್ತು. ತಡೆಯ. ಅಪಾರವಾದ ಸಂತೋಷವಾಯಿತು. ಅಮ್ಮನಿಗೆ ಓದಿ ತೋರಿಸಿದೆ. ಆಕೆ ಕೇಳುವಷ್ಟು ಕ್ಷೇಮ— "ಹೀಗೆಲ್ಲ ಬೇರೆ ಹೆಸರಿಟ್ಟುಕೊಂಡು ಬರೆಯಬೇಡ ಮಹಾರಾಯಾ! ಆ ಗಾಂಧೀಜಿಯೇ ನಿನಗೂ ತಾಗಿ ಲಾಠೀಹೊಡೆತ ಬಿದ್ದೀತು. ಹುಚ್ಚಪ್ಪಗ! ನೀನು ಸೆರೆಗೆ ಹೋದರೆ" ಎಂದರು. ಆಕೆಯ ದುಃಖ ನನ್ನ ಹುಗ್ಗನ್ನು ಹಿಗ್ಗಿಸಲಿಲ್ಲ.

ಸರಿ! 'ಪ್ರಪಂಚದಲ್ಲಿ ನನ್ನ ನಿಜವಾದ ಬೆಲೆಯರಿತು ನನ್ನನ್ನು ಗೌರವಿಸುವವರಿದ್ದಾರಲ್ಲ' ಎಂದು, ಸೂರ್ಯೋದಯದ ಸಂಪಾದಕರಿಗೆ ಮನಸ್ಸಿನಲ್ಲೇ ನಮಸ್ಕಾರಹಾಕಿದೆ. ಮರುವಾರಕ್ಕೆ ಬರೆಯಲೋಸುಗ ತಲೆ ಕೆದರಿದೆ. ಏನೂ ತೋಚದೆ "ಅನ್ನದಲ್ಲಿ ಅಗುಳು" ಎಂದು ಯಾವುದೋ ಒಂದು ದೊಡ್ಡ ಪುಸ್ತಕದಿಂದ ಕದ್ದು ಬರೆದುಕೊಟ್ಟೆ.

ನನ್ನನ್ನು ನೋಡಿ ಹಾಗೇಕಂದನೋ? "ನೀವೇನೇ ಸ್ವಾಮಿ! 'ರಾಗಿಣೀ' ಎಂದು ಬರೆಯುವವರು?" ಎಂದು ಆರಂಭಿಸಿದ ಆ ಸಂಪಾದಕ ಮಹಾಶಯ. ಅಷ್ಟಕ್ಕೇ ನಿಲ್ಲಿಸಿ ನುಣ್ಣಗಿರದೆ, "ನೀವೇ ಬರೆದದ್ದೀನು ಸಾರ್ ಹೋದಸಾರಿ ಕಳುಹಿದ್ದು?" ಎಂದ. ಬೇರೆ ಏಟು ಬೀಳಲಿಲ್ಲ. ರತ್ನಕಂಬಳಿ–ಶಾಲು–ಪಲ್ಲಿ–ಯಲ್ಲಿ ಸುತ್ತಿ ಪೋಷಕೆ ಏಟುತಿಂದರೆ! ಕದುಳು ಕಿವಿಚಿದಂತಾಗುವುದಿಲ್ಲವೇ!

"ಅನ್ನದಲ್ಲಿ ಅಗುಳು— ಮುದ್ರಿಸಲಾಗುವುದಿಲ್ಲ. ಇದನ್ನು ಮುದ್ರಿಸಿದರೆ ನಮ್ಮ ಪತ್ರಿಕೆಯ ಘನತೆ, ಅಂತಸ್ತು ತಗ್ಗಿ ಹೋಗುತ್ತದೆ," ಎಂದವನು ಅದನ್ನು ಹಿಂದಕ್ಕಿತ್ತು "ಬೇರೆ ಚೆನ್ನಾಗಿರುವುದನ್ನು ಬರೆದುಬಿಡಿ ಸಾರ್" ಎಂದು ಉತ್ಸೇಜನ ಕೊಟ್ಟ. ಗಣೇಶನ ಮದುವೆಗೆ ಸಾವಿರಾರು ವಿಘ್ನಗಳಂತೆ.

ನಾನೇನು ಗಂಡುಸಲ್ಲವೇ! ಶ್ರೀವೈಷ್ಣವ ಎಂದು ಎಮಾಸೆಮಾತ್ರ ಮೂರು ಮೂರು ದಿನಕ್ಕೆ ಬೋಳಿಸುತ್ತೇನೆ! ನನಗೂ ಎದೆ ಇದೆ. ಅಂದಿನಿಂದ ಇಂದಿನವರೆಗೆ, ಆ ಅಪಮಾನ ಸಹಿಸಲಾರದೆ ಏನೂ ಬರೆದಿಲ್ಲ; ಮುಂದೆ ಬರೆಯುವುದಿಲ್ಲ.

ಆದರೆ ದೊಡ್ಡಮನುಷ್ಯ . . . .?

* * * *

ನಾನೇ ಏತಕ್ಕೆ ಪತ್ರಿಕೆಯೊಂದನ್ನಾರಂಭಿಸಬಾರದು?

ಸರಿ! ದಿನಪತ್ರಿಕೆಯೊಂದನ್ನು ಪ್ರಾರಂಭಿಸಿದೆ. ಮುದ್ರಣವಿಲ್ಲ! ನನ್ನ ಪತ್ರಿಕೆ ಕೈಬರೆಹದ್ದು. ಆದಕ್ಕೆ ಹಾಳೆ, ರಬ್ಬರ್, ಕಾರ್ಬನ್, ಪೆನ್ಸಿಲ್ ತಂದಿಟ್ಟೆ. ನನ್ನ ಎತ್ತರನೊಬ್ಬ "ಜಯಲಕ್ಷ್ಮಿ" ಶಾಯಿಗೆ ಏಜೆಂಟ್ ಆಗಿದ್ದ. ಆದರಲ್ಲಿ ಅಡ್ವರ್ಟೈಸ್‌ಮೆಂಟಿಗೆಂದು ಸಾಲಪ್ತಾಣೆ ಕಿತ್ತುಕೊಂಡು, ಒಂದು ಶುಭದಿನ ಪತ್ರಿಕೆಯ ಪ್ರಾರಂಭೋತ್ಸವ ಮಾಡಿದೆ. ಸಂಜೆ ಸಾಲೆಯಿಂದ ಒಂದು ಅಂದಿನ "ವಿಶ್ವಕರ್ನಾಟಕ" ನೋಡಿ ಹಳಸಿದ ಸುದ್ದಿ, ಸೋಜಿಗದ ಸುದ್ದಿ, ನಗುಲಹರಿ . . . . ಇನ್ನೆಲ್ಲ ಬರೆವುದು! ಮರುದಿನದ ಬೆಳಗಿನ 'ವಿಶ್ವಕರ್ನಾಟಕ' ನೋಡಿ ಅಂದಿನ ಸುದ್ದಿ, ಬಿಸಿಬಿಸಿ ಸುದ್ದಿ ತುಂಬಿಸುವುದು. ಅಂತೂ ೧೦ ಘಂಟೆಗೆ ನನ್ನ ಪತ್ರಿಕೆ ಸಿದ್ಧ. ಮೊದಲನೆಯ ಪುಟದಲ್ಲಿ ಸ್ವಸಂಸ್ಥಾನದ ಸುದ್ದಿ; ಕೊನೆಯದರಲ್ಲಿ ಪ್ರಪಂಚದ್ದು. ಹೀಗೆ ೮ ಪುಟಗಳ ಪೇಪರನ್ನು ಮಾಡಿದೆ. ನಾನೇ ಮುದ್ರಣಕಾರ, ನಾನೇ ಸಂಪಾದಕ, ನಾನೇ ಏಜೆಂಟ್, ನಾನೇ ಮಾರುವವನು. ಎಲ್ಲಾ ನಾನೇ!

ಮೊದಲ ದಿನ ಉತ್ಸಾಹ ತೀವ್ರವಾಗಿತ್ತು. ಕೈ ಸೋಯಿಸಿಕೊಂಡೇ ೧೦ ಪ್ರತಿ ಮಾಡಿದೆ, ಸಾಲೆಯಲ್ಲಿ ೯ ಪ್ರತಿ ಕಾಸಿಗೊಂದರಂತೆ ಮಾರಿದೆ. ಅಸಲು ಗಿಟ್ಟಿತು. ನನ್ನ ಲೇಖನಿಗೆ ಬೆಲೆ ಬಂತು. ನಾನೂ ಹೆಸರು ಗಳಿಸಿದೆ.

ಇನ್ನೇನು ಕೊನೆಯ ಮೆಟ್ಟಿಲು "ಅಡಿಯ ಮುಂದಿಡೆ ಸ್ವರ್ಗ" ಆದರೆ ಪಾದ ಹಿಂದೇಟು ಹಾಕುತ್ತಿತ್ತು.

ಹೀಗೇ ದಿನಂಪ್ರತಿ ರಾತ್ರಿ-ಹಗಲು ಕಳೆಯಲು ನನ್ನ ಕಡೆಯಿಂದಾಗಲಿಲ್ಲ. ಕೆಲವೊಮ್ಮೆ ತರಗತಿಯಲ್ಲಿ ನೋಟ್ಸು ಬರೆದು ಕೊಳ್ಳಲಾಗದೆ ಪೇಚಾಡುತ್ತಿದ್ದೆ.

ಒಂದು ವಾರ ಕಳೆಯಿತು. ಮುಂಗಡ ನನಗೆ ಪತ್ರಿಕೆ ಹೊರಡಿಸಲಿಕ್ಕಾಗಲಿಲ್ಲ. ಅಲ್ಲಿಗೇ ಅದಕ್ಕೆ ತರ್ಪಣ ಅರ್ಪಿಸಿದೆ. ಇಲ್ಲದಿದ್ದರೆ ಈ ವೇಳೆಗೆ ನಾನೂ ಭಾರಿ ಮನುಷ್ಯನಾಗುತ್ತಿದ್ದೆ.

* * *

ಈ ಒಂದು ದಾರಿಯೂ ನನ್ನನ್ನು ನನಗೆ ಬೇಕಾದೆಡೆಗೆ ಒಯ್ಯಲಿಲ್ಲ. ಇದೊಂದೆಯೇ ದಾರಿ? 'ಪ್ರಪಂಚದಲ್ಲೇನು ಅನೇಕ ದೊಡ್ಡ ಮನುಷ್ಯರಿದ್ದಾರಲ್ಲ!' ಎಂದುಕೊಂಡೆ. ಬೇರೆ ದಾರಿ ಹಿಡಿಯೋಣವೆಂದುಕೊಂಡು ನೆನೆಮಾ ಹಾಡು ಕಲಿತೆ; ನಡಿಯಿದ್ದೆಡೆ ಸಾಹಿತ್ಯವಿಲ್ಲ; ಸಾಹಿತ್ಯವಿದ್ದೆಡೆ ನಡಿಯಿರಲಿಲ್ಲ. ವಿಧಿಯಿಲ್ಲದೆ ಅದನ್ನು ತ್ಯಜಿಸಿದೆ. ನಾಟಕಗಳಲ್ಲಿ ನುಗ್ಗಿದೆ. ಅಲ್ಲಿಯೂ ಅಭಿವ್ಯದ್ದಿಗೆ ಬರಲಿಕ್ಕಾಗಲಿಲ್ಲ. ಶಾಕುಂತಲಕಾಗಿ ಬಟ್ಟೆಹಾಕಿದೆ; ಓದು ಏನಾದರೂ ಈ ಗುರಿಗೊಯ್ಯಬಹುದೆಂದು ಓದಿದೆ.

ನನಗಂತೂ ಗುರಿ ಸಿಕ್ಕಲಿಲ್ಲ. ನಾನು ಹಿಡಿದ ದಾರಿಗಳೆಲ್ಲ ವ್ಯರ್ಥವಾದುವು. ಬಾಳಿನ ಗೋಳು ತೀರಲಿಲ್ಲ.

ನನಗಿನ್ನೂ ಜಪಲ ತೀರಿಲ್ಲ; ತೀರುವುದೂ ಇಲ್ಲ. ನಾನೂ ದೊಡ್ಡ ಮನುಷ್ಯನಾಗುವುದೆಂದಿಗೆ?..ನನಗೇನು "ರಾವು ಬಹದ್ದೂರ್" ಬೇಡ; ಈಗೇನೋ "ಇಂದ್ರಭವನದ" ಜಿಲೇಬಿ, ದೋಸೆ ತಿಂದು ಧಾಂಡಿಗ ಮನುಷ್ಯ ಆಗಿದ್ದೀನಿ! ಆದರೆ ದೊಡ್ಡ ಮನುಷ್ಯ....?

ನನ್ನ ದಕ್ಷಿಣ ಹೈದರಾಬಾದಿನ ಯಾತ್ರೆ

ಶ್ರೀ. ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್.

★

ಊಟ ರುಚಿ ಹತ್ತದೆ ಊರೆಲ್ಲ ಅಲೆಯುತ್ತ ಉಡುಪಿ ಹೋಟಲನ್ನು ಹುಡುಕ-ಬೇಕಾಯಿತು. ಎಲ್ಲರ ನಾಲಗೆಗೂ ರುಚಿಯೆನಿಸುವಂತೆ ತಿನಿಸುಗಳನ್ನು ಒದಗಿಸುವ ಉಡುಪಿಯ ಹೋಟಲುಗಳಿ, ಸಾವಿರ ಸಾವಿರ ನಮಸ್ಕಾರಗಳು ನಿಮಗೆ!

★

ಪ್ರಯಾಸದಲ್ಲಿ—!

'ಏನ್ ಸಾಮಿಾ ಇಷ್ಟು ದೂರ ಕರಕೊಂಡು ಬಂದು ಮತ್ತೂ ಜೋಟಾ ನಾಣಿ ಕೊಡತೀರಿ..! ಬಗವರ್ಕ ಕಂದಕೂಪ್ಲೆ ಹೀಂಗೇ ಎನ್ ಸಾಮಿಾ..ಇದು ಸಡಿಯೂಂಗಿಲ್ಲ, ಬೇರೆ ಹಣ ಕೊಡಿ ಸಾಮಿಾ' ಎಂದವನೆ ಆ ಕೂಲಿಯವನು, ನಾನು ಕೊಟ್ಟ ನಾಲ್ಕಾಣೆಯನ್ನು ತಿರುಗಿ ಕೊಡುತ್ತ, ದೊಡ್ಡದೊಂದು ಅಪರಾಧಪನ್ನೇ ಹೇರಿದನು ನನ್ನ ಮೇಲೆ. ನನಗೆ ಗಾಬರಿ. ನಾನು ಆದೇ ಆಗ ಇಳಿಯಬೇಕಾದ ಸ್ಥಳದ ಪರಿಚಯ, ಅಲ್ಲಿಯ ಜನರ ಗುರುತು, ಕುಶಲ-ವಾರ್ತೆಗಳನ್ನು ಕೇಳಿಕೊಳ್ಳುವದನ್ನು ನಡೆಯಿಸಿದ್ದೆ. ಅತ್ತ ಕೂಲಿಯವನು ತನ್ನ ತಕರಾರನ್ನು ವಿಶೇಷ ಸಲುಗೆಯಿಂದಲೇ ಆರಂಭಿಸಿದ. 'ಎನ್ ಸಾಮಿಾ, ನನಗೆ ಬೇರೆ ಹಣಾ ಕೊಡಿರೀ' ಎಂದು ಕಿವಿಯ ಮೇಲೆ ಕೈಯಿಟ್ಟು ಕಿರುಚಿದಾಗ ನನಗೆ ಎಚ್ಚರು; ಆದೂ ಆ ಕೂಗನ್ನು ಕೇಳಿ ತಾಳಲಾರದೆ ನನ್ನ ಸಂಗಡ ಮಾತಾಡುತ್ತ ನಿಂತವರು ನನಗೆ ಅರಿಕೆಪಾಡಿಕೊಟ್ಟರೆಂದು ನನಗೆ ಅವನ ನೆನಪಾಯಿತು. 'ಏನೋ ಅದು? ಇದಕ್ಕೂ ಎಂತಹ ಒಳ್ಳೆಯ ನಾಣ್ಯ ಬೇಕು ನಿನಗೆ? ಇನ್ನೂ ಹೆಚ್ಚು ಹಣ ಬೇಡುತ್ತಿದ್ದರೆ ಆ ಮಾತು ಬೇರೆ' ಎನ್ನುತ್ತ, ನಾನು ನನ್ನ ನಿಷ್ಕಾಳಜಿಗಾಗಿ ಕೊಂಚ ಮುದುಡಿಕೊಳ್ಳುತ್ತ ಅವನನ್ನು ಕೇಳಿದೆ. ಅವನು ಮತ್ತಿಷ್ಟು ರೇಗಿದ. 'ಏನಂತಾನ್ರೀ ಈತ!' ಎಂದು ನಾನು ನನ್ನ ಜೊತೆಯವರನ್ನು ಕೇಳಿದೆ; ಅವರ ಸಂಗಡ ನನ್ನ ಕೈಯಲ್ಲಿ ಆಗಳೆ ಒಂದ ಪಾವಲಿಯನ್ನು ಅವರತ್ತ ಚಾಚಿದೆ. 'ಓಹೋ ಇವೋ! ತಂಬಾ ಪೋಜು' ಎಂದವರೇ ಅವರು, ಆ ಕೂಲಿಯವನಿಗೆ ಅಲ್ಲಿಯ ಮಾತುಗಳಲ್ಲಿ ತಿಳಿಸಿ ಹೇಳಿದರು. ನನಗೆ ಬಗೆಹರಿಯದ ವಿಷಯ. ನಾನು, ಬಾಯ್ಮುರಿದುಕೊಂಡು, ಇಬ್ಬರನ್ನೂ ಎವೆಯಿಕ್ಕದೆ ನೋಡುತ್ತಾ ನಿಂತುಬಿಟ್ಟೆ. ಕೊನೆಗೆ ಅವರು ಹೇಳಿದರು: 'ಇದು ಬ್ರಿಟಿಶ್ ನಾಣ್ಯವು; ಇವ್ವ ಇಲ್ಲಿ ನಡೆಯುವುದಿಲ್ಲ. ಇಲ್ಲಿಯ ವ್ಯವಹಾರಕ್ಕೆ ಇಲ್ಲಿಯ ನಾಣ್ಯಗಳೇ ಬೇಕು' ಎಂದರು. 'ನೋಡಿದರೆ ಮೊಗಲಾಯಿ; ಮೇಲೆ ಇಷ್ಟು ಅಭಿಮಾನವೆ?' ಎಂದುಕೊಂಡೆ ನಾನು. 'ಇಲ್ಲಿಯ ನಾಣ್ಯಗಳು ಬೇರೆ ಇವೆ. ನಿಮಗೆ ವಾದಿಯಲ್ಲಿ ಹಣವನ್ನು ಒದಲು ಮಾಡಬೇಕಾಗಲಿಲ್ಲವೇನು?' ಎಂದರುಅವರು. 'ಇಲ್ಲರೀ! ನನಗೆ ಇಡಿಯ ಪ್ರವಾಸದಲ್ಲಿ ಕಿಸೆಯಲ್ಲಿಂದ ಕಾಸನ್ನು ತೆಗೆಯುವ ಪ್ರಸಂಗವೇ ಒರಲಿಲ್ಲ' ಎಂದೆ ನಾನು. 'ವಾಡಿಯಲ್ಲಿಯೆ ಬ್ರಿಟಿಶ್ ಹಣವನ್ನೆಲ್ಲ ಕೊಟ್ಟು; ನಿಝಾಮ್ ಹಣವನ್ನು ಕೊಂಡಿದ್ದರೆ ಈ ಪೇಜು ಬರುತ್ತಿದ್ದಿಲ್ಲ. ಇರಲಿ ತಡೆಯಿರಿ' ಎಂದವರೆ ಅವರು, ಮೊದಲು ಆ ಕಿರುಚುವ ಕೂಲಿಯವನಿಗೆ ಹಣವನ್ನು ತಿಕ್ಕುಬಂದರು. ಅಷ್ಟರಲ್ಲಿ ಒದಲಿಸಿ ತಂದ ಆ ನಾಣ್ಯವನ್ನು ನೋಡಬೇಕೆಂಬ ಕುತೂಹಲದಿಂದ 'ಇಲ್ಲಿ ತನ್ನಿರಿ' ಎಂದೆ ನಾನು. 'ತಡೆಯಿರಿ ಮೊದಲು ಇವನನ್ನು ಅಟ್ಟುವ' ಎಂದವರೇ ಅವರು ಅವನಿಗೆ ಆ ನಾಣ್ಯವನ್ನು ಕೊಟ್ಟುಕಳಿಸಿದರು. ನಾನು ಮಾತ್ರ ನನ್ನ ಉಲುಕೋಚಿ ಸ್ವಭಾವಕ್ಕೆ 'ಒಂದು ನಿಮಿಷ ತಡೆಯಬಾರದೇ ಪ್ರಾಣೇ! ನಿನ್ನ ಒಳಿಯಿದ್ದ ಎಲ್ಲ ಹಣನ ಬದಲು ಆ ನಾಣ್ಯಗಳೇ ಈಗ ಬರುವುವು. ಆಮೇಲೆ ಎಷ್ಟುನೋಡೀಯಾ' ಎಂದು ಒಳಿಕಾಗಿ 'ಛೀ' ಹಾಕಿದೆನು. ಅಷ್ಟರಲ್ಲಿಯೆ ಅವರು ನನ್ನ ಎಲ್ಲ ಹಣದ ಬದಲಾಗಿ ಮೊಗಲಾಯಿ ಹಣವನ್ನು ತಂದಿತ್ತರು ನನಗೆ!

ಅವುಗಳನ್ನು ನೋಡಿ ನನ್ನ ಆಚ್ಚರಿಯು ಮೇರೆ ಎಾರಿತು. ಆಹಾಹಾ, ಏನು ನಾಣ್ಯಗಳವ್ವ! ಅವುಗಳಿಗಾಗಿ ಉಪಯೋಗಿಸಿದ ಧಾತುವು ಎಂತಹದು! ಅವುಗಳ ಮೇಲೆ ತೆಗೆದ ಸುಳುವುಗಳೆಷ್ಟು ಚೆಲುವಿನವು? ಪವಿತ್ರತಪುವಾದ ಶಂಖ-ಚಕ್ರಗಳಂತಹ ಆಕಾರಗಳೇನು! ಮೇಲೆ ನಾಡೊಡೆಯನ ಮೋರೆಯಿಲ್ಲ; ನಾವಾ ಥಾಟು! ಬ್ರಿಟಿಶ್ ರೂಪಾಯಿಯ ಹದಿನಾಲ್ಕಾಣೆ ಬೆಲೆಯು ಆ 'ಹಾಲೀ' ರೂಪ್ಯಕಗಳಿಗಿದ್ದರೂ, ಅವುಗಳನ್ನು ಕಂಡು ನನಗೆ ತುಂಬಾ ಮೆಚ್ಚಿಕೆಯೆ ಎನಿತು. 'ಎಷ್ಟು ಚಣ್ಣಿಸಲಿ ನಮ್ಮ ಹೇ..ಶ್ರೀ ನಿಝಾಮ ರೂಪ್ಯಕಗಳಿರಾ! ಹೇಳಿರಿ ಹೇಗೆ ಪಾಡಿಕೊಳ್ಳಲಿ ನಿಮ್ಮ ಉಪಯೋಗವನ್ನು ಈ ಮಹಾ ನಗರದಲ್ಲಿ? ಇಲ್ಲಿಯ ನನ್ನ ಜೀವನಾ

ಧಾರಗೆಳರಾ? ಇಲ್ಲಿಯ ಜನರ ಕೊರಳಲ್ಲಿ ತಾಯಿತಗಳನ್ನು ಮಾಡಿ ಕಟ್ಟಲೇ—ಈ ಪುಣ್ಯಪ್ರದಾಯಕ-ಪಟ್ಟಣದಲ್ಲಿ ಒದಗಬಹುದಾದ ಅನೇಕ ಸಂಕಟಗಳ ಪರಿಹಾರಾರ್ಥವಾಗಿ? ಈ ಪುರಾಣ ಪ್ರಸಿದ್ಧವಾದ ಹೊಳಲ ಹೊಸ್ತಿಲಕ್ಕೆ, ಇವುಗಳೊಳಗಿನ ಕೆಲವನ್ನು ಒಯ್ದು ಒಡ್ಡಲೇ ಇಲ್ಲಿಯ ಎಲ್ಲ ಧಾರಣೆಗಳು ಇಳಿದು ನನ್ನ ಕೆಲಸಕ್ಕೆ ಕೊರತೆ ಬರಬಾರದೆಂದು? ಅಥವಾ ಇವುಗಳಿಗೆ ತೂತುಗಳನ್ನು ಮಾಡಿಸಿ ಯಾವ ಹುಡುಗರ ಕಾಲಲ್ಲಾದರೂ ಹಾಕಲೇ—ನನ್ನ ಸಕಲ ಪೀಡಾಪರಿತಾಪಗಳ ನಾಶಕ್ಕೆಂದು?' ಎಂಬ ವಿಚಾರಗಳು ಹೊಳೆದುಹೋದುವು. ಅವುಗಳ ಸಂಗಡ ಆ ನಾನ್ಯಾಗಳೂ ನನ್ನ ಜೇಬಿನಲ್ಲಿ ಅಷ್ಟರಲ್ಲಿಯೆ ನುಸುಳಿ ಹೋಗಿದ್ದುವು.

'ನೀವು ಈಗ ಈ ಬಚ್ಚಲುಮನೆಯಲ್ಲಿ ಜಳಕವನ್ನು ಮಾಡಿ ತೀರಿಸಿರಿ; ಆ ಮೇಲೆ ಇಲ್ಲಿಯ ಒಳಿಯಲ್ಲಿರುವ ಹೋಟಲಿಗೆ ಊಟಕ್ಕೆ ಹೋಗಿಬರುವಿರಂತೆ' ಎಂದರು ನನ್ನ ಗುರುತಿನವರು. 'ಆಗಲಿ' ಎಂದೆ. ಆಗ ಹೊತ್ತು ಸುಮಾರು ಏರಿಯೆ ಒಂದಿದ್ದುದರಿಂದ ನಾನು ಬೇಗನೆ ಜಳಕಕ್ಕೆ ಇಳಿದೆ. 'ಸುಖವಾದ ಜಳಕವೊಂದಾದರೆ, ದಿನಪ ಅರ್ಧ ಕಾರ್ಯಕ್ರಮವಾದಂತೆ' ಎಂಬ ವಿಚಾರದವನಾದ ನನಗೆ, ಅಂದಿನ ಸ್ನಾನವು ಮಂಗಲಸ್ನಾನವಾಗಿಯೆ ಪರಿಣಮಿಸಿತೆಂದು ಹೇಳಬಹುದು. ನಿರ್ಮಲವಾದ ಕೊಬ್ಬರಿ ಎಣ್ಣೆ; ಬೇಕಾದಷ್ಟು ತಣ್ಣೀರು; ಹಚ್ಚಿಕೊಳ್ಳಲು ಸುಗಂಧಮಯವಾದ ಸಾಬೂನು. ಮೇಲೆ 'ಬೇಗನೆ ಮುಗಿಯಿಸಿರಿ' ಎಂದು ಎಚ್ಚರಿಸುವವರಾರೂ ಇಲ್ಲ. ಎಂದ ಮೇಲೆ ಸ್ನಾನವು ತೃಪ್ತಿಕರವಾಗದೆ ಏನು? ನಾನು ಬಟ್ಟೆಗಳನ್ನುಟ್ಟು ಹೊರಗೆ ಬರುತ್ತಲೆ ಅವರು ಒಬ್ಬ ಆಳುಮಗನನ್ನು ಕಳುಹಿಸಿದರು ನನ್ನ ಸಂಗಡ. ಅವನೊಂದಿಗೆ ಹೊರಟೆ; ಅವನು ತೋರಿಸಿದ ಊಟದ ಮನೆಯನ್ನು ಹೊಕ್ಕೆ. ಕೂಡಲೆ ಆಳು ತಿರುಗಿ ಹೋಗಿಬಿಟ್ಟ.

ಪ್ರವಾಸದಲ್ಲಿ ಫಲಾಹಾರವು ಅಷ್ಟಕ್ಕಷ್ಟೆ ಆಗುವುದು. ಯಾಕೆಂದರೆ ನಿಲ್ದಾಣಗಳ ಮೇಲೆ ಒಳ್ಳೆಯ ಆಹಾರವು ಸಿಗುವಂತಿರುವುದಿಲ್ಲ. ಸಿಕ್ಕ ಸಿಕ್ಕಂತೆ ತಿನ್ನಲು ಸಾಕಷ್ಟು ಹಣವೂ ಇರುವಂತಿಲ್ಲ. ಇನ್ನು ನಮ್ಮೊಡನೆ ತಂದುದನ್ನು ತಿನ್ನಬೇಕೆಂದರೆ ನನ್ನು ಸುತ್ತಲೂ ನೂರಾರು ಜನರು. ಎಷ್ಟೇ ಪರಿಚಯವಿಲ್ಲದೆ— ಮಾಡಿಕೊಳ್ಳದೆ ಅಲಿಪ್ತನಾಗಿ ಕುಳಿತುಕೊಳ್ಳಬೇಕು (ಎಂದರೆ ಅಷ್ಟು ಹೊಟ್ಟಿತುಂಬ ನಮ್ಮ ಫಲಾಹಾರವನ್ನಾದರೂ ತಿನ್ನಲಿಕ್ಕೆ ಒಂದೀತು) ಎಂದರೂ, ಕಾರಣವಿಲ್ಲದೆ ಗುರುತುಮಾಡಿಕೊಂಡು, ಸಲುಗೆಯನ್ನು ಬಳೆಯಿಸಿ ಮಾತು ಹಚ್ಚುವ ಮಹಾನುಭಾವರಿಗೆ ಏನೂ ಕೊರತೆ ಇರುವುದಿಲ್ಲ ಬಂಡಿಗಳೊಳಗೆ. ಹೀಗಾಗಿ ಅಂದಿನ ನನ್ನ ಹಸಿವೆಯು ಕೊಂಚ ತೀಕ್ಷ್ಣವಾದುದೇ ಆಗಿತ್ತು; ಕಾರಣ ನನ್ನ ಹಲ್ಲುಗಳು ಮನೆಯ ತೊಡಗಿದ್ದುವು; ಹೊಟ್ಟೆಯು ಹೊಂಚುಹಾಕಿಕೊಂಡು ಕುಳಿತಿತ್ತು. ನಾಲಗೆಯು ಜೊಲ್ಲುರಿಸತೊಡಗಿತ್ತು. ಇಂತಹ ಅನುಪಮವಾದ ಸನ್ನಿವೇಶದಲ್ಲಿ— ಅಂತಹ ಅಭೂತಪೂರ್ವವಾದ ಅವಸರದಲ್ಲಿ ನನ್ನ ಎದುರಿಗೆ ಬಂದು ಬಿದ್ದಿತು— ಒಂದು ಅನ್ನದರಾಶಿ; ಒಟ್ಟಲಾಯಿತ್ತು ಒಂದು ಚಟ್ನಿಯ ಬಣವಿ. ಹರಿಯಿತು ಒಂದು ಕೊಳಂಬೆಯ ಹಳ್ಳ! ಆಹಾಹಾ! ಏನು ಪುಣ್ಯ! ಎಂತಹದು ನನ್ನ ಭಾಗ್ಯ! ಹಸಿದು ಕಕ್ಕಾಂತನಾದ ಅಂತಹ ಸಮಯದಲ್ಲಿ, ನನಗೆ ಯಾವಾಗಲೂ ಸೇರುವಂತಹ ಬೀನಸುಗಳೇ ನನಗೆ ಬೇಕಾದಷ್ಟು ಒದಗಬೇಕೆ? 'ಎಂತಹ ಸುದೈವಿ ನಾನು!' ಎನ್ನಿಸಿತು ನನಗೆ!

ನಿಜಕ್ಕೂ ನೋಡಿದರೆ ಆ ಪ್ರಸಂಗದಲ್ಲಿ ಅಥವಾ ಆ ಅವಸರದಲ್ಲಿ ಅನ್ನಿಸಿ ಬೇಕಾದರೆ, ನನ್ನ ಲಕ್ಷ್ಯವು ಆ ಊಟದ ಕೋಣೆಯ ಕಡೆಗಾಗಲಿ, ಆ ಊಟವನ್ನು ಬಡಿಸುವವನ ಕಡೆಗಾಗಲಿ ಹರಿದು ಹೋಗಬಾರದಾಗಿತ್ತು. ಯಾಕೆಂದರೆ ಆ ತಿನಿಸುಗಳ ಸವಿಯು ಆಕರ್ಷಣದೆದುರು ಅವುಗಳ ಸೌಂದರ್ಯದ ಆಕರ್ಷಣವೆಲ್ಲಿಯದು? ಕೋಣೆಯ ಗೋಡೆಗಳಿಗೆ ಎಷ್ಟೇ ಎಣ್ಣೆಯ ಜಿಡ್ಡು ತಗಲಿರಲಿ, ಬಡಿಸುವವನ ಜಿಲ್ಲಣಕ್ಕೆ ಬೇಕಾದಷ್ಟು ಎಣ್ಣೆಯ ತೆರೆಗಳು ತಗಲಿರಲಿ, ಅಂದಿನ ಚಟ್ಟಣಿಗೆ ಕೊಟ್ಟ ಒಗ್ಗರಣಿಗೇನು ಎಣ್ಣೆಯ ಕೊರತೆಯಿರಲಿಲ್ಲ. ಎಡೆಯ ಒಂದು ಮೂಲೆಯಲ್ಲಿ, ಎಲ್ಲಿಯೋ ಎಸೆದು ಹೋಗಿರುವ ಪಲ್ಲೆ ಎನ್ನಿಸಿಕೊಳ್ಳುವ ಪದಾರ್ಥವು ಸಹ ಎಣ್ಣೆಯು ಮಡುವಿನಲ್ಲಿ ತೇಲಾಡುತ್ತಿರುವ ಒಂದು ದ್ವೀಪದಂತೆಯೆ ಕಾಣುತ್ತಿತ್ತು. ಅಂತೂ ಆ ಜೆಲುವನ್ನು, ಹೇಗಾದರೂ ಮಾಡಿ ಕಣ್ಣುಗಳಲ್ಲಿ ಹುದುಗಿಸಿಟ್ಟುಕೊಂಡು ನಾನು ಊಟಕ್ಕೆ ತೊಡಗಿದೆ. ಆಹಾ, ಆ ಅನ್ನ! 'ಯಾವ ಮಹಾವಿಭೂತಿಗಳಿಗಾಗಿ ಮಾಡಿರಬಹುದು ಇದನ್ನು?' ಎನ್ನಿಸಿತು ನನಗೆ. ಯಾಕೆಂದರೆ 'ಹೊಟ್ಟೆಗೆ ಅನ್ನ ತಿನ್ನುವವರಿಗಾಗಿ'ಯಂತೂ ಮಾಡಿದುದಲ್ಲ ಎಂಬುದನ್ನು ಅದರ ದರ್ಶನ ಮಾತ್ರದಿಂದ ಊಹಿಸಬಹುದಾಗಿತ್ತು. ಅದರ ಅಶನದಿಂದ ಅಮರಪದವಿಯೆ ಎಲ್ಲಿ ದೊರಕುವುದೋ ಎಂದೆನಿಸಿತು ನನಗೆ. ಆ 'ಕೊಳಂಬೆ' ಎಂಬುದು ಮಾತ್ರ ನನ್ನ ಚಿತ್ತಭಿತ್ತಿಯ ಮೇಲೆ ಮೂಡಿದ ಅಮೃತ ಚಿತ್ರ. ಎಂದೆಂದಿಗೂ ಅದರ ಪ್ರಭಾವವನ್ನು ಮರೆಯಲು ಸಾಧ್ಯವಿಲ್ಲ. ಯಾವ ಅದುಗೆಯವನು ಅದನ್ನು ಹುದುಕಿ ತೆಗೆದನೋ? ಅವನ ನಾಮಮಾತ್ರವಾದರೂ ಯಾರಿಗಾದರೂ ಗೊತ್ತಿದ್ದರೆ, ಅದರ ಜಪವನ್ನು ಮಾಡಲಿಕ್ಕೆ ಹಚ್ಚಬಹುದು— ಮುಂದೆ ಆಗಬೇಕೆನ್ನುವ ಅಡಿಗೆಯವರಿಗೆ! ಕೋಲುಬಸವನಿಗೆ ಅಮೇರಿಕೆಯನ್ನು ಹುಡುಕಿ ತೆಗೆಯುವುದು ಏನು ಕೊಳಂಬಿಸಿತ್ತೊ ನಾಕಾಣೆ! ಅದೇ ಅವನು ಇಂತಹ 'ಕೊಳಂಬ'ನ್ನಾದರೂ ಶೋಧಿಸಿ ತೆಗೆದಿದ್ದರೆ ಅವನ ಕೀರ್ತಿಪರಿಮಳವು ಹದಿನಾಲ್ಕು ಲೋಕಗಳಲ್ಲಿಯೂ ಹರಡಬಹುದಾಗಿತ್ತು. ಸಮುದ್ರವ ಆ ಆಂಭಸ್ಸಿನಲ್ಲಿ ಕೋಲು (ಹುಟ್ಟನ್ನು) ಹಾಕುವುದರ ಬದಲಾಗಿ ಇಂತಹ ಕೊಳಂಬಿನಲ್ಲಿ ಹಾಕಿ, ಒಂದೇ ಒಂದು ಬೇಳೆಯನ್ನಾದರೂ ತೆಗೆದಿದ್ದರೆ, ಅದು ಅವನ ಕೀರ್ತಿವೃಕ್ಷದ ಬೀಜವಾಗಬಹುದಾಗಿತ್ತು. ಅವನ ಸಂಕುಚಿತದೃಷ್ಟಿ— ಅದಕ್ಕೇನು ಮಾಡುವುದು?..ಎಂದವನೇ ನಾನು ಮಜ್ಜಿಗೆಯ ಮಡುವಿನಲ್ಲಿ ಬೀಳುವ ಅಪಘಾತದಿಂದ ಪಾರಾಗಿ, ನನ್ನ ತಂಗುವನೆಗೆ ಬಂದು ತಲುಪಿದೆ. ನನ್ನ ಗುರುತಿನವರು ಆಗ

ಎದುರಿಗೆ ಬಂದಿದ್ದರೆ 'ತೇಕುವಿರೇಕೆ ಇಷ್ಟು? ಇದೇನು ಮೈತುಂಬ ಬೆವರು? ಎಲೆ, ಎದೆಯು ಹಾರುತ್ತಿದೆಯಲ್ಲ?' ಎನ್ನಬಹುದಾಗಿತ್ತು. ಆದರೆ ಅವರು ಒಳಗೆ ಹೋಗಿದ್ದರು!

'ಇಲ್ಲಿ ಬೇಕಾದರೆ ತಾವು ಕೊಂಚ ವಿಶ್ರಮಿಸಬಹುದು, ಎಂದು ಅವರು ತುಸು ಮೇಳೆಯಾದ ಮೇಲೆ ಬಂದು ನುಡಿದರು. 'ಆ-ಇ-ಏಗಲಿ..' ಎಂದೆ ನಾನು. 'ದಣಿವು ಆದುದೇನೋ ನಿಜ, ಎಂದ ಮೇಲೆ ಪವಡಿಸಬಾರದೇಕೆ?' ಎಂದುಕೊಂಡು ನಾನು ಅವರು ತೋರಿಸಿದ ಕೊಠಡಿಯನ್ನು ಹೊಕ್ಕೆ. 'ನಾನು ಈ ಬಾಗಿಲನ್ನು ಮುಂದೆ ಮಾಡಿಕೊಳ್ಳಬಹುದೇನು?' ಎಂದು ಕೇಳಬೇಕೆಂದು ನನ್ನ ನಾಲಗೆಯ ತುದಿಯ ಮೇಲೆ ಬಂದಿತ್ತು; ಆದರೆ ಅಷ್ಟರಲ್ಲಿ ಅವರೆ 'ತಾವು ಬೇಕಾದರೆ ಆ ಬಾಗಿಲನ್ನು ಮುಚ್ಚಿಕೊಳ್ಳಬಹುದು. ಇಲ್ಲಿ ಜನರ ಸಂದಣಿ-ಸಪ್ಪಳು ಬಹಳ; ಕಾರಣ ನಿದ್ದೆಗೆ ತೊಂದರೆ ಯಾಗಬಹುದು' ಎಂದು ನನ್ನ ಮಾತೊಂದನ್ನು ಉಳಿಸಿದರು. ನಾನು ಆ ವಾಕ್ಯವನ್ನು ಮತ್ತೆ ನುಂಗಿಕೊಂಡು 'ಇನ್ನೊಮ್ಮೆ ಇದರ ಉಪಯೋಗವನ್ನು ಮಾಡಿಕೊಳ್ಳೋಣ' ಎಂದು ಒಡಲ ಒತ್ತಳಿಕೆಯಲ್ಲಿಟ್ಟೆ. ಆ ಉಳಿಕೆಗಾಗಿ ಅವರಿಗೆ ಮನಸ್ಸಿನಲ್ಲಿಯೆ 'ಥ್ಯಾಂಕ್ಸ್' ಎಂದೆ. ಆದರೆ ನಾನು ಅಡ್ವಾದುದೊಂದೇ ತಡ; ನನ್ನೆದುರು ಕಟ್ಟಿದ ದೃಶ್ಯ— ಅಂದಿನ ಆ ಊಟದ ಕೋಣೆಯದೆ! ಅದನ್ನು ಹೇಗಾದರೂ ಮಾಡಿ ಮರೆಯಬೇಕೆಂದರೆ ಹಸಿವು ಕೇಳುವುದೆ? ಮತ್ತೆ ಮತ್ತೆ ಅದೇ ಅನ್ನವನ್ನು, ಅದೇ ಕೊಳಂಬವನ್ನು ಬೇರೆಬೇರೆಯಾಗಿ ತೋರಿಸುವುದು— "ಇನ್ನು ಮೇಲೆ ನನ್ನ ಗತಿ ಯೇನು? ನನಗೆ ಏನು ಅರ್ಪಿಸುತ್ತೀ? ನನ್ನನ್ನು ಹೇಗೆ ಸಂತಸ ಗೊಳಿಸುತ್ತೀ?" ಎಂದು ಕೇಳುವಂತೆ ಅದೇ ಬೆವರನ್ನು ಕಣ್ಣಲ್ಲಿ ಜುಬ್ಬಿ ನೀರು ತರಿಸುವುದು—ಹೀಗೆ ಆರಂಭವಾಯಿತು. ಕೊನೆಗೆ ತಡೆಯ ಲಾರದೆ ಹಸಿವು ನನಗೆ ಹೇಳತೊಡಗಿತು: 'ಪ್ರಪಂಚದ ಮೂಲೆ ಮೂಲೆಗಳಲ್ಲಿಯೂ ಉಡುಪಿಯವರು ಹೋಟಲುಗಳನ್ನು ತೆಗೆದು 'ಸುಸ್ವಾಗತಮ್' ಎಂದು ಕುಳಿತಿರುವರು. ಈ ಊರಲ್ಲಿ ಮಾತ್ರ ಅವರಿಗೆ 'ಮನಾಯಿ' ಯೇನು? ಏಳು! ನನಗೆ ಅವರಂಗಡಿಯ ತಿನಿಸು— ತಿಂಡಿಗಳು ಸೇರುತ್ತವೆ ಎಂಬುದು ಗೊತ್ತಿದ್ದು ಸಹ ಹೀಗೆ ಕೈಲಾಗದವನಂತೆ ಸುಮ್ಮನೆ ಕುಳಿತರೇನು ಪ್ರಯೋಜನ? ಹೂಂ! ಎದ್ದೇಳು— ಹೊರಡು ಇಲ್ಲಿಂದ. ಊರ ಪ್ರದಕ್ಷಿಣೆ ಗಳು ನೂರಾರು ಆದರೂ ಅಡ್ಡಿಯಿಲ್ಲ. ಎಲ್ಲಿಯಾದರೂ ಉಡುಪಿ ಯಂಗಡಿಯವರು ಸಿಕ್ಕುವರೇನು ನೋಡು.. ಏಳು!" ಎಂದಿತು. ನಿರ್ವಾಹವಿಲ್ಲ, ಬಲಿಷ್ಠರ ಮಾತು— ಕೇಳಲೇ ಬೇಕಷ್ಟಿವೆ?

'ಈಗ ತುಸು ತಿಂಡಿಗಾಡಿಕೊಂಡು ಬರುವೆ' ಎಂದು ಅಲ್ಲಿಯೆ ಬಾಗಿಲಲ್ಲಿ ಕುಳಿತ ನನ್ನ ಗುರುತಿನವರಿಗೆ ಜೇಳಿ ಹೊರಟೆ..ಹೊರಟೆ ಹೊರಟೆ; ಹಾಗೆಯೆ ಹೊರಟೇ ಬಿಟ್ಟೆ. ಹಸಿವೆಯ ಒತ್ತಾಯವೊ, ನಾಲಗೆಯ ಸವಿಗೂಳಿತನವೊ ಅಥವಾ ಸ್ವದೇಶಾಭಿಮಾನವೊ— ನನ್ನನ್ನು ಹಾಗೆಯೆ ನುಗ್ಗಿಸಿಕೊಂಡು ನಡೆದುವು. ದಾರಿಯಲ್ಲಿ ಏನೇನು ಬರುವುವೊ ಗೊತ್ತಿಲ್ಲ. ದಾರಿಯಾದರೂ ಇದ್ದಿತೋ ಇಲ್ಲವೋ ಅದು ಸಹ ಗೊತ್ತಿಲ್ಲ. ಕಣ್ಣಿಗೆ ಆ ಬಗೆಯದೊಂದು ಗುಂಗು ಬಡಿದಿತ್ತು. ಅವು ಕೇವಲ ಅಂಗಡಿಗಳ ಹಾಗೆ (ಬೋರ್ಡು) ಗಳನ್ನು ನೋಡುತ್ತಲಿದ್ದವು. ಕಾಲುಗಳು ಮುಂದೆ ಮುಂದೆ ದೇಹವನ್ನು ಎತ್ತಿಕೊಂಡು ನಡೆದಿದ್ದುವು. ಎಲ್ಲಿಯಾದರೂ 'ಶ್ರೀ-ಲಕ್ಷ್ಮೀವಿಲಾಸ ಚಹಾ ಕಾಫೀ ಕ್ಲಬ್' ಎಂದಾಗಲಿ, 'ಶ್ರೀ-ಅಂಬಾಭುವನ ಕಾಫೀ ಹೊಟಲು' ಎಂದಾಗಲಿ ಕಂಡರೆ, ಕಾಲು ಗಳನ್ನು ತಡೆಯಬೇಕು ಎಂದು ಕಣ್ಣುಗಳು ಹವಣಿಸುತ್ತಿದ್ದುವು. ನಾನು ಬಹುದೂರ ಬಂದಿರಬೇಕು. ಆಷ್ಟರಲ್ಲಿ ಕೆಳಗಿನಂತೆ ಏನೇನೊ ಮಾತುಗಳನ್ನು ಕೇಳಿದಂತಾಯಿತು:

"ಇದು ಏನು"

"ಇಡಾ ಏನಾರ್"

"ಹಾಗಾದರೆ ಇಲ್ಲಿ ಸಿಗರೇಟುಗಳು ಸಿಕ್ಕುವುವೇನು?"

"ಸಿಕ್ಕುತ್ತವೆಯಲ್ಲ..ಬೇಕಾದ ಬೀಡಿಯಂಗಡಿಯಲ್ಲಿ ಕೇಳೀ!"

"ಅಲ್ಲ ಚಾರ್‌ಮಿನಾರ್ ಸಿಗರೇಟು ಬೇಕು ನನಗೆ!"

"ಅವೇ ಸಿಕ್ಕುತ್ತವೆ.. ಕೇಳಿರಿ ಈಜೆಯಂಗಡಿಯಲ್ಲಿ!"

"ಊಹೂಂ; ನನಗೆ ಚಾರ ಮಿನಾರಿನವೇ ಜೇಕಿವೆ!"

"ಓಹೋ! ಹೀಗೆ ತಾನೆ? ಆ ಸಿಗರೇಟ್ ಕಾರಖಾನೆಯು ಈ ಊರ ಹೊರಗಿದೆ. ಅದಕ್ಕೆ ಈ ಕಟ್ಟಿದ ಜೆಸರನ್ನಷ್ಟೆ ಇಟ್ಟಿರು ತ್ತಾರಲ್ಲದೆ ಈ ಕಟ್ಟಿದದಲ್ಲಿಯೇ ಅದರ ಕಾರಖಾನೆಯೇನು ಇಲ್ಲ!"

"ಇದು ಚಾರ್‌ಮಿನಾರನೇ ಹಾಗಾದರೆ?"

ಅವರಿರ್ವರೂ ಮಾತನಾಡಿದವರು ಮಹಮ್ಮದೀಯರೆ! ಕನ್ನಡಿಗರೇನು ಅಲ್ಲ.. ಕನ್ನಡಿಗರಾಗಿದ್ದರೆ ತಪ್ಪೊಳಗೆ ಮಾತನಾಡುವಾಗ ಕನ್ನಡೇತರದಲ್ಲಿ ಮಾತನಾಡುತ್ತಿದ್ದರು. ಅವರೆ ಇವರು ಮುಸ ಲ್ಮಾನರು; ಅಂತೆಯೆ ತಮ್ಮ ತಾಯ್ನುಡಿಯಲ್ಲಿಯೆ ಆಡಿದ ಮಾತು ಗಳವು. ಆ ಕಾಲಕ್ಕೆ ಈ ಹಸಿದ ಹಾರುವನಿಗೆ ಅವರ ಜಾಣತನದ ಪ್ರದರ್ಶನದ ಅರಿವು ಅಷ್ಟೇನೂ ಆಗಲಿಲ್ಲ; ಆದರೆ ಕೊನೆಯ ಮಾತಿನ ಸಂಗಡ ಮೊದಲಿನವನು ಕೈಮಾಡಿ ತೋರಿಸಿದ್ದುದರಿಂದ, ಆ ಕೈಗಳಗುಂಟ ನನ್ನ ಕಣ್ಣುಗಳು ಮಾತ್ರ ಹೊರಳಿದುವು. ತಟ್ಟನೆ ಕಾಲುಗಳು ನಿಂತುವು. ಮತ್ತೊಮ್ಮೆ ನಿಚ್ಚಳವಾಗಿ ನೋಡುತ್ತೇನೆ. ಎಸ್ಪಲಿತವಾದ ಅಕ್ಷರಗಳಲ್ಲಿ ಒಂದೆ ಹಲಗೆ. 'ಉಡುಪಿ ಹೋಟಲು?' 'ವಾಹವ್ವಾ! ನನ್ನ ಕಾಲುಗಳೆ, ಶಾಬಾಸ್! ನನ್ನ ಕಣ್ಣುಗಳೇ ಥ್ಯಾಂಕ್‌ಯು!' ಎಂದುಕೊಳ್ಳುತ್ತಲೆ ಒಳನುಗ್ಗಿದೆ.

ಇನ್ನು ನಾನು ಸುಮ್ಮನೆ ಕುಳಿತುಕೊಂಡರೆ ಈ ಮಹಾನು-ಭಾವರು ನನ್ನ ಸಂಗಡ ಆ ಊರ ಮಾತುಗಳಲ್ಲಿಯೆ ಮಾತನಾಡಿ, ನನ್ನನ್ನೂ ಮೌಲಾನಾಸಾಹೇಬನನ್ನಾಗಿ ಮಾಡಿ, ನನ್ನ ಮನಸ್ಸನ್ನು ತಿರುವುಮುರುವಾಗುವಂತೆ ಮಾಡಿ ಬಿಡಲು ಹುದೆಂಬ ಹೆದರಿಕೆ ನನಗೆ! ಅದಕ್ಕಿಂತಲೇ ನಾನು ಕುಳಿತ ಮೇಜಿನ ಬಳಿಯಲ್ಲಿ ಅವನು ಬರುವು ದಕ್ಕಿಂತ ಮುಂಚಿತವಾಗಿಯೆ, ಕನ್ನಡದಲ್ಲಿ ಕೇಳಿಬಿಟ್ಟೆ: 'ಏನೇನಿದೆ ಸ್ವಾಮಿ?' ಎಂದು. ಅವನು ನೋಡಲು ತನ್ನ ವಾಡಿಕೆಯಂತೆ ಸಿಹಿ ಸಾಮಾನುಗಳ ನಾಮಸ್ಮರಣೆಯನ್ನೊಮ್ಮೆ ಮುಗಿಸಿದ;

ಆ ಮೇಲೆ ಒಡೆ, ಇಡ್ಡಲಿ, ಅಂಬೊಡೆ, ಉಪ್ಪಿಟ್ಟು, ಬೋಂಡಾ, ದೋಸೆ' ಎಂದು ಅದೇ ಉಸಿರಿನಲ್ಲಿ ಅವೆಲ್ಲವುಗಳನ್ನೂ ಕೊನೆಗಾಣಿಸಿದ. 'ಇವನ್ನೇ ಪೊದಲು ಹೇಳಬಾರದೇ ಮಹಾರಾಯಾ' ಎಂದೆಂದುಕೊಂಡು ನಾನವನಿಗೆ ತಿಳಿಸಿದೆ. 'ನೋಡಿ ಸ್ವಾಮಿಾ—ಒಹಳ ದೂರದಿಂದ ಬಂದಿರುವೆ—ಹಸಿವೆಯಂತೂ ಅತಿಯಾಗಿದೆ—' ಎಂದು ನನುವೆ ತಡೆದು, ನಾನೊಬ್ಬ 'ದೇಶಾವರಿ' ಎಂದು ಅವನೆಲ್ಲಿ ತಿಳಿದುಕೊಳ್ಳುವನೋ ಎಂದು 'ನೋಡಿರಿ, ಏನು ಬೇಕಾದ್ದು ಕೊಡಿರಿ' ಎಂದು ಹೇಳಿ ಬಾರಾದೆ. ಅವನು ತಂದುದನ್ನೆಲ್ಲ ತಿಂದು ತೇಗಿ, ಕೇಳಿದಷ್ಟು ಹಣವನ್ನು ಕೊಟ್ಟೆ. ಅಂದಿನ ನನ್ನ ಸಂಭ್ರಮವನ್ನು ನೆನೆಸಲಾಸಲ್ಲ. ಉಡುಪಿಯ ಕೃಷ್ಣಡಿಗರಿಗೆ ನಾನು ಶತಸಲ ಮನಸ್ಸಿನಲ್ಲಿಯೆ ಧನ್ಯವಾದಗಳನ್ನು ಅರ್ಪಿಸಿದೆ. ಹಸಿವೆಯಿಂದ ಕಂಗಟ್ಟಿ ಜನರಿಗಿಂತ, ಆ ತಿನಿಸುಗಳ ರುಚಿಗಾಗಿ ನಾಲಗೆಯನ್ನು ಮಸೆಯುತ್ತ ಕುಳಿತಿರುವ ಜನರಿಗೆ ಅವರಿಂತಹ ಉಪಕಾರವನ್ನು ಮಾಡುವರಲ್ಲ— ಎಂದು! 'ಧನ್ಯ ಧನ್ಯ ಉಡುಪಿಯ ಕೃಷ್ಣ! ನಿನ್ನ ಭಕ್ತರಿಗೆ ಈ ಯುಗದಲ್ಲಿ ಇಂತಹ ಅಮೂಲ್ಯವಾದ ಸೇವೆಯನ್ನರ್ಪಿಸಲು ಅಪ್ಪಣೆ ಕೊಟ್ಟದ್ದು ನಿನ್ನ ಮಹಿಮೆಯನ್ನು ಹೆಚ್ಚಿಸುವುದು. ಬೇಡಿದುದನ್ನು ನೀಡುವುದೆ ನಿನ್ನ ಧರ್ಮವಲ್ಲವೆ! ಧನ್ಯ ಧನ್ಯ!' ಎಂದುಕೊಂಡು ನಾನು, ಆ ಅಂಗಡಿಯೊಡೆಯನನ್ನು ಕೇಳಿದೆ :

'ತಮ್ಮ ಹೆಸರೇನು ಸ್ವಾಮಿ?'

ಅದಕ್ಕೆ ಅವನು 'ನನ್ನ ಹೆಸರು ಕೃಷ್ಣಮೂರ್ತಿ—ತಮ್ಮದು ಯಾವೂರಾಯ್ತು?' ಎಂದು ಮರಳಿ ಕೇಳಿದ. 'ವಾಹವ್ವಾ ವಾಹವ್ವಾ' ಎಂದವನೆ ನಾನು ನಗಹತ್ತಿದೆ :

'ಉಡುಪಿ ಕೃಷ್ಣಾ
ಪೊಡವಿಗೊಡೆಯಾ

ಬಿಡದೆ ನಿನ್ನಂಗಡಿಗೆ ಬರುವೆ' ಎಂದು ಹಾಡಬೇಕು ಎನ್ನಿಸಿತು ನನಗೆ. ಕೂಡಲೆ ಅವನು ಕೇಳಿದ ಪ್ರಶ್ನೆಯು ನೆನಪಾಗಿ 'ನಮ್ಮದು ಧಾರವಾಡ' ಎಂದೆ. 'ಓಹೋ ಧಾರ್ವಾಡವೆ! ಅಲ್ಲಿ ನನ್ನ ಜನ ಇದೆ' ಎಂದನು ಅತ. 'ಇದೆ ಸ್ವಾಮಿಾ ಇದೆ! ಅಂತೆಯೆ ನಮ್ಮಂತಹ ನಾಲ್ಕು ಜನರಿಗೆ ಎಷ್ಟೋ ಆಧಾರವಾಗಿದೆ ಈಗಿನ ದಿನಗಳಲ್ಲಿ! ಈಗ ನೋಡಿರಿ, ನೀವು ಇಲ್ಲಿ ಸಿಕ್ಕಿರಿ ಎಂದು ನನಗೆ ಈ ಊರಲ್ಲಿ ಇನ್ನೂ ನಾಲ್ಕೊಪ್ಪತ್ತು ಇರಲು ಅದೆಷ್ಟೋ ಧೈರ್ಯ ವೆನಿಸಹತ್ತಿದೆ..ಹಂ. ಇದೆ ತಾನೇ ಹಾಗಾದರೆ ಚಾರ್‌ಮಿನಾರ್ ಎಷ್ಟು ಎತ್ತರವಿದೆ ಸ್ವಾಮಿಾ' ಎಂದು ಕೇಳ್ವುದೊಂದೆ ತಡ, ಅವನು ಅದರ ಎತ್ತರ, ಅದನ್ನು ಕಟ್ಟಿಸಿದ ಮಹಾಪುರುಷನ ಹೆಸರು, ಅದರ ಕಾಲ ಮುಂತಾದುವುಗಳನ್ನೆಲ್ಲ ಹೇಳಿದ. 'ಈಗಿನ್ನೂ ಈ ಊರೇ ಸಣ್ಣದಾಗಿದೆ. ಮೊದಲು ಇದ್ದ ದೊಡ್ಡ ಊರನ್ನು ಸಹ ಇದರ ಮೇಲ್ಮಾಳಿಗೆಯಲ್ಲಿ ನಿಂತು, ಇಡಿಯದನ್ನೆನೋಡಲು ಒರುತ್ತಿತ್ತಂತೆ' ಎಂದು ಮುಂತಾಗಿ ಹೇಳಿದ. ನನ್ನ ಕೆಲಸವಾದ ಕಾರಣ ಅಲ್ಲಿ ಹೆಚ್ಚು ವೇಳೆ ನಿಲ್ಲದೆ ಅಲ್ಲಿಂದ ಬೇಗನೆ ಕಾಲ್ಕೆಗೆದೆ.

'ಜಯಂತಿ' ಸಣ್ಣಕತೆಗಳ ಮೇಲಾಟದ ನಿಯಮಗಳು

೧. ಕತೆಯು ಸ್ವತಂತ್ರವಾಗಿದ್ದು ಸಾಮಾಜಿಕಸಂಗತಿಯಿಂದ ಕೂಡಿದುದಿರಬೇಕು. ಐತಿಹಾಸಿಕಕತೆಗೆ ಈ ಮೇಲಾಟದಲ್ಲಿ ಸ್ಥಾನವಿಲ್ಲ.

೨. ಜಯಂತಿಯ ೫ ಪುಟಗಳಿಗೆ ವಿಾರದಷ್ಟು, ಎಂದರೆ ಕೈಬರಹದಲ್ಲಿ ಫೂಲ್‌ಸ್‌ಕ್ಯಾಪ್ ಅರ್ಧಹಾಳೆಗಳು ೧೦ಕ್ಕೆ ವಿಾರದಷ್ಟು ಕತೆಯಿರಬೇಕು.

೩. ಅಂದವಾದ ಸ್ಪಷ್ಟವಾದ ಅಕ್ಷರಗಳಿರಬೇಕಲ್ಲದೆ, ಮಾರ್ಜಿನ್ನು ಬಿಟ್ಟ ಹಾಳೆಯಲ್ಲಿ ಒಂದೆ ಕಡೆಗೆ ಬರೆದಿರಬೇಕು.

೪. ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು ದೊಡ್ಡವರು ಎಲ್ಲರೂ ಇದರಲ್ಲಿ ಭಾಗ ವಹಿಸಬಹುದು.

೫. "ಜಯಂತಿ ಸಣ್ಣ ಕತೆಗಳ ಮೇಲಾಟಕ್ಕಾಗಿ" ಎಂದು ಕೈಬರಹದ ಪ್ರತಿಗಳ ಮೇಲೆ ಸ್ಪಷ್ಟವಾಗಿ ಬರೆಯಬೇಕು.

೬. ಒಬ್ಬರೆ ಲೇಖಕರು ತಮ್ಮ ಎರಡು-ಮೂರು ಕತೆಗಳನ್ನೂ ಮೇಲಾಟಕ್ಕಾಗಿ ಕಳುಹಬಹುದು. ಆದರೆ ಎರಡೂ ಬಹುಮಾನಗಳು ಒಬ್ಬರಿಗೇ ದೊರೆಯಲಾರವು.

೭. ಕತೆಯನ್ನು ಕಳುಹಬೇಕಾದ ಕೊನೆಯ ದಿನವೆಂದರೆ ಅಗಸ್ಟ್ ೩೦ನೆಯ ತಾರೀಖು. ಸಪ್ಟಂಬರ್ ಸಂಚಿಕೆಯಲ್ಲಿ ಮೇಲಾಟದ ನಿರ್ಣಯವನ್ನೂ ಬಹುಮಾನ ಪಡೆದ ಕತೆಗಳನ್ನೂ ಪ್ರಕಟಿಸಲಾಗುವುದು.

೮. ಮಿಕ್ಕ ಕತೆಗಳಲ್ಲಿ ಪ್ರಕಟನಾರ್ಹವೆಂದು ಕಂಡುಬಂದ ಕತೆಗಳನ್ನು, ಲೇಖಕರ ಒಪ್ಪಿಗೆ ಪಡೆದು ಜಯಂತಿಯಲ್ಲಿ ಪ್ರಕಟಿಸಲಾಗುವುದು.

೯. ಬಹುಮಾನಕ್ಕೆ ತಕ್ಕ ಕತೆಗಳು ಬಾರದೆ ಇದ್ದಲ್ಲಿ, ಬಹುಮಾನ ಕೊಡದೆ ಇರುವುದಕ್ಕೂ ಬಂದ ಕತೆಗಳಲ್ಲಿ ಒಳ್ಳೆಯುದೆಂದು ಎನಿಸಿದುದಕ್ಕೆ ತಕ್ಕ ಮನ್ನಣೆ ಸಲ್ಲಿಸುವುದಕ್ಕೂ ಜಯಂತಿಯ ಸಂಪಾದಕ ಮಂಡಲಿ ತನ್ನ ಕಡೆಗೆ ಅಧಿಕಾರವನ್ನು ಇರಿಸಿಕೊಂಡಿದೆ.

೧೦. ಮೇಲಾಟಕ್ಕಾಗಿ ಕತೆಗಳನ್ನು ಕಳುಹುವವರು ಪ್ರವೇಶಧನವನ್ನೇನೂ ಕೊಡಬೇಕಾಗಿಲ್ಲ. ಕತೆಗಳು ಮರಳಿ ಬೇಕಾದರೆ ಅದಕ್ಕೆ ಅವಶ್ಯವಿದ್ದ ಅಂಚೆಯ ಚೀಟಿ ಕಳುಹಬೇಕು.

ಸಂಪಾದಕರು : **'ಜಯಂತಿ' ಧಾರವಾಡ**

೧೧೦ ಪರಮಾಣು

ಶ್ರೀ. ಜಿ. ಆರ್. ರಂಗಸ್ವಾಮಿ ಎಂ. ಎ.

ವಿಜ್ಞಾನಶಾಸ್ತ್ರದ ಪರಿಚಯವಿಲ್ಲದ ನಮ್ಮ ನಾಡಿನ ಜನಸಮೂಹದಲ್ಲಿ — ಇಂದಿನ ಈ ಐನೆಸು ಶತಮಾನದಲ್ಲಿಯೂ — ಆಧಿಭೌತಿಕ ಶಾಸ್ತ್ರದ ಬಗ್ಗೆ ಬಹಳ ಹೊಟ್ಟೆ ಮೂಢವಿಶ್ವಾಸಗಳು ನೆಲೆಯೂರಿಕೊಂಡಿವೆ. ಪೃಥ್ವಿ-ಅಪ್-ತೇಜ-ವಾಯು-ಆಕಾಶಗಳೆ ಸೃಷ್ಟಿಯ ಮೂಲ ಭೂತಗಳೆಂದು ತಿಳಿಯುವ ಸನಾತನಿಗಳು ನಮ್ಮಲ್ಲಿ ಇನ್ನೂ ಲೆಕ್ಕವಿಲ್ಲದಷ್ಟು ಜನರು. ತಿಳಿಯಲಾರದಂತಹ ವೈಜ್ಞಾನಿಕ ಕಾರ್ಯಗಳನ್ನೆಲ್ಲ 'ದೇವಲೀಲೆ' ಎಂದೋ, ಭೂತ-ರಾಕ್ಷಸಗಳ ಮಾಯೆಯೆಂದೋ ಭಾವಿಸುವ ಮುಗ್ಧ ಜನರು ಇನ್ನೂ ನಮ್ಮಲ್ಲಿ ಬಹುಸಂಖ್ಯಾಕರಿದ್ದಾರೆ. ಭಾಸ್ಕರಾಚಾರ್ಯನಂತಹ ಭಾರತೀಯ ಜ್ಯೋತಿರ್-ಗಣಿತವಿಜ್ಞಾನಿಯು, ಸೂರ್ಯನ ಸುತ್ತಲೂ ಭೂಮಿ ಮತ್ತು ಮಿಕ್ಕ ಗ್ರಹಮಾಲೆ ತಿರುಗುತ್ತಿರುವುದೆಂದು ಎಂದೋ ಸಿದ್ಧಪಡಿಸಿ ಸಾರಿ ಹೇಳಿದ್ದರೂ, ಇಂದು ಮನೆ-ಮನೆಗಳಲ್ಲಿಯೂ ನಡೆಯುವ ಪುರಾಣ-ಪುಣ್ಯಕಥೆಗಳಲ್ಲಿ 'ಮೂಲ ಕೂರ್ಮನ ಬೆನ್ನ ಮೇಲೆ ಜಲದಿಂ ಪೊ. ಅವನ ನಡುನೆತ್ತಿಯಮೇಲೆ ಪೃಥ್ವಿ, ಪೃಥ್ವಿಯ ನಟ್ಟ ನಡುವೆ ಮೇರುಪರ್ವತ, ಆ ಮೇರು ಪರ್ವತವನ್ನು ನಿತ್ಯವೂ ಸುತ್ತುತ್ತಿರುವರು ಸೂರ್ಯ-ಚಂದ್ರಾದಿ ಜ್ಯೋತಿರ್ದೇವತೆಗಳು' ಎಂಬ ಇವೆಲ್ಲ ಮಾತುಗಳನ್ನು ಹೇಳಿ, ಕೇಳಿ, ಸತ್ಯವನ್ನು ತಿಳಿದುಕೊಂಡೆವೆಂದು ಸಮಾಧಾನಪಡುವ ರೂಢಿ ನಮ್ಮಲ್ಲಿ ಅಖಂಡವಾಗಿ ಸಾಗಿದೆ. ಆಧುನಿಕ ಶಿಕ್ಷಣದ ಸಂಸ್ಕಾರ ಪಡೆದ ವಿಜ್ಞಾನಶಾಸ್ತ್ರಪರಿಚಿತರು ಕೂಡ, ಈ ಸನಾತನ ಸಿದ್ಧಾಂತಕ್ಕೆ ತಲೆವಾಗಿ ನಡೆಯುವುದನ್ನೂ ನಾವು ನೋಡಬಲ್ಲೆವು. ಈ ಅಂಧಶ್ರದ್ಧೆಗೆ ಇನ್ನೂ ನಮ್ಮಲ್ಲಿ ಎಷ್ಟು ಕಾಲದ ಪರೆಗೆ ಆಶ್ರಯ ಸಿಕ್ಕಬೇಕು?

ಹಿಂದಿನ ಕಾಲದ ವೈಜ್ಞಾನಿಕ ಸಿದ್ಧಾಂತ-ಗ್ರಂಥಗಳೆಲ್ಲ ಬಹುಜನಕ್ಕೆ ಬಾರದ ಸಂಸ್ಕೃತ ಭಾಷೆಯಲ್ಲಿ ಇರುತ್ತಿದ್ದುವು. ಅಲ್ಲದೆ ಆ ಕಾಲದ ಸಮಾಜರಚನೆಗನುಸಾರವಾಗಿ, ಮಿಕ್ಕ ಜನರು ಯಾವುದೇ ಒಂದು ಸತ್ಯಸಿದ್ಧಾಂತದ ಸಂಶೋಧನೆಗಾಗಿ ಸ್ವತಂತ್ರವಿಚಾರ ಮಾಡುವ ಕಾರಣವೂ ಇರಲಿಲ್ಲ. ಭೌತಿಕರೀತಿಯ ಸಂಕಲ್ಪನೆ ರಾಜರಿಂದ ಸಿಕ್ಕುತ್ತಿದ್ದಿತು; ಆಧ್ಯಾತ್ಮಿಕ ರೀತಿಯ ಸಮಾಧಾನ ಪುರೋಹಿತ ವರ್ಗ ಹೇಳುವ ಭಕ್ತಿ-ಪೂಜೆ-ಧ್ಯಾನಗಳ ಮೂಲಕ ದೊರೆಯುತ್ತಿದ್ದಿತು. ಇದರಿಂದ ಸತ್ಯದ ಸಂಶೋಧನೆಯ ವಿಚಾರದಲ್ಲಿ ಬಹುಜನರಿಗೆ ಅವಕಾಶವೆ ಇರಲಿಲ್ಲ. ಇದರೆ ಇಂದು ನಾವು ಬದುಕುತ್ತಿರುವುದು ಪಾಶ್ಚಾತ್ಯ ಪರಂಪರೆಯ ಸಂಸ್ಕೃತಿ ಭಕ್ತಿದ ಕೆಳಗೆ. ವೈಯಕ್ತಿಕ ಜೀವನಕ್ಕೆ ಇದರಲ್ಲಿ ಸ್ವಾತಂತ್ರ್ಯ ಹೆಚ್ಚು. ಒಂದೊಂದು ವ್ಯಕ್ತಿಯೂ, ಎಲ್ಲ ಒಗೆಯ ಜ್ಞಾನ ಪರಿಚಯದಿಂದ, ಸಮಾಜದ ಸಂಸ್ಕೃತಿಯ ಮಟ್ಟವನ್ನು ಎತ್ತರಿಸಬೇಕಾಗುತ್ತಿರುತ್ತದೆ. ಆದುದರಿಂದಲೆ ಭೌತಿಕ ವಿಜ್ಞಾನದ ಸಿದ್ಧಾಂತಗಳನ್ನೇ ಆಗಲಿ, ಆಧ್ಯಾತ್ಮಿಕ ವಿಜ್ಞಾನದ ಸಿದ್ಧಾಂತವನ್ನೇ ಆಗಲಿ, ಜನತೆಯ ಮಾತೃಭಾಷೆಯಲ್ಲಿಯೆ ಒದಗಿಸಿಕೊಡುತ್ತಿದ್ದರೆ, ಸಾಮೂಹಿಕ ಸಂಸ್ಕೃತಿ-ಪ್ರಚಾರಕ್ಕೆ ತುಂಬ ಅನುಕೂಲ. ಆಧ್ಯಾತ್ಮಿಕ-ಯುಗದ ಭಾರತೀಯ ಗ್ರಂಥಗಳೆಲ್ಲ ಗೀರ್ವಾಣಭಾಷೆಯಲ್ಲಿದ್ದರೆ, ಇಂದಿನ ವಿಜ್ಞಾನಯುಗದ ಗ್ರಂಥಗಳೆಲ್ಲ ಪಾಶ್ಚಾತ್ಯ ಭಾಷೆಯಲ್ಲಿವೆ. ವಿಜ್ಞಾನವೆ ಇಂದಿನ ಜೀವನದ ಮೂಲಸೂತ್ರವಾಗಿದ್ದುದರಿಂದ ಎಲ್ಲ ಜನರಿಗೂ ಆ ಶಾಸ್ತ್ರದ ವಿವಿಧಮುಖದ ಪರಿಚಯ ಅವಶ್ಯ. ಅಂತಹ ಪರಿಚಯಕ್ಕೆ ದೇಶೀಯ ಭಾಷೆಯಲ್ಲಿ ವಿಜ್ಞಾನ ಶಾಸ್ತ್ರದ ವಿಷಯದಲ್ಲಿ ವಿವಿಧಗ್ರಂಥ ನಿರ್ಮಾಣವಾಗುವುದು ಅತ್ಯಗತ್ಯ. ಶ್ರೀಮಾನ್ ಜೀ. ಆರ್. ರಂಗಸ್ವಾಮಿಯವರು ಈ ಗ್ರಂಥ-ನಿರ್ಮಾಣದ ಮೂಲಕ, ಆ ಸಾಧನದ ಕೊರತೆಯನ್ನು ಕಳೆಯುವ ಕೆಲಸಕ್ಕೆ ಪ್ರೋದ್ಬಲಿಸಿದ್ದಾರೆ. ಅದಕಾಗಿ ಕನ್ನಡಿಗರೆಲ್ಲ ಅವರಿಗೆ ಕೃತಜ್ಞರಾಗಿರಬೇಕು.

ಪ್ರಸ್ತುತ 'ಪರಮಾಣು' ಗ್ರಂಥವು ವಿಜ್ಞಾನಶಾಸ್ತ್ರದ ಇಂದಿನ ಸಿದ್ಧಾಂತದಂತೆ ಸೃಷ್ಟಿಗೆ ಮೂಲವೆಂದಿದ್ದ 'ಪರಮಾಣು-ವಾದ' ದ ಇತಿಹಾಸವಾಗಿದ್ದು, ಬೇರೆ ಬೇರೆ ಒಂಭತ್ತು ಅಧ್ಯಾಯಗಳಲ್ಲಿ ವಿಭಾಗಿತವಾಗಿದೆ. ಆ ಹನ್ನೆರಡು ಅಧ್ಯಾಯಗಳ ತಲೆಬರಹಗಳನ್ನಿಲ್ಲಿ ಹೇಳಿಬಿಟ್ಟರೆ ಆ ಆ ಅಧ್ಯಾಯಗಳಲ್ಲಿ ಅಡಕವಾದ ವಿಷಯಗಳು ಗೊತ್ತಾಗುವವು. "೧. ವಿಷಯದ ಸ್ಥೂಲ ಪರಿಚಯ ೨. ಜಡತ್ವ ೩. ಸಂಯುಕ್ತ ಮೂಲವಸ್ತುಗಳು; ಪರಮಾಣು ಸಿದ್ಧಾಂತ ೪. ಪದಾರ್ಥಗಳ ಮೂರು ಸ್ಥಿತಿಗೆ ಕಾರಣವೇನು? ೫. ಪರಮಾಣುಗಳ ಗಾತ್ರ, ತೂಕ ಮತ್ತು ಸಂಖ್ಯೆ ೬. ಅಣುಗಳ ಅಳತೆಯನ್ನು ತಿಳಿಸುವ ಕೆಲವು ಪ್ರಯೋಗ

ಜುಲೈ ೧೯೪೧
೬-೧೧೬

ಗೆಳು ೬. ಕೆಲವು ಸಂದೇಹಗಳು ಮತ್ತು ಊಹೆಗಳು ೮ ವಿಜ್ಞಾನದ ಚರಿತ್ರೆ ಮತ್ತು ಸ್ವರೂಪ ೯. ಪರಮಾಣುಗಳ ಒಳಪರೀಕ್ಷೆ ೧೦. ಪರಮಾಣು ರಚನೆಯನ್ನು ತಿಳಿಸುವ ಕೆಲವು ಪ್ರಯೋಗಗಳು ೧೧. ಪರಮಾಣುವು ಶಕ್ತಿಯನ್ನು ಉತ್ಪನ್ನ ಮಾಡುವ ಕ್ರಮ ೧೨. ಉಪಸಂಹಾರ— ಈ ತಿಳಿವಿನ ಪರಿಣಾಮ " ಇವೇ ೮ ಹನ್ನೆರಡು ಅಧ್ಯಾಯಗಳು. ಸಂದರ್ಭಕ್ಕೆ ಬೇಕಾದ ಕೆಲವು ಜನ ವಿಜ್ಞಾನಿಗಳ ಚಿತ್ರಗಳೂ ಪ್ರಾಯೋಗಿಕ ಚಿತ್ರಗಳೂ ಅಲ್ಲಲ್ಲಿ ಇವೆ.

ವಿಜ್ಞಾನವನ್ನರಿಯದ ನಮ್ಮಲ್ಲಿ ಸೃಷ್ಟಿಯ ಮೂಲದ ವಿಷಯಕ್ಕೆ ಅನೇಕ ಮೂಢ-ಕಲ್ಪನೆಗಳಿವೆ. 'ಬ್ರಹ್ಮನು ಮಾಡಿದ' ಎಂದು ಒಂದು ಕಲ್ಪನೆಯಿದ್ದರೆ 'ಬ್ರಹ್ಮನೆಂದರೆಯೆ ಜಗತ್ತು' ಎಂದು ಇನ್ನೊಂದು ಕಲ್ಪನೆಯಿದೆ. ನಮ್ಮ ಹಳ್ಳಿಗರು ಕೂಡ 'ಸರಾಕಾರವಾಗ ನೀರನ ಹೊರತೂ ಇದ್ದಿದ್ದಿಲ್ಲ ಏನಾ! ನಿರು ಅಂದಾಽ ನೀರಿನ ರೂಪಾ ತೊಟ್ಟಿದ್ದ ಭಗವಾನಾ!' ಎಂದು ಹಾಡಿ ಸೃಷ್ಟಿಯ ರಚನೆಯನ್ನು ಬೋಧಿಸುತ್ತಿರುವರು. ಹಾಗೆಲ್ಲ ಹೇಳಿವವರು, ನಮ್ಮ ಕನ್ನಡ ನುಡಿಯಲ್ಲಿಯೆ ಇದ್ದ—ಸುಲಭವಾಗಿ ತಿಳಿಯುವಂತೆ ಒರೆದಿರುವ-ಇದರಲ್ಲಿಯ ವಿಷಯವನ್ನು,ಎಲ್ಲರೂ ಓದಿ ಮನನ ಮಾಡಿಕೊಳ್ಳಬೇಕು; ಸಪ್ರಯೋಗ ಸಪ್ರಮಾಣಗಳಿಂದ ಕಂಡುಹಿಡಿದ ವೈಜ್ಞಾನಿಕ ಸಿದ್ಧಾಂತಗಳನ್ನು ಅರಿತುಕೊಳ್ಳಬೇಕು.

ಇಂದಿನ ಕಾಲದಲ್ಲಿ ವಿಜ್ಞಾನವೆ ತಾರಕ, ವಿಜ್ಞಾನವೇ ಮಾರಕವಾಗಿ ಕಂಡಿತಿದೆ. ಅದರ ಪರಿಚಯವಿಲ್ಲದ ನಾಡು ನಾಡೇ ಅಲ್ಲ, ಮನುಷ್ಯರು ಮನುಷ್ಯರೇ ಅಲ್ಲ. ವಿಜ್ಞಾನ ಪರಿಚಯದ ಪ್ರಗತಿಯೆ ಇಂದಿನ ರಾಷ್ಟ್ರದ ಪ್ರಗತಿಗೆ ಮುಖ್ಯ ಲಕ್ಷಣವಾಗಿ ಕಂಡಿತಿದೆ. ಕನ್ನಡಿಗರು ನಾವು ೮ ಪ್ರಪಂಚದಲ್ಲಿ ಒಂದು ಅಡಿಯನ್ನು ಕೂಡ ಮುಂದಿಟ್ಟು ಹೋಗಿಲ್ಲ. ಎಂತಲೆ ನಾವು ದುಡಿದು ದನ್ನು ಇನ್ನೊಬ್ಬರಿಗೆ ತಿನ್ನಲು ಕೊಟ್ಟು, ನಾವೆಲ್ಲ ಉಪವಾಸದಿಂದ ಕೊರಗುತ್ತಲಿದ್ದೇವೆ. ಈ ಕೊರಗು ತಪ್ಪಬೇಕಾದರೆ ವಿಜ್ಞಾನಪರಿಚಯವೆ ತಕ್ಕ ಮದ್ದು. ಅಂತಹ ಪರಿಚಯಕ್ಕಾಗಿ ಇಂತಹ ಗ್ರಂಥಗಳು ರಾಶಿರಾಶಿಯಾಗಿ ಹೊರಟು, ಕನ್ನಡಿಗರ ಕೈಗೆ ಸಿಕ್ಕಬೇಕು. ಲೇಖಕರು ಬರೆದು ಚೆಲ್ಲಿದ್ದ ಈ ಗ್ರಂಥವನ್ನು, ಶಿವಮೊಗ್ಗೆಯ ಕರ್ನಾಟಕ ಸಂಘ ಬೇಗನೆ ಬೆಳಕಿಗೆ ತಂದಿದೆ. ಕನ್ನಡ ವಿಜ್ಞಾನಾಚಾರ್ಯರಾದ ಶ್ರೀಮಾನ್ ಬಿ. ವೆಂಕಟೇಶಾಚಾರ್ಯರು ಮುನ್ನುಡಿ ಬರೆದು ಗ್ರಂಥದ ಯೋಗ್ಯತೆಯನ್ನೂ ಉಪಯುಕ್ತತೆಯನ್ನೂ ಬಾಯಾರೆ ಕೊಂಡಾಡಿದ್ದಾರೆ. ಕಲಿತ ಕನ್ನಡಿಗರೆಲ್ಲರೂ


ಹಾರ್ಮೋನಿಯಂ ಶಿಕ್ಷಕ
ಈ ಪುಸ್ತಕದ ಸಹಾಯದಿಂದ ಫಿರಲ್, ಸಿತಾರ್, ಕೊಳಲು, ಬರಬರುಟಾ, ಹಾರ್ಮೋನಿಯಂ ಮೊದಲಾದ ವಾದ್ಯಗಳನ್ನು ಸಶಾಸ್ತ್ರವಾಗಿ ಕಿಷ್ಕಕಾಲ್ಲದೆ -ಕಲಿಯಲು ಉಪಯುಕ್ತವಾದದ್ದು- — ಸುಮಾರು ೨೦೦ — ಹಿಂದುಸ್ತಾನಿ ಟೀಪು, ಸ್ತಾಮೊಫೋನ ವಿಕಾರ್ಡಗಳಲ್ಲಿಯು ಪದಗಳ ನೋಟ. — ಕನಸಗಳಿರುವವು.
B.V. PHATAK, FORT - MIRAJ (S.M.C.)

ಈ ಗ್ರಂಥವನ್ನು ಕೊಂಡು ಓದಬೇಕು. ಮುಂದೆ ಕೂಡ ಬೇಗಬೇಗನೆ ಇಂತಹ ಶಾಸ್ತ್ರೀಯ ಗ್ರಂಥಗಳು ಪ್ರಕಟವಾಗಲಿಕ್ಕೆ ದಾರಿ ಮಾಡಿಕೊಡಬೇಕು. ಈ ಸಲದ ದೇವರಾಜ ನಿಧಿಯ ಪೊದಲನೆಯ ಬಹುಮಾನವು ಈ ಗ್ರಂಥಕ್ಕೆ ದೊರೆತದ್ದು ಸಂತೋಷದ ವಿಷಯ. —ವಿಜ್ಞಾನಿ

೯೦. ಜೇನು (ಕಥಾಸಂಗ್ರಹ)

'ರಮಾನಂದ' ರು ಬರೆದುದು. ಧಾರವಾಡ ರಂಗಮಂಗ ರಂಜನೋದ್ಯಾನದಿಂದ ಪ್ರಕಟವಾಗಿವೆ.

ಕವೀಂದ್ರ ರವೀಂದ್ರರ ಐದು ಕತೆಗಳ ಅನುವಾದದ ಸಂಗ್ರಹವಿದು. ಇಂಗ್ಲಿಷ್ ಭಾಷೆಯನ್ನರಿತ ಕನ್ನಡಿಗರಿಗೆ ಸಾಕಷ್ಟು ಪರಿಚಯದವಾಗಿರುವ 'ಬಿಡಾಡಿ' 'ಕಾಬೂಲಿವಾಲಾ' 'ಮಾಸ್ಟರ್ ಮ್ಯಾಸೆ' 'ಪೋಸ್ಟ್ ಮಾಸ್ಟರ್' 'ಸುಭಾ' ಎಂಬ ಕತೆಗಳೆ ಇಲ್ಲಿ ಅನುವಾದಿತವಾಗಿ ಪ್ರಕಟವಾಗಿವೆ. ವಿಶ್ವ ಭಾರತೀಯ ಭಾಷೆಗಳಲ್ಲಿ ಶ್ರೀರವೀಂದ್ರರ ಕಥಾವಾಙ್ಮಯವು ಸಂಪೂರ್ಣ ಅನುವಾದಿತವಾಗಿ ಎಷ್ಟೋ ದಿನಗಳಾಗಿವೆಯಾದರೂ, ಕನ್ನಡಿಗರಿಗೆ ಅದು ಇನ್ನೂ ಅಪರಿಚಿತವಾಗಿಯೆ ಉಳಿದುಬಿಟ್ಟಿದೆ. ದಿವಂಗತ ಎಂ. ಎನ್. ಕಾಮತರು, ಶ್ರೀಮಾನ್ ಹೊಯಿಸಳರು, ಇನ್ನೂ ಒಬ್ಬಿಬ್ಬರು ಮಾತ್ರ ಎಲ್ಲಿಯೋ ಒಂದೆರಡು ಕಥಾಕೃತಿಗಳನ್ನು ಅನುವಾದಿಸಿ ಅಲ್ಲಿ ಇಲ್ಲಿ ನಿಯತಕಾಲಿಕಗಳಲ್ಲಿ ಪ್ರಕಟಿಸಿದ್ದಾರೆ. ಹಿಂದೆ ಎಂದೋ ಪ್ರಕಟವಾದ ಆ ಅನುವಾದಿತ ಕತೆಗಳು ಇಂದಿನವರ ಕಣ್ಣಿಗೆ ಬೀಳುವುದೆಂದರೆ ಅಪರೂಪವೆ. ಜಗತ್ತಿನ ಕಥಾವಾಙ್ಮಯದಲ್ಲಿಯೆ ಶ್ರೀರವೀಂದ್ರರ ಪೆಸರು ಮೇಲಿನ ಸ್ಥಾನದಲ್ಲಿ ಇದ್ದುದನ್ನು ನಾವು ನೋಡುತ್ತೇವೆ; ಕೇಳುತ್ತೇವೆ. ಅದರೆ ಕನ್ನಡ ವಾಚಕ ಲೋಕಕ್ಕೆ ಅವರ ಕಥಾವಾಙ್ಮಯದ ಸಂಪೂರ್ಣ ರುಚಿಯೆ ಗೊತ್ತಿರದಿರುವುದು ವಾಙ್ಮಯ ದೃಷ್ಟಿಯಿಂದ ದೊಡ್ಡದೊಂದು ಕೊರತೆ. ಈಗ 'ರಮಾನಂದ' ಅವರು ಐದೇ ಕತೆಗಳನ್ನಾದರೂ ಒಮ್ಮೆಲೆ ಓದಿ ಸವಿಯನ್ನು ಸವಿಯುವಂತೆ— ಒಳ್ಳೆಯ ಭಾಷೆಯಲ್ಲಿ— ಅನುವಾದಿಸಿ ಕೊಟ್ಟುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಇದರಂತೆಯೆ ರವೀಂದ್ರರ ಎಲ್ಲಕ್ಕೆಲ್ಲ ಕತೆಗಳನ್ನೂ ಕನ್ನಡಿಸಿ ಪ್ರಕಟಿಸಲೆಂದೆ ನಮ್ಮ ಹಾರೈಕೆ.

ಇದರಲ್ಲಿಯ ಐದೂ ಕತೆಗಳು ಇಂಗ್ಲಿಷಿಗೆ ಪರಿವರ್ತಿತವಾದುವುಗಳೆ. ಈ ಕನ್ನಡ ಅನುವಾದಗಳು ಇಂಗ್ಲಿಷ್ ಪರಿವರ್ತನೆಗಳನ್ನಾಶ್ರಯಿಸಿಯೆ ಆಗಿವೆಯೆಂದು ಎಸಿಸುವುದು. ಒಂಗಾಲಿಗಳು 'ಮಹಾಶಯ' ಎಂಬ ಪದವನ್ನು ಹೆಚ್ಚಾಗಿ ಉಪಯೋಗಿಸುವರು. ಅದರ ಜಾಸಪದ ರೂಪವು ಅವರಲ್ಲಿ

'ಮಾಶಯ್' ಎಂದಾಗಿದೆ. ಇಂಗ್ಲಿಷ ಅಕ್ಷರಗಳಲ್ಲಿ ಅದನ್ನು ಬರೆದಾಗ, ಅಪರಿಚಿತರು ಓದಿದರೆ 'ಮ್ಯಾಸೇ' ಎಂಬುದಾಗಿ ತಪ್ಪು ಉಚ್ಚಾರದಿಂದ ಓದುವರು. ಇಲ್ಲಿಯೂ 'ಮಾಸ್ಟರ್ ಮಾತಯ್' ಎಂದಿರುವ ಕತೆಯನ್ನು 'ಮಾಸ್ಟರ್ ಮ್ಯಾಸೆ' ಎಂದು ಕರೆದಿರುವರು. ಹೀಗಾಗದಿರಬೇಕಾದರೆ ಮೂಲ ಬಂಗಾಲಿ ಕತೆಗಳನ್ನು ಅನುವಾದಿಸುವುದು ಹೆಚ್ಚು ಒಳ್ಳೆಯದು; ಅದಿಲ್ಲದಿದ್ದರೆ ಬಂಗಾಲಿಗಳ ಉಚ್ಚಾರ ಪದ್ಧತಿಗಳನ್ನಾದರೂ ಅರಿತು ಕೊಳ್ಳಬೇಕು.

ಸಂ..ಕ

೭೭. ದೀಪಮಾಲೆ

ಬರೆದವರು: ಶ್ರೀ. ಸಿದ್ಧವನಹಳ್ಳಿ ಕೃಷ್ಣಶರ್ಮರು; ಪಿಂಚಿನಬಳ್ಳಿಯ ೩ನೆಯ ವರ್ಷದ ೩ನೆಯ ಕುಡಿ.

ಮಹಾತ್ಮಾ ಗಾಂಧಿಯವರ ಪ್ರಭಾವಳಿಗೆ ಸೇರಿದ ೧೫ ಜನ ಪುರುಷರತ್ನರ ಪರಿಚಯಗಳ ಸಂಗ್ರಹವಿದು. ಪರಿಚಯವೆಂದರೆ ಬರಿ ಕುಲ-ಗೋತ್ರ-ಹುಟ್ಟಿದೂರು ತಾಯಿ-ತಂದೆ-ಶಿಕ್ಷಣ-ಉದ್ಯೋಗ ಮೊದಲಾದುವಗಳ ಸ್ಥೂಲ ಪರಿಚಯವಲ್ಲ—ಅವರವರ ಸ್ವಭಾವ ಪರಿಚಯ; ಆ ಆ ವ್ಯಕ್ತಿಗಳ ವೈಶಿಷ್ಟ್ಯದ ಪರಿಚಯ.

ಲೇಖಕರು ವರ್ಧಾ ಆಶ್ರಮದಲ್ಲಿ ಗಾಂಧಿಯವರ ಬಳಿಯಲ್ಲಿ ಇರುವಾಗ, ಇಲ್ಲಿಯ ವ್ಯಕ್ತಿಗಳನ್ನೆಲ್ಲ ಹತ್ತಿರದಿಂದಲೆ ನೋಡಿದವರು; ಅವರೊಡನೆ ಮಾತನಾಡಿರುವರು; ಅವರೆಲ್ಲ ಸೇರಿ ವಿಚಾರವಿನಿಮಯ ಮಾಡುವುದನ್ನೂ, ವಾದ ಚರ್ಚೆ ನಡೆಯಿಸಿದುದನ್ನೂ, ನಗೆಯಾಟವಾಡಿದುದನ್ನೂ ಪ್ರತ್ಯಕ್ಷ ನೋಡಿದವರು. ಇವೆಲ್ಲವನ್ನೂ ಕಂಡು ಕೇಳಿನ ಕನ್ನಡಿಗರೆಷ್ಟೋ ಜನ ಇರಬಹುದು; ಆದರೆ ಶ್ರೀಮಾನ್ ಕೃಷ್ಣಶರ್ಮರ ಒಬ್ಬಿ-ಮನಸ್ಸುಗಳು ಛಾಯಾಗ್ರಾಹಕಯಂತ್ರದಂತೆ ಕಂಡುದೆಲ್ಲವನ್ನೂ ಪಟ್ಟಾಗಿ ಹಿಡಿದುಕೊಂಡಿವೆ; ಇಷ್ಟೇ ಅಲ್ಲ, ಅದನ್ನು ಇದ್ದುದಿದ್ದಂತೆ ಚಿತ್ರಿಸಿ ತೋರಿಸುವ ಶಬ್ದಚಿತ್ರಕೌಶಲವೂ ಅವರ ಕೈವಶವಾಗಿದೆ. ಈ ಅವರ ಕೌಶಲ, ಇಲ್ಲಿ ಚಿತ್ರಿತರಾದ ಮಹನೀಯರ ವ್ಯಕ್ತಿತ್ವಕ್ಕೆ ಒಂದು ಬಗೆಯ ಹೆಚ್ಚಿನ ಮೆರುಗನ್ನೇ ತಂದು ಕೊಟ್ಟಿದೆ.

ಕರ್ಣಪರಂಪರೆಯ ಅನೇಕ ಮಾತು-ಕತೆಗಳ ಮೂಲಕ, ಇಲ್ಲಿಯ ಕೆಲವು ವ್ಯಕ್ತಿಗಳನ್ನು ಸಂದೇಹದಿಂದಲೊ ತಿರಸ್ಕಾರದಿಂದಲೊ ನೋಡುವ ಕೆಲವು ಜನರೂ ನಮ್ಮಲ್ಲಿ ಇರುವರು. ಅಂತಹರು ಇದರಲ್ಲಿಯ ಸರೋಜಿನಿ, ಮೌಲಾನಾ ಅಬುಲ್ ಕಲಮ್ ಆಜಾದ್, ಜಮನಾಲಾಲ್ ಬಜಾಜ, ರಾಜೇಂದ್ರ ಪ್ರಸಾದ, ಪಟ್ಟಾಭಿಸೀತಾರಾಮಯ್ಯ, ಸರದಾರ್ ವಲ್ಲಭಭಾಯಿ, ರಾಜಗೋಪಾಲಾಚಾರ್ಯ ಇವರೆಲ್ಲರ ವ್ಯಕ್ತಿಪರಿಚಯಗಳನ್ನೊದಿದರೆ, ನಿಜವಾಗಿಯೂ ತಮ್ಮ ಸಂದೇಹ-ತಿರಸ್ಕಾರಗಳನ್ನು ತೆಗೆದುಹಾಕಬಹುದು; ಆದರ ನಿಷ್ಠೆಗಳ ಭಾವಗಾಣಿಕೆಯನ್ನವರಿಗೆ ಸಲ್ಲಿಸಬಹುದು. ಇಷ್ಟೊಂದು ಉದಾತ್ತ ವ್ಯಕ್ತಿತ್ವಗಳನ್ನು ಶ್ರೀ. ಕೃಷ್ಣಶರ್ಮರು ರೂಪಿಸಿ ತೋರಿಸಿದಾರೆ. 'ಕನ್ನಡದ ಕಿಡಿಗಳು' 'ವರ್ಧಾಯಾತ್ರೆ'ಗಳನ್ನೊದಿದವರಿಗೆ, ಶ್ರೀ. ಕೃಷ್ಣಶರ್ಮರ ಬೆಳ್ಳುಡಿಯ ಬೇರಗನ್ನೇನು ಬೇರೆಯಾಗಿ ಹೇಳಬೇಕಾಗಿಲ್ಲ. ಎಲ್ಲರೂ ಸಂಗ್ರಹಿಸಿ ಓದಬೇಕಾದ ಗ್ರಂಥವಿದು.

—ಬಿ. ಸಿ. ಎಸ್. ರಾವ್

ಸೇಫ್ಟಿ ರೇಝರ್ ೨ ಬ್ಲೇಡು ಸಹೀತ, ೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ವಾಲಿಟಿ!
೫ ಬ್ಲೇಡಿಗೆ ೬ ಆಣೆಗಳು.

ಸಾದರ ಸ್ವೀಕಾರ

★

೧೭. **ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ** (ಅನುವಾದಿತ ಗ್ರಂಥ) ಅನುವಾದಕರು ಶ್ರೀಮಾನ್ ಎಸ್.. ವಿ. ಕೃಷ್ಣಮೂರ್ತಿ ರಾಯರು. ಶಿವಮೊಗ್ಗೆಯ 'ಕಾವ್ಯಾಲಯ'ದಿಂದ ಪ್ರಕಟಿತವಾಗಿದೆ. ಕ್ರೌ. ಅ. ೧೪೪+೧೪೪ ಪುಟ. ಬೆಲೆ ೦-೮-೦.

೧೮. **ಬಿಡುಗಡೆಯ ಬೆಲೆ** (ಒಬ್ಬ ಸ್ವಯಂ ಸೇವಕನ ದಿನಚರಿ). ಶ್ರೀ. ವಡಗೇಸಹಳ್ಳಿ ಆಶ್ವತ್ಥ ನಾರಾಯಣರಾಯರು ಬರೆದುದು. ಧಾರವಾಡದ ಮನೋಹರ ಗ್ರಂಥಮಾಲೆಯ ೪೬ನೆಯ ಕುಸುಮ; ಕ್ರೌ. ಅ. ೧೪೫ ಪುಟಗಳು. ಬೆಲೆ ೦-೧೪-೦.

೧೯. **ಮಗಳಿಗೆ ತಂದೆಯ ಓಲೆಗಳು** (ಅನುವಾದಿತ ಗ್ರಂಥ) ಪಂಡಿತ ಜವಾಹರ್ ಲಾಲರು ತಮ್ಮ ಮಗಳಿಗೆ ಬರೆದಓಲೆಗಳನ್ನು, ಕಲಬುರ್ಗಿಯ ವಕೀಲರಾಧ ಶ್ರೀಮಾನ್ ಕಪಟ್ರಾಳ ಕೃಷ್ಣರಾಯರು ಕನ್ನಡಿಸಿದ್ದಾರೆ. ಹುಬ್ಬಳ್ಳಿಯ ಸಾಹಿತ್ಯಭಾಂಡಾರದಿಂದ ಪ್ರಕಟವಾಗಿದೆ. ಕ್ರೌ. ಅ. ೧೬೬+೧೧೫ ಪುಟ ಬೆಲೆ ೧-೨-೦.

೨೦. **HUMAN AFFAIRS** (ಇಂಗ್ಲಿಷ ಮಾಸಪತ್ರಿಕೆ): ಕಾರ್ಯಕಾರಿ ಸಂಪಾದಕರು ಶ್ರೀ. ಟಿ. ಆರ್. ಎ. ಪೈ. ಅವರು. ಸಂಪಾದಕರು ಶ್ರೀ. ಕೇ. ಹೈದರ್ ಅವರು. ಪ್ರಕಾಶನ ಸ್ಥಳ ಉಡುಪಿ. ಡೆ. ೪೮ ಪುಟಗಳು. ವಾರ್ಷಿಕ ಚಂದಾ ೨-೪-೦; ಒಡಿ ಸಂಚಿಕೆಗೆ ೦-೩-೦.

೨೧. **ನಾಟ್ಯಕಲ** (ತೆಲುಗು ಮಾಸಪತ್ರಿಕೆ). ಸಂಪಾದಿಕಾ ಶ್ರೀಮತಿ ಸಿ. ಪದ್ಮಾವತಿದೇವಿ. ಕ್ರೌ. ೪೦ ಪುಟಗಳು; ವಾ. ಚಂ. ೨-೦-೦. ಪ್ರಕಾಶಕರು ಆಂಧ್ರನಾಟಕ ಕಲಾ ಪರಿಷತ್ತು, ತ್ಯಾಗರಾಯನಗರ, ಮದ್ರಾಸು.

ನಗೀಗೆ ನೇವಿದ್ಯ

ಹೊಟ್ಟೆಯೊಳಗಿನ ಪೂಜೆ

ಮಾಸ್ತರು:—ಎಲೋ ಗುಂಡ್ಯಾ, ಇದೇನು ನಿನ್ನ ತಲಿ ? ಇಲ್ಲೆ 'ಕ' ದ ಹೊಟ್ಟೀ ಒಳಗ ಪೂಜೀನಕ ಇಲ್ಲಲ್ಲಾ !

ಗುಂಡ :— ಹಾದ್ರೀ ಮಾಸ್ತರ್ರ ! ಆ ಪೂಜಿ ಪೇನ್ಸಿಲಿನ ಹೊಟ್ಟ್ಯಾಗಕ ಉಳಿದು ಬಿಟ್ಟಕದರಿ !

* * *

ಉಳಿತಾಯದ ಕಲ್ಪನೆ

" ಅಪ್ಪಾ ನನಗೊಂದು ಒಳ್ಳೇ ಕಲ್ಪನಾ ಹೊಳದಕದ. ಅದರಿಂದ ಎಷ್ಟೋ ಹಣದ ಉಳಿತಾಯ ಆಗತಕ್ಕದಂತ ನನಗ ಖಾತ್ರೀ ಅದ !"

" ಛಲೆ ಛಲೆ ! ಅದ್ಯಾವದೋ ಗುಂಡ್ಯಾ ನಿನ್ನ ತಲೀಯೊಳಗಿನ ಕಲ್ಪನಾ ? "

" ನೋಡು ಅಪ್ಪಾ, ನನಗೊಂದು ಸೈಕಲ್ಲು ಕೊಂಡುಕೊಟ್ಟು ಬಿಡು; ಅಂದರ ಆ ಮ್ಯಾಲ ನನಗಾಗಿ ಕಾಲಸುರಿಕೊಳ್ಳೂ ಕಾರಣಕ ಇಲ್ಲ!"

* * *

ಇವರಲ್ಲ !

ವನಜಾ:— ಏನು ಲಿಲೀ, ನಿಮ್ಮ ಯಜಮಾನರು ಹೊಸ ಡ್ರೆಸ್ಸು ಮಾಡಿಸಿದ್ದಾರೇನು ? ಕ್ಯಾಪಿನ ಕೂದಲನ್ನು ಬೇರೆಯ ರೀತಿಯಲ್ಲಿ ಕತ್ತರಿಸಿದ್ದಾರೇನು ?

ಲಿಲಿ :— ಇಲ್ಲ ಇಲ್ಲ, ಏನೂ ಇಲ್ಲ !

ವನಜಾ :—ಹಾಗಾದರೆ, ಪೊನ್ನೆ ನಾನು ನೋಡಿದಂತೆ ಇಲ್ಲವಲ್ಲಾ ಇವರು ?

ಲಿಲಿ :— ಹ ಹ ಹ ! ಹಾಂಗ ಹ್ಯಾಂಗ ಇರಬೇಕಕ ವನಜಾ ? ಪೊನ್ನೆ ನೀನು ನೋಡಿದವರು ಇವರಲ್ಲಾ ! ಇವರು ಬೇರೆಯವರು !

ಹಿಂದಿನಕಾಲದ ಅತ್ತೆ-ಸೊಸೆ !

ಅತ್ತೆ-(ಸೊಸೆಗೆ):— ನಾನು ನಿನ್ನಷ್ಟು ಇದ್ದಾಗ ನೋಡು, ಬೆಳಗು ಅಗೂದರೊಳಗ ಅಂದರ ಎರಡು ಸೇರು ಜೋಳಾ ಬೀಸಿ ಇಡತಿದ್ದೆ. ಅಷ್ಟರೊಳಗನ ನಮ್ಮ ಅತ್ತೆವರು ಎದ್ದು ನದಿಗೆ ಹೋಗಿ, ಒಂದು ಮಟ್ಟಲೇ ಮಟ್ಟ ಬಗೂಣಾ ಒಕ್ಕೊಂಡು ಬರತಿದ್ದರು. ಈಗೇನಕ ನಮ್ಮವ್ವಾ; ಇತ್ತಿತ್ತಲಗಿನ ಸೊಸೆಂದರು ನೀವಂತೂ....

ಸೊಸೆ :— ಹಿಂದಿನ ಕಾಲದೊಳಗಿನ ಅತ್ತೆಂದಿರು ಸೊಸೆಂದಿರ ಜೋಡೀನಕ ಕೆಲಸಾ ಮಾಡತಿದ್ದರನ್ರಿ ಹಾಂಗಾದರ !

ಸಂಭಾವಿತತನದ ನ್ಯಾಖ್ಯೆ

"ಏನ್ರೀ,ಸೆಟ್ಟರಕ; ಇದೇನು ಮನಿಗೆ ಬಲ್ಲು ಕೊಟ್ಟು ಅಳನ್ನೇ ಕಳಿಸಿಬಿಟ್ಟಿದ್ದೀರಲ್ಲಾ ?"

"ಹಾಂಗೇನೂ ಇಲ್ರೀ ರಾಯರಕ; ಸಂಭಾವಿತ ಜನರ ಮನಿಗಳಿಗೆ ನಾವೇನೂ ಹಾಂಗ ಮನುಷ್ಯರನ್ನ ಕಳಸತಿರೂದಿಲ್ಲ !"

" ಹಾಂಗಾದರ.... "

"ಅಂದ್ರ ನೋಡ್ರಿ; ಉದ್ದರಿ ಒಯ್ದವರು ಹೇಳಿದ ಮುದ್ದಲಿಗೆ ಸರಿಯಾಗಿ ಹಣತಂದು ಕೊಡತಿದ್ದರಕನಕ ಅವರನ್ನ ಸಂಭಾವಿತರಂತ ನಾವು ತಿಳಕೋತಿರತೀವೇನ್ರಿ ರಾಯರ !"

* * *

ಪ್ಯಾಂಗನ ಅಂತ !

ತಂಗಿ:— ಅಕ್ಕಾ ಏಲಾಸರಾಯನ ಪ್ರೇಮ ಈ ಪೊದಲು ಇನ್ನಾರೊಂದಿಗಾದರೂ ಇದ್ದಿರಬಹುದೇನು ?

ಅಕ್ಕ:— ಸ್ಪಷ್ಟವಾಗಿ ಕೇಳಿಬಡಬಾರದೇ ಅವರನ್ನೇ! ಹೆದರಿಕೇನು ನಿನಗ ?

ತಂಗಿ:— ಹಾಂಗೇನೂ ಹೆದರಿಕೆ ಇಲ್ಲ ಖರೇ, ಆದರ ಅದೇ ಪ್ರಶ್ನವನ್ನ ಅತ ನನಗೆ ಕೇಳಿದರ ಹ್ಯಾಂಗಕ ಅಂತ !

* * *

ನಂದೇನ್ ತಪ್ಪು ಹೇಳ್ರಿ !

ಹೊಸತಾಗಿ ಬಂದ ಕೆಲಸದಾಕೆಯನ್ನು ಕುರಿತು ಗದ್ದರಿಸುವ ಧನಿಯಲ್ಲಿ ಮನೆಯಾಕೆ ಹೇಳಿದಳು :

"ಏನಕ ರಾಮವ್ವಾ, ನೋಡಿದೇನು ಇಲ್ಲೆ ಈ ನಾಗೊಂದಿಗೀಮ್ಯಾಲೆ.. ಆರು ತಿಂಗಳ ಕಸಾ ಹಾಂಗಕ ಬಿದ್ದುಬಿಟ್ಟದ !"

"ಅಲ್ರೀ ಬಾಯಾವರಕ, ನಾ ನಿಮ್ಮ ಮನೀಗ ಕೆಲಸಕ್ಕ ಬಂದು ಈಗೆಲ್ಲೋ ೧೫ ದಿನಾ ಆತು. ಹೀಂಗಿರುವಾಗ, ಆರು ತಿಂಗಳ ಹಿಂದಿನ ಕಸಾ ಇದ್ದರ ನಂದೇನು ತಪ್ಪು ಹೇಳ್ರಿ !

* * *

ಎಂಥಾ ಟಿಕೀಟು ?

ಒಬ್ಬ ಹಳ್ಳಿಗ ಟಿಕೀಟು ಬೇಕೆಂದು ಅಂಚೆಯ ಆಫೀಸಿಗೆ ಬಂದ. ಟಿಕೀಟು ಕೊಡುವ ಕಾರಕೂನ ಕೇಳಿದ :

"ಏನಪಾ, ನಿನಗ ಎಂಥಾ ಟಿಕೀಟು ಬೇಕು ?"

"ಇದೇನ್ರೀ ಹೀಂಗ ಕೇಳತೀರಿ ನೀವು ? ಪತ್ರಕ್ಕ ಹಚ್ಚೂ ತಿಕೀಟು ಕೊಡರೀ ರಾಯರ! ನಿಮ್ಮ ಹಂತೇಲೇನು ಸೀನೇಮಾ—ನಾಟಕದ ತಿಕೀಟು ಕೇಳಾಕ ಬರತಾರೇನ್ರಿ ಯಾರಾರ!"

* * *

ಮಾತಿನಂತೆ ನಡೆದ ಮಗಳು !

ತಾಯಿ:—ಅಲ್ಲಕ ಗೋದೀ, ಇಲ್ಲಿ ಇಟ್ಟ ಉಂಡೀ ಎಲ್ಲಾ ತಿಂದುಬಿಟ್ಟೀದೀ ? ಹೇಳು ಯಾರನ್ನ ಕೇಳಿ ತೊಗೊಂಡಿ ನೀನು ?

ಗೋದಿ:— ಏನಕ ಅವ್ವಾ, ಪೊನ್ನೆ ನಿ'ನಕ ಅಂದೆಲ್ಲಾ ನಾ ಕೇಳಿದಾಗ : 'ಇನ್ನೆನ್ನೆಮ್ಮೆ ಕೇಳಿದೆಂದರ ನೋಡು, ನಿನ್ನ ತಲೀ ಒಡದುಬಿಡತೀನಾ' ಅಂತ ! ಅದಕ್ಕಕ ನಾ ಕೇಳದೇನೇ ತಿಂದುಬಿಟ್ಟೆ !



ಮಹತ್ವದ ಘಟನೆ

ಕಳೆದ ತಿಂಗಳ ೧೬ನೆಯ ತಾರೀಕಿಗೆ ಲಂಡನದಲ್ಲಿ ಅತ್ಯಂತ ಮಹತ್ವದ್ದೊಂದು ಘಟನೆ ಜರುಗಿತು. ಇಡಿಯ ಜಗತ್ತಿನ ರಾಜಕಾರಣದ ಮೇಲೆ ಮತ್ತು ಆಂತರರಾಷ್ಟ್ರೀಯ ಪರಿಸ್ಥಿತಿಯ ಮೇಲೆ ಮಹತ್ವದ ಪರಿಣಾಮವನ್ನು ಉಂಟುಮಾಡಬಹುದಾದ ಘಟನೆಯದು. ಯುರೋಪದಲ್ಲಿ ಜರ್ಮನಿಗೆ ಇದಿರಾಗಿ ನಿಂತ ಎಲ್ಲ ರಾಷ್ಟ್ರಗಳ ಸರಕಾರಗಳೂ ಲಂಡನದಲ್ಲಿ ಜೂನ ೧೬ಕ್ಕೆ ಸಭೆ ಸೇರಿಸಿ, ಸದ್ಯದ ಯುದ್ಧದಲ್ಲಿ ತಮ್ಮ ಧ್ಯೇಯ-ಧೋರಣಗಳು ಯಾವುವೆಂಬುದನ್ನು ಸಾರಿವೆ. ಗ್ರೇಟಬ್ರಿಟನ್, ಆಯರ್ಲಂಡ್, ಕಾನಡಾ, ಬೆಲ್ಜಂ, ಡೆನ್ಮಾರ್ಕ್, ಹಾಲಂಡ್, ಲಕ್ಸೆಂಬೂರ್ಗ್, ನಾರ್ವೆ, ಪೋಲಾಂದ, ಗ್ರೀಸ್, ಯುಗೊಸ್ಲಾವಿಯಾ ದೇಶಗಳ ಸರಕಾರಪ್ರತಿನಿಧಿಗಳು ಮತ್ತು ಜೆಕೊಸ್ಲೊವಾಕಿಯಾದ ತಾತ್ಕಾಲಿಕ ಸರಕಾರ, ಫ್ರಾನ್ಸಿನ ಸ್ವತಂತ್ರಪಕ್ಷವಾದ ದಿ ಗಾಲ್ ಇವರ ಪ್ರತಿನಿಧಿ— ಈ ರೀತಿ ಸಭೆಸೇರಿತ್ತು. ಇಂಗ್ಲಂಡವು ತನ್ನ ಯುದ್ಧಧ್ಯೇಯವನ್ನು ಸಾರಬೇಕೆಂಬ ಬೇವಿಕೆ ಬೆಳೆಯುತ್ತಲಿದ್ದ ನಮ್ಮಲ್ಲಿ, ಈ ಸಭೆಯ ನಿರ್ಣಯಕ್ಕೆ ಒಂದು ರೀತಿಯ ಮಹತ್ವವಿದೆ.

ಸಂಕುಚಿತ ಸ್ವಾರ್ಥ

ಈ ಸರಕಾರಗಳು ಮೊದಲು 'ನಾಸ್ಸಿ' ನೀತಿಯನ್ನು ಖಂಡಿಸಿವೆ; ಆ ಮೇಲೆ ಅದನ್ನು ಕೊನೆಯವರೆಗೂ ಪ್ರತಿಭಟಿಸುವ ತಮ್ಮ ನಿರ್ಧಾರವನ್ನು ಸಾರಿವೆ; ಮತ್ತು ಮೂರನೆಯದಾಗಿ ಹೀಗೆ ಅಭಿಪ್ರಾಯಪಟ್ಟಿವೆ:—

'Thirdly, that he only true bases of enduring peace is the willing co-operation of free peoples in a world in which, relieved of the menace of aggression, all may enjoy economic and social security and that it is their intention to work together with other free peoples both in war and peace for this end.

'ಶಾಶ್ವತವಾದ ಶಾಂತಿ ನೆಲೆಗೊಳ್ಳಬೇಕಾದರೆ ಶಕ್ತಿಯು ಪುಂಡಾಟಿಕೆ ಇಲ್ಲದಂತಾಗಿ, ಜಗತ್ತಿನ ಎಲ್ಲ ಸ್ವತಂತ್ರ ಜನಾಂಗಗಳು ಆರ್ಥಿಕ ಮತ್ತು ಸಾಮಾಜಿಕ ಸುರಕ್ಷಿತತೆಯಿಂದ ಮತ್ತು ಸ್ವಸಂತೋಷದಿಂದ ಪರಸ್ಪರ ಸಹಕಾರಬುದ್ಧಿಯಿಂದ ನಡೆಯಬೇಕೆಂದೂ ಈ ಧ್ಯೇಯಕ್ಕಾಗಿ ಮಿಕ್ಕ ಸ್ವತಂತ್ರ ಜನಾಂಗಗಳೊಡನೆ ಯುದ್ಧಕಾಲದಂತೆ ಯುದ್ಧ ಮುಗಿದ ಮೇಲೂ ದುಡಿಯಲು ತಮ್ಮ ಇಚ್ಛೆಯಿದೆ ಎಂದೂ ಈ ಸಭೆಯನ್ನು ಸೇರಿಸಿದವರು ಅಭಿಪ್ರಾಯಪಡುತ್ತಾರೆ.'

ಈ ಗೊತ್ತುವಳಿಯನ್ನು ಓದಿದಾಕ್ಷಣ, ಇಲ್ಲಿ ಉದಾತ್ತ ವಾದೊಂದು ಧ್ಯೇಯವಿದೆ ಎಂದು ಯಾರಿಗಾದರೂ ತೋರಬಹುದು. ಆದರೆ ಸೂಕ್ಷ್ಮವಾಗಿ ನೋಡಿದಲ್ಲಿ ಇದು ಅತ್ಯಂತ ಸಂಕುಚಿತ ದೃಷ್ಟಿಯ ಸ್ವಾರ್ಥಪರಧ್ಯೇಯವಿರಬಹುದೆ ಎಂಬ ಸಂಶಯವೆ ಬಲಗೊಳ್ಳುವುದು.

ಶಬ್ದಗಳೆ ಸಾಕ್ಷಿ

ಈ ಗೊತ್ತುವಳಿಯಲ್ಲಿ ಇದ್ದುದು ಏನು? ಸರ್ವಾಧಿಕಾರವನ್ನು ಹೊಡೆದೋಡಿಸಿ ಸ್ವಾತಂತ್ರ್ಯತತ್ವವನ್ನು ನೆಲೆಗೊಳಿಸಬೇಕೆಂಬ ವಿಚಾರದ ಸ್ಪರ್ಶವೆ ಇಲ್ಲಿ ಇರುವುದಿಲ್ಲ. 'ಜಗತ್ತಿನ ಎಲ್ಲ ಸ್ವತಂತ್ರ ಜನಾಂಗಗಳು' ಎಂಬುದಕ್ಕೆ ಯಾವ ಅರ್ಥವಿದೆ? ಸದ್ಯಕ್ಕಂತೂ ಯುರೋಪದಲ್ಲಿ ಇಂಗ್ಲಂಡ್, ರಶಿಯಾ, ತುರ್ಕಸ್ತಾನಗಳನ್ನು ಬಿಟ್ಟು ಯಾವ ರಾಷ್ಟ್ರವೂ ಸ್ವತಂತ್ರವಿಲ್ಲ. ರಶಿಯಾ-ತುರ್ಕಸ್ತಾನಗಳು ಈ ಸಭೆಯಲ್ಲಿ ಪಾಲುಗಾರರಾಗಿಲ್ಲ. ಆದ್ದರಿಂದ 'ಶಕ್ತಿಯು ಪುಂಡಾಟಿಕೆ ಇಲ್ಲದಂತಾಗಿ' ಎಂಬ ಶಬ್ದಗಳನ್ನು ಜೋಡಿಸಿವೆ. ಶಕ್ತಿಯು ಪುಂಡಾಟಿಕೆ ಹೋದರೆ, ಫ್ರಾನ್ಸ್-ಬೆಲ್ಜಂ-ಡೆನ್ಮಾರ್ಕ್ ಮುಂತಾದ ಹಿಟ್ಲರನು ಆಕ್ರಮಿಸಿದ ಎಲ್ಲ ರಾಷ್ಟ್ರಗಳು ಸ್ವತಂತ್ರವಾಗುವುವು. ಅಂತೂ 'ಜಗತ್ತಿನ' ಎಂದರೆ 'ಯುರೋಪ'ದ ಎಂದೂ, 'ಎಲ್ಲ' ಎಂದರೆ 'ಅಲ್ಲಿ ಸೇರಿದವರಿಷ್ಟೆ' ಎಂದೂ ಅರ್ಥವಾಗುವುದು. ಇದೇ ಅರ್ಥವೆ ಅಭಿಪ್ರೇತವಾಗಿದೆ ಎಂಬುದಕ್ಕೆ ಮುಂದಿನ ವಾಕ್ಯದ ಸಾಕ್ಷ್ಯವಿದೆ. ಇಲ್ಲವಾದರೆ ಆ ವಾಕ್ಯದಲ್ಲಿ 'ಮಿಕ್ಕ ಸ್ವತಂತ್ರಜನಾಂಗಗಳೊಡನೆ' ಎಂಬ ಪದವೆ ಬರುತ್ತಿರಲಿಲ್ಲ. 'ತಾವು ಮೊದಲು ಸ್ವಾತಂತ್ರ್ಯವನ್ನು ದೊರಕಿಸಬೇಕು ಆ ಮೇಲೆ ಮಿಕ್ಕ ಸ್ವತಂತ್ರ ಜನಾಂಗಗಳೊಡನೆ ಸಹಕರಿಸಬೇಕು' ಎಂಬುದೆ ಇವರ ಧ್ಯೇಯವಾಗಿದೆ.

'ಮಿಕ್ಕ' ಎಂದರೆ ಮತ್ತಾರು?

'ಮಿಕ್ಕ ಸ್ವತಂತ್ರಜನಾಂಗಗಳು' ಎಂದೊಡನೆ ಹೊಸತಾಗಿ ಯಾರಿಗಾದರೂ ಸ್ವಾತಂತ್ರ್ಯ ದೊರಕೀತೆಂಬ ಅರ್ಥವಿಲ್ಲ.

ತತ್ತ್ವದಲ್ಲಿ ಭಿನ್ನಾಭಿಪ್ರಾಯ ಅಶಕ್ಯವಾಗಿ ಕೇವಲ ವ್ಯಕ್ತಿಯನ್ನೆ ಅವಲಂಬಿಸಬೇಕಾದಷ್ಟು ಪಕ್ಷಗಳಿವೆ; ವ್ಯಕ್ತಿ ವ್ಯಕ್ತಿಗಳ ಮಹತ್ತ್ವಾಕಾಂಕ್ಷೆಯನ್ನಷ್ಟೆ ಮುಂದರಿಸತೊಡಗಿದ ಪಕ್ಷಗಳಿವೆ; ಸಾರ್ವಜನಿಕ ಅಧಿಕಾರಸ್ಥಾನಗಳನ್ನು ಆಕ್ರಮಿಸಿಕೊಳ್ಳುವ ಹಂಬಲದ ಪಕ್ಷಗಳಿವೆ; 'ದೇಶಾಭಿಮಾನ'ದ ಆಣೆಯಿಂದ ಸ್ವಾರ್ಥವನ್ನು ಸಾಧಿಸಲು ಅನುಕೂಲ ಮಾಡಿಕೊಳ್ಳುವ ಪಕ್ಷಗಳಿವೆ; ಅಂತೂ ಸಾರ್ವಜನಿಕರ ಸೇವೆಯನ್ನು ಮಾಡಬಲ್ಲ ಮತ್ತು ಮಾಡಬಯಸುವ ಉತ್ಸಾಹಿಗಳಿಗೆ ಬುಗುಪ್ಪೆಯನ್ನುಂಟುಮಾಡುವಷ್ಟು ಪಕ್ಷಗಳಿವೆ. ಈ ಪಕ್ಷಗಳ ಅಭಿಮಾನಿಗಳಿಗೂ ಮುಂದಾಳುಗಳಿಗೂ ಬೇರೊಂದು ದೃಷ್ಟಿ ಮೂಡುವುದು ಸ್ವಭಾವಕ್ಕೂ ಪರಿಸ್ಥಿತಿಗೂ ಅನುಸರಿಸಿ ಅವಶ್ಯವಾಗಿದೆ. ಈಗ ಮುಂದೆ ಬರಬೇಕಾದುದು ಆಕಾಂಕ್ಷಿಗಳೂ ಉತ್ಸಾಹಿಗಳೂ ಆದ ತರುಣರು. ಮಹಾತ್ಮರ ನೇತೃತ್ವದಲ್ಲಿ ವಿಧಾಯಕ ಕಾರ್ಯಕ್ರಮದ ಸಂಸ್ಥೆಗಳಿವೆ; ಇವುಗಳಲ್ಲಿಯ ಕೆಲಸಗಾರರು ಹಳ್ಳಿಹಳ್ಳಿಗಳಿಗೆ ಪರಿಚಿತರಾಗಿರಬಹುದಾಗಿದೆ. ಇವರಲ್ಲಿ ತರುಣರಾದ ಕೆಲಸಗಾರರು ಕೆಲಹೊತ್ತು ಬರಿಯ ಪಕ್ಷಾಭಿಮಾನವನ್ನು ಬದಿಗಿಟ್ಟು, ದೇಶದಲ್ಲಿ ಪ್ರಾಂತಪ್ರಾಂತಗಳಲ್ಲಿ ಕಾಣಬರುವ ಬೇರೆ ವಿಧಾಯಕ ಸಂಸ್ಥೆಗಳನ್ನು ಕಂಡು, ಅವುಗಳೊಡನೆ ಸಹಕರಿಸಿ, ಸಾಮಾಜಿಕ (ಎಂದರೆ ಜನಜೀವನದ) ಜಾಗೃತಿಯನ್ನು ಮಾಡಲು ಮುಂದಾಗಬೇಕು. ಕಾರ್ಯಕ್ಷೇತ್ರದ ಪರ್ಯಾಪ್ತತೆಗಳನ್ನು ಕಂಡು, ಆವಶ್ಯಕವಿದ್ದ ಕಾರ್ಯವನ್ನು ಬೊದಲು ಹಿಡಿದೆತ್ತಿ ಸಹಕಾರದಿಂದಲೂ ಶ್ರಮವಿಭಜನೆಯಿಂದಲೂ ದುಡಿದರೆ ಮಾತ್ರ ಜಾತಿಭೇದಕ್ಕಾಗಿ ಸಮಾಜದಲ್ಲಿ ಹಾವಳಿ ಎಬ್ಬಿಸಿದ ಅರಾಜಕತೆ ಸಕಾಲದಲ್ಲಿ ಅಡಗಬಹುದು. ಇಂದಿನ ಜೀವನದಲ್ಲಿ ಜಾತಿ-ಮತ-ಪಂಥಗಳ ಭೇದಕ್ಕಿಂತ ಆರ್ಥಿಕ ಮತ್ತು ನಾಗರಿಕ ಸಹಕಾರವೆ ಪೋಷಕವಾದುದು ಎಂಬುದು ನಮ್ಮ ಜನರ ಮನವರಿಕೆಯಾದಹೊರತು ನಮ್ಮ ಪ್ರಗತಿ ಶಕ್ಯವಾಗದು, ಶಾಶ್ವತವಾಗದು.

ಆಶ್ಚರ್ಯವಲ್ಲದ ಆಕ್ರಮಣ

ಕಳೆದ ತಿಂಗಳ ತೊಡಕ್ಕೆ ಹಿಟ್ಲರನು 'ಅನಪೇಕ್ಷಿತ' ವಾಗಿ ರಷಿಯಾದ ಮೇಲೆ ನುಗ್ಗಿದನು. 'ಅನಪೇಕ್ಷಿತ' ವಾಗಿ ಎಂಬುದು ಸಾಮಾನ್ಯರ ಮತ್ತು ಸೊವಿಯೆಟರ ದೃಷ್ಟಿಯಿಂದ. ಯಾಕೆಂದರೆ ಹಿಟ್ಲರನ ನೀತಿಯನ್ನು ಎಂದಿನಿಂದ ಅರಿತವರಿಗೆ ಈ ದ್ರೋಹವೃತ್ತಿ ಕಿಂಚಿತ್ತಾದರೂ ಆಶ್ಚರ್ಯಕಾರಕವಾಗಿಲ್ಲ. ಇಂದಿನವರೆಗೆ ಅನಾಕ್ರಮಣ ಒಪ್ಪಂದದಲ್ಲಿ ವಿಶ್ವಾಸವನ್ನಿಟ್ಟು ಹಿಟ್ಲರನೊಡನೆ ಸ್ನೇಹ ಬೆಳೆಸಲು ಯತ್ನಿಸಿದ್ದು ರಷಿಯಾದ ದಡ್ಡತನವೊ, ದುಷ್ಟತನವೊ, ಹೇಡಿತನವೊ, ಆಶಾವಾದದ ಅತಿರೇಕವೊ—ತಿಳಿಯದು. ರಷಿಯಾದೊಡನೆ ಸ್ನೇಹದ ಸೋಗನ್ನಿಟ್ಟು ಈಗ ಹಿಟ್ಲರನು ಇಡಿಯ ಯುರೋಪನ್ನು ಆಕ್ರಮಿಸಿ ನಿಂತಿದ್ದಾನೆ. ಹೀಗೆ ಬಲವನ್ನು ಬೆಳೆಸಿಕೊಂಡು ಈಗ ರಷಿಯಾದ ಮೇಲೆ ತಿರುಗಿ ಬಿದ್ದಿದ್ದಾನೆ. ಇಂದು ತನ್ನ ಮೇಲೆ ಬಂದ ಅನಪೇಕ್ಷಿತ ಗಂಡಾಂತರದ ಏಲ್ಲ ಹೊಣೆ ರಷಿಯಾ-ಸರಕಾರದ ಮೇಲೆಯೆ ಇದೆ. ಶತ್ರುವಿಗೆ ಸಾಮರ್ಥ್ಯವನ್ನು ಬೆಳೆಯಿಸಲು ಅವಕಾಶವನ್ನೂ ಉತ್ತೇಜನವನ್ನೂ ಕಲ್ಪಿಸಿಕೊಟ್ಟು, ಈಗ 'ಸ್ವಾತಂತ್ರ್ಯತತ್ತ್ವ' ದ ಘೋಷಣೆಯನ್ನು ಮಾಡುವುದು ಸಾಮ್ರಾಜ್ಯವಾದವನ್ನು ವಿರೋಧಿಸುವ ರಷಿಯಾಕ್ಕೆ ಶೋಭಿಸುವುದಿಲ್ಲ. ಆದರೂ ಕೊನೆಗೊಮ್ಮೆ ನಿರ್ಧಾರವಾಗಿ, ನಿಸ್ಸಂದೇಹವಾಗಿ, ಏಕಮತವಾಗಿ ಜರ್ಮನಿಯನ್ನು ಎದುರಿಸಲು ರಷಿಯಾ ಸಿದ್ಧವಾದುದು ಸಮಾಧಾನದ ಸಂಗತಿ.

ಸಂಕಟಸ್ನೇಹ

ಈ ಸಮಯದಲ್ಲಿ ಒಂದು ನಿಮಿಷದ ವಿಲಂಬವಿಲ್ಲದೆ ಮಿ|| ಚರ್ಚಿಲ್‌ರು ರಷಿಯಾಕ್ಕಾಗಿ ಸ್ನೇಹವನ್ನೂ ಸಹಾಯವನ್ನೂ ಒಪ್ಪಿಸಲು ಸಿದ್ಧರಾಗಿದ್ದಾರೆ. "ಕಳೆದ ೩೫ ವರ್ಷಗಳಿಂದ ನಾನು ಬೊಲ್‌ಶೆವಿಝಂ ತತ್ತ್ವವನ್ನು ದ್ವೇಷಿಸಿದ್ದೇನೆ; ಈಗಲಾದರೂ ನನ್ನ ವೃತ್ತಿ ಒದಲಾಯಿಸಿಲ್ಲ" ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡು ಮಿ|| ಚರ್ಚಿಲ್‌ರು ಹೀಗೆ ಅಭಿಪ್ರಾಯಪಡುತ್ತಿದ್ದಾರೆ: "ರಷಿಯಾದ ರಾಜಕಾರಣ ತತ್ತ್ವಕ್ಕಾಗಿ ದ್ವೇಷವಿದ್ದ ಮಾತ್ರಕ್ಕೆ ರಷಿಯಾದ ಜನರು ಅನ್ಯಾಯಕ್ಕೆ ಆಹುತಿಯಾಗುವುದನ್ನು ನಾನು ಸಹಿಸಬೇಕು ಎಂದರ್ಥವಲ್ಲ." ನಾಝಿನೀತಿಯು ಯಾವ ತತ್ತ್ವವನ್ನೂ ಒಪ್ಪದೆ ಮಾನವಪ್ರಗತಿಯ ಮಾರ್ಗದಲ್ಲಿ ಅಡ್ಡನಿಂತಿದೆ. ಮುಳ್ಳನ್ನು ಮುಳ್ಳಿನಿಂದ ತೆಗೆವಂತೆ ನಾಝಿಗಳ ನಿರ್ಮೂಲಕ್ಕೆ ರಷಿಯಾ ನಿಮಿತ್ತವಾದರೂ ಅಡ್ಡಿ ಇಲ್ಲ. 'ಹಿಟ್ಲರನ ಶತ್ರುಗಳೆಲ್ಲ ನಮ್ಮ ಮಿತ್ರರು, ಅವನ ಮಿತ್ರರು ನಮ್ಮ ಶತ್ರುಗಳು' ಎಂದು ಅಧಿಕೃತವಾಗಿ ಮಿ|| ಚರ್ಚಿಲ್‌ರು ಒಪ್ಪಿಕೊಂಡಿದ್ದಾರೆ.

ರಷಿಯಾದ ರಹಸ್ಯ

ಯುದ್ಧಕ್ಕೆ ಘೋರವಾದ ಮತ್ತು ವಿಶಾಲವಾದ ಸ್ವರೂಪ ಬರುವುದರಲ್ಲಿ ಸಂದೇಹವಿಲ್ಲ. ಒಂದು ಕಡೆ ಜಪಾನ, ಒಂದು ಕಡೆ ಅಮೇರಿಕೆ ಯುದ್ಧದಲ್ಲಿ ಹೆಚ್ಚು ಪ್ರತ್ಯಕ್ಷವಾಗಿ ಭಾಗವಹಿಸುವ ಸಂಭವವಿದೆ. ರಷಿಯಾ ನವಚೈತನ್ಯದ ರಾಷ್ಟ್ರವಾಗಿದೆ. ಉತ್ಸಾಹವಿದೆ, ಜನಶಕ್ತಿ—ಸೈನ್ಯಸಂಗ್ರಹವಿದೆ, ಯಂತ್ರಸಾಮಗ್ರಿಗಳಿವೆ; ಆದರೆ ಸಿದ್ಧತೆ ಇಲ್ಲವೆ ಸಂಸ್ಕಾರ ಎಷ್ಟರ ಮಟ್ಟಿಗಿದೆ ಎಂದು ಹೇಳಲು ಬರುವಂತಿಲ್ಲ. ಒಂದು ಮಾತನ್ನು ಮಾತ್ರ ವಿಶ್ವಾಸದಿಂದ ಹೇಳಬಹುದು. ತರುವಾಯದ ಪರಿಣಾಮವೇನೇ ಆಗಲಿ, ಅದು ತಾತ್ಕಾಲಿಕವಾಗುವುದು; ರಷಿಯಾದೇಶವನ್ನು ಕೆಣಕಿದ ಮಾತ್ರಕ್ಕೆಯೆ ಹಿಟ್ಲರನ ಅಳಿಗಾಲ ಪ್ರಾರಂಭವಾಗಿದೆ ಎನಬಹುದು.

ಜಯಂತಿಯ ಏಜಂಟರಿಗಾಗಿ

★

ಸದ್ಯದ ಮಹಾಯುದ್ಧದ ಮೂಲಕ ಮುದ್ರಣ ಸಲಕರಣೆ, ಕಾಗದ ಮೊದಲಾದುವುಗಳ ದರವು ಒಂದಕ್ಕೆ ಮೂರು-ನಾಲ್ಕರಷ್ಟು ಹೆಚ್ಚಾದುದರಿಂದ, ತಿಂಗತಿಂಗಳೂ ಅವಶ್ಯವಿರುವಷ್ಟೆ ಪ್ರತಿಗಳನ್ನು ತೆಗೆಯಬೇಕಾಗಿದೆ. ಆದುದರಿಂದ ಜಯಂತಿಯ ಏಜಂಟರೆಲ್ಲರೂ ಇಲ್ಲಿ ಹೇಳಿದ ನೈಮಿತ್ತಿಕ ನಿಯಮಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ಇನ್ನು ಮುಂದಿನ ವ್ಯವಹಾರ ಸಾಗಿಸುತ್ತಿರಬೇಕು. ಸದ್ಯದ ಆರ್ಥಿಕ ಗಂಡಾಂತರದ ಸಂದರ್ಭ ಕಳೆದು ಹೊಯಿತೆಂದರೆ ಪತ್ರ ಮೊದಲಿನ ನಿಯಮ ದಂತೆಯೆ ಪರಸ್ಪರರ ವ್ಯವಹಾರ ಸಾಗಬಹುದು.

ನಿಯಮಗಳು

೧. ಹತ್ತಕ್ಕಿಂತ ಕಡಿಮೆ ಪ್ರತಿಗಳನ್ನು ತರಿಸಿಕೊಳ್ಳುವ ಏಜಂಟರಿಗೆ ಪುಕ್ಕಟೆ ಪ್ರತಿ ಸಿಕ್ಕಲಾರದು. ಮಾರದೆ ಉಳಿದ ಪ್ರತಿಗಳನ್ನು ಮರಳಿತೆಗೆದುಕೊಳ್ಳುವುದಿಲ್ಲ. ಆದುದರಿಂದ ತಮಗೆ ಖಂಡಿತ ಎಷ್ಟು ಬೇಕಾಗುವುವೊ ಅಷ್ಟೇ ಪ್ರತಿಗಳನ್ನು ಏಜಂಟರು ತರಿಸಿಕೊಳ್ಳಬೇಕು.

೨. ಹತ್ತಕ್ಕಿಂತ ಕಡಿಮೆ ಪ್ರತಿಗಳನ್ನು ತಕ್ಕೊಳ್ಳುವವರು ತಾವು ತೆಗೆದುಕೊಳ್ಳುವ ಪ್ರತಿಗಳ ಬೆಲೆಯನ್ನು—ಕಮಿಶನ್ ಮುರಿದುಕೊಂಡು—ಮುಂಗಡ ಕಳುಹಬೇಕು. ಮುಂಗಡ ಕಳುಹದ ಏಜಂಟರಿಗೆ ಪ್ರತಿಗಳನ್ನು ಕಳುಹುವುದಿಲ್ಲ.

೩. ಹತ್ತು, ಹತ್ತಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಏಜಂಟರಿಗೆ ಪುಕ್ಕಟೆ ಪ್ರತಿಯೊಂದನ್ನು ಕೊಡಲಾಗುವುದು. ಪ್ರತಿಗಳು ಹೆಚ್ಚಿಗೆ ಉಳಿಯದಂತೆ ಮೊದಲೆ ಎಚ್ಚರಿಕೆ ತೆಗೆದುಕೊಳ್ಳುವ ಹೊಣೆಗಾರಿಕೆ ಏಜಂಟರದು. ನಿಯಮಕ್ಕಿಂತ ಹೆಚ್ಚಿನ ಒಂದು ಪ್ರತಿಯನ್ನೂ ತಿರುಗಿ ತೆಗೆದುಕೊಳ್ಳಲಾರೆವು.

೪. ಹತ್ತಕ್ಕಿಂತ ಹೆಚ್ಚು ಪ್ರತಿ ತರಿಸಿ ಮಾರಾಟ ಮಾಡುವ ಏಜಂಟರು, ತಾವು ತರಿಸುವ ಪ್ರತಿಗಳ ಬೆಲೆಯ ಇಮ್ಮಡಿಯಷ್ಟು ಹಣವನ್ನು ಕಾರ್ಯಾಲಯದಲ್ಲಿ ಮುಂಗಡ ಹಣವನ್ನಾಗಿ ಇಡಲೆಬೇಕು.

೫. ಮುಂದಿನ ಸಂಚಿಕೆಯನ್ನು ಕಳುಹುವುದಕ್ಕೆ ೭ ದಿನಗಳ ಮೊದಲೆ ತಲ್ಪುವಂತೆ ಪ್ರತಿಯೊಬ್ಬ ಏಜಂಟನೂ ಕಾರ್ಯಾಲಯಕ್ಕೆ ಎಲ್ಲ ಹಣವನ್ನೂ ಕಳುಹಬೇಕು.

೬. ಹಣಕಳುಹುವವರು ಚಕ್ಕಿನ ರೂಪದಿಂದ ಕಳುಹಲಾಗದು. ಮನಿಯಾರ್ಡರಿನಿಂದಾಗಲಿ, ಪೋಸ್ಟಲ್ ಆರ್ಡರಿನಿಂದಾಗಲಿ ಕಳುಹಬೇಕು.

೭. ಕೆಲಕೆಲವು ಏಜಂಟರು ಕಾರ್ಯಾಲಯದೊಂದಿಗೆ ಮಾಡುವ ಪತ್ರವ್ಯವಹಾರದ ವೆಚ್ಚವನ್ನು ನಮ್ಮ ಮೇಲೆ ಹೇರಲು ಅಪೇಕ್ಷಿಸುವರು. ಎಲ್ಲರೂ ಖಂಡಿತವಾಗಿ ನೆನಪಿನಲ್ಲಿ ಇಟ್ಟುಕೊಂಡಿರಬೇಕು : ಪತ್ರವ್ಯವಹಾರದ ಯಾವ ವೆಚ್ಚದ ಹೊಣೆಯನ್ನೂ ನಾವು ಹೊರಲಾರೆವು.

೮. ಯಾವ ಏಜಂಟರೂ ತಮಗೆ ಪುಕ್ಕಟೆಯಾಗಿ ಬರುವ ಜಯಂತಿಯನ್ನು ಮಾರಾಟ ಮಾಡಲಾಗದು. ಅದನ್ನು ತಮ್ಮ ಸಂಗ್ರಹದಲ್ಲಿಟ್ಟುಕೊಂಡಿರಬೇಕು.

ವ್ಯವಸ್ಥಾಪಕ ಜಯಂತಿ, ಧಾರವಾಡ.